॥ ಶ್ರೀಃ ॥

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

(ಸಂ. ೩೨)

# ಶ್ರೀ ಶಿವರಹಸ್ಯ

ಸಂಪುಟ ೧

ಅನುವಾದಕ

ಆಸ್ಥಾನವಿದ್ವಾನ್ ಎಚ್. ಗಂಗಾಧರಶಾಸ್ತ್ರೀ

ಧರ್ಮಪ್ರಕಾಶ ಡಿ. ಬನುಮಯ್ಯನವರ ಹೈಸ್ಕೂಲು ಪಂಡಿತ

ಮೈಸೂರು

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

1946

॥ ಶ್ರೀಃ ॥

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

(ಸಂ. ೩೨)

# ಶ್ರೀಶಿವರಹಸ್ಯ

ಸಂಪುಟ ೧

ಅನುವಾದಕ

ಆಸ್ಥಾನವಿದ್ವಾನ್ ಎಚ್. ಗಂಗಾಧರಶಾಸ್ತ್ರೀ

ಧರ್ಮಪ್ರಕಾಶ ಡಿ. ಬನುಮಯ್ಯನವರ ಹೈಸ್ಕೂಲು ಪಂಡಿತ

ಮೈಸೂರು

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

1946

Printed by T. S. Raghavachar, Manager,
Sree Panchacharya Electric Press
Sayaji Rao Road, Mysore

For The Palace Mysore.

# ಮುನ್ನುಡಿ

ನಮ್ಮ ಭರತಖಂಡವು ಒಂದು ಜ್ಞಾನಭಂಡಾರ. ಜ್ಞಾನಸಾಧಕಗಳಾದ ಅನೇಕ ಗ್ರಂಥಗಳು ಇಲ್ಲಿಂದ ಹೊರಬಿದ್ದಿವೆ, ಹೊರಬೀಳುತ್ತಲೂ ಇವೆ. ಈಚೀಚೆಗೆ ಪ್ರಕಾಶಕ್ಕೆ ಬರುತ್ತಲಿರುವ ಗ್ರಂಥಗಳಲ್ಲಿ ಈ ಶಿವರಹಸ್ಯವೂ ಒಂದು. ಇದರಲ್ಲಿ ಸುಮಾರು ಒಂದು ಲಕ್ಷ ಗ್ರಂಥಗಳಿವೆ ಎಂದು ಈ ಗ್ರಂಥದ ಪ್ರಥಮಾಂಶದಲ್ಲಿಯೇ ನಮಗೆ ತಿಳಿದುಬರುವುದು. ಇದು ಅಷ್ಟಾದಶಮಹಾಪುರಾಣಗಳಲ್ಲಾಗಲಿ, ಅಷ್ಟಾದಶ ಉಪಪುರಾಣಗಳಲ್ಲಾಗಲಿ ಸೇರಿದುದಾಗಿಲ್ಲ. ಅಲ್ಲದೆ ಪುರಾಣಗ್ರಂಥಗಳಲ್ಲಿರುವ ಸೃಷ್ಟಿ, ಲಯ ಮುಂತಾದ ಐದು ಲಕ್ಷಣಗಳಿಗನುಸಾರವಾದ ಭಾಗಗಳೂ ಇಲ್ಲಿ ತೋರಿಬರುವುದಿಲ್ಲ. ಈ ಗ್ರಂಥಕರ್ತನ ವಿಷಯವೂ ನಮಗೆ ಸರಿಯಾಗಿ ತಿಳಿದುಬರುವಂತಿಲ್ಲ. ಇನ್ನೂ ಅನೇಕ ನಿದರ್ಶನಗಳಿಂದ ಇದನ್ನು ಮಹಾಭಾರತದಂತೆ ಇತಿಹಾಸಗ್ರಂಥವೆನ್ನಬೇಕಾಗುವುದು. "ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್" ಎಂದು ಮಹರ್ಷಿಗಳು ಹೇಳಿರುವಂತೆ, ವೇದಶಾಸ್ತ್ರಾದಿಗಳಲ್ಲಿ ಶಾಸ್ತ್ರಪ್ರಕ್ರಿಯೆಯಿಂದ ನಿರೂಪಿತವಾಗಿರುವ ಅಂಶಗಳನ್ನೆಲ್ಲಾ, ಇತಿಹಾಸ, ಪುರಾಣಗ್ರಂಥಗಳಲ್ಲಿ ದೃಷ್ಟಾಂತರೂಪದಲ್ಲಿ ನಾವು ತಿಳಿಯಬಹುದು. ಇತಿಹಾಸಗ್ರಂಥಗಳು ಪುರಾಣಗ್ರಂಥಗಳಂತೆ ಒಂದು ಕಟ್ಟಿಗೆ ಸಿಕ್ಕಿಬಿದ್ದಿಲ್ಲ. ಸೃಷ್ಟಿ ಸ್ಥಿತಿ ಲಯಾದಿಗಳ ವಿಷಯಗಳನ್ನು ವಿವರಿಸಲೇಬೇಕೆಂಬ ನಿಯಮವು ಈ ಗ್ರಂಥಗಳಲ್ಲಿಲ್ಲ. ಕಾವ್ಯಶೈಲಿಯಲ್ಲಿ ಜನಮನೋರಂಜನೆಯಾಗುವಂತಹ ಕಥೆಗಳನ್ನು ವಿವರಿಸುತ್ತಾ ಶಾಸ್ತ್ರಪ್ರಕ್ರಿಯಾದಿಗಳನ್ನು ಜನರಿಗೆ ಈ ಗ್ರಂಥಗಳ ಮೂಲಕ ಸುಲಭವಾಗಿ ತಿಳಿಸಬಹುದು. ಆದರೆ ಪುರಾಣಗ್ರಂಥಗಳು ಬೆಳೆದಿರುವಷ್ಟು ಇತಿಹಾಸಗ್ರಂಥಗಳು ಮುಂದುವರಿದಿಲ್ಲ. ವ್ಯಾಸಕೃತ ಮಹಾಭಾರತವೊಂದು ಮಾತ್ರ ವೇದಕ್ಕೆ ಸಮನಾಗಿ ನಿಂತು ಶಾಸ್ತ್ರಸಾರವನ್ನೆಲ್ಲಾ ಪ್ರಚಾರಮಾಡಿದೆ. ಅದರಂತೆಯೇ ಈ ಶಿವರಹಸ್ಯವೂ ಸಕಲ ಶಾಸ್ತ್ರಸರ್ವಸ್ವವನ್ನೂ ವಿವರಿಸುತ್ತಾ ಜನಸಾಮಾನ್ಯಕ್ಕೂ ಜ್ಞಾನಸಾಧಕವಾಗಿದೆ ಎಂದರೆ ಅತ್ಯುಕ್ತಿಯಲ್ಲ.

ಪ್ರಕೃತ ಈ ಗ್ರಂಥವು ಮೇಲೆ ಹೇಳಿದಂತೆ ಲಕ್ಷಗ್ರಂಥಾತ್ಮಕವಾಗಿದ್ದು ಹನ್ನೆರಡು ಅಂಶಗಳಿಂದ ಕೂಡಿದ್ದಾಗಿದೆ. ಪರಮೇಶ್ವರನು ತನ್ನ ರಹಸ್ಯವನ್ನೆಲ್ಲಾ ಪಾರ್ವತಿಗೆ ವಿವರಿಸುವುದೇ ಈ ಗ್ರಂಥದ ಮುಖ್ಯಾಂಶ. ಪಾರ್ವತಿಯ ಅಂಕಸ್ಥನಾದ ಕುಮಾರಸ್ವಾಮಿಯು ಪರಶಿವನ ಅಪ್ಪಣೆಯಂತೆ ಭವಭಕ್ತಾಗ್ರೇಸರನಾದ ಜೈಗೀಷವ್ಯ

+

ಮಹರ್ಷಿಯಮೂಲಕ ಸಕಲರಿಗೂ ಉಪದೇಶಮಾಡಿದನೆಂದು ಕಥೆಯು ಆರಂಭ ವಾಗುವುದು. ಸಂದರ್ಭಬಂದೆಡೆಯಲ್ಲೆಲ್ಲಾ ಗ್ರಂಥಕಾರರು ಅದ್ವೈತಮತತತ್ತ್ವವನ್ನು ಸ್ಪಷ್ಟವಾಗಿ ನಿರೂಪಿಸಿರುವರು. ಒಂದೊಂದೆಡೆ, ಅದ್ವೈತತತ್ತ್ವಕ್ಕೆ ವಿರೋಧವಿಲ್ಲದಂತೆ ಶೈವದರ್ಶನದ ಮಾರ್ಗವನ್ನೂ ಅವಲಂಬಿಸಿರುವರು. ತೀರ್ಥಕ್ಷೇತ್ರಗಳ ವಿವರಣೆ ಬಂದಾಗ ಉತ್ತರ ದೇಶದ ತೀರ್ಥಕ್ಷೇತ್ರಾದಿಗಳನ್ನು ಮಿತವಾಗಿ ವರ್ಣಿಸಿ, ದಕ್ಷಿಣ ಭಾರತ, ಅದರಲ್ಲಿಯೂ ಕಾವೇರೀನದಿಯ ದಡದಲ್ಲಿರುವ ಕ್ಷೇತ್ರಗಳನ್ನೂ, ಶಿವಾಲಯ ಗಳನ್ನೂ ಅತಿಯಾಗಿ ವರ್ಣಿಸಿರುವರು. ಗ್ರಂಥಶೈಲಿಯಾದರೋ, ಕೆಲವೆಡೆ ಸರಳ ವಾಗಿಯೂ, ಶಾಸ್ತ್ರವಿಚಾರಗಳು ಬಂದೆಡೆ ಬಿಗುವಾಗಿಯೂ ಓಡುತ್ತದೆ. ಪ್ರಾಯಶಃ ಕವಿತಾಮಾರ್ಗದಲ್ಲಿ ಗ್ರಂಥಕಾರರು ಛಂದಶ್ಶಾಸ್ತ್ರವನ್ನೂ ಅತಿಕ್ರಮಿಸಿರುವರು. ಶಿವಸ್ತುತಿಯಂತೂ, ಭಿನ್ನಭಿನ್ನಕ್ರಮದಲ್ಲಿ, ಬೇರೆ ಬೇರೆ ವೃತ್ತಗಳಲ್ಲಿ ಅಸಂಖ್ಯಾತವಾಗಿ ಕಾಣುತ್ತಿರುವುದು. ಅಲ್ಲಲ್ಲಿ ಗದ್ಯವೂ ನಿರೂಪಿತವಾಗದೆ. ಈ ಮೂವತ್ತು ಅಧ್ಯಾಯಗಳಲ್ಲಿ ಕೈಲಾಸಪರ್ವತದ, ಮತ್ತು ಅಲ್ಲಿರುವ ಶಿವಲಿಂಗಗಳ ಸೊಬಗು, ಈಶ್ವರ ಪೂಜಾಕ್ರಮ ಇವುಗಳು ವಿಸ್ತಾರವಾಗಿ ವರ್ಣಿತವಾಗಿವೆ. ಪ್ರಾಕಾರ, ಗೋಪುರ, ಬಸವನ ವಿಗ್ರಹಗಳಿಂದ ಕೂಡಿದ ದೇವಾಲಯಗಳ ಪೌಳಿ, ಇವುಗಳ ವರ್ಣನೆಯು ದಕ್ಷಿಣದೇಶದ ದೊಡ್ಡ ದೊಡ್ಡ ದೇವಸ್ಥಾನಗಳ ನೆನಪನ್ನು ತರುವಂತಿವೆ. ಇದನ್ನೆಲ್ಲಾ ವಿಮರ್ಶಿಸಿದರೆ, ದಕ್ಷಿಣದೇಶದಲ್ಲಿ ಕಾವೇರೀತೀರವಾಸಿಯಾದ, ಯಾರೋ ಅದ್ವೈತ ಮತಾನುಯಾಯಿಗಳಾದ ಪಂಡಿತರೊಬ್ಬರು ಈ ಶಿವರಹಸ್ಯಗ್ರಂಥವನ್ನು ರಚಿಸಿರ ಬಹುದೆಂಬ ಶಂಕೆಯೊಂದು ಬರುವುದು. ಈ ಗ್ರಂಥದ ಹೆಸರು ಸುಮಾರು ಐದು ನೂರು ವರ್ಷಗಳ ಹಿಂದಿನ ಶೈವಗ್ರಂಥಗಳಲ್ಲಿ ತೋರಿಬರುವುದು. ಆದರೆ ಇಲ್ಲಿನವರೆಗೆ ಈ ಗ್ರಂಥವು ಸಮಗ್ರವಾಗಿ ಮುದ್ರಣಕ್ಕೆ ಸಿಕ್ಕಿಲ್ಲವಾದುದರಿಂದ ಇದರ ಮೇಲೆ ಹೆಚ್ಚು ವಿಮರ್ಶೆಗಳು ನಡೆದಿಲ್ಲ. ಇಂತಹ ಅಪೂರ್ವ ಪ್ರಾಚೀನ ಗ್ರಂಥವು ಈಗ ಕನ್ನಡದಲ್ಲಿ ಬರುತ್ತಿರುವುದು ಕನ್ನಡಿಗರ ಪುಣ್ಯೋದಯವೆಂದೇ ಹೇಳಬೇಕು.

ನಾನು ಕನ್ನಡಿಸುವಾಗ, ಮೈಸೂರು ಓರಿಯಂಟಲ್ ಲೈಬ್ರೆರಿಯಲ್ಲಿದ್ದ ಹಸ್ತಲಿಖಿತಪ್ರತಿಯೊಂದು, ಮತ್ತು ಮದ್ರಾಸಿನ ಪಂಡಿತಮಹಾಶಯರಿಂದ ಅಸಮಗ್ರ ವಾಗಿ ಅಚ್ಚುಹಾಕಿಸಿದ ಪ್ರತಿಯೊಂದು ಹೀಗೆ ಎರಡು ಪ್ರತಿಗಳು ದೊರೆತವು. ಪರಸ್ಪರವಾಗಿ ಎರಡು ಗ್ರಂಥಗಳಲ್ಲಿಯೂ ಪಾಠಭೇದಗಳಿವೆ. ಆ ಪಾಠಾಂತರಗಳನ್ನು ಅಲ್ಲಿಯೇ ಸೂಚಿಸಲಾಗಿದೆ. ಈ ಗ್ರಂಥದಲ್ಲಿಯೇ ಒಂದೊಂದು ವಿಷಯವೂ ಬಹು ವಿಸ್ತಾರವಾಗಿ ಉಪಪಾದಿತವಾಗಿರುವುದರಿಂದ, ಕನ್ನಡ ಭಾಷೆಗೆ ಬದಲಾಯಿಸುವಾಗ

ನಾವು ಯಾವ ಅಂಶವನ್ನೂ ವಿವರಿಸಿ ಬರೆಯುವಂತೆಯೇ ಇಲ್ಲ. ಶಿವಪಾರಮ್ಯವನ್ನು ಸುಲಭವಾಗಿ ಮಂದಾಧಿಕಾರಿಗಳಿಗೂ ತಿಳಿಸುವ ಉದ್ದೇಶದಿಂದ ಮೂಲಕಾರರೇ, ಒಂದು ಮಾತಿನಿಂದ ಹೇಳುವ ಅಂಶವನ್ನು ಹತ್ತು ಮಾತುಗಳಿಂದ ಹೇಳಿರುವಂತಿದೆ. ಹೀಗಿರುವಾಗ ವಿವರಣೆಯ ಭಾಗದಲ್ಲಿ ಯಾರ ಕೈಚಳಕವೂ ಇಲ್ಲಿ ಅಪ್ರಕೃತ.

ಇಂತಹ ಅಮೂಲ್ಯವಾದ ಶೈವಗ್ರಂಥರತ್ನವನ್ನು ಪ್ರಕಾಶಪಡಿಸುವ ಘನೋದ್ದೇಶದಿಂದ ನಮ್ಮನ್ನಾಳುವ **ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ.ಸಿ.ಬಿ., ಜಿ.ಸಿ.ಎಸ್.ಐ.,** ಮಹಾಪ್ರಭುಗಳವರು ಈ ಗ್ರಂಥವನ್ನು ಕನ್ನಡಭಾಷೆಗೆ ಪರಿವರ್ತಿಸುವಂತೆಮಾಡಿ ಸಾರ್ವಜನಿಕರಿಗೆ ಅನುಕೂಲಪಡಿಸುತ್ತಿರುವುದು ನಮ್ಮ ಕನ್ನಡಿಗರ ಭಾಗ್ಯವಿಶೇಷವೆಂದೇ ತಿಳಿಯಬೇಕು. ಇಂತಹ ಪವಿತ್ರವಾದ ಕಾರ್ಯದಲ್ಲಿ ತೊಡಗಿ, ಈ ಮೂಲಕ ಪಂಡಿತಪಾಮರರೆಲ್ಲರಿಗೂ ಉದಾರ ಸಹಾಯಮಾಡುತ್ತಲಿರುವ ನಮ್ಮ ಮಹಾಪ್ರಭುಗಳವರಿಗೆ ಸರ್ವೇಶ್ವರನು ಸಕಲ ಸನ್ಮಂಗಳಗಳನ್ನೂ ದಯಪಾಲಿಸಲೆಂದು ಸರ್ವದಾ ಮಹೇಶ್ವರನನ್ನು ಪ್ರಾರ್ಥಿಸುವೆನು.

ಇತಿ ಸಜ್ಜನವಿಧೇಯ,

**ಹೊನ್ನೇನಹಳ್ಳಿ ಗಂಗಾಧರಶಾಸ್ತ್ರೀ,**

ಆಸ್ಥಾನವಿದ್ವಾನ್,

ಡಿ. ಬನುಮಯ್ಯನವರ ಹೈಸ್ಕೂಲು ಪಂಡಿತ, ಮೈಸೂರು.

# ಶ್ರೀಶಿವರಹಸ್ಯದ ಪ್ರಥಮಾಂಶದ ಮೊದಲನೆಯ ಮೂವತ್ತು ಅಧ್ಯಾಯಗಳ ವಿಷಯಾನುಕ್ರಮಣಿಕೆ

ವಿಷ್ಣುವು ತಾನು ನೇತ್ರಕಮಲಾರ್ಚನೆಮಾಡಿ ಈಶ್ವರನಿಂದ ಚಕ್ರವನ್ನು ಪಡೆದುದು.

ಪುಟ ೪೩–೫೪

## ಐದನೆಯ ಅಧ್ಯಾಯ

ತಪಸ್ಸುಮಾಡುತ್ತಿದ್ದ ಜೈಗೀಷವ್ಯಮಹರ್ಷಿಯ ದರ್ಶನಾರ್ಥವಾಗಿ ನಾರದ ಮಹರ್ಷಿಯ ಆಗಮನ, ಸುಕೃತವಿಶೇಷದಿಂದ ವಿಷ್ಣ್ವಾದಿಲೋಕಗಳನ್ನು ಹೊಂದಿದವರು ಕ್ಷೀಣಪುಣ್ಯರಾದರೆ ಭೂಲೋಕಕ್ಕೆ ಹಿಂದಿರುಗುವಿಕೆ, ನಾರದಕೃತ ಶಿವಸ್ತುತಿ, ನಾರದನ ಮಾತಿನಂತೆ ಪರಮೇಶ್ವರನು ಜೈಗೀಷವ್ಯ ಮಹರ್ಷಿಯ ಸಮೀಪಕ್ಕೆ ಬರುವುದು, ಜೈಗೀಷವ್ಯಮಹರ್ಷಿಯು ಮಾಡಿದ ಶಿವಸ್ತುತಿ. ಶಂಕರನು ಜೈಗೀಷವ್ಯ ಮಹರ್ಷಿಗೆ ಮಾಡಿದ ಅನುಗ್ರಹ. ಪುಟ ೫೫–೭೧

## ಆರನೆಯ ಅಧ್ಯಾಯ

ಜೈಗೀಷವ್ಯಋಷಿಯು ಶಿವಪೂಜಾಫಲವನ್ನು ವಿವರಿಸುವುದು. ಪರಮೇಶ್ವರನು ಪಾರ್ವತಿಗೆ ಶಿವಾಲಯನಿರ್ಮಾಣಮಾಡಿದವರಿಗೆ, ಶಿವಲಿಂಗಪ್ರತಿಷ್ಠೆಮಾಡಿದವರಿಗೆ ಒದಗುವ ಪುಣ್ಯವಿಶೇಷಗಳನ್ನು ವಿವರಿಸುವನು. ಆ ಶಿವಲಿಂಗಾಲಯನಿರ್ಮಾಪಕನಿಗೆ ಜಾತಿವ್ಯವಸ್ಥಾರಾಹಿತ್ಯವಿಚಾರ, ಲಿಂಗಪ್ರತಿಷ್ಠೆಗೆ ಯೋಗ್ಯವಾದ ಸ್ಥಳವಿಶೇಷಗಳು, ಶಿವಾಲಯನಿರ್ಮಾಪಕನಿಗೆ ಮಹಾಪಾತಕಾದಿದೋಷಗಳ ನಿವೃತ್ತಿ ಮತ್ತು ಅವರಿಗೆ ಗಾಣಾಪತ್ಯಪ್ರಾಪ್ತಿವಿಚಾರ. ಶಿವಾಲಯದ ಜೀರ್ಣೋದ್ಧಾರಫಲ, ಪ್ರದೋಷಕಾಲದಲ್ಲಿ ಶಿವಲಿಂಗಕ್ಕೆ ಬಿಲ್ವಾರ್ಚನೆಮಾಡುವುದರ ಫಲ, ಶಿವಾಲಯದಲ್ಲಿ ತೈಲದೀಪಗಳನ್ನು ಹೊತ್ತಿಸುವುದರಿಂದಾಗುವ ಫಲಗಳು, ವಿವಿಧವಸ್ತುಗಳ ಅಭಿಷೇಕದಿಂದ ಒದಗುವ ಫಲಾಫಲಗಳು, ಗ್ರೀಷ್ಮಋತುವಿನಲ್ಲಿ ಧಾರಾಪಾತ್ರೆಯಿಂದ ಅಭಿಷೇಕಮಾಡುವುದರ ಫಲ, ಶಿವಲಿಂಗಕ್ಕೆ ವಿವಿಧಪುಷ್ಪಗಳ ಅರ್ಚನೆಮಾಡುವುದರ ಫಲ, ಲಿಂಗಾರ್ಚನೆ ಮಾಡಿ ಮುಕ್ತರಾದ ಮಹರ್ಷಿಗಳ ಹೆಸರು, ಮತ್ತು ದೇವತೆಗಳ ಹೆಸರುಗಳು, ಶಿವನನ್ನು ಬಿಟ್ಟು ಬೇರೆ ದೇವರನ್ನು ಪೂಜಿಸಿದವರಿಗೆ ಒದಗುವ ಫಲಗಳು, ಶಿವ ಸೇವಕರನ್ನು ಬಿಟ್ಟು ಮತ್ತಾರಿಗೂ ಶಿವರಹಸ್ಯಶ್ರವಣಾಧಿಕಾರವಿಲ್ಲವೆಂದು ನಿರೂಪಿಸುವಿಕೆ, ಜೈಗೀಷವ್ಯಮಹರ್ಷಿಯು ಸ್ಕಂದನಿಂದ ಶಿವರಹಸ್ಯೋಪದೇಶವನ್ನು ಪಡೆಯಲು ಶಿವಾನುಗ್ರಹಪ್ರಾಪ್ತಿ, ಕುಮಾರಸ್ವಾಮಿಯು ಶಿವರಹಸ್ಯವನ್ನು ತಿಳಿದ ಬಗೆ, ಜೈಗೀಷವ್ಯಮಹರ್ಷಿಯು ಕುಮಾರಸ್ವಾಮಿಯ ಸಮೀಪವನ್ನು ಹೊಂದುವಿಕೆ.

ಪುಟ ೭೨–೯೧

## ಏಳನೆಯ ಅಧ್ಯಾಯ



## ಎಂಟನೆಯ ಅಧ್ಯಾಯ



## ಒಂಬತ್ತನೆಯ ಅಧ್ಯಾಯ



## ಹತ್ತನೆಯ ಅಧ್ಯಾಯ

## ಹನ್ನೊಂದನೆಯ ಅಧ್ಯಾಯ



## ಹನ್ನೆರಡನೆಯ ಅಧ್ಯಾಯ



## ಹದಿಮೂರನೆಯ ಅಧ್ಯಾಯ



## ಹದಿನಾಲ್ಕನೆಯ ಅಧ್ಯಾಯ



## ಹದಿನೈದನೆಯ ಅಧ್ಯಾಯ

### ಇಪ್ಪತ್ತೆರಡನೆಯ ಅಧ್ಯಾಯ



### ಇಪ್ಪತ್ತುಮೂರನೆಯ ಅಧ್ಯಾಯ



### ಇಪ್ಪತ್ತುನಾಲ್ಕನೆಯ ಅಧ್ಯಾಯ



### ಇಪ್ಪತ್ತೈದನೆಯ ಅಧ್ಯಾಯ



### ಇಪ್ಪತ್ತಾರನೆಯ ಅಧ್ಯಾಯ



### ಇಪ್ಪತ್ತೇಳನೆಯ ಅಧ್ಯಾಯ



### ಇಪ್ಪತ್ತೆಂಟನೆಯ ಅಧ್ಯಾಯ



### ಇಪ್ಪತ್ತೊಂಬತ್ತನೆಯ ಅಧ್ಯಾಯ



### ಮೂವತ್ತನೆಯ ಅಧ್ಯಾಯ

॥ ಶ್ರೀಃ ॥

॥ ಶ್ರೀಗಣೇಶಶಾರದಾಗುರುಭ್ಯೋ ನಮಃ ॥

॥ ಶ್ರೀಕಾಶೀವಿಶ್ವೇಶ್ವರಾಯ ನಮಃ ॥

# ಶ್ರೀಶಿವರಹಸ್ಯಂ

## ॥ ಪ್ರಥಮಾಂಶಃ ॥

### ಸೂತಮುನಿಸಂವಾದಃ

**ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ ।**
**ಪ್ರಸನ್ನವದನಂ ಧ್ಯಾಯೇತ್ಸರ್ವವಿಘ್ನೋಪಶಾಂತಯೇ ॥೧॥**

**ಶಿರಸಾ ಶಿವಭಕ್ತಾನಾಂ ಪಾದಾಂಬುಜರಜಃಕಣಾನ್ ।**
**ವಂದಾಮಹೇ ವಯಂ ನಿತ್ಯಂ ವಾಸನಾಧ್ವಾಂತಭಾಸ್ಕರಾನ್ ॥೨॥**

---

ಶುಭ್ರವಸ್ತ್ರಧಾರಿಯೂ, ಸರ್ವವ್ಯಾಪಕನೂ, ಚಂದ್ರನಂತೆ ವರ್ಣವುಳ್ಳವನೂ, ನಾಲ್ಕು ಭುಜಗಳಿಂದ ಪ್ರಕಾಶಿಸುವವನೂ, ಆಗಿ ಸರ್ವದಾ ಪ್ರಸನ್ನತೆಯಿಂದ ಕೂಡಿರುವ ಪರಮಾತ್ಮರೂಪಿಯಾದ ಶ್ರೀ ವಿಘ್ನೇಶ್ವರನನ್ನು ಸಮಸ್ತವಿಘ್ನನಿವಾರಣೆಗಾಗಿ ಧ್ಯಾನಮಾಡಬೇಕು. ॥೧॥

ಸರ್ವೇಶ್ವರನನ್ನು ಸರ್ವದಾ ಭಜಿಸುತ್ತಿರುವ ಈಶ್ವರಭಕ್ತರ ಪಾದಕಮಲಗಳ ಪರಾಗವನ್ನು ನಾವು ಯಾವಾಗಲೂ ಶಿರಸ್ಸಿನಲ್ಲಿ ಧರಿಸುತ್ತೇವೆ. ಏಕೆಂದರೆ ಆ ಪಾದರಜಸ್ಸು ನಮ್ಮ ಪ್ರಾರಬ್ಧಕರ್ಮಗಳೆಂಬ ಕಗ್ಗತ್ತಲೆಯನ್ನು ಸೂರ್ಯನಂತೆ ನಾಶಪಡಿಸಿ, ನಮ್ಮ ಜ್ಞಾನಭಂಡಾರವನ್ನು ಹೆಚ್ಚಿಸುತ್ತದೆ. ॥೨॥

(ಸೂಚನೆ—ಈ ಎರಡು ಶ್ಲೋಕಗಳೂ ಕೆಲವು ಪುಸ್ತಕಗಳಲ್ಲಿ ಕಂಡುಬರುತ್ತಿಲ್ಲ)

ಪುರಾ ಮಹೇಶ್ವರೇ ಸತ್ರೇ ಪ್ರವೃತ್ತೇ ಮುನಯಸ್ತದಾ ।
ಯದೃಚ್ಛಯಾಗತಂ ಸೂತಂ ಪೈಪ್ಪಲಾದಂ ಹಿ ಸತ್ರಿಣಃ ॥೩॥

ವಾಜಶ್ರವಸ ಆಹುಸ್ತಂ ಸಮವೇತಾ ಮಹರ್ಷಯಃ ।
ಕೃಷ್ಣಾಜಿನೋತ್ತರಾಸಂಗಾ ಭಸ್ಮೋದ್ಧೂಲಿತವಿಗ್ರಹಾಃ ॥೪॥

ತ್ರಿಪುಂಡ್ರವಿಲಸತ್ಫಾಲಾ ರುದ್ರಾಕ್ಷಾಂಗದಕಂಕಣಾಃ ।
ಯಜ್ಞೇಶ್ವರಂ ಮಹಾರುದ್ರಂ ಪೂಜಯಂತೋಽಧ್ವರೇಣ ತೇ ॥೫॥

ಲಿಂಗೇಽಗ್ನಿಹೋತ್ರೇ ಸೂರ್ಯೇ ಚ ರುದ್ರಸೂಕ್ತಜಪಾದರಾಃ ।
ಪಂಚಾಕ್ಷರಾವೃತ್ತಿಪರಾಃ ಶಿವನಾಮಪರಾಯಣಾಃ ॥೬॥

---

ಹಿಂದೆ ಸಮಸ್ತ ಮುನಿಗಳೂ ಒಟ್ಟುಗೂಡಿ ಸತ್ರಾತ್ಮಕವಾದ ಒಂದು ಯಾಗವನ್ನು ಶಿವಪ್ರೀತ್ಯರ್ಥವಾಗಿ ನಡೆಸಿದರು. ಅದೇ ಯಾಗಕ್ಕೆ ಮುನಿಶ್ರೇಷ್ಠನೂ, ಪರಮಜ್ಞಾನಿಯೂ ಆದ ಸೂತಮಹರ್ಷಿಯು ಅಕಸ್ಮಾತ್ತಾಗಿ ಬಂದು ಸೇರಿದನು. ||೩||

ಹಾಗೆ ಬಂದ ಸೂತಮಹರ್ಷಿಯನ್ನು ಕಂಡು, ಆ ಯಾಗದಲ್ಲಿ ಭಾಗವಹಿಸಿದ್ದ ಸಮಸ್ತ ಮಹರ್ಷಿಗಳೂ ಹರ್ಷಚಿತ್ತರಾಗಿ ಅವನ ಸುತ್ತಲೂ ಬಂದು ಕುಳಿತರು. ಅವರು ಕೃಷ್ಣಾಜಿನವನ್ನೇ ಉತ್ತರೀಯವನ್ನಾಗಿ ಮಾಡಿಕೊಂಡು ವಿಭೂತಿಲೇಪನದಿಂದ ಶುದ್ಧಕಾಯರಾಗಿ ಕಂಡುಬರುತ್ತಿದ್ದರು. ||೪||

ಅವರ ಹಣೆಯಲ್ಲಿ ವಿಭೂತಿಯಿಂದ ತ್ರಿಪುಂಡ್ರಗಳು ಶೋಭಿಸುತ್ತಿದ್ದುವು. ರುದ್ರಾಕ್ಷಿಯ ಸರವನ್ನು ತೋಳುಗಳಿಗೂ ಮುಂಗೈಗಳಿಗೂ ಕಟ್ಟಿಕೊಂಡಿದ್ದರು. ಸರ್ವದಾ ಯಜ್ಞದಲ್ಲಿ ಯಜ್ಞಪತಿಯೆನಿಸಿದ ಮಹಾರುದ್ರನನ್ನೇ ವಿಶೇಷವಾಗಿ ಪೂಜಿಸುವವರಾಗಿದ್ದರು. ||೫||

ಶಿವಲಿಂಗಾರ್ಚನೆಯಲ್ಲಿಯೂ, ಅಗ್ನಿಹೋತ್ರವೇ ಮೊದಲಾದ ಸಕಲ ಯಾಗಗಳಲ್ಲಿಯೂ, ಸೂರ್ಯಪ್ರಾರ್ಥನೆಯಲ್ಲಿಯೂ, ಆ ಮಹರ್ಷಿಗಳು ಶಿವಪ್ರೀತಿಯನ್ನೇ ಅರಸುತ್ತಾ, ರುದ್ರಸೂಕ್ತಗಳನ್ನು ಜಪಿಸುತ್ತಲೂ, ಶಿವಪಂಚಾಕ್ಷರೀಮಂತ್ರವನ್ನು ಪುರಶ್ಚರಣೆಮಾಡುತ್ತಲೂ, ಶಿವನಾಮಗಳನ್ನು ಪಾರಾಯಣಮಾಡುತ್ತಲೂ ಇದ್ದರು. ||೬||

ಪಂಚಕೋಶಾತಿಗಂ ದೇವಂ ಪಂಚಾಸ್ಯಂ ಪರಮೇಶ್ವರಂ ।
ಧ್ಯಾಯಂತಃ ಪರಯಾ ಭಕ್ತ್ಯಾ ತಂ ಪಪ್ರಚ್ಛುರಕಲ್ಮಷಾಃ ॥೭॥

ಸಂಪೂಜ್ಯಾರ್ಘ್ಯಾಸನೈರ್ಭೋಜ್ಯೈಃ ಪ್ರಶ್ರಯಪ್ರಶ್ನಭಾಷಣೈಃ ।
ಅನ್ಯೋನ್ಯಂ ಕುಶಲಪ್ರಶ್ನೈಃ ಪ್ರಶ್ರಯಾವನತಾಸ್ತದಾ ॥೮॥

ತೇಷಾಂ ಕುಲಪತಿರ್ವೃದ್ಧಃ ಪ್ರಾಹ ತಂ ಮೌನಿಭಾರ್ಗವಃ ।

॥ ಮೌನಿಭಾರ್ಗವ ಉವಾಚ ॥

ಪೈಪ್ಪಲಾದ ಸನಾಥಾಸ್ಸ್ಮಃ ತ್ವದಾಗಮನತೋ ವಯಂ ॥೯॥

ಮಾಹೇಶ್ವರಂ ಯತಸ್ಸತ್ರಂ ಪ್ರವೃತ್ತಂ ಪಾರಮೇಶ್ವರಂ ।
ತ್ವಂ ಭಕ್ತೋಽತೀವ ರುದ್ರಸ್ಯ ಸ್ಕಂದನಂದೀಶಸನ್ನಿಭಃ ॥೧೦॥

---

ಆ ಮಹರ್ಷಿಗಳ ಉಪಾಸ್ಯದೇವರು, ಪ್ರಾಣಾದಿ ಪಂಚಕೋಶಗಳಲ್ಲಿಯೂ ನೆಲಸದೆ, ಊರ್ಧ್ವಬ್ರಹ್ಮರಂಧ್ರದಲ್ಲಿ ಗೋಚರಿಸತಕ್ಕ ಪರಶಿವನೇ ಆಗಿದ್ದನು. ಅಂತಹ ಪಂಚಮುಖಗಳುಳ್ಳ ಪರಶಿವನನ್ನು ಅನನ್ಯವಾದ ಭಕ್ತಿಯಿಂದ ಧ್ಯಾನಿಸುತ್ತಾ ಸೂತಮಹರ್ಷಿಯನ್ನು ಕುರಿತು, ಕೆಲವು ಪ್ರಶ್ನೋಕ್ತಿಗಳನ್ನಾಡಿದರು. ॥೭॥

ಅದಕ್ಕೆ ಮುಂಚೆ ಅತಿಥಿಯಾಗಿ ಬಂದ ಸೂತಮಹರ್ಷಿಗೆ ಅರ್ಘ್ಯ, ಆಚಮನ, ಮಧುಪರ್ಕಾದಿಗಳನ್ನಿತ್ತು, ವಿನಯಪೂರ್ವಕವಾದ ಕುಶಲಪ್ರಶ್ನೆಗಳಾದಮೇಲೆ, ವಿಧೇಯರಾಗಿ ನಮಸ್ಕರಿಸಿ ನಿಂತು ಹೀಗೆ ಕೇಳಿಕೊಂಡರು. ॥೮॥

ಆ ಋಷಿಸಮೂಹಕ್ಕೆ ಕುಲಪತಿಯಂತಿದ್ದ ವೃದ್ಧನಾದ ಮೌನಿಭಾರ್ಗವನೆಂಬವನು ತಮ್ಮ ಇಷ್ಟಪ್ರಶ್ನೆಗಳನ್ನು ಕೇಳಲು ಮುಂದಾಳಾಗಿ ನಿಂತನು. ಅವನು ಕೇಳಿದ್ದೇನೆಂದರೆ :—"ಋಷಿವರ್ಯನೇ! ನಿನ್ನ ಆಗಮನದಿಂದ ನಾವು ಇಂದು ಧನ್ಯರಾದೆವು. ಸನಾಥರೆನಿಸಿಕೊಂಡೆವು. ॥೯॥

ಅಲ್ಲದೆ ಈಗ ನಾವು ನಡೆಸುತ್ತಿರುವುದು ಮಾಹೇಶ್ವರಸತ್ರ. ಇಲ್ಲಿ ಪೂಜಿಸುತ್ತಿರುವುದು ಪರಮೇಶ್ವರನನ್ನು. ನೀನಾದರೋ ರುದ್ರನಿಗೆ ಪ್ರಿಯಭಕ್ತನೆನಿಸಿರುವೆ. ಶಂಕರನು ನಿನ್ನಲ್ಲಿ ಸ್ಕಂದ ಮತ್ತು ನಂದೀಶ್ವರನಲ್ಲಿಟ್ಟಿರತಕ್ಕಂತಹ ಪ್ರೀತಿಯನ್ನಿಟ್ಟಿರುವನು. ॥೧೦॥

ಜೈಗೀಷವ್ಯೋ ಮುನಿಃ ಪೂರ್ವಮೂರ್ಧ್ವರೇತಾ ಮಹಾತಪಾಃ ।
ಶಂಕರಾಜ್ಞಾಪ್ರಭಾವೇನ ಸ್ಕಂದಾದ್ಯತ್ಪ್ರಾಪ್ತವಾನ್ ಶುಭಂ ॥೧೧॥

ಪುಣ್ಯಂ ಶಿವರಹಸ್ಯಾಖ್ಯಮಿತಿಹಾಸೋತ್ತಮೋತ್ತಮಂ ।
ತ್ರಿನೇತ್ರಾಪಾರಚರಿತಂ ದ್ವಾದಶಾಂಶಸಮನ್ವಿತಂ ॥೧೨॥

ಉಪಾಸತಾ ತ್ವಯಾ ಪೂರ್ವಂ ಮನೋವಾಕ್ಕಾಯಕರ್ಮಭಿಃ ।
ಭಕ್ತ್ಯಾ ತ್ವನನ್ಯಯಾ ಶಂಭೋಸ್ತ್ವಯಿ ಯತ್ಪ್ರೋಕ್ತವಾನ್ ಸ್ವಯಂ ॥೧೩॥

ಯಸ್ಮಿನ್ ದದೌ ಹರಃ ಪ್ರೀತ್ಯಾ ಸಂಸ್ಥಿತೇಷು ಮುನಿಷ್ವಪಿ ।
ದ್ವಾದಶಾಂಶಯುತಂ ಸಾಕ್ಷಾದ್ರಹಸ್ಯಂ ಶಿವಸಂಭವಂ ॥೧೪॥

ಶಿವರತ್ನಮಹಾಕೋಶಂ ತದ್ದೇವ್ಯಾ ಹೃದಯಂಗಮಂ ।
ಸ್ಕಂದಾಯಾಚಷ್ಟ ಸಾ ದೇವೀ ಪ್ರೀತ್ಯಾ ತೇನ ಪ್ರದರ್ಶಿತಂ ॥೧೫॥

---

ಎಲೈ ಸೂತಮಹರ್ಷಿಯೇ, ಹಿಂದೆ ಜೈಗೀಷವ್ಯನೆಂಬ ಋಷಿಯು ಮಹಾತಪಸ್ವಿಯಾಗಿದ್ದುದರಿಂದ ಅವನ ತಪಸ್ಸಿಗೆ ಮೆಚ್ಚಿದ ಶಂಕರನು, ಸ್ಕಂದನಿಗೆ ಅಪ್ಪಣೆ ಮಾಡಿ, ಸ್ಕಂದನಿಂದ ಶಿವರಹಸ್ಯವೆಂಬ ಮಹೇತಿಹಾಸವನ್ನು ಜೈಗೀಷವ್ಯನಿಗೆ ತಿಳಿಸಿರುವನಷ್ಟೆ. ॥೧೧॥

ಅದರಿಂದ ಜೈಗೀಷವ್ಯ ಋಷಿಯು, ಶಂಕರನ ಮಹಿಮಾಪೂರ್ಣವಾದ ಅನೇಕ ಇತಿಹಾಸಗಳನ್ನೊಳಗೊಂಡು, ಹನ್ನೆರಡು ಅಂಶಗಳಿಂದ ಕೂಡಿದ ಶಿವರಹಸ್ಯವೆಂಬ ಉತ್ತಮ ವಿಷಯವನ್ನು ಸ್ಕಂದನಿಂದ ತಿಳಿದುಕೊಂಡನಲ್ಲವೇ! ॥೧೨॥

ಎಲೈ ಸೂತಋಷಿಯೇ! ನೀನು ಅಂತಹ ಮಹಾತ್ಮನಾದ ಜೈಗೀಷವ್ಯನನ್ನು ಮನಸ್ಸು, ಮಾತು, ದೇಹ, ಕರ್ಮ ಮುಂತಾದುವುಗಳಿಂದ ಭಕ್ತಿಪೂರ್ವಕವಾಗಿ ಸೇವಿಸಿ, ಶಿವಭಕ್ತಿಯುಳ್ಳವನಾಗಿ ಅದೇ ಇತಿಹಾಸವನ್ನು ಜೈಗೀಷವ್ಯನಿಂದ ತಿಳಿದುಕೊಂಡಿದ್ದೀಯೆ. ನಿನ್ನ ಪುಣ್ಯವಶದಿಂದ ಜೈಗೀಷವ್ಯಋಷಿಯೇ ನಿನಗೆ ಎಲ್ಲವನ್ನೂ ತಿಳಿಸಿರುವನು. ॥೧೩॥

ಶಿವರಹಸ್ಯವೆಂಬ ಈ ಉತ್ತಮವಾದ ಇತಿಹಾಸವನ್ನು ಅನೇಕ ಜನ ಶಿವಭಕ್ತರಾದ ಮಹರ್ಷಿಗಳಿದ್ದರೂ, ಪ್ರೀತಿಯಿಂದ ಶಂಕರನು ತನ್ನ ಮಗನಾದ ಸ್ಕಂದನಿಗೆ ಮೊದಲು ಉಪದೇಶಿಸಿದನು. ಏಕೆಂದರೆ ಆ ಇತಿಹಾಸದಲ್ಲಿ ಶಿವನೆಂಬ ಒಂದು ದೊಡ್ಡ ರತ್ನವು ರಕ್ಷಿತವಾಗಿ ನಿಂತಿದೆ. ಅದು ಪಾರ್ವತಿಗೆ ಅತ್ಯಂತವಾದ

ಶಂಕರಸ್ಯಾಜ್ಞಯಾ ಸೂತ ಗುರೌ ತೇ ಶಾಂಭವೋತ್ತಮೇ ।
ಜೈಗೀಷವ್ಯಾಯ ತತ್ಪ್ರಾದಾತ್ ಸ್ಕಂದಸ್ಸ್ಕಂದಿತತಾರಕಃ ॥೧೬॥

ಇತಿ ಶುಶ್ರುಮ ವೃತ್ತಾಂತಂ ತನ್ನೋ ಬ್ರೂಹಿ ಕೃಪಾಧಿಕಾತ್ ।
ಸುಗೋಪ್ಯಮಪಿ ತದ್ಬ್ರೂಹಿ ಯತೋ ಭಕ್ತಾ ವಯಂ ಶಿವೇ ॥೧೭॥

ತ್ರಿಣೇತ್ರಸುಚರಿತ್ರಾಣಾಂ ಪಾತ್ರಭೂತಾ ಮುನೀಶ್ವರಾಃ ।
ಮಾಹೇಶ್ವರೇಣ ಸತ್ರೇಣ ಶುದ್ಧಗಾತ್ರಾ ವಯಂ ಸದಾ ॥೧೮॥

ಸುತ್ರಾಮಮಾನ್ಯೇ ಲೋಕೇಽಪಿ ವಾಂಛಾ ನೋ ಪಾಪಭೀತಿತಃ ।
ಗಾತ್ರೇ ಕಲತ್ರೇ ಪುತ್ರೇವಾ ಮಿತ್ರೇ ವಾ ಸ್ನೇಹವರ್ಜಿತಾಃ ॥೧೯॥

---

ಆನಂದವನ್ನುಂಟುಮಾಡತಕ್ಕದ್ದಾಗಿದೆ. ಇದನ್ನು ತಿಳಿದೇ ಪಾರ್ವತಿಯು ದ್ವಾದಶಾಂಶ ಸಹಿತವಾದ ಈ ಮಹೇತಿಹಾಸವನ್ನು ತನ್ನ ಪ್ರಿಯಪುತ್ರನಾದ ಸ್ಕಂದನಿಗೆ ಬೋಧಿಸಿದಳು. ॥೧೪-೧೫॥

ಕುಮಾರಸ್ವಾಮಿಯು ಅದನ್ನು ಅತ್ಯಂತ ಕೃಪೆಯಿಂದ ನಿನ್ನ ಗುರುವೂ, ಶಿವಭಕ್ತಾಗ್ರೇಸರನೂ ಆದ ಜೈಗೀಷವ್ಯನಿಗೆ ವಿಸ್ತರಿಸಿ ಹೇಳಿದನು. ತಾರಕಾಸುರ ನಾಶಕನಾದ ಆ ಸ್ಕಂದನ ಪ್ರಭಾವವು ಜೈಗೀಷವ್ಯನಿಗೆ ವಿಶೇಷವಾಗಿ ಜ್ಞಾನ ಪ್ರದವಾಯಿತು. ॥೧೬॥

ಹೀಗೆಂದು ನಾವು ಕೇಳಿದ್ದೇವೆ. ಆದ್ದರಿಂದ ಸೂತಮಹರ್ಷಿಯೆ; ನೀನು ದಯೆಯಿಟ್ಟು ಅದನ್ನು ನಮಗೆ ತಿಳಿಸಬೇಕು. ಆ ಶಿವರಹಸ್ಯವು ಅತ್ಯಂತ ಗೋಪ್ಯ ವಾದದ್ದೇ ಆಗಿರಬಹುದು. ಅಂತಹ ರಹಸ್ಯೋಪದೇಶಕ್ಕೆ ನಾವೂ ಅರ್ಹರೇ ಅಲ್ಲವೇ! ನಾವು ನಿತ್ಯವು ಶಂಕರನ ಸೇವೆಯಲ್ಲಿಯೇ ನಿರತರಾಗಿದ್ದೇವೆ. ॥೧೭॥

ಈಶ್ವರನ ಪವಿತ್ರವಾದ ಕಥೆಗಳನ್ನು ಕೇಳಲು ನಾವು ಸತ್ಪಾತ್ರರೆನಿಸಿಕೊಂಡಿದ್ದೇವೆ. ಶಿವಯಜ್ಞಗಳನ್ನಾಚರಿಸಿ ಶುದ್ಧಗಾತ್ರರೆನಿಸಿಕೊಂಡಿದ್ದೇವೆ. ಇದರಿಂದ ನಮ್ಮ ತನುಮನಗಳು ಶುದ್ಧಿಗೊಂಡಿವೆ. ॥೧೮॥

ದೇವೇಂದ್ರನ ಅಮರಾವತಿಯಲ್ಲಿಯೂ ನಮಗೆ ಇಷ್ಟವಸ್ತುಗಳಿಲ್ಲ. ನಾವು ಪಾಪಭೀತರು. ನಮ್ಮ ಶರೀರ, ಹೆಂಡತಿ, ಮಕ್ಕಳು, ಸ್ನೇಹಿತರು ಇವುಗಳಲ್ಲಿ ಮಮತೆಯನ್ನು ಬಿಟ್ಟಿದ್ದೇವೆ. ಸಂಪೂರ್ಣವಾದ ವೈರಾಗ್ಯವನ್ನು ಸಂಪಾದಿಸಿದ್ದೇವೆ. ॥೧೯॥

ವಿರಕ್ತಾಶ್ಚ ವದಾಸ್ಮಭ್ಯಂ ರಹಸ್ಯಂ ಶಾಂಭವಂ ಮುದಾ ।
ತ್ವಂ ಭೋ ಜ್ಞಾನಪ್ರದಸ್ಸಾಕ್ಷಾದ್ಗುರುಃ ಶಿವಸಮೋ ಮತಃ ॥೨೦॥

ತ್ವಂ ನೋ ಮಾತಾ ಪಿತಾಸ್ಮಾಕಂ ವದ ತತ್ಕರುಣಾಬಲಾತ್ ।
ಇತ್ಥಂ ಸ ಪೈಪ್ಪಲಾದೋ ಹಿ ಸೂತಃ ಪೃಷ್ಟೋ ಮುನೀಶ್ವರೈಃ ॥೨೧॥

ಉವಾಚ ಪ್ರಾಂಜಲಿರ್ವಾಕ್ಯಂ ತೇಷಾಂ ಭಕ್ತ್ಯಾ ಸುತೋಷಿತಃ ।
ಅನನ್ಯಶಂಭುಭಕ್ತ್ಯಾ ಚ ಜಾನನ್ ಪಾತ್ರಂ ಚ ತಾನಪಿ ॥೨೨॥

॥ ಸೂತ ಉವಾಚ ॥

ಪಾತ್ರಂ ಭವಂತಃ ಕೃಪಯಾ ಮಹೇಶಿತುಃ ।
ಸತ್ರೇಣ ದಾನೈಸ್ತಪಸೋಪಸದ್ಭಿಃ ।
ಪವಿತ್ರ ಗಾತ್ರಾವಭೃತೇನ ದೀಕ್ಷಯಾ ।
ವೇದಾಂತಸಾರಾರ್ಥವಿಚಾರನಿಷ್ಠಾಃ ॥೨೩॥

---

ಸದ್ಗುರುವೇ, ನಿಜವಾಗಿಯೂ ವಿರಕ್ತರಾಗಿರುವ ನಮಗೆ ಈಗ ಈ ಶಿವರಹಸ್ಯವನ್ನು ಉಪದೇಶಿಸು. ನಮಗೆ ನೀನು ಜ್ಞಾನಪ್ರದನಾದ ಸಾಕ್ಷಾದ್ಗುರುವಲ್ಲವೇ? ನಿನ್ನನ್ನು ನಾವು ಶಿವನಿಗೆ ಸಮಾನವಾಗಿ ತಿಳಿದಿದ್ದೇವೆ. ॥೨೦॥

ನೀನೇ ನಮಗೆ ಮಾತಾಪಿತೃಸದೃಶನು. ನಿನಗಿಂತ ಬಂಧುವು ನಮಗೆ ಮತ್ತೊಬ್ಬರಿಲ್ಲ. ದಯೆಯಿಂದ ನಮಗೆ ಶಿವರಹಸ್ಯವನ್ನು ಉಪದೇಶಿಸಬೇಕು" ಎಂದು ಸಮಸ್ತಋಷಿಗಳೂ ಸೂತಮಹರ್ಷಿಯನ್ನು ಕೇಳಿಕೊಂಡರು. ॥೨೧॥

ಆಗ ಸೂತಮಹರ್ಷಿಯು, ಅವರ ಭಕ್ತಿಯುಕ್ತವಾದ ಕೋರಿಕೆಗಳನ್ನು ಈಡೇರಿಸಲು ಸಿದ್ಧನಾಗಿ, ಶಿವಭಕ್ತಿಯುತರಾದ ಅವರನ್ನು ಸತ್ಪಾತ್ರರೆಂದು ತಿಳಿದು ಶಿವರಹಸ್ಯವೆಂಬ ಉತ್ತಮವಾದ ಇತಿಹಾಸವನ್ನು ಹೇಳತೊಡಗಿದನು. ॥೨೨॥

"ಎಲೈ ಋಷಿಗಳೇ, ನೀವು ಅನೇಕ ಯಜ್ಞಾದಿಗಳನ್ನು ನೆರವೇರಿಸಿ ಮಹೇಶ್ವರನ ಕೃಪೆಗೆ ಪಾತ್ರರಾಗಿದ್ದೀರಿ. ತಪಸ್ಸಿನಿಂದ ಜ್ಞಾನಾರ್ಜನೆ ಮಾಡಿದ್ದೀರಿ. ವೇದಾಂತಾದಿ ಸಕಲಶಾಸ್ತ್ರಾಧ್ಯಯನಾದಿಗಳಿಂದ ವಿಚಾರಪರರಾಗಿ ಸುಜ್ಞಾನಿಗಳಾಗಿರುವಿರಿ. ॥೨೩॥

ಶೃಣುಧ್ವಮಾದ್ಯಂ ಪ್ರಥಮಾಂಶಮೇತ ।
ದ್ಯಥಾ ಗುರುರ್ಮೇ ಭಗವಾನ್ ಪ್ರಸಾದಭಾಕ್ ।
ಮಹೇಶ್ವರಸ್ಯಾಪ್ರತಿಮಪ್ರಭಾವೋ ।
ಭಾವೋ ಭವೋತ್ಕೃಷ್ಟಹೃದೋಜ್ಝಿತಾಶಃ ॥೨೪॥

ಜೈಗೀಷವ್ಯಮುನಿ ಸ್ತತಾಪ ತಪಸಾ ರುದ್ರಂ ಜಪಂಸ್ತುಷ್ಟಧೀಃ ।
ಕಷ್ಟಾನಪ್ಯಸಮೀಕ್ಷ್ಯ ಸಂಯುತಮನಾ ವರ್ಷಾಯುತಂ ವಾಯುಭುಕ್ ।
ಶಿಷ್ಟಃ ಶ್ರೀಶಿಪಿವಿಷ್ಟಪಾದಕಮಲಧ್ಯಾನೋ ವಿಶಿಷ್ಟಾಂತರೋ ।
ಬ್ರಹ್ಮಿಷ್ಠೋ ಹಿ ಗರಿಷ್ಠಮದ್ಭುತತರಂ ಪ್ರಾಪ ಪ್ರಸಾದಂ ಹರಾತ್ ॥೨೫॥

ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ಸೂತಮುನಿ ಸಂವಾದೇ
ಪ್ರಥಮೋಽಧ್ಯಾಯಃ

---

ನನ್ನ ಗುರುವಾದರೋ, ಮಹೇಶ್ವರಾನುಗ್ರಹಕ್ಕೆ ಪಾತ್ರರೆನಿಸಿ, ಮಹಾ ಪ್ರಭಾವಶಾಲಿಗಳಾಗಿರುವರು. ಅವರ ಚಿತ್ತವು ಸಂಸಾರಪಾಶಕ್ಕೆ ಸಿಕ್ಕದೆ ಸರ್ವದಾ ಶಿವಧ್ಯಾನದಲ್ಲಿಯೇ ಮುಳುಗಿದೆ. ಇಂತಹ ಸದ್ಗುರುವು ನನಗೆ ಉಪದೇಶಮಾಡಿರುವ ರೀತಿಯಲ್ಲಿ, ನಾನು ಈಗ ಈ ಶಿವರಹಸ್ಯದ ಪ್ರಥಮಾಂಶವನ್ನು ನಿಮಗೆ ಉಪದೇಶಿಸುವೆನು. ಕೇಳಿರಿ. ||೨೪||

ನಮ್ಮ ಗುರುವಾದ ಜೈಗೀಷವ್ಯ ಋಷಿಯಾದರೋ, ಹತ್ತುಸಹಸ್ರವರ್ಷ ಪರ್ಯಂತವಾಗಿ, ಅನೇಕ ಕಷ್ಟಗಳನ್ನನುಭವಿಸುತ್ತಾ ಅನಿಲಾಹಾರಿಯಾಗಿ ಶಂಕರನನ್ನು ಕುರಿತು ತಪಸ್ಸುಮಾಡಿದನು. ತನ್ನ ಅಂತರಂಗದಲ್ಲಿ ಸರ್ವದಾ ಶಂಭುವಿನ ಪಾದ ಕಮಲವನ್ನೇ ಭಜಿಸುತ್ತಾ ಪರಮೇಶ್ವರನ ಮನಸ್ಸನ್ನು ತೃಪ್ತಿಪಡಿಸಿದನು. ಸಂತುಷ್ಟನಾದ ಶಂಕರನು ಜೈಗೀಷವ್ಯ ಋಷಿಯನ್ನು ಬ್ರಹ್ಮಿಷ್ಠನನ್ನಾಗಿಯೂ ಮಹಾಮಹಿಮನನ್ನಾಗಿಯೂ ಮಾಡಿ, ತನ್ನ ಪ್ರಿಯಭಕ್ತನಂತೆ ಅವನನ್ನು ಪಾಲಿಸಿದನು. ||೨೫||

ಇಲ್ಲಿಗೆ ಶಿವರಹಸ್ಯದ ಪ್ರಥಮಾಂಶದಲ್ಲಿ ಸೂತ ಮತ್ತು ಮಹರ್ಷಿಗಳ ಸಂವಾದವನ್ನು ತಿಳಿಸುವ ಮೊದಲನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

# ಅಥ ಶ್ರೀಶಿವರಹಸ್ಯೇ

## ದ್ವಿತೀಯೋಽಧ್ಯಾಯಃ

|| ಸೂತ ಉವಾಚ ||

[1] ಶತಮುಖಶಿಖಿವೇದಶಾಖಾಶತಮುಖನುತಷಣ್ಮುಖಾಪ್ತಬಂಧುಂ ।
ನಭಶಿಖಸುಖದಂ ಮಹೇಭವಕ್ತ್ರಂ ಖಗಗತಿಪಂಕಜಜಾತಸಂಸ್ತುತಂ ಚ ॥೧॥

ಉತ್ಫುಲ್ಲಾಮಲನೀಲನೀರಜಮಹಾಸಿಂಹಾಸನಾಧ್ಯಾಸಿತಾ ।
ಪಾರಾವಾರಜಗದ್ವಿಬೋಧಚತುರಾ ವಾಣೀ ಮನೋಹಾರಿಣೀ ।
ಭೋ ಶಂಭೋ ಶಿವ ಸಾಂಬ ಶಂಕರ ಮಹಾದೇವೇತಿ ತಾನಾವೃತಾ ।
ಸ್ವಾದಾಸ್ವಾದನವಲ್ಲಕೀಮುಖರಿತಾನಂದೋಲ್ಲಸಾ ಪಾತು ನಃ ॥೨॥

---

### ಶ್ರೀಶಿವರಹಸ್ಯದಲ್ಲಿ ಎರಡನೆಯ ಅಧ್ಯಾಯ

ಶಿವರಹಸ್ಯವನ್ನು ಸಮಸ್ತ ಋಷಿಗಳಿಗೂ ಬೋಧಿಸುವ ಮಹಾಕಾರ್ಯವು ಸುಲಭವಾಗಿ ನೆರವೇರುವುದಕ್ಕಾಗಿ ಮೊದಲು ಸೂತಮಹರ್ಷಿಗಳು ವಿಘ್ನೇಶ್ವರನನ್ನು ಹೀಗೆ ಸ್ತುತಿಸುವರು. ಸರ್ವತೋಮುಖನಾದ ಅಗ್ನಿದೇವನಿಂದಲೂ, ವೇದಶಾಸ್ತ್ರಾದಿಗಳಿಂದಲೂ, ದೇವೇಂದ್ರನಿಂದಲೂ ಸ್ತುತಿಸಲ್ಪಡುವ ವಿಘ್ನೇಶ್ವರನು, ಷಣ್ಮುಖಸ್ವಾಮಿಗೆ ಸಹೋದರಭಾವದಲ್ಲಿ ಆಪ್ತಬಂಧುವಾಗಿಯೂ, ವ್ಯೋಮಕೇಶನಾದ ಪರಮೇಶ್ವರನಿಗೆ ಸುಖಕರನಾಗಿಯೂ, ಹಂಸವಾಹನನಾಗಿ ಕಮಲೋದ್ಭವನಾಗಿರುವ ಬ್ರಹ್ಮನಿಂದ ವಿಶೇಷವಾಗಿ ಪೂಜಿತನಾಗಿಯೂ ಇರುವನು. ಅಂತಹ ಗಜಾನನನಾದ ಗಣಪತಿಯನ್ನು ಶಿರಸಾ ವಂದಿಸುವೆನು. ||೧||

ಅನಂತರ ಸಕಲವಿದ್ಯಾಭಿಮಾನಿನಿಯಾದ ಸರಸ್ವತಿಯನ್ನು ಪ್ರಾರ್ಥಿಸುವರು. ಸರಸ್ವತಿಯು ಅರಳಿದ ನೀಲೋತ್ಪಲಗಳಿಂದ ನಿರ್ಮಿತವಾದ ದಿವ್ಯಸಿಂಹಾಸನದಲ್ಲಿ

---

1 ಶತಮುಖಶಿಖಿಭೇದ ವೇದ-ಎಂಬ ಪಾಠಾಂತರವಿದೆ

**ಪಾಪಾಗಾಧಮಹಾಂಬುಧೇರ್ಜನಿಜರಾಕಲ್ಲೋಲಪಾರಂಪರೀ ।
ಮಜ್ಜಜ್ಜಂತುಕದಂಬಕಂ ಕರುಣಯಾ ಪಾರಂ ಪರಂ ಯೋಗತಃ ।
ಶಂಭೋಸ್ಸತ್ಕಥಯಾ ಸುಧಾಸುರಸಯಾ ಸನ್ನೌಕಯಾ ಕೇವಲಂ ।
ಸಂತೀರ್ಣಂತು ಕರೋತಿ ಜಂತುನಿವಹಂ ಸತ್ಕರ್ಣಧಾರೋ ಗುರುಃ ॥೩॥**

**ಕಾಲಾವಚ್ಛೇದಯುಕ್ತಾನ್ ವಿಧಿಹರಮುರಭಿಚ್ಚಕ್ರಸೂರ್ಯೇಂದುವಾಯೂನ್
ಸೃಷ್ಟ್ವಾ ತೈಃ ಕ್ರೀಡತೀಶೋ ಜಗದುದರದರೀಮಧ್ಯಪದ್ಮೈಕಸಂಸ್ಥಃ ।
ನೀರೂಪೋ ವಿಶ್ವರೂಪಃ ಪ್ರಮಥಗಣವರೈರ್ವಿಶ್ವಕರ್ತ್ರ್ಯಾ ಜನನ್ಯಾ ।
ಹೇರಂಬಸ್ಕಂದಯುಕ್ತೋ ಗುರುರಮರವರಃ ಪೂರ್ವಿಕಃ ಪಾತು ನಿತ್ಯಂ॥೪॥**

---

ಮಂಡಿಸಿರುವಳು. ಚತುಸ್ಸಮುದ್ರಪರಿಮಿತವಾದ ಜಗತ್ತಿಗೆ ಜ್ಞಾನವನ್ನು ಬೋಧಿಸುವುದರಲ್ಲಿ ಚತುರಳಾಗಿರುವಳು. ವಾಗ್ದೇವತೆಯೆನಿಸಿ ಸರ್ವರ ಮನಸ್ಸಿಗೂ ಆನಂದವನ್ನೀಯುವಳು. ಇಂತಹ ಶಾರದಾಂಬೆಯು, ಯಾವಾಗಲೂ ದಿವ್ಯಸ್ವರವುಳ್ಳ ತನ್ನ ವೀಣೆಯಲ್ಲಿ ಶಂಭೋ, ಶಂಕರ ಎಂಬ ಶಂಕರನ ದಿವ್ಯನಾಮಗಳನ್ನು ನುಡಿಸುತ್ತಿರುವಳು. ಆನಂದಮಯವಾದ ಶಿವನಾಮಸ್ತುತಿಗಳಿಂದ ದಿವ್ಯಗಾನಮಾಡುವ ಸಾಕ್ಷಾತ್ಸರಸ್ವತೀದೇವಿಯು ನಮ್ಮೆಲ್ಲರನ್ನೂ ಸಂರಕ್ಷಿಸಲಿ. ||೨||

ತಮ್ಮ ತಮ್ಮ ದುಷ್ಕೃತವೆಂಬ ಅಗಾಧಸಮುದ್ರದಲ್ಲಿ ಜನ್ಮ, ಜರಾ ಮುಂತಾದ ಅವಸ್ಥೆಗಳು ಅಲೆಗಳಂತೆ ಹೊಡೆದಾಡುತ್ತಿವೆ. ಇಂತಹ ಅಲೆಗಳಲ್ಲಿ ಮುಳುಗಿ ತೇಲುತ್ತಿರುವ ಪ್ರಾಣಿಸಮೂಹವನ್ನು ಕರುಣೆಯಿಂದ ಉದ್ಧರಿಸುವವನು ಸದ್ಗುರುವು. ಆ ಗುರುವು ಪಾಪಿಗಳಾದ ಈ ಪ್ರಾಣಿಗಳಿಗೆ ಯೋಗಶಾಸ್ತ್ರಾಭ್ಯಾಸಬಲದಿಂದ, ಅಮೃತಮಯವಾದ ಶಿವಕಥೆಗಳೆಂಬ ದೋಣಿಗಳನ್ನು ಸಂಪಾದಿಸಿ, ಆ ದೋಣಿಗಳಲ್ಲಿ ಈ ಪಾಪಿಗಳಿಗೆ ಆಶ್ರಯಕೊಟ್ಟು, ತಾನೇ ನಾವಿಕನಂತೆ ದೋಣಿಯನ್ನು ನಡೆಸಿ, ಮುಳುಗುತ್ತಿರುವ ಈ ಅಜ್ಞಾನಿಗಳ ಗುಂಪಿಗೆ ದಡಕಾಣಿಸುತ್ತಿರುವನು. ಹೀಗೆ ಶಿವಕಥಾಶ್ರವಣಗಳ ಮೂಲಕ ಜ್ಞಾನಪ್ರದನಾದ ಸದ್ಗುರುವಿಗೆ ವಂದನೆ. ||೩||

ಪರಬ್ರಹ್ಮರೂಪಿಯಾದ ಪರಶಿವನು ತಾನು ಸೃಷ್ಟಿಮಾಡಿದ ಜಗತ್ತನ್ನು ಕಾಲಪರಿಮಾಣಾದಿಗಳಿಂದ ನಡೆಸಲು, ಬ್ರಹ್ಮ, ವಿಷ್ಣು, ರುದ್ರ, ಸೂರ್ಯ, ಚಂದ್ರ, ವಾಯು ಮುಂತಾದ ದೇವತಾವಿಶೇಷಗಳನ್ನು, ಮೊದಲು ನಿರ್ಮಾಣಮಾಡಿರುವನು. ತಾನು

ಪಂಚಾಸ್ಯವಕ್ತ್ರಕಮಲೇ ಮಕರಂದನೇತತ್ ।
ಪಂಚತ್ವನಾಶನಕರಂ ಶ್ರುತಿಪಂಚಕಂ ಹಿ ।
ಪುಣ್ಯಂ ಶೈವರಹಸ್ಯಸಾರಮಧುನಾ ಪೇಪೀಯತಾಂ ಮುಕ್ತಯೇ ।
ಪಂಚಾಸ್ಯಧ್ಯಾನಪೂತಾ ದ್ವಿಜವರತಿಲಕಾಃ ಪಂಚಪಾಪೈರ್ವಿಹೀನಾಃ ॥೫॥

ವೇದೇಷು ಪ್ರಥಿತಂ ಚ ಪಂಚಕತಯಾ ಭೂತೇಷು ಪಂಚಸ್ವಪಿ ।
ಕೋಶೇ ಪಂಚಕಕೇೋಂತಿನ್ಯೈಕವಸತೇಃ ಶಂಭೋಃ ಕೃಪಾಕಾರಣಂ ।
ಶ್ರುತ್ವಾ ಜನ್ಮಜರಾದಿದುಃಖನಿವಹೈಃ ಪಂಚತ್ವಹೀನೋ ಭವೇತ್ ॥೬॥

---

ಮಾತ್ರ, ಬ್ರಹ್ಮಾಂಡದ ಮಧ್ಯಭಾಗದಲ್ಲಿ ಕಮಲಾಸನಗತನಾಗಿ ಸರ್ವರೊಡನೆ ವಿಹರಿಸುತ್ತಿರುವನು. ಪರಶಿವನಿಗೆ ತಾತ್ತ್ವಿಕವಾದ ದೃಷ್ಟಿಯಿಂದ ಯಾವ ರೂಪವೂ ಕಂಡು ಬರುವುದಿಲ್ಲ. ಆದರೆ ವ್ಯವಹಾರದಲ್ಲಿ ಪ್ರಪಂಚವೆಲ್ಲಾ ಅವನ ರೂಪವಾಗಿಯೇ ಕಾಣುತ್ತಿದೆ. ಸಮಸ್ತ ಪ್ರಮಥಗಣಗಳಿಂದ ಕೂಡಿ, ಲೋಕಕ್ಕೆ ಸೃಷ್ಟಿದೇವತೆಯಾದ ಜಗದೀಶ್ವರಿಯೊಡನೆ ರಾರಾಜಿಸುತ್ತಿರುವನು. ಮತ್ತು ಸ್ಕಂದ, ಗಣಪತಿಯರಿಂದ ಕಲೆತು, ದೇವಶ್ರೇಷ್ಠನಾಗಿ ಜಗದ್ಗುರುವೆನಿಸಿರುವನು. ಅಂತಹ ಆದಿಪುರುಷನಾದ ಪರಮೇಶ್ವರನು ಯಾವಾಗಲೂ ನನ್ನನ್ನು ರಕ್ಷಿಸಲಿ. ಎಂದು ಸೂತಮಹರ್ಷಿಗಳು ಲೋಕೇಶ್ವರನನ್ನು ಪ್ರಾರ್ಥಿಸಿದರು. ॥೪॥

ಈ ಶಿವರಹಸ್ಯವೆಂಬುದು ಐದು ವೇದಗಳ ಸಾರಭೂತವಾದದ್ದು. ಪಂಚಮುಖನಾದ ಈಶ್ವರನ ವದನವೆಂಬ ಕಮಲದಿಂದ ಮಕರಂದದಂತೆ ನಿಸ್ಸೃತವಾದದ್ದು. ಪ್ರಾಣಿಗಳಿಗೆ ಮರಣಭಯವನ್ನು ತಪ್ಪಿಸತಕ್ಕದ್ದು. ಶಿವಧ್ಯಾನಪರರಾಗಿ, ಪಂಚಮಹಾಪಾಪಗಳಿಂದ ದೂರವಾಗಿರುವ ದ್ವಿಜಶ್ರೇಷ್ಠರುಗಳೇ, ಇಂತಹ ಪರಮಪವಿತ್ರವಾದ ಶಿವರಹಸ್ಯವನ್ನು ಶ್ರವಣಮಾಡಿ ಮುಕ್ತಿಯನ್ನು ಸಂಪಾದಿಸಿರಿ:—॥೫॥

ಈ ಶಿವರಹಸ್ಯವು ಸಮಸ್ತ ವೇದಗಳಲ್ಲಿಯೂ ಪ್ರಸಿದ್ಧವಾಗಿದೆ. ಪೃಥಿವ್ಯಾದಿ ಪಂಚಭೂತಮಯವಾದ ಈ ಜಗತ್ತಿನಲ್ಲಿ ಪ್ರತಿಯೊಂದು ಭೂತತತ್ತ್ವಕ್ಕೂ ವ್ಯಾಪಿಸತಕ್ಕದ್ದು. ಅನ್ನಮಯಾದಿ ಪಂಚಕೋಶಗಳಲ್ಲಿ ಅಡಗಿರತಕ್ಕದ್ದು. ವಿಶೇಷವಾಗಿ ಪರಮೇಶ್ವರನ ಅನುಗ್ರಹಕ್ಕೆ ಕಾರಣಭೂತವಾದದ್ದು. ಇಂತಹ ಪವಿತ್ರವಾದ ಶಿವರಹಸ್ಯವನ್ನು ನೀವೆಲ್ಲರೂ ಕೇಳಿ ವೃದ್ಧಾಪ್ಯ, ಪುನರ್ಜನ್ಮ ಮುಂತಾದ ದುಃಖ ಪರಂಪರೆಗಳನ್ನು ಕಳೆದುಕೊಳ್ಳಿರಿ. ಇದರ ಶ್ರವಣದಿಂದ ಸರ್ವರೂ ಮರಣವರ್ಜಿತರಾಗಿ ಶಿವಸಾನ್ನಿಧ್ಯವನ್ನು ಪಡೆಯಬಹುದು. ॥೬॥

**ದುರ್ಮಾಯಾಲಸಿತೇನ ಪಾಪಮತಿಭಾಗಾಯಾತ್ಯಹೋಸಂಸ್ಮೃತಿಂ ।**
**ತ್ಯಕ್ತ್ವಾ ಶಂಕರನಾಮಬೋಧಿತಕಥಾಪೀಯೂಷಪಾನೋಜ್ಝಿತಃ ।**
**ಕಾಮಕ್ರೋಧಜರಾವಿಪತ್ತಿಮರಣೈಃ ಸೌರಿಂ ವ್ರಜೇದ್ದುಃಖಿತಃ ।**
**ಸ್ವಸ್ಯಾಸ್ಯಾಂತರವರ್ತಿಪಾಯಸವರಂ ತ್ಯಕ್ತ್ವಾಖುಮೂತ್ರಂ ಪಿಬೇತ್ ॥೭॥**

॥ ಮುನಯ ಊಚುಃ ॥

**ಸ ಕಥಂ ತಪಸಾ ದೇವಂ ಪ್ರಸಾದ್ಯ ಪರಮೇಶ್ವರಂ ।**
**ಜೈಗೀಷವ್ಯಸ್ಸರ್ವಗುರುಸ್ತಪೋರಾಶಿಃ ಶಿವಾರ್ಚಕಃ ॥೮॥**

**ಕಂ ಕಾಮಮಲಭತ್ಸೂತ ತಂ ನೋ ವಿಸ್ತರತೋ ವದ ।**
**ಶ್ರೋತುಮಿಚ್ಛಾಸ್ತಿ ಮಹತೀ ಚರಿತ್ರೇ ಶಾಂಭವೇ ಹಿ ನಃ ॥೯॥**

---

ಪ್ರಪಂಚವು ಮಾಯಾವರಣವುಳ್ಳದ್ದು. ಇದು ಜನರನ್ನು ಭ್ರಾಂತರನ್ನಾಗಿ ಮಾಡುತ್ತದೆ. ಇಂತಹ ಮಾಯೆಗೆ ಒಳಪಟ್ಟು ಜೀವಿಗಳು ಕ್ಷಣಿಕಸುಖಾಭಿಲಾಷೆಯಿಂದ ಪಾಪಕಾರ್ಯಾಸಕ್ತರಾಗುತ್ತಾರೆ. ಶಂಕರನಾಮವೆಂಬ ಅಮೃತಪಾನಕ್ಕೆ ಮನಸ್ಸನ್ನೇ ಕೊಡುವುದಿಲ್ಲ. ಇದನ್ನೇ ಸಂಪೂರ್ಣವಾದ ಅಜ್ಞಾನವೆನ್ನುವರು. ಈ ಅಜ್ಞಾನಿಗಳು ಶಂಕರನಾಮವಿಮುಖರಾಗಿ, ಕಾಮ, ಕ್ರೋಧ, ಮುಪ್ಪು, ವಿಪತ್ತು ಮುಂತಾದ ಕಷ್ಟಪರಂಪರೆಗಳಿಗೆ ಸಿಕ್ಕಿ ಅನ್ಯಾಯವಾಗಿ ಯಮಲೋಕವನ್ನು ಹೊಂದುವರು. ಬಾಯಿಗೆ ಬಂದ ಶ್ರೇಷ್ಠವಾದ ಪಾಯಸವನ್ನು ಉಗುಳಿ, ಇಲಿಯ ಮೂತ್ರವನ್ನು ಕುಡಿದವರು ಎಂತಹ ಅದೃಷ್ಟಶಾಲಿಗಳೋ, ಅವರಂತೆ ಶಿವನಾಮಸ್ಮರಣೆಯನ್ನು ಮಾಡದವರು ವ್ಯರ್ಥಜೀವಿಗಳಾಗುವರು." ಎಂದು ಸೂತಮಹರ್ಷಿಗಳು ಹೇಳಲು, ॥೭॥

ಮೌನಿಭಾರ್ಗವನೇ ಮೊದಲಾದ ಸಮಸ್ತ ಋಷಿಗಳೂ ಮತ್ತೆ ಸೂತಮಹರ್ಷಿಯನ್ನು ಕುರಿತು, "ಮಹರ್ಷಿಯೇ, ಶಿವಾರಾಧಕನೂ ತಪಸ್ವಿಯೂ ಆದ ಜೈಗೀಷವ್ಯಮುನಿಯು ಯಾವ ರೀತಿ ತಪಸ್ಸನ್ನಾಚರಿಸಿ ಮಹಾದೇವನನ್ನು ತೃಪ್ತಿಪಡಿಸಿದನು ? ॥೮॥

ಅಲ್ಲದೆ ಮಹೇಶ್ವರನನ್ನು ತೃಪ್ತಿಪಡಿಸಿ, ಅವನಿಂದ ಪಡೆದ ವರವು ಯಾವುದು ? ಸೂತಮಹರ್ಷಿಯೇ, ಈ ಮೂಲಕ ಮಹಾದೇವನ ಚರಿತ್ರೆಯೆಲ್ಲವನ್ನೂ ಕೇಳಬೇಕೆಂಬ ಕುತೂಹಲವು ನಮ್ಮೆಲ್ಲರಿಗೂ ಬಹಳವಾಗಿದೆ. ॥೯॥

**ವದಾದ್ಯ ಕರುಣಾಮೂರ್ತೇ ಶೂಲಿನೋಽಮಲಸತ್ಕಥಾಃ ।**
**ಸ ವಾಜಶ್ರವಸಾಂ ವಾಕ್ಯಾಜ್ಜಹರ್ಷ ಪರಮೇಶ್ವರಂ ॥೧೦॥**

**ಧ್ಯಾತ್ವಾ ಸ್ವಹೃತ್ಪದ್ಮಕೋಶೇ ಜಗಾದಾಗಾಧಬೋಧತಾಂ ।**
**ಕಥಾಂ ಕಲುಷಚಿತ್ತಾನಾಂ ತನುಃಕಾಲುಷ್ಯಮುಕ್ತಯೇ ॥೧೧॥**

॥ ಸೂತ ಉವಾಚ ॥

**ವಾಯುರ್ದೋಧೂಯತೇ ಯದ್ಯು(ದ್ಯ)ದಯಮುಡುಗಣೋ**
**ಬಂಭ್ರಮೀತಿ ದ್ರುತಂ ಖೇ ।**
**ವಹ್ನಿರ್ಜಾಜ್ವಲ್ಯತೇ ಯನ್ನ ಚ ಸಲಿಲನಿಧಿರ್ಮಾಧವೀಂ ದೋಧವೀತಿ ॥**
**ಭೂರ್ಯದ್ವದ್ಬೋಭವೀತಿ ಸ್ಥಿರಚರಧೃತಯೇ ತಚ್ಚ ತಾದೃಕ್ಚ ಸರ್ವಂ ।**
**ಸ್ವಾಯತ್ತಾಶೇಷಸತ್ತಾಸ್ಥಿತಿಯಮನಪರಂ ಶಂಭುಲೀಲೋತ್ಥಮುಕ್ತಂ॥೧೨॥**

---

ಋಷಿವರ್ಯನೇ, ನೀನು ಅತ್ಯಂತ ದಯಾಶಾಲಿಯು. ಆದ್ದರಿಂದ ನಮ್ಮ ಪ್ರಾರ್ಥನೆಯನ್ನನುಸರಿಸಿ ಶಂಕರನ ಪವಿತ್ರವಾದ ಕಥೆಗಳನ್ನೆಲ್ಲಾ ದಯವಿಟ್ಟು ತಿಳಿಸಬೇಕು” ಎಂದು ಸಕಲ ಋಷಿಗಳೂ ಕೇಳಿಕೊಳ್ಳಲು, ಸೂತಮುನಿಯು ಸಂತೋಷಚಿತ್ತನಾಗಿ, ಅವರ ಇಷ್ಟದಂತೆಯೇ, ॥೧೦॥

ಜಗದೀಶ್ವರನಾದ ಶಂಕರನನ್ನು ತನ್ನ ಹೃದಯಕಮಲದಲ್ಲಿ ಧ್ಯಾನಿಸಿ, ಅಗಾಧವಾದ ವಿಷಯಗಳನ್ನೊಳಗೊಂಡ ಶಿವರಹಸ್ಯಗ್ರಂಥವನ್ನು ಹೇಳಲಾರಂಭಿಸಿದನು. ಆ ಕಥೆಯಾದರೋ, ಅಜ್ಞಾನಿಗಳನ್ನು ಜ್ಞಾನಿಗಳನ್ನಾಗಿ ಮಾಡಿ, ಅವರಿಗೆ ಮೋಕ್ಷವನ್ನು ಒದಗಿಸತಕ್ಕದ್ದಾಗಿರುವುದು. ॥೧೧॥

ಲೋಕದಲ್ಲಿ ವಾಯುವು ತಪ್ಪದೆ ಸಂಚರಿಸುವುದು, ಗ್ರಹನಕ್ಷತ್ರಗಳು ಖಗೋಳ ಚಕ್ರವನ್ನು ಬಿಡದೆ ಸುತ್ತುವುದು, ಅಗ್ನಿಯು ಬೇಕಾದಾಗ ಜ್ವಲಿಸುವುದು, ಸಮುದ್ರವು ಮೇರೆದಪ್ಪದೆ, ವೃಷ್ಟಿಪ್ರದಾನಮಾಡುವುದು, ಭೂಮಿಯು ಚರಾಚರ ವಸ್ತುಗಳನ್ನು ಧರಿಸಿಕೊಂಡು ನಿಂತಿರುವುದು, ಹೀಗೆಯೇ ಸಕಲ ವಸ್ತುಗಳೂ ಆಯಾಯ ಗುಣಗಳಿಂದ ಕೂಡಿ ಪ್ರಕಾಶಿಸುವುದೂ, ಇವೆಲ್ಲವೂ ಶಂಭುಲೀಲೆಯೇ ಹೊರತು ಮತ್ತೆ ಬೇರೆಯಲ್ಲ. ಸಕಲ ಜೀವರಾಶಿಗಳನ್ನೂ ಅಧೀನಮಾಡಿಕೊಂಡು, ತನ್ನ ಇಷ್ಟದಂತೆ ನಡೆಸುವ ಶಕ್ತಿಯು ಪರಮೇಶ್ವರನಿಗೊಬ್ಬನಲ್ಲದೆ ಮತ್ತಾರಿಗೆ ದೊರಕಬಹುದು? ॥೧೨॥

ಶೃಣುಧ್ವಂ ಮುನಯಸ್ಸರ್ವೇ ಸತ್ರಿಣಃ ಪೂತಮಾನಸಾಃ ।
ಜೈಗೀಷವ್ಯತಪಶ್ಚರ್ಯಾಕಾರಣಂ ತಾರಣಂ ನೃಣಾಂ ॥೧೩॥

ಸ ತಪೋಽತಪದತ್ಯುಗ್ರಂ ಶಾಂಭವಂ ವ್ರತಮಾಸ್ಥಿತಃ ।
ಹಿಮವಚ್ಛಿಖರೇ ಪೂರ್ವಂ ಸಂವತ್ಸರಶತಾಷ್ಟಕಂ ॥೧೪॥

ಅಗ್ನಿರಿತ್ಯಾದಿಭಿರ್ಮಂತ್ರೈರ್ವಿಮೃಜ್ಯಾಂಗಾನಿ ಭಸ್ಮನಾ ।
ತ್ರಿಪುಂಡ್ರಫಾಲಸ್ಸತತಂ ಕಂಠಕಕ್ಷೋರುಬಾಹುಷು ॥೧೫॥

ಧೃತರುದ್ರಾಕ್ಷಕೋಟೀರೋ ರುದ್ರಾಕ್ಷಕವಚಾವೃತಃ ।
ಪಂಚಾಕ್ಷರಪರೋ ನಿತ್ಯಂ ರುದ್ರಾವರ್ತನತತ್ಪರಃ ॥೧೬॥

ಗ್ರೀಷ್ಮೇ ಪಂಚಾಗ್ನಿನಿರತಃ ಕೇವಲಂ ಸಲಿಲಾಶನಃ ।
ವರ್ಷಾಸ್ವಾಕಾಶನಿಲಯೋ ಹೇಮಂತೇ ಜಲಮಧ್ಯಗಃ ॥೧೭॥

---

ಎಂದು ಹೇಳುತ್ತಾ ಸೂತಮಹರ್ಷಿಯು ಪವಿತ್ರವಾದ ಹೃದಯವುಳ್ಳ ಸಕಲ ಋಷಿಗಳನ್ನೂ ಕುರಿತು, " ಮಹರ್ಷಿಗಳೇ, ಜೈಗೀಷವ್ಯಋಷಿಯು ಮನುಷ್ಯರಿಗೆ ಹಿತವನ್ನುಂಟುಮಾಡುವುದಕ್ಕಾಗಿ ಮಾಡಿದ ತಪಸ್ಸನ್ನು ವಿವರಿಸುವೆನು, ಕೇಳಿರಿ. ॥೧೩॥

ಹಿಂದೆ ಜೈಗೀಷವ್ಯ ಮಹರ್ಷಿಯು ಶಂಭುವಿನಲ್ಲಿ ದೃಢಮನಸ್ಸಿಟ್ಟು, ಹಿಮಾಲಯಪರ್ವತದ ಶಿಖರಭಾಗದಲ್ಲಿ ಎಂಟುನೂರು ವರ್ಷಪರ್ಯಂತ ಉಗ್ರವಾಗಿ ತಪಸ್ಸನ್ನಾಚರಿಸಿದನು. ॥೧೪॥

ಆಗ ಅಗ್ನಿರಿತಿಭಸ್ಮ ಎಂಬ ಮಂತ್ರದಿಂದ ಸರ್ವಾಂಗಗಳಿಗೂ ಭಸ್ಮಲೇಪನ ಮಾಡಿಕೊಳ್ಳುವನು. ಹಣೆಯಲ್ಲಿ ತ್ರಿಪುಂಡ್ರವನ್ನಿಡುವನು. ಹಾಗೆಯೇ ಕತ್ತು, ಎದೆ, ತೋಳು ಇವುಗಳಲ್ಲಿಯೂ ಮೂರುಪಟ್ಟೆ ವಿಭೂತಿಯನ್ನು ಬಳಿದುಕೊಳ್ಳುವನು.॥೧೫॥

ರುದ್ರಾಕ್ಷಿಯ ಕಿರೀಟವನ್ನು ಶಿರಸ್ಸಿನಲ್ಲಿ ಧರಿಸಿದನು. ರುದ್ರಾಕ್ಷಿಯ ಕವಚವನ್ನು ತೊಟ್ಟನು. ಶ್ರೀರುದ್ರಪಾರಾಯಣಮಾಡುತ್ತಾ ಶಿವಪಂಚಾಕ್ಷರಿಯನ್ನೇ ಸರ್ವದಾ ಜಪಿಸುತ್ತಿದ್ದನು. ॥೧೬॥

ಬಿಸಿಲುಕಾಲದಲ್ಲಿ ಐದು ಅಗ್ನಿಗಳ ಮಧ್ಯದಲ್ಲಿಯೂ, ಮಳೆಗಾಲದಲ್ಲಿ ಬಯಲುಪ್ರದೇಶದಲ್ಲೂ, ಚಳಿಗಾಲದಲ್ಲಿ ಜಲಮಧ್ಯದಲ್ಲಿಯೂ ನಿಂತು, ಕೇವಲ ಸಲಿಲಪಾಯಿಯಾಗಿ ತಪಸ್ಸನ್ನಾಚರಿಸಿದನು. ॥೧೭॥

ಫಲಪರ್ಣಾಶನೋ ನಿತ್ಯಂ ವರ್ಷಂ ಪವನಪಾರಣಃ ।
ಕಟುಧೂಮಾಶನೋ ವರ್ಷಂ ವರ್ಷಂ ಲಂಬದಧಶ್ಶಿರಾಃ ॥೧೮॥

ಏವಂ ತಪಸ್ಯತಸ್ತಸ್ಯ ಜೈಗೀಷವ್ಯಮಹಾಮುನೇಃ ।
ವರ್ಷಾಯುತಮಗಾತ್ತೀವ್ರಂ ರುದ್ರವಿನ್ಯಸ್ತಚೇತಸಃ ॥೧೯॥

ವರೇಣಾಚ್ಛಂದಯದ್ಬ್ರಹ್ಮಾ ತಂ ವಿಷ್ಣುಃ ಪಾಕಶಾಸನಃ ।
ತಸ್ಯ ತೇ ಚಿತ್ತಜಿಜ್ಞಾಸಾಂ ಕರ್ತುಂ ದೇವಾ ವ್ಯವಸ್ಥಿತಾಃ ॥೨೦॥

ತಾನನಾಲೋಕಯನ್ವಿಪ್ರೋ ನೈವಕಿಂಚಿದಥೋಽರ್ಥಯತ್ ।
ಗಂಭೀರಸಾಗರಾಕಾರಮಲಕ್ಷ್ಯಂ ಶಿವವಲ್ಲಭಂ ॥೨೧॥

ಜಿತೇಂದ್ರಿಯಂ ಜಿತಾಹಾರಮೂರ್ಧ್ವರೇತಸಮವ್ಯಯಂ ।
ಶಿವಲಿಂಗಾರ್ಚನವ್ಯಗ್ರಂ ಪಂಚಾಕ್ಷರ ಜಪಾಧರಂ ॥೨೨॥

---

ಒಂದು ವರ್ಷಪರ್ಯಂತ ಹಣ್ಣು, ಎಲೆ ಇವುಗಳನ್ನು ತಿಂದು ಜೀವಿಸಿದನು. ಮತ್ತೊಂದು ವರ್ಷ ಅನಿಲಾಹಾರದಿಂದಿದ್ದನು. ಕೊನೆಗೆ ತಳಕೆಳಗಾಗಿ ನಿಂತು, ಕಟುವಾದ ಧೂಮಮಧ್ಯದಲ್ಲಿ ತಪಸ್ಸನ್ನಾಚರಿಸಿದನು. ॥೧೮॥

ಹೀಗೆ ಉಗ್ರತಪಸ್ಸನ್ನಾಚರಿಸುತ್ತಾ ಜೈಗೀಷವ್ಯಮುನಿಯು, ಶಿವನಲ್ಲಿ ದೃಢ ಮನಸ್ಸಿಟ್ಟೇ ಹತ್ತುಸಾವಿರ ವರ್ಷಗಳನ್ನು ಕಳೆದನು. ॥೧೯॥

ಬ್ರಹ್ಮನು ಅನೇಕವರಗಳನ್ನು ಕೊಡಲು ಬಂದನು. ಹಾಗೆಯೇ ವಿಷ್ಣುವೂ, ಇಂದ್ರನೂ ಪ್ರತ್ಯಕ್ಷರಾಗಿ ನಿಂತರು. ಸಕಲ ದೇವತೆಗಳೂ ಆಗ ಆ ಋಷಿಯ ಮನಸ್ಸನ್ನು ತಿಳಿಯಲು ಅಲ್ಲಿಗೆ ಒಂದು ಸೇರಿದರು. ॥೨೦॥

ಹಾಗೆ ಬಂದ ಬ್ರಹ್ಮಾದಿಗಳನ್ನು ಜೈಗೀಷವ್ಯಮುನಿಯು ಕತ್ತೆತ್ತಿಯೂ ನೋಡಲಿಲ್ಲ. ಅವರಿಂದ ಯಾವ ವರವನ್ನೂ ಅಪೇಕ್ಷಿಸಲಿಲ್ಲ. ಹಾಗೆ ಗಂಭೀರ ಸಮುದ್ರನಂತೆ ಕುಳಿತು ಶಿವಧ್ಯಾನಮಾಡುತ್ತಿದ್ದ, ॥೨೧॥

ಜಿತೇಂದ್ರಿಯನಾದ ಜೈಗೀಷವ್ಯನನ್ನು ಸಕಲರೂ ನೋಡುತ್ತಿದ್ದರು. ಅವನು ಆಹಾರವನ್ನು ಜಯಿಸಿ, ಊರ್ಧ್ವರೇತಸ್ಕನಾಗಿ, ಶಿವಲಿಂಗಾರ್ಚನೆಯಲ್ಲಿ ಮನಸ್ಸಿಟ್ಟು ಬಾಯಿಂದ ಪಂಚಾಕ್ಷರೀಮಂತ್ರವನ್ನು ಜಪಿಸುತ್ತಿದ್ದನು. ॥೨೨॥

ರುದ್ರಸೂಕ್ತಾರ್ಥವಿಜ್ಞಾನಪ್ರವಣಂ ಸಂಯತೇಂದ್ರಿಯಂ ।
ಹಂಸಾರೂಢಃ ಪದ್ಮಸಂಸ್ಥಶ್ಶ್ಯಾಜ್ಞ್ರಧೃಗ್ಗರುಡಾಸನಃ ॥೨೩॥

ಐರಾವತಸಮಾರೂಢಃ ಪಾಕಶಾಸ್ತಾಮರೈರ್ವೃತಃ ।
ತಸ್ಯ ಚಿತ್ತಂ ಸುವಿಜ್ಞಾತುಮಾಗತಾಸ್ತೇ ಮುನಿಂ ತದಾ ॥೨೪॥

ಬ್ರಹ್ಮಾ ವಿಷ್ಣುಸ್ತಥಾ ಶಕ್ರಸ್ಸುರಾಸುರಮರುದ್ಗಣಾಃ ।
ಧ್ಯಾಯಂತಂ ಪರಮೇಶಾನಂ ಜೈಗೀಷವ್ಯಂ ತದಾ ದ್ವಿಜಾಃ ।
ಸ್ವಂ ಸ್ವಂ ವಾಹನಮಾರುಹ್ಯ ಸ್ವಸ್ವಾಲಂಕಾರ ಭೂಷಿತಾಃ ॥೨೫॥

ಶೈವೇಂದ್ರಂ ತಂ ಸುರೇಂದ್ರಾಸ್ತೇ ದೃಷ್ಟ್ವಾ ವಿಸ್ಮಯಮಾಗತಾಃ ।
ತಸ್ಯ ಚಿತ್ತಪರೀಕ್ಷಾರ್ಥಂ ಬ್ರಹ್ಮಾ ವಾಕ್ಯಮಥಾಬ್ರವೀತ್ ॥೨೬॥

॥ ಬ್ರಹ್ಮೋವಾಚ ॥

ವತ್ಸೋತ್ತಿಷ್ಠ ಮಹಾಭಾಗ ಜೈಗೀಷವ್ಯ ಮಹಾವ್ರತ ।
ಅದೇಯಂ ತವ ನಾಸ್ತ್ಯೇವ ತ್ರಿಲೋಕ್ಯಾಂ ತ್ವತ್ತಪಸ್ಯಯಾ ॥೨೭॥

---

ರುದ್ರಸೂಕ್ತದ ಅರ್ಥವನ್ನು ಯಾವಾಗಲೂ ಮನನಮಾಡುತ್ತಿದ್ದನು. ಜಿತೇಂದ್ರಿಯನಾಗಿದ್ದನು. ಹೀಗಿರುವವನ ಎದುರಿನಲ್ಲಿ, ಹಂಸಾರೂಢನಾಗಿ ಬ್ರಹ್ಮನೂ ಗರುಡಾರೂಢನಾಗಿ ವಿಷ್ಣುವೂ ನಿಂತಿದ್ದರು. ॥೨೩॥

ಐರಾವತವನ್ನೇರಿ ದೇವೇಂದ್ರನು ಸಕಲದೇವತೆಗಳೊಡನೆ ನಿಂತಿದ್ದನು. ಜೈಗೀಷವ್ಯನ ಮನಸ್ಸನ್ನು ತಿಳಿಯಲು ಸಕಲ ಮುನಿಜನವೂ ನೆರೆದಿದ್ದಿತು. ॥೨೪॥

ಹಾಗೆ ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳೂ, ರಾಕ್ಷಸರೂ ಮರುದ್ಗಣಗಳೂ, ತಮ್ಮ ವಾಹನಗಳನ್ನೇರಿ, ಸಕಲಾಭರಣಭೂಷಿತರಾಗಿ ಬಂದು ಈ ಮುನಿಯನ್ನು ನೋಡಿ ಅತ್ಯಾಶ್ಚರ್ಯಪಡುತ್ತಿದ್ದರು. ಆಗ ಈ ಋಷಿಯ ಚಿತ್ತಪರೀಕ್ಷೆಗಾಗಿ ಬ್ರಹ್ಮನು ಒಂದು ಮಾತನ್ನಾಡಿದನು. ॥೨೫-೨೬॥

"ಎಲೈ ಪುಣ್ಯಶಾಲಿಯಾದ ಜೈಗೀಷವ್ಯಮಹಾಮುನಿಯೇ, ನಿನ್ನ ತಪಸ್ಸಿಗೆ ಪ್ರತಿಫಲವಾಗಿ ಕೊಡುವ ವರವು ಮೂರು ಲೋಕಗಳಲ್ಲಿ ಮತ್ತೆ ಯಾವುದಿದೆ? ॥೨೭॥

ತ್ವತ್ಸಮೋ ನ ಮುನಿರ್ಬ್ರಹ್ಮನ್ನೂರ್ಧ್ವರೇತಾ ಮಹಾತಪಾಃ ।
ರುದ್ರಾವರ್ತನಶೀಲಶ್ಚ ರುದ್ರವಿನ್ಯಸ್ತಮಾನಸಃ ॥೨೮॥

ದ್ಯುಬ್ರಹ್ಮೋಪೇಂದ್ರಲೋಕೇಷು ವಿಹರಸ್ವಾಜರಾಮರಃ ।
ಭುಂಕ್ಷ್ವ ಭೋಗಾನ್ಯಥಾಕಾಮಂ ದೇವಭೋಗ್ಯಾನನುತ್ತಮಾನ್॥೨೯॥

ಶಕ್ರಸ್ಥಾನೇಽಪ್ಸರೋಭಿಸ್ತ್ವಂ ನಂದನೇ ವಿಹರಾಜರಃ ।
ಪಿಬಸ್ವಾಮೃತಮುತ್ಕೃಷ್ಟಂ ದೇವೈಃ ಪೇಯಮನುತ್ತಮಂ ॥೩೦॥

ವಿಷ್ಣುಲೋಕೇ ತಥಾ ಭೋಗಾನ್ ವೈಷ್ಣವಾನ್ ಭುಂಕ್ಷ್ವ ಕೇವಲಂ ।
ನಾನಾವಿಧೈರ್ಮಹಾಯಜ್ಞೈಃ ಪ್ರಾಪ್ಯಂ ಶಕ್ರಸದೋಽಖಿಲೈಃ ॥೩೧॥

ಗವಾಂ ದಾನೈಸ್ತಥಾನ್ನಾದಿ ಪ್ರದಾನೈಃಷಡ್ರಸಾನ್ವಿತೈಃ ।
ದೇಶೇ ಕಾಲೇ ಚ ಪಾತ್ರೇ ಚ ಗೃಹವಸ್ತ್ರಾದಿದಾನತಃ ॥೩೨॥

---

ಮಹಾಮುನಿಯೇ, ನಿನ್ನಂತಹ ತಪಸ್ವಿಯು ಮತ್ತಾರಿರುವರು? ಶ್ರೀರುದ್ರ ಪಾರಾಯಣಮಾಡುವುದರಲ್ಲಿ, ರುದ್ರನನ್ನು ತದೇಕಧ್ಯಾನದಲ್ಲಿ ಪೂಜಿಸುವುದರಲ್ಲಿ, ನಿನಗೆ ಸಮಾನರು ಯಾರಿರುವರು? ॥೨೮॥

ಈಗ ನೀನು ಬ್ರಹ್ಮ, ವಿಷ್ಣು ಮುಂತಾದವರ ಲೋಕಗಳಲ್ಲಿ, ಮುಪ್ಪು, ಸಾವು, ಇವುಗಳನ್ನು ದೂರಮಾಡಿ ಉತ್ತಮವಾದ ದೇವಲೋಕದ ಸುಖಗಳನ್ನು ಅನುಭವಿಸು. ॥೨೯॥

ಇಂದ್ರನಂತೆ ನಂದನವನದಲ್ಲಿ ವಿಹರಿಸುತ್ತಾ, ಅಪ್ಸರಸ್ತ್ರೀಯರೊಡಗೂಡಿ ದೇವತೆಗಳಿಗೆ ಪೇಯವಾಗಿರತಕ್ಕ ಅಮೃತವನ್ನು ಪಾನಮಾಡುತ್ತಾ ಸಂತೋಷ ದಿಂದಿರು. ॥೩೦॥

ಅನೇಕ ಯಜ್ಞಯಾಗಾದಿಗಳನ್ನು ಮಾಡಿ, ದೇವೇಂದ್ರನೇ ಮೊದಲಾದವರು ಸಂಪಾದಿಸಿದ ವಿಷ್ಣುಲೋಕದ ಅನೇಕ ಸುಖಸಂಪತ್ತುಗಳನ್ನು ನೀನೂ ಅನುಭವಿಸು ವವನಾಗು. ॥೩೧॥

ಗೋದಾನ, ಅನ್ನದಾನ, ಷಡ್ರಸಭರಿತವಾದ ಭಕ್ಷ್ಯಭೋಜ್ಯದಾನ, ದೇಶ ಕಾಲಾನುಗುಣವಾಗಿ, ಮನೆ, ವಸ್ತ್ರ ಇವುಗಳನ್ನು ಸತ್ಪಾತ್ರರಿಗೆ ಮಾಡುವ ದಾನ ॥೩೨॥

ಪಾನೀಯಶಾಲಾನಿವಹೈರ್ಘರ್ಮಕಾಲೇ ಮುನೀಶ್ವರ ।
ಮಹಾಷೋಡಶದಾನೈಶ್ಚ ಶುದ್ಧದ್ರವ್ಯಾರ್ಜಿತೇನ ಚ ॥೩೩॥

ಮಂಟಪಾಟ್ಟಾಲಕರಣೈರ್ವಿಪ್ರಾಣಾಂ ಸ್ಥಾಪನಾರ್ಚನೈಃ ।
ಉದ್ಯಾನಾರಾಮಕರಣೈಶ್ಛಾಯಾವೃಕ್ಷಾದಿರೋಪಣೈಃ ॥೩೪॥

ಕನ್ಯಾದಾನೈಶ್ಚ ವಿವಿಧೈರ್ವ್ರತಕೃಚ್ಛ್ರಾದಿಭಿರ್ದ್ವಿಜ ।
ಪ್ರಾಪ್ಯಾ ಲೋಕಾ ಮದೀಯಾ ಹಿ ಧನ್ಯೈರ್ಮನುಷ್ಯವರ್ತ್ಮಭಿಃ॥೩೫॥

ತೇಷೂತ್ಸವೇನ ಭೋಗಾಂಸ್ತ್ವಂ ಭುಂಕ್ಷ್ವ ವಿಪ್ರ ಯಥಾಸುಖಂ ।
ಅಯಂ ಶಕ್ರೋಽಮರಾಧೀಶೋ ವರಂ ದಾತುಂ ತವಾಗತಃ ॥೩೬॥

ಕರೀಂದ್ರೋ ಯಸ್ಯ ವಹನೇ ಚತುರ್ದಂತಸ್ಸುಪಾಂಡುರಃ ।
ಯಸ್ಸರ್ವಯಜ್ಞೇ ವಿಪ್ರೇಂದ್ರೈರಾಹೂತಸ್ಸೋಽಮಪಾಯಿಭಿಃ ॥೩೭॥

---

ಬಿಸಿಲುಕಾಲದಲ್ಲಿ ಅರವಟ್ಟಿಗೆಯನ್ನಿಡಿಸುವುದು, ಸನ್ಮಾರ್ಗದಿಂದ ಸಂಪಾದಿಸಿದ ಹಣದಿಂದ ಷೋಡಶದಾನಗಳನ್ನು ಮಾಡುವುದು, ವಿಪ್ರರಿಗೆ ಮಂಟಪ ಸಭಾಗೃಹ ಇವುಗಳನ್ನು ಕಟ್ಟಿಸುವುದು, ದೇವಾಲಯಸ್ಥಾಪನೆ, ಅರ್ಚನೆ, ಉದ್ಯಾನ ನಿರ್ಮಾಣ, ಸಾಲಮರಗಳನ್ನು ಹಾಕಿಸುವುದು, ॥೩೩-೩೪॥

ಕನ್ಯಾದಾನ, ಇವೇ ಮೊದಲಾದ ಅನೇಕ ದಾನಗಳ ಆಚರಣೆಯಿಂದಲೂ, ಇನ್ನೂ ಮಹಾವ್ರತಾಚರಣೆಗಳಿಂದಲೂ, ಜನರು ನಮ್ಮ ಲೋಕಗಳನ್ನು ಸೇರಿ ಅಲ್ಲಿ ಧನ್ಯರೆನಿಸುವರು. ॥೩೫॥

ಎಲೈ ವಿಪ್ರನೇ, ಅಂತಹ ದಿವ್ಯಭೋಗಗಳನ್ನು ನಾವು ನಿನಗೆ ಸುಲಭವಾಗಿ ದೊರಕಿಸುವೆವು. ನೀನು ಅದನ್ನು ಅನುಭವಿಸು. ಇಗೋ, ಇಲ್ಲಿ ನೋಡು, ದೇವೇಂದ್ರನು ನಿನಗೆ ವರಕೊಡಲು ಸಿದ್ಧನಾಗಿ ನಿಂತಿರುವನು. ॥೩೬॥

ಸೋಮಪಾನಮಾಡುವಂತಹ ಸಮಸ್ತ ವಿಪ್ರಶ್ರೇಷ್ಠರೂ, ಸಕಲ ಯಜ್ಞಗಳಲ್ಲಿಯೂ ಈ ದೇವೇಂದ್ರನನ್ನೇ ಸ್ತುತಿಸಿ ಹವಿರ್ಭಾಗಗಳನ್ನು ಕೊಡುವರು. ಅಂತಹ ಇಂದ್ರನು ಈಗ ಚತುರ್ದಂತವುಳ್ಳ ಬಿಳಿಯ ಐರಾವತವನ್ನೇರಿ ಬಂದಿರುವನು.॥೩೭॥

**ಸರ್ವಾಸುರವಿಸಂಹರ್ತಾ ಕುಲಿಶಂ ಯಸ್ಯ ಚಾಯುಧಂ ।**
**ಅಹಂ ಸರ್ವಜಗತ್ಸ್ರಷ್ಟಾ ಭಾರತೀಪತಿರುತ್ತಮಃ ॥೩೮॥**

**ಮತ್ಸುತಾಸ್ಸೃಷ್ಟಿಕರ್ತಾರೋ ನ ಕಶ್ಚಿನ್ಮತ್ಸಮೋ ದ್ವಿಜ ।**
**ಪುಲಸ್ತ್ಯಃ ಪುಲಹೋಽತ್ರಿಶ್ಚ ಕಶ್ಯಪೋ ಮನುರೇವಚ ॥೩೯॥**

**ಅಂಗಿರಾ ನಾರದೋ ದಕ್ಷೋ ವೀತಿಹೋತ್ರೋ ಮಹಾಮುನಿಃ ।**
**ನವ ಪ್ರಜಾನಾಂ ಪತಯೋ ಯೇಭ್ಯಃ ಸೃಷ್ಟಿರ್ವಿನಿರ್ಗತಾ ॥೪೦॥**

**ಚತುರ್ವಕ್ತ್ರಸ್ತ್ವಹಂ ಸಾಕ್ಷಾದ್ವರಾನ್ ದಾತುಂ ತವಾಗತಃ ।**
**ತತಃ ಪ್ರಾಹಾಂಬುಜಾಭಾಕ್ಷಸ್ತಂ ಮುನಿಂ ಚಾತಿಗರ್ವಿತಃ ॥೪೧॥**

॥ ವಿಷ್ಣುರುವಾಚ ॥

**ಅಹಮೇವಾಖಿಲಾಧಾರಶ್ಶಂಖಚಕ್ರಗದಾಧರಃ ।**
**ಮಮ ಶಾರ್ಙ್ಗರವಂ ಶ್ರುತ್ವಾ ದೈತ್ಯೇಂದ್ರಾ ಮೂರ್ಛಿತಾ ಭೃಶಂ ॥೪೨॥**

---

ಈ ಇಂದ್ರನು ಸಕಲ ರಾಕ್ಷಸರನ್ನೂ ನಾಶಮಾಡಿರುವನು. ವಜ್ರಾಯುಧವೇ ಈತನ ಮುಖ್ಯ ಆಯುಧ. ಇಗೋ ನೋಡು, ನಾನೇ ಸರಸ್ವತೀ ಪತಿಯಾದ, ಮತ್ತು ಸೃಷ್ಟಿಕರ್ತನಾದ ಚತುರ್ಮುಖನು. ||೩೮||

ನನಗೆ ಪುಲಸ್ತ್ಯ, ಪುಲಹ, ಅತ್ರಿ, ಕಶ್ಯಪ, ಮನು, ಅಂಗಿರಸ್ಸು, ನಾರದ, ದಕ್ಷ ಎಂಬ ಒಂಬತ್ತು ಜನ ಮಕ್ಕಳಿರುವರು. ಇವರೂ ಸಹ ಪ್ರಜಾಸೃಷ್ಟಿಕಾರ್ಯದಲ್ಲಿಯೇ ನಿರತರಾಗಿರುವರು. ಆದರೆ ಇವರಾರೂ ನನಗೆ ಸರಿಸಮರಾಗಿಲ್ಲ. ||೩೯-೪೦||

ನನಗೆ ನಾಲ್ಕು ಮುಖಗಳಿವೆ. ಇಂತಹ ನಾನೇ ಈಗ ನಿನಗೆ ವರಕೊಡಲು ಬಂದಿರುವೆನು, ಎಂದು ಬ್ರಹ್ಮನು ಹೇಳಿದ ಮೇಲೆ ಕಮಲಾಕ್ಷನಾದ ವಿಷ್ಣುವು ಅಭಿಮಾನಿಯಾಗಿ ತಾನೂ ಕೆಲವು ಮಾತುಗಳನ್ನಾಡಿದನು. ||೪೧||

"ಓ ಮಹರ್ಷಿಯೇ, ನಾನೇ ಶಂಖಚಕ್ರಗದಾಧಾರಿಯಾದ ವಿಷ್ಣುವು. ಸಕಲ ಲೋಕಕ್ಕೂ ಆಧಾರನಾಗಿರುವವನು ನಾನೇ. ನನ್ನ ಶಾರ್ಙ್ಗವೆಂಬ ಧನುಸ್ಸಿನ ಟಂಕಾರವನ್ನು ಕೇಳಿ ಸಕಲ ದೈತ್ಯರೂ ಮೂರ್ಛೆಗೊಂಡಿರುವರು. ||೪೨||

ಸಿಂಹಕೋಲಾಕೃತಿರಹಂ ಭೂತ್ವಾ ದೇವಾನತೋಷಯಂ ।
ಹಿರಣ್ಯಾಕ್ಷಂ ಚ ಕಶಿಪುಂ ಮುರಂ ಚ ಮಧುಕೈಟಭೌ ॥೪೩॥

ರಣೇ ಮಯಾ ಹತಾ ದೈತ್ಯಾ ರಾವಣಾದ್ಯಾ ಮಹಾಬಲಾಃ ।
ಲಕ್ಷ್ಮೀಪತಿರಹಂ ಸಾಕ್ಷಾತ್ ಕ್ಷೀರಾಬ್ಧಿರ್ನಿಲಯೋ ಮಮ ॥೪೪॥

ಶೇಷೋಽನಂತಫಣಾಮೌಳಿರ್ಮಮತಲ್ಪಂ ಮಹಾಮುನೇ ।
ಪ್ರಭಾಭಾಸಿತದಿಕ್ಕುಂಜಂ ಕೌಸ್ತುಭಂ ಮಮ ವಕ್ಷಗಂ ॥೪೫॥

ಚಕ್ರಂ ಶತದಶಾರಂ ಮೇ ದೈತ್ಯಾಸೃಙ್ಮಸೃಣಂ ಕರೇ ।
ಯತ್ಪಕ್ಷಾಘಾತಪವನೈರುಲ್ಲೋಲಾಸ್ಸಪ್ತಸಾಗರಾಃ ॥೪೬॥

ಕಾದ್ರವೇಯಫಣಾರತ್ನರಾಜಿಧಾರೋ ಹಿ ವಾಹನಂ ।
ಮನ್ನಾಭಿಕಂದಸಂಭೂತಸ್ಸಾಕ್ಷಾಲ್ಲೋಕಪಿತಾಮಹಃ ॥೪೭॥

---

ನರಸಿಂಹನಾಗಿ, ಆದಿವರಾಹನಾಗಿ ಅವತರಿಸಿ, ಹಿರಣ್ಯಾಕ್ಷ, ಹಿರಣ್ಯಕಶಿಪು, ಮುರ, ಮಧು, ಕೈಟಭ ಇವರೇ ಮೊದಲಾದ ರಾಕ್ಷಸರನ್ನು ಕೊಂದು ದೇವತೆಗಳಿಗೆ ಆನಂದವನ್ನುಂಟುಮಾಡಿರುವೆನು. ॥೪೩॥

ರಾವಣನೇ ಮೊದಲಾದ ದುಷ್ಟ ರಾಕ್ಷಸರನ್ನೆಲ್ಲಾ ಕೊಂದವನು ನಾನೇ. ನಾನು ಲಕ್ಷ್ಮೀಪತಿಯಾಗಿ ಕ್ಷೀರಸಾಗರದಲ್ಲಿ ವಾಸಮಾಡುತ್ತಿರುವೆನು. ॥೪೪॥

ಅನಂತವಾದ ಹೆಡೆಗಳಿಂದ ಕೂಡಿರುವ ಆದಿಶೇಷನೇ ನನಗೆ ಹಾಸಿಗೆಯಾಗಿರುವನು. ಕಾಂತಿಮಯವಾಗಿ ದಿಕ್ಕುಗಳನ್ನು ಬೆಳಗಿಸುವ ಕೌಸ್ತುಭರತ್ನವು ಸರ್ವದಾ ನನ್ನ ಎದೆಯಲ್ಲಿ ಶೋಭಿಸುತ್ತಿರುವುದು. ॥೪೫॥

ಸಹಸ್ರ ದಳಗಳುಳ್ಳ ಮತ್ತು ಸಕಲ ರಾಕ್ಷಸರ ರಕ್ತಮಾಂಸಗಳಿಂದ ಕೂಡಿರುವ ಬಲಿಷ್ಠವಾದ ಚಕ್ರವು ನನ್ನ ಕೈಯ್ಯಲ್ಲಿರುವುದು. ತನ್ನ ರೆಕ್ಕೆಗಳ ಬಡಿತದಿಂದುಂಟಾದ ಬಿರುಗಾಳಿಯಿಂದ ಸಪ್ತಸಮುದ್ರಗಳನ್ನೇ ಅಲ್ಲೋಲಕಲ್ಲೋಲವನ್ನಾಗಿ ಮಾಡುವ ಗರುಡನೇ ನನಗೆ ವಾಹನನು. ॥೪೬॥

ಕದ್ರೂದೇವಿಯ ಮಕ್ಕಳಾದ ನಾಗಗಳ ಹೆಡೆಗಳಲ್ಲಿ, ರಂಜಿಸುವ ರತ್ನದ ಕಾಂತಿಯು ಗರುಡನಲ್ಲಿ ವಿಶೇಷ ಶೋಭೆಯನ್ನುಂಟುಮಾಡುತ್ತಿದೆ. ಹಾಗೆಯೇ ನನ್ನ ನಾಭೀಕುಹರದಿಂದಲೇ ಸೃಷ್ಟಿಕರ್ತನಾದ ಬ್ರಹ್ಮನು ಜನಿಸಿರುವನು. ॥೪೭॥

ಮದೀಯಯಶಸಾ ವ್ಯಾಪ್ತಂ ಜಗದೇತಚ್ಚರಾಚರಂ ।
ಮತ್ಪ್ರಸಾದೇನ ಸರ್ವೇಷಾಂ ಸಿದ್ಧ್ಯಂತ್ಯಖಿಲಸಿದ್ಧಯಃ ॥೪೮॥

ತಾದೃಶಂ ಸ್ವದೃಶಾ ಪಶ್ಯ ತ್ವತ್ಪುರಸ್ಥಿತಮಾಶು ಮಾಂ ।
ತ್ವತ್ಕಾಮಂ ಪೂರಯಾಮ್ಯಾಶು ತಚ್ಛೀಘ್ರಂ ವರಯಸ್ವ ಮೇ ॥೪೯॥

ತ್ವದೀಯತಪಸಾ ವಿದ್ವನ್ ಪ್ರಸಾದಸುಮುಖೋಽಸ್ಮ್ಯಹಂ ।
ತದಾ ಸ ವಿಷ್ಣುವಚಸಾ ಜೈಗೀಷವ್ಯೋ ಮಹಾಮುನಿಃ ॥೫೦॥

ದೃಷ್ಟ್ವಾ ಪ್ರಾಹಾಮರಶ್ರೇಷ್ಠಾನ್ ನಿಷ್ಕಾಮಾಂತರಸುಂದರಃ ।
ಕಾಮಾರಿಧ್ಯಾನನಿರ್ಧೂತನಿಷ್ಕಾಮಹೃದಯೋ ಮುನಿಃ ॥೫೧॥

॥ ಜೈಗೀಷವ್ಯ ಉವಾಚ ॥

ಯತ್ಪ್ರೋಕ್ತಂ ತತ್ತಥಾ ವಿಷ್ಣೋ ತ್ವಯಾ ಪದ್ಮಾಸನೇನ ಚ ।
ಶಕ್ರಸ್ಯಾಸ್ಯ ಶ್ರುತಂ ಸರ್ವಮೈಶ್ವರ್ಯಂ ಲೋಕವಿಸ್ಮಯಂ ॥೫೨॥

---

ಈ ಚರಾಚರಾತ್ಮಕವಾದ ಲೋಕದಲ್ಲೆಲ್ಲಾ ನಾನೇ ಕೀರ್ತಿಶಾಲಿಯಾಗಿರುವೆನು. ನನ್ನ ಅನುಗ್ರಹವಿಲ್ಲದೆ ಯಾವ ಕಾರ್ಯಗಳೂ ನಡೆಯುವಂತಿಲ್ಲ. ॥೪೮॥

ಅಂತಹ ನಾನು ಈಗ ನಿನ್ನ ಮುಂದೆ ನಿಂತಿರುವೆನು. ನಿನ್ನ ಇಷ್ಟಾರ್ಥವನ್ನು ನನ್ನಲ್ಲಿ ಹೇಳಿಕೋ, ವರಕೊಡುವೆನು. ॥೪೯॥

ನಿನ್ನ ತಪಸ್ಸಿಗೆ ನಾನು ಮೆಚ್ಚಿರುವೆನು. ಈಗಲೇ ಬೇಕಾದ ವರವನ್ನು ಕೇಳಿಕೋ" ಎಂದು ಹೇಳಿದ ವಿಷ್ಣುವಿನ ವಾಕ್ಯವನ್ನು ಕೇಳಿ ಜೈಗೀಷವ್ಯಮಹಾಮುನಿಯು, ॥೫೦॥

ಆಗ ಅಲ್ಲಿ ನೆರೆದಿದ್ದ ಬ್ರಹ್ಮಾದಿ ದೇವತೆಗಳನ್ನೆಲ್ಲಾ ನೋಡಿದನು. ಆದರೆ ಅವನಿಗೆ ಯಾವ ವಿಧವಾದ ವರಗಳ ಆಸೆಯೂ ಇರಲಿಲ್ಲ. ಏಕೆಂದರೆ ಕಾಮಾರಿಯಾದ ಪರಮೇಶ್ವರನ ಧ್ಯಾನಪ್ರಭಾವದಿಂದ ಅವನ ಮನಸ್ಸಿನಲ್ಲಿ ಕಾಮವೆಂಬ ಗುಣವು ಮಾಯವಾಗಿಹೋಗಿತ್ತು. ಯಾವ ಆಸೆಯೂ ಅವನನ್ನು ಪೀಡಿಸುತ್ತಿರಲಿಲ್ಲ. ॥೫೧॥

ಅದರಿಂದ ಜೈಗೀಷವ್ಯಋಷಿಯು ದೇವತೆಗಳನ್ನು ಕುರಿತು " ವಿಷ್ಣುವೇ, ನೀನೂ ಬ್ರಹ್ಮನೂ, ಇಂದ್ರನೂ, ಇಲ್ಲಿನವರೆಗೆ ಹೇಳಿದ ಎಲ್ಲಾ ಆಶ್ಚರ್ಯಯುಕ್ತವಾದ ಮಾತುಗಳನ್ನೂ ಕೇಳಿದೆನು. ॥೫೨॥

ನ ವಿಸ್ಮಾಪಯಿತುಂ ಶಕ್ಯಂ ನಿಷ್ಕಾಮಸ್ಯ ಮನಾಂತರಂ ।
ಯಥೋನ್ಮೂಲಯಿತುಂ ಶಕ್ಯಃ ಕಿಂ ಮೇರುರ್ವಾಯುನಾಮುನಾ ॥೫೩॥

ವಿಷ್ಣೋ ತ್ವದ್ವಚಸಾ ಚೇತೋ ನ ವಿಚಾಲಯತೇ ಮಮ ।
ಕೈವರ್ತಕನ್ಯಾಕಾನೀನದ್ವಿಜದೈತ್ಯನೃಪಾರ್ಭಕಾಃ ॥೫೪॥

ತವಾವತಾರಮಾಹಾತ್ಮ್ಯವೇತ್ತಾರೋ ನ ವಯಂ ಹರೇ ।
ಹರಪಾದಾಂಬುಜಧ್ಯಾನನಿರ್ಧೂತತಮಸೋ ವಯಂ ॥೫೫॥

ಶೈವೇಂದ್ರೇಷು ನ ತೇ ಧಾರ್ಷ್ಟ್ಯಂ ವಿದ್ಯತೇ ಹಿ ಗದಾಧರ ।
ಪ್ರಾಪ್ತಕಾಮಂ ವಯಂ ವಿಷ್ಣೋ ನಿತ್ಯಾನಿತ್ಯವಿವೇಕಿನಃ ॥೫೬॥

ಯಃ ಕಾಮಾನನುಸಂದಧಾತಿ ಮನಸಾ ಪ್ರಾಪ್ನೋತಿ ಲೋಕಾನಮೂನ್ ।
ಬ್ರಹ್ಮೋಪೇಂದ್ರಶತಕ್ರತುಪ್ರಭೃತಿನಾಂ ವಾಸಸ್ತತೋ ಭ್ರಶ್ಯತಿ ।
ಪ್ರಾಗ್ಜನ್ಮಾನುಭವೇನ ಯೋನಿಷು ಚಿರಂ ಭ್ರಾಂತಸ್ತತೋ ವಿದ್ಯಯಾ ।
ವಿಶ್ವೇಶಸ್ಯ ಕೃಪಾವಶಾಚ್ಚ್ಯುತತನುಪ್ರಾಂತೇ ವಿಮುಕ್ತೋ ಭವೇತ್ ॥೫೭॥

---

ಆದರೆ ನಿಷ್ಕಾಮನಾಗಿ ಕುಳಿತಿರುವ ನನ್ನ ಮನಸ್ಸು ನಿಮ್ಮ ಮಾತಿಗೆ ಮರುಳಾಗದು. ಸಾಮಾನ್ಯವಾಯುವು ಮೇರುಪರ್ವತವನ್ನು ಎಂದಾದರೂ ಅಲ್ಲಾಡಿಸುವುದೇ? ॥೫೩॥

ವಿಷ್ಣುವೇ, ನಿನ್ನ ಮಾತಿಗೆ ನನ್ನ ಮನಸ್ಸು ಎಂದಿಗೂ ಚಲಿಸದು. ಸತ್ಯವತೀಪುತ್ರನಾದ ವ್ಯಾಸನೂ, ರಾಕ್ಷಸರಾಜನಾದ ರಾವಣನೂ, ಹಿರಣ್ಯಕಶಿಪುಪುತ್ರನಾದ ಪ್ರಹ್ಲಾದನೂ, ॥೫೪॥

ನಿನ್ನ ಅವತಾರಗಳ ಮಹಿಮೆಯನ್ನು ತಿಳಿದವರಾಗಿದ್ದಾರೆ. ನಾವಾದರೋ ಕೇವಲ ಹರಭಕ್ತರು. ಶಂಕರನ ಪಾದಧ್ಯಾನದಿಂದ ಜ್ಞಾನಿಗಳಾಗಿದ್ದೇವೆ. ॥೫೫॥

ಶಿವಭಕ್ತಾಗ್ರೇಸರರಾದ ನಮ್ಮಲ್ಲಿ ನಿನ್ನ ಸಾಮರ್ಥ್ಯವು ನಡೆಯಲಾರದು. ಗದಾಧರನೇ, ಏಕೆಂದರೆ ನಿತ್ಯಾನಿತ್ಯವಸ್ತುಜ್ಞಾನವನ್ನು ಸಂಪಾದಿಸಿ ಸಕಲ ಇಷ್ಟಾರ್ಥಗಳನ್ನೂ ಪಡೆದಿದ್ದೇವೆ. ॥೫೬॥

ಯಾರು ಕಾಮ್ಯಕರ್ಮಗಳಿಂದ ವಿಷ್ಣ್ವಾದಿಗಳನ್ನು ತೃಪ್ತಿಪಡಿಸಿ ವರಗಳನ್ನು ಪಡೆಯುವರೋ, ಅವರು ಬ್ರಹ್ಮೋಪೇಂದ್ರಾದಿ ದೇವತೆಗಳ ಲೋಕಗಳನ್ನು ಸೇರಿ

ಕಿಂ ವಾ ಬ್ರಹ್ಮೇಂದ್ರವಿಷ್ಣುಪ್ರಭೃತಿಸುರಪದೈಃ ಪುಣ್ಯಲೇಶೈಕಲಭ್ಯೈಃ ।
ಕಿಂ ರಂಭಾದಿಕಯೋನಿಭೋಗನಿಚಯೈಸ್ಸ್ರಕ್ಚಂದನಾದ್ಯುತ್ಸವೈಃ ।
ಪಾತಾಂತಾವಧಿಸುಂದರೈಃ ಕಿಮಧಮೈಃ ಕಿಂ ಕಾಮನಾವಿಪ್ಲುತೈಃ ।
ಯುಷ್ಮದ್ಬೋಧನಯಾ ನ ಚಾಲ್ಯತಿ ಮನೋ ನಿಷ್ಕಾಮಜಾಃ
ಶ್ರೋತ್ರಿಯಾಃ ॥೫೮॥

ಸಂಸಾರಾಪಾರಸಾರಪ್ರಚುರಿತಮನಸೋ ನಿತ್ಯನಿತ್ಯಾಶ್ಚ ಭೋಗಾಃ ।
ಕಾಮ್ಯಂತೇ ಕಾಮಿಭಿರ್ಯೇ ಸತತಬಹುರಸಾಃ ಕಾತರಾಃ ಪಾಮರಾಸ್ತೇ ।
ಶ್ರೀಮನ್ ಧೀಮನ್ ಪರಾರ್ಥಿನ್ ಸಕಲ ಸುರಗಣಾಃ ಶ್ರೀಶಶಾಂಕಾಂಶ
ಮೌಲೇಃ ।
ಶ್ರೀಮತ್ಪಾದಾಬ್ಜಯುಗ್ಮಪ್ರಣಿಹಿತಮನಸೋ ನಿರ್ಭಯಾಶ್ಚಾಮರಾಸ್ತೇ ॥

---

ಸುಖಪಡುವರು. ಆದರೇನು ? ಕೆಲವು ಕಾಲಾನಂತರ ಅಲ್ಲಿಂದ ಜಾರಿ ಬೀಳುವರು. ಪುನಃ ಪೂರ್ವಜನ್ಮಸಂಸ್ಕಾರದಿಂದ ಜೀವಿಗಳಾಗುವರು. ನಾನಾಯೋನಿಗಳಲ್ಲಿ ಜನ್ಮ ತಾಳುವರು. ಅಂತಹವರು ಸ್ಥಿರಮತಿಯಿಂದ ಜ್ಞಾನಾರ್ಜನೆಮಾಡಿ ಪರಮೇಶ್ವರನ ಪಾದಧ್ಯಾನಮಗ್ನರಾದರೆ ಪುನರ್ಜನ್ಮವಿಲ್ಲದ ಮುಕ್ತಿಯನ್ನು ಹೊಂದುವುದರಲ್ಲಿ ಸಂದೇಹವಿಲ್ಲ. ॥೫೭॥

ಅಲ್ಪಪುಣ್ಯಶೇಷದಿಂದಲೇ ಬ್ರಹ್ಮ, ಇಂದ್ರ, ವಿಷ್ಣು ಇಂತಹವರ ಸ್ಥಾನಗಳನ್ನು ಹೊಂದಬಹುದು. ಅಲ್ಲಿ ರಂಭೆಯೇ ಮೊದಲಾದ ಸ್ತ್ರೀಯರ ಸಂಭೋಗಸುಖವನ್ನೂ ಹೂವು, ಗಂಧ ಮೊದಲಾದ ಭೋಗ್ಯವಸ್ತುಸೇವನೆಯನ್ನೂ ಅನುಭವಿಸಬಹುದು. ಆದರೇನು ? ಅವೆಲ್ಲಾ ಕ್ಷಣಿಕಸುಖಗಳು. ಕೀಳಾದ ಸಂಸ್ಕಾರವನ್ನು ತಂದೊಡ್ಡಿ ಮನುಷ್ಯರನ್ನು ಹಾಳುಮಾಡತಕ್ಕವುಗಳು. ಎಲೈ ದೇವತೆಗಳೇ, ಸಾಕು, ನಿಮ್ಮ ಬೋಧನೆಗೆ ನನ್ನ ಮನಸ್ಸು ಸಿಕ್ಕಲಾರದು. ನಿಷ್ಕಾಮರಾದ ಶ್ರೋತ್ರಿಯರು ಎಂದಿಗೂ ಇಂತಹ ಆಸೆಗೆ ಸಿಕ್ಕತಕ್ಕವರಲ್ಲ. ॥೫೮॥.

ಯಾರು, ಕಾಮ್ಯಬುದ್ಧಿಯಿಂದ, ಸಂಸಾರದಲ್ಲಿಯೇ ನಟ್ಟಮನಸ್ಸುಳ್ಳವರಾಗಿ, ಅಲ್ಲಿ ಭಾಸಮಾನವಾಗುವ ಸುಖಗಳೆಲ್ಲಾ ಸ್ಥಿರವಾದವುಗಳೆಂದು ನಂಬಿ ಆನಂದಿಸುವರೋ, ಅವರು ನಿಜವಾಗಿಯೂ ಪಾಮರರು. ಭ್ರಾಂತಿಗೊಳಪಟ್ಟಿರುವರು. ಎಲೈ ಶ್ರೀಮಂತರೂ ಪ್ರಜ್ಞಾವಂತರೂ ಆದ ದೇವತೆಗಳೇ, ಯಾರು ಚಂದ್ರಶೇಖರನಾದ ಪರಶಿವನ ಪಾದದ್ವಂದ್ವದಲ್ಲಿ ಮನಸ್ಸಿಟ್ಟು ಸರ್ವದಾ ಶಂಕರನನ್ನೂ ಪೂಜಿಸುವರೋ,

ನರಕಸುಖಸುಖಾನಾಂ ವ್ಯರ್ಥಕೋಲಾಹಲಾನಾ ।
ಮಸುಖಮುಖಮತೀನಾಂ ಯದ್ಯಪಿ ಘ್ನಂತಿ ತತ್ತ್ವಂ ।
ಹರಪದನಿರತಾನಾಂ ವಿಶ್ವಭೂತಾತ್ಮನಾಸ್ನಃ ।
ಕರಣವಿಷಯಭೋಗಾ ನೈವ ಲೂಯಂತಿ ವಿಷ್ಣೋ ॥೬೦॥

ಬ್ರಹ್ಮಾ ಶಕ್ರೋ ಭವಾಂಶ್ಚ ಪ್ರಕೃತಿಪರವಶಾಃ ಪಶ್ಯ ಸರ್ವೇಶ್ವರಸ್ಯ ।
ಶ್ರೀಶ ಶ್ರೀಶಂಕರಸ್ಯಾಗತಿಸಗತಿಗತಿರ್ವ್ಯೋಮಕೇಶಸ್ಯ ಶಂಭೋಃ ।
ತಸ್ಯಾಯಂ ದಾಸದಾಸಸ್ತ್ರಿಪುರಪುರಹರಶ್ರೀಶಿವಸ್ಯಾಸ್ಯಕರ್ತುಃ ।
ಪಾತುರ್ಹರ್ತುಃ ಪ್ರಕರ್ತುಃ ಶೃಣುತ ಸುಮನಸೋ ನಿತ್ಯಮನ್ಯನ್ನ ಜಾನೇ॥

ಪಶುಪತಿವರದಾನಾತ್ತತ್ತ್ವಸಂಪ್ರಾಪ್ತಭೂತೇಃ ।
ಪಶುವರವರದಾನಾತ್ಕಿಂ ಮಮ ಪ್ರಾಪ್ತಿಹೇತುಃ ।

---

ಅವರೇ ನಿರ್ಭಯರಾದವರು. ಮತ್ತೂ ದೇವತೆಗಳಿಗೆ ಸರಿಸಮರಾದವರು. ಜನ್ಮಾಂತರ ಗಳನ್ನು ಕಳೆದುಕೊಳ್ಳುವವರು. ||೫೯||

ಇಂದ್ರಿಯಸುಖಗಳು ಯಾವಾಗಲೂ ನರಕಭಾಗಿಗಳಾಗುವ ಮತ್ತು ಆಡಂಬರ ದಲ್ಲಿ ಓಡಾಡುವ ದುಃಖವನ್ನು ಹೊಂದುವುದರಲ್ಲಿ ಆಸಕ್ತಿಯುಳ್ಳಂತಹ ಜನರಿಗೆ ಮಾತ್ರ ಅಜ್ಞಾನವನ್ನು ತಂದೊಡ್ಡುತ್ತವೆ. ಆದರೆ ಶಿವಪದಪೂಜಕರಾದ, ಮತ್ತು ಪ್ರಪಂಚವನ್ನೇ ಮಾಯೆಯೆಂದು ತಿಳಿದಿರುವ ನಮ್ಮನ್ನು ಎಂದಿಗೂ ಮೋಸ ಗೊಳಿಸಲಾರದು. ||೬೦||

ಎಲೈ ದೇವತೆಗಳೇ, ನೀವೆಲ್ಲರೂ ಅಂದರೆ ಬ್ರಹ್ಮಾದಿಗಳೂ ಸಹ ಪ್ರಕೃತಿಗೆ ಅಧೀನರಾದವರೇ. ಪ್ರಕೃತಿಗೆ ಸಂಬಂಧವಿಲ್ಲದ ಪುರುಷನೆಂದರೆ ಪರಶಿವನೊಬ್ಬನೇ. ಪರಮೇಶ್ವರನು, ಅಗತಿಕರಿಗೆ ಗತಿಯಾದವನು, ವ್ಯೋಮಕೇಶನು. ತ್ರಿಪುರಗಳನ್ನು ನಾಶಪಡಿಸಿದವನು. ಸಕಲಲೋಕಕರ್ತೃವು. ಹಾಗೆಯೇ ಭರ್ತೃವು, ಪ್ರಹರ್ತೃವೂ ಅವನೇ. ಇಂತಹ ಮಹಾಮಹಿಮನಾದ ಶಂಕರನ ಭಕ್ತರಿಗೆ ಭಕ್ತನಾಗಿ ನಾನು ಇಲ್ಲಿರುವೆನು. ನನಗೆ ಶಂಕರನ ವಿನಾ ಮತ್ತಾರೂ ದೇವರಿಲ್ಲ. ||೬೧||

ಈಶ್ವರಾನುಗ್ರಹದಿಂದ ನಾನು ಈಗ ತತ್ತ್ವಜ್ಞಾನಿಯಾಗಿದ್ದೇನೆ. ಇಂತಹ ನನಗೆ ಈಶ್ವರನ ವರವೊಂದನ್ನು ಬಿಟ್ಟು ಮತ್ತಾವುದು ಬೇಕು ? ನನ್ನ ಮನಸ್ಸು

ಪಶುಪತಿಚರಣಾಬ್ಜಧ್ಯಾನಸನ್ಮಾನಸಂ ಮೇ ।
ನ ಹಿ ಖಲು ಭವತೃಷ್ಣಾಪಾರದೂರಂ ಹರೇದ್ಯಃ ॥೬೨॥

ತ್ರ್ಯಕ್ಷಾಂಘ್ರಿಪ್ರವಣಪ್ರಸನ್ನಮನಸೋ ಲಕ್ಷಸ್ಯ ಕಿಂ ಮೇ ಸುರೈಃ ।
ಲಕ್ಷೀಭೂತಭವತ್ಪದೇಷು ನಿತರಾಂ ವಾಂಛಾ ನ ಮೇ ಜಾಯತೇ ।
ಕಿಂ ತಚ್ಚಾಕ್ಷತಸೀಕ್ಷಣಸ್ಥಿರಚಿರಂ ವಿಶ್ವಂ ತು ವಿಶ್ವೇಶ್ವರಾ ।
ಜ್ಞಾತಂ ತತ್ರ ಮುಹುರ್ಮುಹುಃ ಪ್ರವಿಲಯಂ ಯಾತ್ಯೇವ ಯಾತಂ ಭವೇತ್ ॥೬೩॥

ರಜ್ಜ್ವಾ ಕಲ್ಪಿತದಂದಶೂಕಸದೃಶಂ ದೇವಾ ನ ಕಿಂಚಿಜ್ಜಗತ್ ।
ಜಾತಂ ಚಾಪಿ ಜನಿಷ್ಯಮಾಣಮಪಿ ವಾ ಭೂತಂ ಹಿ ರಜ್ಜ್ವಾ ಭ್ರಮಃ ।
ತದ್ವತ್ಸರ್ಪದಶೋಪಮಾನಮಿತಿ ಯಾ ಧೀರ್ವೈ ಪರಂ ಮುಕ್ತಯೇ ।
ಸಾ ಧೀಶ್ಚಾಪಿ ನಿರಂತರಂ ಭಗವತಶ್ಶಂಭೋಃ ಕೃಪಾಯಾಃ ಫಲಂ ॥೬೪॥

---

ಶಂಕರನ ಪಾದಕಮಲಧ್ಯಾನದಿಂದ ಪರಿಪೂತವಾಗಿದೆ. ಈಶ್ವರನನ್ನು ಬಿಟ್ಟು ಮತ್ತಾರು ತಾನೇ ಸಂಸಾರದ ಘೋರದುಃಖಗಳನ್ನು ದೂರಮಾಡಿಸಬಲ್ಲರು? ॥೬೨॥

ವಿರೂಪಾಕ್ಷನ ಪಾದಧ್ಯಾನದಲ್ಲಿರುವ ನನಗೆ ಉಳಿದ ದೇವತೆಗಳಿಂದ ಆಗಬೇಕಾದದ್ದೇನು? ಈಗ ಗೋಚರವಾಗುತ್ತಿರುವ, ಮತ್ತು ಗುರಿಯಿಲ್ಲದಿರುವ ನಿಮ್ಮ ಸ್ಥಾನಗಳನ್ನು ಹೊಂದಲು ನನಗೆ ಎಳ್ಳಷ್ಟೂ ಇಷ್ಟವಿಲ್ಲ. ಅಲ್ಲದೆ ಈ ಚಂಚಲವಾದ, ಕ್ಷಣಿಕವಾದ ಪ್ರಪಂಚವು ವಿಶ್ವೇಶ್ವರನಿಂದ ಸೃಷ್ಟವಾಗಿದೆ. ಸೃಷ್ಟವಾದ ವಸ್ತುವು ಎಂದಾದರೂ ನಾಶವಾಗಲೇಬೇಕು. ಅದರಂತೆ ಜಗತ್ತೂ ಒಂದು ಸಾರಿ ನಾಶವೇ ಆಗುತ್ತದೆ. ಇಂತಹ ನಶ್ವರಪ್ರಪಂಚದಿಂದ ನಮಗಾಗುವುದೇನು? ॥೬೩॥

ಎಲೈ ದೇವತೆಗಳಿರಾ, ಈ ಜಗತ್ತು ಕೇವಲ ಭ್ರಾಂತಿಯುಳ್ಳದ್ದು. ಹಗ್ಗವನ್ನು ನೋಡಿ ಹಾವೆಂದು ತಿಳಿಯುವ ಭ್ರಾಂತನಂತೆ ನಶ್ವರವಾದ ಈ ಜಗತ್ತನ್ನು ಸ್ಥಿರವೆಂದು ತಿಳಿದು ಎಲ್ಲರೂ ನರಳುವರು. ಭೂತ, ಭವಿಷ್ಯದ್ವರ್ತಮಾನಕಾಲಗಳಲ್ಲಿ ಸೃಷ್ಟವಾದ ಜಗತ್ತೆಲ್ಲವೂ ಕೇವಲ ಭ್ರಾಂತಿಮೂಲಕವಾಗಿಯೇ ತೋರುತ್ತದೆ ಎಂಬುದನ್ನು ಅರಿಯಬೇಕು. ಹಗ್ಗದ ನಿಜವಾದ ಜ್ಞಾನವು ಉಂಟಾಗುವವರೆಗೂ ಹಾವಿನ ಭ್ರಾಂತಿಯಿಂದ ಮನುಷ್ಯನು ತವಕಪಡುವಂತೆ, ಜಗನ್ಮಿಥ್ಯಾಜ್ಞಾನವು ಒದಗುವ

ನ ಕ್ವಾಪಿ ಸ್ಪೃಹಯಂತಿ ಶಂಕರಕಥಾಪೀಯೂಷಪಾನಾತ್ಪರಂ ।
ಲಿಂಗಾಲಿಂಗನಪೂತಭಸ್ಮನಿಟಿಲಾ ರುದ್ರಾಕ್ಷಮಾಲಾಧರಾಃ ।
ಪುಣ್ಯಾಸ್ತೇ ಶತರುದ್ರಮಧ್ಯನಿಲಸನ್ನಾಮ್ನಾಂ ಪದಾರ್ಥಾಪರಾಃ ।
ಭಾವಾ ಭಾವುಕದಿವ್ಯಜನ್ಮತಪಸಾ ಭೂಮಂಡಲೇ ಪಾವನಾಃ ॥೬೫॥

ಮಾರಾಪಾರಶರಾಗ್ರಕುಂಠನಮಹಾಸಾರೈಕಧಾರೋಪಲಾಃ ।
ಸಾರಾಸಾರವಿಚಾರಧೀರಹೃದಯಂ ಧೌರೇಯಧುರ್ಯಾಸ್ಸದಾ ।
ಪಾರಾವಾರವಿಕಾರಸಂಸೃತಿಮಹಾದುಃಖಾಂಬುಧೇಸ್ತಾರಕಾಃ ।
ವಿಶ್ವಾಧೀಶ್ವರಪೂಜಕಾಸ್ತು ನಿಯತಂ ಪಾಪೌಘಸಂಹಾರಕಾಃ ॥೬೬॥

---

ವರೆಗೂ, ಜಗತ್ತಿನಲ್ಲಿ ಹೊರಳಾಡುತ್ತಿರುವನು. ಆದರೆ ಜಗನ್ಮಿಥ್ಯಾ ಎಂಬ ಜ್ಞಾನವು ಉಂಟಾದರೆ, ಅಗ ಅವನಿಗೆ ಶಾಶ್ವತವಾದ ಮುಕ್ತಿಯು ದೊರಕುವುದು. ಅಂತಹ ಜ್ಞಾನವು ದೊರಕಬೇಕಾದರೆ ಸಾಕ್ಷಾತ್ಪರಮೇಶ್ವರನ ಪಾದಸೇವಾರಾಧಕನಾಗಬೇಕು. ಆ ಶಂಕರನ ಅನುಗ್ರಹವೇ ಮೋಕ್ಷಕ್ಕೆ ಸಾಧಕವಾಗುವುದು. ॥೬೪॥

ಯಾರು ಶಂಕರನ ದಿವ್ಯಕಥೆಯೆಂಬ ಅಮೃತಪಾನವನ್ನು ಬಿಟ್ಟು ಮತ್ತೊಂದನ್ನು ಅಪೇಕ್ಷಿಸುವುದಿಲ್ಲವೋ, ಯಾರು ಭಸ್ಮವನ್ನು ಧರಿಸಿದ ತಮ್ಮ ಮುಖಗಳನ್ನು ಶಿವಲಿಂಗದ ಆಲಿಂಗನದಿಂದ ಪವಿತ್ರಗೊಳಿಸಿಕೊಳ್ಳುವರೋ, ಯಾರು ಸರ್ವದಾ ರುದ್ರಾಕ್ಷಮಾಲಾಧರರಾಗಿರುವರೋ ಅವರೇ ಪುಣ್ಯಶಾಲಿಗಳು. ಶತರುದ್ರಮಧ್ಯಾಂತರ್ಗತವಾದ ಶಿವನಾಮಗಳನ್ನು ನಿತ್ಯವೂ ಪಠಿಸುತ್ತಾ, ಅನೇಕ ಜನ್ಮಗಳಲ್ಲಿ ಸಂಪಾದಿಸಿದ ಪುಣ್ಯವಶದಿಂದ, ಶಿವನನ್ನು ಆರಾಧಿಸಿದವರೇ ಭೂಮಂಡಲದಲ್ಲಿ ಪಾವನ ಪುರುಷರೆನಿಸುವರು. ॥೬೫॥

ಯಾರು ವಿಶ್ವೇಶ್ವರನನ್ನು ಸರ್ವದಾ ಆರಾಧಿಸುವರೋ, ಅವರು ಮನ್ಮಥನ ಬಾಣಪರಂಪರೆಗಳ ಹೊಡೆತವೆಂಬ ಘನವೃಷ್ಟಿಗೆ ಕಲ್ಲಿನಂತಿದ್ದು, ಕಾಮಪರವಶರಾಗದೇ ಇರುವರು. ಅವರೇ ಸಾರವಾದ ಮತ್ತು ಅಸಾರವಾದ ವಸ್ತುಗಳ ವಿವೇಚನೆಯಲ್ಲಿ ಮುಂದಾಳಾಗಿ ನಿಲ್ಲತಕ್ಕವರು. ಅಂತಹವರು ಸಮುದ್ರದಂತಿರುವ ಸಂಸಾರದ ಮಹಾದುಃಖಗಳನ್ನು ದೂರಮಾಡಿ, ಜನರನ್ನು ಅದರಿಂದ ದಾಟಿಸುವರು. ಅವರಿಂದಲೇ ಸಮಸ್ತಪಾಪರಾಶಿಯೂ ನಿರ್ಮೂಲವಾಗುವುದು. ನಿಜವಾಗಿಯೂ ಹರಭಕ್ತರಿಗೆ ಇಷ್ಟು ಸಾಮರ್ಥ್ಯವು ಲಭಿಸುವುದು. ॥೬೬॥

|| ಸೂತ ಉವಾಚ ||

ಜೈಗೀಷವ್ಯಮುಖಾಬ್ಜನಿಸ್ಸೃತಮಹೋದಾರೋತ್ಕಟಂ ತೇ ಮಧು ।
ಪೀತ್ವಾ ಚಾಮರನಾಯಕಾ ಮಧುತೃಷಾಸ್ವಾನಂದಿತಸ್ವಾಂತರಾಃ ।
ಊಚುಃ ಪ್ರಾಂಜಲಯಸ್ಸದಾ ದ್ವಿಜವರಂ ಬ್ರಹ್ಮಾ ಮಹೇಂದ್ರೋ ಹರಿಃ ।
ಜ್ಞಾತ್ವಾ ತಸ್ಯ ವಿನಿಶ್ಚಯಂ ಶಿವಸಮಾಸಕ್ತಂ ಮನಶ್ಚಾಪಿ ತೇ ||೬೭||

|| ದೇವಾ ಊಚುಃ ||

ಸ್ವಾಸ್ಯೇಶಾನಪದಾಂಬುಜೋತ್ಥ ಸುಮನಾಮೋದಾತ್ತಸನ್ಮಾನಸಃ ।
ತ್ವಂ ವೈ ಶಾಂಭವಪುಂಗವಸ್ತವ ಹೃದಂ ಜ್ಞಾತುಂ ಪ್ರವೃತ್ತಾಸ್ಸುರಾಃ ॥
ನಿಷ್ಕಾಮೋಸಿ ನಿರಂಕುಶೋಸಿ ಭಗವನ್ ಪ್ರೋಕ್ತಂ ಹಿ ತತ್ ಕ್ಷಮ್ಯತಾಂ ।
ಸ್ವಾತ್ಮಾರಾಮತಯಾ ತ್ವಯೈವ ಸಕಲಾ ಭೋಗಾಸ್ಸದೈವೋಜ್ಝಿತಾಃ ||೬೮||
ಏವಂ ತೇ ವಿಬುಧಾಃ ಪ್ರಶಸ್ಯ ಚ ಮುನಿಂ ಚಾಲಿಂಗ್ಯಲಿಂಗಾರ್ಚಕಂ ।
ಧನ್ಯಾಸ್ಮೇತಿ ವದಂತಿ ಸುಂದರಗಿರಾಪ್ಯಾನಂದಧಾರಾವೃತಾಃ ।

---

ಹೀಗೆ ಹೇಳಿದ ಜೈಗೀಷವ್ಯಮಹರ್ಷಿಯ ಉದಾರವಾಣಿಯೆಂಬ ಅಮೃತವನ್ನು ಆ ದೇವೇಂದ್ರಾದಿಗಳು ಪಾನಮಾಡಿ, ಆನಂದಾಬ್ಧಿಯಲ್ಲಿ ಮುಳುಗಿಹೋದರು. ಅಲ್ಲದೆ ಆ ಮುನಿಯ ದೃಢನಿಶ್ಚಯವನ್ನು ಕಂಡು ಹರ್ಷಿಸುತ್ತಾ, ತಾವೂ ಸಹ ಪರಮೇಶ್ವರನಲ್ಲಿ ನಟ್ಟಮನಸ್ಸುಳ್ಳವರಾಗಿ, ಕೈಜೋಡಿಸಿ ನಿಂತು ಹೀಗೆ ಹೇಳಿಕೊಂಡರು. ||೬೭||

"ಎಲೈ ಮಹಾಮುನಿಯೇ, ನಿನ್ನ ಮನಸ್ಸು ಶಂಭುವಿನ ಪಾದಕಮಲದ ಸೌರಭಪಾನದಲ್ಲಿ ಮುಳುಗಿ ಹೋಗಿದೆ. ನೀನು ನಿಜವಾಗಿಯೂ ಹರಭಕ್ತಾಗ್ರೇಸರನು. ನಿನ್ನ ಮನಸ್ಸನ್ನು ತಿಳಿಯಲು ನಾವೆಲ್ಲರೂ ಇಲ್ಲಿಗೆ ಬಂದೆವು. ನಿಜವಾಗಿಯೂ ನೀನು ಆಶಾವಿರಹಿತನು. ಸ್ವತಂತ್ರನು. ನಿನ್ನ ವಿಷಯದಲ್ಲಿ ಆಡಿದ ನಮ್ಮ ಮಾತುಗಳನ್ನು ಕ್ಷಮಿಸು. ಕೇವಲ ಆನಂದಮಯನಾಗಿ ಕಾಣುವ ನೀನು ಲೌಕಿಕವಾದ ಸಕಲ ಭೋಗಗಳನ್ನೂ ದೂರಮಾಡಿದ್ದೀಯೆ." ||೬೮||

ಹೀಗೆ ಸಕಲ ದೇವತೆಗಳೂ ಜೈಗೀಷವ್ಯಮುನಿಯನ್ನು ಸ್ತುತಿಸಿ, ಲಿಂಗಾರ್ಚಕನಾದ ಅವನನ್ನು ಆಲಿಂಗಿಸಿಕೊಂಡು, ತಾವು ಧನ್ಯರಾದೆವೆಂದು ಸಂತೋಷಪಟ್ಟರು. ಅಲ್ಲದೆ ಮತ್ತೂ ಮತ್ತೂ ಆ ಮುನಿಯ ವಿಷಯವನ್ನೇ ಪ್ರಸ್ತಾಪಿಸುತ್ತಿದ್ದರು. ಆ

**ಶೈವೋಕ್ತಾಮೃತವಾಕ್ಯನಂದಿತಮನಸ್ಸ್ವಾಂತಾ ಮುದಾ ತೇ ದ್ವಿಜಾಃ ।**
**ಸ್ವಂ ಸ್ವಂ ವಾಹನಮಾಧಿರುಹ್ಯ ತರಸಾ ಗಂತುಂ ಮನಶ್ಚಕ್ರಿರೇ ॥೬೯॥**

**ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ಜೈಗೀಷವ್ಯಸುರಸಂವಾದೋ ನಾಮ ದ್ವಿತೀಯೋಽಧ್ಯಾಯಃ**

---

ಋಷಿಯ ಮಾತಿನ ಸವಿಯನ್ನು ಮನಸ್ಸಿನಲ್ಲಿಯೇ ಅನುಭವಿಸಿದರು. ಕೊನೆಗೆ ಆನಂದದಿಂದ ಸಕಲ ದೇವತೆಗಳೂ ತಮ್ಮ ತಮ್ಮ ಸ್ಥಾನಗಳಿಗೆ ತಮ್ಮ ತಮ್ಮ ವಾಹನಗಳನ್ನೇರಿ ಪ್ರಯಾಣಮಾಡಿದರು. ಎಂದು ಸೂತಮಹರ್ಷಿಗಳು ಮೌನಿ ಭಾರ್ಗವಾದಿಗಳಿಗೆ ಹೇಳಿದರು. ||೬೯||

ಇಲ್ಲಿಗೆ ಶಿವರಹಸ್ಯದ ಪ್ರಥಮಾಂಶದಲ್ಲಿ ಜೈಗೀಷವ್ಯ ಮತ್ತು ದೇವತೆಗಳ ಸಂಭಾಷಣೆಯನ್ನು ತಿಳಿಸುವ ಎರಡನೆಯ ಅಧ್ಯಾಯವು ಮುಗಿದುದು.

# ಅಥ ಶ್ರೀಶಿವರಹಸ್ಯೇ

## ತೃತೀಯೋಽಧ್ಯಾಯಃ

### ಜೈಗೀಷವ್ಯಸುರಸಂವಾದಃ

|| ಜೈಗೀಷವ್ಯ ಉವಾಚ ||

**ಶೃಣುಧ್ವಂ ಬ್ರಹ್ಮವಿಷ್ಣ್ವಾದ್ಯಾ ಯನ್ಮಾನಸ್ಯಮಹೈತುಕಂ ।**
**ನಿತ್ಯಂ ಸರ್ವಜ್ಞತಾ ತಸ್ಯ ದೇವದೇವಸ್ಯ ಶೂಲಿನಃ ||೧||**

**ಯೋ ವೇದಾಂತೈಕಸಂವೇದ್ಯೋ ಯಂ ಧ್ಯಾಯಂತಿ ಮುಮುಕ್ಷವಃ ।**
**ಯಸ್ಯ ನಿಶ್ವಾಸಪವನಾ ವೇದಾಶ್ಚತ್ವಾರ ಏವ ಹಿ ||೨||**

**ಯೋ ಬ್ರಹ್ಮವಿಷ್ಣುರುದ್ರಾಣಾಂ ಜನಕಃ ಪರಮೇಶ್ವರಃ ।**
**ಸೂರ್ಯಸ್ಯ ಜನಿತಾ ವಹ್ನೇಶ್ಚಂದ್ರಚಕ್ರಾನಿಲಾತ್ಮನಾಂ ||೩||**

---

## ಶ್ರೀಶಿವರಹಸ್ಯದಲ್ಲಿ ಮೂರನೆಯ ಅಧ್ಯಾಯ

### ಜೈಗೀಷವ್ಯ ಮತ್ತು ದೇವತೆಗಳ ಸಂಭಾಷಣೆ

ಜೈಗೀಷವ್ಯಮಹಾಮುನಿಯು ಮತ್ತೆ ಬ್ರಹ್ಮವಿಷ್ಣ್ವಾದಿಗಳನ್ನು ಕುರಿತು, “ ದೇವತೆಗಳಿರಾ ಈಗ ಶಿವನ ಮಹಿಮೆಯನ್ನು ಹೇಳುವೆನು ಕೇಳಿರಿ. ನನ್ನ ಮನಸ್ಸು ಯಾವವಿಧವಾದ ಫಲಾಪೇಕ್ಷೆಯೂ ಇಲ್ಲದೆ ಶಂಕರನಲ್ಲಿ ಅಡಗಿದೆ. ಶಂಕರನು ಸರ್ವದಾ ಸರ್ವಜ್ಞನಾಗಿಯೇ ಇರುವನು. ||೧||

ಅವನು ಕೇವಲ ಉಪನಿಷತ್ತುಗಳಿಂದ ತಿಳಿಯಲ್ಪಡುವವನು. ಮೋಕ್ಷಾರ್ಥಿಗಳೆಲ್ಲರೂ ಶಂಭುವನ್ನೇ ಧ್ಯಾನಿಸುವರು. ಶಂಕರನ ಉಸಿರುಗಳೇ ನಾಲ್ಕು ಪ್ರಸಿದ್ಧವಾದ ವೇದಗಳು. ||೨||

ಬ್ರಹ್ಮ, ವಿಷ್ಣು, ರುದ್ರ, ಸೂರ್ಯ, ಅಗ್ನಿ, ಚಂದ್ರ, ವಾಯು ಇವರೇ ಮೊದಲಾದ ಸಕಲ ದೇವತೆಗಳಿಗೂ ಜನಕನಾಗಿರುವವನು ಶಂಕರನು. ||೩||

ಸ ತಸ್ಯ ಕಾರಣಂ ಶಂಭೋಸ್ಸ ಸರ್ವಸ್ಯಾಪಿ ಕಾರಣಂ ।
ಯಸ್ಸಮಾರಾಧ್ಯತೇ ವಿಪ್ರೈರ್ಭಿನ್ನ ಭಿನ್ನ ಕ್ರಿಯಾದಿಭಿಃ ॥೪॥

ಯಸ್ತ್ವಗ್ನೀಷೋಮಜಂ ಸರ್ವಂ ಜಗತ್ಪಾತಿ ಸನಾತನಃ ।
ಅಸಂಗಸ್ಸರ್ವಭೂತೇಷು ನಿರ್ವಿಕಾರೋ ವಿಕಾರಿಷು ॥೫॥

ಯಂ ಸೂಕ್ಷ್ಮಬುದ್ಧ್ಯಾ ಪಶ್ಯಂತಿ ಸ್ವಹೃದಾ ವೀತರಾಗಿಣಃ ।
ಯೋ ಧ್ಯಾನೇನ ಜಪೈರ್ಯಜ್ಞೈಸ್ತಪಸಾ ನಾಶಕೇನ ಚ ॥೬॥

ಸ ವೇತ್ತಿ ವೇದ್ಯಾನ್ಯಕ್ಷಾಣಿ ಮನೋವಾಚಾಮಗೋಚರಃ ।
ಯಸ್ಮಾದ್ಭೂತಾನಿ ಜಾಯಂತೇ ಯೇನ ಜೀವಂತಿ ತಾನ್ಯಪಿ ॥೭॥

ಯತ್ರ ಲೀನಾನಿ ಕಲ್ಪಾಂತೇ ಸ ಏಕಃ ಪರಮೇಶ್ವರಃ ।
ಯಸ್ತ್ವಪಾಣಿರ್ನಿರಂಘ್ರಿಶ್ಚಾಪ್ಯಚಕ್ಷುಶ್ಚಾಪ್ಯಥಾಶ್ರವಾಃ ॥೮॥

---

ಸಕಲ ಜಗತ್ಸೃಷ್ಟಿಗೂ ಅವನೇ ಕಾರಣನು. ಅವನಿಗೆ ಮಾತ್ರ ಕಾರಣವಸ್ತುವು ಮತ್ತೊಂದಿಲ್ಲ. ವಿಪ್ರರನೇಕರು ನಾನಾವಿಧವಾದ ಕ್ರಿಯೆಗಳಿಂದ ಪರಮೇಶ್ವರನನ್ನೇ ಸದಾ ಆರಾಧಿಸುತ್ತಿರುವರು. ॥೪॥

ಅಗ್ನೀಷೋಮದೇವತೆಗಳಿಂದ ನಿರ್ಮಿತವಾದ ಸರ್ವಜಗತ್ತನ್ನೂ ಕಾಪಾಡುವವನು ಸನಾತನನಾದ ಶಂಕರನೇ. ಆತನು ಯಾವ ಪ್ರಾಣಿಗಳಲ್ಲಿಯೂ ಸೇರುವುದಿಲ್ಲ. ವಿಕಾರಜನ್ಯವಾದ ಜೀವಿಗಳಲ್ಲಿ ನಿರ್ವಿಕಾರನಾಗಿ ತೋರಿಬರುವನು. ॥೫॥

ರಾಗದ್ವೇಷಾದಿಗಳನ್ನು ಬಿಟ್ಟು ಜಿತೇಂದ್ರಿಯರಾದವರು, ಸೂಕ್ಷ್ಮಜ್ಞಾನದಿಂದ ಅವನನ್ನು ನೋಡುವರು. ಜಪ, ಯಜ್ಞ, ತಪಸ್ಸು, ಉಪವಾಸ, ಧ್ಯಾನ ಇವುಗಳ ಮೂಲಕವೇ ಶಂಕರನು ಅವರಿಗೆ ಸುಲಭನಾಗಿ ಗೋಚರಿಸುವನು. ॥೬॥

ಶಂಕರನು ಸಮಸ್ತ ಇಂದ್ರಿಯಗಳನ್ನೂ ತಿಳಿದಿರುವನು. ಆದರೆ ಮನಸ್ಸು, ವಾಕ್ಕು ಮುಂತಾದುವುಗಳಿಗೆ ಗೋಚರನಲ್ಲ. ಅವನಿಂದಲೇ ಪಂಚಭೂತಗಳೂ ಹುಟ್ಟಿವೆ. ಅವನಿಂದಲೇ ಸಕಲ ಪ್ರಾಣಿಗಳೂ ಬದುಕಿವೆ. ॥೭॥

ಎಲ್ಲ ಪ್ರಾಣಿಗಳೂ ಕಲ್ಪಾಂತದಲ್ಲಿ ಅವನಲ್ಲಿಯೇ ಅಡಗಿಹೋಗುತ್ತವೆ. ಪರಮೇಶ್ವರನಿಗೆ ಕೈ, ಕಾಲು, ಕಣ್ಣು, ಕಿವಿ ಮುಂತಾದ ಅವಯವಗಳು ಯಾವುವೂ ಇಲ್ಲ. ॥೮॥

ಸೋಽಂತಿಕೇ ಸ ಹಿ ದೂರಸ್ಥಸ್ಸಬಾಹ್ಯಾಭ್ಯಂತರೇಽಪಿ ಚ ।
ಸ ಸತ್ಯಂ ಜ್ಞಾನಮಾನಂದೋ ಗುಣೈರ್ಹೀನಶ್ಚ ನಿರ್ಗುಣಃ ॥೯॥

ಸ್ವತಂತ್ರಶ್ಚ ಸುಪೂರ್ಣಶ್ಚ ತೇನ ಪೂರ್ಣಮಿದಂ ಜಗತ್ ।
ಸ ನಿತ್ಯಶ್ಚೇತನಾನಾಂ ಚ ಪತೀನಾಂ ಪತಿರೀಶ್ವರಃ ॥೧೦॥

ಯಸ್ತ್ವೇಕಸ್ಸೃಜತೀಶಾನಶ್ಚರಾಚರಮಿದಂ ಜಗತ್ ।
ಯಥೋರ್ಣನಾಭಿಸ್ತಂತೂನ್ಸೈ ಸೃಜತೇ ಗ್ರಸತೇಽಪಿ ಚ ॥೧೧॥

ಯಸ್ಯ ರೂಪಾಪರಿಜ್ಞಾನಾದ್ದೇಹಮಾತ್ಮೇತಿ ಮನ್ಯತೇ ।
ಯಸ್ಯ ರೂಪಾಪರಿಜ್ಞಾನಾನ್ಮನ ಆತ್ಮೇತಿ ಮನ್ಯತೇ ॥೧೨॥

ಯಸ್ಯ ರೂಪಾಪರಿಜ್ಞಾನಾತ್ಖಾನಿ ಚಾತ್ಮೇತಿ ಮನ್ಯತೇ ।
ಯಸ್ಯ ರೂಪಾಪರಿಜ್ಞಾನಾದ್ಭೂತಾನ್ಯಾತ್ಮೇತಿ ಮನ್ಯತೇ ॥೧೩॥

---

ಅವನು ಹತ್ತಿರದಲ್ಲಿಯೂ ಇರುವನು. ದೂರದಲ್ಲಿಯೂ ಕಾಣುವನು. ಒಳಗೂ ಹೊರಗೂ ನೆಲಸಿರುವನು. ಸತ್ಯ, ಜ್ಞಾನ, ಆನಂದ ಇವುಗಳ ಸ್ವರೂಪದಿಂದ ಕೂಡಿದ್ದರೂ ನಿರ್ಗುಣನಾಗಿ ತೋರಿಬರುವನು. ॥೯॥

ಸ್ವತಂತ್ರನು, ಪೂರ್ಣರೂಪಿಯು, ಅವನಿಂದಲೇ ಜಗತ್ತು ಪೂರ್ಣವೆನಿಸುತ್ತದೆ. ಚೇತನವಿಶಿಷ್ಟವಾದ ಜಗತ್ತಿಗೂ, ಸಮಸ್ತ ಲೋಕಪಾಲಕರಿಗೂ ಶಂಕರನೇ ಒಡೆಯನು. ಆತನೇ ನಿತ್ಯನು. ॥೧೦॥

ಉಣ್ಣೆಯ ದಾರದಿಂದ ಹೇಗೆ ತಂತುವಾಯನು (ನೇಯುವವನು) ಬಟ್ಟೆಯನ್ನು ನಿರ್ಮಿಸುವನೋ, ಹಾಗೆ ಈ ಚರಾಚರಾತ್ಮಕವಾದ ಜಗತ್ತನ್ನು ಶಂಕರನೊಬ್ಬನೇ ಸೃಷ್ಟಿಮಾಡುವನು. ॥೧೧॥

ಪರಮೇಶ್ವರನ ಸ್ವರೂಪದ ಅರಿವಿಲ್ಲದ್ದರಿಂದಲೇ, ಜನರು ತಮ್ಮ ದೇಹವನ್ನೂ ತಮ್ಮ ಮನಸ್ಸನ್ನೂ ಆತ್ಮವೆಂದು ತಿಳಿದು ಭ್ರಾಂತರಾಗಿರುವರು. ॥೧೨॥

ಮತ್ತೆ ಕೆಲವರು ಆಕಾಶವನ್ನೇ ಆತ್ಮನೆಂದೂ, ಹಲವರು ಪಂಚಭೂತಗಳೇ ಆತ್ಮನೆಂದೂ ತಿಳಿದಿರುವರು. ಇದಕ್ಕೆ ಕಾರಣವೇನೆಂದರೆ ಅವರಿಗೆ ಶಿವಸ್ವರೂಪದ ಅರಿವುಂಟಾಗಿಲ್ಲ. ॥೧೩॥

ಯಸ್ಯ ರೂಪಾಪರಿಜ್ಞಾನಾತ್ಸರ್ವಮಾತ್ಮೇತಿ ಮನ್ಯತೇ ।
ಯಸ್ಯಾಕಾಶಶ್ಶರೀರಂ ಹಿ ಚಾಕಾಶೋ ನೈವ ವೇತ್ತಿ ತಂ ॥೧೪॥

ಯಸ್ಯ ಭೂಮಿಸ್ಸ್ವರೂಪಂ ಹಿ ತಂ ಭೂಮಿರ್ನೈವ ವೇತ್ತಿ ಹಿ ।
ಯೋ ಮನಶ್ಚಕ್ಷುರಾದೀನಾಂ ನಿಯಂತಾ ಪರಮೇಶ್ವರಃ ॥೧೫॥

ಯಸ್ಯ ಭಾಸಾ ಜಗದ್ಭಾತಿ ಸಶಕ್ರಾನಲವಾಯವಃ ।
ಭೀತ್ಯಾ ಭಾಂತಿ ಚ ವಾಂತ್ಯೇವ ಚೇತನಾನಾಂ ಸಚೇತನಃ ॥೧೬॥

ಯಸ್ಯ ಮಾಯಾವಿಲಸಿತಂ ಜಗತ್ಸ್ಥಾವರಜಂಗಮಂ ।
ಸ ಮಾಯೀ ಪರಮೇಶಾನಸ್ತೇನಾವಾಸ್ಯಮಿದಂ ಜಗತ್ ॥೧೭॥

ಯೋಽಶರೀರೋ ಹ್ಯಲಿಂಗಶ್ಚ ಯಮಿಭಿಃ ಪರಿದೃಶ್ಯತೇ ।
ಯಸ್ಯ ವಿಜ್ಞಾನಮಾತ್ರೇಣ ಸರ್ವಂ ವಿಜ್ಞಾತಮೇವ ಹಿ ॥೧೮॥

---

ಶಂಕರನ ಸ್ವರೂಪಜ್ಞಾನವಿಲ್ಲದೆ ಅನೇಕರು, ಸರ್ವವೂ ಆತ್ಮವೇ ಎಂದರಿಯುವರು. ಆಕಾಶವೂ ಪರಶಿವನ ಒಂದು ಶರೀರವೇ. ಆದರೆ ಆಕಾಶವು ಶಂಕರನ ಸ್ವರೂಪವನ್ನು ಮಾತ್ರ ಅರಿತಿಲ್ಲ. ॥೧೪॥

ಭೂಮಿಯು ಶಂಕರನ ಒಂದು ದೇಹ. ಆದರೆ ಅದು ಮಾತ್ರ ದೇವನ ಸ್ವರೂಪವನ್ನರಿತಿಲ್ಲ. ಚಕ್ಷುರಾದೀಂದ್ರಿಯಗಳಿಗೂ ಮನಸ್ಸಿಗೂ ನಿಯಾಮಕನು ಪರಮೇಶ್ವರನೇ. ॥೧೫॥

ಶಿವತೇಜಸ್ಸಿನಿಂದಲೇ ಇಂದಿಗೂ ಇಂದ್ರ, ಅಗ್ನಿ, ವಾಯು ಮುಂತಾದ ದೇವತೆಗಳೂ, ಜಗತ್ತೂ ಪ್ರಕಾಶಿಸುತ್ತಿವೆ. ಗಾಳಿ ಬೀಸುವುದೂ, ಸೂರ್ಯಾದಿಗಳು ಹೊಳೆಯುವುದೂ ಶಿವತೇಜಸ್ಸಿನ ಭಯದಿಂದಲೇ. ಚೇತನವಸ್ತುಗಳಲ್ಲಿ ಚೈತನ್ಯರೂಪದಿಂದಿರುವವನೂ ಅವನೇ. ॥೧೬॥

ಈ ಚರಾಚರಾತ್ಮಕವಾದ ಜಗತ್ತೆಲ್ಲವೂ ಮಾಯಾಪ್ರಚುರವಾದದ್ದೇ. ಆದರೆ ಅಂತಹ ಮಾಯೆಯನ್ನು ವಶಪಡಿಸಿಕೊಂಡಿರುವವನು ಈಶ್ವರನು. ಅವನಿಂದಲೇ ಜಗತ್ತೆಲ್ಲವೂ ಮುಚ್ಚಿಹೋಗಿದೆ. ॥೧೭॥

ಅವನಿಗೆ ಶರೀರವಿಲ್ಲ. ಗುರುತುಗಳಿಲ್ಲ. ಆದರೂ ಯೋಗಿಗಳಿಗೆ ಮಾತ್ರ ಗೋಚರಿಸುವನು. ಅವನ ಸ್ವರೂಪವನ್ನು ತಿಳಿದರೆ ಸಕಲವನ್ನೂ ತಿಳಿದಂತೆಯೇ ಸರಿ. ॥೧೮॥

ಜ್ಞಾನಮಾತ್ಮತ್ವಹಂ ಬ್ರಹ್ಮ ಜ್ಞಾನಂ ಶಾಂತಿರನುತ್ತಮಾ ।
ಸ ಏಕಃ ಪರಮಾತ್ಮಾ ಹಿ ನೇಹ ನಾನಾಸ್ತಿ ಕಿಂಚನ ॥೧೯॥

ಸ ಏಕೋ ಜ್ಞಾನವಾನೀಶ ಈಶನೀಭಿಸ್ಸ ಈಶತೇ ।
ಏಕ ಏವ ಮಹಾನ್ ರುದ್ರಃ ಪುರುಷೋ ವಿಶ್ವತೋಮುಖಃ ॥೨೦॥

ತಮೇಕಂ ಜ್ಞಾನಮಾತ್ಮಾನಂ ತ್ಯಕ್ತ್ವಾನ್ಯತ್ರದಿದಂ ಜಗತ್ ।
ಯಜ್ಜ್ಞಾನಾತ್ ಹೃದಯಗ್ರಂಥಿಭೇದನಂ ಜಾಯತೇ ನೃಣಾಂ ॥೨೧॥

ಯಸ್ಯೈಕತ್ವಂ ಹಿ ವಿಜ್ಞಾಯ ಶೋಕಂ ತರತಿ ಮಾನವಃ ।
ಸ ಏವ ಜ್ಯೋತಿಷಾಂ ಜ್ಯೋತಿಸ್ಸ ಏವ ತಮಸಾಂ ತಮಃ ॥೨೨॥

ಸ ಏಕಸ್ಸರ್ವಭೂತೇಷು ಬಹುಧಾ ಭಾತಿ ಮಾಯಯಾ ।
ಯೋ ಜಾಗ್ರತ್ಸ್ವಪ್ನತುರ್ಯಾಭಿರ್ಗೂಢಾತ್ಮಾ ನ ಪ್ರಕಾಶತೇ ॥೨೩॥

---

ಅಹಂಪದವಾಚ್ಯನಾದ ಮತ್ತು ಅಂತಃಕರಣವೃತ್ತಿವಿಶಿಷ್ಟಜ್ಞಾನಸಹಿತನಾದ ಆತ್ಮನೇ, ಶಂಕರನು. ತತ್ಸಂಬಂಧವಾದ ಜ್ಞಾನವೇ ನಿಜವಾದ ಶಾಂತಿಯು. ಅಂತಹ ಪರಮಾತ್ಮನು ಒಬ್ಬನೇ. ಲೋಕದಲ್ಲಿ ತದ್ಭಿನ್ನವಾದ ವಸ್ತುವು ಮತ್ತೊಂದಿಲ್ಲ. ॥೧೯॥

ಜ್ಞಾನಸ್ವರೂಪಿಯಾದ ಈಶ್ವರನು ಒಬ್ಬನೇ, ಎಂದು ಜ್ಞಾನಿಗಳೆಲ್ಲರೂ ನಿಶ್ಚಯಮಾಡಿರುವರು. ರುದ್ರನು ಒಬ್ಬನೇ. ಅವನೇ ಪುರುಷನು. ಅವನೇ ವಿಶ್ವವ್ಯಾಪಿಯು. ॥೨೦॥

ಜ್ಞಾನಸ್ವರೂಪಿಯಾದ ಆ, ಪರಮಾತ್ಮನು ಈ ಮಾಯಾವಿಲಸಿತವಾದ ಜಗತ್ತಿಗಿಂತ ಬೇರೆಯಾಗಿ ಕಾಣುತ್ತಿರುವನು. ಅಂತಹ ಪರಶಿವನ ಸ್ವರೂಪವನ್ನು ಅರಿಯುವುದರಿಂದ ಸಾಂಸಾರಿಕಮನೋವ್ಯಥೆಗಳು ಮನುಷ್ಯರಿಗೆ ದೂರವಾಗುತ್ತವೆ. ॥೨೧॥

ತೇಜಸ್ವಿಗಳಿಗೆ ತೇಜೋರೂಪದಲ್ಲಿಯೂ, ಅಜ್ಞಾನಿಗಳಿಗೆ ಅಜ್ಞಾನದಂತೆಯೂ ತೋರಿಬರುವ ದೇವರು ಒಬ್ಬನೇ. ಅವನೇ ಜಗದೀಶ್ವರನು ಎಂದು ಯಾವ ಮನುಷ್ಯನು ಅರಿಯುವನೋ ಅವನು ಭವಬಂಧನಗಳಿಂದ ದೂರನಾಗುವನು. ॥೨೨॥

ಆ ಪರಮಾತ್ಮನೊಬ್ಬನೇ ಮಾಯಾಸಂಬಂಧಿಯಾಗಿ ಪ್ರಪಂಚದ ನಾನಾ ರೂಪನಾಗಿ ತೋರುತ್ತಿರುವನು. ಜಾಗ್ರತ್, ಸ್ವಪ್ನ, ಸುಷುಪ್ತಿಯೆಂಬ ಮೂರು

**ಯೋ ದೃಶ್ಯಸ್ಸೂಕ್ಷ್ಮಯಾ ಬುದ್ಧ್ಯಾ ತತ್ಪ್ರಸಾದೇನ ಕೇವಲಂ ।**
**ತಪಸಾ ವೇದಿತವ್ಯಸ್ಸ ನಾನ್ಯಥಾ ಕರ್ಮಕೋಟಿಭಿಃ ॥೨೪॥**

**ಯೋ ವೇದಾದೌ ಸ್ವರಃ ಪ್ರೋಕ್ತೋ ವೇದಾಂತೇಷು ಪ್ರತಿಷ್ಠಿತಃ ।**
**ಯ ಈಶಾನೋಽಧಿವಿದ್ಯಾನಾಂ ಪಾರದೃಶ್ವಾ ಸನಾತನಃ ॥೨೫॥**

**ಯೋ ಭೂತಸಂಘೇ ಸುಪ್ತೇಽಪಿ ಜಾಗರ್ತೀಶೋ ಮಹೇಶ್ವರಃ ।**
**ಯಸ್ಮಾತ್ಪ್ರಾಣೋ ಮನೋ ಜಜ್ಞೇ ಸ ಹಿ ನಾನ್ಯೇತಿ ಕಿಂಚನ ॥೨೬॥**

**ಯೋ ಜ್ಯೋತಿರ್ಜ್ಯೋತಿಷಾಂ ದೇವೋ ವಿಶ್ವಾತ್ಮಾ ವಿಶ್ವತೋಮುಖಃ ।**
**ಯೋ ಭೂಮಿಮತ್ಯತಿಷ್ಠಚ್ಚ ಯಸ್ಮಾದ್ಬ್ರಹ್ಮಾಣಿ ಜಜ್ಞಿರೇ ॥೨೭॥**

---

ವಿಧವಾದ ಅವಸ್ಥೆಗಳಿಂದ ಗೂಢನಾಗಿ ಪ್ರಕಾಶಿಸುತ್ತಿರುವನು. ಮಾಯಾವೃತನಾಗಿರುವುದರಿಂದ ಯಾರಿಗೂ ಸ್ಪಷ್ಟವಾಗಿ ತೋರಿಬರುತ್ತಿಲ್ಲ. ||೨೩||

ಶಂಕರನ ಅನುಗ್ರಹವನ್ನು ಸಂಪಾದಿಸಿ ಸೂಕ್ಷ್ಮಜ್ಞಾನವನ್ನು ಪಡೆದರೆ, ಆಗ ಶಂಕರನು ಪ್ರತ್ಯಕ್ಷನಾಗುವನು. ಜ್ಞಾನಮಯವಾದ ತಪಸ್ಸು, ಈಶ್ವರಪ್ರತ್ಯಕ್ಷಕ್ಕೆ ಸಾಧಕವೇ ಹೊರತು, ಮಿಕ್ಕ ಕರ್ಮಗಳೊಂದೂ ಕಾರಣಗಳಾಗಲಾರವು. ||೨೪||

ವೇದಾದಿಯಲ್ಲಿ ಸೂಕ್ಷ್ಮರೂಪವಾಗಿ ತೋರಿಬರುವ ಪರಶಿವನು ವೇದಾಂತದಲ್ಲಿ ಅಂದರೆ ಉಪನಿಷತ್ತಿನಲ್ಲಿ ಪ್ರತಿಷ್ಠಾರೂಪದಿಂದ ಪ್ರಸಿದ್ಧನಾಗಿರುವನು. ಅವನೇ ಸಮಸ್ತ ಬ್ರಹ್ಮವಿದ್ಯೆಗಳಿಗೆ ಅಧಿದೇವನು. ಸಮಸ್ತ ವಿದ್ಯೆಗಳ ಕೊನೆಯನ್ನು ಕಂಡ ಸನಾತನಪುರುಷನೇ ಈ ಶಂಕರನು. ||೨೫||

ಸಮಸ್ತ ಪ್ರಾಣಿರಾಶಿಯು ಸುಪ್ತಾವಸ್ಥೆಯಲ್ಲಿರುವಾಗಲೂ, ಮಹೇಶ್ವರನು ಮಾತ್ರ ಜಾಗ್ರದವಸ್ಥೆಯಲ್ಲಿಯೇ ಇರುವನು. ಪರಶಿವನಿಂದಲೇ ಪ್ರಾಣ, ಮನಸ್ಸು ಇತ್ಯಾದಿಗಳು ಭೂತಗಳಲ್ಲಿ ಅಡಗಿವೆ. ಅಂತಹ ಪರಮಾತ್ಮನು ಆ ಪ್ರಾಣಾದಿಗಳ ರೂಪದಲ್ಲಿಯೇ ಅವುಗಳಲ್ಲಿ ಅಡಗಿರುವನು. ||೨೬||

ಯಾರು, ಜ್ಯೋತಿರ್ದೇವತೆಗಳಲ್ಲಿ ಜ್ಯೋತೀರೂಪದಿಂದಿರುವನೋ, ಅವನೇ ಪ್ರಪಂಚಕ್ಕೆ ಸರ್ವತೋಮುಖನಾಗಿ ತೋರುತ್ತಿರುವನು. ಅವನಿಂದಲೇ ಈ ಭೂಮಿಯು ಸ್ಥಿರವಾಗಿ ನಿಂತಿದೆ. ಸಮಸ್ತ ವಸ್ತುಗಳು ಬ್ರಹ್ಮರೂಪವಾಗಿ ತಿಳಿದುಬರುತ್ತಿರುವುದೂ ಅವನಿಂದಲೇ. ||೨೭||

ಯತೋ ಬ್ರಹ್ಮೇಶವಿಷ್ಣ್ವಿಂದ್ರಾಸ್ಸಹ ದೇವೈಶ್ಚ ಜಜ್ಞಿರೇ ।
ಯೋ ಬ್ರಹ್ಮ ಬ್ರಹ್ಮವಿಚ್ಚಾಪಿ ಚಾತ್ರ ಬ್ರಹ್ಮ ಸಮುಚ್ಯತೇ ॥೨೮॥

ಏಷ ಬ್ರಹ್ಮೈಷ ವಿಷ್ಣುಶ್ಚ ಏಷ ದೇವೋ ವಿರಾಜತೇ ।
ಏಷ ಭೂತಪತಿರ್ದೇವ ಏಷ ಸೇತುರ್ವಿಧಾರಣಃ ॥೨೯॥

ಏಕಮೇವ ಮಹಾದೇವಮಿಂದ್ರಮಿತ್ರಾದಿಭಿಸ್ಸಗೈಃ ।
ನಾಮರೂಪಗುಣೈಶ್ಚೈವ ಮಾಯಯಾ ಮನ್ಯತೇ ಜನಃ ॥೩೦॥

ಇದಂ ಜಗತ್ಪುರಾ ಸೃಷ್ಟ್ವಾ ತಸ್ಮಿನ್ ಪ್ರಾವಿಶದೀಶ್ವರಃ ।
ವ್ಯಾಕರೋನ್ನಾಮರೂಪೇ ತು ವ್ಯವಹಾರೇವ ಭಾಸತೇ ॥೩೧॥

ಪುರುಷೋ ಯಃ ಪರಸ್ಸೂಕ್ಷ್ಮೋ ಭೋಕ್ತಾ ಭೋಜ್ಯಂ ಚ ಯಸ್ಸದಾ ।
ಯೋ ಽಥ ವಿಶ್ವನೇತಾ ಚ ಯಸ್ಮಾನ್ನಾನ್ಯತ್ಪರಾಯಣಂ ॥೩೨॥

---

ಬ್ರಹ್ಮ, ಶಿವ, ವಿಷ್ಣು ಇವರೇ ಮೊದಲಾದ ಸಮಸ್ತ ದೇವತೆಗಳೂ ಆ ಪರಶಿವನಿಂದಲೇ ಉತ್ಪನ್ನರಾದವರು. ಅಲ್ಲದೆ ಬ್ರಹ್ಮರೂಪನಾಗಿಯೂ, ಬ್ರಹ್ಮಜ್ಞಾನಿಯಾಗಿಯೂ, ಬ್ರಹ್ಮವಸ್ತುವಾಗಿಯೂ ತೋರಿಬರುತ್ತಿರುವವನು ಆ ಪರಶಿವನೊಬ್ಬನೇ. ॥೨೮॥

ಬ್ರಹ್ಮ, ವಿಷ್ಣು, ರುದ್ರ, ಸಂಸಾರಬಂಧನವನ್ನು ನಿವೃತ್ತಿಮಾಡುವ ಪರಾಪರ ವಸ್ತು, ಇವರೆಲ್ಲರೂ ಈ ಪರಶಿವನ ಸ್ವರೂಪಿಗಳೇ. ಸಮಸ್ತ ದೇವತಾಸ್ವರೂಪನೇ ಈತನು. ॥೨೯॥

ಒಬ್ಬನೇ ಆದ ಈ ಮಹಾದೇವನನ್ನು ಬೇರೆ ಬೇರೆಯಾದ ಹೆಸರು, ರೂಪು, ಗುಣ ಇವುಗಳಿಂದ ಇಂದ್ರ, ಮಿತ್ರ ಎಂಬ ಭಿನ್ನದೇವತೆಗಳನ್ನಾಗಿ ತಿಳಿದಿರುವರು. ಇದು ನಿಜವಾಗಿ ಅಜ್ಞಾನ. ಪರಶಿವನೊಬ್ಬನೇ ಇರತಕ್ಕವನು. ॥೩೦॥

ಈಶ್ವರನು ಮೊದಲು ಈ ಜಗತ್ತನ್ನು ಸೃಷ್ಟಿಮಾಡಿ, ಅದರಲ್ಲಿ ತಾನು ಅಂತರ್ಭಾವನಾದನು. ವಿಧವಿಧವಾದ ಹೆಸರುಗಳಿಂದಲೂ, ಆಕಾರಗಳಿಂದಲೂ ಭಿನ್ನ ಭಿನ್ನ ವ್ಯವಹಾರಕ್ಕೆ ಸಿಕ್ಕಿದವನಾಗಿ ತೋರಿಬಂದಿರುವನು. ॥೩೧॥

ಇವನೇ ಪುರುಷನಾಗಿ ತೋರುವನು. ಸೂಕ್ಷ್ಮರೂಪಿಯಾಗಿಯೂ ಇರುವನು. ತಿನ್ನುವವನೂ, ತಿನ್ನುವ ವಸ್ತುವೂ, ಈ ವಸ್ತುಗಳಿಗೆ ನಿಯಾಮಕನೂ, ಆಗಿರುವನು

ಅಶರೀರೋಽವ್ಯಯಾತ್ಮಾ ಯಶ್ಚಾಶೀರ್ಣೋಽಹ್ಯವಿನಾಶಕಃ ।
ಯೋ ಮಾಯಯಾ ಶರೀರಸ್ಥಸ್ತದ್ವೀರ್ಯೈರ್ನೈವ ಲಿಪ್ಯತೇ ॥೩೩॥

ಭೋಗೀವ ಭಾಸತೇ ದೇವೋ ಹ್ಯನ್ನಪಾನಾದಿಭೋಗಭಾಕ್ ।
ಯಶ್ಚ ಸರ್ವೇಂದ್ರಿಯಾತೀತಸ್ಸರ್ವೇಷಾಮಪಿ ಭಾಸಕಃ ॥೩೪॥

ಯೋಽವ್ಯಕ್ತೋ ವ್ಯಕ್ತತಾಮೇತ್ಯ ಜಗತ್ಪುಷ್ಣಾತಿ ಲೀಲಯಾ ।
ಯೋಽವಿದ್ಯಯಾ ಸಂಸರತಿ ವಿದ್ಯಯಾ ಚ ಪ್ರಮುಚ್ಯತೇ ॥೩೫॥

ಯೋಽನಾಧಾರೋಽಖಿಲಾಧಾರಸ್ಸ್ವೇ ಮಹಿಮ್ನಿ ಪ್ರತಿಷ್ಠಿತಃ ।
ಯಂ ಶೃಣ್ವಂತೋಪಿ ವೇದಾಂತೈರ್ಮುಹ್ಯಂತಿ ಯತಯಸ್ಸುರಾಃ ॥೩೬॥

---

ಇವನೇ. ಇಂತಹ ದೇವದೇವನನ್ನು ಬಿಟ್ಟರೆ ಪೂಜ್ಯದೇವತೆಯು ಮತ್ತೊಂದಿರಲಾರದು. ||೩೨||

ಶಂಕರನಿಗೆ ನಿಜವಾದ ದೇಹವಿಲ್ಲ. ನಾಶರಹಿತನಾದವನು. ಕ್ಷೀಣದೆಸೆಯಿಲ್ಲದವನು. ಎಂದೂ ನಾಶಕ್ಕೆ ಸಿಕ್ಕದವನು. ಎಲ್ಲರ ಶರೀರದಲ್ಲಿಯೂ ಅಡಗಿರುವನು. ಮಾಯಾವರಣದಿಂದ ಯಾರಿಗೂ ಸುಲಭಗೋಚರನಾಗಿಲ್ಲ. ಸ್ವಶಕ್ತಿಯಿಂದ ಯಾವ ವಸ್ತುವಿನ ಸಂಬಂಧವನ್ನು ಹೊಂದಿದವನಾಗಿಲ್ಲ. ||೩೩||

ಅನ್ನ, ಪಾನ ಇವೇ ಮೊದಲಾದ ಭೋಗ್ಯವಸ್ತುಗಳ ಸವಿಯನ್ನು ಅನುಭವಿಸುವ ಭೋಗಿಯಂತೆ ಕಾಣುತ್ತಿರುವನು. ಸರ್ವೇಂದ್ರಿಯಗಳಿಗೂ ಅತೀತನಾಗಿರುವನು. ಸರ್ವವಸ್ತುಗಳಲ್ಲಿಯೂ ಪ್ರಕಾಶಮಾನವಾಗಿರುವನು. ||೩೪||

ಅಸ್ಪಷ್ಟವಾದ ಆಕಾರವುಳ್ಳವನಾದರೂ, ವ್ಯಕ್ತವಾದ ಆಕಾರವಿಶಿಷ್ಟನಾಗಿ ಜಗದ್ರೂಪದಿಂದ ಜಗತ್ತನ್ನು ಬೆಳೆಸುತ್ತಿರುವನು. ಇದು ಅವನ ಲೀಲೆಯು. ಅವಿದ್ಯಾಪ್ರಭಾವದಿಂದ ಸಂಸಾರಕ್ಕೆ ಸಿಕ್ಕುವನು. ವಿದ್ಯಾಮಹಿಮೆಯಿಂದ ಮುಕ್ತನಾಗುವನು. ||೩೫||

ಪರಶಿವನು ಯಾವ ಆಧಾರದಮೇಲೂ ನಿಂತಿಲ್ಲ. ತಾನು ಮಾತ್ರ ಸಕಲ ಪ್ರಪಂಚಕ್ಕೂ ಆಧಾರಭೂತನಾಗಿರುವನು. ಇದಕ್ಕೆ ಅವನಲ್ಲಿರುವ ನಿಜವಾದ ಮಹಿಮೆಯೇ ಕಾರಣ. ಯತಿಗಳಾದವರು ಇಂತಹ ಪರಶಿವನ ಶಕ್ತಿಯನ್ನು ಉಪನಿಷತ್ತುಗಳಲ್ಲಿ ಸ್ಪಷ್ಟವಾಗಿ ಕೇಳಿದ್ದರೂ, ಅಜ್ಞಾನದಿಂದ ಎಷ್ಟೋವೇಳೆ ಮೋಹಗೊಳ್ಳುವರು. ||೩೬||

ಯಸ್ತ್ವೇನಂ ವೃಣುತೇ ದೇವಾಸ್ತಸ್ಯೈವಾತ್ಮಾ ಪ್ರಕಾಶತೇ ।
ಯ ಆತ್ಮಾ ಸರ್ವಭೂತಸ್ಥೋ ಜಡಾನಾಂ ವಿದುಷಾಮಪಿ ॥೩೭॥

ಯೋ ಜಗಜ್ಜನ್ಮಮರಣೈರಶೀರ್ಯೋ ನ ಹಿ ಶೀರ್ಯತೇ ।
ಯೋಽಹ್ಯಾಗತೈರ್ದುಃಖಸಂಘೈಸ್ಸುಖೈರ್ವಾ ಸ್ಪೃಶ್ಯತೇ ನ ಹಿ ॥೩೮॥

ಯಸ್ಮಿನ್ ಜ್ಞಾತೇಽಖಿಲಂ ಜ್ಞಾತಂ ನ ಕಿಂಚಿದವಶಿಷ್ಯತೇ ।
ಯಮವಿಜ್ಞಾಯ ವಿಶ್ವೇಶಂ ದುಃಖಾಂತಂ ನಾಧಿಗಚ್ಛತಿ ॥೩೯॥

ಯೋಽಸಂಗಃ ಪುರುಷೋ ನಿತ್ಯಸ್ಸ್ಥಾಣುವನ್ನಿಶ್ಚಲೋ ಗುಣಃ ।
ಯೋ ನ ಜೀವಶ್ಶಿವಶ್ಚಾಪಿ ಚಾನ್ಯೋಪಾಧಿವಿವರ್ಜಿತಃ ॥೪೦॥

---

ಎಲೈ ದೇವತೆಗಳಿರಾ, ಯಾವ ಮನುಷ್ಯನು ಈ ಪರಮೇಶ್ವರನನ್ನು ಭಕ್ತಿಯಿಂದಾರಾಧಿಸುವನೋ, ಅವನಲ್ಲಿ ಆತ್ಮರೂಪದಿಂದಲೇ ತಾನಿರುವನು. ಜಡರ ಮತ್ತು ವಿದ್ವಾಂಸರ, ಮತ್ತು ಸಮಸ್ತ ಪ್ರಾಣಿಗಳ ಹೃದಯದಲ್ಲಿ ಅಡಗಿರುವವನೂ ಈ ಪರಶಿವನೇ. ॥೩೭॥

ಅವನಿಗೆ ಜಗತ್ತಿನಲ್ಲಿ ಕಂಡುಬರುವ ಜನನ, ಮರಣಾದಿಗಳು ಯಾವುವೂ ಇಲ್ಲ. ಯಾರಿಂದಲೂ ಆ ವಿಕಾರಗಳನ್ನು ಅವನಲ್ಲಿ ಕಲ್ಪಿಸಲು ಸಾಧ್ಯವೂ ಇಲ್ಲ. ಅಕಸ್ಮಾತ್ತಾಗಿ ಒದಗುವ ದುಃಖಪರಂಪರೆಗಳಿಗಾಗಲಿ, ಸೌಖ್ಯಗಳಿಗಾಗಲಿ ಸಿಕ್ಕತಕ್ಕವನೂ ಅಲ್ಲ. ॥೩೮॥

ಯಾವನಿಗೆ ಮಹೇಶ್ವರನ ಜ್ಞಾನವು ಸಂಪೂರ್ಣ ದೊರಕುವುದೋ, ಅವನು ಸರ್ವಜ್ಞನೆನಿಸುವನು. ಅವನ ಸ್ವರೂಪವನ್ನು ತಿಳಿಯದವನಿಗೆ ದುಃಖಗಳು ಎಂದಿಗೂ ಕೊನೆಯಾಗಲಾರವು. ॥೩೯॥

ಮಾಯೋಪಾಧಿಯಿಂದ ವಿವರ್ಜಿತನಾದರೆ, ಮಹೇಶ್ವರನು ಯಾವ ವಸ್ತುವಿನಲ್ಲಿಯೂ ತೋರಲಾರನು. ಸ್ಥಾಣುವಿನಂತೆ ನಿಶ್ಚಲನಾಗಿ ನಿರ್ಗುಣನಾಗಿ ನಿಲ್ಲುವನು. ಆಗ ಅವನು ಶಿವನೂ ಅಲ್ಲ. ಜೀವನೂ ಅಲ್ಲ. ॥೪೦॥

ಪಂಚಕೋಶಾತಿಗೋ ಹ್ಯಾತ್ಮಾ ಸದಾನಂದಘನಸ್ಸುಖಂ ।
ಏಕೋಽದ್ವಯಸ್ತೃತೀಯಶ್ಚ ನ ವೈ ಸ ಬಹುಧಾ ವಿಭುಃ ॥೪೧॥

ಯೋಽಂತಿಕೇ ಸ ಹಿ ದೂರಸ್ಥಸ್ತೇನಾವಾಸ್ಯಮಿದಂ ಸುರಾಃ ।
ಸ ಭೂಮಾ ಪರಮಾನಂದ ಆರ್ತಮೇತಜ್ಜಗತ್ಸುರಾಃ ॥೪೨॥

ತಜ್ಜಂ ತಲ್ಲಂ ಚ ತದನಂ ಜಗದೇತತ್ಪ್ರಕಾಶತೇ ।
ಯಸ್ತಮಃ ಪಾರಗೋ ನಿತ್ಯಂ ಮನೋ ವಾಚಾಮಗೋಚರಃ ॥೪೩॥

ಯಸ್ಯೈವ ಶಕ್ತಿರ್ವಿವಿಧಾ ಸ್ವಭಾವಾತ್ ಜ್ಞಾನದಾ ಸುರಾಃ ।
ಸ ಏಷ ಪರಮಾನಂದಸ್ಸದಸತ್ಪಕ್ಷವರ್ಜಿತಃ ॥೪೪॥

ಲಿಂಗಹೀನಸ್ಸದಾಽಸಂಗೋ ಯೋ ವೇದಾಂತೈಕಗೋಚರಃ ।
ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ ಸೂಕ್ಷ್ಮಯಾ ಸೂಕ್ಷ್ಮರಶ್ಮಿಭಿಃ ॥೪೫॥

---

ಪಂಚಕೋಶಗಳಿಗೆ ಸಿಕ್ಕದೆ ಕೇವಲ ಸದಾನಂದರೂಪಿಯಾಗಿ ಸಜಾತೀಯ ವಿಜಾತೀಯ ರಹಿತನಾಗಿರುವನು. ನಿಜವಾಗಿಯೂ ಪರಮಾತ್ಮನು ಎರಡು ರೂಪದಿಂದ ಇಲ್ಲ. ಇನ್ನು ಮೂರನೆಯ ವಿಧವೆಲ್ಲಿ ಬಂತು? ಆದರೆ ವ್ಯವಹಾರದಲ್ಲಿ ಮಾತ್ರ ಮಾಯಾವರಣದಿಂದ ಅನೇಕ ರೂಪವಾಗಿ ತೋರಿಬರುತ್ತಿರುವನು. ॥೪೧॥

ಅವನು ಸಮೀಪದಲ್ಲಿಯೂ ಇರುವನು. ದೂರದಲ್ಲಿಯೂ ಕಾಣುವನು. ಅವನಿಂದಲೇ ಈ ಜಗತ್ತೆಲ್ಲವೂ ಮುಚ್ಚಲ್ಪಟ್ಟಿದೆ. ಅವನು ಕೇವಲ ಶುದ್ಧವಾದ ಆನಂದಸ್ವರೂಪಿಯು. ಈ ಜಗತ್ತಾದರೋ ದುಃಖಭೂಯಿಷ್ಠವಾದುದು. ॥೪೨॥

ಈ ಜಗತ್ತು ಶಂಭುವಿನಿಂದಲೇ ಹುಟ್ಟಿದೆ; ಕೊನೆಗೆ ಅವನಲ್ಲಿಯೇ ಅಡಗುತ್ತದೆ. ಆದರೆ ತದ್ಭಿನ್ನವಾಗಿ ಮಾತ್ರ ಕಾಣುತ್ತಿದೆ. ಮನಸ್ಸಿಗೂ ಮಾತಿಗೂ ಅಗೋಚರನಾಗಿ ಅಜ್ಞಾನನಿವಾರಕನಾಗಿರುವವನು ಆ ಪರಮೇಶ್ವರನಲ್ಲದೆ ಮತ್ತೆ ಯಾರಿರುವರು? ॥೪೩॥

ಸ್ವಭಾವವಾಗಿಯೇ ಪರಶಿವನ ಶಕ್ತಿಯು ನಾನಾರೂಪದಲ್ಲಿರುವುದು. ಆ ಪರಮೇಶ್ವರನು ಕೇವಲ ಆನಂದಮಯನು. ಸತ್, ಅಸತ್ ಈ ಎರಡು ಪಕ್ಷಗಳೂ ಆತನಲ್ಲಿಲ್ಲ. ॥೪೪॥

ಮಾನವರಲ್ಲಿ ಕಂಡುಬರುವ ಲಿಂಗಶರೀರವು ಪರಶಿವನಿಗಿಲ್ಲ. ಸಂಗವಿವರ್ಜಿತ

ಮುಕ್ತಯೇ ದೇಹಿಸಂಘಾನಾಂ ಸುಲಭೋಽವ್ಯಕ್ತತಾಂ ಗತಃ ।
ತ್ರಿಣೇತ್ರೋ ನೀಲಕಂಠಶ್ಚ ಚೋಮಾದೇಹಾರ್ಧವಿಗ್ರಹಃ ॥೪೬॥

ಕ್ರೀಡತೇ ಪ್ರಮಥಾಧೀಶೋ ಹೇರಂಬಸ್ಕಂದಪುತ್ರವಾನ್ ।
ಸರ್ವಾವಾಸೋಽಪಿ ಭಗವಾನ್ ಕೈಲಾಸಾಚಲಮಾಸ್ಥಿತಃ ॥೪೭॥

ಯಸ್ಯ ಲಿಂಗಾರ್ಚನೇನೈವ ತ್ರೈಲೋಕ್ಯಶ್ರೀರವಾಪ್ಯತೇ ।
ಯಸ್ಯ ಪ್ರಸಾದಾದ್ವಿಷ್ಣುತ್ವಂ ತ್ವಯಾ ಪ್ರಾಪ್ತಂ ಸುದರ್ಶನಂ ॥೪೮॥

ಬ್ರಹ್ಮಣಸ್ಸೃಷ್ಟಿಸಾಮರ್ಥ್ಯಂ ಇಂದ್ರಸ್ಯಾಪ್ಯರಿನಿಗ್ರಹಃ ।
ದೇವರಾಜ್ಯಂ ಭೋಗಭಾಗ್ಯಂ ಸರ್ವಮೈಶಾದನುಗ್ರಹಾತ್ ॥೪೯॥

---

ನಾಗಿ, ಉಪನಿಷದ್ಗೋಚರನಾಗಿ, ಸೂಕ್ಷ್ಮವಾದ ಜ್ಞಾನಕ್ಕೆ ಗೋಚರನೆನಿಸಿ, ಸೂಕ್ಷ್ಮಜ್ಞಾನಿಗಳಿಗೆ ಮುಕ್ತಿಪ್ರದಾಯಕನಾಗಿರುವವನೇ ಈ ಮಹೇಶ್ವರನು. ॥೪೫॥

ಸಮಸ್ತ ಪ್ರಾಣಿಗಳ ಗುಂಪಿಗೆ ಮುಕ್ತಿಯನ್ನು ಕೊಡುವವನು ಈ ಪರಶಿವನು. ಸುಲಭನಾದವನು. ಅವನ ನಿಜವಾದ ರೂಪವನ್ನು ತಿಳಿಯಲು ಜನರಿಗೆ ಸಾಧ್ಯವಿಲ್ಲ. ಆದರೆ ಮೂರು ಕಣ್ಣುಗಳಿಂದಲೂ, ನೀಲವಾದ ಕಂಠದಿಂದಲೂ, ಅರ್ಧನಾರೀಶ್ವರನಾಗಿಯೂ ಕಂಡುಬರುತ್ತಿರುವನು. ॥೪೬॥

ಪ್ರಮಥಗಣಗಳಿಗೆ ಒಡೆಯನಾಗಿರುವನು. ಗಣಪತಿ, ಮತ್ತು ಕುಮಾರಸ್ವಾಮಿ ಇವರಿಗೆ ತಂದೆಯಾಗಿ ಕ್ರೀಡಿಸುವನು. ಕೈಲಾಸಪರ್ವತದಲ್ಲಿ ವಾಸಮಾಡುತ್ತಿರುವನು. ಸರ್ವವಸ್ತುಗಳಿಗೂ ಆಶ್ರಯನಾಗಿರುವನು. ಷಡ್ಗುಣೈಶ್ವರ್ಯಸಂಪನ್ನನಾಗಿ ತೋರುತ್ತಿರುವನು. ॥೪೭॥

ಎಲೈ ವಿಷ್ಣುವೇ, ನೀನೂ ಸಹ ಲಿಂಗಾರ್ಚನೆಯಿಂದಲೇ ಅಲ್ಲವೇ, ಮೂರು ಲೋಕಗಳ ಐಶ್ವರ್ಯವನ್ನು ಪಡೆದವನಾಗಿರುವೆ. ಶಂಕರನ ಅನುಗ್ರಹದಿಂದಲೇ ಅಲ್ಲವೇ ನೀನು ಇಂದು ವಿಷ್ಣುವೆನಿಸಿ ಸುದರ್ಶನವೆಂಬ ಚಕ್ರವನ್ನು ಸಂಪಾದಿಸಿರುವುದು ! ॥೪೮॥

ಬ್ರಹ್ಮನು ಸೃಷ್ಟಿಕರ್ತನಾಗಿರುವುದೂ, ಇಂದ್ರನು ಶತ್ರುನಿಗ್ರಹಮಾಡಿರುವುದೂ ಶಿವಾನುಗ್ರಹಬಲದಿಂದಲೇ ಅಲ್ಲವೇ ? ಅಲ್ಲದೆ! ದೇವತೆಗಳಿಗೆ ಸಕಲ ಭೋಗಭಾಗ್ಯಗಳೂ ಶಿವಕೃಪೆಯಿಂದಲೇ ಒದಗಿವೆ. ॥೪೯॥

ನ ತತ್ರ ಸೂರ್ಯೋ ದೇವೇಶೋ ಭಾತಿ ಚಂದ್ರೋ ನ ಚಾನಲಃ ।
ಭೀತ್ಯಾ ಭಾಂತಿ ಚ ಸರ್ವೇಽಪಿ ಸೋಽಂತರಾ ಪುರುಷೋ ಹರಃ ॥೫೦॥

ಹಿರಣ್ಯಬಾಹುರೀಶಾನೋ ಹಿರಣ್ಯಪತಿರೀಶ್ವರಃ ।
ಕರ್ಮದೇವಾಸ್ಸರ್ವ ಏವ ಬ್ರಹ್ಮವಿಷ್ಣುಮಹೇಶ್ವರಾಃ ॥೫೧॥

ಯಸ್ಯಾಜ್ಞಾವರ್ತಿನಸ್ಸರ್ವೇ ಸರ್ವೇಷಾಂ ಕಾರಣಂ ಶಿವಂ ।
ಬ್ರಹ್ಮಣಶ್ಚ ಶಿರಶ್ಛಿನ್ನಂ ದೇವದೇವೇನ ಲೀಲಯಾ ॥೫೨॥

ಇಂದ್ರಸ್ಯಾಸ್ಯ ಭುಜಸ್ತಂಭೋ ಯೇನಾಕಾರಿ ದಯಾಲುನಾ ।
ಯಸ್ಯ ಭಕ್ತಸ್ಯ ಶಾಪೇನ ದಶಜನ್ಮಾನಿ ತೇ ಹರೇ ॥೫೩॥

ಸೌಕರಂ ನಾರಸಿಂಹ್ಯಂತೇ ರೂಪಂ ಸುಶಿಕ್ಷಿತಂ ಹರಾತ್ ।
ಸರ್ವಂ ಜಾನಾಮಿ ತೇ ವಿಷ್ಣೋ ಬ್ರಹ್ಮನ್ ಶಕ್ರ ಗತವ್ಯಥಾಃ ॥೫೪॥

---

ಸೂರ್ಯ, ಚಂದ್ರ, ಅಗ್ನಿ ಇವರು ನಿಜವಾಗಿಯೂ ಸ್ವಯಂ ಪ್ರಕಾಶಿಸಲಾರರು. ಮಹೇಶ್ವರಾನುಗ್ರಹದಿಂದ ತೇಜಸ್ವಿಗಳಾಗಿ ಮಹೇಶ್ವರನ ಭಯದಿಂದಲೇ ಇಂದು ಲೋಕಗಳನ್ನು ಬೆಳಗುತ್ತಿರುವರು. ॥೫೦॥

ಸುವರ್ಣಾಭರಣಗಳಿಂದ ಹೊಳೆಯುವ ಬಾಹುವುಳ್ಳವನೂ, ಈಶಾನನೂ, ಸುವರ್ಣಗಳಿಗೆ ಅಧಿಪತಿಯೂ ಆಗಿರುವವನು ಸಾಕ್ಷಾತ್ಪರಮೇಶ್ವರನು. ಇನ್ನುಳಿದ ಬ್ರಹ್ಮ, ವಿಷ್ಣು, ಮಹೇಶ್ವರರೆಲ್ಲಾ ಕರ್ಮದೇವತೆಗಳು. ಕರ್ಮಫಲವನ್ನು ಅನುಭವಿಸುವವರು. ॥೫೧॥

ಅಲ್ಲದೆ ಎಲ್ಲರೂ ಶಿವಾಜ್ಞಾಪಾಲಕರು. ಸರ್ವಕಾರ್ಯಕ್ಕೂ ಮೂಲಕಾರಣನು ಶಂಕರನು. ದೇವದೇವನಾದ ಪರಮೇಶ್ವರನು ಲೀಲಾರ್ಥವಾಗಿ ಬ್ರಹ್ಮನ ತಲೆಯನ್ನು ಸುಲಭವಾಗಿ ಕತ್ತರಿಸಿದನು. ॥೫೨॥

ಶಿವಮಹಿಮೆಯಿಂದ ಹಿಂದೆ ಇಂದ್ರನ ಭುಜವು ಕಂಬದಂತೆ ನಿಶ್ಚಲವಾಗಿ ನಿಂತುಬಿಟ್ಟಿತು. ಹರಭಕ್ತಾಗ್ರೇಸರನಾದ ಭೃಗುಮಹರ್ಷಿಯ ಶಾಪದಿಂದಲೇ ಅಲ್ಲವೇ, ಎಲೈ ವಿಷ್ಣುವೇ, ನಿನಗೆ ಹತ್ತು ಅವತಾರದ ಜನ್ಮಗಳು ದೊರೆತವು? ॥೫೩॥

ಎಲೈ ವಿಷ್ಣುವೇ, ಹಿಂದೆ ನೀನು ವರಾಹಾವತಾರ, ನಾರಸಿಂಹಾವತಾರ ಮಾಡಿದ ಕಾಲದಲ್ಲಿ ನಿನ್ನನ್ನು ಆ ಕಾರ್ಯಕ್ಕೆ ಸಮರ್ಥನನ್ನಾಗಿ ಮಾಡಿದವನು ಮಹೇಶ್ವರ

ಯೂಯಂ ಹಿ ಪಶವೋಽಜ್ಞಾನಜೃಂಭಿತಾಃ ಪಶುಪಸ್ಸ ಹಿ ।
ಗಚ್ಛಂತ್ವದ್ಯ ಯಥಾಕಾಮಂ ಮಾದೃಕ್ಷೇ ನಾಸ್ತಿ ಧೃಷ್ಟತಾ ॥೫೫॥

ಭವಂತೋ ದೇವತಾಸ್ಸರ್ವೇ ತ್ವಹಂ ಶರ್ವಪದಾಶ್ರಯಃ ।
ಇತ್ಯುಕ್ತ್ವಾ ಧ್ಯಾನಮಾತಿಷ್ಠತ್ ಜೈಗೀಷವ್ಯೋ ಮಹಾಮುನಿಃ ॥೫೬॥

ಧ್ಯಾನೇನ ತೇನ ಮಹತಾ ಚೇದಮಾಹ ತದಾ ದ್ವಿಜಾಃ ।

॥ ಜೈಗೀಷವ್ಯ ಉವಾಚ ॥

ಯಚ್ಚ ಬ್ರಹ್ಮ ಜಗಜ್ಜಗಚ್ಚ ಯದೃತೇ ನಾಸ್ತೀತಿ ವದ್ಯಂ ಪದಂ ।
ತ್ವೇವಂ ಯೇ ವಿದುರೀಶ್ವರೇಶ್ವರಧಿಯಾ ತೇ ಯಾಂತಿ ಶಂಭೋಃ ಪದಂ ॥
ತೇ ಲೋಕಾನ್ ಹಿ ನ ಯಾಂತಿ ಯಾಪಿತಮಹಾದುಃಖಾಭಿತಪ್ತಾಪದಃ ।
ಸೌಖ್ಯಂ ಚಾಪಿ ಸಮಾಪ್ನುವಂತಿ ಭಗವನ್ ತ್ವದ್ಭಕ್ತಿಸಾರಾದರಾಃ ॥೫೭॥

---

ನಲ್ಲವೇ? ಇದನ್ನೆಲ್ಲಾ ನಾನು ತಿಳಿದಿರುವೆನು. ಈಗ ನೀವೆಲ್ಲರೂ ಸುಖಿಗಳಾಗಿರುವುದು ಸಾಕ್ಷಾತ್ಪರಮೇಶ್ವರನಿಂದ. ॥೫೪॥

ನೀವೆಲ್ಲರೂ ಅಜ್ಞಾನಿಗಳು, ಪಶುಸದೃಶರು. ನಿಮಗೆ ಜ್ಞಾನದಾಯಕನಾಗಿ ಪಶುಪತಿಯಂತಿರುವವನು ಮಹೇಶ್ವರನು. ಆದ್ದರಿಂದ ನಿರ್ಯೋಚನೆಯಿಂದ ನೀವು ಪ್ರಯಾಣಮಾಡಿರಿ. ನನ್ನಂತಹರಲ್ಲಿ ಎಂದಿಗೂ ಕಠಿನಗುಣವು ಇರಲಾರದು. ॥೫೫॥

ನೀವೆಲ್ಲರೂ ದೇವಾಂಶಸಂಭೂತರು. ನಾನಾದರೋ ಕೇವಲ ಈಶ್ವರಪಾದ ಸೇವಕನು; ಎಂದು ಹೇಳುತ್ತಲೇ ಜೈಗೀಷವ್ಯಮಹಾಮುನಿಯು ಶಿವಮೂರ್ತಿ ಧ್ಯಾನದಲ್ಲಿ ನಿರತನಾಗಿ ಸಮಾಧಿಗತನಾದನು. ೫೬॥

ಹೀಗೆ ಧ್ಯಾನಮಗ್ನನಾದ ಜೈಗೀಷವ್ಯನು ಈರೀತಿಯಾಗಿ ಮಹೇಶ್ವರನನ್ನು ಸ್ತುತಿಸಿದನು—ಹೇ ಪರಮೇಶ್ವರನೆ, ಯಾರು "ಈ ಜಗತ್ತು ಮಾಯಾವಿಲಸಿತವಾದದ್ದು. ಮಾಯೋಪಾಧಿಯಿಂದ ಕಾಣುವ ಬ್ರಹ್ಮನೇ, ಜಗತ್ತು" ಎಂದು ತಿಳಿದು ಸಕಲ ಪ್ರಪಂಚವನ್ನೂ ಈಶ್ವರಾಭೇದಬುದ್ಧಿಯಿಂದ ತಿಳಿಯುವರೋ, ಅವರೇ ಜ್ಞಾನಿಗಳು. ಅವರೇ ನಿನ್ನ ಸ್ಥಾನವನ್ನು ಹೊಂದತಕ್ಕವರು. ಅಂತಹ ಜ್ಞಾನಿಗಳು ಯಾವ ಜನ್ಮವನ್ನೂ ಪುನಃ ಪಡೆಯದೆ, ಸರ್ವದುಃಖನಿರ್ಮುಕ್ತರಾಗಿ, ನಿತ್ಯಾನಂದಮಯವಾದ ನಿನ್ನ ಸಾಯುಜ್ಯವನ್ನು ಪಡೆದು ಮುಕ್ತರೆನಿಸುವರು. ॥೫೭॥

**ಬಾಹುಭ್ಯಾಂ ತವ ಧನ್ವನೇ ಚ ಭಗವನ್ ಕುರ್ವೇ ನಮಸ್ಸ್ವಸ್ತಯೇ।**
**ಭೀತಾಸ್ತ್ವದ್ಧನುಷಃ ಕರಾಗ್ರವಿಶಿಖೈರ್ಹೇತ್ಯಾ ಶರವ್ಯಾಯ ಚ ॥**
**ಪಾಹೀಶ ಪ್ರವಿಮುಚ್ಯ ಜ್ಯಾಮಥ ಧನುಃಕೋಟ್ಯೋಶ್ಮರಾನ್ ಸಂತ್ಯಜನ್ ।**
**ಹೇತಿಂ ಪಾತಯ ಮಾಂ ವಿಲೋಕಯ ದೃಶಾ ದೂರೇ ನಿಷಂಗಂ ತ್ಯಜ॥೫೮॥**

**ಶೈವೇಂದ್ರಾಶ್ಶಿವಸಂಮುತಾಸ್ಸುರವರಾಷಾರವ್ಯಥಾಭೀತಿತೋ ।**
**ನೋ ಬಿಭ್ಯಂತಿ ನ ಚಾಪ್ನುವಂತಿ ಚ ಹರೇ ಯುಷ್ಮದ್ವರಾನ್ ಕಿಂ ಫಲಾನ್ ॥**
**ಕಿಂತ್ವೀಶಾನಪದಾರವಿಂದಭಜನಾನ್ನಾನ್ಯನ್ಮನಶ್ಚಿಂತ್ಯತೇ ।**
**ಕ್ಷುದ್ರೇಷು ಪ್ರಭವಿಷ್ಣವೋ ನ ಹಿ ವಯಂ ಯಾತ ಸ್ವಧಾಮಂ ಸುರಾಃ॥೫೯॥**

**ಹಾರಾ ಏವ ಭವಂತಿ ಭಾಗ್ಯನಿವಹೈಶ್ಶ್ರೀಚಂದ್ರಚೂಡಾರ್ಚಕಾ ।**
**ಸ್ತೇಷಾಂ ತ್ವತ್ಪದವಾಸನಾಪಿ ಸುತರಾಂ ವಾಣೀಶಶಕ್ರಾಲಯಂ ॥**

---

ಮಹೇಶ್ವರನೇ, ನಿನ್ನ ಬಲಿಷ್ಠವಾದ ಬಾಹುಗಳಿಗೂ, ಶಕ್ತಿಯುತವಾದ ಧನುಸ್ಸಿಗೂ ವಂದಿಸುವೆನು. ಇದರಿಂದ ನಮಗೆ ಸಕಲ ಸನ್ಮಂಗಳಗಳೂ ಲಭಿಸುವುವು. ಭಗವಂತನೇ, ನಿನ್ನ ಕೈಯ್ಯಲ್ಲಿರುವ ಕ್ರೂರವಾದ ಬಾಣಗಳಿಗೂ ನಿಶಿತವಾದ ಆಯುಧಗಳಿಗೂ ನಾನು ಬಹಳವಾಗಿ ಹೆದರುವೆನು. ಮಹೇಶ್ವರನೇ, ನನ್ನ ಮೇಲಿನ ದಯೆಯಿಂದ, ಬಿಲ್ಲುಬಾಣಗಳನ್ನೂ ಉಗ್ರಾಯುಧಗಳೆಲ್ಲವನ್ನೂ ದೂರಮಾಡು. ನಿನ್ನ ಕೃಪಾದೃಷ್ಟಿಯೊಂದನ್ನು ಮಾತ್ರ ನನ್ನ ಮೇಲೆ ಬೀರು. ॥೫೮॥

ಎಲೈ ಇಂದ್ರಾದಿದೇವತೆಗಳಿರಾ, ನಿಜವಾದ ಶಿವಭಕ್ತರಾಗಿ, ಶಿವಾನುಗ್ರಹಕ್ಕೆ ಪಾತ್ರರಾದವರು ಎಂದಿಗೂ ದುಃಖಭಾಗಿಗಳಾಗುವುದಿಲ್ಲ. ಅವರಿಗೆ ಯಾವ ವಿಧವಾದ ಭಯವೂ ಒದಗುವುದಿಲ್ಲ. ಅಂತಹವರು ನಿಮ್ಮ ವರಗಳನ್ನು ಲೆಕ್ಕಿಸುವುದೂ ಇಲ್ಲ. ಅವರಿಗೆ ಮಹೇಶ್ವರನ ಪಾದಾರವಿಂದಧ್ಯಾನ ಹೊರತು ಮತ್ತಾವುದೂ ಅವಶ್ಯವೆನಿಸುವುದಿಲ್ಲ. ಶಿವಾನುಗ್ರಹಪೂತರಾದ ನಾವು ಎಂದೂ ಅಲ್ಪವಿಷಯಗಳಿಗೆ ಮನಗೊಡುವುದಿಲ್ಲ. ಆದ್ದರಿಂದ ನಿಮ್ಮ ನಿಮ್ಮ ಸ್ಥಾನಗಳನ್ನು ಕುರಿತು ನೀವು ಈಗಲೇ ಪ್ರಯಾಣಮಾಡಿರಿ. ॥೫೯॥

ಎಲೈ ಬ್ರಹ್ಮಾದಿದೇವತೆಗಳೇ, ಶ್ರೀ ಚಂದ್ರಶೇಖರನನ್ನು ಭಕ್ತಿಯಿಂದರ್ಚಿಸಿ, ಅವನ ಅನುಗ್ರಹಕ್ಕೆ ಪಾತ್ರರಾದವರು, ಪರಮೇಶ್ವರನ ಕಂಠದಲ್ಲಿ ಹಾರದಂತೆ ವರ್ತಿಸಿ, ಅವನ ಪದವಿಯನ್ನೇ ಪಡೆಯುವರು. ಅಂತಹವರಿಗೆ ನಿಮ್ಮ ಸ್ಥಾನಮಾನಗಳು

ಕಿಂ ಜಾಯೇತ ಗಿರೀಂದ್ರಶೇಖರಗತೋ ಮತ್ತದ್ವಿಪಾಲಿಂ ಭಿನ।
ತ್ಸಿಹ್ಮಃ ಕಿಂ ತೃಣಮತ್ತಿ ತದ್ವದಿಹ ನೋ ತ್ವತ್ತೋ ವರಾಣಾಂ ಸ್ಪೃಹಾ ॥೬೦॥

ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ಜೈಗೀಷವ್ಯಸುರಸಂವಾದೋ
ನಾಮ ತೃತಿಯೋಽಧ್ಯಾಯಃ

---

ಸ್ವಲ್ಪವೂ ಬೇಕೆನಿಸುವುದಿಲ್ಲ. ಪರ್ವತಾಗ್ರದಲ್ಲಿ ನಿಂತು ಮದ್ದಾನೆಗಳ ಕುಂಭಸ್ಥಳವನ್ನು ಸೀಳುವ ಸಿಂಹವು ಎಂದಾದರೂ ಹುಲ್ಲನ್ನು ತಿನ್ನಲು ಯತ್ನಿಸುವುದೇ? ಅದರಂತೆ ನಮಗೆ ನಿಮ್ಮ ವರಗಳು ತೃಣಪ್ರಾಯಗಳು. ನೀವು ಕೊಡುವ ವರಗಳಲ್ಲಿ ನಮಗೆ ಸ್ವಲ್ಪವೂ ಪ್ರೀತಿಯಿಲ್ಲ ಎಂದು ಜೈಗೀಷವ್ಯಮಹಾಮುನಿಯು ಇಂದ್ರಾದಿಗಳಿಗೆ ಹೇಳಿ ಸುಮ್ಮನಾದನು. ॥೬೦॥

ಇಲ್ಲಿಗೆ ಶ್ರೀಶಿವರಹಸ್ಯದ ಪ್ರಥಮಾಂಶದಲ್ಲಿ ಜೈಗೀಷವ್ಯಸುರಸಂವಾದರೂಪವಾಗಿ
ಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

# ಅಥ ಶ್ರೀಶಿವರಹಸ್ಯೇ

## ಚತುರ್ಥೋಽಧ್ಯಾಯಃ

॥ ದೇವಾ ಊಚುಃ ॥

ತವ ಭಾವಮಹೋ ಜ್ಞಾತುಮಾಗತಾ ವಯಮದ್ಯ ವೈ ।
ಸ ಏವ ಸರ್ವಕಾಮಾನಾಂ ಪೂರಕೋಽಸ್ತಿ ನ ಸಂಶಯಃ ॥೧॥

ಕಿಂ ತವಾಸುಕರಂ ವಿದ್ವಂಸ್ತ್ರಿಷು ಲೋಕೇಷು ವಿದ್ಯತೇ ।
ತ್ವನ್ಮನೋ ಧ್ಯಾಯತಿ ಸದಾ ಯತಶ್ಶಿವಪದಾಂಬುಜಂ ॥೨॥

ಯೇಷಾಂ ಮನಸಿ ವಿಶ್ವೇಶಪದಾಂಬುಜಯುಗಂ ಭವೇತ್ ।
ತೇಷಾಂ ಕಿಂ ಭುವನೇಶ್ವರ್ಯೈರ್ವಿನಶ್ವರತರೈರ್ಮುನೇ ॥೩॥

---

### ಶ್ರೀಶಿವರಹಸ್ಯದಲ್ಲಿ ನಾಲ್ಕನೆಯ ಅಧ್ಯಾಯ

ಜೈಗೀಷವ್ಯಮಹರ್ಷಿಯು ಹಾಗೆ ಶಿವಮಹಿಮೆಯನ್ನು ವರ್ಣಿಸಿದುದನ್ನು ಕೇಳಿ ದೇವತೆಗಳು ವಿಸ್ಮಿತರಾಗಿ ಆ ಮುನಿಯನ್ನು ಕುರಿತು ಹೀಗೆ ಹೇಳತೊಡಗಿದರು. "ಮಹರ್ಷಿಯೇ, ನಿನ್ನ ಮನಃಪರೀಕ್ಷೆಗಾಗಿಯೇ ನಾವೆಲ್ಲರೂ ಇಲ್ಲಿಗೆ ಬಂದೆವು. ನೀನು ಹೇಳಿದಂತೆ ಭಕ್ತರ ಸಕಲೇಷ್ಟಾರ್ಥಗಳನ್ನು ಈಡೇರಿಸುವ ಸ್ವಾಮಿಯೆಂದರೆ, ಪರಮೇಶ್ವರನೇ. ಅದರಲ್ಲಿ ಶಂಶಯವಿಲ್ಲ. ॥೧॥

ನಿನ್ನ ಮನಸ್ಸು ಯಾವಾಗಲೂ ಪರಶಿವನ ಪಾದಾರವಿಂದಧ್ಯಾನದಲ್ಲಿಯೇ ಇರುವುದರಿಂದ ನಿನಗೆ ಅಸಾಧ್ಯವಾದ ವಸ್ತುವು ಮೂರುಲೋಕವಲ್ಲಿ ಯಾವುದು ತಾನೇ ಇರುವುದು ? ॥೨॥

ಯಾರು ಸಂಪೂರ್ಣವಾಗಿ ಶಿವಪಾದಧ್ಯಾನನಿರತರಾಗಿರುವರೋ, ಅಂತಹವರಿಗೆ ನಶ್ವರವಾದ ಇತರ ಐಶ್ವರ್ಯಗಳ ಸಂಬಂಧವು ಯಾವ ಸುಖವನ್ನುಂಟುಮಾಡೀತು ? ॥೩॥

ಯತೋ ಮಹೇಶಕೃಪಯಾ ದೃಢಾ ಭಕ್ತಿರ್ಭವೇಚ್ಛಿವೇ ।
ಯಯಾ ಭಕ್ತ್ಯಾ ದ್ವಿಜವರಾಸ್ಸುರಾಸುರನರಾ ಅಪಿ ॥೪॥

ಮುಕ್ತಾಶ್ಚ ಮೋಚಯಂತ್ಯನ್ಯಾನ್ ಶೈವಾಃ ಕಾರುಣಿಕೋತ್ತಮಾಃ ।
ಭಕ್ತಿರೇವ ವಿರೂಪಾಕ್ಷೇ ಸರ್ವೇಷಾಂ ಮುಕ್ತಿದಾಯಿನೀ ॥೫॥

ಭಕ್ತ್ಯಾ ಸಂಪೂಜಿತೋ ಲಿಂಗೇ ಹ್ಯಲಿಂಗೇಪಿ ಮಹೇಶ್ವರಃ ।
ಬಿಲ್ವಪತ್ರೈಸ್ತತ್ಫಲೈರ್ವಾ ಭಸ್ಮನಾ ವಾ ಮಹಚ್ಛ್ರಿಯಂ ॥೬॥

ಪ್ರಾಪ್ನೋತಿ ಮುಕ್ತಿಸಾಮ್ರಾಜ್ಯಮಪುನರ್ಭವದಾಯಕಂ ।
ಭಸ್ಮಾಭಿಷಿಕ್ತಾ ಯೇ ಭಾವಾಸ್ತ್ರಿಪುಂಡ್ರಾಂಕಿತಮಸ್ತಕಾಃ ॥೭॥

ರುದ್ರಾಕ್ಷಮಾಲಾ ಕೋಟೀರಧಾರಿಣೋ ಮಾಲಿಕಾಧರಾಃ ।
ಪಂಚಾಕ್ಷರಾವೃತ್ತಿಪರಾ ರುದ್ರಾಧ್ಯಾಯಜಪಾದರಾಃ ॥೮॥

---

ಮಹೇಶ್ವರನಲ್ಲಿ ನಿಜವಾದ ಭಕ್ತಿಯುಂಟಾಗಬೇಕಾದರೂ, ಶಿವಾನುಗ್ರಹವು ಅದಕ್ಕೆ ಬೇಕು. ದೇವರಾಕ್ಷಸರಾಗಲಿ, ಮಾನವರಾಗಲಿ ಶಿವಭಕ್ತಿಯ ಮಹಿಮೆಯಿಂದ ಸುಲಭವಾಗಿ ಮುಕ್ತರಾಗಬಹುದು. ॥೪॥

ತಾವು ಮುಕ್ತರಾಗುವುದಲ್ಲದೆ, ಇತರರನ್ನೂ ಶಿವಾನುಗ್ರಹಕ್ಕೆ ಪಾತ್ರರನ್ನಾಗಿ ಮಾಡಿ, ಅವರಿಗೂ ಸದ್ಗತಿಯನ್ನುಂಟುಮಾಡುವರು. ಅಂತೂ ಪರಶಿವನ ಭಕ್ತಿಯು ಸರ್ವರಿಗೂ ಮುಕ್ತಿಪ್ರದವಾದದ್ದು. ॥೫॥

ಭಕ್ತನಾದವನು, ಶಿವಲಿಂಗವನ್ನಾಗಲಿ, ಶಿವಮೂರ್ತಿಯನ್ನಾಗಲಿ, ಬಿಲ್ವಪತ್ರೆಯಿಂದಲೂ, ಬಿಲ್ವಫಲಗಳಿಂದಲೂ, ಭಸ್ಮದಿಂದಲೂ ಅರ್ಚಿಸಿದ ಪಕ್ಷದಲ್ಲಿ ಆತನು ಅತಿಶಯವಾದ ಐಶ್ವರ್ಯವನ್ನು ಪಡೆಯುವನು. ॥೬॥

ಅಲ್ಲದೆ ಆತನು ಪುನರ್ಜನ್ಮವಿರಹಿತವಾದ ಮುಕ್ತಿಸುಖವನ್ನೂ ಹೊಂದುವನು. ಯಾರು ವಿಭೂತಿಯಿಂದ ತ್ರಿಪುಂಡ್ರವನ್ನು ಹಣೆಯಲ್ಲಿ ಧರಿಸಿ, ಭಕ್ತಿಯಿಂದ ಶಿವನಿಗೆ ಭಸ್ಮಾಭಿಷೇಕಮಾಡುವರೋ, ॥೭॥

ಅಲ್ಲದೆ ಯಾರು, ರುದ್ರಾಕ್ಷಿಯಸರವನ್ನೂ, ಕಿರೀಟವನ್ನೂ ಧರಿಸಿದವರಾಗಿ, ಶಿವಪಂಚಾಕ್ಷರಿಯ ಜಪದಿಂದಲೂ, ರುದ್ರಾಧ್ಯಾಯಪಾರಾಯಣದಿಂದಲೂ ಶಿವನನ್ನು ಅರ್ಚಿಸುವರೋ, ॥೮॥

ಶಿವಲಿಂಗಾರ್ಚಕಾಶ್ಶೈವಾಶ್ಶಿವಕ್ಷೇತ್ರನಿವಾಸಿನಃ ।
ನೈವೇದ್ಯಭೋಜಿನಶ್ಶಂಭೋರ್ಯಾತ್ರಾಪುಷ್ಪಫಲಾರ್ಪಕಾಃ ॥೯॥

ಅನನ್ಯಸ್ವಾಂತರಾ ವಿಪ್ರಾ ಮನೋವಾಕ್ಕಾಯಕರ್ಮಭಿಃ ।
ಶಿವಧ್ಯಾನೇನ ಸಂತೃಪ್ತಾಸ್ಸದಾಶಿವಕಥಾದರಾಃ ॥೧೦॥

ಗಣಯಂತಿ ಮಹಾಶ್ಶೈವಾ ನಾಸ್ಮಾನ್ ಕರ್ಮಸುರಾನ್ ಮುನೇ ।
ತವೇದೃಙ್ಮನಸಂ ವಿಪ್ರ ನ ಕಸ್ಯಾಪಿ ಮುನೇರಪಿ ॥೧೧॥

ತ್ವದ್ಭಾವೋ ಭವಸಂಸಕ್ತೋ ಭವನಾಶಾಯ ಕೇವಲಂ ।
ಯಥಾ ರತ್ನನಿಧಿಂ ಪ್ರಾಪ್ಯ ಸ ಕಿಂ ಗೃಹ್ಣಾತಿ ಲೋಷ್ಟಕಂ ॥೧೨॥

ಯಥಾ ಮತ್ತೇಭಕುಂಭಸ್ಥಸ್ಸಕಿಂ ಖರಮುಪೇಕ್ಷತೇ ।
ಯಥೈವ ಕಲ್ಪಕವನಂ ಸಂಪ್ರಾಪ್ಯಾರ್ಕಮುಪೇಕ್ಷತೇ ॥೧೩॥

---

ಯಾರು ಶಿವಕ್ಷೇತ್ರಗಳಲ್ಲಿ ವಾಸಮಾಡುತ್ತಾ, ಸದಾ ಶಿವಲಿಂಗಾರ್ಚಕರಾಗಿ, ಶಿವಪ್ರಸಾದ ಭಕ್ಷಣೆಯಿಂದ ಜೀವಿಸಿ, ಶಿವತೀರ್ಥಯಾತ್ರೆ ಮಾಡಿ, ಶಿವಲಿಂಗಗಳಿಗೆ ಫಲಪುಷ್ಪಗಳನ್ನು ಸಮರ್ಪಿಸುವರೋ, ॥೯॥

ಯಾರು, ಮನಸ್ಸು, ಮಾತು, ಕರ್ಮ ಇವುಗಳಿಂದ ಪರಶಿವನನ್ನೇ ಧ್ಯಾನಿಸಿ, ಅನನ್ಯಮನಸ್ಕರಾಗಿರುವರೋ, ಯಾರು ಸದಾ ಶಿವಕಥಾಸಕ್ತಿಯಿಂದ ತೃಪ್ತಿಹೊಂದುವರೋ, ॥೧೦॥

ಅಂತಹ ಶಿವಸೇವಕರು ನಮ್ಮನ್ನೂ, ಉಳಿದ ಯಜ್ಞಾದಿ ಕರ್ಮಗಳನ್ನೂ ಲಕ್ಷ್ಯಮಾಡುವುದಿಲ್ಲ. ಮಹರ್ಷಿಯೇ, ಈಗ ನಿನ್ನಲ್ಲಿ ಅಂತಹ ಅಸದೃಶವಾದ ಶಿವಭಕ್ತಿಯಿದೆ. ನಿನ್ನಂತೆ ಮತ್ತೊಬ್ಬನು ನಮಗೆ ದೊರಕಲಾರನು. ॥೧೧॥

ನೀನು ಮಹೇಶ್ವರನಲ್ಲಿಟ್ಟಿರುವ ಭಕ್ತಿಯಿಂದ ಸಂಸಾರದ ದುಃಖಪರಂಪರೆಗಳನ್ನೆಲ್ಲಾ ಕಳೆದುಕೊಳ್ಳುತ್ತೀಯೆ. ಅದು ನ್ಯಾಯವೇ. ರತ್ನನಿಧಿಯಾದ ಸಮುದ್ರವನ್ನು ಹೊಕ್ಕವನು ಒಂದು ಮಣ್ಣುಹೆಂಟೆಯನ್ನು ಎಂದಾದರೂ ತಂದಾನೇ? ಹಾಗೆ ಮಿಕ್ಕ ಯಾವ ಫಲವನ್ನು ತಾನೇ ನೀನು ಇನ್ನು ಬಯಸುವೆ? ॥೧೨॥

ಆನೆಯ ಮೇಲೆ ಕೂತಿರುವವನು ಕತ್ತೆಯನ್ನು ವಾಹನವನ್ನಾಗಿ ಮಾಡಿಕೊಳ್ಳಲು ಎಂದಾದರೂ ಇಷ್ಟಪಡುವನೇ? ಸುಂದರವಾದ ಉದ್ಯಾನವನವನ್ನು ಹೊಕ್ಕವನು ಎಕ್ಕದ ಗಿಡವನ್ನು ಕಣ್ಣೆತ್ತಿ ನೋಡುವನೆ? ॥೧೩॥

**ಯಥಾ ಮಣಿಮಯಂ ಹಾರಂ ಪ್ರಾಪ್ಯ ಕಿಂ ವಾ ವರಾಟಿಕಾಂ ।**
**ತಥಾಸ್ಮದೀಯಭೋಗೇಷು ಮೂಢೋ ರಜ್ಯತಿ ಕಾಮತಃ ॥೧೪॥**

**ತ್ವಂ ಕಾಮಾರಿಪದಧ್ಯಾನಾನ್ನಿಷ್ಕಾಮೋಽಸಿ ಮಹಾಮುನೇ ।**
**ತ್ರಿ(ನೇ)ಣೇತ್ರಪಾದಕಮಲಮಿತ್ರಂ ತ್ವನ್ಮಾನಸಂ ಮುನೇ ॥೧೫॥**

**ತ್ವಮೇವ ಶೈವಧುರ್ಯೇಷು ಮೂರ್ಧನ್ಯೋ ಧನ್ಯ ಏವ ಹಿ ।**
**ತವ ಸಂದರ್ಶನಾಪಾದಸಂಹೃತಾಖಿಲಪಾತಕಾಃ ॥೧೬॥**

**ಜಗಜ್ಜನ್ಮಸಿಸೃಕ್ಷಾಸು ವಿಶ್ವೇಶೇನ ನಿಯೋಜಿತಾಃ ।**
**ನ ಲಭಾಮ್ಯೈವ ವಿಶ್ರಾಂತಿಂ ಶ್ರಾಂತಾಸ್ಸಂಸಾರವರ್ತಿನಃ ॥೧೭॥**

**ಸದಾ ವೈಷಯಿಕಾ ದೇವಾ ವಯಂ ಸರ್ವೇ ಮಹಾಮುನೇ ।**
**ತವ ವಾಕ್ಪಂಕಜೋದ್ಭೂತಸಾಧುಸಾರಾಶ್ರಿತಾಂತರಾಃ ॥೧೮॥**

---

ರತ್ನಹಾರವನ್ನು ಪಡೆದವನು ಕವಡೆಗೆ ಆಸೆಪಡುವನೇ? ಹಾಗೆ ಶಿವಧ್ಯಾನಾಸಕ್ತನಾದವನು ನಮ್ಮ ಭೋಗಗಳನ್ನು ಎಂದಿಗೂ ಸ್ಮರಿಸುವುದಿಲ್ಲ. ಹಾಗೆ ಶಿವಧ್ಯಾನಕ್ಕೆ ಮನಗೊಡದೆ ನಮ್ಮ ಸುಖಗಳನ್ನು ಬಯಸುವವನು ಕೇವಲ ಮೂಢನೇ ಸರಿ. ॥೧೪॥

ನೀನು ಕಾಮಾರಿಯಾದ ಮಹಾದೇವನ ಪಾದಧ್ಯಾನದಿಂದ ನಿಷ್ಕಾಮನಾಗಿರುವೆ. ನಿನ್ನ ಮನಸ್ಸೆಂಬುದು, ಶಂಕರನ ಪಾದಕಮಲಗಳನ್ನು ವಿಕಾಸಗೊಳಿಸುವ ಸೂರ್ಯನಂತಿರುವುದಲ್ಲವೆ? ॥೧೫॥

ನೀನೇ ಶಿವಭಕ್ತಾಗ್ರಗಣ್ಯನು. ಮಹಾದೇವಭಕ್ತಿಯಿಂದಿರುವ ನೀನೇ ಧನ್ಯನು. ನಿನ್ನ ದರ್ಶನಮಾತ್ರದಿಂದ ನಾವು ಅನೇಕ ಪಾಪಗಳನ್ನು ಕಳೆದುಕೊಂಡವರಾಗಿದ್ದೇವೆ. ॥೧೬॥

ಲೋಕದಲ್ಲಿ ಅನೇಕ ಜನ್ಮಗಳನ್ನು ಸೃಷ್ಟಿಮಾಡುವಂತಹ ಕಾರ್ಯಗಳಲ್ಲಿ ಶಂಕರನು ನಮ್ಮನ್ನು ನೇಮಿಸಿರುವನು. ಆ ಕೆಲಸದಲ್ಲಿ ನಿಂತು ನಾವು ಸಂಸಾರಿಗಳೆನಿಸಿ, ವಿಶ್ರಾಂತಿಯಿಲ್ಲದೆ ದುಡಿದು ಬಳಲುತ್ತಿರುವೆವು. ॥೧೭॥

ಮಹರ್ಷಿಯೇ, ದೇವತೆಗಳಾದ ನಾವು ಯಾವಾಗಲೂ ವಿಷಯಸುಖಾಭಿಲಾಷೆಯಿಂದಿರುವೆವು. ಈಗ ನಿನ್ನ ಮಾತೆಂಬ ಕಮಲದ ಮಕರಂದವನ್ನು ಪಾನಮಾಡಿ ಸ್ವಲ್ಪ ವಿವೇಕವನ್ನು ಪಡೆದಿರುವೆವು. ॥೧೮॥

ವಯಂ ವಿಶ್ರಾಂತಿಮಾಪನ್ನಾಃ ಪ್ರಪನ್ನಾಃ ಪರಮಾಂಗತಿಂ ।
ತ್ವದೀಯಾಂಗಮಹಾಸಂಗನಿರ್ಮುಕ್ತಾಖಿಲಹೃತ್ತಮಾಃ ॥೧೯॥

ಉತ್ತಮಾ ವಿಧಿವಿಷ್ಣ್ವಿಂದ್ರಾ ದೇವೇಷು ತವ ದರ್ಶನಾತ್ ।
ಕಾಲಕೂಟಮಹಾಜ್ವಾಲಾನಿರ್ದಗ್ಧಾಹ್ನಿ ಮಹಾಮುನೇ ॥೨೦॥

ಅಶೀತಯನ್ ಮಹಾದೇವಃ ಪೀತ್ವಾ ಹಾಲಾಹಲಂ ವಿಷಂ ।
ದೇವಾನರಕ್ಷದ್ಭಗವಾನ್ ಹತ್ವಾ ತ್ರಿಪುರಮುಲ್ಬಣಂ ॥೨೧॥

ಕೃತ್ವಾ ಮಾಂ ಬಾಣಮತ್ಯುಗ್ರಂ ಧೃತ್ವಾ ಮೇರುಂ ಶರಾಸನಂ ।
ಮೌರ್ವೀಂ ಚಕಾರಾಹಿಪತಿಂ ಸಾರಥಿಂ ವಿಧಿಮಾತನೋತ್ ॥೨೨॥

ವೇದಾನ್ ಹಯಾಂ ಸ್ತಥಾ ಚಕ್ರೇ ಚಕ್ರೇ ಸೂರ್ಯಂ ಚ ಚಂದ್ರಕಂ ।
ಧರಾಮಂಡಲಮೇತದ್ವೈ ಸ ಸರಿತ್ಪವನಾಬ್ಧಿಕಂ ॥೨೩॥

---

ನಮಗೆ ಈಗ ವಿಶ್ರಾಂತಿ ದೊರೆಯಿತು. ಸದ್ಗತಿಯೂ ದೊರೆತಂತಾಯಿತು. ಹರಭಕ್ತಾಗ್ರಗಣ್ಯನಾದ ನಿನ್ನ ಅವಯವಸ್ಪರ್ಶದಿಂದ ನಾವು ನಮ್ಮ ಹೃದಯಾಂತರ್ವರ್ತಿಯಾದ ಅಜ್ಞಾನವನ್ನೆಲ್ಲಾ ಕಳೆದುಕೊಂಡಿದ್ದೇವೆ. ॥೧೯॥

ನಮ್ಮಲ್ಲಿ ಉತ್ತಮರಾದ ಬ್ರಹ್ಮ, ವಿಷ್ಣು, ಇಂದ್ರ ಇವರು ನಿನ್ನ ದರ್ಶನದಿಂದ ಇನ್ನೂ ಪವಿತ್ರರೆನಿಸಿದರು. ಸಮುದ್ರಮಥನದಿಂದ ಉದ್ಭವಿಸಿದ ಕಾಲಕೂಟವೆಂಬ ವಿಷವು ಲೋಕವನ್ನೆಲ್ಲಾ ಸುಡುವಕಾಲದಲ್ಲಿ, ॥೨೦॥

ಮಹಾದೇವನು ಅಂತಹ ಹಾಲಾಹಲವಿಷವನ್ನು ಕುಡಿದು ಲೋಕವನ್ನು ತಣ್ಣಗೆ ಮಾಡಿದನು. ಅಲ್ಲದೆ ತ್ರಿಪುರರನ್ನೂ, ತ್ರಿಪುರಾಸುರರನ್ನೂ ನಾಶಮಾಡಿ, ಸಕಲ ದೇವತೆಗಳನ್ನೂ ಉದ್ಧರಿಸಿದನು. ॥೨೧॥

ಆ ತ್ರಿಪುರದಹನ ಕಾಲದಲ್ಲಿ ಮಹೇಶ್ವರನು ನನ್ನನ್ನು (ವಿಷ್ಣುವನ್ನು) ಉಗ್ರವಾದ ಬಾಣವನ್ನಾಗಿಯೂ, ಮೇರುವನ್ನೇ ಧನುಸ್ಸನ್ನಾಗಿಯೂ, ಆದಿಶೇಷನನ್ನೇ ಮೌರ್ವಿಯನ್ನಾಗಿಯೂ ಬ್ರಹ್ಮನನ್ನು ಸಾರಥಿಯನ್ನಾಗಿಯೂ ಮಾಡಿಕೊಂಡಿದ್ದನಲ್ಲವೇ ? ॥೨೨॥

ನಾಲ್ಕು ವೇದಗಳನ್ನೇ ನಾಲ್ಕು ಕುದುರೆಗಳನ್ನಾಗಿ ಮಾಡಿದನು. ಸೂರ್ಯ ಚಂದ್ರರನ್ನೇ ತನ್ನ ರಥಕ್ಕೆ ಗಾಲಿಗಳನ್ನಾಗಿ ಮಾಡಿಕೊಂಡನು. ಈ ಭೂಮಂಡಲ

ಸುರಾಸುರಾನ್ ಭಟಾಂಶ್ಚಕ್ರೇ ಕರ್ಷಣೇ ವಾಯುಮಂಡಲಂ ।
ಕಿಂ ಸ ವಿಶ್ವಾಧಿಕೋ ದೇವೋ ವಿಶ್ವಭೂತೇಷು ಗಣ್ಯತೇ ॥೨೪॥

ಅಸ್ಮಾಸು ಪಶುಭೂತೇಷು ದೇವಃ ಪಶುಪತಿಶ್ಶಿವಃ ।
ಪಶೂನಸ್ಮಾನ್ನಿಬಧ್ನಾತಿ ಮಾಯಾಪಾಶೇನ ಶಂಕರಃ ॥೨೫॥

ಸ ಏವ ಕೃಪಯಾ ಜಂತೂನ್ ಮೋಚಯತ್ಯೇವ ಸರ್ವದಾ ।
ಯಸ್ಯ ಲಿಂಗಂ ಸದಾ ಕಾಲಂ ಪೂಜಯಂತಿ ಮರುದ್ಗಣಾಃ ॥೨೬॥

ಮತ್ಪೂಜ್ಯೋ ಹಿ ಮಹಾದೇವಸ್ಸರ್ವೇ ವಯಮತಂದ್ರಿತಾಃ ।
ಜನ್ಮಮೃತ್ಯುಜರಾದುಃಖೈರಭಿಭೂತಾ ಮಹಾಮುನೇ ॥೨೭॥

---

ವನ್ನೇ ತನ್ನ ರಥಮಂಡಲವನ್ನಾಗಿಯೂ, ಸಮುದ್ರ, ನದಿ ಇವುಗಳನ್ನೆಲ್ಲಾ ರಥದ ಅವಯುವಗಳನ್ನಾಗಿ ಮಾಡಿಕೊಂಡನು. ॥೨೩॥

ದೇವರಾಕ್ಷಸರನ್ನೇ ಸೈನಿಕರನ್ನಾಗಿ ನಿರ್ಮಿಸಿದನು. ವಾಯುವನ್ನೇ ವೇಗವನ್ನಾಗಿಸಿದನು. ಪ್ರಪಂಚಕ್ಕೇ ದೊಡ್ಡ ದೇವನಾಗಿರುವ ಮಹಾದೇವನಿಗೆ ಗಣ್ಯವಾದದ್ದು ಯಾವುದು ? ॥೨೪॥

ನಾವು ಅಜ್ಞಾನಿಗಳಾದ ಪಶುಗಳು. ನಮಗೆ ಒಡೆಯನಾಗಿ ಶಂಕರನು ಪಶುಪತಿಯೆನಿಸಿರುವನು. ನಮ್ಮನ್ನು ಮಾಯೆಯೆಂಬ ಹಗ್ಗದಿಂದ ಶಂಕರನು ಕಟ್ಟಿಹಾಕಿರುವನು. ॥೨೫॥

ಒಂದೊಂದು ವೇಳೆ ದಯೆಯಿಂದ ಅಜ್ಞಾನಿಗಳಾದ ಜಂತುಗಳನ್ನು ದುಃಖ ಮುಕ್ತರನ್ನಾಗಿ ಮಾಡುವನು. ಅದರಿಂದಲೇ ಸಕಲ ಮರುದ್ಗಣಗಳೂ ಸರ್ವದಾ ಶಿವಲಿಂಗವನ್ನೇ ಆರಾಧಿಸುತ್ತಿರುವರು. ॥೨೬॥

ಮಹಾದೇವನು ನಮಗೆಲ್ಲರಿಗೂ ಪೂಜ್ಯನಾದವನು. ನಾವು ಅವನ ಅಧೀನರು. ಏಕೆಂದರೆ ನಮಗೆ ಜನನ, ಮರಣ, ಮುಪ್ಪು, ದುಃಖ ಇವುಗಳು ಆಗಾಗ ಒದಗುತ್ತವೆ. ॥೨೭॥

ಪುರಾ ಮನ್ನೇತ್ರಪದ್ಮೇನ ಸಂಪೂಜ್ಯಾಪ್ತಂ ಸುದರ್ಶನಂ ।
ದೈತ್ಯೇಂದ್ರದ್ರಾವಕಂ ಸಾಕ್ಷಾತ್ ವಿಶ್ವೇಶಸ್ಯ ಕೃಪಾಬಲಾತ್ ॥೨೮॥

ಮೃಕಂಡುತನಯಂ ಕಾಲಮೃತ್ಯೋರ್ಮೋಚಯಚ್ಛಿವಃ ।
ಶ್ವೇತಂ ಚ ನೃಪಸುತಮರಕ್ಷತ್ಕಾಲಪಾಶತಃ ॥೨೯॥

ಯಸ್ಯ ಲಿಂಗಸ್ಯ ಸನ್ಮೌಲಿಂ ಮೂಲಂ ಬ್ರಹ್ಮಾಹಮಪ್ಯಥಃ ।
ಅದೃಷ್ಟ್ವಾ ಪರಮಾಂ ಶಾಂತಿಂ ಪ್ರಾಪ್ತವಂತೌ ಪುರಾ ಮುನೇ ॥೩೦॥

ಉಪಮನ್ಯುಂ ಮುನಿಸುತಂ ಗಾಣಾಪತ್ಯೇನ ಯೋಜಯೇತ್ ।
ಶಿಲಾದತನಯೇ ಸಾಕ್ಷಾತ್ ಸ್ವಸಾರೂಪ್ಯಂ ದದೌ ಹರಃ ॥೩೧॥

ಭೃಂಗೀಶಂ ಚ ಮುನಿಶ್ರೇಷ್ಠಂ ಕೋಪನಂ ಭಕ್ತಿಮುತ್ತರಂ ।
ನಿಜಭಕ್ತಗಣಶ್ರೇಷ್ಠಂ ಚಂಡೀಶಂ ಚಾಪ್ಯಕಲ್ಪಯತ್ ॥೩೨॥

---

ಹಿಂದೆ ನಾನು ನನ್ನ ನೇತ್ರಕಮಲವನ್ನು ಶಿವನ ಪಾದಗಳಿಗೆ ಅರ್ಪಿಸಿದೆನು. ಆಗ ಕೃಪಾಳುವಾದ ವಿಶ್ವೇಶ್ವರನು ರಾಕ್ಷಸನಾಶಕರವಾದ ಸುದರ್ಶನಚಕ್ರವನ್ನು ನನಗೆ ಅನುಗ್ರಹಿಸಿದನು. ॥೨೮॥

ಮೃಕಂಡುಋಷಿಯ ಮಗನಾದ ಮಾರ್ಕಂಡೇಯನಿಗೆ ಬಂದಿದ್ದ ಕಾಲ ಮೃತ್ಯುವನ್ನು ತಪ್ಪಿಸಿದವನು ಶಿವನಲ್ಲವೇ? ಹಾಗೆಯೇ, ರಾಜಪುತ್ರನಾದ ಶ್ವೇತ ರಾಜನಿಗೆ ಬಂದಿದ್ದ ಯಮಬಾಧೆಯನ್ನು ತಪ್ಪಿಸಿ ಕಾಪಾಡಿದನು. ॥೨೯॥

ಶಿವಲಿಂಗದ ಮೌಳಿಯನ್ನು ನೋಡಬೇಕೆಂದು ಬ್ರಹ್ಮನು ಊರ್ಧ್ವಲೋಕಕ್ಕೂ, ಮೂಲವನ್ನು ಕಾಣಬೇಕೆಂದು ನಾನು ಪಾತಾಳಲೋಕಕ್ಕೂ ಪ್ರಯಾಣಮಾಡಿದೆವು. ಎಷ್ಟು ಪ್ರಯತ್ನಪಟ್ಟರೂ ನಾವು ಬೇರೆ ಲಿಂಗದ ಆದ್ಯಂತಗಳನ್ನು ನೋಡಲಿಲ್ಲ. ॥೩೦॥

ಋಷಿಪುತ್ರನಾದ ಉಪಮನ್ಯುವಿಗೆ ಅನುಗ್ರಹಮಾಡಿ, ಅವನನ್ನು ಪ್ರಮಥ ಗಣಗಳಿಗೆ ಒಡೆಯನನ್ನಾಗಿ ಮಾಡಿರುವನು. ಅಲ್ಲದೆ ಶಿಲಾದ ಪುತ್ರನಾದ ನಂದಿಗೆ ಶಿವಸಾಯುಜ್ಯವನ್ನೇ ದಯಪಾಲಿಸಿರುವನು. ॥೩೧॥

ಬಹು ಕೋಪಿಷ್ಠನಾಗಿ, ಆದರೆ ಅತ್ಯಂತ ಭಕ್ತಿಯುಳ್ಳವನಾಗಿದ್ದ ಭೃಂಗಿ ಮುನಿಯನ್ನೂ, ಚಂಡೀಶ್ವರನನ್ನೂ, ತನ್ನ ಶ್ರೇಷ್ಠ ಭಕ್ತರ ಗುಂಪಿಗೆ ಸೇರಿಸಿರುವನು. ॥೩೨॥

ದೈತ್ಯೇಂದ್ರಪುತ್ರಂ ಬಾಣಂ ಚ ಸಹಸ್ರಭುಜಮಾತನೋತ್ ।
ವೀರಭದ್ರೇಣ ನಿಂದಂತಂ ವಿಧಿಂ ಶಿಕ್ಷಯದೀಶ್ವರಃ ॥೩೩॥

ಮಮಾವತಾರರೂಪಾಣಿ ಮತ್ಸ್ಯಕೂರ್ಮಕಿಟೀನ್ ಹರಿಃ ।
ನರಸಿಂಹಾದಿರೂಪಾಣಿ ಹಂತಾತ್ಯುದ್ವೇಜಕಾನಿ ಮೇ ॥೩೪॥

ಶಾರಭಂ ರೂಪಮಾಸ್ಥಾಯ ಪುರಾ ಘೋರತರಂ ಶಿವಃ ।
ಶಿವಭಕ್ತಾಸ್ತಥಾನ್ಯೇಽಪಿ ಸುರಾಸುರಮುನೀಶ್ವರಾಃ ॥೩೫॥

ಪ್ರಸಾದಾಭಿಮುಖೇನೈವ ಪ್ರಸಾದೇನ ನಿಯೋಜಿತಾಃ ।
ಸ್ಮರಾಂಧಕಗಜಾದ್ಯಾಶ್ಚ ಶಿಕ್ಷಿತಾಶ್ಚ ಪಿನಾಕಿನಾ ॥೩೬॥

ಇಂದ್ರಸ್ಯಾಸ್ಯ ಪ್ರಸಾದೇನ ಸವಜ್ರಸ್ತಂಭಿತೋ ಭುಜಃ ।
ನ ತೇನ ಸದೃಶೋ ದೇವೋ ಯೋ ವೇದಾಂತೈಕಗೋಚರಃ ॥೩೭॥

---

ರಾಕ್ಷಸ ರಾಜಪುತ್ರನಾದ ಬಾಣಾಸುರನಿಗೆ ಸಹಸ್ರ ಭುಜಗಳನ್ನು ಅನುಗ್ರಹಿಸಿ ಕೊಟ್ಟನು. ಹಾಗೆಯೇ ತನ್ನನ್ನು ದೂಷಿಸಿದ ದಕ್ಷಬ್ರಹ್ಮನನ್ನು ವೀರಭದ್ರನಿಂದ ಶಿಕ್ಷಿಸಿದನು. ॥೩೩॥

ನಾನು ಮಾಡಿದ ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ ಮುಂತಾದ ಭಯಂಕರವಾದ ಅವತಾರಗಳನ್ನೆಲ್ಲಾ, ಶಂಕರನು ಘೋರತರವಾದ ಶರಭಾವತಾರದಿಂದ ಪರಾಭವಗೊಳಿಸಿದನು. ಮತ್ತು ಹರಭಕ್ತರಾದ, ಸುರಾಸುರರನ್ನೂ, ಅನೇಕ ಮಹರ್ಷಿಗಳನ್ನೂ, ತನ್ನ ಅನುಗ್ರಹದಿಂದ ರಕ್ಷಿಸಿದನು. ಮನ್ಮಥ, ಅಂಧಕ, ಗಜಾಸುರ ಇವರೇ ಮೊದಲಾದ ಲೋಕಕಂಟಕರನ್ನು ಶಿಕ್ಷಿಸಿದನು. ॥೩೪-೩೫-೩೬॥

ಶಿವನಮೇಲೆ ವಜ್ರಾಯುಧವನ್ನು ಪ್ರಯೋಗಿಸಲು ಯತ್ನಿಸಿದ ಇಂದ್ರನ ಭುಜವು ಕಂಬದಂತೆ ಸೆಟ್ಟಲವಾಗಿ ನಿಂತುಬಿಟ್ಟಿತು. ಇವುಗಳನ್ನೆಲ್ಲಾ ನೋಡಿದರೆ ವೇದಾಂತಪ್ರತಿಪಾದ್ಯನಾದ ಶಂಕರನಿಗಿಂತ ದೊಡ್ಡವನಾದ, ಮತ್ತು ಅವನಿಗೆ ಸಮನಾದ ದೇವರು ಮತ್ತೊಬ್ಬನಿಲ್ಲ, ಎನ್ನಬಹುದು. ॥೩೭॥

**ಅನಂತಮಹಿಮಾಧಾರಸ್ತ್ವಪರಿಚ್ಛಿನ್ನವೈಭವಃ ।**
**ಯೋ ಗೀಯತೇ ಸದೇಶಾನೋ ವೇದೇ ವೇದಾಂತಮೌಳಿಷು ॥೩೮॥**

**ಯಂ ಯಜಂತಿ ಮಹಾಸತ್ರೇ ಯೋ ಧ್ಯೇಯೋ ಯೋಗಿಭಿಸ್ಸದಾ ।**
**ಯಂ ದಾನೈಸ್ತಪಸಾ ಭಕ್ತ್ಯಾ ಪೂಜಯಾನಶನೇನ ಚ ॥೩೯॥**

**ಋಷಯೋ ದೇವಸಂಘಾಶ್ಚ ಸ್ವಸ್ವಕಾಮಾರ್ಥಸಿದ್ಧಯೇ ।**
**ವಿಶ್ವೋ ವಿಶ್ವಾತಿಗಸ್ಸಾಕ್ಷಾದ್ವಿಶ್ವೇಶೋ ವಿಶ್ವಭಾವನಃ ॥೪೦॥**

**ತನ್ಮಾಯಾಮೋಹಿತಾ ಏವ ವಯಂ ಸರ್ವೇ ಸುರಾಸುರಾಃ ।**
**ಜನ್ಮಮೃತ್ಯುಜರಾದುಃಖೈರಭಿಭೂತಾಸ್ಸ್ಮ ಸರ್ವಶಃ ॥೪೧॥**

**ತಸ್ಯೈವಾಜ್ಞಾವಶಾದೇತಜ್ಜಗಚ್ಚಕ್ರಂ ಪ್ರವರ್ತತೇ ।**
**ವಹ್ನಿರ್ವಹತಿ ಕವ್ಯಾನಿ ಹವ್ಯಾನಿ ಚ ಸುರೇಷ್ವಪಿ ॥೪೩॥**

---

ಶಂಕರನನ್ನು ಉಪನಿಷತ್ತುಗಳೂ, ವೇದಗಳೂ, ಸರ್ವದಾ, ಅನಂತ ಮಹಿಮಾಶ್ರಯನೆಂದೂ, ಅಳತೆಗೆ ಸಿಕ್ಕದಿರುವ ವೈಭವ ಶಾಲಿಯೆಂದೂ ಸ್ತುತಿಸುತ್ತಿರುವುವು. ||೩೮||

ಸಮಸ್ತ ಯೋಗಿಗಳೂ, ದೊಡ್ಡ ದೊಡ್ಡ ಸತ್ರಾತ್ಮಕವಾದ ಯಾಗಗಳನ್ನು ಮಾಡುತ್ತಾ ಶಂಕರನನ್ನೇ ಪೂಜಿಸುತ್ತಿರುವರು. ಅವನ ತೃಪ್ತಿಗಾಗಿ, ದಾನಧರ್ಮಗಳನ್ನೂ, ಭಕ್ತಿಭರಿತವಾದ ಅನಶನವ್ರತಗಳನ್ನೂ ಕೈಗೊಳ್ಳುವರು. ||೩೯||

ಹೀಗೆ ಸಕಲ ಋಷಿಗಳೂ, ದೇವತಾವೃಂದವೂ, ತಮ್ಮ ತಮ್ಮ ಇಷ್ಟಾರ್ಥ ಸಾಧನೆಗಾಗಿ ಸೇವಿಸುತ್ತಿರುವರು. ಮಹಾದೇವನು ಸ್ವಯಂ ಜಗದ್ರೂಪಿಯಾಗಿ ಕಾಣುವನು. ಆದರೆ ಜಗತ್ತನ್ನು ಮೀರಿರುವನು. ಜಗತ್ತಿಗೆ ಒಡೆಯನಾಗಿರುವನು. ಜಗತ್ತಿನಂತೆ ತೋರುವನು. ||೪೦||

ನಾವೆಲ್ಲರೂ, ಇನ್ನೂ ಉಳಿದ ದೇವರಾಕ್ಷಸರೂ ಸಹ ಶಿವಮಾಯಾಮೋಹಿತರಾಗಿ, ಜನನ, ಮರಣ, ಮುಪ್ಪು ಇವೇ ಮೊದಲಾದ ದುಃಖಪರಂಪರೆಗಳಿಗೆ ಸಿಕ್ಕಿ ನರಳುತ್ತಿರುವೆವು. ||೪೧||

ಅವನ ಆಜ್ಞೆಯಿಂದಲೇ ಈ ಜಗತ್ತು ಮುಂದುವರಿಯುತ್ತಿದೆ. ಅವನ

ಉದೇತಿ ಸವಿತಾ ನಿತ್ಯಂ ಕಿಮಸ್ತಂ ಯಾತಿ ಶಾಸನಾತ್ ।
ಸೋಽಮೋಽಮೃತಮಯಸ್ಸಾಕ್ಷಾದುದೇತ್ಯೋಷಧಿನಾಯಕಃ ॥೪೪॥

ನಕ್ಷತ್ರಾಣಿ ಭ್ರಮಂತ್ಯೇವ ಗ್ರಹಾಧಾರಾ ಭ್ರಮಂತಿ ಹಿ ।
ಪ್ರವಾತಿ ಪವನೋ ಮಂದಂ ಮೇಘಾ ವರ್ಷಂತಿ ಶಾಸನಾತ್ ॥೪೫॥

ಭೂಮಿರ್ವಹತಿ ವಿಶ್ವಂ ವೈ ಲೋಕಾಸ್ಸರ್ವೇ ಚತುರ್ದಶ ।
ಶೇಷೋಽಪಿ ಧತ್ತೇ ಶಿರಸಿ ಭುವಂ ಭವಪದಾಶ್ರಯಃ ॥೪೬॥

ಪರ್ವತಾಸ್ಸರಿತೋ ವಾಪ್ಯಸ್ಸಮುದ್ರಾಸ್ತಸ್ಯಶಾಸನಾತ್ ।
ನೋದ್ವೇಲತಾಂ ಪ್ರಯಾಂತ್ಯೇವ ಸ್ಮರಶಾಸನಶಾಸನಾತ್ ॥೪೭॥

ಪಾಲಯಾಮಿ ಶಿವಾದೇಶಾಜ್ಜಗತ್ಸಾಸುರಮಾನುಷಂ ।
ವಿಧಿಸ್ಸೃಜತಿ ಭೂತಾನಿ ರುದ್ರೋಽಂತೇ ಸಂಹರಿಷ್ಯತಿ ॥೪೮॥

---

ಆಜ್ಞೆಯಿಂದಲೇ ಈಗಲೂ ಅಗ್ನಿಯು ಪಿತೃದೇವತೆಗಳಿಗೆ ಕವ್ಯವನ್ನೂ, ಇತರ ದೇವತೆಗಳಿಗೆ ಹವಿಸ್ಸನ್ನೂ ಹೊತ್ತುಕೊಂಡು ಹೋಗಿ ತಲಪಿಸುತ್ತಿರುವನು. ॥೪೩॥

ಸೂರ್ಯನ ಉದಯಾಸ್ತಗಳೂ, ಚಂದ್ರನು ಅಮೃತಮಯನಾಗಿ ಓಷಧಿ ನಾಯಕನಾಗಿರುವುದೂ, ಮಹಾದೇವನ ಆಜ್ಞೆಯಿಂದಲೇ ಅಲ್ಲವೆ ? ॥೪೪॥

ಗ್ರಹನಕ್ಷತ್ರಗಳು ಸುತ್ತುವುದೂ, ವಾಯುವು ಚಲಿಸುವುದೂ, ಮೇಘಗಳು ವರ್ಷಿಸುವುದೂ ಶಂಕರನ ಆಜ್ಞೆಯಿಂದಲೇ ಅಲ್ಲವೇ? ॥೪೫॥

ಮಹಾದೇವನ ಇಚ್ಛೆಯಿಂದಲೇ, ಭೂಮಿಯು ಸಕಲ ಲೋಕಗಳನ್ನೂ ಹೊತ್ತಿರುವುದು. ಅಂತಹ ಭೂಮಂಡಲವನ್ನು ಆದಿಶೇಷನು ಶಿರಸ್ಸಿನಲ್ಲಿ ಧರಿಸಿರುವುದೂ ಶಂಕರನ ಆಜ್ಞೆಯಿಂದಲೇ. ॥೪೬॥

ನದಿಗಳೂ, ಪರ್ವತಗಳೂ, ಸಮುದ್ರಗಳೂ, ಎಲ್ಲೆ ಮೀರದೆ ಒಂದೇ ಕ್ರಮದಲ್ಲಿರುವುದು ಮಾರಾರಿಯ ಅಪ್ಪಣೆಯಿಂದ. ॥೪೭॥

ಶಿವನ ಆಜ್ಞೆಯಂತೆ ಬ್ರಹ್ಮನು ಸಕಲಪ್ರಪಂಚವನ್ನೂ ಸೃಷ್ಟಿಸುವನು. ನಾನು ರಕ್ಷಿಸುವೆನು. ರುದ್ರನು ನಾಶಮಾಡುವನು. ॥೪೮॥

ಇಂದ್ರಃ ಪಾಲಯತೇ ದೇವಾನ್ ಸೋಽಸುರಾನ್ ಸಂಹರತ್ಯಪಿ ।
ಯಮೋಽಪಿ ಪಾಪಿನಾಂ ಶಾಸ್ತಾ ಯಮಶಾಸನಶಾಸನಾತ್ ॥೪೯॥

ಕುಬೇರೋ ಧನಪೋ ನಿತ್ಯಂ ವರುಣೋ ಯಾದಸಾಂ ಪತಿಃ ।
ಈಶಾನೋ ರುದ್ರಸಂಘಾನಾಂ ಯಕ್ಷಾಣಾಂ ನಿಋತಿಸ್ತಥಾ ॥೫೦॥

ಸರ್ವಂ ಸಾಸುರಮಾನುಷಂ ಜಗದಿದಂ ತಸ್ಯೇಶಸಚ್ಛಾಸನಾ ।
ದಾಸ್ತೇಽತ್ಯಂತಧಿಯಾ ಭಿಯಾ ಸುರನರವ್ರಾತಾಸ್ಸ್ತುವಂತೇ ರುಚಾ ।
ಸಾಮ್ನಾ ರುದ್ರಶತೈರ್ಮಹೋಪನಿಷದಾಂ ಸಾರಾರ್ಥವಾಕ್ಯೈಶ್ಶಿವಃ ।
ಕಸ್ತಾದೃಕ್ಷವರಿಷ್ಠ ಏವ ಹಿ ಮುನೇ ದೇವಾಧಿದೇವಶ್ಶಿವಃ ॥೫೧॥

ಸರ್ವೇ ಸ್ವೀಯವಿಮಾನವಾಹನಗಣೈಶ್ಶ್ರೇಣೀಭಿರೇಣೀದೃಶಾ ।
ಮನ್ಯೋಽಸ್ಯಂ ಪುನರೀಶಪಾದಮನಸಸ್ಸಂವರ್ಣಿತನ್ನಿಶ್ಚಯಂ ॥

---

ದೇವತೆಗಳನ್ನು ರಕ್ಷಿಸುವುದೂ, ರಾಕ್ಷಸರನ್ನು ನಾಶಮಾಡುವುದೂ ಇಂದ್ರನ ಕೆಲಸವಾಗಿದೆ. ಹಾಗೆಯೇ ಪಾಪಿಗಳಿಗೆ ಶಿಕ್ಷೆಕೊಡುವುದು ಯಮನ ಕಾರ್ಯ. ಇದನ್ನು ನಿಯಮಿಸಿರುವವನು ಮಹಾದೇವನು. ॥೪೯॥

ಈಶ್ವರನು, ಕುಬೇರನನ್ನು ಧನಾಧಿಪತಿಯನ್ನಾಗಿಯೂ, ವರುಣನನ್ನು ಜಲಚರಗಳಿಗೆ ಒಡೆಯನನ್ನಾಗಿಯೂ, ಈಶಾನನನ್ನು ರುದ್ರಗಣಗಳಿಗೆ ಮುಖಂಡನನ್ನಾಗಿಯೂ, ನಿಋತಿಯನ್ನು ಯಕ್ಷರ ಯಜಮಾನನನ್ನಾಗಿಯೂ ಮಾಡಿರುವನು. ॥೫೦॥

ಜೇಗೀಷವ್ಯಮುನಿಯೇ, ದೇವರಾಕ್ಷಸಮಾನುಷರಿಂದ ತುಂಬಿರುವ ಈ ಅಖಂಡ ಬ್ರಹ್ಮಾಂಡವೂ ಈಶ್ವರನ ಅಪ್ಪಣೆಯಿಂದಲೇ ನಡೆಯುತ್ತಿದೆ. ವಿವೇಕಿಗಳಾದ ಸುರನರರು, ಬುದ್ಧಿಶಕ್ತಿಯಿಂದಲೂ, ಶಂಕರನ ಭಯದಿಂದಲೂ, ಋಗ್ವೇದ, ಸಾಮವೇದ, ಶ್ರೀರುದ್ರಾಧ್ಯಾಯದಿಂದ ಕೂಡಿದ ಯಜುರ್ವೇದ, ಇನ್ನೂ ಅನೇಕ ಉಪನಿಷದ್ವಾಕ್ಯಗಳಿಂದ ವಿಧವಿಧವಾಗಿ ಶಂಕರನನ್ನು ಸ್ತುತಿಸುತ್ತಿರುವರು. ಹೆಚ್ಚೇನು. ಮಹಾದೇವನಿಗೆ ಸಮನಾಗಿ, ದೇವಾಧಿದೇವನಾಗಿರುವ ಪರಮಾತ್ಮನೊಬ್ಬನು ಮತ್ತಾವನಿರುವನು? ॥೫೧॥

ಹೀಗೆ ವಿಷ್ಣುವೇ ಮೊದಲಾದ ಸಮಸ್ತ ದೇವತೆಗಳೂ ಮಹಾದೇವನನ್ನು ಸ್ತುತಿಸಿ, ತಮ್ಮ ತಮ್ಮ ಪತ್ನಿಯರೊಡನೆ ಸ್ವಕೀಯಗಳಾದ ವಾಹನಗಳನ್ನೇರಿ

ಇತ್ಯುಕ್ತ್ವಾ ಪ್ರಯಯುರ್ಮುದಾ ವಿಧಿಹರೀ ಶಕ್ರಸ್ತಥಾನ್ಯೇ ಸುರಾ ।
ನತ್ವಾ ತಂ ಮುನಿಪುಂಗವಂ ಸುರಗಣಾ ಯಾತಾಸ್ಸ್ವಗೇಹಂತದಾ ॥೫೨॥

ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ವಿಷ್ಣುವಾಕ್ಯಂ ನಾಮ
ಚತುರ್ಥೋಽಧ್ಯಾಯಃ

---

ಈಶ್ವರನ ಪಾದಾರವಿಂದಗಳನ್ನು ಸ್ತುತಿಸುತ್ತಾ, ಜೈಗೀಷವ್ಯ ಮಹರ್ಷಿಗೆ ನಮಸ್ಕರಿಸಿ, ತಮ್ಮ ತಮ್ಮ ಆವಾಸಗಳಿಗೆ ತೆರಳಿದರೆಂದು, ಸೂತಮಹರ್ಷಿಗಳು, ವಾಜಶ್ರವಸರಿಗೆ ಹೇಳಿದರೆಂಬಲ್ಲಿಗೆ, ॥೫೨॥

ಶಿವರಹಸ್ಯದ ಪ್ರಥಮಾಂಶದಲ್ಲಿ ವಿಷ್ಣುವಾಕ್ಯಪ್ರತಿಪಾದನೆಯೆಂಬ
ನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

# ಅಥ ಶ್ರೀಶಿವರಹಸ್ಯೇ

## ಪಂಚಮೋಽಧ್ಯಾಯಃ

### ಜೈಗೀಷವ್ಯಪ್ರಸಾದಕರಣಂ

॥ ಸೂತ ಉವಾಚ ॥

**ಏವಂ ತಪಸ್ಯತಸ್ತಸ್ಯ ಕಾಲೋ ಭೂಯಾನವರ್ತತ ।**
**ವಲ್ಮೀಕಾವೃತಗಾತ್ರಸ್ಯ ತೃಣವಲ್ಲೀಯುತಸ್ಯ ಚ ॥೧॥**

**ತಸ್ಯೈವ ತಪಸಾ ಲೋಕಾಸ್ಸಂತಪ್ತಾಶ್ಚ ಸುರಾಸುರಾಃ ।**
**ವಿಸ್ಮಯಂತೋ ಮುನಿಂ ದೃಷ್ಟ್ವಾ ಮುನಯಸ್ಸಂಶಿತವ್ರತಾಃ ॥೨॥**

**ನಾರದೋ ವೀಣಯಾ ಲೋಕಾನ್ ನಾಮ್ನಾ ಗಾಯನ್ಮಹೇಶಿತುಃ ।**
**ಶ್ರಾವಯನ್ ಸತತಂ ಲೋಕಾನ್ ಧೂತಪಾಪಾನಥಾಕರೋತ್ ॥೩॥**

---

## ಶ್ರೀಶಿವರಹಸ್ಯದಲ್ಲಿ ಐದನೆಯ ಅಧ್ಯಾಯ

ಸೂತಮುಹರ್ಷಿಗಳು ಮೌನಿಭಾರ್ಗವಾದಿಗಳನ್ನು ಕುರಿತು, ಜೈಗೀಷವ್ಯ ಮುಹರ್ಷಿಯ ವಿಷಯವನ್ನು ಮುಂದುವರಿಸುತ್ತಾ ಹೀಗೆ ಹೇಳಿದರು.—"ಪರಮೇಶ್ವರನನ್ನು ಕುರಿತು ಮತ್ತೆ ತಪಸ್ಸು ಮಾಡುತ್ತಾ ಜೈಗೀಷವ್ಯಮಹಾಮುನಿಯು ಅನೇಕ ಕಾಲಗಳನ್ನು ಕಳೆದನು. ಕೊನೆಕೊನೆಗೆ ನಿಶ್ಚಲನಾಗಿ ತಪಸ್ಸು ಮಾಡುತ್ತಿದ್ದ ಆ ಋಷಿಯ ದೇಹದ ಮೇಲೆಲ್ಲಾ ಹುತ್ತವು ಬೆಳೆಯಿತು. ಗಿಡ, ಬಳ್ಳಿ ಇವುಗಳು ಅವನನ್ನು ಮುಚ್ಚಿದುವು. ॥೧॥

ಅವನ ತಪೋಜ್ವಾಲೆಗೆ ಲೋಕವೆಲ್ಲಾ ಕುದಿಯಿತು. ದೇವರಾಕ್ಷಸರು ಬಳಲಿದರು. ಉಳಿದ ಮುಹರ್ಷಿಗಳೂ ಆಶ್ಚರ್ಯಪಟ್ಟರು. ॥೨॥

ಆಗ ನಾರದಮುಹರ್ಷಿಯು ವೀಣೆಯನ್ನು ಹಿಡಿದು ಹರನಾಮಸ್ಮರಣೆ ಮಾಡುತ್ತಾ, ಹರಕೀರ್ತನೆಗಳನ್ನು ಹಾಡುತ್ತಾ, ಆದರಿಂದ ಭಕ್ತರ ಪಾಪಗಳನ್ನು ಪರಿಹರಿಸುತ್ತಾ ಲೋಕಸಂಚಾರಮಾಡತೊಡಗಿದನು. ॥೩॥

ಹಿಮವಚ್ಛಿಖರಂ ದೃಷ್ಟ್ವಾ ಜೈಗೀಷವ್ಯಮುದೃಶ್ಯತ ।
ವಲ್ಮೀಕಸ್ಯಾಂತರದೃಶಾ ಪಶ್ಯನ್ನೈ ನಾರದೋ ಮುನಿಃ ॥೪॥

ತಪಸಾ ತಾಪಯನ್ ಲೋಕಾನ್ ಧ್ಯಾಯನ್ರುದ್ರಮನನ್ಯಧೀಃ ।
ರುದ್ರಾಧ್ಯಾಯಾರ್ಥವಿಜ್ಞಾನಪ್ರವೀಣಮನಸಂ ಸದಾ ॥೫॥

ದೃಷ್ಟ್ವಾ ಸವಿಸ್ಮಯೋಪೇತೋ ನಾರದಸ್ತಮಭಾಷತ ।
ಜೈಗೀಷವ್ಯ ಮಹಾಭಾಗ ತಪಸಾ ಸಂಶಿತವ್ರತ ॥೬॥

॥ ನಾರದ ಉವಾಚ ॥

ತ್ವತ್ತಪಸ್ಯಾ ಮಹಾತೀವ್ರಾ ತಯಾ ಲೋಕಾಶ್ಚ ತಾಪಿತಾಃ ।
ಕಿಮದ್ಯ ಪ್ರಾರ್ಥ್ಯಮಸ್ತೀಹ ತವ ಕಾಮಸ್ಯ ಸತ್ತಮ ॥೭॥

ತ್ವಾದೃಶಾ ನೋ ಮುನಿಶ್ರೇಷ್ಠಾ ದೃಷ್ಟಾ ವಾಪಿ ಶ್ರುತಾ ಮಯಾ ।
ಆಕೌಮಾರಬ್ರಹ್ಮಚರ್ಯೇ ತವೈವ ನಿರತಂ ಮನಃ ॥೮॥

---

ಹಾಗೆಯೇ ಹಿಮಾಲಯಪರ್ವತಕ್ಕೆ ಬಂದು ಶಿಖರದ ಒಂದು ಭಾಗದಲ್ಲಿ ತಪಸ್ಸುಮಾಡುತ್ತಿದ್ದ ಜೈಗೀಷವ್ಯಮಹರ್ಷಿಯನ್ನು ಕಂಡನು. ಅವನ ಸುತ್ತಲೂ ಬೆಳೆದಿದ್ದ ಹುತ್ತವನ್ನು ನೋಡಿ ಆಶ್ಚರ್ಯಪಟ್ಟನು. ॥೪॥

ಅವನ ತಪಸ್ಸಿನ ಉರಿಯು ಲೋಕವನ್ನೆಲ್ಲಾ ಸುಡುತ್ತಿತ್ತು. ಅಷ್ಟಾದರೂ ಋಷಿಯು ಮಾತ್ರ ರುದ್ರಾಧ್ಯಾಯವನ್ನು ಅರ್ಥಸಹಿತವಾಗಿ ಜಪಿಸುತ್ತಾ, ಅನನ್ಯ ಮನಸ್ಕನಾಗಿ ಮಹಾದೇವನನ್ನೇ ಧ್ಯಾನಿಸುತ್ತಿದ್ದನು. ॥೫॥

ಇಂತಹ ಮಹರ್ಷಿಯನ್ನು ಕಂಡ ನಾರದನು "ಎಲೈ ತಪಸ್ವಿಯೂ ಪುಣ್ಯ ಶಾಲಿಯೂ ಆದ ಜೈಗೀಷವ್ಯಮುನಿಯೇ, ನೀನು ಮಾಡುವ ತಪಸ್ಸು ಮಹಾಘೋರ ವಾಗಿದೆ. ಇದರಿಂದ ಲೋಕವೆಲ್ಲವೂ ಭಸ್ಮವಾಗುತ್ತಿದೆ. ಇಷ್ಟು ಉಗ್ರವಾಗಿ ತಪಸ್ಸ ನ್ನಾಚರಿಸಲು ಉದ್ದೇಶವೇನು ? ॥೬-೭॥

ನಿನ್ನಂತಹ ತಪಸ್ವಿಗಳನ್ನು ನಾನು ಇಲ್ಲಿನವರೆಗೂ ಎಲ್ಲಿಯೂ ನೋಡಲಿಲ್ಲ. ಕೇಳಿಯೂ ಇಲ್ಲ. ನೀನು ನೈಷ್ಠಿಕಬ್ರಹ್ಮಚಾರಿಯಾಗಿ, ಮನಸ್ಸನ್ನು ಅದರಲ್ಲಿ ಸ್ಥಿರ ಗೊಳಿಸಿರುವೆ. ॥೮॥

ಊರ್ಧ್ವರೇತಾಸ್ತ್ವಮೇವಾಸಿ ಮುನಿಸಂಘೇಷು ಸುವ್ರತ ।
ತವಾದ್ಯ ದರ್ಶನಾದ್ವಿಪ್ರ ಧನ್ಯೋಽಸ್ಮಿ ನಿತರಾಂ ಮುನೇ ॥೯॥

ತವೇಂದ್ರಬ್ರಹ್ಮಲೋಕೇಷು ವೈಷ್ಣವೇ ಪ್ರಥಿತಂ ಯಶಃ ।
ಲೋಕಪಾಲಾಮರಾಸ್ಸರ್ವೇ ಮುನಯೋಽತೀವ ಸುವ್ರತಾಃ ॥೧೦॥

ದೃಷ್ಟ್ವಾ ನಿಷ್ಠಾಂ ತವಾತ್ಯುಗ್ರಾಂ ತಥೇದೃಕ್ತಪಸಃ ಕ್ರಿಯಾಃ ।
ರುದ್ರಾವರ್ತನಶೀಲಸ್ಯ ಚೋಗ್ರವಿನ್ಯಸ್ತಚೇತಸಃ ॥೧೧॥

ಸ ನಾರದಸ್ಯ ವಚಸಾ ಜೈಗೀಷವ್ಯೋ ಮಹಾಮುನಿಃ ।
ಸ್ವಾಗತೇನಾಭಿನಂದ್ಯೈನಂ ನಿಷೀದೇತ್ಯಬ್ರವೀನ್ಮುನಿಂ ॥೧೨॥

ಉಪವಿಷ್ಟೇ ನಾರದೇ ತು ಜೈಗೀಷವ್ಯೋಽಮಿತಪ್ರಭಃ ।
ಉವಾಚ ತಂ ದೇವಮುನಿಂ ವೀಣಾಸಕ್ತಕರಂ ತದಾ ॥೧೩॥

---

ಋಷಿಸಮೂಹದಲ್ಲಿ ನೀನೊಬ್ಬನೇ ಊರ್ಧ್ವರೇತಸ್ಸುಳ್ಳವನು. ನಿನ್ನ ದರ್ಶನದಿಂದ ಈಗ ನಾನು ಧನ್ಯನಾದೆನು. ||೯||

ನಿನ್ನ ಕೀರ್ತಿಯು, ಬ್ರಹ್ಮ, ವಿಷ್ಣು, ಇಂದ್ರ ಇವರ ಲೋಕಗಳಲ್ಲೆಲ್ಲಾ ಹರಡಿದೆ. ಸಮಸ್ತ ದಿಕ್ಪಾಲಕರೂ, ಮಹರ್ಷಿಗಳೂ, ನಿನ್ನ ವಿಷಯವನ್ನು ಕೇಳಿ ತಿಳಿದಿರುವರು. ||೧೦||

ನಿನ್ನ ಶ್ರೇಷ್ಠವಾದ ತಪೋನಿಷ್ಠೆಯನ್ನೂ, ತಪಸ್ಸಿನ ದೃಢತೆಯನ್ನೂ, ರುದ್ರಾಧ್ಯಾಯವನ್ನು ಆವೃತ್ತಿಮಾಡುತ್ತಿರುವ, ಮತ್ತು ಶಿವನಲ್ಲಿಟ್ಟಿರುವ ದೃಢಚಿತ್ತವನ್ನೂ ನೋಡಿ, ಸರ್ವರೂ ನಿನ್ನಂತೆಯೇ ಆಗಬಯಸುತ್ತಿರುವರು. ||೧೧||

ಎಂದು ತನ್ನನ್ನು ಹೊಗಳುತ್ತಿದ್ದ ನಾರದ ಮಹರ್ಷಿಯನ್ನು ನೋಡಿ, ಜೈಗೀಷವ್ಯ ಮಹಾಮುನಿಯು, ನಾರದನಿಗೆ ಸುಖಾಗಮನವನ್ನು ಬಯಸಿ, ಕುಳಿತುಕೊಳ್ಳುವಂತೆ ಹೇಳಿದನು. ||೧೨||

ಅದರಂತೆಯೇ ನಾರದನು ಅಲ್ಲಿ ಕುಳಿತನು. ತೇಜಶ್ಶಾಲಿಯಾದ ಜೈಗೀಷವ್ಯನು, ವೀಣಾಧಾರಿಯಾದ ದೇವಮುನಿಯೊಡನೆ ಹೀಗೆ ಹೇಳಲಾರಂಭಿಸಿದನು. ||೧೩||

|| ಜೈಗೀಷವ್ಯ ಉವಾಚ ||

ಲೋಕಾಂಸ್ತ್ವಯಾ ಸಂಚರತಾ ಕಿಂ ದೃಷ್ಟಂ ಚಿತ್ರಮದ್ಭುತಂ ।
ತನ್ಮೇ ವದ ಮಹಾಭಾಗ ಕುಶಲಸ್ಸರ್ವಸಂಸದಿ ||೧೪||

ತ್ವಯಾ ನಾವಿದಿತಂ ಕಿಂಚಿತ್ತ್ರಿಷು ಲೋಕೇಷು ವಿದ್ಯತೇ ।
ಸ ಜೈಗೀಷವ್ಯವಚಸಾ ಪ್ರಾಹ ತನ್ನಾರದೋ ಮುನಿಃ ||೧೫||

|| ನಾರದ ಉವಾಚ ||

ವಿಷ್ಣುಲೋಕೇ ಬ್ರಹ್ಮಣಶ್ಚ ಶಕ್ರಸಂಸದಿ ಚಾಪ್ಯಹಂ ।
ಗಚ್ಛನ್ ಪಶ್ಯಾಮಿ ಪುಣ್ಯಾನಾಂ ಭೋಕ್ತಾರೋ ಮುನಯೋ ನೃಪಾಃ ||೧೬||

ಪುಣ್ಯಾಂತೇ ಪತಮಾನಾಂಶ್ಚ ನಾನಾಯೋನಿಷು ಸತ್ತಮ ।
ಭ್ರಮಂತಃ ಕರ್ಮಣಾನೇನ ತೇಜೋಮಾತ್ರಶರೀರಿಣಃ ||೧೭||

ತಿರಸ್ಕೃತಾಸ್ತ್ವಯಾ ದೇವಾ ಬ್ರಹ್ಮವಿಷ್ಣುಹರೀಶ್ವರಾಃ ।
ಯೇಷಾಂ ಪ್ರಸಾದತಸ್ಸರ್ವೇ ಸ್ವರ್ಗಾನಂತಶ್ರೀಯೋ ಮುನೇ ||೧೮||

---

ದೇವಋಷಿಯಾದ ನಾರದನೇ, ನೀನು ತ್ರಿಲೋಕ ಸಂಚಾರಿಯಷ್ಟೆ. ಆ ಸಂಚಾರ ಕಾಲದಲ್ಲಿ ನೀನು ನೋಡಿರುವ ಆಶ್ಚರ್ಯ ಸಮಾಚಾರವೇನಾದರೂ ಇರುವುದೇ? ಎಲ್ಲರೂ ಕುಶಲಿಗಳಾಗಿರುವರೆ? ||೧೪||

ನಿನಗೆ ತಿಳಿಯದ ವಿಷಯವು ಮೂರು ಲೋಕದಲ್ಲಿ ಮತ್ತಾವುದಿರುವುದು? ಎಂದು ಕೇಳಿದ ಜೈಗೀಷವ್ಯನನ್ನು ಕುರಿತು ನಾರದನು ಹೀಗೆ ಹೇಳತೊಡಗಿದನು.||೧೫||

"ನಾನು, ಬ್ರಹ್ಮ, ವಿಷ್ಣು, ಇಂದ್ರ ಇವರ ಸಭೆಗಳಿಗೆಲ್ಲಾ ಹೋಗಿರುವೆನು. ಇನ್ನೂ ಪುಣ್ಯ ಲೋಕಗಳನ್ನೂ, ಅಲ್ಲಿರುವ ಪುಣ್ಯಾನುಭವಿಗಳನ್ನೂ ನೋಡಿರುವೆನು. ||೧೬||

ತಮ್ಮ ಪುಣ್ಯಫಲವನ್ನು ಅನುಭವಿಸಿದಮೇಲೆ ನಾನಾಯೋನಿಗಳಲ್ಲಿ ಮತ್ತೆ ಜನ್ಮತಾಳಿ ಕರ್ಮಫಲವನ್ನು ಅನುಭವಿಸುವವರನ್ನೂ ನೋಡಿರುವೆನು. ||೧೭||

ಯಾವ ಬ್ರಹ್ಮಾದಿದೇವತೆಗಳ ಅನುಗ್ರಹದಿಂದ ಸ್ವರ್ಗದ ಅನಂತ ಸಂಪತ್ತುಗಳನ್ನು ಅನುಭವಿಸಬಹುದೋ, ಅಂತಹ ತೇಜಸ್ವಿಗಳಾದ ಬ್ರಹ್ಮ, ವಿಷ್ಣು, ಇಂದ್ರ ಮುಂತಾದ ದೇವತೆಗಳನ್ನು ನೀನು ತಿರಸ್ಕರಿಸಿರುವೆ. ||೧೮||

ತೇಪಿ ದೇವಾಸ್ತ್ವಯಾ ಧೂತಾ ನಿಷ್ಕಾಮೇನೇದಮದ್ಭುತಂ ।
ಕಾಮಾಂಗನಾಶಪಾದಾಬ್ಜಧ್ಯಾನನಿಷ್ಕಾಮಿತಂ ಮನಃ ॥೧೯॥

ತವೇದಂ ಮಾನಸಂ ದೃಷ್ಟ್ವಾ ದೇವಾಶ್ಚಾಶ್ಚರ್ಯಮಾಗತಾಃ ।
ಬ್ರಹ್ಮಾ ವಿಷ್ಣುಸ್ತದಾ ಶಕ್ರಸ್ಸರ್ವೇ ಚ ಮುನಯೋ ವಯಂ ॥೨೦॥

ಏಷ ಗಚ್ಛಾಮಿ ಕೈಲಾಸಂ ನಾನಾಗಣನಿಷೇವಿತಂ ।
ವಿಜ್ಞಪ್ತುಂ ತೇ ತಪಶ್ಚರ್ಯಾಂ ದೇವದೇವಾಯ ಶಂಭವೇ ॥೨೧॥

ಇತ್ಯುಕ್ತ್ವೋತ್ಥಿತ ಏವಾಸೌ ನಾರದೋ ದಿವ್ಯದರ್ಶನಃ ।
ಜಗಾಮ ಲೋಕಾನಖಿಲಾನ್ ಕೈಲಾಸಂ ಚ ಮಹಾಮುನಿಃ ॥೨೨॥

ನಾನಾರುದ್ರಗಣೋಪೇತಂ ಸುರಕಿನ್ನರಶೋಭಿತಂ ।
ನಂದಿಭೃಂಗಿಮಹಾಕಾಲಗಣನಾಯಕಕೋಟಿಭಿಃ ॥೨೩॥

---

ಮಾರಾರಿಯಾದ ಸರ್ವೇಶ್ವರನ ಪಾದಧ್ಯಾನದಿಂದ ನಿಷ್ಕಾಮಿಯಾದ ನೀನು ಅಂತಹ ದೇವತೆಗಳನ್ನೂ ತಿರಸ್ಕರಿಸಿದುದು ಆಶ್ಚರ್ಯವೇ ಸರಿ. ॥೧೯॥

ಇಂತಹ ನಿನ್ನ ದೃಢಮನಸ್ಸನ್ನು ನೋಡಿ ಸಕಲದೇವತೆಗಳೂ ಆಶ್ಚರ್ಯಪಟ್ಟಿರುವರು. ಈಗ ಬ್ರಹ್ಮ, ವಿಷ್ಣು, ಇಂದ್ರ, ಮುಂತಾದವರೊಡನೆ ನಾನೂ ಸಹ ನಿನ್ನ ತಪೋಮಹಿಮೆಗೆ ಬೆರಗಾಗಿರುವೆನು. ॥೨೦॥

ಈ ವಿಷಯವನ್ನು ದೇವದೇವನಾದ ಶಂಕರನಿಗೆ ತಿಳಿಸಲೋಸುಗ ಸಕಲ ದೇವತೆಗಳೊಡನೆ ಕೈಲಾಸಪರ್ವತಕ್ಕೆ ಹೊರಟಿರುವೆನು." ॥೨೧॥

ಹೀಗೆಂದು ಹೇಳಿ ನಾರದಮುನಿಯು, ಅಲ್ಲಿಂದ ಹೊರಟು ನಾನಾಲೋಕಗಳನ್ನು ಸುತ್ತಿಕೊಂಡು ಕೈಲಾಸಪರ್ವತವನ್ನು ಪ್ರವೇಶಿಸಿದನು. ॥೨೨॥

ಆ ಪರ್ವತವಾದರೋ, ನಾನಾವಿಧವಾದ ರುದ್ರಾಂಶಸಂಭೂತರಿಂದಲೂ, ಸುರರು, ಕಿನ್ನರರು ಇವರುಗಳಿಂದಲೂ, ನಂದೀ, ಭೃಂಗೀ, ಮಹಾಕಾಲ, ಇನ್ನೂ ಅನೇಕ ಪ್ರಮಥಗಣನಾಯಕರಿಂದಲೂ ವ್ಯಾಪೃತವಾಗಿತ್ತು. ॥೨೩॥

ರುದ್ರೈಶ್ಚ ರುದ್ರಕನ್ಯಾಭಿರಪ್ಸರೋಭಿಸ್ಸಮಾವೃತಂ ।
ಹೇರಂಬಸ್ಕಂದನಂದೀಶಬಾಣಚಂಡೀಶ್ವರಾದಿಭಿಃ ॥೨೪॥

ಸಮಾವೃತಂ ತರುವರೈರ್ನಾನಾಪುಷ್ಪಫಲೋಪಗೈಃ ।
ಪ್ರಫುಲ್ಲಪಂಕಜೋತ್ಫುಲ್ಲನೀಲೋತ್ಪಲಸರೋವರೈಃ ॥೨೫॥

ಕೈಲಾಸಶಿಖರಾಪಾರಸೌಧಪಂಕ್ತೀಶ್ವರಾಲಯೈಃ ।
ಕನತ್ಕನಕರತ್ನಾಘಮೌಲಿಕುಂಭಪತಾಕಗೈಃ ॥೨೬॥

ದೋಧೂಯಮಾನೈರ್ನಿತರಾಂ ರಾಜದ್ವೃಷಗಣೈಸ್ತದಾ ।
ಶುಕಬರ್ಹಿಣವಾದ್ಯೈಶ್ಚ ಕೋಕಿಲಾಲಾಪಸುಂದರೈಃ ॥೨೭॥

ಮುರಜಾನಕಶಂಖಾದಿಮಡ್ಡುಮದ್ದಲವಾದನೈಃ ।
ದುಂದುಭ್ಯಾಘಾತಜಾರಾವವಿನಾದಿತಗುಹಾಮುಖೈಃ ॥೨೮॥

---

ಅಲ್ಲಿ, ಏಕಾದಶರುದ್ರರೂ, ರುದ್ರಾಣಿಯರೂ, ಇನ್ನೂ ಅಪ್ಸರರು, ಗಣಪತಿ, ಕುಮಾರಸ್ವಾಮಿ, ನಂದೀಶ್ವರ, ಬಾಣ, ಚಂಡಿಕೇಶ್ವರ ಇವರೆಲ್ಲರೂ ನೆಲಸಿದ್ದರು. ॥೨೪॥

ಅಲ್ಲದೆ, ಫಲಪುಷ್ಪಭರಿತಗಳಾದ ಅನೇಕ ವೃಕ್ಷಗಳೂ, ಅರಳಿದ ಕಮಲಕಲ್ಹಾರಾದಿಗಳಿಂದ ಶೋಭಿತಗಳಾದ ಸರೋವರಗಳೂ ಬಹಳವಾಗಿದ್ದುವು. ॥೨೫॥

ಆ ಕೈಲಾಸ ಪರ್ವತದಲ್ಲಿ, ಸಾಲುಸಾಲಾದ ಪ್ರಮಥಗಣಗಳ ಸೌಧಗಳು ಕಂಗೊಳಿಸುತ್ತಿದ್ದುವು. ಅವೆಲ್ಲವೂ, ಚಿನ್ನ, ರತ್ನ, ಇವುಗಳಿಂದ ನಿರ್ಮಿತವಾದ ಕಲಶಗಳಿಂದಲೂ, ಪತಾಕೆಗಳಿಂದಲೂ ಅಲಂಕೃತವಾಗಿದ್ದುವು. ॥೨೬॥

ಸುಂದರವಾದ ಬಸವಗಳ ತಂಡವೂ, ನವಿಲು, ಗಿಣಿ, ಮುಂತಾದ ಪ್ರಾಣಿಗಳ ರಮ್ಯಧ್ವನಿಯೂ, ಇಂದಾದ ಕೋಕಿಲಾಲಾಪವೂ ಅಲ್ಲಿ ಕಂಡುಬರುತ್ತಿದ್ದವು.॥೨೭॥

ತಮಟೆ, ಮದ್ದಲೆ, ಶಂಖ, ತುತ್ತೂರಿ ಇವುಗಳ ಧ್ವನಿಯೂ ಅಲ್ಲಿ ಕೇಳಿಬರುತ್ತಿತ್ತು. ಗುಹೆಗಳಲ್ಲಿ ಹೊಡೆಯತಕ್ಕ ನಗಾರಿಗಳಿಂದ ಹುಟ್ಟಿದ ಪ್ರತಿಧ್ವನಿಯು ಬಹುವಾಗಿ ವಿಜೃಂಭಿಸುತ್ತಿದ್ದಿತು. ॥೨೮॥

ವೀಣಾಕ್ವಣನಶಬ್ದೈಶ್ಚ ಗಂಧರ್ವಕೃತಗಾಯನೈಃ ।
ಮುರಲೀಸರಲೀಲೀಲಾವಿಲಾಸಾಪ್ಸರಸಾಂ ಗಣೈಃ ॥೨೯॥

ಪ್ರನೃತ್ಯತ್ಕಿನ್ನರಾನೀಕಶಿಂಜನ್ಮಂಜೀರನಿಸ್ವನೈಃ ।
ಕೈಲಾಸಶಿಖರಾಪಾರಮದ್ರಾಕ್ಷೀನ್ನಾರದೋ ಮುನಿಃ ॥೩೦॥

ದ್ವಾರಿ ಸ್ಥಿತಂ ನಂದಿಕೇಶಮಪಶ್ಯದ್ವೇತ್ರಪಾಣಿನಂ ।
ಜಟಾಮುಕುಟಶೋಭಾಢ್ಯಂ ತ್ರಿಪುಂಡ್ರಾಂಕಿತಮಸ್ತಕಂ ॥೩೧॥

ಭಸ್ಮಾಭ್ಯಕ್ತಂ ರುದ್ರಗಣೈಸ್ಸಮಂತಾತ್ಪರಿವೇಷ್ಟಿತಂ ।
ದದರ್ಶ ನಯನಾಭ್ಯಾಂ ತೇಜೋರಾಶಿಮಿವ ಸ್ಥಿತಂ ॥೩೨॥

ತೇನಾಭಿಪ್ರಶ್ನಕಥನೈರ್ನಂದಿತೋ ನಾರದೋ ಮುನಿಃ ।
ಉವಾಚ ದ್ವಾರಿ ದೇವಸ್ಯ ಗಾಯನ್ಮಧುರವೀಣಯಾ ॥೩೩॥

---

ಗಂಧರ್ವರು ತಮ್ಮ ಮಧುರವಾದ ವೀಣಾಧ್ವನಿಯಿಂದಲೂ, ಅಪ್ಸರಸ್ತ್ರೀಯರು ಇಂಪಾದ ಮುರಳೀಗಾನದಿಂದಲೂ, ವಿಧವಿಧವಾದ ವಿಲಾಸಗಳಿಂದಲೂ ಆ ಪರ್ವತವನ್ನು ಮನೋಹರವನ್ನಾಗಿ ಮಾಡಿದ್ದರು. ॥೨೯॥

ನರ್ತನಮಾಡುವ ಕಿನ್ನರರ ಕಾಲ್ಕಡಕದ ಮಧುರವಾದ ಧ್ವನಿಯೂ ಆ ಕೈಲಾಸ ಶಿಖರದಲ್ಲಿ ಬಹಳವಾಗಿ ಕೇಳಿ ಬರುತ್ತಿತ್ತು. ಇಂತಹ ರಮ್ಯವಾದ ಕೈಲಾಸ ಶಿಖರವನ್ನು ನಾರದಮಹರ್ಷಿಯು ನೋಡಿದನು. ॥೩೦॥

ಪರಮೇಶ್ವರನ ಪ್ರಾಸಾದದ ಬಾಗಿಲಿನಲ್ಲಿ ನಂದೀಶ್ವರನು ನಿಂತಿದ್ದನು. ಅವನ ಕೈಯ್ಯಲ್ಲಿ ದೊಡ್ಡದಾದ ದಂಡವಿತ್ತು. ಜಟೆ, ಕಿರೀಟ ಇವುಗಳಿಂದ ಅಲಂಕೃತನಾಗಿದ್ದನು. ಹಣೆಯಲ್ಲಿ ತ್ರಿಪುಂಡ್ರವಿದ್ದಿತು. ॥೩೧॥

ದೇಹವೆಲ್ಲಾ ಭಸ್ಮದಿಂದ ಲಿಪ್ತವಾಗಿತ್ತು. ಸುತ್ತಲೂ ರುದ್ರಗಣಗಳು ನಿಂತಿದ್ದುವು. ಅಂತಹ ನಂದೀಶ್ವರನು ನಾರದನ ಕಣ್ಣುಗಳಿಗೆ ತೇಜೋರಾಶಿಯಂತೆ ಕಂಡು ಬಂದನು. ॥೩೨॥

ನಾರದನಿಗೂ ನಂದೀಶ್ವರನಿಗೂ ಕುಶಲಪ್ರಶ್ನೆಯಾದ ಮೇಲೆ ಸಂತೋಷದಿಂದ ನಾರದನು, ಪರಮೇಶ್ವರನ ನಾಮಾಂಕಿತವಾದ ಕೀರ್ತನೆಗಳನ್ನು ವೀಣೆಯಿಂದ ಹಾಡಲಾರಂಭಿಸಿದನು. ॥೩೩॥

ನಾಮಾನಿ ದೇವದೇವಸ್ಯ ಪಾವನಾನಿ ಮಹಾಮುನಿಃ ।
ನಂದಿಕೇಶಾಗ್ರತಸ್ಸ್ವೈರಂ ಜಗೌ ರುದ್ರಾನುಮೋದಿತಃ ॥೩೪॥

॥ನಾರದ ಉವಾಚ॥

ಶಿವ ಶಿವ ಭವ ಹರ ದೇವಶಾಸನ
ನಗಶರ ಪಾಹಿ ಕೃಪಾ(ದಯಾ)ಕಟಾಕ್ಷಸಾರೈಃ ।
ಭವ ಭವಜನಿತಾಂ ರುಜಂ ಹರಾಶು
ಪ್ರಮಥಾಧೀಶ್ವರ ವೀರ ಧೀರ ಪಾಹಿ ॥೩೫॥

ಶಿವ ಶಿವ ದಹನಾಬ್ಜಮಿತ್ರಸೋಮ
ಪ್ರಕಟವಿಲೋಚನ ಕೃತ್ತಿವಾಸ ಶಂಭೋ ।
ತವ ಶಿವ ಕೃಪಯಾ ಸ್ಮರಾಂಧಕಾರೇ
ಭವ ಭವಶಮನಾದ್ಭಯಂ ನ ಚೈವ ॥೩೬॥

ಹರ ಗಿರಿಸುತಯಾ ಸದೋಪಕಂಠ
ಪ್ರಬಲಗರಾಶನ ನೀಲನೀಲಕಂಠ ।

---

ನಂದಿಕೇಶ್ವರನ ಮುಂದೆಯೇ ರುದ್ರನ ಅನುಮತಿಯಂತೆ ಅನೇಕ ಪಾವನವಾದ ಶಿವನಾಮಗಳನ್ನು ಗಾನಮಾಡಿದನು. ॥೩೪॥

" ಓ ಶಂಭುವೇ, ಭವಬಂಧನಗಳನ್ನು ನಾಶಮಾಡುವವನೇ, ದೇವತೆಗಳನ್ನೂ ಸಹ ಶಿಕ್ಷಿಸುವವನೇ, ಮಂದರ ಪರ್ವತವನ್ನೇ ಬಾಣಾಸನವನ್ನಾಗಿ ಮಾಡಿಕೊಂಡಿರುವವನೇ, ನನ್ನನ್ನು ರಕ್ಷಿಸು. ಜನ್ಮಾಂತರಗಳಿಂದ ಒದಗಿ ಬಂದಿರುವ ತಾಪತ್ರಯಗಳೆಂಬ ನಾನಾ ವ್ಯಾಧಿಗಳನ್ನು ನಿವಾರಣೆಮಾಡಿ ನನ್ನನ್ನು ಕಾಪಾಡು. ॥೩೫॥

ಪರಮೇಶ್ವರನೇ, ಸೂರ್ಯಚಂದ್ರಾಗ್ನಿಗಳನ್ನೇ ನೇತ್ರತ್ರಯಗಳನ್ನಾಗಿ ಮಾಡಿಕೊಂಡಿರುವ ಚರ್ಮಾಂಬರಧರನೇ, ಸ್ಮರಾರಿಯೇ, ಅಂಧಕಾಸುರನಾಶಕನೇ, ಸಂಸಾರದುಃಖದಿಂದ ತಪ್ಪಿಸಿ ನನ್ನನ್ನು ಕಾಪಾಡು. ನಿನ್ನ ಸ್ಮರಣೆಯಿಂದ ಸಕಲ ಭಯವೂ ನಿವಾರಣೆಯಾಗುವುದಲ್ಲವೇ? ॥೩೬॥

ಶಂಕರನೇ, ನೀನು ಸರ್ವದಾ ಪಾರ್ವತಿಯ ಬಾಹುವಿನಿಂದ ಆಶ್ಲಿಷ್ಟನಾಗಿರುವೆಯಲ್ಲವೆ? ಹಾಲಾಹಲವಿಷವನ್ನು ಪಾನಮಾಡಿ ನೀಲಕಂಠನೆನಿಸಿರುವ ಶಂಭುವೇ,

ಹೃದಿ ಭವ ಯಮಿನಾಂ ಕಿಲೋಪಕಂಠ
ಪ್ರಥಿತ ಮಹೋರಗಭೋಗಶೋಭಿಕಂಠ ॥೩೭॥

ಹರ ಹರ ಶಮನೈಕಭೀತಿಜಾತಂ
ಹರ ಹರ ಭವಜಾತಘೋರದುಃಖಂ ।
ಹರ ಹರ ಪಾಪಮಪಾಕುರುಷ್ವ ಶಂಭೋ
ಹರ ಹರ ಮುರಜಿತ್ಸುಪೂಜಿತಾಂಘ್ರೇ ॥೩೮॥

ಶಂಭೋ ಶಂಕರ ಚಂದ್ರಶೇಖರ ದಯಾಸಾರಾಮರಾಧೀಶ್ವರ ।
ಪಾಪಾಪಾರಜಲಾಬ್ಧಿಶೋಷಣಮಹಾಬಾಡವ್ಯವಹ್ನೇ ಶಿವ ।
ಕಾಂತಾರ್ಧಾಕೃತಿಶೋಭಿತಾಂಗ ಕಮಲಾಕಾಂತಾಕ್ಷಿಪೂಜ್ಯಾಂಘ್ರಿಕ ।
ವಿಶ್ವೇಶಾನವಿಧಿಪ್ರಚಂಡಶಿರಸಾ ಲಗ್ನಪ್ರಯಾಣೇ ಹರ ॥೩೯॥

ಶೂಲಪ್ರೋತ್ಥಿತದಕ್ಷವಕ್ಷಹರಣತ್ರ್ಯಕ್ಷಾಮರಾಧೀಶ್ವರ ।
ಪಾಹೀಮಂ ಜನಮರ್ಭಕಂ ತವ ವಿಭೋ ಭಾವೈಕಲಭ್ಯಪ್ರಭೋ ।

---

ನಿನಗೆ ಆದಿಶೇಷನೇ ಕಂಠಾಭರಣನಾಗಿರುವನು. ಅಂತಹ ಮಹಾಮಹಿಮನಾದ ನೀನು ಜಿತೇಂದ್ರಿಯರಾದವರ ಹೃದಯದಲ್ಲಿ ನೆಲಸುವವನಾಗು. ॥೩೭॥

ಪರಶಿವನೇ, ಯಮನ ಭಯವನ್ನು ತಪ್ಪಿಸು. ಜನ್ಮಾಂತರಗಳಲ್ಲಿ ಒದಗುವ ಸಂಸಾರದುಃಖಗಳನ್ನು ನಿವಾರಿಸು. ಸಮಸ್ತ ಪಾಪಗಳನ್ನೂ ದೂರಮಾಡು. ಮುರಾರಿಯಾದ ವಿಷ್ಣುವಿನಿಂದ ಪೂಜಿತವಾದ ಪಾದಪದ್ಮವುಳ್ಳವನೇ, ನನ್ನ ಸಮಸ್ತ ದುಃಖಗಳನ್ನೂ ನಿವಾರಿಸುವವನಾಗು. ॥೩೮॥

ಶಂಭುವೇ, ಶಂಕರನೇ, ಚಂದ್ರಶೇಖರನೇ, ದಯಾನಿಧಿಯೇ, ದೇವತಾ ವಂದ್ಯನೇ, ಪಾಪರಾಶಿಯೆಂಬ ದೊಡ್ಡ ಸಮುದ್ರಕ್ಕೆ ಬಡಬಾಗ್ನಿಯಂತಿರುವ ಶಂಕರನೇ, ಅರ್ಧನಾರೀಶ್ವರನೇ, ವಿಷ್ಣುವಿನ ನೇತ್ರಕಮಲದಿಂದ ಪೂಜಿತವಾದ ಪಾದವುಳ್ಳವನೇ, ಸಮಸ್ತ ಲೋಕರಕ್ಷಕರ ಶಿರೋಮಾಲೆಯಿಂದ ವಂದಿತನಾದ ಪರಮೇಶ್ವರನೇ ನಿನಗೆ ವಂದನೆ. ॥೩೯॥

ಮಹೇಶ್ವರನೇ, ನಿನ್ನ ತ್ರಿಶೂಲದ ತುದಿಯು ದಕ್ಷಬ್ರಹ್ಮನ ವಕ್ಷಸ್ಸನ್ನು ಸೀಳಿಬಿಟ್ಟಿತಲ್ಲವೇ ? ತ್ರಿನಯನನಾಗಿ ದೇವಲೋಕದ ಆಧಿಪತ್ಯವನ್ನು ಹೊಂದಿ

**ಗಾನಂ ತೇ ಶೃಣು ನಾರದಸ್ಯ ಹಿ ಮುಖಾದ್ವಿಣಾಕ್ವಣನ್ಮಂಜುಲಂ ।**
**ಭೋ ಭೋ ದೇವವರ ಪ್ರಸೀದ ಭಗವನ್ ದೃಷ್ಟಿಂ ಕೃಪಾಯಾಃ ಕುರು॥೪೦॥**

**ಗಾನಾಂತೇ ನಾರದಮುಖಾದ್ವಿಣಾಕ್ವಣನಮಂಜುಲಂ ।**
**ಶ್ರುತ್ವೈವಂ ನಂದಿಕೇಶಾದ್ಯಾ ಗಣಾಶ್ಯಂಭೋರ್ಮಹಾತ್ಮನಃ ॥೪೧॥**

**ವ್ಯಜಿಜ್ಞಪಂಸ್ತೇ ದೇವಾಯ ಶಂಕರಾಯ ಮಹಾತ್ಮನೇ ।**
**ಪ್ರಣಮ್ಯ ನಂದಿಕೇಶೋಽಪಿ ಪಿಧಾಯಾಸ್ಯಂ ಕರೇಣ ವೈ ॥೪೨॥**

**ಉವಾಚ ದೇವಂ ವರದಂ ಪ್ರಸನ್ನಾಸ್ಯಂ ತ್ರಿಲೋಚನಂ ।**

॥ ನಂದಿಕೇಶ್ವರ ಉವಾಚ ॥

**ಶಂಭೋ ಶಂಕರ ಧೂರ್ಜಟೇ ತ್ರಿನಯನಾಪಾರವ್ಯಥಾಂ ಸಂಹರ**
**ಪಾರಾವಾರಮಹಾಪ್ರಭಾವಜಗತಾಂ ವ್ಯಾಪಾರಸಾರಾದರ ।**
**ತ್ವನ್ನಾಮಾಮೃತಧಾರಯಾ ಜಗದಿದಂ ಪ್ರಾಪ್ತಸ್ತವೇಶಾಂತಿಕಂ**
**ಸಂಭಾವ್ಯ ಪ್ರಮಥಾಧಿನಾಥ ಪದವೀಂ ದ್ರಷ್ಟುಂ ಪದಾಬ್ಜಂ ತವ ॥೪೩॥**

---

ದ್ದೀಯಲ್ಲವೇ ? ನಿನ್ನನ್ನು ಒಲಿಸಿಕೊಳ್ಳಲು ನಮಗೆ ನಿಜವಾದ ಭಕ್ತಿಯೊಂದು ಬೇಕು. ಎಲೈ ದೇವಶ್ರೇಷ್ಠನೇ, ನಾರದನಾದ ನಾನು ವೀಣೆಯಿಂದ ಗಾನಮಾಡುತ್ತಿರುವ ನಿನ್ನ ನಾಮಗಳನ್ನು ಮನಸಾ ಕೇಳಿ ನನ್ನನ್ನು ಅನುಗ್ರಹಿಸು." ||೪೦||

ಎಂದು ನಾರದನು ತನ್ನ ವೀಣೆಯನ್ನು ಮಧುರವಾಗಿ ನುಡಿಸುತ್ತಾ ಶಿವಕೀರ್ತನೆಗಳನ್ನು ಗಾನಮಾಡಲು, ಆ ಮಧುರಗಾನವನ್ನು ಪರಮೇಶ್ವರನ ಪ್ರಮಥಗಣಗಳೂ, ನಂದಿಕೇಶ್ವರನೂ ಸಂತೋಷದಿಂದ ಕೇಳಿದರು. ||೪೧||

ಒಡನೆಯೇ ಅಲ್ಲಿದ್ದವರೆಲ್ಲರೂ ಪರಶಿವನಿಗೆ ನಾರದನು ಬಂದಿರುವ ವಿಷಯವನ್ನು ವಿಜ್ಞಾಪಿಸಿದರು. ನಂದಿಕೇಶ್ವರನು ಮಾತ್ರ ತನ್ನ ಕೈಯಿಂದ ಬಾಯನ್ನು ಮರೆಮಾಡಿಕೊಂಡು, ಪ್ರಸನ್ನಮುಖನಾಗಿ ಕುಳಿತಿರುವ ಶಂಕರನೊಡನೆ ಹೀಗೆ ವಿಜ್ಞಾಪಿಸಿಕೊಂಡನು. ||೪೨||

"ಓ ಶಂಭುವೇ, ಶಂಕರನೇ, ಗಂಗಾಧರನೆ, ಮುಕ್ಕಣ್ಣನೇ, ನಮ್ಮೆಲ್ಲರ ದುಃಖಪರಂಪರೆಗಳನ್ನು ನಾಶಮಾಡುವವನಾಗು. ಮಹಾಮಹಿಮನೇ, ಜಗದ್ರೂ

ದ್ವಾರೇ ತಿಷ್ಠತಿ ವಾರಿತಸ್ಸ ಹಿ ಮಯಾ ಕಿಂಚಾಜ್ಞಯಾಶು ಪ್ರಭೋ ।
ದೇವಾಜ್ಞಾವಸರೇಣ ತಂ ಗಮಯಿತುಂ ದಿವ್ಯಂ ಮುನಿಂ ನಾರದಂ ।
ತ್ವತ್ಪಾದಾಂಬುಜಲೋಲಮಿಷ್ಟಮನಸಂ ಸರ್ವೈರ್ವಿಶಿಷ್ಟಾಂತರಂ ।
ಭಕ್ತಿಜ್ಞಾನವಿರಕ್ತಿಶಕ್ತಿಸಹಿತಂ ಪಾದೌ ದಿದೃಕ್ಷುಃ ಪ್ರಭೋಃ ॥೪೪॥

ನಂದಿಕೇಶವಚಶ್ಶ್ರುತ್ವಾ ಕಟಾಕ್ಷಾಗ್ರೇಣ ಶಂಕರಃ ।
ಸಂಜ್ಞಾಂ ಚಕ್ರೇಽಖಿಲೇಶಾನೋ ನಾರದಾಗಮನಂ ಪ್ರತಿ ॥೪೫॥

ನಾರದೋಽಪಿ ಚ ದೇವೇಶಂ ನತ್ವಾ ತುಷ್ಟಾವ ಹರ್ಷಿತಃ ।
ಶಿಪಿವಿಷ್ಟಂ ಮಹಾದೇವಮಷ್ಟಾಕೃತಿಮನೋಹರಂ ॥೪೬॥

ಜಯ ಜಯ ದೇವ ಮಹೇಶ ಧೂರ್ಜಟೇ
ಜಯ ಜಯ ವಿಶ್ವವಿಧಾನ ದಕ್ಷಶಿಕ್ಷ ।

---

ಪಿಯೇ, ನಿನ್ನ ನಾಮಾಮೃತವನ್ನು ಧಾರಾಕಾರವಾಗಿ ಸರ್ವತ್ರ ಹರಡಿ, ನಾರದ ಮಹರ್ಷಿಯು ನಿನ್ನ ಪಾದದರ್ಶನಾರ್ಥವಾಗಿ ಈಗ ಇಲ್ಲಿಗೆ ಬಂದಿರುವನು. ॥೪೩॥

ಪರಶಿವನೇ, ಆ ನಾರದ ಋಷಿಯನ್ನು ಈಗ ಬಾಗಿಲಿನಲ್ಲಿ ತಡೆದಿರುವೆನು. ಪ್ರಭುವೇ, ನಿನ್ನ ಆಜ್ಞಾಧಾರಕನಾದ ನನಗೆ ಅಪ್ಪಣೆ ಕೊಟ್ಟರೆ ಈಗಲೇ ಒಳಕ್ಕೆ ಬಿಡುವೆನು. ನಾರದನಾದರೋ, ನಿನ್ನ ಪಾದಕಮಲದರ್ಶನಲಾಲಸನಾಗಿರುವನು. ದೇವಕಾರ್ಯಕ್ಕಾಗಿ ಇಲ್ಲಿಗೆ ಬಂದಿರುವನು. ಭಕ್ತಿ, ಜ್ಞಾನ, ವೈರಾಗ್ಯ ಇವುಗಳನ್ನು ಪಡೆದು, ಆನಂದಮಯನಾಗಿ ಈಗ ಸ್ವಾಮಿಯ ಪಾದದರ್ಶನಾಕಾಂಕ್ಷಿಯಾಗಿ ದ್ವಾರದಲ್ಲಿ ನಿಂತಿರುವನು." ॥೪೪॥

ಎಂದು ಹೇಳಿದ ನಂದೀಶ್ವರನ ಮಾತುಗಳನ್ನು ಕೇಳಿ ಶಂಕರನು ದಯಾರ್ದ್ರ ಹೃದಯನಾಗಿ ಒಳಕ್ಕೆ ನಾರದನನ್ನು ಬಿಡಲು, ಆಜ್ಞಾಸೂಚಕವಾದ ದೃಷ್ಟಿಯನ್ನು ಬೀರಿದನು. ॥೪೫॥

ನಂದೀಶ್ವರನು ನಾರದನ ಸಮೀಪಕ್ಕೆ ಬಂದು, ಶಿವಾಜ್ಞೆಯನ್ನು ವಿವರಿಸಲಾಗಿ, ನಾರದನು ಒಳಕ್ಕೆ ಪ್ರವೇಶಿಸಿ, ಮಹಾದೇವನೂ, ಅಷ್ಟಮೂರ್ತಿಯೂ ಆದ ಮನೋಹರಾಕಾರದ ಸ್ವಾಮಿಯನ್ನು ಸಂತೋಷದಿಂದ ವಂದಿಸಿದನು. ॥೪೬॥

ಮತ್ತೂ ಶಂಭುವನ್ನು ನೋಡಿ, ಹೀಗೆ ಜಯಕಾರ ಮಾಡಿದನು. "ಮಹೇಶ್ವರನೇ, ನದೀಧರನೇ ನಿನಗೆ ಜಯವಾಗಲಿ. ವಿಶ್ವನಿರ್ಮಾಪಕನಾಗಿ ದಕ್ಷಬ್ರಹ್ಮನನ್ನು

ಜಯ ಜಯ ವಿಶ್ರುತವೇದಗೀತಕೀರ್ತೇ ।
ಜಯ ಜಯ ಭಕ್ತಜನಾರ್ಪಿತೈಕಭುಕ್ತೇ(ಸುಪ್ತೇ) ॥೪೭॥

ಜಯ ಜಯ ಭಗವಂಸ್ತಪಃಕ್ರಿಯಾಣಾಂ
ಫಲದಾನೋನ್ಮುಖಪಂಚವಕ್ತ್ರ ಶಂಭೋ ।
ತವ ಶಿವ ಭಗವನ್ ಪದಾಬ್ಜಯುಗ್ಮ
ಮಭಿಪೂಜ್ಯ ಸ್ವಹೃದಾ ತಪೈಕರಾಶಿಃ ॥೪೮॥

ಮುನಿರಾಸ್ತೇ ಹಿಮವನ್ನಗೋರ್ಧ್ವಮೌಲಾ
ತವ ದಿವ್ಯಾಮೃತದೇಹಲೋಕನೈಕತರ್ಷಃ ।
ಇತ್ಥಂ ನಾರದವಾಕ್ಯೇನ ಜಾತಹರ್ಷೋ ಮಹೇಶ್ವರಃ
ಜೈಗೀಷವ್ಯಂ ಯಯೌ ದ್ರಷ್ಟುಂ ನಾನಾಗಣವರೈರ್ವೃತಃ ॥೪೯॥

ಆರುಹ್ಯ ಶಾಕ್ವರಂ ದಿವ್ಯಂ ನಾನಾಲಂಕಾರಭೂಷಿತಂ ।
ನಾನಾಗಣಮುಖೋದ್ಗೀತವಾದ್ಯವೃಂದಕೃತಾರವಂ ॥೫೦॥

---

ಶಿಕ್ಷಿಸಿದ ನೀನು ಸರ್ವೋತ್ಕೃಷ್ಟನಾಗಿರು. ಪ್ರಸಿದ್ಧವಾದ ವೇದದಲ್ಲಿ ಸ್ತುತ್ಯನಾಗಿರುವ ಕೀರ್ತಿಶಾಲಿಯೇ, ಭಕ್ತ ಜನರನ್ನು ಉದ್ಧರಿಸುವ ಗುರಿಯುಳ್ಳ ಮಹಾದೇವನೇ, ನಿನಗೆ ಜಯವಾಗಲಿ. ॥೪೭॥

ಭಗವಂತನೇ, ಪೂಜ್ಯದೇವನೇ, ತಪಸ್ವಿಗಳಿಗೆ ಫಲಪ್ರದಾತನೇ, ಪಂಚ ಮುಖವುಳ್ಳವನೇ, ಶಂಭುವೇ ನಿನಗೆ ಜಯವಾಗಲಿ. ನಿನ್ನ ಪಾದಕಮಲವನ್ನು ಭಕ್ತಿಯಿಂದರ್ಚಿಸಿ, ಅದನ್ನೇ ಮುಖ್ಯತಪಸ್ಸನ್ನಾಗಿ ಉಳ್ಳ ಜೈಗೀಷವ್ಯಮಹಾ ಮುನಿಯು, ॥೪೮॥

ಹಿಮಾಲಯಪರ್ವತದ ಶಿಖರದಲ್ಲಿ ನಿನ್ನ ಪವಿತ್ರವಾದ ಮತ್ತು ಅಮೃತ ಮಯವಾದ ಮೂರ್ತಿಯನ್ನು ನೋಡಬೇಕೆಂಬ ತವಕದಿಂದ ತಪಸ್ಸುಮಾಡುತ್ತಾ ಕುಳಿತಿರುವನು.” ಎಂದು ಹೇಳಿದ ನಾರದಮಹರ್ಷಿಯ ಮಾತುಗಳನ್ನು ಕೇಳಿದ ಮಹೇಶ್ವರನು, ಸಂತುಷ್ಟನಾಗಿ ಪ್ರಮಥಗಣಗಳಿಂದ ಪರಿವೃತನಾಗಿ, ಜೈಗೀಷವ್ಯ ಮಹರ್ಷಿಯಿದ್ದೆಡೆಗೆ ಹೊರಟನು. ॥೪೯॥

ಆಗಲೇ ನಾನಾಲಂಕಾರಭೂಷಿತವಾದ ದಿವ್ಯವೃಷಭವನ್ನೇರಿದನು. ಪ್ರಮಥ ಗಣಗಳೆಲ್ಲವೂ ನಾನಾವಿಧವಾದ ವಾದ್ಯಧ್ವನಿಗಳನ್ನು ಘೋರ್ಗರೆದುವು. ಶಿವಗಣ

ಛತ್ರಚಾಮರಹಸ್ತೈಶ್ಚ ಪತಾಕಾವಿಧೃತೈರ್ಗಣೈಃ ।
ಉಮಯಾ ಸ್ಕಂದಹೇರಂಬನಂದಿಭೃಂಗಿಗಣಾವೃತಃ ॥೫೧॥

ಕ್ಷಣೇನ ಹಿಮವನ್ಮೌಲಿಮಾಜಗಾಮ ಮಹೇಶ್ವರಃ ।
ಮುನಿಭಿರ್ಗಣಮುಖ್ಯೈಶ್ಚ ಮಂದಸ್ಮಿತಮನೋಹರಃ ॥೫೨॥

ಉದ್ಯಚ್ಛಶಾಂಕಧವಳಧಾವಳ್ಯಾಂಕಸಮಪ್ರಭಃ ।
ಗಂಗಾತುಂಗತರಂಗೌಘಮೌಲಿದ್ಯುತಿವಿರಾಜಿತಃ ॥೫೩॥
ದೃಷ್ಟ್ವಾ ತಂ ಮುನಿಮೇಕಾಗ್ರಮಾನಸಂ ಸ ಮಹೇಶ್ವರಃ ।

ದಯಾಕಟಾಕ್ಷಾಮೃತಸಿಂಧುವರ್ಷೈಃ ।
ವಲ್ಮೀಕಭೂತಂ ಮುನಿಮಾವವರ್ಷ ।
ಸ ಚೋತ್ಥಿತೋ ದೇವವರಂ ಪ್ರಣಮ್ಯ ।
ತುಷ್ಟಾವ ಚಾಷ್ಟಾಕೃತಿಮಪ್ರಮೇಯಂ ॥೫೪॥

---

ಗಳಲ್ಲಿ ಕೆಲವರು ಸ್ವಾಮಿಗೆ ಛತ್ರಿ ಹಿಡಿದರು. ಚಾಮರಗಳನ್ನು ಬೀಸಿದರು. ಧ್ವಜ ಪಟಗಳನ್ನು ಪ್ರದರ್ಶಿಸಿದರು. ಶಂಕರನು, ತಾನು ಪಾರ್ವತಿಯೊಡಗೂಡಿ ಕುಮಾರ ಸ್ವಾಮಿ, ಗಣಪತಿ, ನಂದಿ, ಭೃಂಗಿ ಇವರೇ ಮೊದಲಾದವರನ್ನು ಕರೆದುಕೊಂಡು ಪ್ರಯಾಣಸನ್ನದ್ಧನಾದನು. ॥೫೧॥

ಕ್ಷಣಕಾಲದಲ್ಲಿಯೇ, ಮಹೇಶ್ವರನು ಸ್ಮಿತವದನಸುಂದರನಾಗಿ, ಅನೇಕ ಋಷಿಜನಾಕೀರ್ಣವಾದ ಹಿಮಾಲಯದ ಶಿಖರವನ್ನು, ತನ್ನ ಗಣಗಳೊಂದಿಗೆ ಹೋಗಿ ಸೇರಿದನು. ॥೫೨॥

ಪ್ರಕಾಶಮಾನನಾದ ಚಂದ್ರನ ಕಾಂತಿಯಂತೆ, ಶುಭ್ರವಾದ ಕಾಂತಿಯುಳ್ಳ, ಮತ್ತು ಗಂಗಾನದಿಯ ಉನ್ನತ ತರಂಗಮಾಲೆಯ ಸೌಂದರ್ಯದಿಂದ ಪ್ರಕಾಶಮಾನ ನಾದ ಮಹೇಶ್ವರನು, ಏಕಾಗ್ರ ಚಿತ್ತತೆಯಿಂದ ತಪಸ್ಸು ಮಾಡುತ್ತಿರುವ ಜೈಗೀಷವ್ಯ ಮಹಾಮುನಿಯನ್ನು ಕಂಡನು. ॥೫೩॥

ಆ ಋಷಿಯಾದರೋ ಘೋರ ತಪಸ್ಸಿನಲ್ಲಿ ಮುಳುಗಿ ಹುತ್ತದ ಒಳಗೆ ಅಡಗಿ ಹೋಗಿದ್ದನು. ಅಂತಹವನ ಮೇಲೆ ಪರಶಿವನು ತನ್ನ ಕೃಪಾಕಟಾಕ್ಷ ಲಹರಿಯನ್ನು ಬೀರಿದನು. ಒಡನೆಯೇ ಎಚ್ಚೆತ್ತು ಆ ಮುನಿಯು, ಎದುರಿನಲ್ಲಿ ನಿಂತಿದ್ದ ಅಷ್ಟ

ಮಹೇಶ್ವರ ಮಹೋದ್ಧತಪ್ರಬಲಪಾಪತಾಪಾಪಹ ।
ಪ್ರಪನ್ನಜನರಕ್ಷಣ ಕ್ಷಣವಿಶಿಷ್ಟ ಶಿಷ್ಟೇಷ್ಟದ ।
ವಿನೀತಜನವತ್ಸಲ ತ್ರಿಪುರಮಾರಸಂಶೋಷಕ ।
ಪ್ರಸೀದ ದಯಯಾಧುನಾ ಭವದವಾಗ್ನಿಸಂಶೋಷಕ ॥೫೫॥

ಕ್ಷಪಾಪತಿಕಲಾಧರ ಕ್ಷಪಿತಪಾಪತಾಪಾಪಹ
ಪ್ರಚಂಡಗರಲಾಶನ ತ್ರಿದಶಮೌಲಿವಂದ್ಯಾಂಘ್ರಿಕ ।
ಮಹೋಕ್ಷವರವಾಹನಾಧ್ವರಸುದಕ್ಷದಕ್ಷಾಪಹ
ಭಗಾಕ್ಷಿಹರ ಶಂಕರ ಪ್ರಸಭಮಾಶು ಪಶ್ಯ ಪ್ರಭೋ ॥೫೬॥

---

ಮೂರ್ತಿಯೂ, ಅಪ್ರಮೇಯನೂ ಆದ ಶಂಕರನನ್ನು ನೋಡಿ ನಮಸ್ಕರಿಸಿದನು. ॥೫೪॥

ಮತ್ತು ಭಕ್ತಿಪೂರ್ವಕವಾಗಿ ಹೀಗೆ ಸ್ತುತಿಸಲಾರಂಭಿಸಿದನು. "ಮಹೇಶ್ವರನೇ, ಬ್ರಹ್ಮಹತ್ಯಾದಿ ಮಹಾ ಮಹಾಪಾಪಗಳನ್ನು ಭಸ್ಮಮಾಡತಕ್ಕವನೇ, ಭಕ್ತಜನರಕ್ಷಕನೇ, ಸರ್ವದಾ ನಿನ್ನನ್ನೇ ಭಜಿಸುತ್ತಿರುವ ಶಿಷ್ಯರ ಇಷ್ಟಾರ್ಥಗಳನ್ನು ಪೂರ್ತಿಗೊಳಿಸುವವನೇ, ನನಗೆ ಪ್ರಸನ್ನನಾಗು. ವಿನಯದಿಂದಕೂಡಿ ನಿನ್ನನ್ನು ಭಜಿಸುವವರಲ್ಲಿ, ನಿನಗೆ ಹೆಚ್ಚಿನ ಪ್ರೀತಿಯಿರುತ್ತದೆಯಲ್ಲವೇ! ತ್ರಿಪುರಗಳನ್ನೂ, ಕಾಮನನ್ನೂ ನಾಶಮಾಡಿ, ಆ ಮೂಲಕ ಸಂಸಾರಪಾಶವನ್ನು ಅಥವಾ ಸಂಸಾರವೆಂಬ ದಾವಾಗ್ನಿಯನ್ನು ನಾಶಗೈಯ್ಯುವ ಪರಮೇಶ್ವರನೇ, ನನ್ನ ಮೇಲೆ ಅನುಗ್ರಹವನ್ನಿಡು. ॥೫೫॥

ಚಂದ್ರಕಲೆಯನ್ನು ಶಿರಸ್ಸಿನಲ್ಲಿ ಧರಿಸಿ, ಪಾಪಗಳ ಬೇಗೆಯನ್ನು ಕ್ಷಣಕಾಲದಲ್ಲಿ ನಾಶಮಾಡುವ ಶಂಕರನೇ, ನೀನು ಮಹತ್ತರವಾದ ವಿಷಪಾನಮಾಡಿ, ಸಮಸ್ತ ದೇವತೆಗಳಿಂದಲೂ, ದೇವೇಂದ್ರನಿಂದಲೂ ಪೂಜಿತನಾಗಿರುವೆಯಲ್ಲವೆ? ನಿನ್ನ ವಾಹನವಾದರೋ, ದಿವ್ಯ ವೃಷಭನು. ಯಜ್ಞಮಾಡುವುದರಲ್ಲಿ ನಿಪುಣನೆಂದು ಅಹಂಕಾರಪಡುತ್ತಿದ್ದ ದಕ್ಷನನ್ನು ನಿಗ್ರಹಿಸಿ, ಶಂಕರನೇ, ನೀನು ಮಹಾಮಹಿಮನೆನಿಸಿಕೊಂಡಿರುವೆ. ಪ್ರಭುವೇ, ಶಂಭುವೇ ಈಗ ನನ್ನನ್ನು ಕೃಪಾಪಾಂಗದಿಂದ ನೋಡು. ॥೫೬॥

ಹರಾಮರವರೋತ್ತಮ ಪ್ರಬಲಸೌರಿಗರ್ವಾಪಹ
ಮೃಕಂಡುತನಯಾರ್ಚಿತ ಪ್ರಬಲಶೂಲದಗ್ಧಾಂತಕ ।
ಫಣೀಂದ್ರಮಣಿಕಂಕಣೋಜ್ಜ್ವಲಿತಸೂರ್ಯಸೋಮಾನಲ
ತ್ರಿಲೋಚನ ದಯಾರಸೈಃ ಪ್ರಥಯ ವೇದಗೀತಾಶಯ ॥೫೭॥

ತ್ರಿಯಂಬಕ ಸದಾಶಿವ ತ್ರಿದಶನಾಯಕಾಶಾವಸ
ಯಮೀಂದ್ರಹೃದಯಾಬ್ಜಗೋಜ್ವಲಿತಮಡ್ಡುನಾದಪ್ರಿಯ ।
ಸುಕೃತ್ತಿವಸನಾಮಲೋಜ್ಜ್ವಸಿತಭೋಗಿಭೋಗಪ್ರಿಯ
ಪ್ರಸೀದ ಮಯಿ ದೇವ ಭೋರ್ಮುರಹರಾಬ್ಜನೇತ್ರಾಂಘ್ರಿಕ ॥೫೮॥

ರಮಾರಮಣಸಾಯಕ ಪ್ರಬಲಮೇರುಸದ್ಧನ್ವಕ
ಮಹೀವರರಥಾಂಗಕ ವಿಧೃತಸೋಮಪೂಷಾತ್ಮಕ ।
ತುರಂಗನಿಗಮಾನ್ವಯ ವಿಧಿಸುಯಂತರೀಕ್ಷಸ್ವ ಮಾಂ
ದಯಾರಸದೃಶಾನಯಾ ಮದನಕಾಯನಾಶಾದರ ॥೫೯॥

---

ಪರಶಿವನೇ, ದೇವಶ್ರೇಷ್ಠನೇ. ಸೂರ್ಯಪುತ್ರನಾದ ಯಮನ ಗರ್ವವನ್ನು ನಾಶಮಾಡಿದವನೇ, ಮಾರ್ಕಂಡೇಯನಿಂದ ಪೂಜಿತನಾದವನೇ, ತ್ರಿಶೂಲದಿಂದ ತಿವಿಯಲ್ಪಟ್ಟ ಯಮನುಳ್ಳವನೇ, ಆದಿಶೇಷನನ್ನೇ ಕಂಠಾಭರಣವನ್ನಾಗಿ ಉಳ್ಳವನೇ, ಸೂರ್ಯ, ಚಂದ್ರ, ಅಗ್ನಿ ಇವರುಗಳನ್ನೇ ಕಣ್ಣುಗಳನ್ನಾಗಿ ಉಳ್ಳವನೇ, ವೇದಪ್ರತಿಪಾದ್ಯನೇ, ನನ್ನನ್ನು ದಯಾರಸಪೂರಿತವಾದ ಕಟಾಕ್ಷದಿಂದ ಉದ್ಧರಿಸು. ॥೫೭॥

ಸದಾಶಿವನೇ, ನೀನು ತ್ರ್ಯಂಬಕನು. ಪೂರ್ವದಿಕ್ಕಿನಲ್ಲಿ ನೆಲೆಸಿರುವವನು. ಜಿತೇಂದ್ರಿಯರಾದ ಯೋಗಿಗಳ ಹೃದಯಕಮಲದಲ್ಲಿ ವಾಸಿಸುವವನು. ಡಿಂಡಿಮ ವೆಂಬ ವಾದ್ಯಧ್ವನಿಯಲ್ಲಿ ನಿನಗೆ ಹೆಚ್ಚಿನ ಪ್ರೀತಿಯಿರುವುದಲ್ಲವೇ! ಚರ್ಮಾಂಬರ ಧಾರಿಯಾಗಿ, ಶುಭ್ರವಾದ ಆದಿಶೇಷನನ್ನೇ ಆಭರಣವನ್ನಾಗಿ ಮಾಡಿಕೊಂಡಿರುವೆ. ಮುರಾರಿಯ ನೇತ್ರಕಮಲದಿಂದ ಅರ್ಚಿತವಾದ ಪಾದಕಮಲವುಳ್ಳವನೇ, ನೀನು ಪ್ರಸನ್ನನಾಗು. ॥೫೮॥

ಎಲೈ ಪರಮೇಶ್ವರನೇ, ನೀನು ಹಿಂದೆ ವಿಷ್ಣುವನ್ನೇ ಆಯುಧವನ್ನಾಗಿ ಮಾಡಿಕೊಂಡಿದ್ದೆ. ನಿನಗೆ ಮೇರುಪರ್ವತವೇ ಧನುಸ್ಸಾಗಿತ್ತು. ಭೂಮಿಯನ್ನೇ ರಥವನ್ನಾಗಿ ಮಾಡಿಕೊಂಡು, ಸೂರ್ಯ ಚಂದ್ರರನ್ನೇ ಚಕ್ರಗಳನ್ನಾಗಿ ಕಲ್ಪಿಸಿಕೊಂಡಿ

ಜೇಗೀಷವ್ಯಸ್ತುತಿಂ ಶ್ರುತ್ವಾ ಸಂತುಷ್ಟಃ ಪ್ರಾಹ ಶಂಕರಃ ।
ಪ್ರಾಂಜಲಿಂ ವಿನಯೋಪೇತಂ ಮುನಿಂ ವೀಕ್ಷ್ಯ ಸ್ಮರಾರ್ದನಃ ॥೬೦॥

|| ಈಶ್ವರ ಉವಾಚ ||

ತ್ವಂ ಧೂರ್ಜಟಿಪ್ರೇಮರಸೋ ಮುಮುಕ್ಷು ।
ರ್ಮೋಕ್ಷೈಕತಾನಶ್ಶ್ರುತಿಶೇಖರಾಂತಃ ।
ತ್ವಮೂರ್ಧ್ವರೇತಾ ಮಮ ಸುಪ್ರಸಾದಭಾಕ್ ।
ತ್ವಂ ಸಾರಭೂತೋಽಸಿ ಮುನೀಶ್ವರಾಣಾಂ ॥೬೧॥

ವಿಗಲಿತಮದಮಾನಲೋಭಮೋಹಃ ।
ಪ್ರಶಮಿತವೃತ್ತಿರುಮೇಶತರ್ಷಚೇತಾಃ ।
ಧೃತಭಸಿತವರೋ ವರಾಕ್ಷಮಾಲ ।
ಶ್ರುತಿಮೂರ್ಧನ್ಯಮನೋವಿಚಾರಶೂರಃ ॥೬೨॥

---

ದ್ದೆಯಲ್ಲವೇ ? ನಿನಗೆ ವೇದಗಳೇ, ಕುದುರೆಗಳಾಗಿದ್ದುವು. ಬ್ರಹ್ಮನು ಸಾರಥಿಯಾಗಿದ್ದನು. ಇಂತಹ ಮಹಾಮಹಿಮವಸ್ತುಗಳನ್ನೆಲ್ಲಾ ಅಧೀನವನ್ನಾಗಿ ಮಾಡಿಕೊಂಡಿರುವ, ಕಾಮಧ್ವಂಸಕನಾಗಿರುವ ಪರಮೇಶ್ವರನೇ, ನಿನ್ನ ಕರುಣಾಕಟಾಕ್ಷದಿಂದ ನನ್ನನ್ನುದ್ಧರಿಸು." ||೫೯||

ಹೀಗೆ ಜೈಗೀಷವ್ಯಮುನಿಯು ಸ್ತುತಿಸಿದುದನ್ನು ಕೇಳಿ ಶಂಕರನು ಸಂತುಷ್ಟನಾಗಿ, ಜೈಗೀಷವ್ಯಮುನಿಯನ್ನು ನೋಡಿ ಪರಮೇಶ್ವರನು ಹೀಗೆಂದನು. ||೬೦||

"ಎಲೈ ಮಹರ್ಷಿಯೇ, ನೀನು ಮೋಕ್ಷಾರ್ಥಿಯಾಗಿ ನನ್ನಲ್ಲಿಯೇ ನೆಟ್ಟ ಮನಸ್ಸುಳ್ಳವನಾಗಿರುವೆ. ಮೋಕ್ಷಜ್ಞಾನವನ್ನು ವಿವರಿಸುವಂತಹ ಶ್ರುತಿಯಲ್ಲಿ ಪಾರಂಗತನಾಗಿರುವೆ. ನೀನು ಊರ್ಧ್ವರೇತಸ್ಕನು. ಮುನಿಗಳಲ್ಲಿ ಸಾರಭೂತನೆನಿಸಿರುವೆ. ಈಗ ನೀನು ನನ್ನ ಸಂಪೂರ್ಣಾನುಗ್ರಹಕ್ಕೆ ಪಾತ್ರನೆನಿಸಿದ್ದೀಯೆ. ||೬೧||

ನೀನು ಮದ, ಮಾನ, ಲೋಭ, ಮೋಹ ಇವುಗಳನ್ನು ದೂರೀಕರಿಸಿರುವೆ. ಜಿತೇಂದ್ರಿಯನೆನಿಸಿರುವೆ. ಪಾರ್ವತೀಪತಿಯಾದ ನನ್ನನ್ನು ತೃಪ್ತಿಪಡಿ

**ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ಜೈಗೀಷವ್ಯಪ್ರಸಾದಕರಣಂ ನಾಮ ಪಂಚಮೋಽಧ್ಯಾಯಃ**

---

ಸಿರುವೆ. ಭಸ್ಮಾಂಗಧಾರಿಯಾಗಿ, ಅಕ್ಷಮಾಲಾದಿಗಳಿಂದ ಶೋಭಿಸುತ್ತಿರುವೆ. ವೇದ ವೇದಾಂತಗಳ ತತ್ತ್ವಗಳಲ್ಲಿ ದೃಢಮನಸ್ಸಿಟ್ಟು, ಅವುಗಳಲ್ಲಿ ಶೂರನೆನಿಸಿಕೊಂಡಿದ್ದೀಯೆ. ಎಂದು ಶಂಕರನು ಋಷಿಯನ್ನು ಹೊಗಳಿದನು. ||೬೨||

ಇಲ್ಲಿಗೆ ಶ್ರೀ ಶಿವರಹಸ್ಯದ ಪ್ರಥಮಾಂಶದಲ್ಲಿ ಜೈಗೀಷವ್ಯಪ್ರಸಾದಕರಣವೆಂಬ ಐದನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

# ಅಥ ಶ್ರೀಶಿವರಹಸ್ಯೇ

## ಷಷ್ಠೋಽಧ್ಯಾಯಃ

### ಜೈಗೀಷವ್ಯಾಗಮನಂ

|| ಜೈಗೀಷವ್ಯ ಉವಾಚ ||

**ತ್ವಮೇವ ದೇವದೇವೇಶ ಪಿತಾ ಮಾತಾ ಸಖಾ ಪ್ರಭುಃ ।**
**ತ್ವಮೇವ ಸರ್ವಂ ದೇವೇಶ ವಿಶ್ವೇಶ್ವರ ಮಹೇಶ್ವರ ॥೧॥**

**ನ ಜಾನೇ ಗಿರಿಜಾಜಾನೇ ತ್ವತ್ತೋಽಹ್ಯನ್ಯಂ ಸುರೇಶ್ವರ ।**
**ತಸ್ಮಾತ್ಪ್ರಸೀದ ಭಗವನ್ ಕರುಣಾಸಾಗರಾಧುನಾ ॥೨॥**

**ಪ್ರಸನ್ನೋಽಸ್ಮಿ ಪದದ್ವಂದ್ವಂ ನಿರ್ದ್ವಂದ್ವಂ ತೇ ಮಹೇಶ್ವರ ।**
**ಭ್ರಾತರೌ ಸ್ಕಂದಹೇರಂಬೌ ಸಖಾಯೋ ಗಣಪಾ ಮಮ ॥೩॥**

---

## ಶ್ರೀಶಿವರಹಸ್ಯದಲ್ಲಿ ಆರನೆಯ ಅಧ್ಯಾಯ

ಪ್ರತ್ಯಕ್ಷನಾಗಿ ನಿಂತಿರುವ ಮಹೇಶ್ವರನನ್ನು ನೋಡಿ ಜೈಗೀಷವ್ಯಮಹಾಮುನಿಯು, ಹೀಗೆ ಪ್ರಾರ್ಥಿಸಲಾರಂಭಿಸಿದನು.—" ಪರಶಿವನೇ, ನೀನೇ ನನಗೆ ತಂದೆ, ತಾಯಿ, ಸ್ನೇಹಿತ, ಮತ್ತು ಪ್ರಭು. ಮಹೇಶ್ವರನಾಗಿ ಮಹಾದೇವನೆನಿಸಿರುವ ಶಂಭುವೇ, ಒಟ್ಟಿನಲ್ಲಿ ನನಗೆ ಎಲ್ಲವೂ ನೀನೇ. ||೧||

ಗಿರಿಜಾಪತಿಯೇ, ನಿನಗಿಂತ ಮಹಿಮಾಶಾಲಿಯಾದ ಬೇರೆ ದೇವರೊಬ್ಬರನ್ನು ನಾನು ಕಾಣೆ. ದಯಾಸಾಗರನೇ, ಭಗವಂತನೇ, ಈಗ ನನ್ನನ್ನುದ್ಧರಿಸು. ||೨||

ಅನನ್ಯಸದೃಶವಾದ ನಿನ್ನ ಪಾದದ್ವಂದ್ವವನ್ನು ಈಗ ನಂಬಿ ನಿಂತಿರುವೆನು. ನನಗೆ ಸ್ಕಂದಗಣಪತಿಗಳು ಅಣ್ಣತಮ್ಮಂದಿರು. ಉಳಿದ ಗಣನಾಯಕರು ಸ್ನೇಹಿತರಂತಿರುವರು. ||೩||

ಜಗತಾಂ ಜನನೀ ಗೌರೀ ಜನಿತ್ರೀ ಮಮ ಶಂಕರೀ ।
ಜಗತ್ಪಿತಾ ತ್ವಮೇವೇಶ ಪಿತಾ ಮಮ ಮಹೇಶ್ವರ ॥೪॥

ನಾನ್ಯಂ ವರಂ ವೃಣೇ ದೇವ ತ್ವತ್ಪಾದಾಂಬುಜಭಕ್ತಿತಃ ।
ಸೈವ ಧರ್ಮಾರ್ಥಕಾಮಾದಿಮೋಕ್ಷಹೇತುರ್ಮಮಾಧುನಾ ॥೫॥

ಯಯಾ ಭಕ್ತ್ಯಾ ಮಹಾದೇವ ಮುಕ್ತಾಸ್ಸರ್ವೇ ಸುರಾಸುರಾಃ ।
ತ್ವದ್ಭಕ್ತ ಏವ ಜಗತಿ ಮುಕ್ತೋಽನ್ಯಾನ್ಮೋಚಯತ್ಯಪಿ ॥೬॥

ತ್ವದ್ಭಕ್ತ್ಯೈವ ವಿಧಿರ್ವಿಶ್ವಂ ಸೃಜತ್ಯೇವ ಮಹೇಶ್ವರ ।
ತ್ವತ್ತೋ ವೇದಾನಧಿಗತಸ್ಸತ್ಯಲೋಕಾಧಿಪೋಽಭವತ್ ॥೭॥

ವಿಷ್ಣುಸ್ತವ ಪದದ್ವಂದ್ವಂ ನೇತ್ರಾಬ್ಜೇನ ಸಮರ್ಚಯತ್ ।
ದೈತ್ಯಬೃಂದೈಕಸಂಹತ್ಯೈ ಚಕ್ರಂ ಪ್ರಾಪ ಸುದರ್ಶನಂ ॥೮॥

---

ಲೋಕಮಾತೆಯಾದ ಗೌರೀದೇವಿಯೇ ನನ್ನ ಜನನಿಯು. ಲೋಕಜನಕನಾದ ನೀನೇ ನನಗೆ ತಂದೆಯು. ॥೪॥

ಸ್ವಾಮಿಯೇ, ಯಾವಾಗಲೂ ನನಗೆ ನಿನ್ನ ಪಾದಾರವಿಂದದಲ್ಲಿ ಅನನ್ಯಭಕ್ತಿಯುಂಟಾಗುವಂತೆ ಅನುಗ್ರಹಿಸು. ಮತ್ತೆ ಯಾವ ವರವೂ ನನಗೆ ಬೇಡ. ಆ ಹರಭಕ್ತಿಯೇ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳಿಗೆ ಸಾಧನವಾದದ್ದು. ॥೫॥

ನಿನ್ನನ್ನು ಭಕ್ತಿಯಿಂದಾರಾಧಿಸಿ, ಅನೇಕ ದೇವರಾಕ್ಷಸರು ಮುಕ್ತರಾಗಿರುವರು. ತಾನೂ ಮುಕ್ತನಾಗಿ, ಮತ್ತೊಬ್ಬರನ್ನೂ ಮುಕ್ತರನ್ನಾಗಿ ಮಾಡುವವನು ನಿನ್ನ ಭಕ್ತನೇ. ॥೬॥

ನಿನ್ನ ಭಕ್ತಿಯಿಂದಲೇ ಬ್ರಹ್ಮನು ಇಂದು ಜಗತ್ಕರ್ತನಾಗಿರುವನು. ಮತ್ತು ನಿನ್ನ ಅನುಗ್ರಹದಿಂದಲೇ ವೇದಬಲವನ್ನು ಸಂಪಾದಿಸಿ ಸತ್ಯಲೋಕಕ್ಕೆ ಅಧಿಪತಿಯೆನಿಸಿಕೊಂಡಿರುವನು. ॥೭॥

ವಿಷ್ಣುವು ನಿನ್ನ ಪಾದಕಮಲಗಳನ್ನು ತನ್ನ ನೇತ್ರಾಬ್ಜಗಳಿಂದ ಪೂಜಿಸಿ ದೈತ್ಯನಾಶಕವಾದ ಸುದರ್ಶನವೆಂಬ ಚಕ್ರವನ್ನು ಪಡೆದನಲ್ಲವೇ ? ॥೮॥

ತ್ವದ್ಭಕ್ತ್ಯೈವ ವಿರೂಪಾಕ್ಷ ವೈಕುಂಠಸ್ಯಾಧಿಪೋಽಭವತ್ ।
ಪದ್ಮಸದ್ಮಾಪತಿಶ್ಚಾಪಿ ಜಾತೋ ರುದ್ರಸ್ತ್ವದಾಶ್ರಯಾತ್ ॥೯॥

ದತ್ವಾ ಶೂಲವರಂ ತಸ್ಮೈ ರುದ್ರಾಯಾಮಿತತೇಜಸೇ ।
ರುದ್ರಾಣಾಮಾಧಿಪತ್ಯೇ ಚ ತ್ವಯಾ ಸೋಽಪ್ಯಭಿಷೇಚಿತಃ ॥೧೦॥

ಯಸ್ಯ ಶೂಲಾನಲಜ್ವಾಲಾದಗ್ಧಮಂತೇ ಚರಾಚರಂ ।
ಶಕ್ರೋಽಮರೇಂದ್ರತಾಂ ಪ್ರಾಪ್ತಸ್ತ್ವದ್ಭಕ್ತ್ಯೈವ ಹರಾಧುನಾ ॥೧೧॥

ಶಚೀಪತಿತ್ವಂ ಸಂಪ್ರಾಪ ನಾನಾಸ್ವರ್ಗೈಕಭೋಗಭಾಕ್ ।
ಧನಾಧಿಪತ್ವಂ ಧನದಸ್ತ್ವದ್ಭಕ್ತ್ಯೈವ ಮಹೇಶ್ವರ ॥೧೨॥

ಯಮೋಽಪಿ ತ್ವತ್ಪದಾರ್ಚಾತೋ ಲೋಕಪಾಲೋಽಭವಚ್ಛಿವ ।
ವರುಣೋ ಯಾದಸಾಂನಾಥಸ್ಸೂರ್ಯಚಂದ್ರಾನಿಲಾನಲಾಃ ॥೧೩॥

---

ಅಲ್ಲದೆ ತಾನು ವೈಕುಂಠಾಧಿಪತಿಯೆನಿಸಿ ಜಗದ್ರಕ್ಷಕನಾಗಿರುವುದೂ ನಿನ್ನ ಅನುಗ್ರಹ ಬಲದಿಂದಲೇ. ಹಾಗೆಯೇ ಜಗನ್ನಾಶಕನಾದ ರುದ್ರನೂ ನಿನ್ನಾಶ್ರಯ ದಿಂದಲೇ ಆ ಪದವಿಗೆ ಬಂದಿರುವನು. ॥೯॥

ರುದ್ರನಿಗೆ ಬಲಿಷ್ಠವಾದ ತ್ರಿಶೂಲವನ್ನಿತ್ತು, ರುದ್ರಗಣಗಳಿಗೆ ಅಧಿಪನನ್ನಾಗಿ ಮಾಡಿ ಅಭಿಷೇಕಮಾಡಿರುವವನು ನೀನೇ ಅಲ್ಲವೇ ? ॥೧೦॥

ಆ ರುದ್ರನೇ ನಿನ್ನ ತ್ರಿಶೂಲಾಗ್ನಿಯ ಸಹಾಯದಿಂದ ಚರಾಚರಾತ್ಮಕವಾದ ಈ ಜಗತ್ತನ್ನೆಲ್ಲಾ ನಾಶಮಾಡುವನು. ನಿನ್ನ ಭಕ್ತಿಬಲದಿಂದಲೇ ಇಂದ್ರನು ದೇವೇಂದ್ರಪದವಿಗೆ ಈಗ ತಕ್ಕವನಾಗಿರುವನು. ॥೧೧॥

ಮಹೇಶ್ವರನೇ, ಆ ಇಂದ್ರನು ನಿನ್ನ ಅನುಗ್ರಹದಿಂದ ಶಚೀಪತಿಯಾಗಿ ದೇವಲೋಕದ ಸಕಲ ಸುಖಗಳನ್ನೂ ಅನುಭವಿಸುತ್ತಿರುವನು. ಹಾಗೆಯೇ ಕುಬೇರನು ಧನಾಧಿಪತಿಯಾಗಿರುವುದೂ ನಿನ್ನ ಪೂಜಾಫಲದಿಂದಲೇ ॥೧೨॥

ಶಂಕರನೇ, ನಿನ್ನನ್ನು ಅರ್ಚನೆಮಾಡಿಯೇ, ಯಮನು ಲೋಕಪಾಲಕ ನಾಗಿಯೂ, ವರುಣನು ಜಲಾಧಿಪತಿಯಾಗಿಯೂ ಇರುವರು. ಹಾಗೆಯೇ ಸೂರ್ಯ, ಚಂದ್ರ, ವಾಯು, ಅಗ್ನಿ ಇವರು, ॥೧೩॥

ತ್ವದ್ಭಕ್ತ್ಯೈವ ವಿರೂಪಾಕ್ಷ ಲೇಭಿರೇ ದಿಕ್ಪತಿತ್ವತಾಂ ।
ಸಮರ್ಚಯಂತಿ ತ್ವಲ್ಲಿಂಗಂ ಭಕ್ತ್ಯಾ ಸರ್ವೇ ಸುರಾಸುರಾಃ ॥೧೪॥

ಸಹಸ್ರಭುಜತಾಂ ಪ್ರಾಪ್ತೋ ಬಾಣೋ ಭಕ್ತ್ಯಾ ತವೇಶ್ವರ ।
ಪೌಲಸ್ತ್ಯತನಯಶ್ಶಂಭೋ ರಾವಣೋ ಲೋಕರಾವಣಃ ॥೧೫॥

ಜಿಗ್ಯೇ ಸುರಾನ್ನೃಪವರಾನ್ ತ್ವದ್ಭಕ್ತ್ಯೈವ ಮಹೇಶ್ವರ ।
ಘಟೋದ್ಭವೇನ ತ್ವದ್ಭಕ್ತ್ಯಾ ಸಮುದ್ರಾಶ್ಚುಲುಕೀಕೃತಾಃ ॥೧೬॥

ದಧೀಚಿನಾಪಿ ತ್ವದ್ಭಕ್ತ್ಯಾ ವಿಷ್ಣವೇ ರೂಪಮದ್ಭುತಂ ।
ದರ್ಶಿತಂ ಮಾಯಿನೇ ಶಂಭೋ ಭೃಗುಣಾ ಶಾಪಿತೋ ಹರಿಃ ॥೧೭॥

ಉಪಮನ್ಯುನಾ ಚ ಬಾಲೇನ ಲಬ್ಧಃ ಕ್ಷೀರೈಕವಾರಿಧಿಃ ।
ತ್ವದ್ಭಕ್ತ್ಯಾ ಕಾಲಪಾಶೈಶ್ಚ ಪಾಶಿತೋಽಪಿ ಮೃಕಂಡುಜಃ ॥೧೮॥

---

ನಿನ್ನನ್ನು ಪೂಜಿಸಿ ದಿಕ್ಪತಿಗಳಾಗಿರುವರು. ಅದನ್ನು ತಿಳಿದೇ ಇಂದು ಸಮಸ್ತ ದೇವರಾಕ್ಷಸರೂ ನಿನ್ನ ಲಿಂಗವನ್ನೇ ಆರಾಧಿಸುತ್ತಿರುವರು. ॥೧೪॥

ಬಾಣಾಸುರನು ನಿನ್ನ ಶಿವಲಿಂಗವನ್ನಾರಾಧಿಸಿ ಸಹಸ್ರಬಾಹುಗಳುಳ್ಳವನಾದನು. ಹಾಗೆಯೇ ರಾವಣನು ನಿನ್ನ ಅರ್ಚನಾಪುಣ್ಯದಿಂದ ಲೋಕಭಯಂಕರನಾದನು. ॥೧೫॥

ಹಾಗೆಯೇ ನಿನ್ನನ್ನು ಪೂಜಿಸಿ ಅನೇಕ ವರಗಳನ್ನು ಪಡೆದು ಎಲ್ಲಾ ರಾಜರನ್ನೂ ಜಯಿಸಿದನು. ಕುಂಭಸಂಭವನಾದ ಅಗಸ್ತ್ಯನು ನಿನ್ನ ಭಕ್ತನಾದುದರಿಂದ ಸಮುದ್ರವನ್ನೇ ಆಪೋಶನವನ್ನಾಗಿ ಕುಡಿದುಬಿಟ್ಟನು. ॥೧೬॥

ದಧೀಚಿ ಮಹರ್ಷಿಯು ನಿನ್ನನ್ನು ಕುರಿತು ತಪಸ್ಸುಮಾಡಿ, ಅದರ ಶಕ್ತಿಯಿಂದ ಮಾಯಾವಿಶಿಷ್ಟನಾದ ವಿಷ್ಣುವಿಗೆ ತನ್ನ ರೂಪನ್ನು ತೋರ್ಪಡಿಸಿದನು. ಅಂಥ ವಿಷ್ಣುವಿಗೆ ಭೃಗುಮಹರ್ಷಿಯು ಶಾಪಕೊಟ್ಟುದೂ ನಿನ್ನ ವರಬಲದಿಂದಲೇ. ॥೧೭॥

ಬಾಲಕನಾದ ಉಪಮನ್ಯುವು ನಿನ್ನನ್ನು ಮೆಚ್ಚಿಸಿ ಹಾಲಿನ ಸಮುದ್ರವನ್ನು ಹೊಂದಿದನು. ಮಾರ್ಕಂಡೇಯನು ನಿನ್ನನ್ನು ಪೂಜಿಸಿ, ಯಮಪಾಶದಿಂದ ತಪ್ಪಿಸಿಕೊಂಡನು. ॥೧೮॥

ಜಿಗಾಯ ಮೃತ್ಯುಂ ತರಸಾ ಶ್ವೇತೋಽಪಿ ನೃಪನಂದನಃ ।
ಶಿಲಾಶನೇನ ತ್ವದ್ಭಕ್ತ್ಯಾ ಪುತ್ರಃ ಪ್ರಾಪ್ತೋ ಹ್ಯಯೋನಿಜಃ ॥೧೯॥

ತ್ವದ್ಭಕ್ತ್ಯಾ ನಂದಿಕೇಶೋಽಪಿ ಗಾಣಾಪತ್ಯಮವಾಪ್ತವಾನ್ ।
ಚಂಡೀಶ್ವರೋಽಪಿ ಪಿತರಂ ಹತವಾಂಸ್ತವಭಕ್ತಿತಃ ॥೨೦॥

ಮಙ್ಕಣೋಽಪಿ ಪುರಾ ಸಿದ್ಧಸ್ಸಿದ್ಧಿಂ ಪ್ರಾಪ ತ್ವದರ್ಚನಾತ್ ।
ಸೋಮೋಽಪಿ ಮುಕ್ತವಾನ್ ರಾಜಯಕ್ಷ್ಮತಸ್ತ್ವತ್ಪ್ರಸಾದತಃ ॥೨೧॥

ದಕ್ಷೋಽಪಿ ದೀಕ್ಷಿತೋ ಯಜ್ಞೇ ಶಿಕ್ಷಿತೋಽನುಗ್ರಹೀಕೃತಃ ।
ಶತರ್ಚನಾದಯೋಽಪೀಶವ್ಯಾಘ್ರಪಾದಾದಯಸ್ತಥಾ ॥೨೨॥

ದೂರ್ವಾಸಾದ್ಯಾ ಮಹಾಭಾಗಾ ದತ್ತಾತ್ರೇಯಾದಯಸ್ತಥಾ ।
ರಾಮೋಽಪಿ ಭಾರ್ಗವಶ್ಶಂಭೋ ನೃಪಾಣಾಂ ಕುಲಘಾತಕಃ ॥೨೩॥

ತಥೈವಾನ್ಯೇ ನೃಪತಯಸ್ಸೋಮಸೂರ್ಯಾನ್ವಯೋದ್ಭವಾಃ ।
ಆದಿತೇಯಾಶ್ಚ ದಿತಿಜಾ ಗಣಾ ರುದ್ರಾ ಮುನೀಶ್ವರಾಃ ॥೨೪॥

---

ನಿನ್ನ ಪೂಜಾಫಲವಾಗಿ ಶ್ವೇತನೆಂಬ ರಾಜಪುತ್ರನು ಅಮರನಾದನು. ಶಿಲಾದನು ನಿನ್ನನ್ನು ಅರ್ಚಿಸಿ ಅಯೋನಿಜನಾದ ನಂದಿಯೆಂಬ ಪುತ್ರನನ್ನು ಪಡೆದನು. ॥೧೯॥

ನಂದೀಶ್ವರನು ನಿನ್ನನ್ನು ಭಜಿಸಿ ಗಣಗಳ ಒಡೆತನವನ್ನೂ, ಚಂಡೀಶ್ವರನು ಪಿತೃಜಯವನ್ನೂ ಸಂಪಾದಿಸಿದರು. ॥೨೦॥

ಸುಕನ್ಯಾಪುತ್ರನಾದ ಮಂಕಣಋಷಿಯು ನಿನ್ನನ್ನು ಪೂಜಿಸಿ ಅನೇಕ ಸಿದ್ಧಿಗಳನ್ನು ಪಡೆದನು. ಚಂದ್ರನಿಗೆ ಬಂದಿದ್ದ ಕ್ಷಯರೋಗವು ನಿನ್ನ ಅನುಗ್ರಹದಿಂದ ತಪ್ಪಿಹೋಯಿತಲ್ಲವೇ? ॥೨೧॥

ದಕ್ಷನು ನಿನ್ನನ್ನು ದ್ವೇಷಿಸಿ ಶಿಕ್ಷೆಯನ್ನೂ, ಕೊನೆಗೆ ಪೂಜಿಸಿ ಮುಕ್ತಿಯನ್ನೂ ಪಡೆದನು. ಹಾಗೆಯೇ, ಶತರ್ಚನ, ವ್ಯಾಘ್ರಪಾದಾದಿಗಳು, ದೂರ್ವಾಸಾದಿ ಮಹರ್ಷಿಗಳು, ದತ್ತಾತ್ರೇಯನಂತಹ ಮಹಾಜ್ಞಾನಿಗಳೂ ನಿನ್ನ ವರಬಲದಿಂದಲೇ ಇಂದು ಮಹಾತ್ಮರೆಂದು ಪ್ರಸಿದ್ಧರಾಗಿರುವರು. ಪರಶುರಾಮನು ನಿನ್ನ ಅನುಗ್ರಹಬಲದಿಂದ ಕ್ಷತ್ರಿಯರ ಕುಲವನ್ನೆಲ್ಲಾ ನಾಶಮಾಡಿದನಲ್ಲವೇ? ॥೨೨-೨೩॥

ಹಾಗೆಯೇ ಸೂರ್ಯ ಚಂದ್ರವಂಶದ ರಾಜರೂ, ದೇವರಾಕ್ಷಸರೂ, ದೈತ್ಯರೂ, ರುದ್ರಗಣಗಳೂ, ಋಷಿಜನರೂ, ॥೨೪॥

ಭೂತಾ ಭವ್ಯಾ ವರ್ತಮಾನಾ ಭಕ್ತಾಸ್ತ್ವದ್ಭಕ್ತಿಭಾವಿತಾಃ ।
ತವ ಭಕ್ತ್ಯೈವ ಸರ್ವೇಷಾಂ ಸ್ವರ್ಗಮೋಕ್ಷೌ ಹಿ ಶಂಕರ ॥೧೫॥

ತ್ವದ್ಭಕ್ತಿಮೇವ ಯಾಚೇಽಹಂ ತ್ವನನ್ಯಗತಿರೀಶ್ವರ ।
ಹಿಮಾದ್ರೌ ಸ್ಥಾಪಿತೇ ಲಿಂಗೇ ಜೈಗೀಷವ್ಯೇಶ್ವರಾಭಿಧೇ ॥೧೬॥

ಕೇದಾರಾತ್ಪಶ್ಚಿಮೇ ಭಾಗೇ ತಸ್ಮಿನ್ನಿತ್ಯಂ ತ್ವಮಾವಸ ॥೧೭॥

॥ ಸೂತ ಉವಾಚ ॥

ಇತ್ಯುಕ್ತೋ ಮುನಿನಾ ತೇನ ಮಹಾದೇವೋ ಗಿರೀಂದ್ರಜಾಂ ।
ಸುರಾಣಾಂ ಚ ಮುನೀನಾಂಚ ಶೃಣ್ವತಾಂ ಪ್ರಾಹ ಶಂಕರಃ ॥೧೮॥

॥ ಈಶ್ವರ ಉವಾಚ ॥

ಕಥಾಮಾಕರ್ಣಯಾಪರ್ಣೇ ಕರ್ಣಾಭ್ಯರ್ಣವಿಲೋಚನೇ ।
ತೂರ್ಣಂ ಪೂರ್ಣಪದಪ್ರಾಪ್ತ್ಯೈ ಭವಾರ್ಣವನಿವಾಸಿನಾಂ ॥೧೯॥

---

ಹಿಂದಿನವರೂ, ಮುಂದಿನವರೂ, ಈಗಿರುವವರೂ, ಸ್ವರ್ಗವನ್ನಾಗಲಿ ಮುಕ್ತಿಯನ್ನಾಗಲಿ ಪಡೆಯಬೇಕಾದರೆ, ಅವರು ಸಂಪೂರ್ಣವಾಗಿ ನಿನ್ನಲ್ಲಿ ಭಕ್ತಿಯನ್ನಿಡಬೇಕು. ॥೧೫॥

ಆದ್ದರಿಂದ ಎಲೈ ಪರಮೇಶ್ವರನೇ, ನನಗೆ ಬೇಕಾದದ್ದು ಈಗ ನಿನ್ನ ವಿಷಯವಾದ ಭಕ್ತಿಯೊಂದೇ. ಅಂತಹ ಭಕ್ತಿಯು ಯಾವಾಗಲೂ ನನ್ನಲ್ಲಿ ನೆಲಗೊಂಡಿರುವಂತೆ ಅನುಗ್ರಹಿಸು. ಅಲ್ಲದೆ ಕೇದಾರಕ್ಷೇತ್ರದ ಪಶ್ಚಿಮಭಾಗದಲ್ಲಿ ಪ್ರತಿಷ್ಠೆ ಮಾಡಿರುವ ಜೈಗೀಷವ್ಯನಾಮಕವಾದ ಶಿವಲಿಂಗದಲ್ಲಿ ಯಾವಾಗಲೂ ನಿನ್ನ ಸಾನ್ನಿಧ್ಯವು ಇರುವಂತೆ ವರವನ್ನು ಅನುಗ್ರಹಿಸು." ॥೧೬-೧೭॥

ಹೀಗೆಂದು ಕೇಳಿಕೊಂಡ ಜೈಗೀಷವ್ಯಮಹಾಮುನಿಯ ಮಾತುಗಳನ್ನು ಕೇಳಿ ಪರಮೇಶ್ವರನು, ಪಾರ್ವತಿಯನ್ನು ಕುರಿತು, ದೇವತೆಗಳಿಗೂ, ಋಷಿವರ್ಯರಿಗೂ ಕೇಳುವಂತೆ ಕೆಲವು ಮಾತುಗಳನ್ನಾಡಿದನು. ॥೧೮॥

ತಪಸ್ಸುಮಾಡುವಾಗ ಪರ್ಣಾದಿಗಳನ್ನೂ ಮುಟ್ಟದಿರುವಂತಹ ಅಪರ್ಣೆಯೇ, ಕರ್ಣಪರ್ಯಂತ ವ್ಯಾಪಿಸಿರುವ ಅಕ್ಷಿಯುಳ್ಳವಳೇ, ನಾನು ಹೇಳುವ ಈ ಮಾತನ್ನು

ಕೃತಲಿಂಗಮಹಾಸದ್ಮ ಪದ್ಮಸದ್ಮಾಪಿ ಸದ್ಮಗಾ ।
ತೇಷಾಂ ನಿತ್ಯಂ ಭವೇದೇವ ಯೈರ್ನಿರ್ಮಾಕಾರಿ ಶಿವಾಲಯಃ ॥೩೦॥

ತಪಾಂಸಿ ತೇನ ತಪ್ತಾನಿ ಜೀರ್ಣಪರ್ಣಾಶನಾತ್ಮನೇ ।
ತೇನೇಷ್ಟಾಸ್ಸಕಲಾಯಾಗಾಸ್ತೇನಾಧೀತಂ ಶ್ರುತಂ ಶಿವೇ ॥೩೧॥

ಕೇದಾರಾಖ್ಯಂ ತ್ವತ್ಪಿತುರ್ಮೌಳಿಸಂಸ್ಥಂ
ಲಿಂಗಂ ಚೈತತ್ಸರ್ವದಾ ಮುಕ್ತಿಬೀಜಂ ।
ಕೇದಾರೇಸ್ಮಿನ್ ತ್ವತ್ಪಿತುಶ್ಚಾರುಮೌಳಾ
ಭೂಮಾನಂದಂ ಚಾಂಕುರಂ ತಚ್ಚ ಮುಕ್ತ್ಯಾಃ ॥೩೨॥

ಏತಲ್ಲಿಂಗಾತ್ಪಶ್ಚಿಮೇ ಚಾಮುನಾ ಮೇ
ನಾಮ್ನಾ ಸ್ವೇನಾಪ್ಯರ್ಚಿತಂ ಪಶ್ಯ ಲಿಂಗಂ ।

---

ಕೇಳು. ಇದರ ಶ್ರವಣದಿಂದ ಸಂಸಾರಿಗಳು ಜಾಗ್ರತೆಯಾಗಿ, ಮೋಕ್ಷಫಲವನ್ನು ಪಡೆಯುವರು. ||೨೯||

ಯಾರು ಕಷ್ಟಪಟ್ಟು ಒಂದು ಶಿವಲಿಂಗದಿಂದ ಕೂಡಿದ ಶಿವದೇವಾಲಯವನ್ನೂ ನಿರ್ಮಿಸುವರೋ, ಅಂತಹವರ ಮನೆಯಲ್ಲಿಯೂ, ಮತ್ತು ಶಿವಾಲಯದಲ್ಲಿಯೂ ಕಮಲಾಶ್ರಿತಳಾದ ಲಕ್ಷ್ಮೀದೇವಿಯು ಸರ್ವದಾ ವಾಸಮಾಡುವಳು. ||೩೦||

ಶಿವಾಲಯನಿರ್ಮಾಪಕನಿಗೆ ಪರ್ಣಾಶನದಿಂದ ಮಾಡಿದ ಸಕಲತಪಃಫಲಗಳೂ, ಸಕಲ ಯಾಗಗಳ ಆಚರಣೆಯಿಂದ ಒದಗುವ ಪುಣ್ಯವಿಶೇಷವೂ, ಸಕಲಶಾಸ್ತ್ರಾಧ್ಯಯನದಿಂದ ಬರುವ ಜ್ಞಾನವೂ ಏಕದಾ ಲಭಿಸುವುದು. ||೩೧||

ಎಲೌ ಗಿರಿಜೆಯೇ, ನಿನ್ನ ತಂದೆಯಾದ ಹಿಮವಂತನ ಶಿಖರದಲ್ಲಿ ಕೇದಾರವೆಂಬ ಹೆಸರಿನ ಕ್ಷೇತ್ರವೊಂದಿರುವುದು. ಅಲ್ಲಿರುವ ಶಿವಲಿಂಗವು ಮುಕ್ತಿಪ್ರದವಾದದ್ದು. ಅಲ್ಲದೆ ಆಕ್ಷೇತ್ರವೂ ಸಹ ಜನರಿಗೆ ವಿಶೇಷವಾದ ಆನಂದವನ್ನೂ, ಮುಕ್ತಿಯನ್ನೂ ದಯಪಾಲಿಸತಕ್ಕದ್ದು. ||೩೨||

ಈ ಕೇದಾರ ಕ್ಷೇತ್ರದ ಪಶ್ಚಿಮಭಾಗದಲ್ಲಿ ಈ ಜೈಗೀಷವ್ಯಮಹರ್ಷಿಯು ತನ್ನ ಹೆಸರಿನಿಂದಲೇ ಒಂದು ಲಿಂಗವನ್ನು ಪ್ರತಿಷ್ಠಿಸಿ ಪೂಜಿಸಿರುವನು. ಅಲ್ಲದೆ ಆ

ಪ್ರತಿಷ್ಠಿತೇ ಯೇನ ಕೇನಾಪಿ ಲಿಂಗೇ
ತಿಷ್ಠಾಮೀಶೇ ಸರ್ವಥೈವಾತಿತುಷ್ಟಃ ॥೩೩॥

ತಸ್ಮಿಂತ್ಸದೈವಾವಹಿತೋ ಭವಾಮಿ
ಭವಾನಿ ನಿತ್ಯಂ ಸುಖದೋಽತಿಹರ್ಷಿತಃ ।
ಭವಾನಿ ಮುಕ್ತ್ಯೈ ಪ್ರಥಿತೇ ಪ್ರದೋಷೇ
ಪ್ರಕಾಶನೇ ಪೂಜನಭಾವನೇಽಪಿ ॥೩೪॥

ಸಮಾನಚಿತ್ತೋಽರ್ಚನಕೃದ್ವಿಭಾತಿ ।
ನರೋ ವರೋ ಮೇ ಸ ವರೋಚಿತಸ್ಸ್ಯಾತ್ ।

ಯಃ ಕಶ್ಚಿದ್ಭುವನೇಶ್ವರಿ ತ್ರಿಭುವನೇ ಚೋತ್ತುಂಗಲಿಂಗಾಲಯಂ ।
ರಮ್ಯಂ ದ್ವಾರಕವಾಟತೋರಣಮಹಾಪ್ರಾಕಾರಸದ್ಗೋಪುರಂ ।
ವಿದ್ಯುತ್ಪುಂಜಸಮಪ್ರಭಾಮಲಮಹಾಹೇಮೈಕಕುಂಭೋಲ್ಲಸ ।
ತ್ಕೃತ್ವಾ ಜನ್ಮಶತಾರ್ಜಿತಾಖಿಲಮಹಾಪಾಪೈರ್ನರೋ ಮುಚ್ಯತೇ ॥೩೫॥

---

ಸ್ಥಳದಲ್ಲಿ ಯಾರು ಲಿಂಗವನ್ನು ಪ್ರತಿಷ್ಠೆಮಾಡಿದರೂ, ಆ ಲಿಂಗದಲ್ಲಿ ನಾನು ಸರ್ವದಾ ಸಂತುಷ್ಟಾಂತರಂಗವುಳ್ಳವನಾಗಿ ನೆಲಸಿರುವೆನು. ॥೩೩॥

ಭವಾನಿಯೇ, ಆ ಲಿಂಗದಲ್ಲಿ ನಾನು ಸರ್ವದಾ ಶಾಂತಚಿತ್ತನಾಗಿ ಸರ್ವರಿಗೂ ಸುಖವನ್ನೂ, ಹರ್ಷವನ್ನೂ ದಯಪಾಲಿಸುತ್ತಾ ನೆಲಸುವೆನು. ಅಲ್ಲದೆ ಪ್ರತಿಪ್ರದೋಷಕಾಲದಲ್ಲಿಯೂ, ನನ್ನ ವಿಶೇಷಾಂಶದಲ್ಲಿ ಅಲ್ಲಿ ನೆಲಸಿ, ಆಗ ಪೂಜಿಸತಕ್ಕವರಿಗೆ ಆನಂದಮಯವಾದ ಮುಕ್ತಿಯನ್ನು ದಯಪಾಲಿಸುವುದರಲ್ಲಿ ಸಿದ್ಧನಾಗಿರುವೆನು. ॥೩೪॥

ಯಾವನು ಪ್ರದೋಷಕಾಲಗಳಲ್ಲಿ ಚಿತ್ತಶುದ್ಧಿಯಿಂದ ಆ ಲಿಂಗವನ್ನು ಅಲ್ಲಿ ಪೂಜಿಸುವನೋ, ಅಂತಹವನು ನನ್ನಿಂದ ಅನೇಕ ವರಗಳನ್ನು ಪಡೆಯಲು ಸಮರ್ಥನಾಗುವನು.

ಮನುಷ್ಯನು ತನ್ನ ಅನೇಕ ಜನ್ಮಗಳ ಪಾಪರಾಶಿಯನ್ನು ಒಂದೇ ಸಾರಿ ಕಳೆದುಕೊಂಡು ಮುಕ್ತನಾಗಬೇಕಾದರೆ, ಒಂದು ಎತ್ತರವಾದ ಶಿವಲಿಂಗದೇವಾಲಯವನ್ನು ನಿರ್ಮಿಸಬೇಕು. ಅದಕ್ಕೆ ಮನೋಹರವಾದ ಬಾಗಿಲು, ತೋರಣ, ಪ್ರಾಕಾರ,

ರಮ್ಯೇ ಶೈಲವರೇ ಸರಿತ್ತಟವರೇ ಗ್ರಾಮೇ ಪುರೇ ಪರ್ವತೇ ।
ತೀರ್ಥೇ ವಾಪಿ ವನೇ ಗಿರೀಂದ್ರವರಜೇ ಗಂಗಾತಟೇ ನಾರ್ಮದೇ ।
ತೀರೇ ವಾಪಿ ಮಹೇಶ್ವರೇಶ್ವರಿ ಮಹಾಕ್ಷೇತ್ರೇಷು ಲಿಂಗಂ ದಧ
ತ್ಸರ್ವತ್ರಾಪಿ ಶುಚೌ ಶುಚಿಸ್ಸಮಹಿಮಾ ತಸ್ಯಾತಿಪಾರೋ ದಿವಿ ॥೩೬॥

ಆಢ್ಯೋ ವಾಪಿ ದರಿದ್ರಶೇಖರನರೋ ಭಕ್ತಿಃ ಪರಂ ಕಾರಣಂ ।
ಕೃತ್ವಾ ಚಾಪಿ ಶಿವಾಲಯಂ ಸುಖಯುತೋ ಭೂಮೌ ವಿಮುಕ್ತಸ್ತತಃ ।
ಮೃದ್ದಾರುಪ್ರಭವಂ ಶಿಲೇಷ್ಟಕಕೃತಂ ರಮ್ಯಂ ಸುಧಾಚ್ಛಾದಿತಂ ।
ದಿವ್ಯಂ ಸನ್ಮಣಿಕಲ್ಪಿತಂ ಭವಹರಂ ಸದ್ಯೋ ವಿಜಾಯೇತ ಮೇ ॥೩೭॥

---

ಗೋಪುರ ಇವುಗಳನ್ನು ಕಟ್ಟಿಸಬೇಕು. ಮಿಂಚಿನಂತೆ ಹೊಳೆಯುವ, ಕನಕರತ್ನಾದಿ ಗಳಿಂದ ನಿರ್ಮಿತವಾದ ಕಲಶವನ್ನು ಆ ಗೋಪುರದಲ್ಲಿ ನಿಲ್ಲಿಸಬೇಕು. ಹೀಗೆ ಮಾಡಿದರೆ ಆತನಿಗೆ ನಿಜವಾಗಿಯೂ ಮುಕ್ತಿಯು ಸುಲಭವಾಗುವುದು. ॥೩೫॥

ಗಿರಿಜಾದೇವಿಯೇ, ಮನೋಹರವಾದ ಬೆಟ್ಟಗಳಲ್ಲಿ, ನದೀತೀರದಲ್ಲಿ, ಸುಂದರ ವಾದ ಊರಿನಲ್ಲಿ, ದೊಡ್ಡ ಪಟ್ಟಣಗಳಲ್ಲಿ, ಎತ್ತರವಾದ ಪರ್ವತದಲ್ಲಿ, ಶ್ರೇಷ್ಠ ಕ್ಷೇತ್ರ ಗಳಲ್ಲಿ, ಉದ್ಯಾನವನದಲ್ಲಿ, ಗಂಗಾ ನರ್ಮದಾ ನದಿಗಳ ತೀರದಲ್ಲಿ, ಮಹಾಕ್ಷೇತ್ರ ಗಳಲ್ಲಿ ಶುಚಿಸ್ಥಲಗಳಲ್ಲಿ, ಲಿಂಗವನ್ನು ವಿಧಿವತ್ತಾಗಿ ಪ್ರತಿಷ್ಠೆಮಾಡುವವನು ಮಹಿಮಾ ಶಾಲಿಯಾಗುವನು. ಅವನಿಗೆ ದೇವಲೋಕದಲ್ಲಿಯೂ ಸಹ ಸರಿಸಮಾನರು ಯಾರೂ ದೊರೆಯಲಾರರು. ॥೩೬॥

ಶಿವಾಲಯ ನಿರ್ಮಾಣಕ್ಕೆ ಶ್ರೀಮಂತ, ಬಡವ ಎಂಬ ಭೇದವಿಲ್ಲ. ಭಕ್ತಿಯೇ ಇದಕ್ಕೆ ಮುಖ್ಯಕಾರಣ. ಅವನ ಶಕ್ತ್ಯನುಸಾರವಾಗಿ, ಮಣ್ಣು, ಮರ, ಶಿಲೆ, ಇಟ್ಟಿಗೆ ಇವುಗಳಿಂದ ಆಲಯವನ್ನು ನಿರ್ಮಿಸಿ, ಸುಣ್ಣವನ್ನು ಬಳಿಸಿ, ಅದರಲ್ಲಿ ಲಿಂಗವನ್ನು ಪ್ರತಿಷ್ಠಿಸಬಹುದು. ಶಕ್ತಿಯಿದ್ದರೆ ರತ್ನಖಚಿತವಾದ ದಿವ್ಯ ದೇವಾಲಯವನ್ನು ಬೇಕಾದರೂ ರಚಿಸಬಹುದು. ಹೇಗೆ ಮಾಡಿದರೂ, ಆ ಶಿವಾಲಯನಿರ್ಮಾಪಕರು ಅತ್ಯಂತ ಸುಖಿಗಳಾಗಿದ್ದು, ಆಮುಷ್ಮಿಕವಾದ ಭೋಗಭಾಗ್ಯಗಳಿಗೆ ಅರ್ಹರಾಗುವರು. ॥೩೭॥

ಕ್ಲೃಪ್ತಂ ಚಾರುಶಿವಾಲಯೋತ್ತಮುಲಸತ್ತುಂಗಂ ಹಿ ಲಿಂಗಂ ಮಮ
ಪ್ರಾತಿಷ್ಠಾಪ್ಯ ಸುವಸ್ತ್ರಚಂದನಘನಾಸಾರೈಶ್ಚ ಬಿಲ್ವಾರ್ಚಕೈಃ ।
ಕಿಂ ಮತ್ತೇಭಸುಹೇಮಭೂಮಿತುರಗೈರ್ಗೋಭಿಶ್ಚ ರತ್ನೋದ್ಭವೈಃ
ದಾನೈರ್ಯಾಗವರೈಶ್ಚಿರಾರ್ಜಿತಮಹಾಧರ್ಮೈಶ್ಚ ಕಿಂ ವಾ ಶಿವೇ ॥೩೮॥

ಯೋಗೈರ್ವಾ ನಿಯಮೈರ್ವ್ರತೇನ ತಪಸಾ ತೀರ್ಥಾಟನೇನಾಪಿ ಕಿಂ
ಕನ್ಯಾನ್ನಾದಿಕದಾನತೋಽಪಿ ಹಿ ವರಂ ಲಿಂಗಾಲಯಂ ಯೈಃ ಕೃತಂ ।
ಪಾತಾಂತಾವಧಿಸುಂದರಂ ಕೃತಮಹಾಧರ್ಮೈಕಜಾಲಂ ಶಿವೇ
ಮಲ್ಲಿಂಗಾಲಯಕಲ್ಪಕಸ್ಯ ಸುತರಾಂ ಪಾತಾದ್ಭಯಾನ್ನಾಸ್ತಿ ವೈ ॥೩೯॥

ಯಾವಚ್ಚಂದ್ರಸುತಾರಕಾಗಣಮುಮೇ ಯಾವತ್ಸರಿಚ್ಛೈಲಕಾ
ಸ್ತಾವನ್ಮೇ ಗಣಪೋತ್ತಮೋ ಹಿ ಸ ಭವೇತ್ಕೈಲಾಸವಾಸೌ ಮಮ ।

---

ಸುಂದರವಾದ ದೇವಾಲಯುವನ್ನು ನಿರ್ಮಿಸಿ, ಅಲ್ಲಿ ಲಿಂಗವನ್ನು ವಿಧಿವತ್ತಾಗಿ ಪ್ರತಿಷ್ಠೆಮಾಡಿ, ಆ ಲಿಂಗಕ್ಕೆ ಬಿಲ್ವಪತ್ರೆಯನ್ನು ಪೂಜಿಸಿದವನಿಗೆ, ಗಜದಾನ, ಸುವರ್ಣ, ಭೂಮಿ, ಕುದುರೆ, ಗೋ, ರತ್ನಗಳು ಇನ್ನೂ ಮಹಾಮಹಾಯಾಗಗಳು, ಇವುಗಳ ಆಚರಣೆಯಿಂದ ಬರುವಂತಹ ಸುಕೃತರಾಶಿಯು ಸುಲಭವಾಗಿ ದೊರೆಯುವುದು. ಅಂತಹ ಶಿವಾಲಯ ನಿರ್ಮಾಪಕನಿಗೆ ಮೇಲೆ ಹೇಳಿದ ದಾನಾದಿಗಳೆಲ್ಲವೂ ಅನವಶ್ಯಕ. ॥೩೮॥

ಯೋಗಾಭ್ಯಾಸ, ನಿಯಮಾದಿಗಳು, ತಪಸ್ಸು, ತೀರ್ಥಯಾತ್ರೆ, ಕನ್ಯಾದಾನ, ಅನ್ನದಾನ ಇವೆಲ್ಲಕ್ಕಿಂತಲೂ ಶ್ರೇಷ್ಠವಾದದ್ದಾಗಿ, ಅನೇಕ ಧರ್ಮಗಳನ್ನೊಳಗೊಂಡ ಮುಕ್ತಿಪ್ರದವಾದ ಕಾರ್ಯವೆಂದರೆ, ಶಿವಲಿಂಗಾಲಯನಿರ್ಮಾಣವೇ. ಅಂತಹ ಲಿಂಗಾಲಯ ನಿರ್ಮಾಪಕನಾದವನಿಗೆ, ಸುಖಾನುಭವದ ಅಂತವೇ ಇರುವುದಿಲ್ಲ. ಉಳಿದ ದಾನಧರ್ಮಗಳಿಗೆ ಪುಣ್ಯದ ಅವಧಿಯುಂಟು. ಇದರಿಂದಾದರೋ ನಿರವಧಿಕವಾದ ಸುಕೃತವು ಬಂದು ಸೇರುವುದು. ॥೩೯॥

ಅಷ್ಟಲ್ಲದೆ, ಜೀರ್ಣವಾಗಿರುವ, ಮತ್ತು ಮುರಿದು ಬಿದ್ದಿರುವ, ಮತ್ತೊಬ್ಬರಿಂದ ನಿರ್ಮಿತವಾಗಿರುವ ಶಿವಾಲಯುವನ್ನು ಯಾರು ಶ್ರದ್ಧೆಯಿಂದಲೂ, ಧರ್ಮಬುದ್ಧಿಯಿಂದಲೂ, ಜೀರ್ಣೋದ್ಧಾರಮಾಡುವರೋ, ಅವರು, ಸೂರ್ಯಚಂದ್ರರಿರುವವರೆಗೂ,

**ಖಂಡಂ ವಾ ಸ್ಫುಟಿತಂ ತಥಾ ಪರಕೃತಂ ಜೀರ್ಣಂ ವಿಶೀರ್ಣಂ ತಥಾ**
**ತಸ್ಯೋದ್ಧಾರಮುಮೇ ಕರೋತಿ ಸುಕೃತೈರ್ಯಶ್ಶ್ರದ್ಧಯಾ ಕೇವಲಂ॥೪೦॥**

**ಕಿಂ ವಕ್ಷ್ಯಾಮಿ ಸದೈವ ತಸ್ಯ ಹೃದಯೇ ನಿತ್ಯಂ ನಿವಾಸೋ ಮಮ**
**ತಸ್ಯಾಂತೇ ವಿತರಾಮಿ ಮುಕ್ತಿಮತುಲಾಂ ವಕ್ಷ್ಯೇ ರಹಸ್ಯಂ ತವ।**
**ಕೋ ವಾ ಲಿಂಗವರಂ ಪ್ರದೋಷಸಮಯೇ ಯೇನಾರ್ಚಿ ಬಿಲ್ವೈಶ್ಶುಭೈಃ**
**ಏವಂ ಚಾಪಿ ಚರಾಚರಂ ತ್ರಿಭುವನಾಭ್ಯಧ್ಯಕ್ಷತಾಮಾವಹೇತ್ ॥೪೧॥**

**ಭೂಮೌ ಪುತ್ರಕಲತ್ರಮಿತ್ರಸಹಿತೋ ಧಾನ್ಯೈರ್ಧನೈಸ್ಸಂಯುತ**
**ಶ್ಚಾಂತೇ ಚಾಪಿ ವಿಮುಕ್ತಿಮೇತಿ ನಿತರಾಂ ಲಿಂಗಾರ್ಚನಾದೇವ ಮೇ।**
**ತೈಲೈರ್ವಾ ವಿವಿಧೈರ್ಘೃತೈಃ ಪಶುಭವೈರ್ಗವ್ಯೇನ ವಾ ಕೇವಲಂ**
**ಚೋದ್ಬೋಧ್ಯೋಜ್ವಲದೀಪಜಾಲಮಗಜೇ ಕೃತ್ವೈವ ದೀಪಾವಲಿಂ ॥೪೨॥**

---

ನದಿ, ಸಮುದ್ರ, ಪರ್ವತಗಳು ಪ್ರಪಂಚದಲ್ಲಿ ಕಾಣುವವರೆಗೂ, ನನ್ನ ಕೈಲಾಸ ಪರ್ವತದಲ್ಲಿ, ಪ್ರಮಥಗಣಗಳಿಗೆ ಒಡೆಯರೆನಿಸಿ, ನನ್ನ ಮೆಚ್ಚುಗೆಗೆ ಪಾತ್ರರಾಗಿರುತ್ತಾರೆ. ಅಂತೂ ಶಾಶ್ವತವಾದ ಮೋಕ್ಷಕ್ಕೆ ಕಾರಣವಾಗತಕ್ಕದ್ದು ಶಿವಾಲಯ ನಿರ್ಮಾಣವೇ. ॥೪೦॥

ಪ್ರದೋಷಕಾಲದಲ್ಲಿ ಯಾರು ಶಿವಲಿಂಗವನ್ನು ಬಿಲ್ವಪತ್ರೆಯೇ ಮೊದಲಾದ ಪೂಜಾದ್ರವ್ಯಗಳಿಂದ ಅರ್ಚಿಸುವರೋ, ಅಂತಹವರ ಹೃದಯದಲ್ಲಿ ನಾನು ಯಾವಾಗಲೂ ನೆಲಸಿರುವೆನು. ದೇಹಾಂತ್ಯದಲ್ಲಿ ಅವರಿಗೆ ಶಾಶ್ವತವಾದ ಮುಕ್ತಿಯನ್ನೂ ಅನುಗ್ರಹಿಸುವೆನು. ಶಂಕರಿಯೇ, ಇದು ರಹಸ್ಯವಾದದ್ದು. ಹಾಗೆ ಪ್ರದೋಷಾರ್ಚನೆ ಮಾಡಿದವನು ಈ ಮೂರು ಲೋಕಗಳಲ್ಲಿರುವ ಚರಾಚರವಸ್ತುಗಳಿಗೂ ಅಧಿಪತಿಯಾಗುವನು. ॥೪೧॥

ಪಾರ್ವತಿಯೇ, ಶಿವಲಿಂಗದ ಮುಂಭಾಗದಲ್ಲಿ ಎಣ್ಣೆಯಿಂದಾಗಲಿ, ಅಥವಾ ಹಸುವಿನ ತುಪ್ಪದಿಂದಾಗಲಿ, ಸಾಲು ದೀಪಗಳನ್ನು ಹೊತ್ತಿಸಿ ಶಿವಲಿಂಗವನ್ನು ಅರ್ಚನೆಮಾಡಿದರೆ ಅಂತಹವರಿಗೆ, ಇಹಲೋಕದ ಪುತ್ರ, ಕಳತ್ರ, ಧನಧಾನ್ಯಾದಿ ಸಂಪತ್ತುಗಳು ದೊರಕುವುವಲ್ಲದೆ ಪರಲೋಕದಲ್ಲಿಯೂ ನಿತ್ಯಾನಂದರೂಪವಾದ ಮುಕ್ತಿಯು ಸಿಕ್ಕುವುದು. ಇದು ನಿಶ್ಚಯ. ॥೪೨॥

ಪದ್ಮೇಭೋತ್ತಮಹಂಸತಾರಕಗಣಾಕಾರಾವಳಿಂ ಮದ್ಗೃಹೇ
ರಮ್ಯಾಮುಜ್ಜ್ವಲವರ್ತಿಕಾಮಘಕುಲಂ ಜ್ವಾಲೀಕೃತಂ ತೇನ ವೈ ।
ಧೂಪೈರ್ವಾ ತ್ವಗರೂದ್ಭವೈರಪಿ ಮಹಾಸಾವ್ರಾಣಿಸದ್ಗುಗ್ಗುಲೂ
ಬಿಲ್ವತ್ವತ್ಕೃತಯುಕ್ತಗಂಧಸುಭಗಾನೋದ್ಯೈಶ್ಶಿವೇ ಕೇವಲಂ ॥೪೩॥

ದಗ್ಧ್ವಾ ಯಾತಿ ಪದಂ ಮಮ ತ್ವಘಕುಲಂ ಸರ್ವಂ ಕೃತಾರ್ಥೋ ಭವೇ
ಜ್ಞಾನಂ ಚಾಪಿ ಸಮಾಪ್ನುಯಾತ್ಸುನಿಶಿತಂ ವೇದಾಂತವಾಕ್ಯೋದ್ಭವಂ ।
ಕರ್ಪೂರೋದ್ಭವಖಂಡಷಂಡಜಮಹಾಜ್ವಾಲಾಲಸದ್ದೀಪಕೈ
ರುಜ್ಜ್ವಾಲ್ಯ ಪ್ರಮಥಾಧಿನಾಥಜಮಹಾಲಿಂಗೇ, ತಮೋಲಿಂ ಭಿನತ್ ॥೪೪॥

ಪಾಪಾದ್ರೇಃ ಕುಲಿಶಂ ಭವತ್ಯಥ ಶಿವೇ ತದ್ದೀಪದಾನೇ ಮಯಿ
ಪ್ರಾಪ್ನೋತ್ಯೇವ ಕುಲೋನ್ನತಿಂ ವರಸುತಾನ್ ಪ್ರಾಪ್ನೋತಿ ಶಂಭೋಃ ಪದಂ
ಗವ್ಯೈಃ ಕಾಪಿಲಜೈಸ್ತಥೇತರಗವಾಂ ಸಾರೈಃ ಪಯೋಭಿರ್ಘೃತೈಃ
ದಧ್ನಾ ಚಾಪ್ಯಧಿಕಂ ಫಲೇನ ಶತಶಃ ಕ್ಷೌದ್ರೇಣ ಚಾಕ್ಷುದ್ರತಾಂ ॥೪೫॥

---

ಕಮಲ, ಆನೆ, ಹಂಸ, ತಾರಾಗಣ ಇವುಗಳ ಆಕಾರದಲ್ಲಿ ಬತ್ತಿಗಳನ್ನು ಹೊತ್ತಿಸಿ, ಶಿವಲಿಂಗಕ್ಕೆ ನೀರಾಜನಮಾಡುವುದು ಸಮಸ್ತ ಪಾಪನಾಶಕರವಾದದ್ದು. ಅಲ್ಲದೆ, ಅಗರು, ಸಾಂಬ್ರಾಣಿ, ಗುಗ್ಗುಲ, ಬಿಲ್ವತ್ವಕ್ ಇವೇ ಮೊದಲಾದ ಸುಗಂಧ ದ್ರವ್ಯಗಳ ಸಂಯೋಜನೆಯಿಂದ ಸುಧೂಪವನ್ನು ಶಿವಲಿಂಗಕ್ಕೆ ಎತ್ತಿದರೆ, ಆಗ ಅವನ ಸಮಸ್ತಪಾಪಕರ್ಮಜನ್ಯವಾದ ಅಘರಾಶಿಯು ನಿವೃತ್ತಿಯಾಗಿ ಮುಕ್ತಿಗೆ ಅರ್ಹನಾಗುವನು. ॥೪೩॥

ಪರಮೇಶ್ವರನ ಪೂಜ್ಯಲಿಂಗವನ್ನು ಯಾರು ಕರ್ಪೂರಖಂಡಗಳ ನೀರಾಜನದಿಂದ ಬೆಳಗಿಸುವರೋ, ಅವರು ತಮ್ಮ ಸಮಸ್ತ ಪಾಪರಾಶಿಯನ್ನು ಕಳೆದುಕೊಳ್ಳುವರಲ್ಲದೆ, ಉಪನಿಷತ್ತುಗಳಿಂದ ಹೊಂದಬಹುದಾದ ಜ್ಞಾನರಾಶಿಯನ್ನು ಸಂಪಾದಿಸುವರು. ಅಲ್ಲದೆ ಸಂಪೂರ್ಣವಾದ ತಮ್ಮ ಅಜ್ಞಾನವನ್ನು ಸಹ ಕಳೆದುಕೊಂಡು ಕೊನೆಗೆ ನನ್ನ ಸ್ಥಾನವನ್ನೈದುವರು.॥೪೪॥

ಎಲೌ ದೇವಿಯೇ, ನನ್ನ ದೇವಾಲಯದಲ್ಲಿ ದೀಪದಾನಮಾಡಿದವರಿಗೆ ಆ ದಾನವು, ಅವರ ಪಾಪರಾಶಿಯೆಂಬ ಪರ್ವತಕ್ಕೆ ವಜ್ರಾಯುಧದಂತಾಗುವುದು. ಅವರು ಈ ಲೋಕದಲ್ಲಿ ಹೆಚ್ಚಾದ ಪುತ್ರಸಂಪತ್ತನ್ನೂ ವಂಶಾಭಿವೃದ್ಧಿಯನ್ನೂ ಪಡೆಯುವರು.

**ಪ್ರಾಪ್ನೋತೀಕ್ಷುರಸೇನ ಗಂಧಸಲಿಲೈಃ ಪುಷ್ಪೋತ್ಥರತ್ನೋದಕೈಃ**
**ಸ್ವರ್ಣೋತ್ಥೈರಭಿಷಿಚ್ಯ ಲಿಂಗಮಮಲಂ ಪ್ರಾಪ್ನೋತಿ ಮುಕ್ತಿಂ ಶಿವೇ।**
**ಪುಂಡ್ರೇಕ್ಷುಪ್ರಭವೈಶ್ಚ ಸದ್ರಸವರೈರ್ಮೋಚಾಫಲಾನಾಂ ಗಣೈ**
**ರ್ನಾರೇಲಾಂಬುರಸಾಲ್ಪಸಾರಜರಸೈರ್ಜಂಬೀರನೀರೈರಪಿ ॥೪೬॥**

**ಉತ್ಕೋಚೈಃ ಪನಸೋದ್ಭವೈರ್ಮಮ ಮಹಾಲಿಂಗೇಽಭಿಷಿಚ್ಯಾದರಾ**
**ತ್ಪ್ರಾತಸ್ಸಂಗವಕಾಲತೋಽಪ್ಯತಿತರಾಂ ಸಾಯಂ ವಿಮುಕ್ತೋ ಭವೇತ್।**
**ಭಕ್ತೇಷು ಪ್ರವರೋ ಮಮೈವ ಸದನೇ ಸದ್ಗೋತ್ರಜೋಽಸೌ ನರೋ**
**ಭುಕ್ತ್ವಾ ಸರ್ವಸುಖಂ ಭುವಿ ಪ್ರಿಯತಮೋ ಯಾತ್ಯೇವ ದೇವಿ ಪ್ರಿಯೇ॥**

**ಗ್ರೀಷ್ಮರ್ತೌ ಮಮ ಲಿಂಗಸಂಗತಮಹಾಮೌಲೌ ಗಲಂತೀ ಝರೀ**
**ಧಾರಾಸಾರಸುಪಾಟಲಾಗರುರಸೈಃ ಪುಷ್ಪಾಂಬುಭಿಃ ಪೂರಿತೈಃ।**

---

ಅಲ್ಲದೆ ಶಿವಲಿಂಗಕ್ಕೆ ಕಪಿಲವರ್ಣದ ಅಥವಾ ಬೇರೆ ವರ್ಣದ ಹಸುಗಳ ಮೊಸರು, ಹಣ್ಣು, ಜೇನುತುಪ್ಪ ಇವುಗಳಿಂದ ಕೂಡಿದ ಮಧುಪರ್ಕವನ್ನು ಯಾರು ಸಮರ್ಪಿಸುವರೋ, ಅವರು ದೇಹಾಂತ್ಯದಲ್ಲಿ ಶಾಶ್ವತವಾದ ಶಿವಸಾನ್ನಿಧ್ಯರೂಪವಾದ ಮುಕ್ತಿಯನ್ನು ಪಡೆಯುವರು. ॥೪೫॥

ಕಬ್ಬಿನರಸ, ಸುಗಂಧಮಯವಾದ ಜಲ, ಪುಷ್ಪೋದಕ, ರತ್ನೋದಕ, ಸುವರ್ಣೋದಕ, ಇವೇ ಮೊದಲಾದುವುಗಳಿಂದ ಶಿವಲಿಂಗವನ್ನು ಅಭಿಷೇಕಮಾಡಬೇಕು. ಹಾಗೆಯೇ, ರುಚಿಯಾದ ಕಬ್ಬು, ಮೋಚಾಫಲ (?) ಕಿತ್ತಲೇ, ಏಲಕ್ಕಿ, ಮಾವಿನಹಣ್ಣು, ನಿಂಬೆ ಮುಂತಾದ ಫಲರಸಗಳಿಂದಲೂ ಭಕ್ತಿಯಿಂದ ಅಭಿಷೇಕ ಮಾಡುವುದು ಅತ್ಯಂತ ಶ್ರೇಷ್ಠವಾದದ್ದು. ಹೀಗೆ ಅಭಿಷೇಕಮಾಡಿದವರು ಸುಲಭವಾಗಿ ಮುಕ್ತಿಯನ್ನು ಸಂಪಾದಿಸುವರು. ॥೪೬॥

ಪ್ರಾತಃಕಾಲ, ಸಂಗವಕಾಲ, ಸಾಯಂಕಾಲ, ಈ ತ್ರಿಕಾಲಗಳಲ್ಲಿಯೂ, ಅರಳಿ, ಕಳಿತಿರುವ ಹಲಸಿನ ತೊಳೆಗಳಿಂದ ಶಿವಲಿಂಗಕ್ಕೆ ಅಭಿಷೇಕ ಮಾಡುವುದೂ, ಆಯಾ ಕಾಲದಲ್ಲಿ ಭಕ್ತಿಯಿಂದ ಲಿಂಗಾರ್ಚನೆ ಮಾಡುವುದೂ, ಈ ಕರ್ಮಗಳಿಂದ ಯಾವನು ನನ್ನ ಪ್ರಿಯಭಕ್ತನೆನಿಸುವನೋ, ಅಂತಹವನು ಭೂಲೋಕದಲ್ಲಿ ಸರ್ವಸುಖಗಳನ್ನು ಅನುಭವಿಸಿ, ಕೊನೆಯಲ್ಲಿ ಮುಕ್ತನಾಗಿ ನನ್ನ ಸಾನ್ನಿಧ್ಯವನ್ನು ಸೇರುವನು. ॥೪೭॥

ಎಲೌ ದೇವಿಯೇ, ಗ್ರೀಷ್ಮಋತುವಿನಲ್ಲಿ ಧಾರಾಪಾತ್ರೆಗೆ ಪಾದರೀಹೂವಿನ

ಧಾರಾಕಲ್ಪನಜೇನ ಯತ್ಫಲಮುಮೇ ತತ್ಕೇನ ವಾ ಶಕ್ಯತೇ
ವಕ್ತುಂ ಜನ್ಮಶತಾಯುತಾರ್ಜಿತಮಹಾಪಾಪೈರ್ವಿಮುಕ್ತೋ ಭವೇತ್॥೪೮॥

ಉತ್ಫುಲ್ಲೈಃ ಕಮಲೈಸ್ಸಿತಾಸಿತವರೈಸ್ಸನ್ಮಲ್ಲಿಕಾಮಾಲತಿ
ಜಾಜೀಕುಂದಸುಪಾಟಲೈರ್ಬಕಮಹಾಧುತ್ತೂರದ್ರೋಣಾರ್ಕಕೈಃ ।
ಕಲ್ಹಾರೈಃ ಕುಮುದೈರ್ಜಪಾದಮನಕೈರುತ್ಫುಲ್ಲದಾಡಿಂಬಕೈಃ
ಪುನ್ನಾಗಾರ್ಜುನಚಂಪಕೈರ್ಬಕುಲಕೈರ್ಮಂದಾರವಾಲ್ಹಾತಕೈಃ ॥೪೯॥

ನೀಲೋದ್ಯದ್ವಿಕಚೋತ್ಪಲೈಃ ಕುರವಕೈಸ್ಸತ್ಕರ್ಣಿಕಾರೈಶ್ಶಿವಂ
ನಂದ್ಯಾವರ್ತಶಿರೀಷ ಬಿಲ್ವಕುಸುಮೈರಕ್ತಾಶ್ವಸಾರೈಶ್ಶಿವೈಃ ।
ಜಂಬ್ವಾಮ್ರೈಶ್ಚ ಪಲಾಶಕೈಶ್ಶಮಿಸುಮೈರ್ದೂರ್ವಾಪಮಾರ್ಗಾದಿಭಿ ।
ರ್ವಿಷ್ಣುಕ್ರಾಂತಕುಶೈಶ್ಚಕಾಶಜನಿತೈರಭ್ಯರ್ಚ್ಯ ಮುಕ್ತೋಂಬಿಕೇ ॥೫೦॥

---

ರಸ ಮತ್ತು ಅಗುರುರಸ ಇವುಗಳಿಂದ ಸುಗಂಧಮಯವಾದ ನೀರನ್ನು ಹಾಕಿ, ಅದರ ಮೂಲಕ ಲಿಂಗದ ಮೇಲೆ ಸಂತತವಾಗಿ ಧಾರಾಪೂರ್ವಕವಾಗಿ ನೀರು ಬೀಳುವಂತೆ ಮಾಡಿದವನಿಗೆ ಒದಗುವ ಪುಣ್ಯರಾಶಿಯಿಂದ ಸಾವಿರಾರು ಜನ್ಮಗಳಲ್ಲಿ ಸಂಪಾದಿಸಿದ ಪಾಪಶೇಷವು ನಿವೃತ್ತಿಯಾಗುವುದಲ್ಲದೆ, ಶಾಶ್ವತವಾದ ಮೋಕ್ಷವು ಸಹ ದೊರಕುವುದರಲ್ಲಿ ಸಂದೇಹವಿಲ್ಲ. ॥೪೮॥

ಪಾರ್ವತಿಯೇ, ನನ್ನನ್ನು ಅರ್ಚಿಸಲು ಅರಳಿದ ಕಮಲಗಳು, ನೈದಿಲೆ, ಮಲ್ಲಿಗೆ, ಮಾಲತೀ, ಜಾಜೀ, ಕೋಲುಮಲ್ಲಿಗೆ, ಪಾದರೀ, ಬಕಪುಷ್ಪ, ದತ್ತೂರಿ, ತುಂಬೆಹೂ, ಎಕ್ಕದಹೂವು, ಕಲ್ಹಾರ, ಕುಮುದ, ದಾಸವಾಳದಹೂ, ದಾಡಿಮಾ ಕುಸುಮ, ಸುರಗೀಹೂವು, ಬಿಳೀಸಂಪಗೆ, ವಕುಲ, ಮಂದಾರಪುಷ್ಪ, ವಾಲ್ಹಾತಕ(?) ಈ ಜಾತಿಯ ಹೂವುಗಳು ಅತ್ಯಂತ ಶ್ರೇಷ್ಠವಾದವುಗಳು. ॥೪೯॥

ನೀಲೋತ್ಪಲಗಳು, ಗೋರಂಟಿ ಹೂಗಳು, ಕಣಿಗಲು ಹೂಗಳು, ನಂದಿ ಬಟ್ಟಲು, ಬಾಗೇಹೂ, ಬಿಲ್ವಕುಸುಮ, ಕೆಂಪುಅಶ್ವಸಾರ, ಶಿವಪುಷ್ಪ, ನೇರಳೇಹಣ್ಣು, ಮಾವಿನಹಣ್ಣು, ಮುತ್ತುಗದಹೂ, ಶಮೀಪುಷ್ಪ, ಎಳೆಗರುಕೆ, ಉತ್ತರಣೀಪುಷ್ಪ, ವಿಷ್ಣುಕ್ರಾಂತಪುಷ್ಪ, ದರ್ಭೆ, ಕಾಶಪುಷ್ಪ, ಇವುಗಳಿಂದ ನನ್ನನ್ನು ಭಕ್ತಿಪೂರ್ವಕವಾಗಿ ಅರ್ಚಿಸಿದವರು ನಿಜವಾಗಿಯೂ ಮುಕ್ತರಾಗುವರು ॥೫೦॥

ಪ್ರಾಪ್ನೋತೀಷ್ಟಮಹೇತುಕಂ ಭಗವತಶ್ಶಂಭೋಃ ಕಟಾಕ್ಷಾಂಕುರೈಃ ।
ಲಿಂಗೇ ಪುಣ್ಯತಮೇ ಪ್ರದೋಷಸಮಯೇ ಪುಣ್ಯೇಷು ಕಾಲೇಷ್ವಪಿ ।
ಮೌದ್ಗಲ್ಯೋಽಥ ಶತರ್ಚನಾತ್ರಿಭೃಗವೋ ಧೌಮ್ಯಾಗ್ರಜೋ ಗೌತಮೋ ।
ಮಾರ್ಕಂಡೇಯದಧೀಚಿಗರ್ಗಉಶನಾಮುಂಜೋ ಕರಿಶ್ಶೌನಕಃ ॥೫೧॥

ದೂರ್ವಾಸಾ ಜಮದಗ್ನಿಜೋಂಗಿರವರಾ ದತ್ತಾತ್ರಿಜೋ ವ್ಯಾಘ್ರಪಾ ।
ಜ್ಜಾಬಾಲಿಶ್ಚ ದಧೀಚಿಮಿತ್ರಜನಿತಃ ಕುಂಭೋದ್ಭವಶ್ಶೈಲಜೇ ।
ದೇವೇಷು ಪ್ರಥಿತೋ ವಿಧಿಶ್ಚ ಮುರಭಿಚ್ಛಕ್ರೋಽರ್ಯಮಾಗ್ನಿರ್ಮರು ।
ತ್ಪಾಶೀ ಯಕ್ಷಪತಿರ್ಯಮೋಽಥ ನಿಋುತಿಶ್ಚೇಶಾನಮುಖ್ಯಾ ಗಣಾಃ ॥೫೨॥

ಸ್ಕಂದಶ್ಚೇಭಜವಕ್ತ್ರಕೋ ಗಣವರೋ ನಂದೀಶಭೃಂಗೀಶ್ವರಾ ।
ಸ್ತಂಡುಶ್ಚಂಡಿರಿಟೀ ಸುಭದ್ರಕವರೋ ವೀರೋ ಮಹಾಭೈರವಃ ।

---

ಯಾರೇ ಆಗಲಿ, ಭಗವಂತನಾದ ಪರಮೇಶ್ವರನ ಲಿಂಗವನ್ನು ಪ್ರದೋಷ ಕಾಲಗಳಲ್ಲಿಯೂ, ಇನ್ನೂ ಇತರವಿಧವಾದ ಪುಣ್ಯಕಾಲಗಳಲ್ಲಿಯೂ, ಭಕ್ತಿಯಿಂದ ಅರ್ಚಿಸಿದಲ್ಲಿ, ಅವರು ತಮ್ಮ ತಮ್ಮ ಇಷ್ಟಾರ್ಥಗಳನ್ನು ಸಂಪೂರ್ಣವಾಗಿ ಪಡೆಯು ವರು. ಇದೇರೀತಿ ಹಿಂದೆ, ಮೌದ್ಗಲ್ಯ, ಶತರ್ಚನ, ಅತ್ರಿ, ಭೃಗು, ಧೌಮ್ಯಾ ಗ್ರಜನಾದ ಉಪಮನ್ಯು, ಗೌತಮ, ಮಾರ್ಕಂಡೇಯ, ದಧೀಚಿ, ಗರ್ಗ, ಉಶನಸ್ಸು, ಮುಂಜ, ಕರಿ, ಶೌನಕ ಮುಂತಾದ ಋಷಿಶ್ರೇಷ್ಠರು ನನ್ನನ್ನು ಅರ್ಚಿಸಿ ನನ್ನ ಭಕ್ತರಾಗಿರುವರು. ॥೫೧॥

ದೂರ್ವಾಸಮಹರ್ಷಿ, ಜಮದಗ್ನಿಯಮಗನಾದ ಪರಶುರಾಮ, ಅಂಗಿರಸ್ಸು ದತ್ತಾತ್ರೇಯ, ವ್ಯಾಘ್ರಪಾತ್, ಜಾಬಾಲಿ, ದಧೀಚಿ, ಸೂರ್ಯಪುತ್ರ, ಅಗಸ್ತ್ಯ ಈ ಮಹರ್ಷಿಗಳೂ ನನ್ನನ್ನು ಭಕ್ತಿಯಿಂದಾರಾಧಿಸಿ, ಪ್ರಸಿದ್ಧಿಪಡೆದವರೇ ಆಗಿರುವರು. ಅವರೂ ಅಲ್ಲದೆ ದೇವಶ್ರೇಷ್ಠರೆಂದೆನಿಸುವ, ಬ್ರಹ್ಮ, ವಿಷ್ಣು, ಇಂದ್ರ, ಸೂರ್ಯ, ಅಗ್ನಿ, ವಾಯು, ವರುಣ, ಕುಬೇರ, ಯಮ, ನಿಋುತಿ, ಈಶಾನ ಇವರೇ ಮೊದಲಾದವರೂ ನನ್ನ ಭಕ್ತರೇ ಆಗಿರುವರು. ॥೫೨॥

ಕುಮಾರಸ್ವಾಮಿ, ಗಣಪತಿ, ಇನ್ನು ಪ್ರಮಥಗಣಾಧಿಪರು, ನಂದೀಶ್ವರ, ಭೃಂಗೀ, ತಂಡು, ಚಂಡೀ, ರಿಟ, ಸುಭದ್ರಕ, ವೀರ, ಮಹಾಭೈರವ ಇವರೆಲ್ಲರೂ ಶಿವಭಕ್ತಾಗ್ರಣಿಗಳೇ. ಇವರು ನನ್ನ ಆರಾಧನೆಯಲ್ಲಿ ನಿರತರಾಗಿ, ತ್ರಿಪುಂಡ್ರಾಂಕಿತ

ಶೈವೇಂದ್ರಾ ಭಸಿತತ್ರಿಪುಂಡ್ರನಿಟಿಲಾ ರುದ್ರಾಕ್ಷಮಾಲಾಂಗದಾ ।
ರುದ್ರಾವರ್ತನಲೋಲಶೀಲಮನಸೋ ಲಿಂಗಾರ್ಚಕಾ ಮೇ ಶಿವೇ ॥೫೩॥

ಅನ್ಯೇಽಮೀ ಮುನಯೋ ಗೃಹಾಶ್ರಮರತಾಶ್ಚಾಽಽಂತಾಃ ಪರೇ ಸಂಸೃತೇ ।
ನಾನಾದೈವತಪೂಜನೇನ ಕುಧಿಯೋ ಜಾನಂತಿ ನೋ ಮಾಂ ಶಿವೇ ।
ಕಾನೀನಸ್ತ್ವಯಮಪ್ಯಮೇ ವಿಧಿವಶಾತ್ಸಂಪ್ರಾಪ್ಯ ಮೇ ಕಾಶಿಕಾಂ ।
ಮತ್ಸಾನ್ನಿಧ್ಯಗತೋರ್ಧ್ವಬಾಹುರಸಕೃದ್ದ್ವ್ಯಾಚಷ್ಟ ದೈವಂ ಹರಿಂ ॥೫೪॥

ತಸ್ಮಾನ್ನಾರ್ಹತಿ ವಕ್ತುಮಪ್ಯತಿತರಾಂ ಶ್ರೋತುಂ ಮದೀಯಂ ರಹಃ ।
ಪುಣ್ಯಂ ಮುಕ್ತಿರಹಸ್ಯಮೇತದನಘಂ ಶಿಷ್ಯೇಷು ಪಾತ್ರೇಷ್ವಹೋ ।
ತ್ವಂ ಸಮ್ಯಕ್ಪ್ರತಿಪಾದಯಾಶು ಭಸಿತೋದ್ಧೂಲೇಷು ಮತ್ಪ್ರೇಮಜಾ ।
ಪಾರಾವಾರಮಹಾಂಬುಮಗ್ನಮನಸಾಂ ಪುಣ್ಯೇಷು ಶೈವೇಷು ಚ ॥೫೫॥

---

ವಾದ ಹಣೆಯುಳ್ಳವರಾಗಿ, ರುದ್ರಾಕ್ಷಮಾಲಾಧಾರಿಗಳಾಗಿರುವರು. ಅಲ್ಲದೆ ಸರ್ವದಾ ರುದ್ರಸೂಕ್ತಪಾರಾಯಣಮಾಡುತ್ತಾ ಶುದ್ಧಮನಸ್ಕರಾಗಿ ಶಿವಲಿಂಗಾರ್ಚನಾಸಕ್ತರಾಗಿರುವರು. ॥೫೩॥

ಅನೇಕ ಋಷಿಗಳು, ಗೃಹಸ್ಥಾಶ್ರಮಧಾರಿಗಳಾಗಿ ಸಂಸಾರದ ದುಃಖಪರಂಪರೆಗಳಿಂದ ಬಳಲಿದವರಾಗಿ, ನಾನಾ ದೇವತೆಗಳನ್ನು ಆರಾಧಿಸುತ್ತಾ ಅಜ್ಞಾನಿಗಳಾಗಿ ನನ್ನನ್ನೂ ಮರೆತಿರುವರು. ದೇವಿಯೇ, ಈ ಕನ್ಯಕಾಪುತ್ರನಾದ ಜೈಗೀಷವ್ಯ ಮುನಿಯು ಮಾತ್ರ ಅದೃಷ್ಟವಶದಿಂದ ನನ್ನ ನಿವಾಸಸ್ಥಾನವಾದ ಕಾಶೀ ನಗರಕ್ಕೆ ಬಂದು, ನನ್ನ ಸಾನ್ನಿಧ್ಯವನ್ನು ಸೇರಿ ನನ್ನನ್ನೇ ಊರ್ಧ್ವ ಬಾಹುವಾಗಿ ಭಜಿಸುತ್ತಿರುವನು. ಒಂದುಸಾರಿ, ಈತನು ಸಾಕ್ಷಾದ್ವಿಷ್ಣುವನ್ನೂ ಸಹ ಅಲಕ್ಷಿಸಿರುವನು. ॥೫೪॥

ಆದ್ದರಿಂದ ಎಲೌ ದೇವಿಯೇ, ಇವನನ್ನು ನೀನು ಇನ್ನು ಮೇಲೆ ನನ್ನ ಪ್ರಿಯಭಕ್ತನೆಂದು ತಿಳಿದುಕೋ. ಅನಿರ್ವಚನೀಯವೂ, ಪುಣ್ಯಕರವೂ ಆದ ಶಿವರಹಸ್ಯವನ್ನು ಹೇಳಲು ಎಲ್ಲರೂ ಪಾತ್ರರೆನಿಸರು. ನನ್ನ ಪ್ರೇಮವೆಂಬ ಅಗಾಧ ಸಮುದ್ರದಲ್ಲಿ ಮುಳುಗಿ ಶುದ್ಧಮನಸ್ಸುಳ್ಳವರಾಗಿರುವ ಭಕ್ತರ ಮಧ್ಯದಲ್ಲಿ ಯಾರು ಪುಣ್ಯಶಾಲಿಗಳಾಗಿ, ಶಿವಭಕ್ತಿಯುಳ್ಳವರಾಗಿರುವರೋ, ಅಂತಹವರಿಗೆ ನೀನು ಮರೆಮಾಜದೆ ಶಿವರಹಸ್ಯವನ್ನು ವಿವರಿಸು. ॥೫೫॥

ಜೈಗೀಷವ್ಯಮುನೀಂದ್ರ ದಾಪಯ ಪರಂ ಶೈವಂ ರಹಸ್ಯಂ ಮಮ ।
ನಾಖ್ಯೇಯಂ ಶಿವಭಕ್ತಿವರ್ಜಿತಮುನೌ ಪುಣ್ಯಂ ತ್ವಿದಂ ಮುಕ್ತಿದಂ ।
ದತ್ವಾ ಭಕ್ತಿವಿಹೀನಮಾನವವರೇ ಪಾಪಂ ಮಹತ್ಪ್ರಾಪ್ನುಯಾತ್ ।
ಕಿಂಚಾಪ್ನೋತಿ ವೃಥಾ ಶ್ರಮಂ ಸುನಿಶಿತಂ ಪಾತ್ರೇ ಯಥಾ ಮೇ ಜಲಂ॥೫೬॥

ಪ್ರಾಜ್ಞಾ ಜ್ಞಾನಕಲಾಪ್ತಯೇ ಸುಮನಸೋ ವೇದಾಂತಶಿಕ್ಷಾರತಾ ।
ಶ್ಯಾಂತಾಶ್ಯಾಂತತರೇಂದ್ರಿಯಾಶ್ಚ ಜನತಾಪಾರಭ್ರಮಾಸ್ಸಂಭ್ರಮಾಃ ।
ಯೇ ಯೇ ಭಕ್ತವರಾ ಮಮೇಶ್ವರಿ ವರೈಃ ಪಾಲ್ಯಾಸ್ಸದಾ ತೇ ತ್ವಯಾ॥೫೭॥

(1)
ದೇವ್ಯಾ ದೃಷ್ಟ್ವಾ ಮುಖಾಬ್ಜಂ ತ್ರಿನಯನನಯನಾನಂದಸಂದೋಹಬೀಜಂ।
ಚೋತ್ಫುಲ್ಲಾಮಲಕೈರವೋಪಮಮುಖಶ್ರೀಃ ಪಾರ್ವತೀನಾಯಕಃ ।

---

ಎಲೈ ಜೈಗೀಷವ್ಯ ಮಹಾಮುನಿಯೇ, ಈಗ ನೀನು ದೇವಿಯಿಂದ ಶಿವರಹಸ್ಯವೆಲ್ಲವನ್ನೂ ಸರಿಯಾಗಿ ಅರಿತು, ಶಿವನಲ್ಲಿ ಹೆಚ್ಚು ಭಕ್ತಿಯಿಟ್ಟರತಕ್ಕ ಮಹರ್ಷಿಗಳಿಗೆ ವಿವರಿಸುವವನಾಗು. ಶಿವಭಕ್ತಿ ವರ್ಜಿತನಾದ ಮುನಿಗೆ ಎಂದೂ ಈ ಶಿವರಹಸ್ಯವನ್ನು ವಿವರಿಸಬೇಡ. ಅಂತಹ ಅಜ್ಞಾನಿಗಳಿಗೆ, ಭಕ್ತಿಶೂನ್ಯರಿಗೆ ತಿಳಿಸಿದುದೇ ಆದರೆ ನಿನಗೆ ಮಹಾಪಾಪವು ಬಂದೊದಗುವುದು. ತೂತು ಪಾತ್ರೆಯಲ್ಲಿ ನೀರಿಟ್ಟಂತೆ ಅದು ವ್ಯರ್ಥವೂ ಆಗುವುದು. ಆದ್ದರಿಂದ ಅಪಾತ್ರರಾದವರಿಗೆ ಎಂದಿಗೂ ಈ ರಹಸ್ಯವನ್ನು ಉಪದೇಶಿಸಬೇಡ. ||೫೬||

ಎಲೌ ದೇವಿಯೇ, ಯಾರು ವಿವೇಕಿಗಳಾಗಿ, ಜಿಜ್ಞಾಸುಗಳಾಗಿರುವರೋ, ಯಾರು ಶುದ್ಧಮನಸ್ಕರೋ, ಯಾರು ಉಪನಿಷತ್ತೇ ಮೊದಲಾದ ಬ್ರಹ್ಮವಿದ್ಯೆಯಲ್ಲಿ ಪಾರಂಗತರಾಗಿ, ಚಿತ್ತಶುದ್ಧಿಯನ್ನು ಪಡೆದಿರುವರೋ, ಯಾರು ಜನಸಾಮಾನ್ಯಕ್ಕಿರುವ ಅಜ್ಞಾನವನ್ನು ದೂರಮಾಡಿ, ನನ್ನಲ್ಲಿ ನಿಜವಾದ ಭಕ್ತಿಯಿಟ್ಟು ಭಕ್ತಶ್ರೇಷ್ಠರೆನಿಸಿ ಕೊಂಡಿರುವರೋ ಅಂತಹವರನ್ನು ನೀನು ತಪ್ಪದೆ ರಕ್ಷಿಸುತ್ತಿರು. ||೫೭||

ಎಂದು ಹೇಳುತ್ತಾ ಬಿಳಿಯ ನೈದಿಲೆಯಂತೆ ಅರಳಿದ ಮುಖವುಳ್ಳ ಪಾರ್ವತೀ ನಾಯಕನಾದ ಪರಮೇಶ್ವರನು, ತನಗೆ ಹೆಚ್ಚು ಆನಂದವನ್ನುಂಟುಮಾಡತಕ್ಕಂತಹ ದೇವಿಯ ಮುಖಕಮಲವನ್ನು ಒಂದು ಸಾರಿ ನೋಡಿದನು. ಹಾಗೆಯೇ, ಶುದ್ಧ

---

(1) ಇನ್ನೊಂದು ಪಾದವು ಯಾವ ಪ್ರತಿಯಲ್ಲಿಯೂ ಕಂಡುಬರುತ್ತಿಲ್ಲ.

ದೃಷ್ಟ್ವಾ ಚಾಪಿ ಮುನಿಂ ವಿಶಿಷ್ಟಮನಸಂ ಶಿಷ್ಟಾತಿಶಿಷ್ಟಂ ತದಾ
ಜಾಷ್ಟಾಂಗಾಖಿಲಯೋಗಜಾಲನಿಕರೈಃ ಪೂತೈಕಸನ್ಮಾನಸಂ ॥೫೮॥

ಪೂತೋಽಯಂ ಭುವನೇಶ್ವರಿ ತ್ರಿಜಗತಾಮಿಾಶೋ ಮುನಿಶ್ಶಾಂಕರಃ ।
ಪುತ್ರಸ್ತೇ ನಿಖಿಲಾಗಮೈಕರಸಿಕೋ ಭೂಯಾತ್ತ್ವಯಾಲೋಕಿತಃ ।
ಸಂಪ್ರತ್ಯೇಷ ತವಾನನಾಬ್ಜವಿಕಸತ್ಸೂರ್ಯಸ್ಯ ಷಡ್ವಕ್ತ್ರತಃ ।
ಪ್ರಾಪ್ನೋತು ಪ್ರಸಭಂ ಮದೀಯಮಹಸಾಂ ಸಾರಂ ಜಗತ್ಪಾವನಂ ॥೫೯॥

ಸ್ಕಂದಸ್ಸ್ಕಂದಿತತಾರಕಸ್ತವ ಶಿವೇ ಪರ್ಯಂಕಭೂತಾಂಕಕೇ ।
ಶ್ರುತ್ವಾಖಿಲಮಂಗಲಂ ತ್ವಯಿ ಮಯಾ ಸಂಪ್ರೋಕ್ತಮೇತಚ್ಛುಭಂ ।
ಷಡ್ಭಿಸ್ಸ್ವೈರ್ವದನಚ್ಯುತಾಮೃತರಸೈಃ ಪುಷ್ಣಾತು ಚೈನಂ ಮುನಿಂ ।
ಶೈವೈರದ್ಯ ರಹಸ್ಯಸಂಭವಕಥಾಧಾರಾಸುಧಾಶೀಕರೈಃ ॥೬೦॥

---

ಮನಸ್ಕನಾಗಿ, ಶಿಷ್ಟರಲ್ಲಿ ಅತಿಶಿಷ್ಟನೆನಿಸಿ ಅಷ್ಟಾಂಗಯೋಗಗಳಿಂದ ಕೂಡಿ ತಪಸ್ಸು ಮಾಡುತ್ತಿರುವ ಜೈಗೀಷವ್ಯಮಹಾಮುನಿಯನ್ನು ಕಂಡನು. ॥೫೮॥

ಭುವನೇಶ್ವರಿಯೇ, ಈ ಜೈಗೀಷವ್ಯಮುನಿಯು ಮೂರು ಲೋಕದಲ್ಲಿ ಎಲ್ಲರಿಗಿಂತಲೂ ಪವಿತ್ರನೆನಿಸಿಕೊಂಡಿರುವನು. ಶಿವಭಕ್ತಿಯಿಟ್ಟಿರುವವರಲ್ಲಿ ಅಗ್ರಗಣ್ಯನಾಗಿರುವನು. ಆದ್ದರಿಂದ ಇವನಿಗೆ ಶಿವರಹಸ್ಯವನ್ನು ಉಪದೇಶಿಸಲು, ನಿನ್ನ ಪುತ್ರನಾದ ಷಣ್ಮುಖನಿಗೆ ನೀನು ನಿನ್ನ ಕೃಪಾವಲೋಕನದಿಂದ ಸಕಲ ವೇದಸಾರವನ್ನೆಲ್ಲಾ ಅನುಗ್ರಹಿಸು. ಅದರಿಂದ ಗುಹನು ಸರ್ವಜ್ಞನಾಗಿ, ಆಗ ಸರಿಯಾದ ಉಪದೇಶಕನಾಗುವನು. ಅನಂತರ ನಿನ್ನ ಮುಖಕಮಲಕ್ಕೆ ಸೂರ್ಯನಂತಿರುವ ನನ್ನ ತೇಜಸ್ಸಿನ ಸಾರವನ್ನು ಷಣ್ಮುಖಸ್ವಾಮಿಯಿಂದ ಈ ಮುನಿಯು ಶೀಘ್ರವಾಗಿ ಪಡೆಯಲಿ. ॥೫೯॥

ಈ ಷಣ್ಮುಖನು ತಾರಕಾಸುರರನ್ನು ನಾಶಮಾಡಿರುವನು. ಅಲ್ಲದೆ ನಮ್ಮ ಮಂಚದ ಮೇಲೆ ಯಾವಾಗಲೂ ಕುಳಿತವನಾಗಿ, ನಾನು ನಿನಗೆ ಹೇಳಿದ ಸಕಲ ರಹಸ್ಯ ವಿಷಯಗಳನ್ನೆಲ್ಲಾ ತಿಳಿದು ಕೊಂಡಿರುವನು. ಇಂತಹ ಮಂಗಳಕರವಾದ ಶಿವರಹಸ್ಯವನ್ನು ತನ್ನ ಆರು ಮುಖಗಳಿಂದಲೂ, ಅಮೃತಝರಿಯಂತೆ ಅನೇಕ ಕಥಾಲಾಪಗಳಿಂದ ಕೂಡಿ ಮಹಿಮಾಸ್ಪದವಾಗಿರುವ ಇದೇ ಶಿವಮಹಿಮಾ ವಿಷಯಗಳನ್ನು ವಿವರವಾಗಿ ಆ ಮುನಿಗೆ ತಿಳಿಸಲಿ. ॥೬೦॥

ಜೈಗೀಷವ್ಯಮುಖಾಬ್ಜತೋ ಮುನಿವರಾಶ್ಶೃಣ್ವಂತು ಶೈವಂ ರಹಃ ।
ಶೈವಾ ಏವ ಭವಂತಿ ತಚ್ಛ್ರುತಮಹಾನಂದೈಕಬೋಧಾಸ್ಸದಾ ।
ನಾನ್ಯೇಷಾಂ ಮತಿರಸ್ತಿ ಶಂಕರಕಥಾಪೀಯೂಷಪಾನೋತ್ಸವೇ ।
ಭಕ್ತ್ಯೇತ್ಥಾಮೃತಪಾನಪೀನಮನಸೋ ದೇವಿ ಸ್ಫುಟಂ ಕೇಚನ ॥೬೧॥

ವೇದಾಂತಾರ್ಥವಿಚಾರಸಾರಸುಗಮಂ ಶೈವಂ ರಹಸ್ಯಂ ಮಯಾ ।
ದೇವ್ಯೈ ದತ್ತಮತಸ್ತಯಾ ಬಲವತಾ ಸ್ನೇಹೇನ ದತ್ತಂ ಮುನೇ ।
ಸ್ಕಂದಾಯಾಸುರಶಿಕ್ಷಕಾಯ ದದ ತಾಂ ಗಚ್ಛಾಧುನಾ ತಂ ಪ್ರತಿ ।
ತ್ಯುಕ್ತೋಽಸೌ ಗಿರಿಜಾಮನೋಹರವಚಶ್ಶ್ರುತ್ವಾ ಮುನಿರ್ನಿರ್ಯಯೌ ॥೬೨॥

ನತ್ವಾ ಶಂಭುಪದಂ ಜಗಾಮ ರಭಸಾ ಯುಕ್ತೋ ಮುನೀಂದ್ರೈರಪಿ ।
ದೇವಶ್ಚಾಪಿ ಮುದಾ ಯಯೌ ಪಶುಪತಿರ್ದೇವ್ಯಾ ಸುರಾದ್ಯೈರ್ವೃತಃ ।

---

ದೇವಿಯೇ, ಸ್ಕಂದನಿಂದ ಉಪದಿಷ್ಟನಾದ ಜೈಗೀಷವ್ಯಮಹಾಮುನಿಯು ತಾನು ತಿಳಿದ ಶಿವರಹಸ್ಯವನ್ನು ಸರ್ವರಿಗೂ ಉಪದೇಶಮಾಡಲಿ. ಅದನ್ನು ಕೇಳಿ ಸರ್ವರೂ ಆ ಶಿವರಹಸ್ಯಾಮೃತಪಾನದಿಂದ ಸುಜ್ಞಾನಿಗಳಾಗಿ ಶಿವಪದವನ್ನು ಸೇರಲಿ. ಯಾರಿಗೆ ಶಂಕರನ ಕಥಾಮೃತಪಾನದಲ್ಲಿ ಸಂಪೂರ್ಣ ಮನಸ್ಸಿರುವುದೋ, ಯಾರು ಶಿವಭಕ್ತಿಯೆಂಬ ಅಮೃತಪಾನದಲ್ಲಿ ತಮ್ಮ ಮನಸ್ಸನ್ನು ಪರಿಪಕ್ವಗೊಳಿಸಿರುವರೋ ಅಂತಹವರಿಗೆ ಈ ಶಿವರಹಸ್ಯ ಶ್ರವಣವು ಆನಂದವನ್ನುಂಟುಮಾಡುತ್ತದೆ. ॥೬೧॥

ಪರಮೇಶ್ವರನು ಕೊನೆಯದಾಗಿ ಜೈಗೀಷವ್ಯ ಮಹಾಮುನಿಯನ್ನು ಕರೆದು, ಮುನಿವರ್ಯನೇ, ಸಕಲ ವೇದಸಾರಭೂತವಾಗಿ, ಸುಗಮವಾಗಿ ತಿಳಿಯಬಹುದಾದ, ಶಿವರಹಸ್ಯವನ್ನೆಲ್ಲಾ ನಾನು ಪ್ರೀತಿಯಿಂದ ಪಾರ್ವತಿಗೆ ತಿಳಿಸಿದೆನು. ಪಾರ್ವತಿಯಾದರೋ, ತನ್ನ ಮೆಚ್ಚಿನ ಮಗನೂ, ರಾಕ್ಷಸನಾಶಕನೂ ಆದ ಕುಮಾರಸ್ವಾಮಿಗೆ ಉಪದೇಶಿಸಿರುವಳು. ಆದ್ದರಿಂದ ಈಗಲೇ ನೀನು ಷಣ್ಮುಖನನ್ನು ನೋಡು. ಅವನು ನಿನಗೆ ಸರ್ವವನ್ನೂ ಬೋಧಿಸುವನು." ಎಂದು ಹೇಳಿದನು. ಆ ಮಾತನ್ನು ಕೇಳಿ ಜೈಗೀಷವ್ಯ ಮಹಾಮುನಿಯು ಶಿವನಿಗೂ ಪಾರ್ವತಿಗೂ ವಂದಿಸಿ, ವೇಗವಾಗಿ ಷಣ್ಮುಖನಿದ್ದಕಡೆಗೆ ಪ್ರಯಾಣಮಾಡಿದನು.

ಇತ್ತ ಪರಮೇಶ್ವರನು ಗಿರಿಜೆಯೊಡನೆಯೂ, ಸಕಲ ಮುನಿಬೃಂದಗಳೊಡನೆಯೂ ಕೂಡಿ ಕೈಲಾಸಕ್ಕೆ ಪ್ರಯಾಣ ಬೆಳೆಸಿದನು. ಪ್ರಯಾಣಕಾಲದಲ್ಲಿ ಪ್ರಮಥ

**ಕೈಲಾಸಂ ಗಣಪೋತ್ಥವಾದ್ಯನಿಕರೈರ್ದೇವೈಸ್ಸ್ತವೈಸ್ಸಂಸ್ತುತೋ ।**
**ಭಕ್ತಾನಾಂ ಪುರುಷಾರ್ಥಸಾಧನಪರಸ್ಸಾನಂದಕೈಸ್ಸಂಯುತಃ ॥೬೩॥**

**ಇಲಾಮಿಲನ್ಮೌಲಿರಥೋ ಮಹಾತ್ಮಾ ಜೈಗೀಷವಿಪ್ರೋಽಧ್ವರರಾಜನಾಶಂ ।**
**ಸಂಪೂಜ್ಯ ನತ್ವಾಭಿಜಗಾಮ ಶಂಭುಂ ಸ್ಕಂದಾಯ ಚ ಸ್ಕಂದಮುದಾರ್ಥ ವೇದನೇ ॥೬೪॥**

**ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ಜೈಗೀಷವ್ಯಾಗಮನಂ ನಾಮ ಷಷ್ಠೋಽಧ್ಯಾಯಃ**

---

ಗಣಗಳು ಸಮಸ್ತ ವಾದ್ಯಧ್ವನಿಗಳೊಡನೆ ಪರಮೇಶ್ವರನನ್ನು ಹಿಂಬಾಲಿಸಿದರು. ಸಕಲ ಭಕ್ತರಿಗೂ ಇಷ್ಟಾರ್ಥಪ್ರದಾಯಕನಾದ ಮಹೇಶ್ವರನು ಸಮಸ್ತ ದೇವತೆಗಳೊಡನೆ ಕೈಲಾಸವನ್ನು ಸೇರಿದನು. ||೬೨-೬೩||

ಮಹಾತ್ಮನಾದ ಜೈಗೀಷವ್ಯಮುನಿಯು ಯಾಗಾಭಿಮಾನಿದೇವತೆಯಾದ ಮಹಾದೇವನನ್ನು ಅವನತ ಶಿರಸ್ಕನಾಗಿ ವಂದಿಸಿ, ಮಹೇಶ್ವರಮಹಿಮೆಯನ್ನು ವಿವರವಾಗಿ ತಿಳಿಯಲೋಸುಗ ಸ್ಕಂದನನ್ನು ನೋಡಲು ಪ್ರಯಾಣಮಾಡಿದನು. ||೬೪||

ಇಲ್ಲಿಗೆ ಶ್ರೀಶಿವರಹಸ್ಯದ ಪ್ರಥಮಾಂಶದಲ್ಲಿ ಜೈಗೀಷವ್ಯನ ಪ್ರಯಾಣವೆಂಬ ಆರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

# ಅಥ ಶ್ರೀಶಿವರಹಸ್ಯೇ

## ಸಪ್ತಮೋಽಧ್ಯಾಯಃ

### ಜೈಗೀಷವ್ಯಸ್ಕಂದಸಮಾಗಮಃ

॥ ಸೂತ ಉವಾಚ ॥

ಇತ್ಯುಕ್ತ್ವಾ ಪ್ರಯಯೌ ದೇವಃ ಕೈಲಾಸಂ ಶಂಕರಾಲಯಂ ।
ನಂದಿಭೃಂಗಿಗಣೌಘೇನ ಸುರಾಸುರವರಾರ್ಚಿತಃ ॥೧॥

ಜಗಜ್ಜನಿತ್ರ್ಯಾ ದೇವ್ಯಾ ಚ ಮಹಾವೃಷಭವಾಹನಃ ।
ಜೈಗೀಷವ್ಯೋ ಮುನಿರ್ನತ್ವಾ ಮಹಾದೇವಪದಾಂಬುಜಂ ॥೨॥

ಧ್ಯಾಯನ್ನಭಿಜಗಾಮೈವ ಸ್ಕಂದಂ ಕ್ರೌಂಚವಿದಾರಣಂ ।
ಉಪಾಸ್ಯಮಾನಂ ಮುನಿವರ್ಯೈಶ್ಶೈವೇಂದ್ರೈರ್ಭಕ್ತಿತತ್ಪರೈಃ ॥೩॥

---

ಶ್ರೀಶಿವರಹಸ್ಯದಲ್ಲಿ ಏಳನೆಯ ಅಧ್ಯಾಯ

ಹೀಗೆ ಶಂಕರನು ಜೈಗೀಷವ್ಯನಿಗೆ ವರಕೊಟ್ಟು, ನಂದೀ, ಭೃಂಗೀ, ಇವರೇ ಮೊದಲಾದ ಗಣಗಳೊಡಗೂಡಿ, ದೇವರಾಕ್ಷಸರಿಂದ ವಂದಿತನಾಗಿ ಕೈಲಾಸವನ್ನು ಕುರಿತು ಪ್ರಯಾಣಮಾಡಿದನು. ॥೧॥

ಜೊತೆಯಲ್ಲಿ ಲೋಕಮಾತೆಯಾದ ಗೌರೀದೇವಿಯು ವೃಷಭಾರೂಢನಾದ ಶಂಕರನೊಡನೆ ಪ್ರಯಾಣಮಾಡಿದಳು. ಇತ್ತ ಜೈಗೀಷವ್ಯಮಹಾಮುನಿಯು ಪರಮೇಶ್ವರನ ಪಾದಕಮಲಗಳಿಗೆ ವಂದಿಸಿ, ॥೨॥

ಪರಮೇಶ್ವರನನ್ನೇ ಸ್ಮರಿಸುತ್ತಾ ಕ್ರೌಂಚಪರ್ವತಭೇದಕನಾದ ಕುಮಾರಸ್ವಾಮಿಯನ್ನು ಹುಡುಕಿಕೊಂಡು ಹೊರಟನು. ಅಲ್ಲಿ ಕುಮಾರಸ್ವಾಮಿಯು ಅನೇಕ ಜನ ಋಷಿವರ್ಯರಿಂದಲೂ, ಶಿವಭಕ್ತಿಪರಾಯಣರಿಂದಲೂ ಪೂಜಿತನಾಗಿ ಪ್ರಕಾಶಿಸುತ್ತಿದ್ದನು. ॥೩॥

ಮಾರ್ಕಂಡೇಯೋಽಥ ಮೌದ್ಗಲ್ಯೋ ಜಮದಗ್ನಿರ್ಭೃಗುಸ್ತಥಾ ।
ದೂರ್ವಾಸಾಶ್ಚ್ಯವನೋ ಗರ್ಗೋ ವೀತಹವ್ಯೋಽನಲಾಶನಃ ॥೪॥

ಗೌತಮೋತ್ರಿರ್ಭರದ್ವಾಜೋ ದಾಲ್ಭ್ಯೋ ಹಯಶಿರಾ ಮನುಃ ।
ಉಚಥ್ಯೋಽಗ್ನಿಧ್ವಜಶ್ಚೈವ ದಧೀಚಿರ್ಮೌನಿಭಾರ್ಗವಃ ॥೫॥

ವ್ಯಾಸಃ ಪರಾಶರೋಽಕುಂಡಃ ಕವಿರಂಗಿರಸೋ ಮಧುಃ ।
ಉಪಮನ್ಯುರ್ವಿಶಾಖಶ್ಚ ತುಹಂಡಃ ಕವಯೋಽಧ್ರುವಃ ॥೬॥

ಜಾಬಾಲಿಕಾಶ್ಯಪೌ ಮಿತ್ರೋ ನಾರದಸ್ತುಂಬುರುಸ್ತಥಾ ।
ಪರ್ವತೋಽಥಾಣಿಮಾಂಡವ್ಯೋ ದಂಡೋ ವ್ಯಾಘ್ರಪದೋ ಹನುಃ ॥೭॥

ವೇದಗರ್ಭೋ ವೀತಿಹೋತ್ರಃ ಕಣ್ವೋ ಮೇಧಾತಿಥಿರ್ಧನುಃ ।
ಶೌನಕಸ್ತಾಂಡಕಶ್ಚೈವ ಮಿತ್ರವಿಂದೋಽನಮಿತ್ರಕಃ ॥೮॥

ಹಯಗ್ರೀವಃ ಪಿಪ್ಪಲಾದೋ ದತ್ತಾತ್ರೇಯೋಽವಿಕತ್ಥನಃ ।
ಅಗಸ್ತ್ಯಶ್ಚಾನಿಲಾಶಶ್ಚ ಶತಚರ್ಚ ಆಶ್ವಲಾಯನಃ ॥೯॥

ಸನಂದಸ್ಸನಕಶ್ಚೈವ ಕುಮಾರಶ್ಚ ಸನಾತನಃ ।
ಏವಮಾದ್ಯಾಶ್ಚ ಮುನಯಶ್ಶೈವೇಂದ್ರಾಶ್ಶಿವಸಂಮತಾಃ ॥೧೦॥

---

ಆ ಕುಮಾರಸ್ವಾಮಿಯ ಸಮೀಪದಲ್ಲಿ ಮಾರ್ಕಂಡೇಯ, ಮೌದ್ಗಲ್ಯ, ಜಮದಗ್ನಿ, ಭೃಗು, ದೂರ್ವಾಸ, ಚ್ಯವನ, ಗರ್ಗ, ವೀತಹವ್ಯ, ಅನಲಾಶನ, ಗೌತಮ, ಅತ್ರಿ, ಭರದ್ವಾಜ, ದಾಲ್ಭ್ಯ, ಹಯಶಿರಾ, ಮನು, ಉಚಥ್ಯ, ಅಗ್ನಿಧ್ವಜ, ದಧೀಚಿ, ಮೌನಿಭಾರ್ಗವ, ವ್ಯಾಸ, ಪರಾಶರ, ಅಕುಂಡ, ಕವಿ, ಅಂಗಿರಸ, ಮಧು, ಉಪಮನ್ಯು, ವಿಶಾಖ, ತುಹಂಡ, ಕವಯ, ಅಧ್ರುವ, ಜಾಬಾಲಿ, ಕಾಶ್ಯಪ, ಮಿತ್ರ, ನಾರದ, ತುಂಬುರು, ಪರ್ವತ, ಅಣಿಮಾಂಡವ್ಯ, ದಂಡ, ವ್ಯಾಘ್ರಪದ, ಹನು, ವೇದಗರ್ಭ, ವೀತಿಹೋತ್ರ, ಕಣ್ವ, ಮೇಧಾತಿಥಿ, ಧನು, ಶೌನಕ, ತಾಂಡಕ, ಮಿತ್ರವಿಂದ, ಅನಮಿತ್ರಕ, ಹಯಗ್ರಿವ, ಪಿಪ್ಪಲಾದ, ದತ್ತಾತ್ರೇಯ, ಅವಿಕತ್ಥನ, ಅಗಸ್ತ್ಯ, ಅನಿಲಾಶ, ಶತಚರ್ಚ, ಆಶ್ವಲಾಯನ, ಸನಂದ, ಸನಕ, ಕುಮಾರ, ಸನಾತನ ಇವರೇ ಮೊದಲಾದ ಶಿವಭಕ್ತಿಪರಾಯಣರಾದ ಮಹರ್ಷಿಗಳು ಅಲ್ಲಿ ನೆರೆದಿದ್ದರು.

ಅಗ್ನಿರಿತ್ಯಾದಿಭಿರ್ಮಂತ್ರೈರ್ಭಸ್ಮೋದ್ಧೂಲನತತ್ಪರಾಃ ।
ತ್ರಿಯಾಯುಷೈಸ್ತ್ರಿಪುಂಡ್ರಾಂಕಾರುದ್ರಾಕ್ಷಾಂಗದಕಂಕಣಾಃ ॥೧೧॥

ಪಂಚಾಕ್ಷರಜಪಾಸಕ್ತಾಃ ಪಂಚಾಸ್ಯಧ್ಯಾನತತ್ಪರಾಃ ।
ಅಥರ್ವಶಿರಸಾ ದೇವಂ ಪೂಜಯಂತಿ ಸ್ತುವಂತಿ ಚ ॥೧೨॥

ಕೇಚಿಚ್ಛಿಖಾಜಪಾಸಕ್ತಾಃ ಕೇಚಿತ್ಕೈವಲ್ಯಜಾಪಕಾಃ ।
ಪ್ರಣವಾಭ್ಯಾಸನಿರತಾಃ ಕೇಚಿಜ್ಞಾಬಾಲಜಾಪಕಾಃ ॥೧೩॥

ಬೃಹದ್ರಥಂತರಂ ವಾಮದೇವಸಾಮಾದಿಜಾಪಕಾಃ ।
ಸಂಹಿತಾಭಿಸ್ತಥಾ ಸಾಮ್ನಾಮೃಚಾಂ ಚ ಯಜುಷಾಂ ತಥಾ ॥೧೪॥

ರುದ್ರಾಧ್ಯಾಯಜಪಾಸಕ್ತಾಃ ಪಂಚಬ್ರಹ್ಮಪರಾಯಣಾಃ ।
ಸರ್ವೇ ಲಿಂಗಾರ್ಚನಪರಾಸ್ತ್ರಿಕಾಲಂ ಮುನಿಸತ್ತಮಾಃ ॥೧೫॥

---

ಅವರೆಲ್ಲರೂ ಶಿವಾನುಗ್ರಹದಿಂದಲೇ ಸ್ಕಂದನನ್ನು ಓಲೈಸುತ್ತಿದ್ದರು. ॥೪-೫-೬-೭-೮-೯-೧೦॥

ಅವರೆಲ್ಲರೂ ಅಗ್ನಿರಿತಿಭಸ್ಮ ಎಂಬ ಮಂತ್ರಗಳಿಂದ ವಿಭೂತಿಯನ್ನು ಧರಿಸಿದವರಾಗಿದ್ದರು. ತ್ರ್ಯಾಯುಷಾದಿಮಂತ್ರಗಳಿಂದ ತ್ರಿಪುಂಡ್ರಗಳನ್ನು ಧರಿಸಿ, ರುದ್ರಾಕ್ಷಿಯನ್ನು ಕೈಗಳಿಗೂ, ತೋಳುಗಳಿಗೂ ಕಟ್ಟಿಕೊಂಡಿದ್ದರು. ॥೧೧॥

ಸರ್ವದಾ ಶಿವಪಂಚಾಕ್ಷರೀಸ್ತೋತ್ರವನ್ನು ಜಪಿಸುತ್ತಿದ್ದರು. ಶಿವಧ್ಯಾನದಲ್ಲಿಯೇ ಮಗ್ನರಾಗಿದ್ದರು. ಅಥರ್ವಶೀರ್ಷೋಪನಿಷತ್ಪಾರಾಯಣದಿಂದ ಶಂಕರನನ್ನು ಪೂಜಿಸುತ್ತಲೂ, ಸ್ತುತಿಗೈಯ್ಯುತ್ತಲೂ ಇದ್ದರು. ॥೧೨॥

ಕೆಲವರು ವ್ಯಾಹೃತಿಮಂತ್ರವನ್ನೂ, ಕೆಲವರು ಗಾಯತ್ರಿಯನ್ನೂ, ಅನೇಕರು ಪ್ರಣವಮಂತ್ರವನ್ನೂ, ಹಲವರು ವೇದಮಂತ್ರಗಳನ್ನೂ ಜಪಿಸುತ್ತಿದ್ದರು. ॥೧೩॥

ಬೃಹತ್, ರಥಂತರ, ವಾಮದೇವ ಮುಂತಾದ ಸಾಮಗಳನ್ನು ಪಾರಾಯಣ ಮಾಡುತ್ತಿದ್ದರು. ಅನೇಕರು ಋಕ್, ಯಜುಸ್, ಸಾಮವೇದಗಳ ಸಂಹಿತಾಮಂತ್ರಗಳನ್ನೂ ಪಠನ ಮಾಡುತ್ತಿದ್ದರು. ॥೧೪॥

ತ್ರಿಕಾಲಗಳಲ್ಲಿಯೂ, ರುದ್ರಾಧ್ಯಾಯವನ್ನು ಪಠಿಸುತ್ತಾ, ವೈದಿಕವಾದ ಪಂಚಯಜ್ಞಗಳನ್ನು ನೆರವೇರಿಸುತ್ತಾ, ಶಿವಲಿಂಗಾರ್ಚಕರಾಗಿ ಅಲ್ಲಿದ್ದ ಋಷಿಗಳೆಲ್ಲಾ ಕಾಲಕಳೆಯುತ್ತಿದ್ದರು. ॥೧೫॥

ಪಂಚರುದ್ರಜಪಾಸಕ್ತಾಃ ಪಂಚಾಸ್ಯಧ್ಯಾನತತ್ಪರಾಃ ।
ಶಿವನೈವೇದ್ಯಭೋಕ್ತಾರೋ ನಿಯಮಾದ್ಬಿಲ್ವಪೂಜಕಾಃ ॥೧೬॥

ವೈರಾಗ್ಯಭಾಗ್ಯನಿರತಾ ನಿತ್ಯಾನಿತ್ಯಾರ್ಥಕೋವಿದಾಃ ।
ವೇದವೇದಾರ್ಥತತ್ತ್ವಜ್ಞಾ ದೃಢಪ್ರಜ್ಞಾ ಮನೀಷಿಣಃ ॥೧೭॥

ತಪಸಾಂ ರಾಶಯಸ್ಸರ್ವೇ ಸದಾರಾಶ್ಶಿವತತ್ಪರಾಃ ।
ಶಿವನಾಮಜಪಾಸಕ್ತಾಸ್ಸರ್ವದಾ ಶಿವಚಿಂತಕಾಃ ॥೧೮॥

ಅಗ್ನಿಹೋತ್ರಪರಾಸ್ಸರ್ವೇ ಯಜ್ಞಾದ್ಯೈರ್ದಗ್ಧಕಿಲ್ಬಿಷಾಃ ।
ಶಿಷ್ಯಪ್ರಶಿಷ್ಯಸಹಿತಾ ಆಗತಾಸ್ತೇ ನಭೋಽಧ್ವನಾ ॥೧೯॥

ಸ್ಕಂದಾಶ್ರಮಂ ಸರಸ್ವತ್ಯಾಸ್ತೀರೇ ಪಾವನಪಾವನಂ ।
ನಾನಾಸ್ಕಂದಗಣೋಪೇತಂ ದೇವಗಂಧರ್ವಶೋಭಿತಂ ॥೨೦॥

---

ಸದ್ಯೋಜಾತಾದಿ ಪಂಚರುದ್ರಾನುವಾಕಗಳನ್ನು ಜಪಿಸುತ್ತಾ, ಐದು ಮುಖಗಳುಳ್ಳ ಪರಮೇಶ್ವರನನ್ನು ಧ್ಯಾನಿಸುತ್ತಾ, ಪರಮೇಶ್ವರನ ನೈವೇದ್ಯ ಶೇಷವನ್ನು ಭುಂಜಿಸುತ್ತಾ ವಾಸಿಸುತ್ತಿದ್ದರು. ॥೧೬॥

ಸರ್ವರೂ ವೈರಾಗ್ಯಸಂಪನ್ನರಾಗಿದ್ದರು. ನಿತ್ಯಾನಿತ್ಯವಸ್ತುವಿವೇಚನೆಯಲ್ಲಿ ನಿಪುಣರಾಗಿದ್ದರು. ವೇದವೇದಾಂಗಗಳ ಅರ್ಥವನ್ನು ತಿಳಿದು ಜಿತೇಂದ್ರಿಯರಾಗಿ ವಿದ್ವಾಂಸರೆನಿಸಿಕೊಂಡಿದ್ದರು. ॥೧೭॥

ಸರ್ವರೂ ತಪೋನಿಧಿಗಳೇ. ಸಪತ್ನೀಕರಾಗಿ ಶಿವಧ್ಯಾನಾಸಕ್ತರಾಗಿ ಶಿವನಲ್ಲಿಯೇ ಸರ್ವವನ್ನೂ ಅರ್ಪಿಸಿದವರಾಗಿ ಪವಿತ್ರರೆನಿಸಿಕೊಂಡಿದ್ದರು. ॥೧೮॥

ನಿತ್ಯವೂ ಅಗ್ನಿಹೋತ್ರವನ್ನು ನಡೆಸುತ್ತಾ, ಆಗಾಗ ಯಜ್ಞಯಾಗಾದಿಗಳಿಂದ ಪಾಪಮುಕ್ತರಾಗುತ್ತಾ, ಶಿಷ್ಯಪ್ರಶಿಷ್ಯಸಹಿತರಾಗಿ ಸ್ಕಂದಾಶ್ರಮಕ್ಕೆ ನಭೋಮಾರ್ಗದಿಂದ ಬರುತ್ತಲಿದ್ದರು. ॥೧೯॥

ಆ ಸ್ಕಂದಾಶ್ರಮವು ಸರಸ್ವತೀನದಿಯ ತೀರದಲ್ಲಿ ಪರಿಶುದ್ಧವಾದ ಪ್ರದೇಶದಲ್ಲಿತ್ತು. ಅಲ್ಲಿ ಸ್ಕಂದನಗಣಗಳೆಲ್ಲವೂ ಸರ್ವದಾ ಸ್ಕಂದಸ್ವಾಮಿಯನ್ನು ಸೇವಿಸುತ್ತಿದ್ದವು. ದೇವತೆಗಳೂ, ಗಂಧರ್ವರೂ ಯಾವಾಗಲೂ ಅಲ್ಲಿಯೇ ವಿಹರಿಸುತ್ತಿದ್ದರು. ॥೨೦॥

ನೀಲಾದ್ರಿಶಿಖರೇ ಪುಣ್ಯೇ ನಾನಾತರುವರಾಶ್ರಿತಂ ।
ಬರ್ಹಿನೃತ್ತಾರವೈಶ್ಚೈವ ಪುಂಸ್ಕೋಕಿಲವಿನಾದಿತಂ ॥೨೦॥

ಶುಕಸಾರಿಕಸಂಘುಷ್ಟಂ ಕಪೋತಕೃತಹುಂಕೃತೈಃ ।
ಮೃದಂಗಮುರಜೋದ್ಘೋಷೈರ್ವೀಣಾತಾಲಲಯಾನುಗೈಃ ॥೨೨॥

ಪ್ರನೃತ್ಯತ್ಕಿನ್ನರಾನೀಕಮುತ್ಫುಲ್ಲಕಮಲಾಕರಂ ।
ಸ್ಕಂದಾಲಯಮುಪಶ್ಯಂಸ್ತೇ ನಾನಾರತ್ನವಿರಾಜಿತಂ ॥೨೩॥

ಗೋಪುರಾಟ್ಟಾಲವಲಭೀವಪ್ರಪ್ರಾಕಾರಶೋಭಿತಂ ।
ಸುವರ್ಣಖಚಿತಾನೇಕನವರತ್ನವಿರಾಜಿತಂ ॥೨೪॥

ಪರ್ಯಂಕಾಸ್ತರಣೈರ್ದಿವ್ಯೈಸ್ಸಿಂಹಸಾದವರೈರ್ಯುತಂ ।
ಗಂಧರ್ವನೀತಬಕುಲೈರುಪೇತಂ ಗೀತವಾದನೈಃ ॥೨೫॥

---

ಆ ನೀಲಾದ್ರಿಯಶಿಖರದಲ್ಲಿ ವಿಧವಿಧವಾದ ವೃಕ್ಷಗಳು ಬೆಳೆದಿದ್ದುವು. ನವಿಲುಗಳ ನರ್ತನವೂ, ಪುಂಸ್ಕೋಗಿಲೆಗಳ ಮಂಜುಲಧ್ವನಿಯೂ ಮನೋಹರವಾಗಿದ್ದಿತು. ॥೨೦॥

ಗಿಳಿಗಳೂ, ಶಾರಿಕೆಗಳೂ ಅಲ್ಲಿ ವಿಹರಿಸುತ್ತಿದ್ದುವು. ಕಪೋತಪಕ್ಷಿಗಳು ಹುಂಕಾರ ಮಾಡುತ್ತಿದ್ದುವು. ಕಿನ್ನರರು ಮೃದಂಗ, ತಬಲ ಮುಂತಾದ ವಾದ್ಯಗಳಿಂದ ಕೂಡಿ ವೀಣೆಯನ್ನು ಲಯಬದ್ಧವಾಗಿ ಬಾರಿಸುತ್ತಾ, ಅಲ್ಲಲ್ಲಿ ಸಂಚರಿಸುತ್ತಿದ್ದರು. ॥೨೨॥

ಕುಮಾರಸ್ವಾಮಿಯ ಮನೆಯು ನಾನಾ ಜಾತಿಯ ರತ್ನಗಳಿಂದ ಕಂಗೊಳಿಸುತ್ತಿದ್ದಿತು. ಸುತ್ತಲೂ ಅರಳಿದ ಕಮಲಗಳಿಂದ ಕೂಡಿದ ಸರೋವರಗಳಿದ್ದುವು. ಇಂತಹ ಮನೆಯಲ್ಲಿ ಕಿನ್ನರರು ನರ್ತನಮಾಡುತ್ತಿದ್ದರು. ॥೨೩॥

ಆ ಮನೆಗೆ ಗೋಪುರವೂ, ಬಿಸಿಲುಮಚ್ಚೂ, ಹಕ್ಕಿಗಳು ವಾಸಮಾಡುವ ಮುಂಜೂರು, ಕೋಟೆಯ ಗೋಡೆಗಳೂ ಮನೋಹರವಾಗಿದ್ದುವು. ಆ ಮನೆಯೆಲ್ಲಾ ಸುವರ್ಣದಿಂದಲೂ ನವರತ್ನಗಳಿಂದಲೂ ಕೂಡಿ ಕಂಗೊಳಿಸುತ್ತಿತ್ತು. ॥೨೪॥

ಆ ಮನೆಯ ಒಳಭಾಗದಲ್ಲಿ ಸುಖಾಸನಗಳು ಇಡಲ್ಪಟ್ಟಿದ್ದುವು. ಸಿಂಹನಾದ ಮಾಡತಕ್ಕ ವೀರರೆಲ್ಲಾ ಅಲ್ಲಿ ಮಂಡಿಸಿದ್ದರು. ಗಂಧರ್ವರು ಗೀತವಾದ್ಯಾದಿಗಳಿಂದ ವಿಜೃಂಭಿಸುತ್ತಾ ಅಲ್ಲಲ್ಲಿ ವಕುಲಪುಷ್ಪಗಳನ್ನು ಎರಚುತ್ತಿದ್ದರು. ॥೨೫॥

ಸಿಂಹಾಸನಸ್ಥಂ ವರದಂ ಷಡ್ವಕ್ತ್ರಂ ಮಕುಟೋಜ್ಜ್ವಲಂ ।
ಹೇಮಪೀತಾಂಬರಧರಂ ಚಲಚ್ಚಾಮರವೀಜಿತಂ ॥೨೬॥

ಕನತ್ಕನಕರತ್ನೈಶ್ಚ ಚಿತ್ರಕುಂಡಲಶೋಭಿತಂ ।
ಮಹಾರ್ಹರತ್ನಮಾಲಾದಿಮುಕ್ತಾಹಾರಸುಕಂಧರಂ ॥೨೭॥

ಶಕ್ತಿಹಸ್ತಂ ಮಹಾಶಕ್ತೇಸ್ತನೂಜಮತಿಸುಂದರಂ ।
ದದರ್ಶುರ್ಮುನಯಸ್ಸರ್ವೇ ಸ್ಕಂದಂ ಕ್ರೌಂಚವಿದಾರಣಂ ॥೨೮॥

ಪ್ರಣಮ್ಯ ಜೈಗೀಷವ್ಯಾದ್ಯಾ ಮುನಯಸ್ಸ್ಕಂದಮವ್ಯಯಂ ।
ತೇನ ನಿರ್ದಿಷ್ಟವಿಷ್ಟಬ್ಧವಿಷ್ಟರಾ ಮುನಯಸ್ಸುಖಂ ॥೨೯॥

ನಭಸ್ಸೃಗಾಯಾತಿ ಸಮೀರಗತ್ಯಾ ।
ಭಸ್ಮಾವಧೂತಾಖಿಲಪಾಪಸಂಘಃ ।

---

ಆ ಗೃಹಮಧ್ಯದಲ್ಲಿ ಷಣ್ಮುಖಸ್ವಾಮಿಯು ವರದಹಸ್ತನಾಗಿ ಕಿರೀಟಗಳನ್ನು ಧರಿಸಿಕೊಂಡು ಸಿಂಹಾಸನದಲ್ಲಿ ಮಂಡಿಸಿದ್ದನು. ಮತ್ತು ಪೀತಾಂಬರವನ್ನುಟ್ಟು, ಅಕ್ಕಪಕ್ಕದಲ್ಲಿ ಬೀಸುವ ಚಾಮರಗಳಿಂದ ಅಲಂಕೃತನಾಗಿ ಕಾಣುತ್ತಿದ್ದನು. ॥೨೬॥

ಆ ಸ್ವಾಮಿಯ ಕಿವಿಯಲ್ಲಿದ್ದ ರತ್ನಕುಂಡಲಗಳು, ಅಮೂಲ್ಯವಾದ ಸುವರ್ಣ ಮತ್ತು ವಜ್ರಗಳಿಂದ ನಿರ್ಮಿತವಾಗಿದ್ದುವು. ಮಹಾಮಹಾರತ್ನಗಳಿಂದ ವ್ಯಾಪೃತವಾಗಿರುವ ರತ್ನಹಾರವು ಸ್ವಾಮಿಯ ಕಂಠವನ್ನು ಅಲಂಕರಿಸಿದ್ದಿತು. ॥೨೭॥

ಹೀಗೆ ಶಕ್ತ್ಯಾಯುಧವನ್ನು ಹಿಡಿದು ಕುಳಿತಿದ್ದ ಆದಿಶಕ್ತಿಯ ಪುತ್ರನಾದ ಸ್ಕಂದನನ್ನು ಸಕಲ ಋಷಿಗಳೂ ಭಯಭಕ್ತಿಯಿಂದ ನೋಡಿದರು. ॥೨೮॥

ಅನಂತರ ಜೈಗೀಷವ್ಯನೇ ಮೊದಲಾದ ಮಹರ್ಷಿಗಳೆಲ್ಲರೂ, ಮಹಾನುಭಾವನಾದ ಕುಮಾರಸ್ವಾಮಿಗೆ ವಂದಿಸಿದರು. ಸ್ವಾಮಿಯಾದರೋ ಅವರಿಗೆ ಉಚಿತವಾದ ಆಸನಗಳನ್ನು ತೋರಿಸಿದನು. ಋಷಿಗಳು ಸಂತೋಷದಿಂದ ಅಲ್ಲಲ್ಲಿ ಕುಳಿತುಕೊಂಡರು. ॥೨೯॥

ಆಗ ಭಸ್ಮಲೇಪನದಿಂದ ಸಕಲ ದುರಿತಗಳನ್ನೂ ಕಳೆದುಕೊಂಡು ಶುದ್ಧರಾಗಿರುವ ಋಷಿಗಳ ಗುಂಪೊಂದು, ಆಕಾಶಮಾರ್ಗದಿಂದ ವಾಯುವೇಗವುಳ್ಳದ್ದಾಗಿ ಅಲ್ಲಿಗೆ

ಶರನ್ನಭಾಭಃ ಪರಿಪೂರ್ಣಚಂದ್ರಭಾ ।
ಸ್ಸಮಾಲುಲೋಕೇऽದ್ರಿತನೂಭವಾಭಂ ॥೩೦॥

ಜೈಗೀಷವ್ಯಮುಖಾಬ್ಜಲೋಕನಮಹಾನಂದಾಂಬುಧೇರ್ಮಧ್ಯಗ ।
ಸ್ಸ್ವಸ್ಯೈವಾಂತಿಕಮಾಗತಂ ಪುರಭಿದಾ ಸಂಪ್ರೇಷಿತಂ ಜ್ಞಾತವಾನ್ ।
ಪಾತ್ರಂ ವೀಕ್ಷ್ಯ ಮಹೇಶಮಿತ್ರಹೃದಯಗ್ರಂಥಾರ್ಥಸಂಬೋಧನೇ ।
ಹೃಷ್ಟಃ ಪುಷ್ಟತನುಃ ಪ್ರಕೃಷ್ಟವಚಸಾಮುದ್ಬೋಧಬೋಧೇ ಮುನಿಂ ॥೩೧॥

ಜೈಗೀಷವ್ಯಾಂಗಸಂಗಸ್ಫುಟಪುಲಕತತಿಶ್ಶೈವವರ್ಯಂ ಷಡಾಸ್ಯೋ ।
ನೇತ್ರೈರ್ವ್ಯಾಲೋಕ್ಯ ತುಷ್ಟೋ ಭಸಿತಧವಳಿತಸ್ವಾಂತಗಾತ್ರೋ
ಮುನೀಂದ್ರಂ ।
ಮೌನೇ ಮೇನಾತನೂಜಾತ್ಮಜವರವರಣೇ ಧಾರಣೇ ವೀತರಾಗಂ ॥೩೨॥
(?)

---

ಬಂದು ನೆರೆಯಿತು. ಶರತ್ಕಾಲದ ಮೇಘಗಳಂತೆ ಶುಭ್ರದೇಹವುಳ್ಳದ್ದಾಗಿ, ಚಂದ್ರನಂತೆ ಪ್ರಕಾಶಿಸುವ ಆ ಮುನಿವೃಂದವು ಪರಶಿವನ ಪುತ್ರನಾದ ಕುಮಾರಸ್ವಾಮಿಯ ತೇಜಸ್ಸನ್ನು ಕಣ್ಣುತುಂಬ ನೋಡಿ ಆನಂದಪಟ್ಟಿತು. ॥೩೦॥

ಕುಮಾರಸ್ವಾಮಿಯು ಜೈಗೀಷವ್ಯನೇ ಮೊದಲಾದ ಮಹರ್ಷಿಗಳ ಮುಖಕಮಲಗಳನ್ನು ನೋಡಿ ಬಹಳವಾಗಿ ಸಂತೋಷಪಟ್ಟನು. ಅಲ್ಲದೆ ತ್ರಿಪುರಾರಿಯಾದ ಶಂಕರನೇ ಇವರನ್ನು ತನ್ನ ಸಮೀಪಕ್ಕೆ ಕಳುಹಿಸಿರುವನೆಂಬುದನ್ನು ಮನಸ್ಸಿನಲ್ಲಿ ತಿಳಿದನು. ಮತ್ತು ಈ ಜೈಗೀಷವ್ಯಮಹಾಮುನಿಯು ಶಿವರಹಸ್ಯವೆಂಬ ಗ್ರಂಥದ ಅರ್ಥವನ್ನು ತಿಳಿಯಲು, ಮತ್ತು ಅದನ್ನು ಸಾಮಾನ್ಯರಿಗೆ ಉಪದೇಶಿಸಲು ಅರ್ಹನೆಂಬುದನ್ನೂ ಮನಸ್ಸಿನಲ್ಲಿ ಆಲೋಚಿಸಿ, ಷಣ್ಮುಖಸ್ವಾಮಿಯು ಸಂತೋಷದಿಂದ ಉಬ್ಬಿಹೋದನು. ॥೩೧॥

ಜೈಗೀಷವ್ಯಮುನಿಯು ಷಣ್ಮುಖನಿಗೆ ಎರಗಿದೊಡನೆಯೇ, ಆ ಮುನಿಯ ಅಂಗಸ್ಪರ್ಶದಿಂದ ಸ್ವಾಮಿಯ ದೇಹವೆಲ್ಲವೂ ಪುಲಕಿತವಾಯಿತು. ಅಷ್ಟು ಭಕ್ತಿಶ್ರದ್ಧೆಯುಳ್ಳ ಜೈಗೀಷವ್ಯನನ್ನು ಕೃಪಾಕಟಾಕ್ಷದಿಂದ ಸಂಪೂರ್ಣವಾಗಿ ನೋಡಿದನು. ಮತ್ತು ಆ ಋಷಿಯು ಯಾವ ವರವನ್ನೂ ಅಪೇಕ್ಷಿಸತಕ್ಕವನಲ್ಲವೆಂಬುದನ್ನೂ, ತನ್ನ ಉಪದೇಶಕ್ಕಾಗಿಯೇ ಕಾದಿರುವನೆಂಬುದನ್ನೂ ಮನಸ್ಸಿನಲ್ಲಿ ನಿರ್ಧರಿಸಿ, ಅಂತಹ

ಸ್ಕಂದ ಉವಾಚ ||

ತ್ವದಾಗಮನಸಂಭ್ರಮಾದ್ಭ್ರಮತತಿಃ ಪ್ರಣಷ್ಟಾ ಮಮ ।
ಶಿವೇನ ಕಥಿತಂ ಪುರಾ ಶಿವರಹಸ್ಯಧರ್ಮಾಭಿಧಂ ।
ಸಮುದ್ರಮಿವ ಸಿಂಧುಭಿಶ್ಶಿವಕಥಾಸುಧಾವಾರಿಧೌ ।
ಸಮುಲ್ಲಸತಿ ಮನ್ಮನಸ್ತದಪಿ ಬೋಧಹೇತುಸ್ತ್ವಯಿ ||೩೩||

ಪಚೇಲಿಮತಪಃಫಲೈರಮಿತಪುಣ್ಯಸಂಘಾರ್ಜಿತೈ ।
ರ್ಭವಾನಪಿ ಸಮಾಗತಸ್ತ್ರಿಪುರವೈರಿಸಂಪ್ರೇಷಿತಃ ।
ಮುನಿಷ್ವಪಿ ವಿಶೇಷತಸ್ತ್ವಯಿ ದಯಾ ಮಹೇಶಸ್ಯ ಯಾ
ನ ಕೋಪಿ ಭುವನೇಷು ವಾ ಪ್ರಮಥನಾಥಲಿಂಗಾರ್ಚಕಃ ||೩೪||

ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ಜೈಗೀಷವ್ಯಸ್ಕಂದಸಮಾಗಮೋ
ನಾಮ ಸಪ್ತಮೋಽಧ್ಯಾಯಃ

---

ದಿವ್ಯಮಹರ್ಷಿಯನ್ನು ಕುರಿತು ಸ್ಕಂದನು ಮುಂದೆ ಹೇಳುವಂತೆ ಕೆಲವು ಮಾತುಗಳನ್ನಾಡಿದನು. ||೩೨||

ಎಲೈ ಮಹರ್ಷಿಯೇ, ನಿನ್ನ ಆಗಮನ ಮಾತ್ರದಿಂದಲೇ ನನ್ನಲ್ಲಿದ್ದ ಅಜ್ಞಾನವು ನಾಶವಾಗಿರುವುದು. ನೀನು ಅಂತಹ ಜ್ಞಾನಿ. ನನಗೆ ಹಿಂದೆ ಸಾಕ್ಷಾತ್ಪರಮೇಶ್ವರನೇ ಶಿವರಹಸ್ಯವೆಂಬ ಧರ್ಮಾಮೃತವನ್ನು ಉಪದೇಶಿಸಿರುವನು. ನದಿಗಳು ಸಮುದ್ರವನ್ನು ನೋಡಿ ಆನಂದಿಸುವಂತೆ, ಆ ಶಿವಕಥಾಸಾಗರವನ್ನು ತಿಳಿದು ನನ್ನ ಮನಸ್ಸು ಉಲ್ಲಾಸಗೊಂಡಿದೆ. ಅಂತಹ ಜ್ಞಾನವಾರಿಧಿಯನ್ನು ನಿನಗೆ ಉಪದೇಶಿಸಬೇಕೆಂಬ ಆತುರವೂ ಈಗ ನನ್ನ ಮನಸ್ಸಿಗೆ ಉಂಟಾಗಿದೆ. ||೩೩||

ನೀನು ಮಹಾತಪಸ್ವಿಯು. ಆ ತಪಃಪ್ರಭಾವದಿಂದ ಅಸಂಖ್ಯಾತವಾದ ಪುಣ್ಯರಾಶಿಯನ್ನು ಸಂಪಾದಿಸಿದ್ದರಿಂದಲೇ ನಿನಗೆ ಪರಮೇಶ್ವರನು ಒಲಿದಿರುವನು. ಆ ಅನುಗ್ರಹವಶದಿಂದಲೇ ನೀನು ಈಗ ಇಲ್ಲಿಗೆ ಬಂದಿರುವೆ. ಎಲೈ ಮುನಿಯೇ, ಪರಶಿವನು ಎಲ್ಲಾ ಋಷಿಗಳಿಗಿಂತಲೂ ಹೆಚ್ಚಾದ ಪ್ರೀತಿಯನ್ನು ನಿನ್ನಲ್ಲಿಟ್ಟಿರುವನು. ಅವನ ಕೃಪೆಗೆ ಪಾತ್ರನಾಗಿರುವವನು ನೀನೊಬ್ಬನೇ ಹೊರತು ಮತ್ತಾರೂ ಇಲ್ಲ.

ಅಲ್ಲದೆ ಪ್ರಮಥಗಣಗಳಿಗೆ ಒಡೆಯನಾದ ಶಂಕರನನ್ನು ನಿನ್ನ ಹಾಗೆ ಭಕ್ತಿಯಿಂದಾರಾಧಿಸುವವರು ತ್ರಿಲೋಕಗಳಲ್ಲಿ ಯಾರಿರುವರು ? ಎಂದು ಕುಮಾರಸ್ವಾಮಿಯು ಜೈಗೀಷವ್ಯಮಹಾಮುನಿಯನ್ನು ಮನಃಪೂರ್ವಕವಾಗಿ ಹೊಗಳಿದನು. ||೩೪||

ಇಲ್ಲಿಗೆ ಶಿವರಹಸ್ಯದ ಪ್ರಥಮಾಂಶದಲ್ಲಿ ಜೈಗೀಷವ್ಯ ಮತ್ತು ಸ್ಕಂದಸ್ವಾಮಿಯ ಸಮಾಗಮನವನ್ನು ತಿಳಿಸುವ ಏಳನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

# ಅಥ ಶ್ರೀಶಿವರಹಸ್ಯೇ

## ಅಷ್ಟಮೋಽಧ್ಯಾಯಃ

### ಸ್ಕಂದದರ್ಶನಮ್

|| ಸೂತ ಉವಾಚ ||

**ಉಪೋಪವಿವಿಶುರ್ಹೃಷ್ಟಾಃ ಷಡಾನನವಿಲೋಕನಾತ್ ।**
**ಹೃಷ್ಟಾಸ್ತತಸ್ತೇ ಶೈವೇಂದ್ರಾ ಅಷ್ಟಮೂರ್ತಿಕೃಪಾಸ್ಪದಾಃ ||೧||**

**ಊಚುಃ ಪ್ರಾಂಜಲಯಸ್ಸರ್ವೇ ಜೈಗೀಷವ್ಯಪುರೋಗಮಾಃ ।**

|| ಮುನಯ ಊಚುಃ ||

**ಸ್ಕಂದ ತ್ರಿಪುರಸಂಹರ್ತೃತನೂಭವ ಸುಖಾಸ್ಪದ ||೨||**

**ಕ್ರೌಂಚೋನ್ಮಾಥ ಗಿರಿಶ್ರೇಷ್ಠ ಶೂರಾದೀನಾಂ ವಿದಾರಣ ।**
**ಶಿವಜ್ಞಾನಸುಧಾಂಬೋಧೇ ಸಶಕ್ತೇ ಚಾಖಿಲಾರ್ಥದ ||೩||**

---

## ಶ್ರೀಶಿವರಹಸ್ಯದಲ್ಲಿ ಎಂಟನೆಯ ಅಧ್ಯಾಯ

ಸೂತಮಹರ್ಷಿಗಳು ಶೌನಕಭಾರ್ಗವಾದಿಮಹರ್ಷಿಗಳಿಗೆ ಮುಂದಿನ ಕಥೆಯನ್ನು ವಿವರಿಸುತ್ತಾ ಹೀಗೆ ಹೇಳಿದರು.—"ಮುನಿಗಳೇ, ಜೈಗೀಷವ್ಯನೇ ಮೊದಲಾದ ಮಹರ್ಷಿಗಳು ಷಣ್ಮುಖಸ್ವಾಮಿಯನ್ನು ನೋಡಿ ಭಕ್ತಿಪರವಶರಾಗಿ ಆನಂದಾಬ್ಧಿಯಲ್ಲಿ ಮುಳುಗಿದವರಂತೆ ಸ್ವಲ್ಪ ಹೊತ್ತು ಸ್ವಾಮಿಯನ್ನೇ ನಿರೀಕ್ಷಿಸುತ್ತಾ ಕುಳಿತುಕೊಂಡರು. ಒಡನೆಯೇ ಎಲ್ಲ ಮಹರ್ಷಿಗಳೂ ಪರಮೇಶ್ವರನನ್ನು ಧ್ಯಾನಿಸುತ್ತಾ ಕುಮಾರಸ್ವಾಮಿಯ ಎದುರಿನಲ್ಲಿ ಅಂಜಲಿಬದ್ಧರಾಗಿ ಹೀಗೆ ಪ್ರಾರ್ಥನೆ ಮಾಡಿದರು. ||೧||

"ಸ್ಕಂದಸ್ವಾಮಿಯೇ, ನೀನು ತ್ರಿಪುರಾಸುರರನ್ನು ನಾಶಮಾಡಿದ ಪರಮೇಶ್ವರನ ಅಂಗಸಮುದ್ಭವನಲ್ಲವೇ? ಸಕಲ ಸೌಖ್ಯಗಳ ಪ್ರಾಪ್ತಿಗೂ ನೀನೇ ಮೂಲ

ಕುಮಾರ ಮಾರಸಂಕಾಶ ಪ್ರಸನ್ನ ಜನವತ್ಸಲ ।
ಶಿವಾಂಕಭೂತಪರ್ಯಂಕ ಸರ್ವಭೂತಹೃದಂತರ ॥೪॥

ವೀರಬಾಹುಮುಖಾನೇಕಗಣೋತ್ತಮನಿಷೇವಿತ ।
ಶಿಖಿವಾಹಾಮರೇಂದ್ರಾದಿಸೇನಾಪಾಲನ ಹೇ ಪ್ರಭೋ ॥೫॥

ಪ್ರಣವಾದಿಮಹಾಕಾವ್ಯಸಾರಾಸಾರವಿಚಾರಕ ।
ಭಕ್ತಹೃತ್ಪದ್ಮಸಂದೇಹತಮಸ್ತೋಮನಿವಾರಕ ॥೬॥

ಜ್ಞಾನೋದಯೋದ್ಯನ್ಮಾರ್ತಾಂಡಪ್ರಚಂಡತರವಿಕ್ರಮ ।
ತವ ಪಾದಾಂಬುಜದ್ವಂದ್ವವಿಲೋಕನಹತಾ ಶುಭಾಃ ॥೭॥

---

ಕಾರಣನಲ್ಲವೇ? ನಿನ್ನಿಂದಲೇ ಕ್ರೌಂಚಪರ್ವತವು ನಾಶವಾದದ್ದು. ಯಾವ ಶೂರರು ತಾನೇ ನಿನಗೆ ವಿರೋಧಿಗಳಾಗಿ ಬದುಕಿರುವರು? ಶಂಕರನ ಅರಿವೆಂಬ ಅಮೃತಕ್ಕೆ ನೀನು ಸಮುದ್ರನಂತಿರುವೆಯಲ್ಲಾ! ಸರ್ವಶಕ್ತಿಗಳೂ ನಿನ್ನನ್ನನುಸರಿಸಿವೆ. ಸಕಲ ಇಷ್ಟಾರ್ಥಗಳನ್ನೂ ಭಕ್ತರಿಗೆ ನೀನು ಒಡನೆಯೇ ಅನುಗ್ರಹಿಸುವೆ.॥೨-೩॥

ಕುಮಾರಸ್ವಾಮಿಯೇ, ನೀನು ಸೌಂದರ್ಯದಲ್ಲಿ ಕಾಮಸದೃಶನು. ಭಕ್ತರನ್ನು ವಾತ್ಸಲ್ಯದಿಂದ ರಕ್ಷಿಸುವವನು. ಶಿವೆಯ ತೊಡೆಯೇ ನಿನಗೆ ಮಂಚದಂತಿರುವುದು. ಸರ್ವರ ಹೃದಯದಲ್ಲಿಯೂ ಅಡಗಿರುವವನು ನೀನೇ. ॥೪॥

ನಿನ್ನ ಗಣಗಳಲ್ಲಿ ವೀರಬಾಹುವೇ ಮೊದಲಾದ ಶೂರರು ಸೇರಿ ಅವರು ಸರ್ವದಾ ನಿನ್ನನ್ನೇ ಸೇವಿಸುತ್ತಿರುವರು. ನವಿಲಿನ ಮೇಲೆ ಕುಳಿತು ನೀನು ಇಂದ್ರನೇ ಮೊದಲಾದ ಸಕಲ ದೇವಸಮೂಹವನ್ನೆಲ್ಲಾ ಪರಿಪಾಲಿಸುತ್ತಿರುವೆ. ॥೫॥

ಪ್ರಭುವೇ, ಲೋಕದಲ್ಲಿ ಪ್ರಣವವೇ ಮೊದಲಾದ ಎಷ್ಟು ಮಹಾಮಂತ್ರಗಳಿವೆಯೋ, ಅವುಗಳೆಲ್ಲದರ ಸಾರಾಸಾರವನ್ನು ವಿಮರ್ಶೆಮಾಡಿರುವವನು ನೀನೊಬ್ಬನೇ. ಭಕ್ತರಿಗೆ ಒದಗಿರುವ ಸಂದೇಹಗಳೆಂಬ ಅಜ್ಞಾನ ರಾಶಿಯನ್ನು ನಿವಾರಿಸಲು ನೀನಲ್ಲದೆ ಮತ್ತಾರು ಸಮರ್ಥರು? ॥೬॥

ಉದಯಕಾಲದ ಸೂರ್ಯನಂತೆ ನೀನು ಜ್ಞಾನಪ್ರಸಾರಣೆಯಲ್ಲಿ ತೇಜಸ್ವಿಯಾಗಿ ಮೆರೆಯುವೆ. ನಿನ್ನ ಪರಾಕ್ರಮವಾದರೋ ಅತ್ಯಂತ ಉಗ್ರವಾಗಿದೆ. ನಿನ್ನ ಪಾದಕಮಲದ ದರ್ಶನದಿಂದಲೇ ಈಗ ನಮ್ಮ ಪಾಪಕರ್ಮಗಳೆಲ್ಲಾ ನಾಶವಾಗಿವೆ. ॥೭॥

ಜೈಗೀಷವ್ಯಸ್ಯ ತಪಸಾ ದೃಷ್ಟೋಽಸ್ಮಾಭಿರ್ಮಹೇಶ್ವರಃ ।
ತೇನಾಜ್ಞಪ್ತಾ ವಯಂ ಸರ್ವೇ ಜೈಗೀಷವ್ಯಪುರಸ್ಸರಾಃ ॥೮॥

ತ್ವದ್ವಾಕ್ಪಂಕಜನಿಷ್ಯಂದಮಕರಂದಮಧುವ್ರತಾಃ ।
ಪಾತುಂ ಶಿವರಹಸ್ಯಾಖ್ಯಮಮೃತಂ ಭವನಾಶಕಂ ॥೯॥

ಪ್ರಯಾತಾಃ ಪುಣ್ಯಭಾರೇಣ ತವ ಸನ್ನಿಧಿಮುತ್ಕಟಾಃ ।
ಸಂತಪ್ತಾನ್ ಭವದಾವಾಗ್ನಿಮಧ್ಯಸ್ಥಾನಧುನಾ ಮುನೀನ್ ॥೧೦॥

ಸುಧಾಶೀಕರಯಾ ದೃಷ್ಟ್ಯಾ ಶೀತಯಾಶು ಪ್ರಸೀದ ನಃ ।
ಇತ್ಥಂ ಮುನೀನಾಂ ವಚನಂ ಶ್ರುತ್ವಾ ಸ್ಕಂದೋ ಹರಾತ್ಮಜಃ ॥೧೧॥
ಪ್ರಸನ್ನಚೇತಾಸ್ತಾನಾಹ ಶಾಂಭವಾನ್ ಹರನಂದನಃ ।

---

ಕುಮಾರಸ್ವಾಮಿಯೇ, ಜೈಗೀಷವ್ಯ ಮಹಾಮುನಿಯು ಮಾಡಿದ ತಪಃ ಫಲವಾಗಿ ನಮಗೆಲ್ಲರಿಗೂ ಪರಶಿವನ ದರ್ಶನವಾಯಿತು. ಪರಶಿವನ ಅಪ್ಪಣೆಯನ್ನು ಪಡೆದೇ ಜೈಗೀಷವ್ಯಮುನಿಯೊಡನೆ ನಾವು ಇಲ್ಲಿಗೆ ನಿನ್ನ ದರ್ಶನಾರ್ಥವಾಗಿ ಬಂದಿರುವೆವು. ॥೮॥

ನಿನ್ನ ವಾಕ್ಕೆಂಬ ಕಮಲಗಳ ಮಕರಂದವನ್ನು ಭ್ರಮರಗಳಂತೆ ಪಾನ ಮಾಡಲು ಇಲ್ಲಿಗೆ ಬಂದಿರುವೆವು. ನಿನ್ನ ಉಪದೇಶದಿಂದ ಪಡೆದ ಶಿವರಹಸ್ಯವೆಂಬ ಭವನಾಶಕವಾದ ಅಮೃತಪಾನದಲ್ಲಿ ನಮ್ಮ ಮನಸ್ಸು ಹಾತೊರೆಯುತ್ತಿದೆ. ॥೯॥

ನಮ್ಮ ಪುಣ್ಯವಿಶೇಷದಿಂದ ನಿಮ್ಮ ಸನ್ನಿಧಿಯು ನಮಗೆ ದೊರತಿದೆ. ಜನನ ಮರಣಗಳೆಂಬ ದಾವಾಗ್ನಿಯ ಮಧ್ಯದಲ್ಲಿ ಸಿಕ್ಕಿ ಋಷಿಗಳಾದ ನಾವೆಲ್ಲರೂ ಬೆಂದು ಹೋಗಿದ್ದೇವೆ. ॥೧೦॥

ಅಂತಹ ನಮ್ಮನ್ನು ಅಮೃತಸೇಚನಮಾಡುವ ದೃಷ್ಟಿಯಿಂದ ಶಾಂತಮನಸ್ಕರನ್ನಾಗಿ ಮಾಡು" ಎಂದು ಬಗೆಬಗೆಯಾಗಿ ಪ್ರಾರ್ಥಿಸಿಕೊಂಡ ಮುನಿಗಳ ಪ್ರಾರ್ಥನೆಯನ್ನು ಮಹೇಶ್ವರಪುತ್ರನೂ, ಶಿವತತ್ತ್ವಜ್ಞನೂ ಆದ ಕುಮಾರಸ್ವಾಮಿಯು ಲಾಲಿಸಿ ಪ್ರಸನ್ನಚಿತ್ತನಾಗಿ ಹೀಗೆ ಹೇಳಲಾರಂಭಿಸಿದನು. ॥೧೧॥

|| ಸ್ಕಂದ ಉವಾಚ ||

ಜೈಗೀಷವ್ಯಮುಖಾ ಯೂಯಂ ಮುನಯೋ ಭಾವಸತ್ತಮಾಃ ।
ಭವಭಾವೈಕಸಂಪನ್ನಾ ಭಕ್ತಾಸ್ಸರ್ವೇ ಮಹೇಶ್ವರೇ ||೧೨||

ಭವತಾಂ ದರ್ಶನೇನೈವ ಭಾವನಾನಂದಿತಂ ಮಮ ।
ಮನಸಃ ಪದ್ಮಮುತ್ಫುಲ್ಲಂ ಮುನೇಶ್ಶ್ರುತ್ವಾ ತಪಃಕ್ರಿಯಾಂ ||೧೩||

ಪ್ರಸಾದೋಪಿ ಮಹಾದೇವಾಜ್ಜೈಗೀಷವ್ಯಸ್ಯ ಸತ್ತಮ ।
ಶಿವಾಜ್ಞಯಾ ಸಮಾಯಾತೋ ಜೈಗೀಷವ್ಯೋ ಮಹಾಮುನಿಃ ||೧೪||

ಭವದ್ಭಿಶ್ಶಾಂಭವೈಸ್ಸಾರ್ಥಂ ಮಯಾ ಜ್ಞಾತಂ ಹೃದೈವ ಹಿ ।
ಪಾತ್ರಭೂತಾ ಭವಂತೋ ಹಿ ತ್ರಿಣೇ(ನೇ)ತ್ರಪದಪೂಜಕಾಃ ||೧೫||

ಯದ್ಗೋಪ್ಯಮಪಿ ತದ್ವಕ್ಷ್ಯೇ ರಹಸ್ಯಂ ಶಿವಹೃದ್ಗತಂ ।
ಶಿವಾಂಕಸಂಸ್ಥೇನ ಮಯಾ ಶ್ರುತಮೇತತ್ಪುರಾತನಂ ||೧೬||

---

"ಎಲೈ ಜೈಗೀಷವ್ಯಾದಿ ಮಹಾಮುನಿಗಳೇ, ನೀವೆಲ್ಲರೂ ದೃಢಪ್ರಜ್ಞರು. ಈಶ್ವರನನ್ನು ಏಕಮನಸ್ಸಿನಿಂದ ಧ್ಯಾನಿಸಿ ಮಹೇಶ್ವರಭಕ್ತರೆನಿಸಿಕೊಂಡಿರುವಿರಿ.||೧೨||

ನಿಮ್ಮನ್ನು ನೋಡಿದ್ದರಿಂದ ನನ್ನ ಮನಸ್ಸು ಆನಂದದಲ್ಲಿ ಮುಳುಗಿದೆ. ಜೈಗೀಷವ್ಯಮಹಾಮುನಿಯು ಮಾಡಿದ ತಪಶ್ಚರ್ಯೆಯನ್ನು ಕೇಳಿ ನನಗೆ ಮನೋವಿಕಾಸವುಂಟಾಗಿದೆ. ||೧೩||

ಮಹೇಶ್ವರನ ಅನುಗ್ರಹದಿಂದಲೇ ಜೈಗೀಷವ್ಯ ಮುನಿಯು ಶ್ರೇಷ್ಠನೆನಿಸಿರುವನು. ಆದರೂ ಶಿವನ ಅಪ್ಪಣೆಯನ್ನು ಪಾಲಿಸಲೋಸುಗ ಇಲ್ಲಿಗೆ ಬಂದಿರುವನು. ||೧೪||

ಶಂಭುಸೇವಕರಾದ ನಿಮ್ಮೆಲ್ಲರ ಮನಸ್ಸನ್ನು ನಾನು ಚೆನ್ನಾಗಿ ಅರಿತಿರುವೆನು. ನೀವು ನಿಜವಾಗಿಯೂ ಉಪದೇಶಕ್ಕೆ ಯೋಗ್ಯರೆನಿಸಿದವರು. ಈಶ್ವರಪಾದಸೇವಕರು. ||೧೫||

ಈಗ ಶಿವರಹಸ್ಯವು ಬಹಳ ಗೋಪ್ಯವಾದ ವಿಷಯವಾದರೂ, ನಿಮಗೆ ಅದನ್ನು ನಾನು ಉಪದೇಶಿಸುವೆನು. ಈ ರಹಸ್ಯವನ್ನು ನಾನು ಪರಮೇಶ್ವರಿಯ ತೊಡೆಯಮೇಲೆ ಕುಳಿತುಕೊಂಡು ತಿಳಿದಿರುವೆನು. ||೧೬||

ದ್ವಾದಶಾಂಶಸಮಾಯುಕ್ತಂ ದೇವ್ಯೈ ದೇವೇನ ದರ್ಶಿತಂ ।
ಪುಣ್ಯಂ ಪಾಪಹರಂ ಚೈತತ್ಸರ್ವಶ್ರುತಿಶಿರೋಗತಂ ॥೧೭॥

ಭವಾನ್ಯೈ ಚ ಭವೇನೈವ ಕಥಿತಂ ಭವನಾಶನಂ ।
ಕಥಾನಕಂ ಶ್ರುತಿಶಿರಃ ಪ್ರಣವಾರ್ಥಂ ಮಹಾಘಭಿತ್ ॥೧೮॥

ಜೈಗೀಷವ್ಯಾಗ್ರಗಾ ಯೂಯಂ ಶೃಣ್ವಂತು ಪರಮಾರ್ಥತಃ ।
ಧರ್ಮಕಾಮಾರ್ಥಮೋಕ್ಷಾಣಾಂ ಸಾರಭೂತಮಿದಂ ಶುಭಂ ॥೧೯॥

ಶ್ರುತ್ವೇದಂ ಹಿ ಕಥಾರತ್ನಂ ಶಂಕರಸ್ಯ ಪರಾತ್ಮನಃ ।
ಶ್ರೋತುಮನ್ಯನ್ನ ರೋಚೇತ ಯಥಾನ್ಯಾಃ ಪ್ರಾಕೃತಾಃ ಕಥಾಃ ॥೨೦॥

ಸೃಷ್ಟಿಸ್ಥಿತ್ಯಂತಕಥನೈರ್ನೃಪಾಣಾಂ ಚರಿತಾಶ್ರಯೈಃ ।
ವರ್ಣಾಶ್ರಮೈಕಕಥನಶ್ರಮಭಾರೈಃ ಕಥಾನಕೈಃ ॥೨೧॥

---

ಶಿವರಹಸ್ಯವು ಹನ್ನೆರಡು ಅಂಶಗಳುಳ್ಳದ್ದು. ಇದನ್ನು ಪರಮೇಶ್ವರನೇ ಸಾಕ್ಷಾತ್ಪಾರ್ವತೀದೇವಿಗೆ ಪ್ರೀತಿಯಿಂದ ಉಪದೇಶಿಸಿದನು. ಇದನ್ನು ಕೇಳುವವರ ಸಮಸ್ತ ಪಾಪಗಳೂ ನಿವಾರಣೆಯಾಗಿ ಅವರಿಗೆ ಹೆಚ್ಚಾದ ಸುಕೃತವೂ ಲಭಿಸುವುದು. ॥೧೭॥

ಭವಾನೀದೇವಿಗೆ ಸಾಕ್ಷಾದ್ಭವನೇ ಈ ಶಿವರಹಸ್ಯವನ್ನು ಉಪದೇಶಿಸಿರುವುದರಿಂದ ಭವದುಃಖವು ನಿವಾರಣೆಯಾಗುವುದರಲ್ಲಿ ಅಡ್ಡಿಯೇನು? ಅಷ್ಟೇ ಅಲ್ಲ. ಇದು ವೇದಕ್ಕೆ ಶಿರಃಪ್ರಾಯವಾದದ್ದು. ಶಿರೋರತ್ನದಂತಿರುವ ಪ್ರಣವಾರ್ಥವೇ ಈ ಶಿವರಹಸ್ಯ. ಸಮಸ್ತ ಪಾಪರಾಶಿಯನ್ನೂ ನಿವಾರಣೆಮಾಡತಕ್ಕ ಕಥಾವಸ್ತುವೇ ಇದು. ॥೧೮॥

ಜೈಗೀಷವ್ಯಾದಿ ಮಹಾಮುನಿಗಳೇ, ಕೇಳಿರಿ. ನಿಶ್ಚಯವಾಗಿಯೂ ಈ ಶಿವರಹಸ್ಯವು ಧರ್ಮ, ಕಾಮ, ಅರ್ಥ, ಮೋಕ್ಷಗಳೆಂಬ ಚತುರ್ವಿಧಪುರುಷಾರ್ಥಗಳ ಸಾರವನ್ನು ಹೊಂದಿರತಕ್ಕದ್ದು. ॥೧೯॥

ಈ ಶಿವರಹಸ್ಯಾತ್ಮಕವಾದ ಕಥೆಗಳನ್ನು ಒಂದಾವರ್ತಿ ಕೇಳಿದವರು ಮತ್ತಾವ ಹಿಂದಿನ ಕಥೆಗಳನ್ನೂ ಕೇಳಲು ಇಷ್ಟಪಡುವುದಿಲ್ಲ. ॥೨೦॥

ಇದರಲ್ಲಿ ಸೃಷ್ಟಿ, ಸ್ಥಿತಿ, ಲಯ ಇವುಗಳ ವಿವರಣೆ, ರಾಜರ ಅನೇಕ ಚರಿತೆಗಳು, ವರ್ಣಾಶ್ರಮಧರ್ಮಗಳು, ಅದಕ್ಕೆ ಸಂಬಂಧಿಸಿದ ನಾನಾವಿಧವಾದ ಕಥೆಗಳು ಇವೆಲ್ಲವೂ ವಿಸ್ತೃತವಾಗಿವೆ. ॥೨೧॥

ಧರ್ಮಾಭಾಸಕಥಾಭಿಃ ಕಿಂ ಯಥಾ ಶಂಭೋಃ ಕಥಾರಸಂ ।
ಕಿಮಂಧಕೂಪಮಧ್ಯಸ್ಥಸ್ತಮಸಾ ಪರಿವೇಷ್ಟಿತಃ ॥೨೨॥

ಅನ್ಯಾನಂಧಾನ್ ಪೂರಯೇತ ತಥಾ ವಾನ್ಯಕಥಾ ಮುನೇ ।
ಪುರಾಣೇಷು ಪ್ರಕಥಿತೈಃ ಕಿಂತು ಚರ್ವಿತಚರ್ವಣೈಃ ॥೨೩॥

ಜನ್ಮಮೃತ್ಯುಯುತಾನಾಂ ಚ ಸುರಾಣಾಂ ಮುನಿಪುಂಗವಾಃ ।
ಕಥಾಃ ಕಥಂ ತಾರಯಂತಿ ಜನ್ಮಮೃತ್ಯುಜರಾಯುತಾನ್ ॥೨೪॥

ಶ್ರೀಮನ್ಮೃತ್ಯುಂಜಯಸ್ಯೈವ ಕಥಾ ಮೃತ್ಯುವಿವರ್ಜಿತಾನ್ ।
ಕರೋತಿ ಜಗತಾಂ ವಿಪ್ರಾಶ್ಶೈವಾಶ್ಶಿವರಹಸ್ಯಗಾಃ ॥೨೫॥

ಸುಧಾಸಾಗರಮಧ್ಯಸ್ಥಃ ಕಿಂ ನು ಕೂಪೋದಕಂ ಪಿಬೇತ್ ।
ಕ್ವಣದ್ವೀಣಾದಿನಿನದಂ ಶ್ರುತ್ವಾ ಕಾಕರವಂ ಯಥಾ ॥೨೬॥

---

ಧರ್ಮವಿರುದ್ಧವಾಗಿ ತೋರಿಬರುವ ಮಿಕ್ಕ ಯಾವ ಕಥೆಗಳಿಂದಲೂ ಏನೂ ಪ್ರಯೋಜನವಿಲ್ಲ. ಕತ್ತಲೆಯಿಂದ ತುಂಬಿದ ಬಾವಿಯ ಮಧ್ಯದಲ್ಲಿರುವವನಿಗೆ ತಿಳಿಯುವ ವಿಚಾರವೇನು ? ॥೨೨॥

ಅಂತಹ ಅಜ್ಞಾನಪ್ರತಿಪಾದಕವಾದ ಕಥೆಗಳನ್ನು ಕೇಳಿದವನು, ಅದನ್ನು ಇತರರಿಗೆ ಹೇಳಿ ಅವರನ್ನೂ ಅಜ್ಞಾನಿಗಳನ್ನಾಗಿ ಮಾಡುವನು. ಅಷ್ಟಲ್ಲದೆ ಹೇಳಿದ್ದನ್ನೇ ಪುನಃ ಪುನಃ ಹೇಳತಕ್ಕ ಪುರಾಣದ ಕಥೆಗಳೂ ಅಷ್ಟು ಜ್ಞಾನದಾಯಕಗಳಲ್ಲ. ॥೨೩॥

ದೇವತೆಗಳೂ ಕಾಲಾಂತರದಲ್ಲಿ ಜನನಮರಣಗಳ ಬಾಧೆಗೆ ಸಿಕ್ಕತಕ್ಕವರೇ. ಅಂತಹವರ ಕಥೆಗಳು ಹೇಗೆತಾನೆ ಜನನಮರಣಗಳ ಭಯವನ್ನು ಹೋಗಲಾಡಿಸುವುವು ? ॥೨೪॥

ಆದ್ದರಿಂದ ನಿಜವಾಗಿಯೂ ಜೀವಿಗಳು ಮೃತ್ಯುವಿವರ್ಜಿತರಾಗಬೇಕಾದರೆ ಮೃತ್ಯುಂಜಯನಾದ ಪರಮೇಶ್ವರನ ಕಥೆಗಳನ್ನೇ ಕೇಳಬೇಕು. ಅವುಗಳನ್ನು ತಾತ್ತ್ವಿಕವಾಗಿ ತಿಳಿಯಲು ಮೊದಲು ಶಿವರಹಸ್ಯವನ್ನು ಅರಿಯಬೇಕು. ॥೨೫॥

ಅಮೃತಸಮುದ್ರದ ಮಧ್ಯದಲ್ಲಿ ವಾಸಿಸುವನು ಬಾಯಾರಿದಾಗ ಬೇರೆ ಬಾವಿಗಳ ನೀರನ್ನು ಕುಡಿದಾನೇ ? ವೀಣಾಧ್ವನಿಯಿಂದ ಆನಂದಪಡುತ್ತಿರುವವನಿಗೆ ಕಾಗೆಯ ಕರ್ಕಶಧ್ವನಿಯು ಹಿತಕೊಟ್ಟೀತೆ ? ॥೨೬॥

**ಯಥಾ ರತ್ನಾಕರಂ ಪ್ರಾಪ್ಯ ಕಾಚಖಂಡಮುಪೇಕ್ಷತೇ ।**
**ಯಥಾ ಮತ್ತೇಭಸದೃಶಃ ಕಿಂ ಮಲಾಶನಕೃತ್ಕಿಟಿಃ ॥೨೭॥**

**ಯಥಾ ಮೃಗೇಂದ್ರಸದೃಶೋ ವಾನರಃ ಕಿಂ ದ್ವಿಜೋತ್ತಮಾಃ ।**
**ತಥಾ ಚಾನ್ಯಕಥಾಸಕ್ತಾಸ್ತ್ಯಕ್ತ್ವಾ ಶಿವಕಥಾರಸಂ ॥೨೮॥**

**ಯಥಾ ಶಿವೋ ಮಹಾದೇವಸ್ಸರ್ವವೇದಾಂತಸಂಸ್ತುತಃ ।**
**ತಥಾ ಶಿವರಹಸ್ಯಾಖ್ಯಮಿತಿಹಾಸವರಂ ಮುನೇ ॥೨೯॥**

**ಶಿವಕಂಠಮಣಿಶ್ಚಾಯಂ ಪಾಪಮೋಚಕಮೋಚಕಃ ।**
**ಪುರಾ ಕೈಲಾಸಶಿಖರೇ ದೇವ್ಯೈ ದೇವೇನ ಕೀರ್ತಿತಂ ॥೩೦॥**

**ಪ್ರಾಹ ದೇವಂ ವಿರೂಪಾಕ್ಷಮಂಬಿಕಾ ಪರಮೇಶ್ವರೀ ॥೩೧॥**

---

ರತ್ನಗಳ ಗಣಿಯನ್ನು ಹೊಂದಿ ಗಾಜನ್ನು ತರಬಯಸುವನೇ ? ಮಲವನ್ನು ತಿಂದು ಬದುಕುವ ಹಂದಿಯು ಎಂದಾದರೂ ಮದ್ದಾನೆಗೆ ಸಮನಾದೀತೇ ? ॥೨೭॥

ಕೋತಿಯು ಯಾವರೀತಿಯಿಂದಾದರೂ ಸಿಂಹಕ್ಕೆ ಸಮನೆನಿಸಿಕೊಳ್ಳುವುದೇ ? ಹಾಗೆ ಉಳಿದ ಯಾವ ದೇವತೆಗಳ ಇತಿಹಾಸಗಳಾದರೂ ಶಿವಕಥಾರಸವನ್ನು ಭಕ್ತರಿಗೆ ಕೊಡಬಲ್ಲವೆ? ಹಾಗೆ ಅನ್ಯಕಥಾಸಕ್ತರಾದವರು ಮೇಲೆ ಹೇಳಿದವರಂತೆ ವ್ಯರ್ಥವಾದ ಮಾರ್ಗದಲ್ಲಿ ಹೋಗುವವರಾಗುವರು. ॥೨೮॥

ಎಲೈ ಮುನಿಯೇ, ಹೇಗೆ ಪರಮೇಶ್ವರನು ಸರ್ವ ವೇದಾಂತಗಳಲ್ಲಿ ಸ್ತುತ್ಯನೆನಿಸಿಕೊಂಡಿರುವನೋ, ಹಾಗೆಯೇ ಈ ಶಿವರಹಸ್ಯವೂ ಇತಿಹಾಸಗಳಲ್ಲೆಲ್ಲಾ ಶ್ರೇಷ್ಠತಮವೆನಿಸಿಕೊಂಡಿದೆ. ॥೨೯॥

ಈ ಶಿವರಹಸ್ಯವು ಪರಮೇಶ್ವರನ ಗ್ರೀವಾಭರಣದಲ್ಲಿರುವ ರತ್ನದಂತಿರುವುದು. ಅಂದರೆ ಸಾಕ್ಷಾತ್ಪರಮೇಶ್ವರನಿಂದಲೇ ಉಕ್ತವಾಗಿರುವುದರಿಂದ ಅಮೂಲ್ಯವಾದದ್ದು. ಸಮಸ್ತ ಪಾಪನಿವಾರಕವಾದದ್ದು. ಹಿಂದೆ ಒಂದುಸಾರಿ ಕೈಲಾಸಪರ್ವತದಲ್ಲಿ ಸಂತೋಷದಿಂದ ಕುಳಿತಿದ್ದ ಪರಶಿವನನ್ನು ನೋಡಿ, ಪಾರ್ವತಿಯು ಈ ರೀತಿಯಾಗಿ ಕೇಳಿಕೊಂಡಳು. ॥೩೦-೩೧॥

॥ ಶ್ರೀ ದೇವ್ಯುವಾಚ ॥

ಶಂಭೋ ವಿಶ್ವೇಶ ಭರ್ಗ ತ್ರಿನಯನ ಪುರಹನ್ ।
ಕಾಲಕಾಲಾಂಧಕಾರೇ ।
ಪಾಪಾರೇ ಫಾಲನೇತ್ರ ಸ್ಮರಹರ ಗರಪ ।
ತ್ರಾಹಿ ದೇವಾನ್ ದ್ವಿಜಾಂಶ್ಚ ॥೩೨॥

ಕಥಯ ತವ ರಹಸ್ಯಂ ಯೇನ ಮುಕ್ತಾ ತ್ರಿಲೋಕೀ ।
ನಿಗಮಶಿರಸಿನಿಷ್ಠಾ ಕಾ ಗರಿಷ್ಠಾ ವದಾದ್ಯ ।
ಯದಿ ತವ ಕರುಣಾಬ್ಧೇ ಶೀಕರಾಸಾರಪಾತ್ರಂ ।
ಮಮ ಶ್ರುತಿವರಪಾತ್ರಂ ತ್ವಂ ಕೃತಾರ್ಥೀಕುರುಷ್ವ ।
ತವ ಚರಿತಮಶೇಷಂ ಲೋಕದುಃಖಾಪನುತ್ತ್ಯೈ
ಪುರಹರ ಕುರು ಕರ್ಣೇ ಮಾಮಕೀನೇ ದಯಸ್ವ ॥೩೩॥

---

" ಓಂ ಶಂಭುವೇ, ಲೋಕರಕ್ಷಕನೇ, ಜ್ಞಾನಪ್ರದಾಯಕನೇ, ಮುಕ್ಕಣ್ಣನೇ, ಈ ದೇವತೆಗಳನ್ನೂ ದ್ವಿಜರನ್ನೂ ರಕ್ಷಿಸು. ನೀನು ಯಮನನ್ನೂ, ಅಂಧಕಾಸುರನನ್ನು ಮೆಟ್ಟಿ ನಾಶಮಾಡಿದವನಲ್ಲವೇ? ನಿನ್ನ ಸ್ಮರಣೆಯಿಂದ ಸಕಲ ಪಾಪಗಳೂ ನಿವಾರಣೆಯಾಗುವುವಲ್ಲವೇ? ಸ್ಮರಾರಿಯೇ, ವಿಷಕಂಠನೇ ನೀನು ಮಹಾಮಹಿಮನಾಗಿರುವೆ. ॥೩೨॥

ಎಲೈ ದಯಾಸಾಗರನೇ, ಯಾವ ಒಂದು ನಿನ್ನ ರಹಸ್ಯವು ತ್ರಿಲೋಕದ ಜನರಿಗೆಲ್ಲಾ ಒಟ್ಟಾಗಿ ಮುಕ್ತಿಕೊಡಿಸಲು ಸಮರ್ಥವಾಗಿರುವುದೋ, ಅಂತಹ ಶಿವರಹಸ್ಯವನ್ನು ನನಗೆ ಹೇಳು. ಅದಕ್ಕಿಂತ ಉತ್ತಮವೆನಿಸಿಕೊಂಡಿರುವ ತತ್ತ್ವವೊಂದು ಮತ್ತಾವುದಿದೆ? ನನ್ನ ಕರ್ಣಪುಟವನ್ನು ನಿನ್ನ ರಹಸ್ಯವಾಣಿಯೆಂಬ ಅಮೃತಕ್ಕೆ ಪಾತ್ರವನ್ನಾಗಿ ಮಾಡಿದರೆ ಆಗ ನನ್ನ ಜೀವನವೆಲ್ಲಾ ಧನ್ಯವಾದದ್ದಾಗುವುದಲ್ಲವೇ? ನಿನ್ನ ಪ್ರತಿಯೊಂದು ಚರಿತೆಯೂ ಜನರ ಸಕಲ ದುಃಖಗಳನ್ನೂ ನಾಶಪಡಿಸುವುದಾಗಿದೆ. ಅಂತಹ ಮುಕ್ತಿಪ್ರದವೂ ಸಕಲ ಲೋಕೋದ್ಧಾರಕವೂ ಆದ ಶಿವರಹಸ್ಯವನ್ನು ನನಗೆ ಈಗ ಉಪದೇಶಿಸು. ॥೩೩॥

**ಸುಗೋಪ್ಯಮಪಿ ಶಂಕರ ಪ್ರಮಥನಾಥ ವಿಶ್ವಾಧಿಕೇ ।**
**ನಿಧೇಹಿ ಮಯಿ ತತ್ಸ್ಥಿರಂ ಚಿರಮಪಿ ಪ್ರರೂಢಂ ತ್ವಯಿ ।**
**ತ್ವದೀಯದಯಯಾ ಪರಂ ಪ್ರಕಟಿತಾಂತರಂಗಂ ಮಮ ।**
**ತ್ವದೀಯಚರಣಾಂಬುಜೇ ಸಕಲಭಕ್ತಿಭಾವೈರ್ಯುತಾ ॥೩೪॥**

**ಇತಿ ದೇವ್ಯಾ ವಚಶ್ಶ್ರುತ್ವಾ ಪ್ರಾಹ ಕಾಮಪ್ರಭಂಜನಃ ।**
**ಸ್ವಾಂಕಸಂಸ್ಥಾಂ ಮಹಾದೇವೀಂ ತದಂಕಸ್ಥೇನ ಯತ್ಪುರಾ ॥೩೫॥**

**ಮಯಾಶ್ರಾವಿ ಕಥಾಸಿಂಧುರಹಸ್ಯಂ ತದ್ಬ್ರುವೇಽಧುನಾ ।**
**ಭವಾನಾಂ ಭವನಾಶಾಯ ಭವಭಕ್ತಿವಿವರ್ಧನಂ ॥೩೬॥**

॥ ಈಶ್ವರ ಉವಾಚ ॥

**ನಾದೇಯಂ ತವ ವಿದ್ಯತೇ ತ್ರಿಭುವನೇ ಶೈಲೇಂದ್ರಜೇ ಕೇವಲಂ ।**
**ದೇಹಾರ್ಧೇಽಧಿಕೃತಾಸಿ ವಿಶ್ವಜನನೀ ನೀರೂಪರೂಪಸ್ತ್ವಯಾ ।**

---

ಪರಮೇಶ್ವರನೇ, ಶಿವರಹಸ್ಯವು ನಿಜವಾಗಿಯೂ ರಹಸ್ಯವಾದದ್ದೇ. ಆ ರಹಸ್ಯವು ನಿನ್ನಲ್ಲಿ ಹೊರತು ಮತ್ತಾರಲ್ಲೂ ಇಷ್ಟರವುಟ್ಟಿಗೆ ಪ್ರರೂಢವಾಗಿ ನಿಂತಿಲ್ಲ. ಆದರೂ ನನ್ನ ಮೇಲಿನ ಕರುಣೆಯಿಂದ, ನನ್ನ ಮನಸ್ಸಿಗೆ ಬರುವಂತೆ ಅದನ್ನು ಉಪದೇಶಿಸು. ನನ್ನ ಮನಸ್ಸಿನ ಸ್ವಭಾವವಾದರೋ ನಿನಗೆ ತಿಳಿಯದೆ ಇಲ್ಲ. ಅಂತಹ ನನ್ನ ಮನಸ್ಸು ಭಕ್ತಿಭಾವದಿಂದ ಕೂಡಿ ಸರ್ವದಾ ನಿನ್ನ ಪಾದಕಮಲದಲ್ಲಿಯೇ ನೆಲಸಿರುವಂತೆ ಅನುಗ್ರಹಿಸು.” ॥೩೪॥

ಹೀಗೆ ಪಾರ್ವತಿಯು ಪ್ರಾರ್ಥಿಸಿ ಕೇಳಿಕೊಂಡಮೇಲೆ ಶಂಕರನು ತನ್ನ ತೊಡೆಯಮೇಲೆಯೇ ಕುಳಿತಿದ್ದ ದೇವಿಗೆ ಶಿವರಹಸ್ಯವನ್ನೆಲ್ಲಾ ವಿವರಿಸಿದನು. ಎಲೈ ಜೈಗೀಷವ್ಯಾದಿ ಮುನಿಗಳೇ, ಹಾಗೆ ಶಿವನು ದೇವಿಗೆ ಉಪದೇಶಿಸುವಾಗ ನಾನು ದೇವಿಯ ತೊಡೆಯಮೇಲೆಯೇ ಕುಳಿತಿದ್ದೆನು. ॥೩೫॥

ಶಂಕರನು ದೇವಿಗೆ ಉಪದೇಶಿಸಿದ ತತ್ತ್ವಗಳನ್ನೆಲ್ಲಾ ನಾನೂ ತಿಳಿದುಕೊಂಡೆನು. ಆ ಉಪದೇಶವು ಸಂಸಾರಬಂಧನಗಳನ್ನು ನಿವಾರಿಸತಕ್ಕುದಾಗಿಯೂ, ಶಂಕರನಲ್ಲಿ ಭಕ್ತಿಯನ್ನು ಹೆಚ್ಚಿಸತಕ್ಕುದಾಗಿಯೂ ಇರುವುದು. ಅಂತಹ ತತ್ತ್ವಗಳನ್ನು ಈಗ ನಿಮಗೆ ಉಪದೇಶಿಸುವೆನು. ॥೩೬॥

ಪರಶಿವನು ದೇವಿಯನ್ನು ಕುರಿತು, “ ವಿಶ್ವಮಾತೆಯೇ, ನಗರಾಜ

**ವಿಶ್ವಂ ಪಾಸಿ ತಥಾತ್ಸಿ ಶಕ್ತಿರಖಿಲಾ ದೇವಿ ತ್ವಯಾ ಶಕ್ತಿಮಾ ।**
**ನುಕ್ತೋಽಹಂ ಶ್ರುತಿಭಿರ್ನಿರಿಂದ್ರಿಯ ಇತಿ ತ್ವತ್ತೋಽಸ್ಮಿ ದೇಹಂಗತಃ ॥೩೭॥**

**ಅಪಾಣಿಪಾದೋಽಹಮಲುಪ್ತಶಕ್ತಿಃ ।**
**ಪಶ್ಯಾಮ್ಯಚಕ್ಷುಃ ಪ್ರಶೃಣೋಮ್ಯಕರ್ಣಃ ।**
**ಅಹಂ ವಿಜಾನಾಮಿ ಸಮಸ್ತಮೇತ ।**
**ತ್ಸಹೈವ ಸಂತಂ ನ ವಿಜಾನಂತಿ ದೇವಾಃ ॥೩೮॥**

**ಶೀರ್ಣೇಷ್ವಶೀರ್ಣೋಽಹಮಜಃ ಪುರಾತನ ।**
**ಶ್ಶರೀರಹೀನೋಽಸ್ಮಿ ಸದಾಹ್ಯಸಂಗಃ ।**
**ವೇದಾಶ್ಚ ವೇದಾಂತವಚೋ ಯತೋ ಮೇ ।**
**ನಿವೃತ್ತಭಾವಾ ಮನಸಾ ಸದಾಂಬಿಕೇ ॥೩೯॥**

---

ಪುತ್ರಿಯೇ, ನಿನಗೆ ಹೇಳದೆ ಇರತಕ್ಕದ್ದು ತ್ರಿಲೋಕಗಳಲ್ಲಿ ಯಾವುದು ತಾನೇ ಇರುವುದು ? ನೀನು ಸ್ವಸ್ವರೂಪದಿಂದ ನನ್ನ ಅರ್ಧಶರೀರದಲ್ಲಿ ಅಡಗಿಹೋಗಿರುವೆಯಲ್ಲವೇ ? ಲೋಕವನ್ನು ರಕ್ಷಿಸುವವಳೂ ಆಗಿ, ಒಂದು ಶಕ್ತಿಯಿಂದ ಲೋಕವನ್ನೆಲ್ಲಾ ಭಕ್ಷಿಸುವವಳೂ ನೀನೇ ಆಗಿರುವೆಯಲ್ಲವೇ ? ನಿನ್ನ ಸಂಬಂಧದಿಂದಲೇ ನಾನು ಶಕ್ತಿವಂತನೆನಿಸಿಕೊಂಡಿರುವೆನು. ಸಕಲ ಶ್ರುತಿಗಳೂ ನನ್ನನ್ನು ದೇಹೇಂದ್ರಿಯಗಳಿಲ್ಲದವನು ಎಂದು ಹೇಳುತ್ತಿವೆ. ಆದರೆ ನಿನ್ನ ಸಂಬಂಧದಿಂದ (ಮಾಯಾ ಸಂಬಂಧದಿಂದ) ಈಗ ದೇಹಿ, ಜೀವೀ, ಎನಿಸಿಕೊಂಡಿರುವೆನು. ||೩೭||

ನನಗೆ ಕೈಕಾಲುಗಳು ಯಾವುವೂ ಇಲ್ಲ. ಆದರೆ ನನ್ನ ಶಕ್ತಿಯು ಮಾತ್ರ ಲುಪ್ತವಾಗಿಲ್ಲ. ಕಣ್ಣುಗಳು ನನಗೆ ಇಲ್ಲದಿದ್ದರೂ ಸರ್ವವನ್ನೂ ನೋಡುವೆನು. ಕಿವಿಗಳಿಲ್ಲದಿದ್ದರೂ ಎಲ್ಲವೂ ನನಗೆ ಕೇಳಿಸುತ್ತದೆ. ನಿನ್ನ ಸಹಾಯದಿಂದ ನಾನು ಎಲ್ಲವನ್ನೂ ತಿಳಿಯುವ ಸರ್ವಜ್ಞನೆನಿಸಿರುವೆನು. ಆದರೆ ಈ ತತ್ತ್ವವನ್ನು, ಸತ್ಸ್ವರೂಪವನ್ನು ದೇವತೆಗಳು ಸಹ ಸ್ವಲ್ಪವೂ ತಿಳಿಯರಾರರು. ||೩೮||

ನಾಶವಾಗುವ ಈ ಪ್ರಪಂಚದಲ್ಲಿ ನಾಶವಾಗದಿರುವವನು ನಾನೊಬ್ಬನೇ. ನನಗೆ ಉತ್ಪತ್ತಿಯೂ ಇಲ್ಲ. ನಾಶವೂ ಇಲ್ಲ. ನಾನು ಶರೀರಿಯಲ್ಲ. ಯಾವ ಸಂಗವೂ ನನ್ನಲ್ಲಿಲ್ಲ. ಪಾರ್ವತಿಯೇ, ಸಕಲ ವೇದಗಳೂ, ಉಪನಿಷದ್ವಾಕ್ಯಗಳೂ ನನ್ನ ಭಾವವನ್ನರಿತು ಇಂದಿಗೂ ಹೀಗೆ ಹೊಗಳುತ್ತಿವೆ. ||೩೯||

ಕಥಂ ಪಾಮರಾ ವಾನರಾಕಾರಚೇಷ್ಟಾ ।
ಸ್ಸದಾ ಕಾಮಲೋಭಾದಿಮಾತ್ಸರ್ಯಯುಕ್ತಾಃ ।
ಶರಾಕಾಶ್ಮರಾವಾದಿಹಸ್ತಾ ರಟಂತಿ ।
ಸುರಾಶ್ಚಾಸುರಾಶ್ಚಾಸುರಾ ಭೂಸುರಾಃ ಕಿಂ ॥೪೦॥

ಲಭಂತೇ ತ್ವಮೇಕಾಕಿನೀ ಸ್ಕಂದನಂದೀಶಮುಖ್ಯಾ ।
ಮದೀಯಪ್ರಕೃಷ್ಟಪ್ರಭಾವೈಕತರ್ಷಾಃ ।
ಯತೋ ಭಾವಲಭ್ಯೈಕಮೂರ್ತಿಂ ಮಹೇಶಂ ।
ಸದಾ ವೇದವೇದಾಂತವಾಚಾಂ ದುರಾಪಂ ॥೪೧॥

ವಿಜಾನಾಸಿ ದೇವಿ ತ್ವಮಾದ್ಯಂ ಮಮಾದ್ಯಂ ।
ಸದಾ ಶುದ್ಧಬುದ್ಧಂ ಚಿದಾನಂದರೂಪಂ ।
ತ್ರಿಣೇ(ನೇ)ತ್ರಂ ಗರಾಧೀಶಕಂಠಂ ಸಹಾಂಬಂ ।
ಪ್ರಪಶ್ಯಂತಿ ಯೋಗೀಂದ್ರಮುಖ್ಯಾ ಹರಾಜಾಃ ॥೪೨॥

---

ಇಂತಹ ನನ್ನ ಸ್ವರೂಪವನ್ನು, ಕೋತಿಯ ಆಕಾರದಿಂದ ಜನಿಸಿ ಕಾಮ ಕ್ರೋಧಾದಿಗಳಿಗೆ ವಶರಾಗಿರತಕ್ಕ ಈ ಮಾನವರು ಸರಿಯಾಗಿ ತಿಳಿಯುವುದು ಹೇಗೆ? ಮಾನವರಿರಲಿ. ದೇವತೆಗಳೂ, ರಾಕ್ಷಸರೂ, ಅಸುರಕೃತ್ಯಕ್ಕೆ ತೊಡಗಿದ ಭೂಸುರರೂ ಸಹ ನನ್ನ ರಹಸ್ಯವನ್ನು ಸರಿಯಾಗಿ ಅರಿಯದೆ, ಕೈಯ್ಯಲ್ಲಿ ಶರಾವಾದಿಗಳನ್ನು (ಕಮಂಡಲು) ಹಿಡಿದು ಅಲ್ಲಲ್ಲಿ ಅಲೆಯುತ್ತಿರುವರು. ॥೪೦॥

ಆದರೆ, ನೀನೊಬ್ಬಳು ಮತ್ತು ಸ್ಕಂದ, ನಂದಿ ಇಂತಹವರು ಮಾತ್ರ ಬಹಳವಾಗಿ ನನ್ನ ಸ್ವರೂಪವನ್ನು ಅರಿಯಬಹುದು. ಏಕೆಂದರೆ ನೀವೆಲ್ಲರೂ ನನ್ನ ಪ್ರಭಾವದಿಂದ ಜ್ಞಾನಿಗಳಾದವರು. ನಿಜವಾಗಿಯೂ ಶಿವನ ಆಕಾರವು ಕೇವಲ ಭಾವನಾಗಮ್ಯವಾದದ್ದು. ವೇದ ಮತ್ತು ವೇದಾಂತ ಇವುಗಳೂ ತಿಳಿಸಲಾಗದಂತಹ ಸ್ವರೂಪವುಳ್ಳದ್ದು. ॥೪೧॥

ನನ್ನ ಸ್ವರೂಪವು ಕೇವಲ ಶುದ್ಧಜ್ಞಾನಸ್ವರೂಪವಾದದ್ದೆಂದೂ, ಸ್ವಯಂ ಪ್ರಕಾಶಕವಾದ ಆನಂದರೂಪವುಳ್ಳದ್ದೆಂದೂ ನೀನೊಬ್ಬಳು ಮಾತ್ರ ಅರಿತಿರುವೆ. ನನ್ನ ಆದಿಸ್ವರೂಪವು ಅದೇ. ಆದರೆ ಅಂಬಾ (ಶಕ್ತಿ) ಸಮೇತನಾದ ನನ್ನನ್ನು ಯೋಗೀಂ

ಅಹಂ ಲೋಕಮುಕ್ತ್ಯರ್ಥಮಾಶಾನಿ ದೇಹಂ ।
ಸೃಜಾಮ್ಯದ್ಯ ಕಾಮಂ ನಿಗೃಹ್ಣಾಮಿ ಚಾಂತೇ ।
ಶಿವೇ ವ್ಯಕ್ತರೂಪಂ ಸುರಾದ್ಯೈರ್ದುರಾಪಂ ।
ನ ಜಾನೀಯುರೇತತ್ಕಥಾಂ ಪಾಮರಾ ಮಾಂ ॥೪೩॥

ಶೃಣು ಶ್ರವಣಭೂಷಣಂ ನಿಗಮಸಾರಸಾರಂ ಸ್ಫುಟಂ ।
ಸುಗೋಪ್ಯಮಪಿ ವರ್ತತೇ ಹೃದಿ ಸುಗೋಪ್ಯಮೇತತ್ತ್ವಯಾ ।
ಅಶಾಂಭವವಶೇರ್ಪಿತೋ ನ ಭವತಿ ಪ್ರರೂಢಸ್ತರು ।
ರ್ಯಥೈವ ಮರುಭೂಮಿಗಶ್ಶಿವರಹಸ್ಯಮೇತತ್ತಥಾ ॥೪೪॥

ಸುಶಾಂಭವಸರೋವರ ಪ್ರಥಿತರಕ್ತಫುಲ್ಲಾಬ್ಜಿನೀ ।
ವಿಕಾಸನದಿವಾಕರಶ್ಶಿವಜನೈಕತೋಷಪ್ರದಃ ।

---

ದ್ರರೂ, ಬ್ರಹ್ಮ, ವಿಷ್ಣು, ರುದ್ರ ಮುಂತಾದವರೂ, ತ್ರಿನೇತ್ರನೆಂದೂ, ನೀಲಕಂಠನೆಂದೂ, ಅರ್ಧನಾರೀಶ್ವರನೆಂದೂ ತಿಳಿದಿರುವರು. ॥೪೨॥

ಎಲೈ ದೇವಿಯೇ, ನಾನು ಜನರ ಕ್ಷೇಮಕ್ಕಾಗಿ, ಭಕ್ತರು ಮುಕ್ತಿ ಸಂಪಾದಿಸಲೆಂದು ಈ ದೇಹವನ್ನು ಸೃಷ್ಟಿಮಾಡಿಕೊಂಡಿದ್ದೇನೆ. ಕೊನೆಯಲ್ಲಿ ಈ ದೇಹವನ್ನು ನನ್ನಲ್ಲಿಯೇ ಅಡಗಿಸಿಕೊಳ್ಳುವೆನು. ಸರ್ವಮಂಗಳೆಯೇ, ವ್ಯಕ್ತವಾಗಿರುವ ಈ ನನ್ನ ಸ್ವರೂಪವನ್ನೂ ಸಹ ಈ ಸಕಲ ದೇವತೆಗಳೂ ಅರಿಯಲಾರರು. ಇನ್ನು ಅಜ್ಞಾನಿಗಳು ತಿಳಿಯುವುದು ಹೇಗೆ? ॥೪೩॥

ದೇವಿಯೇ, ಈ ಶಿವರಹಸ್ಯವೆಂಬುದು ಕೇಳುವುದಕ್ಕೆ ಬಹಳ ಹಿತವಾಗಿರುತ್ತದೆ. ವೇದಾಂತಗಳ ಸಾರವೆಲ್ಲಾ ಇದರಲ್ಲಿ ಸ್ಪಷ್ಟವಾಗಿ ತೋರಿಬರುತ್ತದೆ. ಇದನ್ನು ಮೊದಲಿನಿಂದಲೂ ರಹಸ್ಯವಾಗಿಯೇ ಇಟ್ಟಿರುವೆನು. ನೀನೂ ಸಹ ಇದನ್ನು ರಹಸ್ಯದಲ್ಲಿಟ್ಟಿರಬೇಕು. ಏಕೆಂದರೆ, ಶಂಕರನಲ್ಲಿ ಯಾರಿಗೆ ಭಕ್ತಿಯಿಲ್ಲವೋ ಅವರಿಗೆ ಈ ಶಿವರಹಸ್ಯವು ರುಚಿಸದು. ಅದರ ಫಲವು ಅವರಿಗೆ ದೊರೆಯಲಾರದು. ಮರುಳುಗಾಡಿನಲ್ಲಿ ಮರವು ಹೇಗೆ ಬೆಳೆಯಲಾರದೋ, ಶಂಭುಭಕ್ತಿಶೂನ್ಯರಲ್ಲಿ ಈ ಶಿವರಹಸ್ಯವು ಅಭಿವೃದ್ಧಿಹೊಂದಲಾರದು. ॥೪೪॥

ಈ ನನ್ನ ವಿಷಯಕವಾದ ಜ್ಞಾನವೆಂಬುದು ರಕ್ತಕಮಲಗಳನ್ನು ಸೂರ್ಯನು ಅರಳಿಸುವಂತೆ, ಶಂಭುಭಕ್ತರ ಅನುರಕ್ತಮನಸ್ಸನ್ನು ವಿಕಾಸಗೊಳಿಸಿ ಅವರಿಗೆ

ಹೃದಂತರತಮೋಗಣೋನ್ಮಥಿತಪಾಪಮೇಘಾನಿಲೋ ।
ನಿಶೋಷಯತು ದುಷ್ಪಥಪ್ರಭವಕಾಮಪಂಕಂ ಸದಾ ॥೪೫॥

ಭಜಂತು ಸುಧಿಯಸ್ಸದಾ ಶ್ರವಣರಾಶಿಸನ್ಮಂಗಲಂ ।
ನ ಹೀನಜನಮಾನಸಾಶ್ಶ್ರವಣಮೇತದೇವ ಸ್ಫುಟಂ ।
ಧ್ರುವಂ ಭವತಿ ಶೈಲಜೇ ನಿಗಮಸಾರಭೂತಂ ಮಧು ।
ಶಿವಾರ್ಚಕಜನಪ್ರಿಯಂ ಮಧುಲಿಹಸ್ತ ಏವ ಪ್ರಿಯೇ ॥೪೬॥
ಪ್ರಕೃಷ್ಟರಸಭಾವುಕಾ ಭವಭವಾಬ್ಧಿಸಂಶೋಷಕಾಃ ।

ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ಸ್ಕಂದದರ್ಶನಂ
ನಾಮ ಅಷ್ಟಮೋಽಧ್ಯಾಯಃ

---

ನಿರತಿಶಯವಾದ ಆನಂದವನ್ನೀಯುವುದು. ಇಂತಹ ಶಿವರಹಸ್ಯವೆಂಬ ಸೂರ್ಯನು ಕೇವಲ ಆನಂದಪ್ರದನಾಗದೆ, ಶಿವಸೇವಕರ ಹೃದಯಾಂತರಾಳದಲ್ಲಿರುವ ಅಜ್ಞಾನವೆಂಬ ಕತ್ತಲನ್ನೂ, ಪಾಪಗಳೆಂಬ ಮೇಘರಾಶಿಯನ್ನೂ, ಕಾಮಕ್ರೋಧಾದಿಗಳೆಂಬ ಬಿರುಗಾಳಿಗಳನ್ನೂ ಧ್ವಂಸಮಾಡಿ, ದುರ್ಮಾರ್ಗಕ್ಕೆ ಎಳೆಯುವ ಆಸೆಯೆಂಬ ಕೆಸರನ್ನೂ ಒಣಗಿಸಿ, ಅವರ ಮಾರ್ಗವನ್ನು ಸುಗಮವನ್ನಾಗಿ ಮಾಡುವುದು. ಅಂದರೆ ಶಿವರಹಸ್ಯವನ್ನರಿತವನು ಸರ್ವೋಪಾಧಿಮುಕ್ತವಾದ ಆನಂದಸಾಗರವನ್ನು ಸೇರಲು ಅಧಿಕಾರಿಯಾಗುವನು. ॥೪೫॥

ದೇವಿಯೇ, ಯಾರು ನಿಜವಾಗಿ ಸುಜ್ಞಾನಿಗಳೋ, ಅವರು ಮಾತ್ರ ಇದನ್ನು ಕೇಳಿ ಶ್ರವಣಾನಂದವನ್ನು ಪಡೆಯಲಿ. ಹೀನ ಭಾವವನ್ನೇ ಅನುಸರಿಸುವ ದುರ್ಮಾರ್ಗಿಗಳು ಈ ರಹಸ್ಯ ಶ್ರವಣವನ್ನು ದೂರಮಾಡಲಿ. ಗಿರಿರಾಜಪುತ್ರಿಯೇ, ವೇದದ ಸಾರವನ್ನೆಲ್ಲಾ ಒಳಗೊಂಡಿರುವ ಈ ಶಿವರಹಸ್ಯವೆಂಬ ಮಧುವನ್ನು ಶಿವಾರ್ಚಕರೆಂಬ ಜೇನುಹುಳುಗಳು ಮಾತ್ರ ಕುಡಿದು ಆನಂದಪಟ್ಟರೆ ಸಾಕು. ಅಂತಹವರೇ ಅತಿಶಯವಾದ ಬ್ರಹ್ಮಾನಂದವನ್ನು ಅನುಭವಿಸಿ ಭವಾಬ್ಧಿಯೆಂಬ ಸಮುದ್ರವನ್ನು ಒಣಗಿಸತಕ್ಕವರಾಗುವರು ಎಂಬುದರಲ್ಲಿ ಸಂದೇಹವೇ ಇಲ್ಲ." ಎಂದು ಪರಮೇಶ್ವರನು ಪಾರ್ವತಿಗೆ ಹೇಳಿದನು. ॥೪೬॥

ಇಲ್ಲಿಗೆ ಶ್ರೀಶಿವರಹಸ್ಯದ ಪ್ರಥಮಾಂಶದಲ್ಲಿ ಸ್ಕಂದದರ್ಶನವೆಂಬ
ಎಂಟನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

# ಅಥ ಶ್ರೀಶಿವರಹಸ್ಯೇ

## ನವಮೋಽಧ್ಯಾಯಃ

### ಸ್ಕಂದಶಿವಗಣಸಂವಾದಃ

|| ಸೂತ ಉವಾಚ ||

**ಏವಮಭ್ಯಾಗತಾನ್ ಸಮ್ಯಕ್ಸದಸಸ್ಪತಿಶಾಸನಾತ್ ।**
**ಸ್ಕಂದಾಸ್ಯವಿಮಲೋದಾರನಿರ್ಗಚ್ಛಂತ್ಯಶ್ಶಿವಾಶ್ರಯಾಃ ॥೧॥**

**ಕಥಾಃ ಕಾಪಥದುಶ್ರಾವ್ಯಾ ನಾರದೋಽಥ ಸುರಾನ್ವಯೌ ।**
**ಚಕ್ಷುಶ್ರವಃಕನ್ಯಕಾಶ್ಚ ಶ್ರವಣಾರ್ಥಂ ದಿವಸ್ಪತೀನ್ ॥೨॥**

---

## ಶ್ರೀಶಿವರಹಸ್ಯದಲ್ಲಿ ಒಂಬತ್ತನೆಯ ಅಧ್ಯಾಯ

ಸೂತಮಹರ್ಷಿಗಳು ಮತ್ತೆ ಮೌನಿಭಾರ್ಗವಾದಿಗಳನ್ನು ಕುರಿತು, ಮುಂದಿನ ಕಥೆಯನ್ನು ವಿವರಿಸಲಾರಂಭಿಸಿದರು.—“ಋಷಿವರ್ಯರೇ, ಹೀಗೆ ಜೈಗೀಷವ್ಯರೇ ಮೊದಲಾದ ಮಹರ್ಷಿಗಳು ಪರಮೇಶ್ವರನ ಅಪ್ಪಣೆಯಿಂದ ಸ್ಕಂದಸ್ವಾಮಿಯನ್ನು ಕುರಿತು ಪ್ರಯಾಣಮಾಡಿದುದನ್ನೂ, ಅಲ್ಲಿ ಕುಮಾರಸ್ವಾಮಿಯು ಆ ಋಷಿಯನ್ನು ಆದರಿಸಿ, ಅವರಿಗೆ ಶಿವರಹಸ್ಯಾತ್ಮಕಗಳಾದ, ಶಿವಸಂಬಂಧವಾದ ಕಥೆಗಳನ್ನೆಲ್ಲಾ ಹೇಳುತ್ತೇನೆಂದು ಒಪ್ಪಿಕೊಂಡುದನ್ನೂ, ನಾರದಮಹರ್ಷಿಯು ತಿಳಿದು, ||೧||

ಈ ಪುಣ್ಯಕರವಾದ ಶಿವಕಥೆಗಳನ್ನು ದುಷ್ಟರಾದವರು ಕೇಳಬಾರದು. ಸಜ್ಜನರಿಗೆ ಮಾತ್ರ ವಿಹಿತವಾದದ್ದೆಂದು ಆಲೋಚಿಸಿ, ಮೊದಲು ಪಾತಾಳಲೋಕದ ನಾಗಕನ್ನಿಕೆಯರಿಗೂ, ಅನಂತರ ಸಕಲ ದೇವತೆಗಳಿಗೂ ಈ ವಿಷಯವನ್ನು ತಿಳಿಸಿದನು. ||೨||

ಬ್ರಹ್ಮೇಂದ್ರವಿಷ್ಣುಲೋಕೇಶಾಂಸ್ತದುದಂತಕಥಾ ಭುವಿ ।
ವಿಷ್ಣವೇ ಬ್ರಹ್ಮಣೇ ಚೈವ ದಿಕ್ಪಾಲೇಭ್ಯೋಽಮರೇಶ್ವರೇ ॥೩॥

ತಚ್ಚಾಕಥಯದೇತೇಭ್ಯೋ ಜೈಗೀಷವ್ಯಪ್ರಸಾದಜಂ ।
ಮಹೇಶ್ವರಸ್ಯ ಶ್ರುತ್ವಾ ತೇ ದೇವಾಸ್ಸಂಭ್ರಮಮಾನಸಾಃ ॥೪॥

ಕಥಾಶ್ರವಣಲೋಲಾಕ್ಷಾ ನಾರದೇನ ಸಮಾಗತಾಃ ।
ವಿನತಾನಂದನಾರೂಢೋ ಲಕ್ಷ್ಮೀಪತಿರತಂದ್ರಿತಃ ॥೫॥

ಧವಲಾಭ್ರನಿಭಾತ್ಯುಚ್ಚಹಂಸಾರೂಢೋ ವಿಧಿಸ್ತದಾ ।
ಅಭ್ಯಗಾದ್ಭಾರತೀನಾಥೋ ನಾಗಾರೂಢಸ್ಸುರೇಶ್ವರಃ ॥೬॥

---

ಹಾಗೆಯೇ ಬ್ರಹ್ಮಾದಿದೇವತೆಗಳ ಲೋಕಗಳಿಗೆಲ್ಲಾ ಹೋದನು. ಅಲ್ಲಿ ಬ್ರಹ್ಮ, ವಿಷ್ಣು, ದಿಕ್ಪಾಲಕರು, ದೇವೇಂದ್ರ ಮೊದಲಾದವರಿಗೆ ಈ ವಿಷಯವನ್ನು ತಿಳಿಸಿದನು. ಭೂಲೋಕದಲ್ಲಿಯೂ ಈ ವಿಚಾರವನ್ನು ಸ್ವಲ್ಪಮಟ್ಟಿಗೆ ಪ್ರಚುರಪಡಿಸಿದನು. ॥೩॥

ಈ ವಿಧದ ಸನ್ನಿವೇಶವು ಮಹೇಶ್ವರಾನುಗ್ರಹದಿಂದ ಜೈಗೀಷವ್ಯ ಮಹಾಮುನಿಗೆ ಒದಗಿದೆ. ಕೇಳುವವರಿಗೆಲ್ಲಾ ಇದೇ ಸುಸಮಯವೆಂದು ಎಲ್ಲರಿಗೂ ಬೋಧಿಸಲಾರಂಭಿಸಿದನು. ಈ ನಾರದನ ಮಾತುಗಳನ್ನು ಕೇಳಿ ಸಕಲದೇವತೆಗಳೂ ಈ ಸಮಯವನ್ನು ಉಪಯೋಗಿಸಿಕೊಳ್ಳಲು ಅತ್ಯಾಸಕ್ತರಾದರು. ॥೪॥

ಎಲ್ಲರೂ ಕಥೆಯನ್ನು ಕೇಳಬೇಕೆಂಬ ಆಸಕ್ತಿಯನ್ನು ತಮ್ಮ ಚಂಚಲವಾದ ಕಣ್ಣುಗಳಿಂದ ತೋರ್ಪಡಿಸಿದರು. ಅಲ್ಲದೆ ನಾರದನ ಜೊತೆಯಲ್ಲಿಯೇ ತಾವೂ ಹೊರಟೇಬಿಟ್ಟರು. ಗರುಡಾರೂಢನಾಗಿ ಮಹಾವಿಷ್ಣುವು ಜಾಗ್ರತೆಯಾಗಿ ಪ್ರಯಾಣಸನ್ನದ್ಧನಾದನು. ॥೫॥

ಬ್ರಹ್ಮನು ಬಿಳಿಯ ಮೇಘದಂತೆ ಸ್ವಚ್ಛವಾಗಿ, ಉನ್ನತವಾಗಿರುವ ಹಂಸವನ್ನೇರಿ ಹೊರಟನು. ದೇವೇಂದ್ರನು ಐರಾವತದ ಮೇಲೆ ಕುಳಿತು ಪ್ರಯಾಣಸಿದ್ಧನಾದನು. ॥೬॥

ಸ್ವಂ ಸ್ವಂ ವಾಹನಮಾರುಹ್ಯ ಯಯುರ್ದೇವಾಸ್ತದಾ ಮುದಾ ।
ತಾರಕಾದಿಸದಃ ಪ್ರಾಪ್ತಾ ನಾನಾಭರಣಭೂಷಿತಾಃ ॥೭॥

ಪ್ರಣಮ್ಯ ಬ್ರಹ್ಮವಿಷ್ಣ್ವಿಂದ್ರಾಃ ಕೃತಾಂಜಲಿಪುಟಾ ಜಗುಃ ।

॥ ದೇವಾ ಊಚುಃ ॥

ಸ್ಕಂದ ವಂದಿತವಂದಾರುಬೃಂದವಂದ್ಯಪದಾಂಬುಜ ।
ಶಿವಭಾವಾಮರಾಧ್ಯಕ್ಷ ಶ್ರೋತುಂ ತವ ಮುಖಾಚ್ಛುಭಾಃ ॥೮॥

ಶಂಭೋಶ್ಶಂಭುಜ ಸರ್ವಸ್ವಾಃ ಕಥಾಶ್ಶಿವರಹಸ್ಯಗಾಃ ।
ಶ್ರೋತುಂ ಪ್ರವೃತ್ತಾ ಮುನಿಭಿರ್ಜೈಗೀಷವ್ಯೇನ ಸಾದರಾಃ ॥೯॥

ತಸ್ಮಾತ್ಪ್ರವರ್ತಯ ಶುಭಾಃ ಪಾಪತಾಪನಿವಾರಕಾಃ ।
ತದಾ ಸುರಮುನೀಂದ್ರಾಣಾಂ ವಚಸಾನಂದನಿರ್ಭರಃ ॥೧೦॥

---

ಹಾಗೆಯೇ ಉಳಿದ ದೇವತೆಗಳೂ ತಮ್ಮ ತಮ್ಮ ವಾಹನಗಳನ್ನು ಏರಿ ನಾನಾವಿಧವಾದ ಭೂಷಣಗಳಿಂದಲಂಕೃತರಾಗಿ ತಾರಕಧ್ವಂಸಿಯಾದ ಷಣ್ಮುಖ ಸ್ವಾಮಿಯ ಸಭೆಗೆ ಬಂದು ಸೇರಿದರು. ॥೭॥

ಆ ಸಭಾಮಧ್ಯದಲ್ಲಿ ಕುಳಿತಿದ್ದ ಕುಮಾರಸ್ವಾಮಿಯನ್ನು ಬ್ರಹ್ಮ, ವಿಷ್ಣು, ಇಂದ್ರ ಇವರೇ ಮೊದಲಾದ ಸಕಲ ದೇವತೆಗಳೂ ನೋಡಿ, ನಮಸ್ಕರಿಸಿ ಹೀಗೆ ಪ್ರಾರ್ಥನೆಮಾಡಿದರು. "ಕುಮಾರಸ್ವಾಮಿಯೇ, ನಿನ್ನ ಪಾದಕಮಲವು ಯಾವಾಗಲೂ ಸಂತುಷ್ಟಾಂತರಂಗವುಳ್ಳ ಭಕ್ತವೃಂದದಿಂದ ನಮಸ್ಕರಿಸಲ್ಪಡುತ್ತಾ ಇದೆ. ಶಿವನನ್ನು ಸರ್ವದಾ ಅನುಸಂಧಾನಮಾಡುತ್ತಲಿರುವ ಸಕಲ ದೇವತೆಗಳಿಗೂ ನೀನು ಒಡೆಯನಾಗಿರುವೆ. ಸ್ವಾಮಿಯೇ, ಈಗ ನಿನ್ನ ಮುಖದಿಂದ ಹೊರಡುವ ದಿವ್ಯವಾದ, ॥೮॥

ಶಿವರಹಸ್ಯಗಳನ್ನೊಳಗೊಂಡ ಶಂಕರನ ಕಥೆಗಳನ್ನು ಕೇಳಲು, ಈ ಜೈಗೀಷವ್ಯನೇ ಮೊದಲಾದ ಸಕಲ ಋಷಿಗಳೂ ಇಲ್ಲಿ ನೆರೆದಿದ್ದಾರಲ್ಲವೇ! ॥೯॥

ಈ ನಮ್ಮೆಲ್ಲರಿಗೂ ಸಹ ಸಮಸ್ತಪಾಪನಿವಾರಕವಾದ ಮತ್ತು ಮಂಗಳಕರವಾದ ಶಿವರಹಸ್ಯಾತ್ಮಕವಾದ ಕಥೆಗಳನ್ನು ವಿವರಿಸುವವನಾಗು" ಎಂದು ದೇವತೆಗಳೂ, ಮುನಿಗಳೂ, ಏಕಕಂಠದಿಂದ ಕೇಳಿಕೊಳ್ಳಲು ಕುಮಾರಸ್ವಾಮಿಯು ಆನಂದಪರವಶನಾಗಿ, ॥೧೦॥

ಜಗಾದ ಸಂಪ್ರಣಮ್ಯೇಶಮುಂಬಾಂ ವಿಘ್ನಾದ್ರಿಭೇದನಂ ।
ಧ್ಯಾತ್ವಾ ಸ್ವಹೃತ್ಪದ್ಮಗತಂ ಜೈಗೀಷವ್ಯಮುದೈಕ್ಷತ ॥೧೧॥

ಶೈವೇಂದ್ರಾನಮರೇಂದ್ರಾಂಶ್ಚ ಪ್ರೋತ್ಫುಲ್ಲನಳಿನಾಸ್ಯಕಃ ।
ಉವಾಚ ಪ್ರಸಭಂ ಸಭ್ಯಾನ್ ಸದಸಸ್ಪತಿಪೂಜಕಾನ್ ॥೧೨॥

ಭಸ್ಮತ್ರಿಪುಂಡ್ರನಿಟಿಲಾನ್ರುದ್ರಾಕ್ಷಾಂಗದಕಂಕಣಾನ್ ।
ಶಿವಪಾದಾಂಬುಜನ್ಯಗ್ರಚೇತಸಸ್ತಾನಭಾಷತ ॥೧೩॥

॥ ಸ್ಕಂದ ಉವಾಚ ॥

ತ್ವಮೇವ ಭವಭಕ್ತೋಽಸಿ ಜೈಗೀಷವ್ಯ ಶೃಣುಷ್ವ ಮೇ ।
ಸಹೈಭಿರ್ಮುನಿಭಿಸ್ಸಾರ್ಧಂ ದೇವೈಶ್ಶಿವರಹಸ್ಯಕಂ ॥೧೪॥

---

ಮೊದಲು ಸಕಲ ವಿಘ್ನರಾಶಿನಿವಾರಕನಾದ ವಿನಾಯಕನನ್ನೂ, ಪಾರ್ವತೀ ಪರಮೇಶ್ವರರನ್ನೂ ತನ್ನ ಹೃತ್ಪದ್ಮದಲ್ಲಿ ಧ್ಯಾನಮಾಡಿ, ಶಿರಸಾವಂದಿಸಿ, ಜೈಗೀಷವ್ಯನೇ ಮೊದಲಾದ ಮಹರ್ಷಿಗಳನ್ನು ನೋಡಿ ||೧೧||

ತಾನೂ ಸಹ ಅರಳಿದ ಕಮಲದಂತೆ ವಿಕಸಿದವದನನಾಗಿ, ಅಲ್ಲಿ ಕುಳಿತಿದ್ದ ಹರಭಕ್ತರನ್ನೂ, ದೇವೇಂದ್ರಾದಿದೇವತೆಗಳನ್ನೂ ನೋಡುತ್ತಾ ಮುಂದಿನ ಶಿವ ಮಹಿಮೆಯನ್ನು ವಿವರಿಸಲಾರಂಭಿಸಿದನು. ||೧೨||

ಆ ಸಭೆಯಲ್ಲಿ ಕುಳಿತಿದ್ದವರೆಲ್ಲರೂ, ಭಸ್ಮದಿಂದ ತ್ರಿಪುಂಡ್ರಗಳನ್ನು ಧರಿಸಿದ್ದರು. ಕೈಗೆ, ತೋಳುಗಳಿಗೆ ರುದ್ರಾಕ್ಷಿಯ ಮಾಲೆಗಳನ್ನು ಕಟ್ಟಿಕೊಂಡಿದ್ದರು. ಸರ್ವದಾ ಶಿವಪಾದಕಮಲವನ್ನೇ ಮನಸ್ಸಿನಲ್ಲಿ ಧ್ಯಾನಿಸತಕ್ಕವರಾಗಿದ್ದರು. ಇಂತಹವರನ್ನು ನೋಡಿ ಕುಮಾರಸ್ವಾಮಿಯು ಸಂತೋಷದಿಂದ ಹೀಗೆ ಹೇಳಿದನು. ||೧೩||

"ಎಲೈ ಜೈಗೀಷವ್ಯಮಹಾಮುನಿಯೇ, ನೀನು ಭವಭಕ್ತಾಗ್ರಗಣ್ಯನು. ಶಿವರಹಸ್ಯವನ್ನು ಕೇಳಲು ಸಕಲ ಮುನಿಗಳೊಡನೆಯೂ ಬಂದು ಕುಳಿತಿರುವೆ. ಆದ್ದರಿಂದ ಈಗ ಹೇಳುವೆನು, ಕೇಳು. ||೧೪||

ದೇವ್ಯೈ ದೇವೇನ ಕಥಿತಂ ಪಾಪತಾಪವಿಶೋಷಣಂ ।
ಏವಂ ಸಂವದತಾಂ ತೇಷಾಂ ಸಿಂಧೂರಾರುಣಗಂಡಭೃತ್ ॥೧೫॥

ವಾರಣೇಂದ್ರಮುಹಾವಕ್ತ್ರೋ ವಿಘ್ನಪೂಗನಿವಾರಕಃ ।
ಸ್ಕಂದಾಶ್ರಮಂ ತದಾ ಪ್ರಾಪ ಗಣಬೃಂದನಿಷೇವಿತಃ ॥೧೬॥

ವಿಮಾನವರಮಾಸ್ಥಾಯ ಕೈಲಾಸಾಚಲತಸ್ತದಾ ।
ನಂದಿಭೃಂಗಿಮಹಾಕಾಲಬಾಣಚಂಡೀಶ್ವರಾದಯಃ ॥೧೭॥

ತುಹುಂಡಹುಂಡಸಾನಂದಮಹಾನಂದಾಶ್ಚ ಭೈರವಃ ।
ತುಂಡಃ ಕಾಲಾಗ್ನಿರುದ್ರಶ್ಚ ಯೇ ಚಾನ್ಯೇ ಗಣಪೋತ್ತಮಾಃ ॥೧೮॥

ಸೋಮನಂದಿಪ್ರಭೃತಯೋ ಗಣಕೋಟಿವರಪ್ರದಾಃ ।
ಸಮಾಗತಾ ಮಹೇಶೇನ ಪ್ರೇಷಿತಾ ಗಣನಾಯಕಾಃ ॥೧೯॥

ಮಸ್ತಕಾಂತಜಟೋದ್ಭಾಸಿಧೃತಬಾಲೇಂದುಶೇಖರಾಃ ।
ತ್ರಿಪುಂಡ್ರವಿಲಸತ್ಫಾಲಾ ರುದ್ರಾಕ್ಷಾಂಗದಕಂಕಣಾಃ ॥೨೦॥

---

ಪಾಪನಾಶಕವಾದ ಈ ಶಿವರಹಸ್ಯವನ್ನು ಪಾರ್ವತೀದೇವಿಗೆ ಸಾಕ್ಷಾತ್ಪರಮೇಶ್ವರನೇ ಹಿಂದೆ ಹೇಳಿದನು ಎಂದು ಪ್ರಾರಂಭಮಾಡಿದೊಡನೆಯೇ ॥೧೫॥

ಗಜಮುಖನಾಗಿ, ಸಿಂಧೂರವರ್ಣವುಳ್ಳ ಗಂಡಪ್ರದೇಶದಿಂದ ಕೂಡಿ, ಸಮಸ್ತ ವಿಘ್ನರಾಶಿಯನ್ನೆಲ್ಲಾ ಧ್ವಂಸಮಾಡತಕ್ಕ ವಿನಾಯಕನು ತನ್ನ ಗಣಗಳೊಡಗೂಡಿ ಸ್ಕಂದಾಶ್ರಮವನ್ನು ಪ್ರವೇಶಿಸಿದನು. ॥೧೬॥

ಹಾಗೆಯೇ, ಈಶ್ವರನ ಗಣಗಳಿಗೆ ಒಡೆಯರಾದ, ನಂದೀ, ಭೃಂಗೀ, ಮಹಾಕಾಲ, ಬಾಣ, ಚಂಡಿಕೇಶ್ವರ, ತುಹುಂಡ, ಹುಂಡ, ಸಾನಂದ, ಮಹಾನಂದ, ಭೈರವ, ತುಂದ, ಕಾಲಾಗ್ನಿರುದ್ರ ಇವರೇ ಮೊದಲಾದವರು ತಮ್ಮ ತಮ್ಮ ವಿಮಾನಗಳನ್ನೇರಿ ಕೈಲಾಸಪರ್ವತದಿಂದ ಸ್ಕಂದಾಶ್ರಮಕ್ಕೆ ಬಂದರು. ॥೧೭-೧೮॥

ಪ್ರಮಥಗಣಗಳಗುಂಪಿಗೆಲ್ಲಾ ವರಪ್ರದರಾಗಿದ್ದ ಸೋಮ, ನಂದೀ ಮುಂತಾದ ಗಣನಾಯಕರನ್ನೂ ಸಹ ಪರಮೇಶ್ವರನು ಸ್ಕಂದಸಭೆಗೆ ಕಳುಹಿಸಿದನು. ॥೧೯॥

ಹಾಗೆ ಬಂದ ಗಣನಾಯಕರ ಶಿರಸ್ಸಿನಲ್ಲೆಲ್ಲಾ ಜಡೆಯೂ, ಬಾಲಚಂದ್ರನೂ ವಿರಾಜಮಾನವಾಗಿದ್ದುವು. ಎಲ್ಲರ ಹಣೆಯೂ ತ್ರಿಪುಂಡ್ರಧಾರಣೆಯಿಂದ ರಮ್ಯವಾ

ಮಹಾಡಮರುನಾದೋತ್ಥಹುಂಕಾರಿತದಿಶಾಮುಖಾಃ ।
ತಾನ್ ದೃಷ್ಟ್ವಾ ಸಹಸೋತ್ತಸ್ಥೌ ಮುನಿಭಿಶ್ಚ ಸುರಾಸುರೈಃ ॥೨೧॥

ನತ್ವಾ ದ್ವಿರದವಕ್ತ್ರಂ ತಂ ದತ್ವಾರ್ಘ್ಯಾಸನಮುತ್ಕಟಂ ।
ಸಂಪೂಜ್ಯ ಮೋದಕಾಪೂಪದೂರ್ವಾಗಂಧಾಕ್ಷತಾದಿಭಿಃ ॥೨೨॥

ತಾರಕಾರಿರ್ಗಣೇಂದ್ರಾಂಸ್ತಾನ್ ಪರ್ಯಷ್ವಜತ ಗಾಢಹೃತ್ ।
ನಂದೀಶ್ವರಾದೀನ್ ಸಸ್ನೇಹಂ ಪೂಜಿತಾಸ್ತೇ ಮಹಾರ್ಣವೈಃ ॥೨೩॥

ನಿಷೇದುಸ್ಸ್ಕಂದಮಭಿತೋ ಮುನೀಂದ್ರಾಸ್ಸುರಸಾ ಗಣಾಃ ।
ಪಶ್ಯಂತಸ್ತೇ ಪ್ರಾಂಜಲಯಷ್ಷಡಾನನವರಾನನಂ ॥೨೪॥

---

ಗಿದ್ದಿತು. ಮುಂಗೈ ಮತ್ತು ತೋಳುಗಳಲ್ಲಿ ರುದ್ರಾಕ್ಷಿಯಸರವು ವಿರಾಜಮಾನವಾಗಿತ್ತು. ॥೨೦॥

ಆಗ ಡಮರುಗಧ್ವನಿಯು ಸಮಸ್ತ ದಿಕ್ಕುಗಳನ್ನೂ ಮೊಳಗಿಸುತ್ತಿತ್ತು. ಇಂತಹ ಸಂಭ್ರಮದಿಂದ ಬಂದ ಶಿವಗಣಗಳನ್ನು ನೋಡಿ ತಾರಕಾರಿಯು ಋಷಿಗಳೂ, ದೇವಾಸುರರೂ ಇವರೊಡನೆ ಮರ್ಯಾದೆಗಾಗಿ ಎದ್ದು ನಿಂತನು. ॥೨೧॥

ಮೊದಲು ಗಜಾನನನಿಗೆ ಅರ್ಘ್ಯ ಪಾದ್ಯಾದಿಗಳನ್ನಿತ್ತು ಸತ್ಕರಿಸಿದನು. ವಿನಾಯಕನ ತೃಪ್ತ್ಯರ್ಥವಾಗಿ, ಕಡುಬು, ಒಬ್ಬಟ್ಟು, ಹಸುರುಹುಲ್ಲುಗರಿಕೆ, ಗಂಧ, ಅಕ್ಷತೆ ಇವೇ ಮೊದಲಾದುವುಗಳನ್ನು ಅರ್ಪಿಸಿದನು. ॥೨೨॥

ಕುಮಾರಸ್ವಾಮಿಯು ಅಲ್ಲಿಗೆ ಬಂದಿದ್ದ ನಂದೀಶ್ವರನೇ ಮೊದಲಾದವರನ್ನು ಸ್ನೇಹದಿಂದ ಗಟ್ಟಿಯಾಗಿ ಆಲಿಂಗಿಸಿಕೊಂಡನು. ಸ್ಕಂದನ ಅನುಯಾಯಿಗಳಾದ ಮಹಾರ್ಣವವೇ ಮೊದಲಾದವರು ನಂದೀಶ್ವರಾದಿಗಳನ್ನು ನಾನಾರೀತಿಯಲ್ಲಿ ಅರ್ಚಿಸಿದರು. ॥೨೩॥

ಸಕಲ ಮಹರ್ಷಿಗಳೂ, ದೇವತೆಗಳೂ, ಇನ್ನೂ ಅಲ್ಲಿಗೆ ಬಂದಿದ್ದ ಶಿವಗಣಗಳೂ, ಸರ್ವರೂ ಷಡಾನನನನ್ನೇ ನೋಡುತ್ತಾ ಅಂಜಲಿಬದ್ಧರಾಗಿ ಕುಮಾರಸ್ವಾಮಿಯ ಸುತ್ತಲೂ ಕುಳಿತುಕೊಂಡರು. ॥೨೪॥

ಊಚುಸ್ತೇ ನಂದಿಕೇಶಾದ್ಯಾಸ್ಸ್ಕಂದಂ ಕ್ರೌಂಚವಿದಾರಣಂ ॥೨೫॥

॥ ನಂದೀಶ್ವರ ಉವಾಚ ॥

ಜೈಗೀಷವ್ಯಸ್ಯ ತಪಸಾ ಪ್ರಸನ್ನೇನ ಶಿವೇನ ಚ ।
ತ್ವದ್ವಾಗಮೃತನಿಷ್ಯಂದಕಥಾಶ್ರವಣಲಾಲಸಾನ್ ॥೨೬॥

ಅಸ್ಮಾನ್ ಸಂಪ್ರೇಷಯಾಮಾಸ ತ್ವದಂತಿಕಮುಮಾಪತಿಃ ।
ಉಮಾಂಕಸಂಸ್ಥೇನ ಪುರಾ ತ್ವಯಾಶ್ರಾವಿ ಮನೋಹರಂ ॥೨೭॥

ಶೈವಂ ಶಿವಾಯೈ ಕಥಿತಂ ರಹಸ್ಯಂ ಪಾಪಭೇದನಂ ।
ದ್ವಾದಶಾಂಶಯುತಂ ಸಾಕ್ಷಾತ್ಪಶುಪಾಶವಿಮುಕ್ತಿದಂ ॥೨೮॥

ವೇದಸ್ಮೃತಿಪುರಾಣೇಷು ಭಾರತೇಷ್ವಾಗಮೇಷ್ವಪಿ ।
ಪಶುಧರ್ಮಾಶ್ಚ ಮುನಿಭಿಃ ಪ್ರೋಕ್ತಾಸ್ಸಂಸಾರದಾಯಕಾಃ ॥೨೯॥

---

ಅನಂತರ ನಂದಿಕೇಶನೇ ಮೊದಲಾದ ಶಿವಗಣಗಳು ಕ್ರೌಂಚಾರಿಯಾದ ಸ್ಕಂದನನ್ನು ಕುರಿತು ಹೀಗೆ ಪ್ರಾರ್ಥಿಸಿಕೊಂಡರು.—"ಸ್ವಾಮಿಯೇ, ಜೈಗೀಷವ್ಯಮಹಾಮುನಿಯ ತಪಸ್ಸಿಗೆ ಮೆಚ್ಚಿದ ಶಂಕರನು, ನಿನ್ನಲ್ಲಿ ಶಿವರಹಸ್ಯವನ್ನು ತಿಳಿದುಕೊಳ್ಳಲು ಈ ಋಷಿಯನ್ನು ಇಲ್ಲಿಗೆ ಕಳುಹಿಸಿದನಷ್ಟೆ. ಹಾಗೆಯೇ ನಿನ್ನ ಬಾಯಿಂದ ಬರುವ ಶಿವರಹಸ್ಯಾತ್ಮಕವಾದ ಅಮೃತಬಿಂದುಗಳನ್ನು ಪಾನಮಾಡುವಂತೆ ಹೇಳಿ ನಮ್ಮನ್ನೂ ಇಲ್ಲಿಗೆ ಕಳುಹಿಸಿರುವನು. ನೀನು ಹಿಂದೆ ಪಾರ್ವತಿಯ ತೊಡೆಯ ಮೇಲೆ ಕುಳಿತು ಶಿವಪ್ರೋಕ್ತವಾದ ರಹಸ್ಯತತ್ತ್ವಗಳನ್ನೆಲ್ಲಾ ಚೆನ್ನಾಗಿ ಅರಿತಿರುವೆಯಲ್ಲವೆ? ॥೨೫-೨೬-೨೭॥

ಈ ದ್ವಾದಶಾಂಶಯುತವಾದ ಶಿವರಹಸ್ಯವು ಸಾಕ್ಷಾಚ್ಛಿವನಿಂದಲೇ ಜಗನ್ಮಾತೆಯಾದ ಗೌರೀದೇವಿಗೆ ಹೇಳಿರೋಣದರಿಂದ, ಅದು ಮೊದಲೇ ಪವಿತ್ರವೆನಿಸಿಕೊಂಡಿದೆ. ಈ ಶಿವರಹಸ್ಯವು ಅಜ್ಞಾನಿಗಳ ಬಂಧನಗಳನ್ನು ತಪ್ಪಿಸಿ, ಅವರಿಗೆ ಮುಕ್ತಿಯನ್ನು ದೊರಕಿಸುವುದರ ಮೂಲಕ ಸಕಲ ಪಾಪಭೇದಕವಾಗುವುದರಲ್ಲಿ ಸಂದೇಹವಿಲ್ಲ. ॥೨೮॥

ವೇದ, ಧರ್ಮಶಾಸ್ತ್ರ, ಪುರಾಣಗಳು, ಭಾರತ, ಇನ್ನೂ ಶಾಸ್ತ್ರಾಂತರಗಳು ಇವುಗಳಲ್ಲಿಯೂ ಅನೇಕಧರ್ಮಗಳನ್ನು ಋಷಿಗಳು ವಿವರಿಸಿರುವರು. ಆದರೆ ಅವೆಲ್ಲವೂ

ಪತಿಧರ್ಮೈಕಕಥನಂ ವಿಮುಕ್ತಿದಮುಮಾಪತಿಃ ।
ವೇದವೇದಾಂತಸಾರೋತ್ಥಕಥಾಃ ಪಾಪನಿಕೃಂತನೀಃ ॥೩೦॥

ಕಥಯಾಮಾಸ ತದ್ದೇವ್ಯೈ ರಹಸ್ಯಂ ಶ್ರುತಿಸಂಮಿತಂ ।
ಜಾಬಾಲೋಪನಿಷತ್ಸಾರಂ ಸಾಕ್ಷಾದ್ಧರಮುಖೋದಿತಂ ॥೩೧॥

ತದಂತಿಕಪ್ರದೇಶೇಪಿ ನೈವಾಸ್ಮಾಕಮವಸ್ಥಿತಿಃ ।
ಸಪ್ತಪ್ರಾಕಾರಬಾಹ್ಯೇ ವೈ ಗೋಪುರಾಗ್ರೇ ವ್ಯವಸ್ಥಿತಾಃ ॥೩೨॥

ದೇವ್ಯುತ್ಸಂಗಗತೇನಾದ್ಯ ತ್ವಯಾ ತಚ್ಛ್ರುತಮುತ್ತಮಂ ।
ತದ್ವದಾಸ್ಮಭ್ಯಮಧುನಾ ಗೋಪ್ಯಂ ದೇವೇನ ಕೀರ್ತಿತಂ ॥೩೩॥

---

ಪಶುಧರ್ಮಗಳು, ಅಂದರೆ ಅಜ್ಞಾನಿಗಳಿಗೆ ಸಂಸಾರಸುಖವನ್ನು ಹೆಚ್ಚಿಸುವಂತಹ ಮಾರ್ಗಗಳು. ಅವುಗಳಿಂದ ಐಹಿಕಸುಖಾದಿಗಳು ದೊರಕಬಹುದು. ||೨೯||

ಆದರೆ ಈ ಶಿವರಹಸ್ಯವಾದರೋ ಪರಮಾತ್ಮಸ್ವರೂಪವನ್ನು ತಿಳಿಸಿ, ಅದನ್ನರಿತವರಿಗೆ ಮೋಕ್ಷವನ್ನು ಕೊಡತಕ್ಕದ್ದು. ವೇದವೇದಾಂತಸಾರವನ್ನೆಲ್ಲಾ ಹೇಳುವ ಪಾಪನಿವಾರಕವಾದ ಅನೇಕ ಇತಿಹಾಸಗಳು ಇದರಲ್ಲಿವೆ. ||೩೦||

ಶ್ರುತಿಸಮ್ಮತವಾದ ಈ ಶಿವರಹಸ್ಯವನ್ನು ರಹಸ್ಯವಾಗಿ ದೇವಿಗೆ ಸ್ವಾಮಿಯೇ ಉಪದೇಶಿಸಿರುವನು. ಇದರಲ್ಲಿ ಜಾಬಾಲೋಪನಿಷತ್ತಿನ ಸಾರವೆಲ್ಲಾ ಪರಮೇಶ್ವರನಿಂದಲೇ ಉಕ್ತವಾಗಿದೆ. ||೩೧||

ಪರಮೇಶ್ವರನು ದೇವಿಗೆ ಉಪದೇಶಮಾಡುವ ಕಾಲದಲ್ಲಿ ನಾವು ಶಿವಸನ್ನಿಧಿಯಲ್ಲಿರಲಿಲ್ಲ. ಏಳುಕೋಟೆಗಳ ಹೊರಭಾಗದಲ್ಲಿರುವ ಗೋಪುರಾಗ್ರಭಾಗದಲ್ಲಿ ಕುಳಿತಿದ್ದೆವು. ||೩೨||

ನೀನು ಮಾತ್ರ ದೇವಿಯ ತೊಡೆಯಮೇಲೆ ಕುಳಿತು ಗೋಪ್ಯವಾದ ಆ ಶಿವರಹಸ್ಯವನ್ನೆಲ್ಲಾ ಕೇಳಿರುವೆ. ಆದ್ದರಿಂದ ಅಂತಹ ಶ್ರೇಷ್ಠವಾದ ತತ್ತ್ವವನ್ನು ಈಗ ನಮಗೆ ತಿಳಿಸುವವನಾಗು. ||೩೩||

ಅಪರ್ಣಾಯೈ ಮುದಾ ತತ್ರ ಕೈಲಾಸೇ ಶಂಕರಾಲಯೇ ।
ಹಾರೇಂದ್ರಸ್ಯಾನುಷಂಗೇಣ ಫಣೀಂದ್ರಾಶ್ಚ ಪ್ರಸಾದಿತಾಃ ॥೩೪॥

ಸುರೇಂದ್ರಾಶ್ಚ ಮುನೀಂದ್ರಾಶ್ಚ ಜೈಗೀಷವ್ಯತಪಸ್ಯಯಾ ।
ತ್ವಯಿ ಪ್ರೇಮಾಸ್ಪದೇ ಶಂಭೋಶ್ಶಂಭುನಾ ಪ್ರೇಷಿತಾ ವಯಂ ॥೩೫॥

ಜೈಗೀಷವ್ಯಂ ಪುರಸ್ಕೃತ್ಯ ವದಾಸ್ಮಕಂ ಕೃಪಾನಿಧೇ ।
ನಿಧಾನಭೂತಂ ಸದ್ರತ್ನಂ ಶಿವಧರ್ಮೈಕಸಾದರಂ ॥೩೬॥

ಇತ್ಥಂ ನಂದೀಶವಾಕ್ಯೇನ ಚಂದ್ರೋದಯ ಇವಾಂಬುಧಿಃ ।
ಪ್ರಹರ್ಷಮತುಲಂ ಲೇಭೇ ನಗಾಧೀಶಸುತಾಸುತಃ ॥೩೭॥

ವಚಸಾಹ್ಲಾದಯನ್ ಸರ್ವಾನ್ ಗಣೇಂದ್ರಾನಮರೇಶ್ವರಾನ್ ।
ಮುನೀಶ್ವರಾನ್ ಗಜೇಂದ್ರಾಸ್ಯಂ ಜೈಗೀಷವ್ಯಂ ಮಹಾಮುನಿಂ ॥೩೮॥

ಉವಾಚ ಚಾಗ್ರಜನ್ನತ್ವಾ ಮಹೇಶಶ್ಚಾಂಬಿಕಾಮಪಿ ।
ಗಜಾನನಂ ತದಾಸ್ತೌಷೀತ್ ಸ್ತೋತ್ರೇಣಾಥ ಷಡಾನನಃ ॥೩೯॥

---

ಆಗ ಕೈಲಾಸಪರ್ವತದಲ್ಲಿ ಶಂಕರನ ಗೃಹದಲ್ಲಿದ್ದ ಆದಿಶೇಷನು ಶಂಕರನಿಗೂ, ಪಾರ್ವತಿಗೂ ಹಾರರೂಪವಾಗಿದ್ದುದರಿಂದ ಅದನ್ನು ಕೇಳಿ ಆದಿಶೇಷನು ಧನ್ಯನಾದನು. ॥೩೪॥

ಎಲೈ ಜೈಗೀಷವ್ಯಮುನಿಯೇ, ನೀನು ತಪಸ್ಸಿನಿಂದ ಶಂಕರನನ್ನು ತೃಪ್ತಿಗೊಳಿಸಿದುದರ ಫಲವಾಗಿ, ಈ ಸುರೇಂದ್ರರನ್ನೂ, ಮುನೀಂದ್ರರನ್ನೂ, ನಮ್ಮನ್ನೂ ಶಂಕರನು ಈ ಶಿವರಹಸ್ಯಶ್ರವಣಾರ್ಥವಾಗಿ ಇಲ್ಲಿಗೆ ಕಳುಹಿಸಿರುವನು. ॥೩೫॥

ದಯಾಶಾಲಿಯಾದ ಕುಮಾರಸ್ವಾಮಿಯ್ಯೇ, ಜೈಗೀಷವ್ಯಮುನಿಯ ಅನುಗ್ರಹಕ್ಕಾಗಿ, ಶಿವಧರ್ಮಭೂಯಿಷ್ಠವಾದ ಮತ್ತು ಲೋಕಕ್ಕೆ ಉತ್ತಮರತ್ನಪ್ರಾಯವಾಗಿ ನಿಧಿಯಂತಿರುವ, ಶಿವರಹಸ್ಯವನ್ನು ನಮ್ಮೆಲ್ಲರಿಗೂ ಉಪದೇಶಿಸು." ॥೩೬॥

ಹೀಗೆ ನಂದೀಶ್ವರನು ಕೇಳಿಕೊಳ್ಳಲು, ಗಿರಿಜಾಪುತ್ರನಾದ ಕುಮಾರಸ್ವಾಮಿಯು ಚಂದ್ರೋದಯದಿಂದ ಸಮುದ್ರವು ಹರ್ಷಗೊಳ್ಳುವಂತೆ ಸಂತೃಪ್ತನಾದನು. ॥೩೭॥

ಅಲ್ಲಿದ್ದ ಸಕಲ ದೇವತೆಗಳಿಗೂ, ಗಣನಾಯಕರಿಗೂ ಸಂತೋಷವಾಗುವಂತೆ ಕೆಲವು ಮಾತುಗಳನ್ನಾಡಿ, ಸ್ಕಂದಸ್ವಾಮಿಯು, ಮೊದಲು ಅಣ್ಣನಾದ ಗಣಪತಿಗೂ,

ಕೃತಾಂಜಲಿಪುಟೋ ಭೂತ್ವಾ ಗಣೇಂದ್ರಸುರಭೂಸುರೈಃ ।

॥ ಸ್ಕಂದ ಉವಾಚ ॥

ಪಯೋದಧಿಪಯೋ ಭವದ್ವಿಕಚಪುಷ್ಕರೈಃ ಪುಷ್ಕರಂ ।
ಮದಾಂಧಕರಟತ್ವಚೋ ವಸನಪುತ್ರಮಿಂದ್ರಪ್ರಭಂ ।
ತ್ರಿಪುಂಡ್ರತಿಲಕೋಜ್ಜ್ವಲಂ ದ್ವಿರದವಕ್ತ್ರಕುಂಭೋಜ್ಜ್ವಲಂ ।
ಮಹೇಶಜನಿಮರ್ಚಕಂ ಪ್ರಣತ ವಿಘ್ನರಾಜಂ ಸುರಾಃ ॥೪೦॥

ಸಿಂಧೂರದೂರ್ವಾರ್ಚಿತಕುಂಭಮೌಳಿಂ ।
ಗಂಡಸ್ಥಲೀಲಂಬಿತಚಾಮರೌಘಂ ।
ಕರ್ಣಾವತಂಸೀಕೃತಪದ್ಮಕೋಶಂ ।
ನಮಾಮಿ ವಿಘ್ನಾರ್ತಿಹರಂ ಪ್ರಸನ್ನಂ ॥೪೧॥

ಕರಟಜಮದಧಾರಾಗಂಧಸಂದೋಹಬಂಧ ।
ದ್ವಿಜದಲಿಕುಲಮಾಲಂ ಕರ್ಣಸಂಪೀತತೋದ್ಯೈಃ ।

---

ಅನಂತರ ಮಾತಾಪಿತೃಗಳಾದ ಪಾರ್ವತೀಪರಮೇಶ್ವರರಿಗೂ ವಂದಿಸಿ, ಶಿವರಹಸ್ಯ ಪ್ರಾರಂಭದಲ್ಲಿ ಸಿದ್ಧಿವಿನಾಯಕನನ್ನು ಈರೀತಿಯಾಗಿ ಪ್ರಾರ್ಥನೆಮಾಡತೊಡಗಿದನು. ॥೩೮-೩೯॥

ಗಣಪತಿಯ ಪ್ರಾರ್ಥನೆಯ ಕಾಲದಲ್ಲಿ ಪ್ರಮಥಗಣಗಳೂ, ಅಲ್ಲಿ ನೆರೆದಿದ್ದ ದೇವರಾಕ್ಷಸರೂ ಸಹ ಅಂಜಲಿಬದ್ಧರಾಗಿದ್ದರು. ಈ ಸನ್ನಿವೇಶದಲ್ಲಿ ಸ್ಕಂದಸ್ವಾಮಿಯು, “ ಕ್ಷೀರಸಮುದ್ರದಲ್ಲಿ ಬೆಳೆದು ಅರಳಿರುವ ಕಮಲಗಳನ್ನು ಸೊಂಡಲಿನಲ್ಲಿ ಧರಿಸಿ, ಮದ್ದಾನೆಯ ಚರ್ಮವನ್ನು ಹೊದ್ದಿರುವ ಪರಮೇಶ್ವರನ ಪುತ್ರನೆನಿಸಿರುವ ಗಣಪತಿಯು, ಸದಾ ಇಂದ್ರನೀಲದಂತೆ ಹೊಳೆಯುತ್ತಿರುವನು. ಸರ್ವದಾ ಹಣೆಯಲ್ಲಿ ತ್ರಿಪುಂಡ್ರವನ್ನೂ, ತಿಲಕವನ್ನೂ ಧರಿಸಿಕೊಂಡಿರುವನು. ಆನೆಯಂತೆ ಮುಖವನ್ನೂ ಕುಂಭಸ್ಥಳವನ್ನೂ ಹೊಂದಿ ವಿರಾಜಿಸುತ್ತಿರುವನು. ಇಂತಹ ಮಹೇಶ್ವರನ ಪುತ್ರನೂ ಭಕ್ತವಿಘ್ನನಿವಾರಕನೂ ಆದ ವಿಘ್ನರಾಜನನ್ನು, ಎಲೈ ದೇವತೆಗಳಿರಾ, ನಮಸ್ಕರಿಸಿರಿ, ॥೪೦॥

ವಿಘ್ನೇಶ್ವರನ ಕುಂಭಸ್ಥಳವು ಸಿಂಧೂರ(ಚಂದ್ರ) ಚೂರ್ಣದಿಂದಲೂ ಗರಿಕೆಯ ಹುಲ್ಲುಗಳಿಂದಲೂ ಪೂಜಿಸಲ್ಪಟ್ಟಿದೆ. ಕಿವಿಯಮೇಲಿರುವ ಎರಡು ಚಾಮರಗಳು

ಭಜತ ನಿಗಮಸಾರಂ ನಾಗಯಜ್ಞೋಪವೀತಂ ।
ಪಶುಪತಿವರಪುತ್ರಂ ವಿಘ್ನರಾಜಂ ನತೋಽಸ್ಮಿ ॥೪೨॥

ಸೃಣಿಪರಶುಕರಾಬ್ಜಂ ನೌಮಿ ವಿಜ್ಞಾನಹೇತುಂ ।
ಗಣಪತಿಮಗಜಾಂತಃಪ್ರೇಮಧಾರಾರಸಾಪ್ತಂ ।
ಫಲಕುಲಗುಡಮಾದ್ಯಂ ಮೋದಕೌಘಪ್ರಿಯಂ ತ್ವಾಂ ।
ಪಶುಪತಿವರಪುತ್ರಂ ನೌಮಿ ನಾಗೇಂದ್ರವಕ್ತ್ರಂ ॥೪೩॥

ಆಖುವಾಹಮಜಶೌರಿಸುರೇಶೈ
ಸ್ಸಿಂಧುರೇಂದ್ರವದನಂ ಮುನಿವಂದ್ಯಂ ।
ವೇದಬೃಂದನಿವಹೈಸ್ಸ್ತುತಮಾದ್ಯಂ
ಗದ್ಯಪದ್ಯವಚಸಾ ಪ್ರಣತೋಽಸ್ಮಿ ॥೪೪॥

---

ಗಂಡಸ್ಥಲದಲ್ಲಿ ತೂಗಾಡುತ್ತಿವೆ. ಕಮಲದ ಮೊಗ್ಗುಗಳು ಕರ್ಣಾಭರಣಗಳಂತಿವೆ. ಇಂತಹ ಪ್ರಸನ್ನಾಕಾರವುಳ್ಳ ವಿಘ್ನೇಶ್ವರನನ್ನು ನಾನು ನಮಸ್ಕರಿಸುತ್ತೇನೆ. ॥೪೧॥

ಗಜಮುಖನಾದ ವಿಘ್ನೇಶ್ವರನ ಕುಂಭಸ್ಥಳದಿಂದ ಸುವಾಸನೆಯುಳ್ಳ ಮದೋದಕವು ಸುರಿಯುತ್ತಿರುವಾಗ, ಅದರ ಗಂಧವನ್ನು ಪಾನಮಾಡಲು ಆಸಕ್ತಿಯಿಂದ ಭ್ರಮರಗಳ ಗುಂಪು ಅಲ್ಲಿ ನೆರೆದಿರುತ್ತದೆ. ಆಗ ಕಿವಿಯ ಚಲನೆಯಿಂದ ಆ ಭ್ರಮರಗಳು ಚೆದುರಿ ಇಂಪಾದ ಧ್ವನಿಗೈಯ್ಯುತ್ತಾ ಹಾರಾಡುತ್ತವೆ. ಇಂತಹ ವೇದಸಾರಸರ್ವಸ್ವನೂ, ಸರ್ಪವನ್ನೇ ಯಜ್ಞೋಪವೀತವನ್ನಾಗಿ ಮಾಡಿಕೊಂಡಿರುವವನೂ, ಪಶುಪತಿಪುತ್ರನೂ ಆದ ಮಹಾಗಣಪತಿಯನ್ನು ನಮಸ್ಕರಿಸುವೆನು. ॥೪೨॥

ಪಾಶ, ಪರಶು, ಕಮಲ ಇವುಗಳನ್ನು ಕೈಯ್ಯಲ್ಲಿ ಹಿಡಿದು, ವಿಜ್ಞಾನಪ್ರದನಾದ ಗಣಪತಿಯು, ಪಾರ್ವತಿಯ ಪ್ರೇಮಧಾರೆಗೆ ಸಂಪೂರ್ಣ ಪಾತ್ರನಾಗಿರುವನು. ಹಣ್ಣುಗಳು, ಬೆಲ್ಲ, ಕಡುಬು ಮುಂತಾದ ಭೋಜ್ಯವಸ್ತುಗಳಲ್ಲಿ ಆಸಕ್ತಿಯಿಂದಿರುವ ಪಶುಪತಿವರಪುತ್ರನಾದ ಗಜಾನನಸ್ವಾಮಿಯನ್ನು ವಂದಿಸುವೆನು. ॥೪೩॥

ಇಲಿಯನ್ನೇ ವಾಹನವನ್ನಾಗಿ ಮಾಡಿಕೊಂಡು, ಬ್ರಹ್ಮ, ವಿಷ್ಣು, ಇಂದ್ರ ಇವರೇ ಮೊದಲಾದ ದೇವಶ್ರೇಷ್ಠರಿಂದ ಪೂಜಿತನಾಗಿರುವವನು ವಿಘ್ನೇಶ್ವರನು. ವೇದಗಳೆಲ್ಲಾ ಇಂದಿಗೂ ಮೊದಲು ಇವನನ್ನೇ ಹೊಗಳುತ್ತಿವೆ. ಇಂತಹ ವಿನಾಯಕನನ್ನು ಗದ್ಯ, ಪದ್ಯ ವಚನಗಳಿಂದ ಸ್ತುತಿಸುವೆನು. ॥೪೪॥

**ಜೈಗೀಷವ್ಯಂ ಮುನಿಶ್ರೇಷ್ಠಂ ಶಿಷ್ಯಂ ಶಿವಸಂಮಿತಂ ।**
**ಸ್ಕಂದೋಽಗ್ರಜಸ್ಯಾನುಮತೇಶ್ಶಿವಯೋಃ ಪ್ರಾಹ ತನ್ಮತಂ ॥೪೫॥**

॥ ಸ್ಕಂದ ಉವಾಚ ॥

**ಈಶಾನಾಂಬುನಿಧೇಸ್ಸಶೀಕರಗಣಾ ಬ್ರಹ್ಮೇಂದ್ರನಾರಾಯಣಾ ।**
**ಸ್ತೇ ಶಕ್ತ್ಯಾದಿಮರುತ್ಪ್ರಚಾರಚಲಿತಾಸ್ತತ್ಸೂನುಜಾಸ್ಸೃಷ್ಟಯಃ ।**
**ತತ್ಸೂನುಪ್ರಭವಾ ನೃಪಾದಯ ಇಮೇ ಕಿಂ ತತ್ಕಥಾಭಿಃ ಫಲಂ**
**ಸಂಪ್ರಾಪ್ನೋತಿ ವಿಸೃಷ್ಟಯೋಽತ್ರ ಹಿ ಮಹಾಭೂತಾದಿಭಿಸ್ತಾ ಮೃಷಾ ॥೪೭॥**

**ಮಿಥ್ಯಾಭೂತಜಗತ್ಪ್ರಚಾರವಿಹಿತೋ ಧರ್ಮೋಽತ್ರ ವರ್ಣಾಶ್ರಮಾ**
**ಪಾರಾವಾರವಿಚಾರಸಾರಹೃದಯಾಸ್ತೇಷಾಂ ಶ್ರಮಃ ಕೇವಲಂ ।**
**ಕಿಂ ತಚ್ಚರ್ವಿತಚರ್ವಣೇನ ವಿದುಷಾಂ ವಿದ್ಯೋದ್ಭವೋ ಜಾಯತೇ ।**
**ಯಂ ಧರ್ಮೋಽತ್ರಮಮಾನನಂತಿ ತಪಸಾ ಸಂವೇದ್ಯ ಏಕಶ್ಶಿವಃ ॥೪೮॥**

---

ಎಂದು ಸ್ತುತಿಸಿ, ಕುಮಾರಸ್ವಾಮಿಯು ಅಣ್ಣನಾದ ಮಹಾಗಣಪತಿಯ ಅನುಮತಿಯನ್ನು ಪಡೆದು, ಮುನಿಶ್ರೇಷ್ಠನೂ, ಶಿವನ ಮೆಚ್ಚಿಗೆಯನ್ನು ಪಡೆದಿರುವವನೂ, ಶಿಷ್ಯನೂ ಆದ ಜೈಗೀಷವ್ಯಮುನಿಗೆ ಪಾರ್ವತೀಪರಮೇಶ್ವರರಿಂದ ಪ್ರಕಾಶಿತವಾದ ಶಿವರಹಸ್ಯವನ್ನು ಹೇಳತೊಡಗಿದನು. ॥೪೫॥

ಪರಮೇಶ್ವರನೆಂಬುವನೇ ಒಂದು ದೊಡ್ಡ ಸಮುದ್ರವಾದರೆ, ಅದರ ಒಂದೊಂದು ಹನಿಗಳಂತೆ ಬ್ರಹ್ಮ, ಇಂದ್ರ, ನಾರಾಯಣಾದಿಗಳು ಜಗತ್ತಿನಲ್ಲಿ ಕಂಡುಬರುವರು. ಅವರು ಶಿವಶಕ್ತಿಯೆಂಬ ಗಾಳಿಯಿಂದ ಚಲನವಲನಗಳನ್ನು ಪಡೆದು ಸಂಚರಿಸುತ್ತಿರುವರು. ಅಂತಹವರ ಪುತ್ರರಿಂದ ಸೃಷ್ಟವಾದದ್ದು ಈ ಜಗತ್ತು. ಈ ರಾಜರುಗಳೆಲ್ಲಾ ಆ ಸೃಷ್ಟಿಗೆ ಸೇರಿದವರುಗಳು. ಇಂತಹವರ ಕಥೆಗಳು ಎಷ್ಟರಮಟ್ಟಿಗೆ ಫಲಪ್ರದಗಳಾಗುವುವು? ಪಂಚಮಹಾಭೂತಗಳಿಂದ ಸೃಷ್ಟವಾಗಿರುವ ಈ ಜಗತ್ತು ಎಂದಾದರೊಂದು ದಿನ ನಾಶವಾಗಿಯೇ ಆಗುವುದು. ಇದು ವ್ಯಾಪ್ತಿಯಲ್ಲವೆ? ಇಂತಹ ಜಗತ್ತಿನ ರಾಜರ ಕಥೆಯು ಹೇಗೆ ಸ್ಥಿರವೆನಿಸೀತು? ॥೪೭॥

ಈ ಜಗತ್ತು ಮಿಥ್ಯಾಭೂತವಾದದ್ದು. ಈ ಮಿಥ್ಯಾಜಗತ್ತು ನಡೆಯುವಾಗ ವರ್ಣಾಶ್ರಮಾದಿ ಧರ್ಮಗಳು ಹುಟ್ಟುತ್ತವೆ. ಇಂತಹ ಮಿಥ್ಯಾಜಗತ್ತಿನಲ್ಲಿ ಆವಿರ್ಭವಿಸುವ ಈ ಧರ್ಮಗಳಿಗಾಗಿ ಅನೇಕ ಚರ್ಚೆಗಳನ್ನು ನಡೆಸಿ ಪಂಡಿತರಾದವರು

ಜೈಗೀಷವ್ಯಮುಖಾಶ್ಚ ಭೂಸುರಗಣಾ ಯೂಯಂ ಗಣಾಶ್ಶಾಂಕರಾ ।
ವಿಷ್ಣುಬ್ರಹ್ಮಸುರೇಶ್ವರಾ ಮುನಿಗಣಾಶ್ಶ್ರೀಮದ್ಗಣೇಶಾಗ್ರತಃ ।
ವಕ್ಷ್ಯೇ ತಚ್ಛಿವಯೋರಪಾರಚರಿತಂ ಕೈಲಾಸಮುತ್ಕಾದರಾ ।
ದಪ್ರಾಪ್ಯಂ ತ್ವತಿದುರ್ಧಿಯಾಂ ಚ ಸುಧಿಯಾಂ ಶ್ರೀಮನ್ಮಹೇಶಾಲಯಂ ॥

ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ಸ್ಕಂದಶಿವಗಣಸಂವಾದೋ ನಾಮ ನವಮೋಽಧ್ಯಾಯಃ

---

ವೃಥಾ ಶ್ರಮಪಡುತ್ತಿರುವರು. ಅಲ್ಲದೆ ಅದನ್ನೇ ಪುನಃ ಪುನಃ ಹೇಳುತ್ತಾ ಪ್ರಚಾರ ಮಾಡುತ್ತಿರುವರು. ಅದನ್ನು ಮತ್ತೆ ಇಲ್ಲಿ ಒತ್ತಿ ಹೇಳುವುದು ಚರ್ವಿತಚರ್ವಣವೆನಿಸುವುದು. ವಿದ್ಯಾವಂತರೆಲ್ಲರೂ ಅದನ್ನು ತಿಳಿಯಬಹುದು. ನಿಜವಾದ ಜ್ಞಾನಿಗಳು ಅನೇಕಕಾಲ ತಪಸ್ಸನ್ನಾಚರಿಸಿ ಸಂಪಾದಿಸಿರುವ ಉತ್ತಮಜ್ಞಾನವೆಂದರೆ " ಶಿವನೆಂಬವನು ಒಬ್ಬನೇ. ಆತನೇ ಸತ್ಯಸ್ವರೂಪನು " ಎಂಬುದೇ. ಇದೇ ನಿಜವಾದ ಜ್ಞಾನ. ಇದನ್ನರಿಯುವುದೇ ನಿಜವಾದ ಧರ್ಮ. ||೪೮||

ಎಲೈ ಜೈಗೀಷವ್ಯಪ್ರಮುಖರಾದ ಮಹರ್ಷಿಗಳೇ, ಶುಶ್ರೂಷಾಸಕ್ತರಾದ ವಿಪ್ರೋತ್ತಮರೇ, ಶಿವಭಕ್ತಧುರಂಧರರೇ, ಬ್ರಹ್ಮೇಂದ್ರವಿಷ್ಣುಗಳೇ, ಮಹರ್ಷಿಶ್ರೇಷ್ಠರೇ, ಈಗ ಮಹೇಶ್ವರನು ವಾಸಮಾಡತಕ್ಕ, ಅಪಾರವಾದ ಮಹಿಮೆಯುಳ್ಳ ಕೈಲಾಸಪರ್ವತದ ವಿಷಯವಾಗಿ ಗಣಾಧಿಪತಿಯ ಎದುರಿನಲ್ಲಿ ಕೆಲವು ವಿಷಯಗಳನ್ನು ನಿಮಗೆ ತಿಳಿಸುವೆನು. ಆ ಕೈಲಾಸಪರ್ವತವು ದುರ್ಬುದ್ಧಿಯುಳ್ಳವರಿಗೂ, ಸನ್ಮಾರ್ಗದಲ್ಲಿರುವವರಿಗೂ ಸಹ ಹೊಂದಲಸಾಧ್ಯವಾದದ್ದು. ||೪೯||

ಇಲ್ಲಿಗೆ ಶಿವರಹಸ್ಯದ ಪ್ರಥಮಾಂಶದಲ್ಲಿ ಶಿವಗಣಗಳ ಸಂವಾದವೆಂಬ ಒಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

# ಅಥ ಶ್ರೀಶಿವರಹಸ್ಯೇ

## ದಶಮೋಽಧ್ಯಾಯಃ

### ಜೈಗೀಷವ್ಯಸ್ಕಂದಸಂವಾದಃ

॥ ಸ್ಕಂದ ಉವಾಚ ॥

**ಶಿವಪಾದಾರವಿಂದಶ್ರೀರ್ಯಾಶ್ರಿಯಂ ಶ್ರೀಪತಿಂ ವಿಧಿಂ ।**
**ಇಂದ್ರಂ ಚಂದ್ರಂ ಸುರಾನನ್ಯಾನುತ್ಪಾದಯತಿ ಸಾ ಶಿವಾ ॥೧॥**

**ಡುಂಡಿಂ ಚ ನಂದಿಕೇಶಂ ಚ ತಥಾ ಭೃಂಗಿರಿಟಿಂ ಮುನಿಂ ।**
**ಮಾರ್ಕಂಡೇಯಂ ದಧೀಚಿಂ ಚ ದೂರ್ವಾಸಂ ಜಾಮದಗ್ನಿಕಂ ॥೨॥**

**ಜಯ ಜಯ ಮಂಗಳತರಸುಂದರತಮಮಂಗಲಾಪತೇ**
**ಜಯ ಜಯ ವಿಶ್ವವಿಧಾನಸಂಸ್ಥಿತಿನಿಧನಶಿಕ್ಷಣಚಣ**

---

### ಶ್ರೀಶಿವರಹಸ್ಯದಲ್ಲಿ ಹತ್ತನೆಯ ಅಧ್ಯಾಯ

ಶಿವಾ, ಗೌರೀ, ಎಂಬುದು ಶಿವಪಾದದ ಶಕ್ತಿಯು. ಅದನ್ನೇ ಪ್ರಕೃತಿ, ಮಾಯಾ, ಮುಂತಾದ ಶಬ್ದಗಳಿಂದ ಬೇರೆ ಬೇರೆ ಮತದವರು ಬೇರೆ ಬೇರೆಯಾಗಿ ಹೇಳುವರು. ಆಶಕ್ತಿಸಂಪರ್ಕದಿಂದಲೇ ಶಂಕರನು ನಾನಾರೂಪದಲ್ಲಿ ಕಾಣುವನು. ಲಕ್ಷ್ಮೀ, ನಾರಾಯಣ, ಬ್ರಹ್ಮ, ಇಂದ್ರ, ಇನ್ನೂ ಉಳಿದ ದೇವತೆಗಳು, ಡುಂಡಿ, ನಂದೀಶ್ವರ, ಭೃಂಗಿ, ರಿಟಿ, ಮಾರ್ಕಂಡೇಯ, ದಧೀಚಿ, ದೂರ್ವಾಸ, ಜಾಮದಗ್ನಿ ಮುಂತಾದವರೆಲ್ಲರೂ ಆಶಕ್ತಿಯ ಪ್ರಭಾವದಿಂದ ಜನಿಸಿದವರೇ. ॥೧-೨॥

ಸೌಮಂಗಲ್ಯಗಳಿಗೆ ಆಶ್ರಯದಾತಳಾಗಿ, ಸೌಂದರ್ಯದಿಂದ ವಿರಾಜಿಸುವ ಗೌರೀ ಪತಿಯೇ ನಿನಗೆ ಜಯವಾಗಲಿ. ಎಲೈ ಪರಶಿವನೇ ನೀನು ಲೋಕದ ಸೃಷ್ಟಿ, ಸ್ಥಿತಿ, ಲಯಗಳೆಂಬ ಕಾರ್ಯಗಳನ್ನು ನಡೆಸಲು ಸಮರ್ಥನಾದವನು. ಮನೋಹರವಾದ ಗಜಚರ್ಮಾಂಬರಧಾರಿಯೇ, ಮುನಿಸಮೂಹಗಳಿಂದ ವಂದಿತನಾದವನೇ, ನೀನು

**ಬಂಧುತರ ಸುಂದರವರಕೃತ್ತಿವಸನ ಮುನಿಬೃಂದವಿನುತ**
**ನಿಂದಿತಮುಖಸಂಹೃತೇ ಸುರನಂದಿತಗಣ ಪುರಮಾರಕ**
**ಭವಶೋಷಣ ಗರಲಾಶನ ಶಮನಭಯಕಂಪಿತ**
**ಮುನಿಪೋತಕಶರಣ ಅರುಣಾಧಿಪ ಕರುಣಾಕರ ಜನ**
**ತಾರಣ ತರಣಿಸ್ಥಿತ ಸುರಕಾರಣ ಮಾರಶೋಷಣ**
**ತ್ರಿಗುಣ ನಿಗಮಗಣಪೋಷಣಚರಣ ಶರಣಂ ಭವ**
**ಶರಣಂ ಭವ ಶರಣಂ ಭವ ದಯಯಾ** ॥೩॥

**ನಿಗಮಾಗಮವಚನಾತಿಗ ಯಮಿಮಾನಸಗಗನಾಂತರ**
**ಗಗನಾಂತರವಯುನಸ್ಥಿತಿಸುರಕಾರಣ ಮಾರಶೋಷಣ**

---

ಶಿವದೂಷಣೆಯಿಂದ ನಿಂದಿತವಾದ ದಕ್ಷಬ್ರಹ್ಮನ ಯಾಗವನ್ನು ನಾಶಮಾಡಿದವನಲ್ಲವೇ, ನಿನ್ನ ಪ್ರಮಥಗಣಗಳೆಲ್ಲವೂ ಸಕಲ ದೇವತೆಗಳನ್ನು ಆನಂದಗೊಳಿಸಿವೆ. ತ್ರಿಪುರಗಳನ್ನು ಧ್ವಂಸಮಾಡಿ, ಸಂಸಾರಸಂಬಂಧವಾದ ದುಃಖಗಳನ್ನು ನಿವಾರಿಸಿ, ಲೋಕನಾಶಕವಾಗಿದ್ದ ವಿಷವನ್ನು ನುಂಗಿ, ಲೋಕೋಪಕಾರಮಾಡಿರುವೆಯಲ್ಲವೇ! ಯಮನ ಭಯದಿಂದ ನಡುಗುತ್ತಿದ್ದ ಮೃಕಂಡುಮುನಿಯ ಪುತ್ರನಾದ ಮಾರ್ಕಂಡೇಯನನ್ನು ರಕ್ಷಿಸಿದವನು ನೀನಲ್ಲವೇ! ಅರುಣನನ್ನೇ ಸಾರಥಿಯನ್ನಾಗಿ ಉಳ್ಳ ಸೂರ್ಯಾತ್ಮಕನಾಗಿರುವವನೇ, ದಯಾಸಮುದ್ರನೇ, ಭಕ್ತಜನರನ್ನು ಉದ್ಧರಿಸುವವನೇ, ಸೂರ್ಯಮಂಡಲದಲ್ಲಿದ್ದು ಸಮಸ್ತ ದೇವತೆಗಳ ಉತ್ಪತ್ತಿಗೂ ಕಾರಣನಾಗಿರುವ ಭಗವಂತನೇ, ಮನ್ಮಥನನ್ನು ನಾಶಮಾಡಿ, ಸತ್ವರಜಸ್ತಮೋಗುಣಗಳಿಂದ ಆವಿರ್ಭವಿಸಿರುವ ಪ್ರಾಣಿರಾಶಿಯನ್ನು ರಕ್ಷಿಸಬಲ್ಲ ಮಹಾತ್ಮನೇ, ಶಂಕರನೇ, ನೀನು ಕೃಪಾದೃಷ್ಟಿಯಿಂದ ನಮ್ಮನ್ನು ರಕ್ಷಿಸು. ನಮಗೆ ಆಶ್ರಯವನ್ನು ನೀಡು. ನೀನೇ ನಮಗೆ ಶರಣನು. ॥೩॥

ಸಮಸ್ತ ವೇದಶಾಸ್ತ್ರಗಳಿಗೂ ದೂರನಾಗಿರುವವನೇ, ಯಮಾದ್ಯಷ್ಟಾಂಗ ಯೋಗಗಳಲ್ಲಿ ನಿರತರಾಗಿರುವ ಯೋಗಿಗಳ ಹೃದಯಾಕಾಶದಲ್ಲಿ ನೆಲಸಿರುವವನೇ, ಆಕಾಶಮಾರ್ಗದಲ್ಲಿ ಸಂಚರಿಸುವ ಸಕಲ ದೇವತೆಗಳಿಗೂ ರಕ್ಷಕನಾಗಿರುವವನೇ, ನೀನು ಮನ್ಮಥನನ್ನು ಧ್ವಂಸಮಾಡಿದ್ದರಿಂದಲೇ ಸಂಸಾರದ ದುಃಖಗಳನ್ನು ಹೊಂದದವನಾಗಿರುವೆ. ಶ್ರೇಷ್ಠವಾದ ಆದಿಶೇಷನನ್ನೇ ಹಾರವನ್ನಾಗಿ ಮಾಡಿಕೊಂಡಿರುವೆ.

**ಭವನಾಶನ ವರಹಾರಕ ದಹನಾಮಲನಯನ ಮನಸಾತಿಗ
ವೃಷವಾಹನಗಮನ, ಭವನಾಶನ, ವಸಿತಾಶಕ, ಸುರಭೂಸು
ರನಿಕರಾವನ, ಪಿತೃಕಾನನವಿಹೃತೇ, ದಹರಾಕೃತಿಕುಹರಾತಿಗ,
ವರಭೂಧರಶಯನ, ಖರಶೀತಜಕರಸಂಸ್ಥಿತ, ಮುರಭೇದನ
ಶರಧಾರಣ ಪುರನಾಶನ ನಿಗಮವ್ರಜತುರಗೋತ್ತಮ,
ಉರಗಾಧಿಪಕೃತಶಿಂಜಿನೀವರಕಾರ್ಮುಕ, ಮೃಗಧೃಕ್, ಕುಲಿ
ಶಾಯುಧಮುಖದೈವತಭಟರಕ್ಷಣಚತುರ ಶರಣಂ ಭವ
ಶರಣಂ ಭವ ಶರಣಂ ಭವ ದಯಯಾ ॥೪॥**

**ದಹನಾನಿಲತಪನಾಮರವರಭೂಸುರಜಲನಾಯಕಶಮನೈಃ ಕೃತ
ವಿನತೇ ಕಲಿತಾಖಿಲಚರಜಂಗಮಜಗತಾಮವನ ಜನನಾದಿಕ
ಲಲಿತೋತ್ತಮಚರಿತ ಭರಿತಾನತವರತಾತ ಜನತಾತತತಾಪ
ಹೃತೇ ವಿನತಾತ್ಮಜವಹನಾರ್ಚನಜನಿತಾತುಲದಯಯಾ**

---

ಅಗ್ನಿನೇತ್ರನಾಗಿ, ಮನಸ್ಸಿಗೆ ಸಿಕ್ಕದವನಾಗಿ, ವೃಷಭಾರೂಢನಾಗಿರುವ ಪರಮೇಶ್ವರನೇ, ನೀನು ಭವನಾಶಕನು. ದಿಗಂಬರನು. ದೇವತೆಗಳ ಮತ್ತು ಭೂಸುರರ ಗುಂಪನ್ನು ರಕ್ಷಿಸುವವನು. ಸ್ಮಶಾನವಾಸಿಯು. ಭಯಂಕರವಾದ ಪ್ರಳಯಕಾಲಾಗ್ನಿಗಿಂತಲೂ ತೇಜಸ್ವಿಯಾದವನು. ನಿನಗೆ ಮೇರುಪರ್ವತವೇ ಶಯನವಾಗಿದೆ. ಉಷ್ಣ ಶೀತ ಕಿರಣದ ಸೂರ್ಯಚಂದ್ರರನ್ನು ತನ್ನಲ್ಲಿಯೇ ಇಟ್ಟುಕೊಂಡಿರುವೆ. ಮುರಾರಿಯಾದ ವಿಷ್ಣುವನ್ನೇ ಬಾಣವನ್ನಾಗಿ ಮಾಡಿಕೊಂಡಿರುವೆ. ತ್ರಿಪುರಗಳನ್ನು ನಾಶಪಡಿಸಿದವನು ನೀನು. ಆ ಕಾಲದಲ್ಲಿ ವೇದಗಳೇ ನಿನ್ನ ರಥದ ನಾಲ್ಕು ಕುದುರೆಗಳಾಗಿದ್ದುವು. ಆದಿಶೇಷನೇ ನಿನ್ನ ಧನುಸ್ಸಿಗೆ ಮೌರ್ವಿಯಾಗಿದ್ದನು. ಜಿಂಕೆಯನ್ನೇ ಯಾವಾಗಲೂ ಧರಿಸಿಕೊಂಡಿರುವೆ. ವಜ್ರಪಾಣಿಯಾದ ಇಂದ್ರನೇ ಮೊದಲಾದವರನ್ನು ಸಂರಕ್ಷಿಸುವುದರಲ್ಲಿ ಸಮರ್ಥನಾದವನೇ, ನೀನು ನಮಗೆ ಶರಣನಾಗಿರು. ನಮ್ಮನ್ನು ರಕ್ಷಿಸು. ದಯೆಯಿಂದ ನಮ್ಮನ್ನು ಕಾಪಾಡು. ॥೪॥

ಪರಮೇಶ್ವರನೇ, ನಿನ್ನನ್ನು ಅಗ್ನಿ, ವಾಯು, ಸೂರ್ಯ, ಇಂದ್ರ, ಇನ್ನೂ ಸಮಸ್ತಬ್ರಾಹ್ಮಣರು, ವರುಣ, ಯಮ ಮೊದಲಾದವರೆಲ್ಲರೂ ಸರ್ವದಾ ನಮಸ್ಕರಿಸುತ್ತಲೇ ಇರುವರು. ಸೃಷ್ಟವಾದ ಸ್ಥಾವರಜಂಗಮಾತ್ಮಕವಾದ ಜಗತ್ತನ್ನೆಲ್ಲಾ

ವಿಕಚಾಂಬುಜನಿಭಲೋಚನರಥಸಂವಹನಪ್ರದ ವಿಧಿಮೌಲಿ
ಜಫಲಕಾಮಲಶಯಭೂಷಿತ ಭಗವನ್ ಪವನಾನಲವಲಮಾ
ರಣಬಲಶೋಷಣ ತೃಣಚಾಲನಮಪಿ ಕೃತೇ ಕೃಣುತೇ
ನ ಹಿ ನಿಖಿಲಾಗಮಶಿರಸಂಸ್ತುತಚರಿತ ಶರಣಂ ಭವ
ಶರಣಂ ಭವ ಶರಣಂ ಭವ ದಯಯಾ ॥೫॥

ವರುಣಾಲಯಮಥನೋದ್ಭವಗರಲೋತ್ಥಿತಮಹಸಾ
ಸುರಕಿನ್ನರಹರವಲ್ಗನ ಹರಿಸಾಯಕ ರಭಸಾ ಕಬಲೀ
ಕೃತಗರಸಂಭವನಲಿನಾಮಲಶುಭಕಂಧರ ಜಲದೋ
ಪಮ ಭಗವನ್ ಮಧುಮಾರಣನಯನಾಮಲನಲಿನಾರ್ಚಿ
ತಪದಪಂಕಜ ಲುಲಿತಾಂಬುಧಿಚುಲುಕೀಕೃತಘಟ

---

ರಕ್ಷಿಸುವವನೇ, ಜನನಾದಿಯಾಗಿ ಕಂಡುಬರುವ ಸಮಸ್ತ ಲಲಿತಕಲೆಗಳಲ್ಲಿಯೂ ನಿಪುಣನೆನಿಸಿರುವವನೇ, ಭಕ್ತರನ್ನು ತಂದೆಯಂತೆ ಉದ್ಧರಿಸುವವನೇ, ನೀನು ಭಕ್ತ ಜನರ ಸಮೂಹಕ್ಕೆ ಆಗಾಗ ಒದಗುವ ಸಕಲ ಸಂತಾಪಗಳನ್ನೆಲ್ಲಾ ನಾಶಮಾಡುತ್ತಿರುವೆಯಲ್ಲವೆ? ಗರುಡವಾಹನನಾದ ವಿಷ್ಣುವಿನಿಂದ ಅರ್ಚಿತನಾದ ಪರಮೇಶ್ವರನೇ, ಅರಳಿದ ಕಮಲದಂತೆ ಕಣ್ಣುಗಳುಳ್ಳ ಸಾಕ್ಷಾದ್ಬ್ರಹ್ಮನೇ, ನಿನ್ನ ರಥವನ್ನು ನಡೆಸುವ ಸಾರಥಿಯಾಗಿದ್ದನಲ್ಲವೇ! ಅಂಥ ಬ್ರಹ್ಮಾದಿಗಳಿಂದೊಡಗೂಡಿ ತ್ರಿಪುರನಾಶನವೆಂಬ ಫಲವನ್ನು ಹೊಂದಿ ಅದರಿಂದ ಕೀರ್ತಿಶಾಲಿಯಾದ ಪರಶಿವನೇ, ವಾಯು, ಅಗ್ನಿ, ಇಂದ್ರ ಇವರ ಬಲವನ್ನೆಲ್ಲಾ ಕಮ್ಮಿಮಾಡಿ ಅವರಿಂದ ಒಂದು ಹುಲ್ಲುಕಡ್ಡಿಯನ್ನೂ ಚಲಿಸಲಾಗದಷ್ಟು ಅಶಕ್ತರನ್ನಾಗಿ ಮಾಡುವ ಸಾಮರ್ಥ್ಯವುಳ್ಳವನೇ, ಸಕಲ ವೇದ ವೇದಾಂತಗಳಿಂದ ಪ್ರತಿಪಾದ್ಯನಾದವನೇ, ದಯೆಯಿಂದ ನಮ್ಮನ್ನುದ್ಧರಿಸು. ನಮಗೆ ಶರಣನಾಗು. ॥೫॥

ಸಮುದ್ರಮಥನಕಾಲದಲ್ಲಿ ಎದ್ದ ವಿಷಜ್ವಾಲೆಯು ಸುರಕಿನ್ನರಾದಿಗಳನ್ನು ತನ್ನ ತೇಜಸ್ಸಿನಿಂದ ನಾಶಮಾಡುತ್ತಿರುವಾಗ, ನೀನು ಅದನ್ನು ಕಬಲವನ್ನಾಗಿ ಮಾಡಿಕೊಂಡು ನೀಲಗ್ರೀವನೆನಿಸಿಕೊಂಡಿರುವೆಯಲ್ಲವೆ! ಹರಿಯನ್ನೇ ಬಾಣವನ್ನಾಗಿ ಮಾಡಿಕೊಂಡಿದ್ದ ಪರಮೇಶ್ವರನೇ, ನೀಲಮೇಘಸದೃಶನೇ, ಮಧುವೇ ಮೊದಲಾದ ಸಕಲ ರಾಕ್ಷಸರನ್ನೂ ನಾಶಮಾಡಿದ ವಿಷ್ಣುವಿನ ಕಮಲನಯನದಿಂದ ಅರ್ಚಿತವಾದ

**ಸಂಭವನುತಿತೋಷಿತ ಯತಿಮಾನಸವರಭೂಷಣ**
**ಫಣಿಕಂಕಣ ಭಗವನ್ ದುರಿತಾಪಹ ಚಲಿತಾಮಲಲಲಿತೇಂದು**
**ಕಲಾಲವವಿಮಲೀಕೃತಜಗತೇ ಶರಣಂ ಭವ ಶರಣಂ**
**ಭವ ಶರಣಂ ಭವ ದಯಯಾ ॥೬॥**

**ಮಖಸಮ್ಮುಖಹವನಾಶನಮುಖತರ್ಪಿತ ಹವಿಭಕ್ಷಣ ವಿಬುಧವ್ರಜ**
**ನಲಿನೋತ್ಥಿತಮಹಿಮಾತಿಗ ಪರಿಪೂಜನರಹಿತಾತುಲಮನ್ಯುಹೃತೇ**
**ಮನಸೋತ್ಥಿತಗಣಗರ್ಜನಪರಿತರ್ಜನ ಸುರಭರ್ಜನವಿಧಿ**
**ನಂದನಕೃತಶಿಕ್ಷಣ ಪರಿಪೂರಿತದುರಿತಾಂತಕ ಗಜಮಾರಣ**
**ಕರಣ ಅಗಜಾಧಿಪ ಭುಜಗಾಧಿಪಶಯನಾರ್ಪಿತವಿಧಿಮೌ**
**ಲಿಜಕಲಿಕಸ್ರಜ ವಲಭಿನ್ಮತಭಗದೈವತನಯನಾಂಬುಜ**
**ನಾಶಕೃತೇ ಶರಣಂ ಭವ ಶರಣಂ ಭವ ಶರಣಂ ಭವ ದಯಯಾ ॥೭॥**

---

ಪಾದಪದ್ಮವುಳ್ಳವನೇ, ಅಗಾಧವಾದ ಸಮುದ್ರವನ್ನೇ ಆಪೋಶನವನ್ನಾಗಿ ತೆಗೆದುಕೊಂಡ ಅಗಸ್ತ್ಯಮಹರ್ಷಿಯಿಂದ ಆರಾಧಿತನಾದವನೇ, ನೀನು, ಯತಿಗಳ ಮನಸ್ಸನ್ನು ಭೂಷಣಗಳಂತೆ ಆನಂದಪಡಿಸುವವನಲ್ಲವೇ ? ಆದಿಶೇಷನೇ ನಿನಗೆ ಕಂಕಣವಾಗಿರುವನು. ಸಮಸ್ತ ದುಃಖಗಳನ್ನೂ ದೂರೀಕರಿಸುವೆ. ನಿನ್ನ ಶಿರಸ್ಸಿನಲ್ಲಿ ಚಲಿಸುವ ಚಂದ್ರಕಾಂತಿಯು ಸಕಲಜಗತ್ತನ್ನೂ ಪ್ರಕಾಶಗೊಳಿಸುವುದಲ್ಲವೇ! ಭಗವಂತನಾದ ಪರಮೇಶ್ವರನೇ, ನಿನಗೆ ವಂದನೆಯು. ನೀನೇ ನಮಗೆ ರಕ್ಷಕ. ನಮ್ಮನ್ನು ಉದ್ಧರಿಸು. ॥೬॥

ಯಜ್ಞದಲ್ಲಿ ಹವಿಸ್ಸನ್ನು ಭಕ್ಷಿಸುವ ಅಗ್ನಿಯಿಂದ ಸಂತೋಷ ಹೊಂದಲ್ಪಟ್ಟವನೇ, ಹವಿರ್ಭಕ್ಷಕನೇ, ದೇವತಾವೃಂದಗಳಿಂದ ಹೊಗಳಲ್ಪಡುವ ಮಹಿಮೆಯುಳ್ಳವನೇ, ನಿನ್ನನ್ನು ಪೂಜಿಸದಿರುವ ದಕ್ಷನ ಯಜ್ಞವನ್ನು ನಾಶಮಾಡಿದವನೇ, ನಿನ್ನನ್ನೇ ಸ್ಮರಿಸುತ್ತಿದ್ದ ಅನೇಕ ಋಷಿಗಣಗಳನ್ನು ತರ್ಜನಾದಿಗಳಿಂದ ಹೆದರಿಸಿ, ಬ್ರಹ್ಮನನ್ನು ಸಂತೋಷಪಡಿಸಿದ್ದ ಅನೇಕ ರಾಕ್ಷಸರನ್ನು ಶಿಕ್ಷಿಸಿದವನೇ, ನೀನು ಸಮಸ್ತ ಪಾಪಗಳೆಂಬ ಮದ್ದಾನೆಗಳನ್ನು ನಾಶಮಾಡುವುದರಲ್ಲಿ ಅತ್ಯಂತ ಸಮರ್ಥನಾಗಿರುವೆ. ಪಾರ್ವತಿಯೇ, ಸರ್ಪಶಯನನಾದ ವಿಷ್ಣುವಿನಿಂದ ಅರ್ಪಿಸಲ್ಪಟ್ಟ ಬ್ರಹ್ಮಕಪಾಲ ವಿಶಿಷ್ಟವಾದ ರುಂಡಮಾಲೆಗಳಿಂದ ಅಲಂಕೃತನಾದವನೇ, ಇಂದ್ರನಿಗೆ ಗೌತಮರ

**ಜಟಿಲಾಲಕ ಮೃಗನಾಯಕಮದಪಾಟನಜನಿತಾಂಬರಕಟಿ**
**ಶೋಭಿತ ವಟಸಂಸ್ಥಿತ ನಿಗಮಾಗಮಭಟಪೋಷಕ ಸುರ**
**ನಾಯಕ ತ್ರುಟಿತಾಖಿಲಜಗದುದ್ಭವಘಟಕಕರ್ಪರ ಹರಿಶರಕರ್ಷ**
**ಪುರದಾಹನ ಭಗವನ್ ಪಟುತಾಕೃತಿನಿಖಿಲಸ್ಥಿತಿಕಟುಕೀಭವಜಲಧೇ।**
**ಭವದಾಗಮಜಗದುದ್ಗಮ ಜಲದಾಲಯವಹನ ತ್ರಿಪುರಾಂತಕ**
**ಶಮಿತಾಂತಕ ಶಮಿತಾಂಧಕ ಶಮಿತಾಖಿಲದುಃಖ ವಿಭೋ**
**ಶರಣಂ ಭವ ಶರಣಂ ಭವ ಶರಣಂ ಭವ ದಯಯಾ ॥೮॥**

**ಪವನಾಶನಮಣಿಕಂಕಣ ಗರಲಾಶನ ಮಧುಸೂದನವಲನಾಶನ**
**ಯಮುನಾನುಜಭವನಾಶನ ಸಿಕತಾಶನತನಯಾಮಲಗಣ**

---

ಶಾಪದಿಂದ ಒದಗಿದ್ದ ಭಗಾಕಾರವಾದ ಸಹಸ್ರ ನಯನಗಳ ಬಾಧೆಯನ್ನು ಪರಿಹರಿಸಿದವನೇ, ನನ್ನನ್ನು ರಕ್ಷಿಸು. ನನಗೆ ಶರಣನಾಗು. ದಯೆಯಿಂದ ನಮ್ಮನ್ನು ಉದ್ಧರಿಸು. ॥೭॥

ಜಟಿಲವಾದ ಮುಂಗುರುಳುಳ್ಳವನೇ, ಮೃಗಗಳಿಗೆಲ್ಲಾ ದೊಡ್ಡದಾದ ವ್ಯಾಘ್ರದ ಅಹಂಕಾರವನ್ನು ನಾಶಮಾಡುವುದಕ್ಕಾಗಿ ಅದನ್ನು ಭೇದಿಸಿ ಅದರ ಚರ್ಮವನ್ನು ಸೊಂಟದಲ್ಲಿ ಸುತ್ತಿಕೊಂಡಿರುವವನೇ, ದಕ್ಷಿಣಾಮೂರ್ತಿಯ ಅವತಾರದಿಂದ ಆಲದ ಮರದ ಅಧೋಭಾಗದಲ್ಲಿ ಮಂಡಿಸಿರುವವನೇ, ವೇದಶಾಸ್ತ್ರಾದಿಗಳೆಂಬ ಸೈನಿಕರನ್ನು ಕಾಪಾಡುವ ಧೀರನೇ, ಸುರನಾಯಕನೇ, ಜಗತ್ತನ್ನು ಸೃಷ್ಟಿಮಾಡುವ ಬ್ರಹ್ಮನ ತಲೆಯನ್ನು ಕತ್ತರಿಸಿದವನೇ, ದೇವರಾಜ್ಯವನ್ನಾಳಿಸುವ ಸಲುವಾಗಿ ವಿಷ್ಣುವನ್ನೇ ಬಾಣವನ್ನಾಗಿ ಮಾಡಿಕೊಂಡಿರುವ ಮಹಾಮಹಿಮನೇ, ತ್ರಿಪುರಗಳನ್ನು ನಾಶಮಾಡಿದಂತಹ ಮಹಿಮಾಶಾಲಿಯೇ, ಚರಾಚರಾತ್ಮಕವಾದ ನಿಖಿಲ ಪ್ರಪಂಚವನ್ನೂ ಸ್ತಿಮಿತದಲ್ಲಿ ನಿಲ್ಲಿಸುವ ಸಮುದ್ರದಂತಿರುವವನೇ, ನೀನು ಸಂಸಾರಸಂಬಂಧವನ್ನು ಖಂಡಿಸುವಂತಹ ಮತ್ತು ಲೋಕವನ್ನು ಬೆಳೆಸುವಂತಹ ಶಾಸ್ತ್ರಜಾಲವೆಂಬ ಮೇಘಗಳನ್ನೇ ವಾಹನವನ್ನಾಗಿ ಮಾಡಿಕೊಂಡಿರುವೆಯಲ್ಲವೆ? ತ್ರಿಪುರಗಳನ್ನೂ ಯಮನನ್ನೂ, ಅಂಧಕಾಸುರನನ್ನೂ, ಅದರಂತೆಯೇ ಅನೇಕ ದುಃಖಗಳನ್ನೂ ನಾಶಮಾಡಿರುವ ಸರ್ವವ್ಯಾಪಿಯೇ, ನೀನೇ ನಮಗೆ ದಿಕ್ಕು. ನೀನೇ ನಮ್ಮ ರಕ್ಷಕನು. ದಯೆಯಿಂದ ನಮಗೆ ಆಶ್ರಯವನ್ನು ನೀಡು. ॥೮॥

ಸರ್ಪವನ್ನೇ ಕಂಕಣವನ್ನಾಗಿ ಮಾಡಿಕೊಂಡಿರುವವನೇ, ವಿಷವನ್ನು

**ಸತ್ತ್ವಮು ಗುಣಬಂಧುರಹೃದಯಾನನ ಮುನಿಸತ್ತ್ವಮುವಿನುತ**
**ಗಣಗರ್ಜಿತವದನಾಯಿತಶಶಿಧಾಮುಕಕೃತನೇತ್ರಕ ಉಡುನಾಯಕ**
**ಶಿಖರ ಅಮರವರನಾಯಕ ಕುಮುದಾಕರ ಸಮುದಾಯಜತತಲೋಚನ**
**ದ್ವಿರದಾನನಸುತಹರ್ಷದ ತರುಣೇಂದುಲಲಾಮ ಮಸೃಣಾರುಣ**
**ನಖಜೋತ್ಪಲಕಲಿಕಾಯಿತಸುರಜಾಲಕಮುಕುಟೀತಟಘಟಿತಾಂ**
**ಬುಜಪಾದ ಶರಣಂ ಭವ ಶರಣಂ ಭವ ಶರಣ ಭವ ದಯಯಾ ॥೯॥**

**ಅಖಿಲಾಂಡಗ ಶುಕತುಂಡಜಘಟನೋತ್ಥಿತಮಧುರಾಯಿತ**
**ಸುಖತಂದ್ರಿಜರಸಸಾರಸಪದನಾಮುಜಮುನಿಗೀತವಿನೋದ**

---

ನುಂಗಿದವನೇ, ವಿಷ್ಣು, ಇಂದ್ರ, ಯಮ ಇವರಿಗೆ ಒದಗುವ ದುಃಖಗಳನ್ನೆಲ್ಲಾ ನಾಶಮಾಡುವವನೇ, ಸಮುದ್ರದಲ್ಲಿ ಹುಟ್ಟಿದ ಲಕ್ಷ್ಮಿಯ ಮನೋಹರವಾದ ಗುಣಗಳಿಂದ ಕೂಡಿದವನೇ, ನೀನು ಗುಣಗಣಭೂಯಿಷ್ಠನು. ಮತ್ತು ಮುನಿಶ್ರೇಷ್ಠರಿಂದ ವಂದಿತನಾದವನು. ನಿನ್ನ ಪ್ರಮಥಗಣಗಳ ಗರ್ಜನೆಗೆ ಮುಖದಂತಿರುವವನು ನೀನೇ. ಚಂದ್ರನನ್ನು ಅಲಂಕಾರವಸ್ತುವನ್ನಾಗಿಯೂ, ಕಣ್ಣನ್ನಾಗಿಯೂ ಮಾಡಿಕೊಂಡಿರುವೆ. ನಕ್ಷತ್ರೇಶನಾದ ಚಂದ್ರನನ್ನು ತಲೆಯಲ್ಲಿ ಧರಿಸಿರುವೆ. ದೇವತೆಗಳಿಗೆಲ್ಲಾ ಮುಖ್ಯ ನಾಯಕನಂತಿರುವೆ. ನೈದಿಲೆಗಳ ಸಮೂಹದಿಂದುಂಟಾದ ವೈಶಾಲ್ಯವನ್ನು ತೋರ್ಪಡಿಸುವ ಲೋಚನಗಳು ನಿನ್ನಲ್ಲಿವೆ. ಗಜಮುಖನಾದ ವಿನಾಯಕನಿಗೆ ಸಂತೋಷಪ್ರದನಾದವನು ನೀನಲ್ಲವೆ? ಬಾಲಚಂದ್ರನನ್ನೇ ತಿಲಕವನ್ನಾಗಿ ಮಾಡಿಕೊಂಡಿರುವವನೇ? ದೇವತೆಗಳೆಲ್ಲರೂ ಅಂಜಲಿಬದ್ಧರಾಗಿ ನಿನ್ನ ಪಾದದ ಮೇಲೆ ತಮ್ಮ ಕಿರೀಟಗಳನ್ನಿಟ್ಟು ನಮಸ್ಕರಿಸುತ್ತಿರುವಾಗ, ಆ ಕಿರೀಟಗಳು ನಿನ್ನ ಪಾದದ ಕೆಂಪಾದ ಉಗುರುಗಳ ಮುಂದೆ, ನೈದಿಲೆಯ ಮೊಗ್ಗುಗಳಂತೆ ಕಂಡುಬರುತ್ತವೆ. ಅಂತಹ ಕಿರೀಟದ ಸಾಲುಗಳಿಂದ ರಾರಾಜಿಸುವ ಪಾದಪದ್ಮವುಳ್ಳವನೇ, ನಮ್ಮನ್ನು ರಕ್ಷಿಸು. ದಯೆಯಿಂದ ನಮಗೆ ಆಶ್ರಯವನ್ನು ನೀಡು. ನಿನ್ನನ್ನು ಮೊರೆಹೊಕ್ಕಿರುವೆವು. ॥೯॥

ಎಲೈ ಪರಮೇಶ್ವರನೇ, ನೀನು ನಿಖಿಲ ಜಗತ್ತಿನಲ್ಲಿಯೂ ಸಂಚರಿಸುವವನು. ಗಿಣಿಯ ಮುಖದಿಂದ ಬಂದ (ಶುಕಾಚಾರ್ಯಪ್ರೋಕ್ತವಾದ) ಮಾತುಗಳು ಕೇಳುವವರಿಗೆ ಎಷ್ಟು ಇಂಪನ್ನುಂಟುಮಾಡುವುವೋ, ಅದರಂತೆ ನಿನ್ನ ಪಾದಸ್ಮರಣೆಯ ಗಾನವು ಮುನಿಜನರಿಗೆ ಅಷ್ಟು ಅಮಿತಾನಂದವನ್ನುಂಟುಮಾಡುತ್ತದೆ. ಆಗ ಮುನಿಗಳು ನಿನ್ನ

ಕನಕಾಂಬುಜಜನಿತಾಖಿಲ (ಜಗದಗಖಂಡನ)
ಗಜಖಂಡನ ಯಮಖಂಡನ ಶಶಿಖಂಡನಕಲಿತಾಮಲಶಿರಸೇ
ಮೃದುಮುಂಡಿತ ಉರಗೇಶ್ವರಕೃತಕುಂಡಲ ವಿಧಿಖಂಡನ
ಶಿಖಂಡವರಲೋಚನ ವಡಬಾನಲಕೃತಜಿಹ್ವಕ ಶಿಖಿವಾಹನ
ಕೃತಬೋಧನ ಶ್ರುತಿಮಂಡಲಶಿರಸೇ ಪುರದಂಡನ ನಗಕೋದಂಡಜ
ಹರಿಶರಕರ್ಷಣ ಆಖಂಡಲಕರಭಂಜನ ಮುನಿಮಂಡಲಕೃತರಕ್ಷಣ
ಖಂಡಪರಶೋ ತಂಡುನಂದಿಗಣಭೃಂಗಿಚಂಡಿಕೃತತಾಲಮುದ್ದಲಜ
ಘೌಂಡುಮಧ್ವನಿಜಮುಡ್ಡುಘುರ್ಘುರಿತರಂಗನಾಟ್ಯಪರ
ಜಹ್ನುಜಾವಿತತ ನೀರತೀರವಿಲಸಚ್ಛಿವಲಿಂಗ ಶರಣಂ ಭವ
ಶರಣಂ ಭವ ಶರಣಂ ಭವ ದಯಯಾ ॥೧೦॥

---

ನಾಮಗಳನ್ನು ಆಗಾಗ ಗಾನಮಾಡುತ್ತಾ ಸಕಲ ಸೌಖ್ಯಗಳನ್ನೂ ಹೊಂದುತ್ತಿರುವರು. ಹಿರಣ್ಯಗರ್ಭ ಬ್ರಹ್ಮನಿಂದ ಸೃಷ್ಟವಾದ ಜಗತ್ತಿನ ಸಕಲ ಪಾಪಗಳನ್ನೂ ನಿವಾರಿಸಿದವನೇ, ಯಮನನ್ನು ಖಂಡಿಸಿ ಅವನ ಗರ್ವವನ್ನು ಮುರಿದಿರುವವನು ನೀನು. ಅರ್ಧಚಂದ್ರನನ್ನೇ ಶಿರೋಭೂಷಣವನ್ನಾಗಿ ಮಾಡಿಕೊಂಡಿರುವೆ. ನಿನ್ನ ಅಲಂಕಾರವಾದರೋ ಮೃದುವಾಗಿ ಭಕ್ತಿಜನಕವಾಗಿದೆ. ಆದಿಶೇಷನೇ ನಿನ್ನ ಕರ್ಣಾಭರಣ. ಬಾಲಚಂದ್ರನೇ ಶಿಖಾಭರಣ. ಅಗ್ನಿಯೇ ನಿನಗೆ ಕಣ್ಣಾಗಿದೆ. ಕಾಲರುದ್ರನಾಗಿ ವಡಬಾಗ್ನಿಯನ್ನೇ ನಾಲಿಗೆಯನ್ನಾಗಿ ಮಾಡಿಕೊಳ್ಳುವೆ. ಶಿಖಿವಾಹನನಾದ (ನನಗೆ) ಷಣ್ಮುಖನಿಗೆ ಜ್ಞಾನೋಪದೇಶಕನಾಗಿರುವೆ. ವೇದರಾಶಿಯಲ್ಲಿ ನಿನಗೆ ಶಿರಸ್ಸ್ಥಾನವಿದೆ. ತ್ರಿಪುರಗಳನ್ನು ನಾಶಪಡಿಸಿ, ಆ ಕಾಲದಲ್ಲಿ ಮೇರುಪರ್ವತವನ್ನೇ ಧನುಸ್ಸನ್ನಾಗಿಯೂ ವಿಷ್ಣುವನ್ನೇ ಬಾಣವನ್ನಾಗಿಯೂ ಮಾಡಿಕೊಂಡು ದೇವೇಂದ್ರನ ತೇಜಸ್ಸನ್ನು ಮಂಕುಮಾಡಿ, ದೇವತೆಗಳನ್ನು ಉದ್ಧಾರಮಾಡಿರುವೆ. ಋಷಿಸಮೂಹವನ್ನು ಸಂರಕ್ಷಣೆಮಾಡಿದವನು ನೀನು. ಖಂಡವಾದ ಪರಶುವೇ ನಿನಗೆ ಆಯುಧವಾಗಿದೆ. ತಂಡು, ಭೃಂಗಿ, ನಂದಿ, ಚಂಡಿ ಮೊದಲಾದ ಗಣನಾಯಕರು ಮಾಡುವ ತಮ್ಮಟೆಯ ಧ್ವನಿಯನ್ನೇ ಒಂದು ನಾದವನ್ನಾಗಿ ಮಾಡಿಕೊಂಡು ಜಗತ್ತನ್ನೇ ರಂಗಸ್ಥಳವನ್ನಾಗಿಸಿ ಅದರಲ್ಲಿ ನಾಟ್ಯಶೀಲನಾಗಿದ್ದೀಯೆ. ಗಂಗಾನದಿಯ ವಿಶಾಲಪಾತ್ರದಲ್ಲಿ ಲಿಂಗರೂಪವಾಗಿ ನೆಲಸಿರತಕ್ಕವನೇ, ಶಂಕರನೇ ನೀನೇ ನಮಗೆ ರಕ್ಷಕನು. ನಮ್ಮನ್ನು ದಯೆಯಿಂದ ಕಾಪಾಡು. ॥೧೦॥

**ಇತ್ಯಷ್ಟಪದ್ಯೈಸ್ಸ್ವಾಂತಸ್ಥಂ ತುಷ್ಟಾವಾಷ್ಟಾಕೃತಿಂ ಹರಂ ।**
**ಸ್ಕಂದೋ ನತ್ವಾಥ ಜಗತಾಂ ಮಾತರಂ ಸ್ತೋತುಮಾರಭತ್ ॥೧೧॥**

**ಉದಾರತರಗಂಭೀರಪದ್ಯೈರ್ಹೃದ್ಯೈರ್ಮಹೇಶ್ವರೀಂ ।**
**ದೇವವಾಮಾಂಕಭಾಗಸ್ಥಾಂ ತಾರಕಾರಿಸ್ಸ್ವಮಾತರಂ ॥೧೨॥**

॥ ಸ್ಕಂದ ಉವಾಚ ॥

**ನೌಮಿ ಸ್ತೌಮಿ ಜಗತ್ಪ್ರಸಾದಘಟನಾಸಂಸ್ಥಾನಸಂಪಾದಿತಾಂ**
**ಲೋಕಾಲೋಕನತತ್ಪರಾಂ ಭಗವತೀಂ ಮಾಯಾಂ ಮಹೇಶಾಶ್ರಯಾಂ ।**
**ವಿಷ್ಣುಬ್ರಹ್ಮಮರುದ್ಗಣೇಶ್ವರಮಹಾಸಾಮ್ರಾಜ್ಯದಾನಕ್ಷಮಾ**
**ಮೀಶಾಂಕಾಧಿಕೃತಾಂ ಪ್ರಸಾದಮುಖರಾಂ ಕಾಯೇನ ವಾಚಾ ಸದಾ ॥೧೩॥**

---

ಹೀಗೆ ಕುಮಾರಸ್ವಾಮಿಯು ಅಷ್ಟಮೂರ್ತಿಯಾದ ಪರಮೇಶ್ವರನನ್ನು ತನ್ನ ಮನಸ್ಸಿನಲ್ಲಿ ನೆಲೆಗೊಳಿಸಿ, ಮೇಲೆ ಹೇಳಿದ ಎಂಟು ಪದ್ಯಗಳಿಂದ ಶಂಕರನನ್ನು ವಿಧ ವಿಧವಾಗಿ ಸ್ತುತಿಸಿದನು. ಆಮೇಲೆ ಜಗನ್ಮಾತೆಯಾದ ಪಾರ್ವತಿಯನ್ನು ಹೀಗೆ ಹೊಗಳಲಾರಂಭಿಸಿದನು. ॥೧೧॥

ಆ ದೇವಿಯಾದರೋ ಸರ್ವದಾ ಪರಮೇಶ್ವರನ ಎಡಭಾಗವನ್ನು ಆಶ್ರಯಿಸಿರ ತಕ್ಕವಳು. ಮಹೇಶ್ವರ ಶಕ್ತಿಯು. ಇಂತಹ ತನ್ನ ತಾಯಿಯನ್ನು ತಾರಕಾರಿಯಾದ ಕುಮಾರಸ್ವಾಮಿಯು ಉದಾರವೂ ಅತಿ ಗಂಭೀರವೂ ರಮ್ಯವೂ ಆದ ಪದ್ಯಗಳಿಂದ ಸ್ತುತಿಸಿದನು. ॥೧೨॥

ಲೋಕಮಾತೆಯಾದ ಪಾರ್ವತಿಯು ಸಮಸ್ತ ಲೋಕವನ್ನೂ ಅನುಗ್ರಹಿಸು ವುದಕ್ಕಾಗಿ ಜಗತ್ತಿನಲ್ಲಿ ಸ್ಥಿರವಾಗಿ ನಿಂತಿರುವಳು. ಸಮಸ್ತ ಭಕ್ತರನ್ನೂ ತನ್ನ ಕೃಪಾದೃಷ್ಟಿಯಿಂದ ಉದ್ಧರಿಸುವಳು. ಈ ದೇವಿಯನ್ನೇ ಮಾಯೆಯೆನ್ನಬಹುದು. ಶಿವಶಕ್ತಿಯೇ ಇವಳು. ವಿಷ್ಣು, ಬ್ರಹ್ಮ, ಮರುದ್ಗಣಗಳು, ಚಕ್ರವರ್ತಿಗಳು ಇವರಿ ಗೆಲ್ಲಾ ರಾಜ್ಯವನ್ನು ಕರುಣಿಸಿ, ಅವರನ್ನು ಭೋಗಿಗಳನ್ನಾಗಿ ಮಾಡುವ ದೇವಿಯೇ ಪಾರ್ವತಿಯು. ಪರಮೇಶ್ವರನ ತೊಡೆಯ ಮೇಲೆ ಕುಳಿತು, ಭಕ್ತವೃಂದಕ್ಕೆ ಅನುಗ್ರಹ ಪೂರ್ವಕವಾಗಿ ವರಗಳನ್ನೀಯುತ್ತಿರುವ ಅಂತಹ ಪರಮೇಶ್ವರಿಯನ್ನು ನಾನು ಮನಃ ಪೂರ್ವಕವಾದ ಮಾತಿನಿಂದಲೂ, ಶರೀರದಿಂದಲೂ ನಮಸ್ಕರಿಸುತ್ತೇನೆ. ಮತ್ತು ವಿಧವಿಧವಾಗಿ ಸ್ತುತಿಸುತ್ತೇನೆ. ॥೧೩॥

ಇಂದುಕುಂದಕರಿಮತ್ತಜಬಿಂಬ
ಸ್ಫಾರಧಾರವಿಜಿತಾಖಿಲಬೃಂದಾಂ ।
ನೀಲಮೇಘನಲಿನಾಮಲಕಾಂತಿಂ
ಕೇಸರೀಂದ್ರವರಭೂಧರಕೂರ್ಮಾಂ ॥೧೪॥

ವಕ್ತ್ರದಂತಗಮನಾಧರಕೇಶೈಃ
ಲೋಚನೇನ ಜಘನೇನ ಕುಚಾಭ್ಯಾಂ ।
ಪಾದಪಂಕಜ ರಜಃಪರಿಭೂತಾ
ನಾಗಯಕ್ಷ ಸುರಮಾನವಕನ್ಯಾಃ ॥೧೫॥

ಅಂಬಾಮಂಭೋರುಹಾಕ್ಷೀಂ ಸಕಲಸುರಕದಂಬೈಕಶಾಲಿಪ್ರಪೂರ್ಣಾಂ ।
ಕಾಶೀಶೇಷಾನ್ನಪೂರ್ಣಾಂ ವಿಧಿಹರಿಹರಸತ್ಸಂಸ್ತುತಾಂ ಭರ್ಗಕಾಂತಾಂ ।
ಶಾಂತಾಂ ಶಾಂತಾಂತರಂಗಾಂ ಭಜದಘಪಟಲೀವ್ಯಾಲನಾಗಾಂತಕಾಂತಾಂ ।
ಕಾಂತಾಂ ದೇವಸ್ಯ ದೇವೀಮಗವರವರಜಾಂ ನೌಮಿ ಚಿನ್ನಿತ್ಯಸಂಸ್ಥಾಂ॥೧೬॥

---

ದೇವಿಯೇ, ನೀನು ಚಂದ್ರನಂತೆ, ಕುಂದಪುಷ್ಪದಂತೆ, ಐರಾವತದಂತೆ, ಶುಭ್ರವರ್ಣವುಳ್ಳವಳಾಗಿದ್ದು ಸಮಸ್ತ ದೇವವೃಂದವನ್ನೆಲ್ಲಾ ಸೌಂದರ್ಯದಿಂದ ಸೋಲಿಸಿರುವೆ. ನಿನ್ನ ದೇಹಕಾಂತಿಯಾದರೋ, ನೀಲಮೇಘದಂತೆ, ಅಮಲಕಮಲ ದಂತೆ ಮನೋಹರವಾಗಿರುವುದು. ನಿನಗೆ ವಾಹನವಾಗಿ ಮತ್ತು ಪೀಠವಾಗಿರತಕ್ಕವು ಗಳು ಸಿಂಹ ಮತ್ತು ಪರ್ವತಗಳು. ಇವುಗಳ ಮೇಲೆ ವಿರಾಜಿಸುವ ದೇವಿಯೇ ನಿನಗೆ ನಮಸ್ಕಾರ. ||೧೪||

ಜನನಿಯೇ, ನಿನ್ನ ಮುಖ, ನಿನ್ನ ದಂತಪಂಕ್ತಿ, ನಿನ್ನ ನಡಗೆ, ಹಾಗೆಯೇ ನಿನ್ನ ತುಟಿ, ಕೇಶಪಾಶಗಳು, ಜಘನಭಾಗ, ಕುಚದ್ವಯಗಳು ಇವುಗಳ ಸೌಂದರ್ಯವು ಯಾವ ದೇವತೆಗಳಲ್ಲಾಗಲಿ, ರಾಕ್ಷಸಮಾನವವರ್ಗದ ಯಾವರೀತಿಯ ಸ್ತ್ರೀಯರಲ್ಲಾಗಲಿ ಕಂಡುಬರಲಾರದು. ಆ ಎಲ್ಲಾ ವರ್ಗದ ಸ್ತ್ರೀಯರೂ ಸೌಂದರ್ಯದಲ್ಲಿ ನಿನ್ನ ಪಾದರಜಸ್ಸಿಗೂ ಸರಿಸಮರಾಗಲಾರರು. ||೧೫||

ಮಾತೆಯೇ, ನಿನ್ನ ಕಣ್ಣುಗಳು ಕಮಲಗಳಂತಿವೆ. ಸಕಲ ದೇವತೆಗಳ ಸಮೂಹವೆಂಬ ಬತ್ತದ ರಾಶಿಯಿಂದ ತುಂಬಿದವಳಾಗಿ, ಕಾಶಿಯಲ್ಲಿ ನೆಲಸಿ ಅನ್ನ ಪೂರ್ಣೆಯೆಂಬ ಹೆಸರಿನಿಂದ ಭಕ್ತರಿಗೆಲ್ಲಾ ಅನ್ನವನ್ನು ಒದಗಿಸುತ್ತಿರುವೆ. ನಿನ್ನನ್ನು

ನಳಿನಜವನಿತಾಪದ್ಮಸಂಸ್ಥಾಕರಸ್ಥೈಃ
ನಿಧಿವಹಗರುದಾಭ್ಯೈಶ್ಚಾಮರೈರ್ವೀಜ್ಯಮಾನಾಂ ।
ಶಶಿಮುಖನಿಜಭರ್ತುರ್ಭಾರ್ಯಯಾ ಛತ್ರವತ್ಯಾ
ಸಿತನಭಸಟಸಿಂಹಸ್ಕಂಧಸಿಂಹಾಸನಸ್ಥಾಂ ॥೧೭॥

ರಕ್ತಬೀಜತುರಗಾರಿಧೂಮ್ರಜಾನ್
ಚಾಮರಾರಿವರಶುಂಭನಿಶುಂಭಾನ್ ।
ಚಂಡಮುಂಡವರಭಂಡಜಮುಂಡೈ
ರಾಜಿಭೂಮಿಕಮಲೈರಿವ ದೇವಿ ॥೧೮॥

---

ಬ್ರಹ್ಮ, ವಿಷ್ಣು, ಈಶ್ವರ ಮುಂತಾದ ದೇವಶ್ರೇಷ್ಠರೆಲ್ಲಾ ಸ್ತುತಿಸುತ್ತಿರುವರು. ನೀನು ಶಾಂತಸ್ವಭಾವದವಳು. ನಿನ್ನ ಮನಸ್ಸಿನಲ್ಲಿ ಶಾಂತಿಯೆಂಬುದು ಒಡೆದು ಮೂಡಿದೆ. ಭಕ್ತರ ಪಾಪರಾಶಿಯೆಂಬ ಸರ್ಪಕ್ಕೆ ನೀನು ಗರುಡಪ್ರಾಯಳಾಗಿರುವೆ. ಅಂತಹ ಚಿದ್ರೂಪಿಣಿಯೂ, ಪರಮೇಶ್ವರನ ಪತ್ನಿಯೂ, ಪರ್ವತರಾಜಪುತ್ರಿಯೂ ಆಗಿರುವ ನಿನ್ನನ್ನು ಶಿರಸಾ ವಂದಿಸುವೆನು. ॥೧೬॥

ಎಲೌ ದೇವಿಯೇ, ನಿನ್ನ ಅಕ್ಕಪಕ್ಕಗಳಲ್ಲಿ ಸರಸ್ವತಿಯೂ, ಲಕ್ಷ್ಮಿಯೂ ನಿಂತುಕೊಂಡು, ಹಂಸಪಕ್ಷಿಗಳ ರೆಕ್ಕೆಗಳಂತೆ ಅತಿಶುಭ್ರವಾಗಿರುವ ಚಾಮರಗಳನ್ನು ಹಿಡಿದು ಬೀಸುತ್ತಿರುವರು. ಹಿಂಭಾಗದಲ್ಲಿ ಚಂದ್ರಶೇಖರನ ಪ್ರಿಯಭಾರ್ಯೆಯಾದ ಗಂಗಾಮಾತೆಯು ಛತ್ರಿಯನ್ನು ಹಿಡಿದು ನಿಂತಿರುವಳು. ನೀನು ಶ್ರೇತಾಭ್ರದಂತೆ ಪರಿಶುದ್ಧವಾಗಿರುವ ಕೇಸರಗಳಿಂದ ಶೋಭಿಸುತ್ತಿರುವ ಸಿಂಹದ ಮೇಲೆ ಕುಳಿತಿರುವೆ. ಅದೇ ನಿನಗೆ ನಿಜವಾದ ಸಿಂಹಾಸನವಲ್ಲವೆ? ಇಂತಹ ಸಕಲ ದೇವತಾಸೇವ್ಯವಾದ ನಿನ್ನ ಮೂರ್ತಿಯನ್ನು ವಂದಿಸುವೆನು. ॥೧೭॥

ದೇವಿಯೇ, ನೀನು ರಕ್ತಬೀಜಾಸುರ, ಹಯಾರಿ, ಧೂಮ್ರಜ, ಇನ್ನೂ ದೇವವಿರೋಧಿಗಳಾದ ಶುಂಭ, ನಿಶುಂಭ ಮೊದಲಾದ ರಾಕ್ಷಸರನ್ನೂ ನಾಶಮಾಡಿರುವೆ. ಚಂಡಾಸುರ, ಭಂಡಾಸುರ ಇವರೇ ಮೊದಲಾದ ರಾಕ್ಷಸರ ಮುಂಡಗಳನ್ನೆಲ್ಲಾ ಭೂಮಿಯಲ್ಲಿ ಕೆಡಹಿ, ಆ ಯುದ್ಧರಂಗದಲ್ಲಿ ನೆಲದಾವರೆಗಳ ಭ್ರಾಂತಿಯನ್ನುಂಟುಮಾಡಿದೆ. ಸರ್ವಶಕ್ತಿಮಯಿಯಾದ ತಾಯಿಯೇ ನಿನಗೆ ಪ್ರಣಾಮವು. ॥೧೮॥

ಕೋದಂಡಾಕೃಷ್ಟದಂಡೋಚ್ಚಲಿತ
ವರಶರಾಸಾರಧಾರಾದಿಭಿರ್ಯಾ ।
ತಸ್ತಾರಾಮರವೀರಸಂಸ್ತುತಪದಾ
ಸಾ ಪಾತು ನಶ್ಶ್ರೇಯಸೇ ॥೧೯॥

॥ ಸೂತ ಉವಾಚ ॥

ಏವಂ ಸಂಸ್ತುವತಸ್ತಸ್ಯ ಸ್ಕಂದಸ್ಯಾಮಲಚೇತಸಃ ।
ಪ್ರಾದುರಾಸೀದ್ವೃಷಾರೂಢೋ ಭಗವಾನ್ ಶ್ರೀವೃಷಧ್ವಜಃ ॥೨೦॥

ನೀಲಕಂಠಸ್ತ್ರಿನೇತ್ರಶ್ಚ ಭೋಗೀಭೋಗವಿಭೂಷಣಃ ।
ಕೋಟಿಪ್ರಭಾಕರೋದ್ಭಾಸಿಮಯೂಖಾವಲಿಭಾಸಿತಃ ॥೨೧॥

ದಿಶಾಮುಖತಮಸ್ತೋಮಮೌಲಿಸೋಮನಿವಾರಿತಃ ।
ಚಲಚ್ಚಾಮರವಾಲೋತ್ಥವಾತಪ್ರೋಚ್ಚಲಿತಾಂಬರಃ ॥೨೨॥

---

ಯಾರ ಧನುಸ್ಸಿನಿಂದ ಹೊರಟ ಬಾಣಸಮೂಹವು ಧಾರಾಕಾರವಾಗಿ ರಣರಂಗವನ್ನು ಪ್ರವೇಶಿಸಿ, ಶತ್ರುರಾಕ್ಷಸರನ್ನೆಲ್ಲಾ ಧ್ವಂಸಮಾಡಿ, ತನ್ಮೂಲಕ ದೇವತೆಗಳನ್ನೆಲ್ಲಾ ಸಂತೋಷಗೊಳಿಸಿತೋ, ಮತ್ತು ಸಂತುಷ್ಟರಾದ ದೇವತೆಗಳು ದೇವಿಯನ್ನು ಮುಕ್ತಕಂಠದಿಂದ ಸ್ತುತಿಸುವಂತೆ ಮಾಡಿತೋ, ಅಂತಹ ದೇವಿಯು ನಮಗೆ ಸಕಲ ಕಲ್ಯಾಣವನ್ನೂ ಒದಗಿಸುತ್ತಾ ರಕ್ಷಿಸಲಿ. ॥೧೯॥

ಎಂದು ಭಕ್ತಿಯಿಂದ ಸ್ತೋತ್ರಮಾಡಿದ ಷಣ್ಮುಖಸ್ವಾಮಿಯ ಚಿತ್ತಶುದ್ಧಿಗೆ ಮೆಚ್ಚಿ ವೃಷಧ್ವಜನಾದ ಶಂಕರನು ವೃಷಭಾರೂಢನಾಗಿ ಪ್ರತ್ಯಕ್ಷನಾದನು. ॥೨೦॥

ಪರಶಿವನ ಕಂಠವು ನೀಲವರ್ಣವುಳ್ಳದ್ದಾಗಿತ್ತು. ಮೂರು ಕಣ್ಣುಗಳು ಕಂಗೊಳಿಸುತ್ತಿದ್ದುವು. ಸರ್ಪವೇ ಆಭರಣವಾಗಿತ್ತು. ಕೋಟಿಸೂರ್ಯರ ತೇಜಸ್ಸು ಆ ಪರಮೇಶ್ವರನ ದೇಹದಿಂದ ಆವಿರ್ಭವಿಸುತ್ತಿತ್ತು. ॥೨೧॥

ಶಿರೋಭಾಗದಲ್ಲಿದ್ದ ಚಂದ್ರನ ಚಂದ್ರಿಕೆಯು ದಿಗಂತಗಳಲ್ಲಿ ಅಡಗಿದ್ದ ಕತ್ತಲೆಯನ್ನೆಲ್ಲಾ ಹೋಗಲಾಡಿಸುತ್ತಿತ್ತು. ಅಕ್ಕಪಕ್ಕಗಳಲ್ಲಿ ಬೀಸುತ್ತಿದ್ದ ಚಾಮರಗಳಿಂದ ಎದ್ದ ವಾಯುವು ಪರಶಿವನು ಹೊದ್ದಿದ್ದ ಬಟ್ಟೆಯನ್ನು ಸ್ವಲ್ಪಮಟ್ಟಿಗೆ ಅಲುಗಿಸುತ್ತಿತ್ತು. ॥೨೨॥

ಛತ್ರಛಾಯಾವಾರಿತೋದ್ಯದ್ಭಾನುಭಾನುಮರೀಚಿಮಾನ್ ।
ಸೋಮಸ್ಸಹೋಮಯಾಭ್ಯಾಗಾದ್ಗಣಸಂಘಸಮಾವೃತಃ ॥೨೩॥

ಸುರಾಸುರಕರೋನ್ಮುಕ್ತಸುಮವರ್ಷೌಘಸಂತತಿಃ ।
ತದ್ಗಂಧಬಂಧಸಂಬಂಧಮರುದಾಮೋದಮೋದಿತಃ ॥೨೪॥

ವಿಕಚತ್ಕಮಲಾಮೋದಮಾಲಯಾ ಶೋಭಿವಿಗ್ರಹಃ ।
ವಿಲಸನ್ಮಣಿಮುಕ್ತಾದಿಮಾಲಾವಲಿತಕಂಧರಃ ॥೨೫॥

ಫಣಾಮಣಿಕೃತಾನೇಕಮಾಣಿಕ್ಯವರಕಂಕಣಃ ।
ಜಂಗಮಾದ್ರಿಪ್ರತೀಕಾಶವೃಷಾರೂಢೋಽಭ್ಯಗಾಚ್ಛಿವಃ ॥೨೬॥

---

ಸೂರ್ಯಕೋಟಿಪ್ರಕಾಶಮಾನವಾದ ಶಂಕರನ ದೇಹಕಾಂತಿಯು ಮೇಲಿದ್ದ ಛತ್ರಿಯಿಂದ ತಡೆಯಲ್ಪಟ್ಟು ಮುಂಭಾಗದಲ್ಲಿ ಸೂರ್ಯನಂತೆ, ವಿಶೇಷವಾಗಿ ಪ್ರತಿಫಲಿಸುತ್ತಿತ್ತು. ಈ ರೀತಿ ಕಾಂತಿವಿಶಿಷ್ಟನಾದ ಪರಶಿವನು ಪಾರ್ವತಿಯೊಡನೆಯೂ ಪ್ರಮಥಗಣಗಳೊಡನೆಯೂ ಕೂಡಿ ಪ್ರತ್ಯಕ್ಷನಾಗಿ ನಿಂತನು. ॥೨೩॥

ಆ ಕಾಲದಲ್ಲಿ ದೇವತೆಗಳೂ, ರಾಕ್ಷಸರೂ ಒಟ್ಟಾಗಿ ದೇವಲೋಕದ ಪುಷ್ಪಗಳನ್ನು ಶಂಕರನ ಮೇಲೆ ಸುರಿಸಿದರು. ಆ ಹೂವುಗಳ ಸುವಾಸನೆಯನ್ನು ವಾಯುವು ಹೊತ್ತು ಶಂಭುವಿನ ಮೇಲೆ ಬೀಸಿ, ಪರಮೇಶ್ವರನನ್ನು ಸಂತುಷ್ಟನನ್ನಾಗಿ ಮಾಡಿತು. ॥೨೪॥

ಅರಳಿದ ಕಮಲಗಳ ಮಾಲೆಯು ಪರಶಿವನ ಶರೀರವನ್ನು ಶೋಭಿಸುತ್ತಿತ್ತು. ಅಲ್ಲದೆ ಕತ್ತಿನಲ್ಲಿ ನಾನಾವಿಧವಾದ ರತ್ನಗಳ ಮತ್ತು ಮುತ್ತುಗಳ ಹಾರಗಳು ವಿಶೇಷವಾಗಿ ಪ್ರಕಾಶಿಸುತ್ತಿದ್ದುದರಿಂದ ಅದರ ಭಾರಕ್ಕೆ ಕಂಠವು ಸ್ವಲ್ಪಮಟ್ಟಿಗೆ ಕುಗ್ಗಿತ್ತು. ॥೨೫॥

ಅನೇಕ ನಾಗರತ್ನಗಳಿಂದಲೂ ಮಾಣಿಕ್ಯಗಳಿಂದಲೂ ಖಚಿತವಾದ ಬಳೆಗಳು ತೋಳುಗಳಲ್ಲಿ ವಿರಾಜಿಸುತ್ತಿದ್ದುವು. ಸಂಚರಿಸುವ ಪರ್ವತವೋ ಎಂಬಂತೆ ಎತ್ತರವಾದ ವೃಷಭನ ಮೇಲೆ ಮಂಡಿಸಿ ಶಂಕರನು ಅಲ್ಲಿಗೆ ಬಂದನು. ॥೨೬॥

ಮುನಿಕಿನ್ನರಗಂಧರ್ವಗಾನಧಾರಾಸ್ತುತಸ್ತುತಿಃ ।
ದೃಷ್ಟ್ವಾ ದೇವಂ ತದೋತ್ತಸ್ಥೌ ಸ್ಕಂದಸ್ಸಿಂಹಾಸನಾತ್ತದಾ ॥೨೭॥

ಮುನೀಂದ್ರೈಶ್ಚ ಗಣೇಂದ್ರೈಶ್ಚ ಸುರೇಂದ್ರೈರ್ಗಣಪೇನ ಚ ।
ಜೈಗೀಷವ್ಯೇನ ಮುನಿನಾ ಪ್ರಣನಾಮ ಮಹೇಶ್ವರಂ ॥೨೮॥

ದೃಷ್ಟ್ವಾ ನಮಂತಂ ತಂ ಸ್ಕಂದಂ ಸಗಣಂ ಸಮುನಿಂ ಸುರಾನ್ ।
ದ್ವಿರದಾಸ್ಯಂ ಮುನೀಂದ್ರಂ ಚ ಜೈಗೀಷವ್ಯಂ ಕೃಪಾಂಬುಧಿಃ ॥೨೯॥

ಕರುಣಾಪರಯಾ ದೃಷ್ಟ್ಯಾ ಚಾಲುಲೋಕೇ ಸಹಾಂಬಯಾ ।
ಪುತ್ರೌ ಗಾಢಂ ಪರಿಷ್ವಜ್ಯ ಮೂರ್ಧ್ನಿ ಚಾಘ್ರಾಯ ಶಂಕರಃ ॥೩೦॥

ಉವಾಚ ಸರ್ವದೇವಾನಾಂ ಸನ್ನಿಧೌ ಸ್ಕಂದಮೀಶ್ವರಃ ।

॥ ಈಶ್ವರ ಉವಾಚ ॥

ವತ್ಸಾನಯಾ ತವ ಸ್ತುತ್ಯಾ ಸಂತುಷ್ಟೋಽಸ್ಮಿ ಸಹಾಂಬಯಾ ।
ಧನ್ಯಯಾ ಮಾನ್ಯಯಾ ಸ್ಕಂದ ತ್ವಂ ಮಮಾತೀವವಲ್ಲಭಃ ॥೩೧॥

---

ಋಷಿಗಳು, ಕಿನ್ನರರು, ಗಂಧರ್ವರು ಇವರೆಲ್ಲರೂ ಪರಮೇಶ್ವರನನ್ನು ವಿಧ ವಿಧವಾದ ಕೃತಿಗಳಿಂದ ಸ್ತುತಿಸುತ್ತಿದ್ದರು. ಹೀಗೆ ದೃಗ್ಗೋಚರನಾದ ಶಂಭುವನ್ನು ನೋಡಿ ಅಲ್ಲಿ ನೆರೆದಿದ್ದ ದೇವತೆಗಳೆಲ್ಲರೂ ಎದ್ದು ನಿಂತರು. ಕುಮಾರಸ್ವಾಮಿಯು ತನ್ನ ಸಿಂಹಾಸನದಿಂದ ಕೆಳಗಿಳಿದು ನಿಂತನು. ||೨೭||

ಸಕಲ ಋಷಿಗಳೂ, ಗಣನಾಯಕರೂ, ದೇವಶ್ರೇಷ್ಠರೂ, ಗಣಾಧಿಪನೂ, ಜೈಗೀಷವ್ಯಮಹರ್ಷಿಯೂ, ಪರಶಿವನನ್ನು ಭಕ್ತಿಪೂರ್ವಕವಾಗಿ ನಮಸ್ಕರಿಸಿದರು. ||೨೮||

ಹಾಗೆ ನಮಸ್ಕರಿಸಿ ನಿಂತ ಸ್ಕಂದ, ಗಣಪತಿ, ಜೈಗೀಷವ್ಯ, ಇನ್ನೂ ಮಿಕ್ಕ ಋಷಿಗಳು ಇವರೆಲ್ಲರನ್ನೂ ದಯಾಸಾಗರನಾದ ಪರಶಿವನು ಅನುಗ್ರಹಪೂರ್ವಕವಾಗಿ ಆಲೋಕಿಸಿದನು. ಜೊತೆಯಲ್ಲಿದ್ದ ಪಾರ್ವತಿಯೊಡನೆ ಶಂಕರನು ತನ್ನ ಪ್ರೀತಿಪಾತ್ರರಾದ ಇಬ್ಬರು ಮಕ್ಕಳನ್ನೂ ಕರೆದು, ಆಲಿಂಗಿಸಿಕೊಂಡು ಶಿರಸ್ಸನ್ನಾಘ್ರಾಣಿಸಿದನು. ||೨೯-೩೦||

ಅನಂತರ ಸಕಲ ದೇವತೆಗಳೂ ನೋಡುತ್ತಿರುವಾಗಲೇ ಶಂಕರನು ತನ್ನ ಪುತ್ರನಾದ ಸ್ಕಂದನೊಡನೆ ಹೀಗೆ ಮಾತನಾಡಿದನು.—" ಎಲೈ ಮಗುವೇ, ಸ್ಕಂದನೇ,

ತ್ವಯಾ ಮದ್ವದನಾಂಭೋಜಾದ್ಯಚ್ಛ್ರುತಂ ಸಾರವನ್ಮೈಶ್ವರಂ ।
ಶೈವಂ ಶಿವರಹಸ್ಯಾಖ್ಯಂ ವದ ಮೋಕ್ಷಕಥಾಶ್ರಯಂ ॥೩೨॥

ಗಣಾನಾಂ ಚ ಸುರಾಣಾಂ ಚ ಮುನೀನಾಂ ಭಾವಿತಾತ್ಮನಾಂ ।
ಜೈಗೀಷವ್ಯಂ ಪುರಸ್ಕೃತ್ಯ ಮಮ ಭಕ್ತಂ ಜಿತೇಂದ್ರಿಯಂ ॥೩೩॥

ಮಾರಿಷ್ಟಂ ಮಾ ಚ ತೇ ವಿಘ್ನಂ ಮಮ ಭೂಯಾತ್ಕಥಾರಸೇ ।
ಯತೋ ವಿಘ್ನಹರಸ್ತೇದ್ಯ ಸನ್ನಿಧೌ ವರ್ತತೇಽಗ್ರಜಃ ॥೩೪॥

ಇತ್ಯುಕ್ತ್ವಾ ಚ ಮಹಾದೇವೀಮಾಲೋಕ್ಯ ಚ ಹಸನ್ ಪುರಃ ॥೩೫॥

---

ನಿನ್ನ ಸ್ತುತಿಗೆ ಮೆಚ್ಚಿರುವೆನು. ಈ ಮಾನ್ಯಳಾದ ನಿನ್ನ ತಾಯಿಯೂ ನಿನ್ನ ಸ್ತುತಿಯಿಂದ ಧನ್ಯಳೆಂದೆನಿಸಿ ಸಂತುಷ್ಟಳಾಗಿರುವಳು. ನಿನ್ನ ಮೇಲೆ ನನಗೆ ಹೆಚ್ಚಾದ ಅಭಿಮಾನವುಂಟಾಗಿದೆ. ॥೩೧॥

ನೀನು ಹಿಂದೆ ನನ್ನ ಮುಖದಿಂದ ಕೇಳಿದ ಶಿವರಹಸ್ಯವೆಂಬ ವಿಷಯವು ಅತ್ಯಂತ ಸಾರವುಳ್ಳದ್ದು. ಮೋಕ್ಷಪ್ರದವಾದ ಅನೇಕ ಕಥೆಗಳು ಅದರಲ್ಲಿ ಅಡಗಿವೆ. ॥೩೨॥

ಇಲ್ಲಿ ಸಮಸ್ತ ಗಣಗಳೂ, ದೇವತೆಗಳೂ, ಜಿತೇಂದ್ರಿಯರಾದ ಋಷಿಗಳೂ ಜೈಗೀಷವ್ಯನೊಡನೆ ಬಂದು ಸೇರಿರುವರು. ಈ ಜೈಗೀಷವ್ಯನಾದರೋ ಜಿತೇಂದ್ರಿಯನು, ನನ್ನ ಪ್ರಿಯಭಕ್ತನು. ಇಂತಹವರಿಗೆ ಆ ಶಿವರಹಸ್ಯವನ್ನು ಉಪದೇಶಿಸು. ॥೩೩॥

ನನ್ನ ಕಥೆಯನ್ನು ಉಪದೇಶಿಸುವ ಕಾಲದಲ್ಲಿ ಯಾವ ವಿಘ್ನಗಳೂ, ಅರಿಷ್ಟಗಳೂ ನಿನಗುಂಟಾಗದೆ ಇರಲಿ. ಅಲ್ಲದೆ ಸಕಲ ವಿಘ್ನನಿವಾರಕನಾದ, ನಿನ್ನ ಅಣ್ಣ ವಿಘ್ನೇಶ್ವರನು ಇಲ್ಲಿಯೇ ಇರುವಾಗ ಇನ್ನು ನಿನಗೆ ವಿಘ್ನಭಯವೆಲ್ಲಿಬಂತು ?" ॥೩೪॥

ಹೀಗೆ ಶಂಕರನು ಹೇಳಿ ಮುಂದೆ ನಿಂತಿದ್ದ ದೇವಿಯನ್ನು ನಗುತಾ ನೋಡಿದನು. ॥೩೫॥

ಮುನಿಕಿನ್ನರಗಂಧರ್ವಗಾನಧಾರಾಸ್ತುತಸ್ತುತಿಃ ।
ದೃಷ್ಟ್ವಾ ದೇವಂ ತದೋತ್ತಸ್ಥೌ ಸ್ಕಂದಸ್ಸಿಂಹಾಸನಾತ್ತದಾ ॥೨೭॥

ಮುನೀಂದ್ರೈಶ್ಚ ಗಣೇಂದ್ರೈಶ್ಚ ಸುರೇಂದ್ರೈರ್ಗಣಪೇನ ಚ ।
ಜೈಗೀಷವ್ಯೇನ ಮುನಿನಾ ಪ್ರಣನಾಮ ಮಹೇಶ್ವರಂ ॥೨೮॥

ದೃಷ್ಟ್ವಾ ನಮಂತಂ ತಂ ಸ್ಕಂದಂ ಸಗಣಂ ಸಮುನಿಂ ಸುರಾನ್ ।
ದ್ವಿರದಾಸ್ಯಂ ಮುನೀಂದ್ರಂ ಚ ಜೈಗೀಷವ್ಯಂ ಕೃಪಾಂಬುಧಿಃ ॥೨೯॥

ಕರುಣಾಪರಯಾ ದೃಷ್ಟ್ಯಾ ಚಾಲುಲೋಕೇ ಸಹಾಂಬಯಾ ।
ಪುತ್ರೌ ಗಾಢಂ ಪರಿಷ್ವಜ್ಯ ಮೂರ್ಧ್ನಿ ಚಾಘ್ರಾಯ ಶಂಕರಃ ॥೩೦॥

ಉವಾಚ ಸರ್ವದೇವಾನಾಂ ಸನ್ನಿಧೌ ಸ್ಕಂದಮೀಶ್ವರಃ ।

॥ ಈಶ್ವರ ಉವಾಚ ॥

ವತ್ಸಾನಯಾ ತವ ಸ್ತುತ್ಯಾ ಸಂತುಷ್ಟೋಽಸ್ಮಿ ಸಹಾಂಬಯಾ ।
ಧನ್ಯಯಾ ಮಾನ್ಯಯಾ ಸ್ಕಂದ ತ್ವಂ ಮಮಾತೀವವಲ್ಲಭಃ ॥೩೧॥

---

ಋಷಿಗಳು, ಕಿನ್ನರರು, ಗಂಧರ್ವರು ಇವರೆಲ್ಲರೂ ಪರಮೇಶ್ವರನನ್ನು ವಿಧ ವಿಧವಾದ ಕೃತಿಗಳಿಂದ ಸ್ತುತಿಸುತ್ತಿದ್ದರು. ಹೀಗೆ ದೃಗ್ಗೋಚರನಾದ ಶಂಭುವನ್ನು ನೋಡಿ ಅಲ್ಲಿ ನೆರೆದಿದ್ದ ದೇವತೆಗಳೆಲ್ಲರೂ ಎದ್ದು ನಿಂತರು. ಕುಮಾರಸ್ವಾಮಿಯು ತನ್ನ ಸಿಂಹಾಸನದಿಂದ ಕೆಳಗಿಳಿದು ನಿಂತನು. ॥೨೭॥

ಸಕಲ ಋಷಿಗಳೂ, ಗಣನಾಯಕರೂ, ದೇವಶ್ರೇಷ್ಠರೂ, ಗಣಾಧಿಪನೂ, ಜೈಗೀಷವ್ಯಮಹರ್ಷಿಯೂ, ಪರಶಿವನನ್ನು ಭಕ್ತಿಪೂರ್ವಕವಾಗಿ ನಮಸ್ಕರಿಸಿದರು. ॥೨೮॥

ಹಾಗೆ ನಮಸ್ಕರಿಸಿ ನಿಂತ ಸ್ಕಂದ, ಗಣಪತಿ, ಜೈಗೀಷವ್ಯ, ಇನ್ನೂ ಮಿಕ್ಕ ಋಷಿಗಳು ಇವರೆಲ್ಲರನ್ನೂ ದಯಾಸಾಗರನಾದ ಪರಶಿವನು ಅನುಗ್ರಹಪೂರ್ವಕವಾಗಿ ಆಲೋಕಿಸಿದನು. ಜೊತೆಯಲ್ಲಿದ್ದ ಪಾರ್ವತಿಯೊಡನೆ ಶಂಕರನು ತನ್ನ ಪ್ರೀತಿಪಾತ್ರರಾದ ಇಬ್ಬರು ಮಕ್ಕಳನ್ನೂ ಕರೆದು, ಆಲಿಂಗಿಸಿಕೊಂಡು ಶಿರಸ್ಸನ್ನಾಘ್ರಾಣಿಸಿದನು. ॥೨೯-೩೦॥

ಅನಂತರ ಸಕಲ ದೇವತೆಗಳೂ ನೋಡುತ್ತಿರುವಾಗಲೇ ಶಂಕರನು ತನ್ನ ಪುತ್ರನಾದ ಸ್ಕಂದನೊಡನೆ ಹೀಗೆ ಮಾತನಾಡಿದನು.—“ ಎಲೈ ಮಗುವೇ, ಸ್ಕಂದನೇ,

ತ್ವಯಾ ಮದ್ವದನಾಂಭೋಜಾದ್ಯಚ್ಛ್ರುತಂ ಸಾರಮೈಶ್ವರಂ ।
ಶೈವಂ ಶಿವರಹಸ್ಯಾಖ್ಯಂ ವದ ಮೋಕ್ಷಕಥಾಶ್ರಯಂ ॥೩೨॥

ಗಣಾನಾಂ ಚ ಸುರಾಣಾಂ ಚ ಮುನೀನಾಂ ಭಾವಿತಾತ್ಮನಾಂ ।
ಜೈಗೀಷವ್ಯಂ ಪುರಸ್ಕೃತ್ಯ ಮಮ ಭಕ್ತಂ ಜಿತೇಂದ್ರಿಯಂ ॥೩೩॥

ಮಾರಿಷ್ಟಂ ಮಾ ಚ ತೇ ವಿಘ್ನಂ ಮಮ ಭೂಯಾತ್ಕಥಾರಸೇ ।
ಯತೋ ವಿಘ್ನಹರಸ್ತೇದ್ಯ ಸನ್ನಿಧೌ ವರ್ತತೇಽಗ್ರಜಃ ॥೩೪॥

ಇತ್ಯುಕ್ತ್ವಾ ಚ ಮಹಾದೇವೀಮಾಲೋಕ್ಯ ಚ ಹಸನ್ ಪುರಃ ॥೩೫॥

---

ನಿನ್ನ ಸ್ತುತಿಗೆ ಮೆಚ್ಚಿರುವೆನು. ಈ ಮಾನ್ಯಳಾದ ನಿನ್ನ ತಾಯಿಯೂ ನಿನ್ನ ಸ್ತುತಿಯಿಂದ ಧನ್ಯಳೆಂದೆನಿಸಿ ಸಂತುಷ್ಟಳಾಗಿರುವಳು. ನಿನ್ನ ಮೇಲೆ ನನಗೆ ಹೆಚ್ಚಾದ ಅಭಿಮಾನವುಂಟಾಗಿದೆ. ||೩೧||

ನೀನು ಹಿಂದೆ ನನ್ನ ಮುಖದಿಂದ ಕೇಳಿದ ಶಿವರಹಸ್ಯವೆಂಬ ವಿಷಯವು ಅತ್ಯಂತ ಸಾರವುಳ್ಳದ್ದು. ಮೋಕ್ಷಪ್ರದವಾದ ಅನೇಕ ಕಥೆಗಳು ಅದರಲ್ಲಿ ಅಡಗಿವೆ. ||೩೨||

ಇಲ್ಲಿ ಸಮಸ್ತ ಗಣಗಳೂ, ದೇವತೆಗಳೂ, ಜಿತೇಂದ್ರಿಯರಾದ ಋಷಿಗಳೂ ಜೈಗೀಷವ್ಯನೊಡನೆ ಬಂದು ಸೇರಿರುವರು. ಈ ಜೈಗೀಷವ್ಯನಾದರೋ ಜಿತೇಂದ್ರಿಯನು, ನನ್ನ ಪ್ರಿಯಭಕ್ತನು. ಇಂತಹವರಿಗೆ ಆ ಶಿವರಹಸ್ಯವನ್ನು ಉಪದೇಶಿಸು. ||೩೩||

ನನ್ನ ಕಥೆಯನ್ನು ಉಪದೇಶಿಸುವ ಕಾಲದಲ್ಲಿ ಯಾವ ವಿಘ್ನಗಳೂ, ಅರಿಷ್ಟಗಳೂ ನಿನಗುಂಟಾಗದೆ ಇರಲಿ. ಅಲ್ಲದೆ ಸಕಲ ವಿಘ್ನನಿವಾರಕನಾದ, ನಿನ್ನ ಅಣ್ಣ ವಿಘ್ನೇಶ್ವರನು ಇಲ್ಲಿಯೇ ಇರುವಾಗ ಇನ್ನು ನಿನಗೆ ವಿಘ್ನಭಯವೆಲ್ಲಿಬಂತು ?" ||೩೪||

ಹೀಗೆ ಶಂಕರನು ಹೇಳಿ ಮುಂದೆ ನಿಂತಿದ್ದ ದೇವಿಯನ್ನು ನಗುತಾ ನೋಡಿದನು. ||೩೫||

ನಾನಾಸ್ಥಾವರಜಂಗಮಾದಿಜನಿಭಿರ್ಭ್ರಾಂತಸ್ಯ ಮಾನುಷ್ಯತಾ
ಮಾನುಷ್ಯೇ ಸತಿ ವಿಪ್ರತಾ ಶ್ರುತಿಗತಾ ಚಾಚಾರತಾ ತತ್ಪರಂ ।
ಇಷ್ಟಾಪೂರ್ತಿವಶಕ್ರಿಯಾಧಿಶತಶೋ ವೃತ್ತ್ಯಾ ಪರಂ ಶಾಂಭವೋ
ಲಿಂಗಾಲಿಂಗನಚೇತಸಾ ಸ ಹಿ ಭವೇನ್ಮುಕ್ತಸ್ತ್ವಲಿಂಗಸ್ಸುಖೀ ॥೩೬॥

ಶ್ರುತಿಶತವಿಧಿಜಾಲಕರ್ಮಮೂಲಾ
ಸ್ತ್ರಿಗುಣಗತಾಗತಿಸೌಖ್ಯದುಃಖಶೀಲಾಃ ।
ಮನಸಿಜಸುಖಮಾನಸಂಗಲೀಲಾ
ಮನನವಿಚಾರವಿವರ್ಜನೇನ ಬಾಲಾಃ ॥೩೭॥

---

ಪ್ರಪಂಚದಲ್ಲಿ ಮನುಷ್ಯಜನ್ಮವು ಬಹು ದುರ್ಲಭವಾದದ್ದು. ಮೊದಲು ಅನೇಕ ಸಾರಿ ಸ್ಥಾವರ ವಸ್ತುಗಳಾಗಿ ಜನಿಸಿ ಅನಂತರ ಜಂಗಮಪ್ರಾಣಿಗಳಾಗಿ ಉದಿಸಿ, ಹಾಗೆ ಅನೇಕ ಜನ್ಮಗಳಲ್ಲಿ ತೊಳಲಿದವನಿಗೆ ಕೊನೆಗೆ ಯಾವುದೋ ಪುಣ್ಯವಿಶೇಷದಿಂದ ಮನುಷ್ಯಜನ್ಮವು ದೊರೆಕುವುದು. ಅದರಲ್ಲೂ ವಿಪ್ರಜನ್ಮ ವಂತೂ ಅತಿ ದುರ್ಲಭ. ಹಾಗೆ ವಿಪ್ರನಾಗಿ ಜನಿಸಿದರೂ, ವೇದಾಚಾರನಿರತ ನಾಗಿ, ಕರ್ಮಾನುಷ್ಠಾನಗಳಲ್ಲಿ ಆಸಕ್ತನಾಗಿರುವುದು ವಿಶೇಷ ಪುಣ್ಯಫಲ. ಅಂತಹ ಅನೇಕ ಪುಣ್ಯವಶದಿಂದ ಎಲ್ಲೋ ಕೆಲವರಿಗೆ ಮಾತ್ರ ಶಂಕರನಲ್ಲಿ ಅತಿಶಯವಾದ ಭಕ್ತಿಯುಂಟಾಗಿ ಆತನು ಶಾಂಭವನೆನಿಸಿಕೊಳ್ಳುವನು. ಆ ಶಂಭುಭಕ್ತನು ಸರ್ವದಾ ಶಿವಲಿಂಗವನ್ನೇ ಮನಸ್ಸಿನಲ್ಲಿ ಧ್ಯಾನಿಸುತ್ತಾ ಕೊನೆಯಲ್ಲಿ ಮೋಕ್ಷವನ್ನು ಪಡೆಯು ವನು. ಶಿವಲಿಂಗಾರಾಧಕನಾಗದವನು ಇತರ ಸುಖಗಳನ್ನು ಪಡೆಯಬಹುದೇ ಹೊರತು ಎಂದಿಗೂ ಮುಕ್ತನಾಗುವುದಿಲ್ಲ. ||೩೬||

ಆದರೆ ಅನೇಕ ಜನರು ವೇದೋಕ್ತವಾದ ಸಕಲ ಕರ್ಮಗಳನ್ನು ತಿಳಿದಿದ್ದರೂ ಅದನ್ನು ಆಚರಿಸದೆ, ಸತ್ತ್ವರಜಸ್ತಮೋಗುಣಗಳ ವ್ಯತ್ಯಾಸದಿಂದ ಒದಗಿಬರುವ ಸುಖದುಃಖಗಳನ್ನು ಅನುಭವಿಸುತ್ತಾ ಕಾಲಕಳೆಯುವರು. ಯುವಕರಾಗಿ ಕಾಮ ಪರವಶರಾಗಿ, ಅಹಂಕಾರ, ದುಸ್ಸಂಗ, ಇವೇ ಮೊದಲಾದ ವ್ಯವಹಾರಗಳಲ್ಲಿ ಮಗ್ನ ರಾಗುವರು. ಅಂತೂ ಕೇವಲ ಬಾಲಕರಂತೆ ಪರಮೇಶ್ವರನ ಸ್ವರೂಪಮನನದಲ್ಲಿ ಮನಸ್ಸನ್ನಿಡದೇ ವ್ಯರ್ಥ ಕಾಲಕ್ಷೇಪಮಾಡುವರು. ||೩೭||

ನರಕಮುಖಮುವಾಪ್ಯ ಚೇಂದ್ರಲೋಕಂ
ಭವಭುವನಂ ಸಮುವಾಪ್ಯ ಮರ್ತ್ಯಲೋಕಂ।
ಪುನರಪಿ ಜನನೇನ ಕರ್ಮಶೇಷೈ
ರ್ಗತಿಮಪಿ ಘೋರತರಾಂ ಸಮಾಪ್ನುವಂತಿ ॥೩೮॥

ಕಿಂ ವೇದೈರಖಿಲೈಃ ಪುರಾಣನಿಚಯೈರನ್ಯೋನ್ಯನಿಂದಾಪರೈಃ
ಕಿಂ ವಾ ಭಾರತಯುದ್ಧಕೀರ್ತನಮುಖೇ ಕಿಂ ಕ್ಷುದ್ರಧರ್ಮಾದಿಭಿಃ।
ಯತ್ರೇಶಾನಕಥಾಪ್ರಚಾರವಿಧುರಾ ನಿಸ್ಸಾರಭೂತಾ ಕಥಾ
ಕಾವ್ಯೇನಾಪಿ ಕಿಮತ್ರ ರಾಮಕಥಯಾ ದುಃಖೋತ್ಕಟಾಯಾಃ ಫಲಂ ॥೩೯॥

॥ ಸೂತ ಉವಾಚ ॥

ಕೃತಾಂಜಲಿಪುಟಾ ದೇವೀ ಪ್ರಾಹ ಶಂಭುಂ ಸನಾತನಂ।
ಮಹೇಶಂ ಜಗದಾಧಾರಮನಾಧಾರಂ ಮಹೇಶ್ವರಂ ॥೪೦॥

---

ಮನುಷ್ಯಜನ್ಮದಲ್ಲಿ ಅನೇಕ ಪಾಪಕರ್ಮಗಳನ್ನಾಚರಿಸಿ ಯಮಲೋಕವನ್ನೈದುವರು. ಪುಣ್ಯಶಾಲಿಗಳಾಗಿ ಹಲವರು ಇಂದ್ರಲೋಕಕ್ಕೂ, ಚಂದ್ರಲೋಕಕ್ಕೂ, ಶಿವಲೋಕಕ್ಕೂ ಹೋಗಿ ಸೇರುವರು. ಆದರೇನು? ಅವರ ಪುಣ್ಯವಿಶೇಷವು ಕಳೆದ ಮೇಲೆ ಎಂದಿನಂತೆ ಭೂಲೋಕವನ್ನೇ ಸೇರಿ ಅಲ್ಲಿ ಘೋರತರವಾದ ಪಾಪಬುದ್ಧಿಯಿಂದ ಜೀವಿಸಲಾರಂಭಿಸುವರು. ॥೩೮॥

ವೇದಗಳು ಎಷ್ಟೇ ಕರ್ಮಬೋಧಕವಾದರೂ ಪ್ರಯೋಜನವಿಲ್ಲ. ಪರಸ್ಪರ ನಿಂದಾಪ್ರಧಾನವಾದ ಪುರಾಣಗಳು ಅಧಿಕಸಂಖ್ಯೆಯಲ್ಲಿವೆ. ಅದರಿಂದಲೂ ಫಲವು ದೊರಕದು. ಸಣ್ಣ ಸಣ್ಣ ಧರ್ಮಗಳನ್ನು ಪ್ರತಿಪಾದಿಸುವ ಭಾರತಯುದ್ಧದ ಕಥೆಯು ಹೆಚ್ಚು ಪ್ರಯೋಜನಕಾರಿಯಾಗಲಾರದು. ದುಃಖವನ್ನೇ ಅತಿಯಾಗಿ ವರ್ಣಿಸುವ ರಾಮಾಯಣಪಠನವಂತೂ ವ್ಯರ್ಥವೇ ಸರಿ. ಒಟ್ಟಿನಲ್ಲಿ ಯಾವ ಗ್ರಂಥದಲ್ಲಿ ಶಿವ ಸಂಬಂಧವಾದ ಮತ್ತು ಶಿವಮಹಿಮಾಪ್ರತಿಪಾದಕವಾದ ಕಥೆಗಳು ಕಂಡುಬರುವುದಿಲ್ಲವೋ, ಅಂತಹ ಕಾವ್ಯಗಳು ಸರ್ವಥಾ ವ್ಯರ್ಥವೆಂದೇ ಭಾವಿಸಬೇಕು. ॥೩೯॥

ಇಂತೆಂದ ಪರಮೇಶ್ವರನನ್ನು ನೋಡಿ, ದೇವಿಯು ಅಂಜಲಿಬದ್ಧಳಾಗಿ ನಿಂತು, ದೇವದೇವನೂ, ಜಗದಾಧಾರನೂ, ಅನಂತನೂ ಆದ ಶಂಕರನನ್ನು ಕುರಿತು ಹೀಗೆಂದಳು. ॥೪೦॥

|| ದೇವ್ಯುವಾಚ ||

ತ್ವತ್ಕೃಪಾಪಾತ್ರಭೂತಾನಾಂ ನಾಶುಭಂ ವಿದ್ಯತೇ ಹರ ।
ಮತ್ತಶ್ಶ್ರುತಶ್ಚ ವೇದಾರ್ಥಸಾರಂ ಶೈವರಹಸ್ಯಕಂ ||೪೧||

ಸ್ಕಂದೋಽಯಂ ಸ್ಕಂದಿತಾರಾತಿರ್ವಿನೀತೋ ವೀತಮತ್ಸರಃ ।
ರಹಸ್ಯಂ ಯತ್ತ್ವಯಾ ಪ್ರೋಕ್ತಂ ಮುನೀನ್ ಶ್ರಾವಯತು ಪ್ರಭೋ ||೪೨||

ಸುರಭೂಸುರಸಂಘೇಷು ಗಣೇಂದ್ರೇಷು ಮಹೇಶ್ವರಃ ।
ಪ್ರಸಾದಃ ಕ್ರಿಯತಾಮದ್ಯ ಶ್ರವಣಾಯ ಮುನಿರ್ಧೃತಃ ||೪೩||

ಜೈಗೀಷವ್ಯೋಽಪಿ ಮತಿಮಾಂಸ್ತವ ಭಕ್ತಸ್ತ್ವನನ್ಯಧೀಃ ।
ತದಾ ದೇವ್ಯಾ ವಚಶ್ಶ್ರುತ್ವಾ ಕರಪಂಕಜಮುತ್ತಮಂ ||೪೪||

ನಿದಧೌ ಸ್ಕಂದಶಿರಸಿ ಜೈಗೀಷವ್ಯಸ್ಯ ಶಂಕರಃ ।
ಶಂಕರಶ್ರೀಕರಸ್ಪರ್ಶಾಜ್ಜೈಗೀಷವ್ಯಕುಮಾರಕೌ ||೪೫||

---

"ಸ್ವಾಮಿಯೇ, ನಿನ್ನ ದಯೆಗೆ ಪಾತ್ರರಾದವರು ಎಂದಿಗೂ ಅಮಂಗಳವನ್ನು ಪಡೆಯಲಾರರು. ಮಹಾನುಭಾವನೇ, ನೀನು ಹಿಂದೆ ನನಗೆ ಉಪದೇಶಿಸಿದ ವೇದಾರ್ಥಸಾರಭೂತವಾದ ಶಿವರಹಸ್ಯವನ್ನು ಈ ಕುಮಾರಸ್ವಾಮಿಯು ನನ್ನಿಂದ ಪಡೆದಿರುವನಷ್ಟೆ. ||೪೧||

ಕುಮಾರಸ್ವಾಮಿಯು ಸಕಲಶತ್ರುಗಳನ್ನೂ ಜಯಿಸಿದ ವೀರನು. ವಿನಯ ಸಂಪನ್ನನು. ಮತ್ಸರವಿಲ್ಲದವನು. ಇಂತಹವನು ನಿನ್ನಿಂದ ಪ್ರೋಕ್ತವಾದ ಶಿವರಹಸ್ಯವನ್ನು ಈ ಋಷಿಜನಕ್ಕೆ ಉಪದೇಶಿಸಲಿ. ||೪೨||

ಇಲ್ಲಿ ನೆರೆದಿರುವ ದೇವತೆಗಳು, ಭೂಸುರರು, ಗಣನಾಯಕರು, ಸಕಲ ಋಷಿಗಳೂ, ಜೈಗೀಷವ್ಯಮಹಾಮುನಿ, ಇವರೆಲ್ಲರೂ ಆಸಕ್ತಿಯಿಂದ ಶಿವರಹಸ್ಯಶ್ರವಣಾಸಕ್ತರಾಗಿ ಕುಳಿತಿರುವರು. ಅದಕ್ಕಾಗಿ ಇವರನ್ನು ಅನುಗ್ರಹಿಸು. ||೪೩||

ಜೈಗೀಷವ್ಯಮಹಾಮುನಿಯೂ ಬಹಳ ಪ್ರಾಜ್ಞನಾಗಿರುವನು. ನಿನ್ನನ್ನು ಬಿಟ್ಟು ಮತ್ತಾರನ್ನೂ ಭಜಿಸತಕ್ಕವನಲ್ಲ, ಎಂದು ಹೇಳಿದೊಡನೆಯೇ ಮಹೇಶ್ವರನು ಪ್ರೀತಿಯಿಂದ ತನ್ನ ಅಭಯಹಸ್ತವನ್ನು ಮೊದಲು ಷಣ್ಮುಖನ ತಲೆಯ ಮೇಲೂ,

**ನೇಮುತುಶ್ಶಿವಷಾದಾಬ್ಜಂ ಪ್ರೋತ್ಫುಲ್ಲಹೃದಯಾನನೌ ।**
**ಸ್ಕಂದಶ್ಶಿವಪದಾಬ್ಜಂ ತತ್ಕರಾಭ್ಯಾಂ ಸಂಸ್ಪೃಶನ್ ಜಗೌ ॥೪೬॥**

**ಅಯಂ ಮೇ ಹಸ್ತಮಂತ್ರೇಣ ಸ್ವನೇತ್ರಕಮಲಸ್ರವೈಃ ।**
**ಅಭ್ಯಷಿಂಚನ್ಮುದಾ ಭಕ್ತ್ಯಾ ನಾನ್ಯತ್ಕಿಂಚಿದಮನ್ಯತ ॥೪೭॥**

**ಸ್ಕಂದಂ ಪ್ರಾಹ ಮಹಾದೇವೋ ಜೈಗೀಷವ್ಯೇಕ್ಷಣಸ್ತದಾ ।**

॥ ಈಶ್ವರ ಉವಾಚ ॥

**ಶಿವೇ ಕಿಲೈಷ ತೋಷಕೃನ್ಮುನೀಶ್ವರೇಷು ಯತ್ಪ್ರಿಯೋ ।**
**ವಿಶೇಷತಃ ಕೃಪಾರ್ದ್ರುರೀಭರೀಕುಲೇನ ಲೋಕಿತಃ ।**
**ಕಲಾಕುಲೇನ ತರ್ಪಿತೋ ಯಥೈಣಬಾಲಲಾಂಛನ ।**
**ಸ್ತಥೈಷ ಜೈಗಿಷವ್ಯಕಃ ಕಟಾಕ್ಷತೋ ಭವೇನ್ಮಮ ॥೪೮॥**

---

ಅನಂತರ ಜೈಗೀಷವ್ಯಮಹರ್ಷಿಯ ತಲೆಯ ಮೇಲೂ ಇಟ್ಟನು. ಮಹಾದೇವನ ಕರಸ್ಪರ್ಶದಿಂದ ಎಚ್ಚೆತ್ತ ಜೈಗೀಷವ್ಯ ಮತ್ತು ಕುಮಾರಸ್ವಾಮಿ ಇವರಿಬ್ಬರೂ ॥೪೫॥

ವಿಕಸಿತವಾದ ವದನ ಮತ್ತು ಹೃದಯವುಳ್ಳವರಾಗಿ ಶಿವನ ಪಾದಗಳಿಗೆ ಅಭಿವಂದಿಸಿದರು. ಆಮೇಲೆ ಕುಮಾರಸ್ವಾಮಿಯು, ಪರಮೇಶ್ವರನ ಪಾದಗಳನ್ನು ಮುಟ್ಟಿ ಹೀಗೆ ಹೇಳಿದನು. ॥೪೬॥

ಪರಮೇಶ್ವರನೇ, ಈ ಜೈಗೀಷವ್ಯಋಷಿಯು, ನನ್ನ ಹಸ್ತವೆಂಬ ಮಂತ್ರದಿಂದಲೂ ನೇತ್ರಾವಲೋಕನವೆಂಬ ಜಲಧಾರೆಯಿಂದಲೂ, ಅಭಿಷಿಕ್ತನಾಗಿರುವನು. ಭಕ್ತಿಯೊಂದನ್ನು ಬಿಟ್ಟು ಮತ್ತಾವುದನ್ನೂ ಈತನು ಅಪೇಕ್ಷಿಸಲಾರನು. ॥೪೭॥

ಎಂದು ಹೇಳಿದ ಸ್ಕಂದಸ್ವಾಮಿಯನ್ನು ಕುರಿತು, ಮಹಾದೇವನು ಜೈಗೀಷವ್ಯ ಮಹಾಮುನಿಯನ್ನು ನೋಡುತ್ತಾ ಇಂತೆಂದನು.—ಎಲೈ ಸ್ಕಂದನೇ, ಈ ಜೈಗೀಷವ್ಯ ಮಹಾಮುನಿಯು ನನ್ನಲ್ಲಿ ವಿಶೇಷವಾದ ಭಕ್ತಿಯನ್ನಿಟ್ಟು ನನ್ನನ್ನು ತೃಪ್ತಿಗೊಳಿಸಿರುವನು. ಋಷಿಗಳಲ್ಲಿ ಅತ್ಯಂತ ಶ್ರೇಷ್ಠನಾದವನು ಈತನು. ಆದ್ದರಿಂದಲೇ ಈ ಮುನಿಯು ನನ್ನ ಕೃಪಾಕಟಾಕ್ಷಕ್ಕೆ ಪಾತ್ರನಾಗಿರುವನು. ಹೇಗೆ ಬಾಲಚಂದ್ರನು ತನ್ನ ಕಲಾಸಮೂಹದಿಂದ ನನ್ನನ್ನು ತೃಪ್ತಿಗೊಳಿಸಿ, ನನ್ನ ಶಿರಸ್ಸಿಗೆ ಆಭರಣವಾಗಿ ನಿಂತಿರುವನೋ, ಹಾಗೆ ಈ ಜೈಗೀಷವ್ಯಮಹಾಮುನಿಯು ಭಕ್ತಿಮಾರ್ಗದಲ್ಲಿ ನನ್ನನ್ನು ಮೆಚ್ಚಿಸಿ ಪ್ರೀತಿಪಾತ್ರನಾಗಿರುವನು. ॥೪೮॥

ಪ್ರಸಾದ್ಯ ಸರ್ವಾನಮರಾನ್ ಮುನೀಂದ್ರಾನ್
ಗಣೇಶ್ವರಾನ್ ಸ್ಕಂದಮುನೀನ್ಮಹೇಶ್ವರಃ ।
ಜಗಾಮ ಗೌರ್ಯಾ ಜಗತಾಂ ವಿಧಾತಾ
ಸಂಸ್ತೂಯಮಾನೋ ಮುನಿದೇವಸಂಘೈಃ ॥೪೯॥

ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ಜೈಗೀಷವ್ಯ ಸ್ಕಂದಸಂವಾದೇ
ದಶಮೋಽಧ್ಯಾಯಃ

---

ಎಂದು ಹೇಳುತ್ತಾ, ಮಹೇಶ್ವರನು ಅಲ್ಲಿ ನೆರೆದಿದ್ದ ಸಕಲ ಮಹರ್ಷಿಗಳ ವೃಂದವನ್ನೂ ಸಮಾಧಾನಗೊಳಿಸಿ, ಗೌರೀದೇವಿಯೊಡನೆ ದೇವಸ್ತುತನಾಗಿ ತನ್ನ ನಿವಾಸವನ್ನು ಕುರಿತು ಪ್ರಯಾಣಮಾಡಿದನು. ॥೪೯॥

ಎಂಬಲ್ಲಿಗೆ ಶಿವರಹಸ್ಯದ ಪ್ರಥಮಾಂಶದಲ್ಲಿ ಜೈಗೀಷವ್ಯ ಮತ್ತು ಕುಮಾರಸ್ವಾಮಿ
ಇವರ ಸಂವಾದದಲ್ಲಿ ಹತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

# ಅಥ ಶ್ರೀಶಿವರಹಸ್ಯೇ

## ಏಕಾದಶೋಽಧ್ಯಾಯಃ

### ದ್ವಾದಶಾಂಶಸಂಖ್ಯಾಕಥನಂ

॥ ಸೂತ ಉವಾಚ ॥

ಶಿವದರ್ಶನಜಾನಂದಸಂದೋಹಾನಂದನಿರ್ಭರಃ ।
ಪ್ರಾಹ ಶೂರಾರಿರಿತ್ಥಂ ತಂ ಮುನಿಮಾಲೋಕ್ಯ ಶಾಂಕರಂ ॥೧॥

॥ ಸ್ಕಂದ ಉವಾಚ ॥

ಜೈಗೀಷವ್ಯ ಶೃಣುಷ್ವಾದ್ಯ ರಹಸ್ಯಾಖ್ಯಾನಮುತ್ತಮಂ ।
ಶೈವೇ ರಹಸ್ಯೇ ದೇವೇನ ದೇವ್ಯೈ ಕಥಿಕಥಾನಕಂ ॥೨॥

ತದ್ವಕ್ಷ್ಯಾಮಿ ಸಮಾಸೇನ ಶೃಣು ತ್ವಂ ಮುನಿಭಿಸ್ಸಹ ।
ಗಣೇಶ್ವರೈಸ್ಸುರೇಶೈಶ್ಚ ತತ್ರಾದಾ ಕಥಯಾಮ್ಯಹಂ ॥೩॥

---

## ಶ್ರೀಶಿವರಹಸ್ಯದಲ್ಲಿ ಹನ್ನೊಂದನೆಯ ಅಧ್ಯಾಯ

ಮಹಾಶೂರನಾದ ಕುಮಾರಸ್ವಾಮಿಯು ಶಿವದರ್ಶನದಿಂದ ಅಮಿತವಾದ ಆನಂದವನ್ನು ಪಡೆದವನಾಗಿ, ಶಂಕರನ ಮೆಚ್ಚಿನ ಭಕ್ತನಾದ ಜೈಗೀಷವ್ಯಮುನಿಯನ್ನು ಕುರಿತು ಹೀಗೆಂದನು. ॥೧॥

" ಎಲೈ ಮಹರ್ಷಿಯೆ, ಪರಮೇಶ್ವರನು ಪ್ರೀತಿಯಿಂದ ದೇವಿಗೆ ಉಪದೇಶಿಸಿದ ಶಿವರಹಸ್ಯವನ್ನು ನಾನು ನಿನಗೆ ಈಗ ಹೇಳುವೆನು ಕೇಳು. ॥೨॥

ಈಗ ಇಲ್ಲಿ ನೆರೆದಿರುವ ಗಣಾಧಿಪತಿಗಳಿಗೂ, ದೇವತೆಗಳಿಗೂ ಅನುಕೂಲವಾಗುವಂತೆ ಆ ಶಿವರಹಸ್ಯವನ್ನು ಸಂಕ್ಷೇಪವಾಗಿ ತಿಳಿಸುವೆನು. ನೀನು ಅದನ್ನು ಕೇಳುವವನಾಗು. ॥೩॥

ನಮಸ್ಕೃತ್ವಾಽಪ್ರಮೇಯಾಯ ಮಹಾದೇವಾಯ ಶಂಭವೇ ।
ದೇವೀಂ ಗಜಾನನಂ ದೇವಂ ಶೈವಾಚಾರ್ಯಾನಕಲ್ಮಷಾನ್ ॥೪॥

ಮಾಹೇಶಾಂಶಃ ಪ್ರಥಮತೋ ನಾಮ್ನಾಸೌ ಮುನಿಸತ್ತಮ ।
ಜೈಗೀಷವ್ಯಪ್ರಸಾದಂ ತೇ ಮಹೇಶಸ್ಯ ಸಮಾಗಮಃ ॥೫॥

ಗಣಾನಾಂ ದೇವಸಂಘಾನಾಂ ಮುನೀನಾಂ ಚ ಸಮಾಗಮಃ ।
ಮಯಾ ಪ್ರಸಾದಿತೋ ದೇವಸ್ತೋತ್ರವರ್ಯೇಣ ಸತ್ತಮ ॥೬॥

ಕೈಲಾಸವರ್ಣನಂ ಚೈವ ವಿಚಿತ್ರಂ ಶ್ರೀಮಹೇಶಿತುಃ ।
ದೇವ್ಯಾ ಮಹೇಶಸಂವಾದಃ ಕೌತುಕೇನ ನಗೋತ್ತಮೇ ॥೭॥

ಚರಿತಂ ಶಿವಯೋಸ್ತತ್ರ ವಿಚಿತ್ರಂ ಭೂಧರೋತ್ತಮೇ ।
ಕೈಲಾಸೇಶ್ವರಪೂಜಾ ಚ ಮಹೇಶೇನ ಪ್ರಕಲ್ಪನಂ ॥೮॥

---

ಎಲ್ಲಕ್ಕೂ ಮೊದಲು ಅಪ್ರಮೇಯನಾದ ಮಹಾದೇವನಿಗೂ, ಪಾರ್ವತಿಗೂ ನಮಸ್ಕರಿಸಿ, ಗಣಪತಿಯನ್ನೂ, ಇನ್ನೂ ಕಲ್ಮಷರಹಿತರಾದ ಶಿವಕಿಂಕರರನ್ನೂ ಸ್ಮರಿಸಿ ಶಿವರಹಸ್ಯವನ್ನು ಆರಂಭಿಸುವೆನು. ॥೪॥

ಶಿವರಹಸ್ಯದಲ್ಲಿ ಒಟ್ಟು ಹನ್ನೆರಡು ಅಂಶಗಳಿವೆ. ಅದರಲ್ಲಿ ಮೊದಲನೆಯ ಅಂಶವೇ ಮಾಹೇಶಾಂಶ. ಅದರಲ್ಲಿ ಶಂಕರನು ನಿನಗೆ ಅನುಗ್ರಹವಿತ್ತದ್ದು, ಮತ್ತು ಶಂಕರ ಜೈಗೀಷವ್ಯರ ಸಮಾಗಮ, ॥೫॥

ಸಮಸ್ತ ಗಣಗಳೂ, ದೇವತೆಗಳೂ, ಋಷಿಜನರೂ ಒಟ್ಟಾಗಿ ಬಂದು ಇಲ್ಲಿಗೆ ಸೇರಿದುದು. ನಾನು ಶಂಕರನನ್ನು ಬಹುವಾಗಿ ಸ್ತುತಿಸಿ, ತೃಪ್ತಿಪಡಿಸಿದುದು. ॥೬॥

ಕೈಲಾಸವರ್ಣನೆ, ಅಲ್ಲಿ ತೋರಿಬರುವ ಶಿವಮಹಿಮೆಯ ವೈಚಿತ್ರ್ಯ, ಅಲ್ಲಿ ಶಿವಪಾರ್ವತಿಯರ ಸಂವಾದ. ॥೭॥

ಶಿವಪಾರ್ವತಿಯರ ಇತಿಹಾಸ, ಮಂದರಪರ್ವತದ ವೈಚಿತ್ರ್ಯ, ಮಹೇಶ್ವರನು ಮಾಡಿದ ಕೈಲಾಸೇಶ್ವರಪೂಜೆ, ॥೮॥

ದ್ವಾರಪ್ರಾಕಾರರಚನಾ ಗಣಾನಾಂ ಸ್ಥಾನಕಲ್ಪನಂ ।
ಮಮ ದೇವ್ಯಾಶ್ಚ ವಿಪ್ರೇಂದ್ರ ಗಣೇಶಸ್ಯ ಮಹಾತ್ಮನಃ ॥೯॥

ಸಹಸ್ರಲಿಂಗಾಧ್ಯಾಯಂ ಚ ಕೈಲಾಸಸ್ಯ ತಪಃಕ್ರಿಯಾ ।
ತತ್ಪ್ರಸಾದನಮೀಶೇನ ತಸ್ಮಿನ್ಲಾ ವಸತಿಸ್ತಥಾ ॥೧೦॥

ಕೈಲಾಸಸ್ಯಾಭಿಷೇಕಂ ಚ ಶಂಭುನಾ ಕಲ್ಪಿತೋ ನಗೈಃ ।
ಜಿಜ್ಞಾಸಾ ಚೈವ ದೇವಾನಾಂ ದೇವ್ಯಾಃ ಪ್ರಾದುರ್ಭವಾತ್ಸುರಾಃ ॥೧೧॥

ಜ್ಞಾನಾರ್ಥಕಥನಂ ಚೈವ ಚಾತ್ಮಲಿಂಗಸ್ಯ ಪೂಜನಂ ।
ಮಾಹೇಶೇಸ್ಮಿನ್ಮಹೇಶೇನ ಕಥಾಃ ಪ್ರೋಕ್ತಾಸ್ತ್ವಿನೇನ ಹಿ ॥೧೨॥

ದಿಕ್ಸಂಖ್ಯಯಾ ಮುನಿಶ್ರೇಷ್ಠ ಕಥಿತೋಽಯಂ ಸಹಸ್ರತಃ ।
ದ್ವಿತೀಯೋಂಶೋ ಭವೋ ನಾಮ್ನಾ ತಸ್ಮಿನ್ ಪ್ರೋಕ್ತಂ ಹರೇಣ ಹಿ ॥೧೩॥

---

ದ್ವಾರ ಮತ್ತು ಪೌಳಿ ಇವುಗಳ ರಚನಾಕ್ರಮ, ಪ್ರಮಥಗಣಗಳಿಗೂ, ನನಗೂ, ಗಣಪತಿಗೂ, ದೇವಿಗೂ ನಿಯತವಾಗಿರುವ ಸ್ಥಾನವಿಶೇಷಗಳ ಸ್ವರೂಪ, ||೯||

ಸಹಸ್ರಲಿಂಗಾಧ್ಯಾಯನಿರೂಪಣ, ಕೈಲಾಸಪರ್ವತವು ತಪಸ್ಸನ್ನಾಚರಿಸಿದುದು. ಆಗ ಪರಮೇಶ್ವರನಿಂದ ಪರ್ವತಕ್ಕೆ ಬಂದ ಅನುಗ್ರಹ, ಕೈಲಾಸದ ಕೋರಿಕೆಯಂತೆ ಶಿವಪರಿವಾರವು ಅಲ್ಲಿ ವಾಸಮಾಡುವಿಕೆ. ||೧೦||

ಶಂಕರನು ಸಮಸ್ತ ಪರ್ವತಗಳ ಒಡೆತನವನ್ನು ಕೈಲಾಸಕ್ಕೆ ಕೊಟ್ಟು ಅದಕ್ಕೆ ಅಭಿಷೇಕಮಾಡಿಸುವಿಕೆ, ಆಗ ದೇವಿಯು ದೇವತೆಗಳ ಉತ್ಪತ್ತಿಯ ವಿಷಯವನ್ನು ತಿಳಿಯಲು ಇಷ್ಟಪಡುವುದು, ||೧೧||

ಜ್ಞಾನೋದ್ದೇಶವಾಗಿ ಮಾಡಬೇಕಾದ ಕರ್ಮಗಳು, ಆತ್ಮಲಿಂಗಪೂಜಾವಿಧಾನ ಈ ವಿಷಯಗಳೆಲ್ಲವನ್ನೂ ಪರಶಿವನು ಈ ಮೊದಲನೆಯ ಮಹೇಶಾಂಶದಲ್ಲಿ ವಿವರಿಸಿರುವನು. ||೧೨||

ಈ ಮೊದಲನೆಯ ಅಂಶದಲ್ಲಿ ಎಂಟುಸಾವಿರ ಗ್ರಂಥಗಳಿವೆ: ಎರಡನೆಯ ಅಂಶವೇ ಭವನಾಮಕವಾದ ಅಂಶ. ||೧೩||

ದೇವ್ಯಾಶ್ಚೈವ ತಪಶ್ಚರ್ಯಾ ಮಣಿದ್ವೀಪಾಗಮಸ್ತಥಾ ।
ಕಲ್ಪವಾಟೀರಮ್ಯನೀಪವನದ್ವೀಪೋಪವರ್ಣನಂ ॥೧೪॥

ಚಿಂತಾಮಣಿಮಹಾಸೌಧವರ್ಣನಂ ಶ್ರೀಪುರಸ್ಯ ಚ ।
ತಸ್ಮಾತ್ಕೈಲಾಸಗಮನಂ ಕಾಮೇಶಸ್ಯ ವಪುರ್ಧರಃ ॥೧೫॥

ಕಾಮೇಶಯಾ ಚ ದೇವ್ಯಾಶ್ಚ ತತ್ರ ನಿತ್ಯಮವಸ್ಥಿತಿಃ ।
ಹಿಮಾಚಲಾಗಮಶ್ಚೈವ ದೇವ್ಯಾಸ್ತತ್ರಗತಿರ್ಮುನೇ ॥೧೬॥

ದೂರ್ವಾಸಸೋ ಮಹಿಮ್ನಶ್ಚ ಕಥನಂ ತತ್ತಪಃಕ್ರಿಯಾ ।
ದ್ವಿತೀಯೇ ಭವಸಂಜ್ಞೇಽತ್ರ ಕಥಿತಂ ಶಂಕರೇಣ ಹಿ ॥೧೭॥

ಸಹಸ್ರತ್ರಿತಯೇನೈವ ಶ್ಲೋಕಸಾರ್ಧೇನ ಶಂಕರಃ ।
ಹರಸ್ತೃತೀಯೋ ದೇವೇನ ಕಥಿತೋಂಶೋ ಮುನೀಶ್ವರಾಃ ॥೧೮॥

ತಸ್ಮಿನ್ ಮುನಿಪ್ರಾರ್ಥನಯಾ ವ್ಯಾಸೇನ ಪರಿಕೀರ್ತನಂ ।
ಗಾಯತ್ರ್ಯಾಶ್ಚ ತಪಶ್ಚರ್ಯಾ ದೇವ್ಯಾಗಮನಮುತ್ತಮಂ ॥೧೯॥

---

ಇದರಲ್ಲಿ ದೇವಿಯ ತಪಸ್ಸು, ಮಣಿದ್ವೀಪಾಗಮನ, ಅಲ್ಲಿರುವ ಕಲ್ಪವಾಟೀ, ನೀಪವನ ದ್ವೀಪ ಇವುಗಳ ವರ್ಣನೆ. ॥೧೪॥

ಚಿಂತಾಮಣಿಯಿಂದ ಕೂಡಿದ ಮಹಾಸೌಧದ ವರ್ಣನೆ, ಶ್ರೀಪುರವರ್ಣನೆ, ಕೈಲಾಸಗಮನ, ಅಲ್ಲಿ ಕಾಮೇಶನ ಆಕಾರವನ್ನು ಧರಿಸುವಿಕೆ. ॥೧೫॥

ಕೈಲಾಸಪರ್ವತದಲ್ಲಿ ಕಾಮೇಶ್ವರನೊಡನೆ ದೇವಿಯು ವಾಸಮಾಡುವಿಕೆ, ಅಲ್ಲಿಂದ ದೇವಿಯು ಹಿಮಾಲಯಕ್ಕೆ ಹಿಂದಿರುಗುವಿಕೆ, ॥೧೫॥

ದೂರ್ವಾಸಮಹರ್ಷಿಯ ತಪಸ್ಸು ಮತ್ತು ಮಹಿಮೆ ಇವುಗಳ ವರ್ಣನೆ, ಇವೇ ಮೊದಲಾದ ವಿಷಯಗಳು ಶಂಕರನಿಂದ ಎರಡನೆಯದಾದ ಭವಾಂಶದಲ್ಲಿ ಪ್ರತಿಪಾದಿತ ವಾಗಿವೆ. ॥೧೬-೧೭॥

ಈ ಎರಡನೆಯ ಅಂಶದಲ್ಲಿ ಮೂರೂವರೆಸಹಸ್ರ ಶ್ಲೋಕಗಳಿವೆ. ಮೂರನೆಯ ಅಂಶವೇ ಹರಾಂಶ. ಅದರಲ್ಲಿ; ॥೧೮॥

ಋಷಿಗಳ ಪ್ರಾರ್ಥನೆಯನ್ನು ಅಂಗೀಕರಿಸಿ, ವ್ಯಾಸಮಹರ್ಷಿಗಳು ಗಾಯತ್ರೀ

ಗಣಾನಾಂ ಪ್ರೇಷಣಂ ಚೈವ ತೀರ್ಥೇಶಮಹಿಮಾ ತಥಾ ।
ಶ್ರೀಶೈಲಮಹಿಮಾ ಚಾಪಿ ಮಾನಸಾರ್ಚನಕಲ್ಪನಂ ॥೨೦॥

ಜನಕಸ್ಯ ಚ ಸಂವಾದೋ ಯಾಜ್ಞವಲ್ಕ್ಯೇನ ಶಂಕರ ।
ಪದ್ಮಾವತ್ಯಾ ರತ್ನನಿಧೇಸ್ಸಂವಾದಃ ಪರಮಾದ್ಭುತಃ ॥೨೧॥

ತಸ್ಯೋತ್ತರಾರ್ಧೇ ಚಾಂಶಸ್ಯ ಪೂಜಾರತ್ನನಿಧೇಸ್ತಥಾ ।
ಶಿವಸ್ಯ ದೇವದೇವಸ್ಯ ಮಹಾದೇವಸ್ಯ ಶೂಲಿನಃ ॥೨೨॥

ಯಮಲೋಕಸ್ಯ ವೃತ್ತಾಂತೋ ದರ್ಶನಂ ಶಿವಯೋಸ್ತಥಾ ।
ಸಂವಾದೋ ಭಸ್ಮರುದ್ರಾಕ್ಷಧಾರಣೇ ಮಹಿಮಾಪಿ ಚ ॥೨೩॥

ಗಂಗಾಯಾ ನರ್ಮದಾಯಾಶ್ಚ ವರಪ್ರಾಪ್ತ್ಯುಪವರ್ಣನಂ ।
ಮಾಹೇಶ್ವರವ್ರತಂ ಚೈವ ವರ್ಣನಂ ಶ್ರೀಮಹೇಶಿತುಃ ॥೨೪॥

---

ಮಂತ್ರದ ಮಹಿಮೆಯನ್ನೂ, ತಪಶ್ಚರ್ಯಾವಿಧಿಯನ್ನೂ ವಿವರಿಸುವಿಕೆ, ದೇವಿಯು ಮತ್ತೆ ಕೈಲಾಸಕ್ಕೆ ಬರುವುದು. ॥೧೯॥

ಪ್ರಮಥಗಣಗಳ ಆಗಮನ, ತೀರ್ಥೇಶಮಹಿಮೆ, ಶ್ರೀಶೈಲಮಹಿಮೆ, ಮಾನಸಾರ್ಚನಫಲ, ಇವುಗಳೂ ವಿವೃತವಾಗಿವೆ. ॥೨೦॥

ಯಾಜ್ಞವಲ್ಕ್ಯ ಮತ್ತು ಜನಕರಾಜನ ಸಂವಾದ, ರತ್ನನಿಧಿ ಮತ್ತು ಪದ್ಮಾವತಿ ಇವರಿಬ್ಬರ ಸಂವಾದ, ಈ ಸಂವಾದಗಳು ಪರಮಾದ್ಭುತವಾಗಿವೆ. ॥೨೧॥

ಈ ಮೂರನೆಯ ಅಂಶದ ಉತ್ತರಾರ್ಧದಲ್ಲಿ ರತ್ನನಿಧಿಯ ಪೂಜೆಯೂ, ದೇವದೇವನಾದ ಮಹಾದೇವನ ಪೂಜಾಕ್ರಮ ಇವುಗಳು ಉಕ್ತವಾಗಿವೆ. ॥೨೨॥

ಯಮಲೋಕದ ವಿಚಾರಗಳು, ಪಾರ್ವತೀಪರಮೇಶ್ವರರ ದರ್ಶನಕ್ರಮ, ಸ್ಮಧಾರಣ, ರುದ್ರಾಕ್ಷಧಾರಣ, ಇವುಗಳ ಕ್ರಮ, ಇವುಗಳ ಮಹಿಮೆ, ಈ ವಿಷಯವಾಗಿ ಪಾರ್ವತೀ ಪರಮೇಶ್ವರರ ಸಂಭಾಷಣೆ. ॥೨೩॥

ಗಂಗಾ ಮತ್ತು ನರ್ಮದಾನದಿಗಳಿಗೆ ಮಹಾದೇವನು ಕೊಟ್ಟ ವರಗಳು. ಮತ್ತು ಮಾಹೇಶ್ವರವ್ರತವಿಧಾನ. ॥೨೪॥

ಶೈವಾರ್ಚನಾದಿಕಥನಂ ಶಿವಡುಂಡಿಚರಿತ್ರಕಂ ।
ತ್ರಯಸ್ತ್ರಿಂಶತ್ಸಹಸ್ರೇಣ ಸಂಖ್ಯಯಾ ಪ್ರೋಕ್ತ ಏವ ಹಿ ॥೨೫॥

ಚತುರ್ಥಶ್ಶಿವಸಂಜ್ಞೋ ಹಿ ಚಾಂಶಸ್ಸಾಕ್ಷಾಚ್ಛಿವೋದಿತಃ ।
ಬೃಹಜ್ಜಾಬಾಲಧರ್ಮಾದಿಕಥನಂ ದಶಕಸ್ಯ ಹಿ ॥೨೬॥

ಭಸ್ಮರುದ್ರಾಕ್ಷಮಹಿಮಾ ಶಿವಲಿಂಗಾರ್ಚನಸ್ಯ ಹಿ ।
ಮಹಿಮಾ ಶಿವಭಕ್ತಾನಾಂ ಶೈವಾನಾಂ ಭೋಜನೇಽಪಿ ಚ ॥೨೭॥

ಶಿವಕ್ಷೇತ್ರನಿವಾಸಸ್ಯ ಕಥನಂ ಬಿಲ್ವಪೂಜನಾತ್ ।
ಪೂಜಾಪ್ರಭಾವಕಥನಂ ತಸ್ಮಿನ್ನಂಶೇ ಪ್ರಕೀರ್ತಿತಂ ॥೨೮॥

ಚತುಸ್ಸಹಸ್ರತಸ್ಸಂಖ್ಯಾ ದೇವದೇವೋದಿತಾ ಶುಭಾ ।
ಭರ್ಗೋ ನಾಮ್ನಾ ಪಂಚಮಾಂಶಃ ಕಥಿತೋಽತ್ರ ಶಿವೇನ ಹಿ ॥೨೯॥

---

ಶೈವಾರ್ಚನವಿಧಾನ, ಶಿವಡುಂಡಿಯ ಚರಿತ್ರೆ, ಇವುಗಳು ಪ್ರತಿಪಾದಿತವಾಗಿವೆ. ಒಟ್ಟು ಈ ಮೂರನೆಯ ಅಂಶದಲ್ಲಿ ಮೂವತ್ತುಮೂರುಸಾವಿರ ಗ್ರಂಥಗಳಿವೆ. ॥೨೫॥

ನಾಲ್ಕನೆಯದೇ ಶಿವಾಖ್ಯವಾದ ಅಂಶ. ಇದರಲ್ಲಿ ಬೃಹಜ್ಜಾಬಾಲನಿಂದ ನಿರೂಪಿತವಾದ ದಶಧರ್ಮಗಳ ವಿವರಣೆಯನ್ನು ಪರಮೇಶ್ವರನು ಪ್ರತಿಪಾದಿಸಿರುವನು. ॥೨೬॥

ಭಸ್ಮ ಮತ್ತು ರುದ್ರಾಕ್ಷಿ ಇವುಗಳ ಮಹಿಮೆ, ಶಿವಲಿಂಗಾರ್ಚನಫಲ, ಶಿವಭಕ್ತರ ಮಹಿಮೆ, ಶಿವಪ್ರಸಾದ ಭೋಜನ, ॥೨೭॥

ಶಿವಕ್ಷೇತ್ರವಾಸ, ಬಿಲ್ವಾರಾಧನೆಯ ಪೂಜಾಪ್ರಭಾವ, ಇವುಗಳು ಆ ನಾಲ್ಕನೆಯ ಅಂಶದಲ್ಲಿ ಪ್ರತಿಪಾದಿತವಾಗಿವೆ. ॥೨೮॥

ಇದರಲ್ಲಿ ನಾಲ್ಕುಸಹಸ್ರ ಗ್ರಂಥಗಳಿವೆ. ಹಾಗೆಯೇ ಐದನೆಯದಾದ ಭರ್ಗಾಂಶವನ್ನೂ ಶಂಕರನು ವಿಷಯಪೂರಿತವಾಗಿ ನಿರೂಪಿಸಿರುವನು. ॥೨೯॥

ಜ್ಯೋತಿರ್ಲಿಂಗದ್ವಾದಶಾನಾಂ ಮಹಿಮಾ ತತ್ರ ಕೀರ್ತಿತಃ ।
ವಾಮದೇವೋಪದೇಶಶ್ಚ ಶ್ರುತಿಸಿದ್ಧಾಂತಕೀರ್ತನಂ ॥೩೦॥

ಗಂಗಾಸಾಗರಮಾಹಾತ್ಮ್ಯಂ ಪ್ರಭಾಸೇ ಪುಷ್ಕರಸ್ಯ ಚ ।
ಹರಿದ್ವಾರಪ್ರಭಾವಶ್ಚ ಬಿಲ್ವಮೂಲಾರ್ಚನಸ್ಯ ಚ ॥೩೧॥

ಸಹಸ್ರನಾಮಕಥನಂ ದೇವದೇವಸ್ಯ ಶೂಲಿನಃ ।
ಮಹಿಮಾ ದೇವದೇವೇನ ಕಥಿತೋಽಸ್ತಿ ವಿಶೇಷತಃ ॥೩೨॥

ಶಿವಾಯೈ ಷಟ್‌ಸಹಸ್ರೋಽತ್ರ ಕಥಿತೋ ಮುನಿಸತ್ತಮ ।
ಶಂಕರಾಂಶಸ್ತತಷ್ಷಷ್ಠೋ ದಿಕ್ಸಂಖ್ಯಾ ಕ್ರಮಸಂಖ್ಯಯಾ ॥೩೩॥

ಕಥಿತಶ್ಚೈಕಮಹೇಶೇನ ತಸ್ಮಿನ್ ರುದ್ರೋಪವರ್ಣನಂ ।
ಶಿವಲಿಂಗಾರ್ಚನಸ್ಯಾಪಿ ಭಸ್ಮರುದ್ರಾಕ್ಷಧಾರಿಣಾಂ ॥೩೪॥

ಮಹಿಮಾ ಶಾಂಭವಾನಾಂ ಚ ಕಥಿತೋ ವಿಸ್ತರೇಣ ಹಿ ।
ನಿದಾಘಋಭುಸಂವಾದಷ್ಷಷ್ಠಾಂಶೋ ಜ್ಞಾನವಿಸ್ತರಃ ॥೩೫॥

---

ಆ ಪಂಚಮಾಂಶದಲ್ಲಿ ದ್ವಾದಶಜ್ಯೋತಿರ್ಲಿಂಗಗಳ ಮಹಿಮೆಯೂ, ವಾಮದೇವನ ಉಪದೇಶವೂ, ವೇದಗಳ ಸಿದ್ಧಾಂತವನ್ನು ನಿರೂಪಿಸುವ ಕ್ರಮವೂ ವಿವೃತವಾಗಿದೆ. ॥೩೦॥

ಗಂಗಾಸಾಗರಮಹಿಮೆಯೂ, ಪ್ರಭಾಸತೀರ್ಥ, ಪುಷ್ಕರತೀರ್ಥದ ಮಹಿಮೆ, ಹರಿದ್ವಾರಕ್ಷೇತ್ರಮಹಿಮೆ, ಬಿಲ್ವವೃಕ್ಷಾರ್ಚನೆಯ ಫಲ. ॥೩೧॥

ಶಿವಸಹಸ್ರನಾಮಸ್ತೋತ್ರ, ಶಿವಮಹಿಮೆ, ಇವುಗಳು ಶಂಕರನಿಂದ ಪಾರ್ವತಿಗೆ ವಿಶೇಷವಾಗಿ ಉಕ್ತವಾಗಿವೆ. ॥೩೨॥

ಐದನೆಯ ಅಂಶದಲ್ಲಿ ಆರುಸಾವಿರ ಶ್ಲೋಕಗಳು ಉಕ್ತವಾಗಿವೆ. ಆರನೆಯ ಅಂಶವೇ ಶಂಕರಾಂಶ, ಇದರಲ್ಲಿ ಎಂಟುಸಾವಿರ ಶ್ಲೋಕಗಳಿವೆ. ॥೩೩॥

ಅದರಲ್ಲಿ ಏಕಾದಶರುದ್ರರ ವಿಷಯಗಳು, ಭಸ್ಮ, ರುದ್ರಾಕ್ಷಿಗಳನ್ನು ಧರಿಸಿದವರು ಶಿವಲಿಂಗವನ್ನು ಅರ್ಚಿಸುವ ವಿಧಾನ, ಇವುಗಳನ್ನು ಶಂಕರನು ವಿವರಿಸಿರುವನು. ॥೩೪॥

ಅಲ್ಲದೆ ಶಂಭು ಭಕ್ತರ ಮಹಿಮೆಯು ಬಹುವಿಸ್ತಾರವಾಗಿ ಹೇಳಲ್ಪಟ್ಟಿದೆ.

ಉಗ್ರೋ ನಾಮ್ನಾ ಸಪ್ತಮೋತ್ರ ಕಥಿತಶ್ಶಂಕರೇಣ ಹಿ ।
ದೇವಸ್ಯ ದೇವ್ಯಾ ಸಂವಾದೋ ನಾಮಸಾಹಸ್ರಕೀರ್ತನಂ ॥೩೬॥

ಅವಿಮುಕ್ತಪ್ರಶಂಸಾ ಚ ಶತರ್ಚನತಪಃಕ್ರಿಯಾ ।
ನಾಮ್ನಾಮಷ್ಟೋತ್ತರಾಖ್ಯಾನಂ ಮಹಿಮ್ನ(?)ಮಥ ವೈ ಹರೇಃ॥೩೭॥

ಪುಷ್ಪದಂತಮಹಿಮ್ನಾಖ್ಯಕಥನಂ ತತ್ರ ಸತ್ತಮ ।
ಕಾಟಕೋಟರಜಾಖ್ಯಾನಂ ಕ್ಷೇತ್ರಾಣಾಂ ಮಹಿಮಾ ತಥಾ ॥೩೮॥

ಶ್ರೀಶೈಲಸ್ಯಾರುಣಾದ್ರೇಶ್ಚ ತಥಾ ವೃದ್ಧಾಚಲಸ್ಯ ಚ ।
ಶ್ರೀಮದ್ದಕ್ಷಿಣಕೈಲಾಸಮಾಹಾತ್ಮ್ಯಮಪಿ ವಿಸ್ತರಾತ್ ॥೩೯॥

ಪುಂಡರೀಕಪುರಸ್ಯಾಪಿ ಕಾಂಚ್ಯಾಶ್ರೀಮಹಿಮಾದ್ಭುತಃ ।
ಕುಂಭಕೋಣಪ್ರಶಂಸಾ ಚ ತಥಾ ಮಧ್ಯಾರ್ಜುನಸ್ಯ ಚ ॥೪೦॥

---

ನಿದಾಘ ಮತ್ತು ಋಭುಮಹರ್ಷಿ ಇವರಿಬ್ಬರ ಸಂಭಾಷಣೆಯು ಆರನೆಯ ಅಂಶದಲ್ಲಿ ವಿಸ್ತಾರವಾಗಿ ವರ್ಣಿತವಾಗಿದೆ. ॥೩೫॥

ಏಳನೆಯ ಅಂಶವೇ ಉಗ್ರಾಂಶ. ಅದರಲ್ಲಿ ಪರಮೇಶ್ವರನು ದೇವಿಗೆ ತನ್ನ ಸಹಸ್ರನಾಮಗಳನ್ನು ವಿವರಿಸಿರುವನು. ॥೩೬॥

ಅವಿಮುಕ್ತಲಿಂಗಪ್ರಶಂಸೆ, ಶತರ್ಚನಋಷಿಯ ತಪಸ್ಸು, ಅಷ್ಟೋತ್ತರಶತ ನಾಮಗಳು, ವಿಷ್ಣುಮಹಿಮಾವರ್ಣನೆ, ಇವುಗಳು ವಿವೃತವಾಗಿವೆ. ॥೩೭॥

ಪುಷ್ಪದಂತನ ಮಹಿಮೆ, ಕಾಟಕೋಟರಾಖ್ಯಾನ, ಅನೇಕ ಕ್ಷೇತ್ರಗಳ ಮಹಿಮಾ ವರ್ಣನೆ ಇವು ಸಪ್ತಮಾಂಶದಲ್ಲಿರುವ ವಿಷಯಗಳು, ॥೩೮॥

ಮತ್ತು ಶ್ರೀಶೈಲ, ಅರುಣಾಚಲ, ವೃದ್ಧಾಚಲ, ದಕ್ಷಿಣಕೈಲಾಸಮಹಿಮೆ, ಇವುಗಳೆಲ್ಲವೂ ವಿಸ್ತಾರವಾಗಿ ವರ್ಣಿತವಾಗಿವೆ. ॥೩೯॥

ಪುಂಡರೀಕಪುರದ ವರ್ಣನೆ, ಕಾಂಚೀ ಮಹಿಮೆ, ಕುಂಭಕೋಣ ಪ್ರಶಂಸೆ, ಮಧ್ಯಾರ್ಜುನಕ್ಷೇತ್ರ ಮಹಿಮಾ ಇವುಗಳೂ ವಿಸ್ತೃತವಾಗಿವೆ. ॥೪೦॥

ಚತುರ್ದಶಸಹಸ್ರೇಣ ಕಥಿತೋಽತ್ರ ಶಿವೇನ ಹಿ ।
ಭೀಮೋಽಷ್ಟಮೋ ಮಹಾಂಶೋಽತ್ರ ಕಥಿತೋ ವಿಸ್ತರೇಣ ಹಿ ॥೪೧॥

ದಿಙ್ನಾಗಸಂಖ್ಯಯಾ ಚೈವ ಸಹಸ್ರೇಣ ಮುನೀಶ್ವರ ।
ಪಾತಾಲಲೋಕಲಿಂಗಾನಾಂ ಮಹಿಮಾಕಥನಂ ಮುನೇ ॥೪೨॥

ಶ್ರೀಹಾಟಕೇಶಮಹಿಮಾ ಶೇಷಸ್ಯಾತ್ರ ತಪಃಕ್ರಿಯಾ ।
ಪ್ರಸಾದಶ್ಚ ಮಹೇಶೇನ ತಸ್ಯ ಭೂಭಾರಧಾರಣೇ ॥೪೩॥

ಸದಾಶಿವೋಂಽಶೋ ನವಮಸ್ತಸ್ಮಿಂಚ್ಛಂಭೋಃ ಕಥಾನಕಂ ।
ಶಿವೇನೋಕ್ತಂ ಮಹಾದೇವ್ಯೈ ನಾಮಸಾಹಸ್ರಮುತ್ತಮಂ ॥೪೪॥

ಕಲೌ ಶೈವಸಮಾಚಾರಪ್ರಮಾಣೇನ ವಿಮುಕ್ತಿದಂ ।
ಮಹಾಶಾಂಭವಧರ್ಮಾಣಾಂ ಕೀರ್ತನಂ ಪರಿಕೀರ್ತಿದಂ ॥೪೫॥

---

ಈ ಏಳನೆಯ ಅಂಶವು ಹದಿನಾಲ್ಕು ಸಹಸ್ರ ಗ್ರಂಥಗಳುಳ್ಳದ್ದಾಗಿದೆ. ಎಂಟನೆಯ ಅಂಶವೇ ಭೀಮಾಂಶವು. ||೪೧||

ಈ ಎಂಟನೆಯ ಅಂಶದಲ್ಲಿ ಎಂಟು ಸಹಸ್ರ ಗ್ರಂಥಗಳಿವೆ. ಇದರಲ್ಲಿ ಪಾತಾಳಲೋಕದಲ್ಲಿರುವ ಲಿಂಗಗಳ ಮಹಿಮೆಯೆಲ್ಲವೂ ವರ್ಣಿತವಾಗಿವೆ. ||೪೨||

ಶ್ರೀ ಹಾಟಕೇಶ್ವರನಮಹಿಮೆ, ಆದಿಶೇಷನು ಮಾಡಿದ ತಪಸ್ಸು. ಅವನಿಗೆ ಪರಶಿವನಿಂದ ಲಭಿಸಿದ ವರ, ಭೂಭಾರವನ್ನು ಹೊರುವ ಶಕ್ತಿಯು ಅವನಿಗೆ ದೊರೆತದ್ದು, ಇವುಗಳು ಪ್ರತಿಪಾದಿತವಾಗಿವೆ. ||೪೩||

ಒಂಬತ್ತನೆಯದಾದ ಸದಾಶಿವಾಂಶದಲ್ಲಿ ಪರಮೇಶ್ವರ ವಿಷಯಕವಾದ ಕಥೆಗಳು ಪರಮೇಶ್ವರನಿಂದಲೇ ದೇವಿಗೆ ಹೇಳಲ್ಪಟ್ಟಿವೆ. ಅಲ್ಲದೆ ಶಿವಸಹಸ್ರನಾಮವೂ ಮತ್ತೆ ವಿವೃತವಾಗಿದೆ. ||೪೪||

ಕಲಿಯುಗದಲ್ಲಿ ಶಿವಧರ್ಮಾನುಸರಣೆಯಿಂದಲೇ ಮೋಕ್ಷಪ್ರಾಪ್ತಿಯೆಂಬ ವಿಚಾರ, ಶಿವಧರ್ಮವಿವರಣೆ ಇವು ಈ ಅಂಶದಲ್ಲಿ ವಿಸ್ತೃತವಾಗಿವೆ. ||೪೫||

ಷಡ್ವಕ್ತ್ರಸಂಖ್ಯಯಾ ಮೋದ್ಯ ಸಹಸ್ರೇಣೈವ ಕೀರ್ತನಂ ।
ಈಶ್ವರಾಂಶೋತ್ರ ದಶಮೋ ದಶಧರ್ಮಾನುಕೀರ್ತನಂ ॥೪೬॥

ಬಿಲ್ವಾರ್ಚನಂ ರುದ್ರಜಪಃ ಪಂಚಾಕ್ಷರಮಹೋದಯಃ ।
ಶಿವಲಿಂಗಾರ್ಚನಸ್ಯಾಪಿ ಭಸ್ಮರುದ್ರಾಕ್ಷಕೀರ್ತನಂ ॥೪೭॥

ಶಾಂಭವಾನಾಂ ಶಿವಕ್ಷೇತ್ರೇ ಶೈವಭಕ್ತಾರ್ಚನಂ ತಥಾ ।
ಶಿವನಾಮ್ನಸ್ಮೃತೇಶ್ಚಾಪಿ ದಶಮೋ ಮಹಿಮಾ ತು ಯಃ ॥೪೮॥

ತಸ್ಮಿನ್ ಪ್ರಕೀರ್ತಿತೋ ವಿಪ್ರ ಶಂಕರಸ್ಯಾಸ್ಯಸಂಖ್ಯಯಾ ।
ಏಕಾದಶೋ ಮಹಾದೇವಃ ಪ್ರೋಕ್ತೋಂಶಶ್ಶಂಭುನಾ ತದಾ ॥೪೯॥

ಮನ್ನೇತ್ರಕ್ರಮಸಂಖ್ಯಾತಶ್ಶಿವಪೂಜಾಕ್ರಮಾತ್ಮಕಃ ।
ಅಭಿಷೇಚನಿಕಾನಾಂ ಚ ಫಲಪುಷ್ಪೇಷು ಕೀರ್ತನಂ ॥೫೦॥

ಭಕ್ತೀನಾಂ ದಶಕಾನಾಂ ಚ ಕೀರ್ತನಂ ಪೂಜನೇ ತಥಾ ।
ಮುನಿಸಂಖ್ಯಾ ಗ್ರಂಥತಶ್ಚ ಈಶೋ ನಾಮ್ನಾತ್ರ ದ್ವಾದಶಃ ॥೫೧॥

---

ಸದಾಶಿವಾಂಶದಲ್ಲಿ ಆರುಸಹಸ್ರ ಸಂಖ್ಯೆಗಳಿವೆ. ಹತ್ತನೆಯದೇ ಈಶ್ವರಾಂಶವು. ಅದರಲ್ಲಿ ದಶಧರ್ಮಗಳ ವಿವರಣೆಯು ಬಂದಿದೆ. ॥೪೬॥

ಬಿಲ್ವಾರ್ಚನೆ, ರುದ್ರಜಪ, ಪಂಚಾಕ್ಷರೀಮಂತ್ರಮಹಿಮೆ, ಶಿವಲಿಂಗಾರ್ಚನ ವಿಧಿ, ಭಸ್ಮ, ರುದ್ರಾಕ್ಷಿ ಇವುಗಳ ಮಹಿಮೆ. ಇವುಗಳು ಇಲ್ಲಿ ವಿಶೇಷವಾಗಿ ವರ್ಣಿತವಾಗಿವೆ. ॥೪೭॥

ಶಿವಕ್ಷೇತ್ರದಲ್ಲಿ ಶಿವಭಕ್ತರನ್ನು ಅರ್ಚಿಸುವುದರ ಫಲ, ಶಿವನಾಮಸ್ಮರಣೆಯ ಫಲ ಇವುಗಳು ಹತ್ತನೆಯ ಅಂಶದಲ್ಲಿ ವರ್ಣಿತವಾಗಿವೆ. ॥೪೮॥

ಆ ದಶಮಾಂಶದಲ್ಲಿ ಐದುಸಾವಿರ ಶ್ಲೋಕಗಳಿವೆ. ಹನ್ನೊಂದನೆಯ ಅಂಶವೇ ಮಹಾದೇವಾಂಶವು. ಅದರಲ್ಲಿ ಪರಮೇಶ್ವರನು, ॥೪೯॥

ಹನ್ನೆರಡುಸಾವಿರಶ್ಲೋಕಗಳಿಂದ ಶಿವಪೂಜಾವಿಧಿಯನ್ನೂ, ಲಿಂಗಾಭಿಷೇಕ ಕ್ರಮವನ್ನೂ, ಫಲಪುಷ್ಪಾರ್ಚನಾವಿಧಿಯನ್ನು ವಿವರಿಸಿರುವನು. ॥೫೦॥

ಅಲ್ಲದೆ ದಶವಿಧಭಕ್ತಿಯನಿರೂಪಣವೂ ಆ ಅಂಶದಲ್ಲಿ ಉಕ್ತವಾಗಿದೆ. ಹನ್ನೆರಡನೆಯ ಅಂಶವಾದ ಈಶಾಂಶದಲ್ಲಿ ಏಳುಸಹಸ್ರ ಶ್ಲೋಕಗಳಿವೆ. ॥೫೧॥

ಶಿವನಾಮ್ನಾಂ ಸಹಸ್ರಸ್ಯ ಕೀರ್ತನಂ ತತ್ರ ಕೀರ್ತಿತಂ ।
ಪ್ರಸಾದಶ್ಶಂಕರಸ್ಯಾಪಿ ಮಮ್ಯೈವಾನುಗ್ರಹಾತ್ಮಕಃ ॥೫೨॥

ಶಿವರತ್ನಾಕರಕಥಾಮಾಹಾತ್ಮ್ಯಂ ಮುನಿತೋಷಣಂ ।
ಏತದಧ್ಯಾಯಸಾಹಸ್ರೈಃ ಕೀರ್ತಿತಂ ಶ್ರೀಶಿವೇನ ಹಿ ॥೫೩॥

ದೇವ್ಯೈ ದೇವೇನ ಕಥಿತಂ ರಹಸ್ಯಂ ಶಿವಸಂಮತಂ ।
ಸದಾಶಿವಸಮೋ ದೇವೋ ನಾಸ್ತಿ ಲೋಕತ್ರಯೇಷ್ವಪಿ ॥೫೪॥

ತಥಾ ಶಿವರಹಸ್ಯೇನ ತುಲ್ಯಮನ್ಯಂ ನ ವಿದ್ಯತೇ ।
ಶೈವಸಾರಮಹಾರತ್ನಕೋಶೋಽಯಂ ಮುನಿಸತ್ತಮ ॥೫೫॥

ಪುಣ್ಯೋಽಯಂ ಪಾವನಶ್ಚಾಯಂ ಭಕ್ತಿಸಾರಕಥಾಶ್ರಯಃ ।
ಸಂಸಾರಾಯಾಸಧರ್ಮಾಣಾಂ ಕಥನೇನ ವಿವರ್ಜಿತಂ ॥೫೬॥

---

ಈ ಅಂಶದಲ್ಲಿಯೂ ಶಿವಸಹಸ್ರನಾಮಸ್ತೋತ್ರವಿದೆ. ಅಲ್ಲದೆ ಶಂಕರನು ನನಗೆ ಅನುಗ್ರಹಮಾಡಿದ ವಿಷಯವು ಪ್ರತಿಪಾದಿತವಾಗಿದೆ. ॥೫೨॥

ಶಿವರತ್ನಾಕರಕಥಾಮಹಿಮೆಯು ಹನ್ನೆರಡನೆಯ ಅಂಶದಲ್ಲಿ ವಿವರಿಸಲ್ಪಟ್ಟಿದೆ. ಹೀಗೆ ಇದರಲ್ಲಿ ಸಹಸ್ರಾರು ಅಧ್ಯಾಯಗಳು ಕಂಡುಬರುತ್ತವೆ. ॥೫೩॥

ಅಲ್ಲದೆ ದ್ವಾದಶಾಂಶಗಳಲ್ಲಿಯೂ, ಶಿವಪ್ರೋಕ್ತವಾದ ಅನೇಕ ರಹಸ್ಯಾಂಶಗಳು ತೋರಿಬರುತ್ತಿವೆ. ಅಂತೂ ಒಟ್ಟಿನಲ್ಲಿ ಮೂರು ಲೋಕಗಳಲ್ಲಿಯೂ ಸದಾಶಿವನಿಗೆ ಸರಿಸಮನಾದ ದೇವನು ಮತ್ತೊಬ್ಬನಿಲ್ಲವೆಂಬುದೇ ಈ ಗ್ರಂಥದ ಮುಖ್ಯ ತಾತ್ಪರ್ಯ. ॥೫೪॥

ಈ ಶಿವರಹಸ್ಯಗ್ರಂಥಕ್ಕೆ ಸದೃಶವಾದ ಗ್ರಂಥವು ಜಗತ್ತಿನಲ್ಲಿ ಎಲ್ಲೂ ಸಿಗಲಾರದು. ಶೈವವೆಂಬ ಸಾರವಾದ ಮಹಾರತ್ನಗಳಿಗೆ ಇದು ಆಶ್ರಯಸ್ಥಾನವಾದ ಭಂಡಾರದಂತಿದೆ ಎಂದರೆ ಸುಳ್ಳಲ್ಲ. ॥೫೫॥

ಈ ಶಿವರಹಸ್ಯವೆಂಬುದು ಪವಿತ್ರವಾದದ್ದು. ಭಕ್ತಿದರ್ಶಕವಾದ ಅನೇಕ ಕಥೆಗಳು ಇದರಲ್ಲಿವೆ. ಸಂಸಾರದ ಸುಖಗಳನ್ನಾಗಲಿ, ಕಷ್ಟಗಳನ್ನಾಗಲಿ ವಿವರಿಸುವಂತಹ ಕಥೆಗಳು ಇದರಲಿಲ್ಲ. ॥೫೬॥

ವರ್ಣಾಶ್ರಮವಿಚಾರಾದಿಕಥಾಶ್ರಮವಿವರ್ಜಿತಃ ।
ಅತ್ಯಾಶ್ರಮೋಕ್ತಧರ್ಮಾಣಾಮಾಕರೋಽಯಂ ಮಹಾಮುನೇ ॥೫೭॥

ನಾನಾಕಥಾಸುಧಾಶ್ಶೈವಾಃ ಪರಮಾನಂದನಿರ್ಭರಾಃ ।
ದೇವ್ಯೈ ದೇವೇನ ಕಥಿತಾಶ್ಶತಸಾಹಸ್ರತೋಽಧಿಕಾಃ ॥೫೮॥

ಭಕ್ತೈಶ್ಶ್ರಾವ್ಯೋಽಯಮತುಲಶ್ಚೇತಿಹಾಸವರೋತ್ತಮಃ ।
ಶೈವಸಾರಕಥಾರತ್ನಂ ಸರ್ವಸ್ವೋಽಯಂ ಮುನೀಶ್ವರಾಃ ॥೫೯॥

ಸ್ಕಂದೇ ಗಜಾನನೇ ಗೌರ್ಯಾಂ ಯಥಾ ಪ್ರೀತಿರ್ಮಹೇಶಿತುಃ ।
ತಥಾ ಶಿವರಹಸ್ಯೇಽಪಿ ಗೋಪ್ಯಂ ಗೋಪ್ಯಮಿದಂ ಶಿವಂ ॥೬೦॥

ನ ದೇಯಂ ನೈವ ವಕ್ತವ್ಯಮಾದೌ ತೇಭ್ಯಸ್ತ್ವಯಾ ಮುನೇ ।
ಶಪ ಮದ್ಪದಯೋರ್ವಿಪ್ರ ನ ಚೇನ್ಮೂರ್ಧಾದ್ಯ ತೇ ಪತೇತ್ ॥೬೧॥

---

ವರ್ಣಾಶ್ರಮಧರ್ಮಗಳನ್ನು ಬೋಧಿಸುವ ಕಥೆಗಳು ಶಿವರಹಸ್ಯದಲ್ಲಿಲ್ಲ. ಕೇವಲ ವೈರಾಗ್ಯಮಾರ್ಗವನ್ನವಲಂಬಿಸಿ, ಧರ್ಮಮಾರ್ಗದಲ್ಲಿ ನಡೆಯುವವರ ಇತಿಹಾಸಗಳೇ ಇಲ್ಲಿ ಹೇರಳವಾಗಿ ಕಂಡುಬರುತ್ತಿವೆ. ॥೫೭॥

ಇದರಲ್ಲಿರುವ ಕಥೆಗಳೆಲ್ಲಾ ಶಿವಧರ್ಮ ಪ್ರತಿಪಾದಕವಾದವುಗಳೇ. ಈ ಕಥಾ ಶ್ರವಣದಿಂದ ಶಿವಸೇವಕರು ಪರಮಾನಂದವನ್ನು ಹೊಂದಬಹುದು. ಈ ಸಂಪೂರ್ಣ ಗ್ರಂಥವು ಲಕ್ಷಸಂಖ್ಯೆಗಿಂತ ಅಧಿಕವಾಗಿದೆ. ಎಲ್ಲವೂ ಪರಮೇಶ್ವರನಿಂದ ಪಾರ್ವತಿಗೆ ವಿವರಿಸಲ್ಪಟ್ಟದ್ದೇ ಆಗಿದೆ. ॥೫೮॥

ಇತಿಹಾಸಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವೆನಿಸಿರುವ ಈ ಶಿವಕಥಾರತ್ನವನ್ನು ಭಕ್ತರಾದವರು ನಿಶ್ಚಯವಾಗಿಯೂ ಕೇಳಲೇ ಬೇಕು. ಸರ್ವವಿಷಯಗಳನ್ನೂ ಇದ ರಿಂದ ಅರಿಯಬಹುದು. ॥೫೯॥

ಪರಮೇಶ್ವರನಿಗೆ ಪಾರ್ವತಿಯಲ್ಲಿಯೂ, ಮಕ್ಕಳಾದ ಸ್ಕಂದ, ಗಣಪತಿಯ ರಲ್ಲಿಯೂ ಎಂತಹ ಪ್ರೇಮವಿದೆಯೋ, ಅದೇ ಪ್ರೇಮವನ್ನು ಶಂಕರನು ಈ ಗ್ರಂಥ ದಲ್ಲಿಟ್ಟಿರುವನು. ಅದೂ ಅಲ್ಲದೆ ಈ ಗ್ರಂಥವು ಅತ್ಯಂತ ಗೋಪ್ಯವಾದದ್ದು. ॥೬೦॥

ಆದ್ದರಿಂದ ಎಲೈ ಜೈಗೀಷವ್ಯಮುನಿಯೇ, ಈಗ ನಾನು ಹೇಳಲಿರುವ ಶಿವ ರಹಸ್ಯಾಂಶಗಳನ್ನು ನೀನು ಅಪಾತ್ರರಿಗೆ ಎಂದೂ ಹೇಳಬೇಡ. ಉಪದೇಶಿಸಬೇಡ.

**ವೇದಾಂತಸಾರಸರ್ವಸ್ವಂ ಶಿವಭಕ್ತಿಪ್ರಕಾಶಕಂ ।**
**ದೇಯಂ ಭಕ್ತಾಯ ವಿಪ್ರಾಯ ಪುತ್ರಾಯಾತ್ಯಂತರಾಗಿಣೇ ॥೬೨॥**

**ವಕ್ತವ್ಯಮನಹಂಕಾರಚಿತ್ತಾಯಾತ್ಮಗುಣಾಯ ಚ ।**
**ಶೈವಾಯ ಶಂಭೋರುತ್ಕರ್ಷಭಕ್ತಿಯುಕ್ತಾಯ ತೇ ಮುನೇ ॥೬೩॥**

**ಸಂವತ್ಸರೋಷಿತಾಯ ತ್ವಂ ಭಕ್ತಾಯಾಂತೇನಿವಾಸಿನೇ ।**
**ತ್ರಿನೇತ್ರಚಿಂತಾಪಾತ್ರಾಯ ನಾನ್ಯಸ್ಮೈ ಸತ್ಯಮುಚ್ಯತೇ ॥೬೪॥**

॥ ಸ್ಕಂದ ಉವಾಚ ॥

**ಜಗಾದ ಜಗತಾಂ ಗುರುಸ್ತ್ರಿಜಗತಾಂ ಜನಿತ್ರೀಂ ಮುದಾ**
**ಜಗತ್ತ್ರಿತಯಜಂತುಹೃತ್ತ್ರಿವಿಧತಾಪದುಃಖಾಪಹಂ ।**

---

ಹಾಗೆ ಮಾಡುವುದಿಲ್ಲವೆಂದು ಮೊದಲು ನೀನು ನನ್ನ ಪಾದಗಳನ್ನು ಮುಟ್ಟಿ ಆಣೆಯಿಡು. ಹಾಗೂ ಅಯೋಗ್ಯರಿಗೆ ಹೇಳಿದ್ದೇ ಆದರೆ ನಿನ್ನ ಶಿರಸ್ಸು ಭೂಮಿಗೆ ಬಿದ್ದುಹೋದೀತು. ॥೬೧॥

ಈ ಶಿವರಹಸ್ಯವು ವೇದಾಂತಗಳ ಸಾರವನ್ನೆಲ್ಲಾ ಒಳಗೊಂಡಿರತಕ್ಕದ್ದು. ಶಿವನಲ್ಲಿ ಭಕ್ತಿಯನ್ನುಂಟುಮಾಡಿಸತಕ್ಕದ್ದು. ಇಂತಹುದನ್ನು ನಿಜವಾದ ಭಕ್ತನೆನಿಸಿ ವಿಪ್ರಧರ್ಮದಲ್ಲಿರುವವನಿಗೂ, ಅಭಿಲಾಷೆಯುಳ್ಳ ಸತ್ಪುತ್ರನಿಗೂ ಉಪದೇಶಿಸ ಬಹುದು. ॥೬೨॥

ಅಹಂಕಾರಾದಿಗಳಿಲ್ಲದೆ, ಸರ್ವಗುಣಸಂಪನ್ನನಾಗಿರುವ, ಮತ್ತು ಶಿವನಲ್ಲಿ ಅತ್ಯುತ್ಕೃಷ್ಟವಾದ ಭಕ್ತಿಯನ್ನಿಟ್ಟಿರುವ ನಿನಗೆ ಇದನ್ನು ನಿಸ್ಸಂದೇಹವಾಗಿ ಹೇಳ ಬಹುದು. ॥೬೩॥

ಸಂವತ್ಸರಪರ್ಯಂತವಾಗಿ ಕಾದಿದ್ದು, ನಿಜವಾದ ಶಿಷ್ಯನೆನಿಸಿದ ಶಿವಭಕ್ತನಿಗೆ ನೀನು ಈ ಶಿವರಹಸ್ಯವನ್ನು ಉಪದೇಶಿಸು. ಆತನು ಸರ್ವದಾ ಶಿವಚಿಂತಾಪರನಾಗಿ ರಬೇಕು. ಈ ಗುಣಗಳಿಲ್ಲದವನಿಗೆ ನಿಜವಾಗಿಯೂ ಶಿವರಹಸ್ಯವನ್ನು ಉಪದೇಶಿಸ ಬೇಡ. ॥೬೪॥

ಈ ಶಿವರಹಸ್ಯವನ್ನು ಉಪದೇಶಿಸಿದವನು ತ್ರಿಜಗದ್ಗುರುವಾದ ಮಹೇಶ್ವರನು. ಪ್ರಥಮೋಪದೇಶಕ್ಕೆ ಪಾತ್ರಳಾದವಳು ಜಗನ್ಮಾತೆಯಾದ ಪಾರ್ವತಿಯು. ಈ

**ಜಡಾಜಡಗತಸ್ಥಿತಿಪ್ರಲಯಭಾವಭಾವಂ ಭವಂ**
**ವಿಶೋಷಯದಿದಂ ಮುಹುಶ್ಶಿವರಹಸ್ಯರತ್ನಾಂಶುಮಾನ್ ॥೬೫॥**

**ತದೇವ ಭವತಾಂ ವದೇ ಭವದವಾಗ್ನಿಸಂಶೋಷಕಂ**
**ವಿಧುಂತುದಮುಖೋತ್ಥಿತಪ್ರಕಟಸೋಮಧಾಮಪ್ರಭಂ ।**
**ವಿಕಾಸಿತದಿಶಾಮುಖಪ್ರಥಿತಪಾಂಡಿಮಾನೋಪಮಂ**
**ಸುಧಾಮಪಿ ಬುಧಾಃ ಪರಂ ಹವನವಕ್ತ್ರಹವ್ಯಾಶನಾಃ ॥೬೬॥**

**ವಿಧೂಯ ಸುರಲೋಕಗಾಃ ಪರಿಪತಂತಿ ಶಂಭೋಃ ಕಥಾ**
**ಮನಾಥಜನನಾಥ ತೇ ಪ್ರಮಥನಾಥ ನಾಥೋಽಸ್ಮ್ಯಹಂ ।**
**ಗಿರೀಂದ್ರವರಕನ್ಯಕಾಹೃದಯನಾಥಪಾದಾಂಬುಜಂ**
**ಮನೋರಥಪಥಾತಿಗಂ ಪ್ರಥಯ ಭಕ್ತಿಭಾವಂ ತ್ವಯಿ ॥೬೭॥**

---

ಶಿವರಹಸ್ಯವೆಂಬ ಸೂರ್ಯನು ಮೂರುಲೋಕದ ಜಂತುಗಳನ್ನೂ ರಕ್ಷಿಸುವನು. ಮತ್ತು ಇದು ತಾಪತ್ರಯನಿವಾರಕವಾಗಿ ಜಡಾಜಡಾತ್ಮಕವಾದ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳನ್ನು ವಿಶದಪಡಿಸತಕ್ಕದ್ದು. ಅಲ್ಲದೆ ಜನರ ಸಂಸಾರದುಃಖಗಳನ್ನು ದೂರೀ ಕರಿಸಿ, ಅವರಿಗೆ ಸುಜ್ಞಾನವನ್ನು ಒದಗಿಸತಕ್ಕದ್ದಾಗಿದೆ. ॥೬೫॥

ಅಲ್ಲದೆ ಶಿವರಹಸ್ಯವು ಕಲ್ಮಶರಹಿತವಾದದ್ದು. ಭವದುಃಖವೆಂಬ ಕಾಡು ಕಿಚ್ಚನ್ನು ಆರಿಸತಕ್ಕದ್ದು, ರಾಹುವದನದಿಂದ ನಿರ್ಮುಕ್ತನಾದ ಚಂದ್ರನಂತೆ ತೇಜಸ್ಸುಳ್ಳದ್ದು. ದಿಗಂತಪರ್ಯಂತ ವ್ಯಾಪಿಸುವಂತಹ ಶುಭ್ರಕಾಂತಿಯುಳ್ಳದ್ದು. ಇಂತಹ ಉತ್ತಮವಾದ ಈಶರಹಸ್ಯವನ್ನು ನಿಮಗೆ ಈಗ ವಿವರಿಸುವೆನು. ಅನೇಕ ಯಾಗ ಗಳಿಂದ ಬಂದ ಹವಿಸ್ಸನ್ನು ಭಕ್ಷಿಸುವ ದೇವತೆಗಳೂ ಸಹ ದಿವ್ಯವಾದ ಅಮೃತವನ್ನು ದೂರಮಾಡಿ ಶಿವನಾಮಾಮೃತವನ್ನು ಸೇವಿಸುತ್ತಿರುವರು. ॥೬೬॥

ದೇವಲೋಕವಾಸಿಗಳೂ ಅಮೃತಪಾನವನ್ನು ದೂರಮಾಡಿ ಶಂಕರ ಕಥಾಮೃತದಲ್ಲಿ ಮನಸ್ಸಿಟ್ಟಿರುವರು. ಅನಾಥಜನರನ್ನು ರಕ್ಷಿಸುವಂತಹ ಪ್ರಮಥ ನಾಥನೇ, ನನಗೆ ನೀನೇ ಒಡೆಯನಾಗಿರುವೆ. ಜೈಗೀಷವ್ಯಮಹಾಮುನಿಯೇ, ಪಾರ್ವತಿ ಪತಿಯಾದ ಪರಮೇಶ್ವರನ ಪಾದಕಮಲವನ್ನು ಸದಾ ಭಜಿಸುತ್ತಾ ಶಿವಭಕ್ತಿಯನ್ನು ಲೋಕದಲ್ಲಿ ಪ್ರಸಿದ್ಧಿಗೊಳಿಸು. ॥೬೭॥

ಕ್ಷಮಾರಥರಥಾಂಗಕಸ್ಸ್ಫುಟಸುಪಾಣಿಬಾಣಾಸನೋ
ಹಿರಣ್ಯನಗಕಾರ್ಮುಕಸ್ಸಕಲವಿಶ್ವನಾಥೋಧುನಾ ।
ಸ ಏವ ಸುಖಸಂಪದಾನ್ನಿಧಿರಪಾರಪುಣ್ಯಾಸ್ಪದ ।
ಸ್ಸ ಏವ ಸುಕೃತೀ ಸದಾ ಯಜತಿ ವೇದಮುಧ್ಯೇತಿ ಚ ॥೬೮॥

ಸ ದಾನನಿಚಯಾರ್ಜಿತಪ್ರಭವಧರ್ಮಸಾರಾಧಿಕ ।
ಸ್ಸ ಉತ್ತಮುಸಸಾಗರಾವಸನ ಉರ್ವರಾದಾನಕೃತ್ ।
ಕ್ಷಣಾರ್ಧಮಧಿಕಾದರಶ್ಶಿವರಹಸ್ಯಧರ್ಮಶ್ರವಾ ।
ಸ್ಸ ಏವ ಗಣನಾಯಕಶ್ಶಿವಪದಾಬ್ಜಯುಗ್ಮಾರ್ಚಕಃ ॥೬೯॥

ಸುರಾಸುರಚರಾಚರಪ್ರಭವನಾಶರಕ್ಷಾಕ್ರಮೈ ।
ರ್ನವಾಯುತರಣಾಂಕಣಪ್ರಭವಯುದ್ಧದುಃಖೋದ್ಭವೈಃ ।
ಶ್ರಮೈಕರಸಧೂರ್ಗತೈರ್ವಿವಿಧವರ್ಣಧರ್ಮಾಶ್ರಮೈಃ ।
ಕಥಾಭಿರಿಹ ನಶ್ವರಂ ನ ಭವತಿ ಶ್ರುತೀ ಶೇಖರಂ ॥೭೦॥

---

ಪರಮೇಶ್ವರನಿಗೆ ಭೂಮಿಯೇ ಒಂದು ರಥವಾಗಿತ್ತು. ಅದಕ್ಕೆ ಸೂರ್ಯಚಂದ್ರರೇ ಚಕ್ರಗಳಾಗಿದ್ದುವು. ಮೇರುಪರ್ವತವೇ ಪರಶಿವನಿಗೆ ಬಿಲ್ಲಾಗಿತ್ತು. ಅಂತಹ ಪರಶಿವನೇ ಲೋಕದೊಡೆಯನು. ಸಕಲ ಸುಖಸಂಪತ್ತುಗಳಿಗೂ ಅವನೇ ಮೂಲ ಕಾರಣನು. ಸಮಸ್ತ ಪುಣ್ಯಕರ್ಮಗಳಿಗೂ ಆಸ್ಪದನಾಗಿರುವವನು. ಇಂತಹ ಮಹಾಮಹಿಮನಾದ ಶಂಕರನ ರಹಸ್ಯವನ್ನು ಕೇಳಿದವರೇ ಸುಕೃತಿಗಳು. ವೇದಾಧ್ಯಯನದ ಫಲವನ್ನು ಪಡೆಯುವವರೇ ಅವರು. ॥೬೮॥

ಒಂದುಕ್ಷಣಕಾಲವಾಗಲಿ, ಅರ್ಧಕ್ಷಣದಲ್ಲಾಗಲಿ, ಯಾವನು ಭಕ್ತಿಯಿಂದ ಶಿವರಹಸ್ಯವನ್ನು ಮನನಮಾಡುವನೋ, ಅವನಿಗೆ ಸಮಸ್ತ ಮಹಾದಾನಗಳ ಪುಣ್ಯರಾಶಿಯೆಲ್ಲವೂ ಸಂಪೂರ್ಣವಾಗಿ ಒದಗುವುದು. ಅವನೇ ಸಕಲ ಭೂಮಂಡಲಕ್ಕೂ ಅಧಿಪತಿಯೆನಿಸುವನು. ಸಸ್ಯಭರಿತವಾದ ಭೂಮಿಯನ್ನು ದಾನಮಾಡಿದಂತಹ ಸುಕೃತವನ್ನು ಪಡೆಯುವನು. ಒಟ್ಟಿನಲ್ಲಿ ಶಿವರಹಸ್ಯವನ್ನರಿತವನೇ ಗಣನಾಯಕನು, ಶಿವಪಾದಾರ್ಚಕನು. ॥೬೯॥

ದೇವರಾಕ್ಷಸರ ಮತ್ತು ಚರಾಚರಾತ್ಮಕವಾದ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳ ವಿಸ್ತಾರಗಳು ಅತಿಯಾಗಿ ಇದರಲ್ಲಿಲ್ಲ. ಯುದ್ಧರಂಗಗಳಲ್ಲಿ ನಡೆಯುವ

ತುಷಾದ್ರಿರಭಿಖಂಡನ್ಯೈಃ ಕಿಮಿಹ ಲಭ್ಯತೇ ತಂಡುಲ ।
ಸ್ತಥಾ ಶಿವಕಥಾಂ ವಿನಾ ನ ಹಿ ಶಮಾಯ ಜಂತೋರ್ಮನಃ ।
ಶೈವಾನಂದರಹಸ್ಯಸಾಗರಮಹಾದ್ವೀಪೋಪಮಾ ದ್ವಾದಶಾ ।
ಸ್ತೇಚಾಂಶಾಃ ಖಲು ಶಂಕರೇಣ ವಿಹಿತಾ ನಾಮಾನಿ ತೇಷಾಂ ವದೇ ॥೭೧॥

ಮಾಹೇಶಃ ಪ್ರಥಮೋ ಭವೋ ಹರ ಶಿವೋ ಭರ್ಗಸ್ತಥಾ ಶಾಂಕರ ।
ಶ್ಚೋಗ್ರೋ ಭೀಮಸದಾಶಿವೇಶ್ವರಮಹಾದೇವೇಶಸಂಜ್ಞಾಃ ಕ್ರಮಾತ್ ।
ಗ್ರಂಥೈಃ ಪದ್ಮಮಹಾಘಮೌಲಿಭಿದುರೈರ್ವೇದಾಂತಸಾರಾತಿಗೈ ।
ಶ್ಶಬ್ದೈಸ್ಸುಂದರವಾಗ್ವಿಲಾಸಮಧುರೈರಧ್ಯಾಯಬೃಂದೈಶ್ಶಿವಃ ॥೭೨॥

---

ಹೋರಾಟಗಳ ಗಲಭೆಯು ಇಲ್ಲಿ ಕಾಣುವುದಿಲ್ಲ. ಅನೇಕ ಶ್ರಮಜೀವಿಗಳ ಇತಿಹಾಸವಾಗಲಿ ವರ್ಣಾಶ್ರಮಧರ್ಮಗಳ ಚರ್ಚೆಯಾಗಲಿ ಬಿಗುಪಿಲ್ಲದ ಕಥೆಗಳಾಗಲಿ ಈ ಶಿವರಹಸ್ಯದಲ್ಲಿ ಕಂಡುಬರುವುದಿಲ್ಲ. ಅದರಿಂದಲೇ ಇದು ಶ್ರುತಿಶೇಖರವೆನಿಸಿದೆ.॥೭೦॥

ಬತ್ತದಹೊಟ್ಟಿನ ಬೆಟ್ಟದಲ್ಲಿ ಎಷ್ಟು ಹುಡುಕಿದರೂ ಅಕ್ಕಿಯು ದೊರಕುವುದೇ ? ಹಾಗೆಯೇ ಮನುಷ್ಯನು ನೀರಸವಾದ ಎಷ್ಟು ಕಥೆಗಳನ್ನು ವ್ಯಾಸಂಗಮಾಡಿದರೂ ಅವನಿಗೆ ಮನಶ್ಶಾಂತಿಯು ದೊರಕಲಾರದು. ನಿಜವಾದ ಶಾಂತಿಯನ್ನು ಅರಸುವವನು ಶಿವಸಂಬಂಧವಾದ ಇತಿಹಾಸಗಳನ್ನೇ ಓದಬೇಕು. ಈ ಶಿವರಹಸ್ಯವೆಂಬುದೇ ಒಂದು ಮಹಾಸಾಗರ. ಅದರಲ್ಲಿ ದ್ವೀಪಗಳಂತೆ ಹನ್ನೆರಡು ಅಂಶಗಳಿವೆ. ಆ ಅಂಶಗಳ ಹೆಸರುಗಳನ್ನು ಈಗ ಕ್ರಮವಾಗಿ ಹೇಳುತ್ತೇನೆ. ॥೭೧॥

ಕ್ರಮವಾಗಿ ಹನ್ನೆರಡು ಅಂಶಗಳಿಗೂ, ಮಾಹೇಶ, ಭವ, ಹರ, ಶಿವ, ಭರ್ಗ, ಶಂಕರ, ಉಗ್ರ, ಭೀಮ, ಸದಾಶಿವ, ಈಶ್ವರ, ಮಹಾದೇವ, ಈಶ ಎಂಬ ಹೆಸರುಗಳನ್ನೇ ಇಟ್ಟು ಆ ಅಂಶಗಳನ್ನು ಆ ದೇವತಾ ನಾಮಗಳಿಂದಲೇ ವ್ಯವಹರಿಸಲಾಗಿದೆ. ಅಲ್ಲದೆ ಇದರಲ್ಲಿ ಗ್ರಾಂಥಿಕವಾದ ಶಬ್ದಜಾಲಗಳಾದರೋ, ಪದ್ಮಗಳಂತೆ, ಉತ್ತಮವಾದ ರತ್ನಗಳಂತೆ ಅರ್ಥಗರ್ಭಿತವಾಗಿವೆ. ವೇದಾಂತಗಳ ಸಾರವನ್ನೆಲ್ಲಾ ಈ ಶಿವರಹಸ್ಯವು ಪ್ರಕಾಶಪಡಿಸತಕ್ಕದ್ದಾಗಿದೆ. ಪ್ರತಿ ಅಂಶಗಳಲ್ಲಿಯೂ ಅನೇಕ ಅಧ್ಯಾಯಗಳೂ, ಒಂದೊಂದು ಅಧ್ಯಾಯದಲ್ಲಿಯೂ ಅಪೂರ್ವವಿಷಯಗಳೂ ಹೃದಯಂಗಮವಾಗಿ ಪ್ರತಿಪಾದಿತವಾಗಿವೆ. ॥೭೨॥

**ಸಾಹಸ್ರೈಃಶ್ಚ ಶತೈಸ್ಸಹಸ್ರಕಿರಣಾಕಾರೈಸ್ತಥಾ ಶಂಕರೋ**
**ದಿಗ್ಲೋಕಾಮರಬೃಂದ(ಬ್ರಹ್ಮ)ವೇದಋತುಭಿರ್ದಿಜ್ನಾಗತಸ್ಸಂಖ್ಯಯಾ ।**
**ಮದ್ವಕ್ತ್ರಾಮಲನೀಲನೀರಜಸಮಂ ನೇತ್ರಕ್ರಮಂ ಶಂಕರ**
**ಸ್ಯಾಸ್ಯಾಕ್ಷಿಕ್ರಮಶೋಮುನಿಕ್ರಮಮಯೋ ದೇವ್ಯೈ ಶಿವೇನಾಕಥಿ ॥೭೩॥**

**ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ಸ್ಕಂದ ಜೈಗೀಷವ್ಯ ಸಂವಾದೇ**
**ಏಕಾದಶೋಽಧ್ಯಾಯಃ**

---

ಈ ಒಟ್ಟು ಗ್ರಂಥದಲ್ಲಿ ಒಂದು ಲಕ್ಷ ಶ್ಲೋಕಗಳಿವೆ. ಅದರಲ್ಲಿ ಕ್ರಮವಾಗಿ ಒಂದೊಂದು ಅಂಶದಲ್ಲಿಯೂ, ಎಂಟು, ಮೂರು, ಮೂವತ್ತುಮೂರು, ನಾಲ್ಕು, ಆರು, ಎಂಟು, ಹದಿನಾಲ್ಕು, ನಾಲ್ಕು, ಆರು, ಐದು, ಆರು, ಏಳು ಈ ಸಂಖ್ಯೆಯ ಸಹಸ್ರ ಗ್ರಂಥಗಳು ಕಂಡುಬರುತ್ತವೆ. ಇದಿಷ್ಟು ಗ್ರಂಥಾತ್ಮಕವಾದ ಶಿವರಹಸ್ಯವನ್ನೂ ಪರಮೇಶ್ವರನೇ ಪಾರ್ವತಿಗೆ ಉಪದೇಶಿಸಿರುವನು. ॥೭೩॥

ಹೀಗೆ ಶ್ರೀಶಿವರಹಸ್ಯದ ಪ್ರಥಮಾಂಶದಲ್ಲಿ, ಸ್ಕಂದ ಜೈಗೀಷವ್ಯಮುನಿ ಸಂಭಾಷಣಾ
ರೂಪವಾದ ದ್ವಾದಶಾಂಶಗಳ ಸಂಖ್ಯೆಯನ್ನು ತಿಳಿಸುವ
ಹನ್ನೊಂದನೆಯ ಅಧ್ಯಾಯವು ಮುಗಿದುದು.

---

[ಈ ಶ್ಲೋಕದಲ್ಲಿ ಹೇಳಿರುವ ಗ್ರಂಥಸಂಖ್ಯೆಯು ಕೆಲವೆಡೆಗಳಲ್ಲಿ ವ್ಯತ್ಯಾಸವಾಗಿ ಕಂಡುಬರುತ್ತಿದೆ]

॥ ಶ್ರೀಃ ॥

# ಅಥ ಶ್ರೀಶಿವರಹಸ್ಯೇ

## ದ್ವಾದಶೋಽಧ್ಯಾಯಃ

॥ ಸೂತ ಉವಾಚ ॥

ಜೈಗೀಷವ್ಯಾಯ ಯತ್ಪ್ರೋಕ್ತಂ ಸ್ಕಂದೇನಾಮಿತತೇಜಸಾ ।
ಕೈಲಾಸಾಪಾರಸೌಧಾನಾಂ ಗೋಪುರಾಣಾಂ ನಗಸ್ಯ ಚ ॥೧॥

ಪ್ರಮಾಣಂ ಲಿಂಗಸಂಘಾನಾಮಾಲಯಾನಾಂ ಚ ನಿರ್ಮಿತಿಃ ।
ಶಿವೇನ ನಿರ್ಮಿತಂ ಸಾಕ್ಷಾನ್ಮನಸೈವಾತುಲಪ್ರಭಂ ॥೨॥

॥ ಸ್ಕಂದ ಉವಾಚ ॥

ಜೈಗೀಷವ್ಯ ಶೃಣುಷ್ವಾದ್ಯ ಕೈಲಾಸಸ್ಥಾನಮುತ್ತಮಂ ।
ಶೃಣುಷ್ವ ಶೈಲಂ ಶಿಖರೈಶ್ಶಂಭೋರಾವಾಸಮುತ್ತಮಂ ॥೩॥

---

## ಶ್ರೀಶಿವರಹಸ್ಯದಲ್ಲಿ ಹನ್ನೆರಡನೆಯ ಅಧ್ಯಾಯ

ಸೂತಮಹರ್ಷಿಗಳು ಮೌನಿಭಾರ್ಗವಾದಿಮಹರ್ಷಿಗಳನ್ನು ಕುರಿತು, ಎಲೈ ಋಷಿವರ್ಯರೇ, ಈಗ ನಾನು, ಹಿಂದೆ ಕುಮಾರಸ್ವಾಮಿಯು ಜೈಗೀಷವ್ಯಮಹರ್ಷಿಗೆ ಬೋಧಿಸಿದ, ಕೈಲಾಸಪರ್ವತದ ಸೌಧಪಂಕ್ತಿಗಳ ಮತ್ತು ಗೋಪುರಗಳ ಸೊಬಗನ್ನೂ, ಕೈಲಾಸದ ಮಹಿಮೆಯನ್ನೂ ವಿಸ್ತಾರವಾಗಿ ಬೋಧಿಸತೊಡಗುವೆನು. ॥೧॥

ಅಲ್ಲದೆ ಶಂಕರನು ಆ ಕೈಲಾಸಪರ್ವತದಲ್ಲಿರುವ ಲಿಂಗಗಳ ಸಮುದಾಯವನ್ನೂ ಆ ದೇವಾಲಯಗಳ ವಿಸ್ತಾರವನ್ನೂ, ಅವುಗಳ ಕಾಂತಿಯನ್ನೂ ತನ್ನ ಮನಸ್ಸಿನಿಂದಲೇ ನಿರ್ಮಿಸಿ ಪಾರ್ವತಿಗೆ ತಿಳಿಸಿರುವನು. ಆ ವಿಚಾರವನ್ನೇ ಗುಹನು ಜೈಗೀಷವ್ಯನಿಗೆ ಬೋಧಿಸಿರುವನು. ಅದನ್ನೇ ನಿಮಗೆ ಈಗ ತಿಳಿಸಬಯಸುವೆನು ಎಂದರು. ॥೨॥

ಕುಮಾರಸ್ವಾಮಿಯು ಜೈಗೀಷವ್ಯಮುನಿಗೆ ಶಿವಪ್ರೋಕ್ತವಾದ ವಿಷಯಗಳನ್ನು ಹೀಗೆ ವಿವರಿಸಲಾರಂಭಿಸಿದನು. "ಎಲೈ ಜೈಗೀಷವ್ಯಮುನಿಯೇ, ಪರಶಿವನಿಗೆ

ಸರ್ವಗಸ್ಯಾಪಿ ದೇವಸ್ಯ ಮಹಾದೇವಸ್ಯ ಶೂಲಿನಃ ।
ಮಹಾಕೈಲಾಸಮಿತ್ಯುಕ್ತಂ ಶಿವತತ್ತ್ವಾರ್ಥವೇದಿಭಿಃ ॥೪॥

ಈಶಾನಗಣಮುಖ್ಯಸ್ಯ ಕೈಲಾಸಂ ದಕ್ಷಿಣಾಶ್ರಮಂ ।
ಅಯಂ ಮುನೇಽಮರೇಂದ್ರಾಣಾಂ ನಿವಾಸೋ ಮೇರುರುನ್ನತಃ ॥೫॥

ಪ್ರವಿಷ್ಟಃ ಷೋಡಶಾಧಸ್ತಾದ್ದ್ವಾತ್ರಿಂಶನ್ಮೂರ್ಧ್ನಿ ವಿಶ್ರುತಃ ।
ವೃಷಸ್ತಂಭಮಯೋ ಭಾತಿ ಮಹಾಕೈಲಾಸಸನ್ನಿಧೌ ॥೬॥

ಕೈಲಾಸಾದಪಿ ಪೂರ್ವಸ್ಯಾಂ ಪಂಚಾಶಚ್ಚ ಸಹಸ್ರಕೈಃ ।
ಯೋಜನೈಃ ಪ್ರಾಕ್ ಸ್ಥಿತೋ ಮೇರುರ್ನಾನಾಸುರಗಣಾಶ್ರಯಃ ॥೭॥

ಜ್ವಲಜ್ಜ್ವಲನಸಂಕಾಶಃ ಕನಕೋತ್ತಮಪರ್ವತಃ ।
ಸಹಸ್ರಯೋಜನೋತ್ಸೇಧಂ ವಿದ್ಧಿ ಮೇರುಂ ಸುರಾಲಯಂ ॥೮॥

---

ಆವಾಸಭೂತವಾಗಿರುವ ಕೈಲಾಸಪರ್ವತದ ವಿಷಯುವನ್ನು ಕೇಳು. ಮೊದಲು ಈ ವಿಷಯುವನ್ನು ನೀನು ಅರಿತುಕೊಳ್ಳಬೇಕು. ॥೩॥

ಪರಮೇಶ್ವರನು ಸರ್ವವ್ಯಾಪಿಯು. ಸಮಸ್ತಲೋಕಕ್ಕೂ ಒಡೆಯನು. ಆದರೂ ಶಿವನಿಗೆ ಮುಖ್ಯಾಶ್ರಯವಿತ್ತಿರುವುದು ಕೈಲಾಸಪರ್ವತ, ಎಂದು ಶಿವತತ್ತ್ವಜ್ಞರು ಸಾರುತ್ತಿರುವರು. ॥೪॥

ಈಶಾನಾದಿ ಸಮಸ್ತ ಪ್ರಮಥಗಣಗಳಿಗೂ ಕೈಲಾಸಪರ್ವತದ ಬಲಭಾಗದ ಆಶ್ರಮವೇ ಮುಖ್ಯಸ್ಥಾನವಾಗಿದೆ. ಅದನ್ನೇ ಮೇರುಭಾಗವೆನ್ನುವರು. ಈ ಮೇರು ಪರ್ವತವು ಸಮಸ್ತ ದೇವತೆಗಳಿಗೂ ನಿವಾಸಸ್ಥಾನವೆನಿಸಿದೆ. ॥೫॥

ಮಹಾಕೈಲಾಸಪರ್ವತದ ಸಮೀಪದಲ್ಲಿ ಹದಿನಾರು ಯೋಜನದ ಆಳವಾಗಿಯೂ ಮೂವತ್ತೆರಡು ಯೋಜನದ ಔನ್ನತ್ಯದಿಂದಲೂ ವೃಷಾಚಲವೆಂಬುದು ಪ್ರಸಿದ್ಧಿ ಪಡೆದಿದೆ. ॥೬॥

ಕೈಲಾಸಪರ್ವತದ ಪೂರ್ವಭಾಗದಲ್ಲಿ ಐವತ್ತುಸಹಸ್ರ ಯೋಜನಗಳ ದೂರದಲ್ಲಿ ಮೇರುಪರ್ವತವಿದೆ. ಅದು ಸಮಸ್ತವಿಧವಾದ ದೇವತೆಗಳಿಗೂ ಆವಾಸಸ್ಥಾನವಾಗಿದೆ. ॥೭॥

ಮತ್ತು ಉರಿಯುವ ಅಗ್ನಿಯಂತೆ ವಿರಾಜಿಸುತ್ತಿದೆ. ಪರ್ವತವೆಲ್ಲವೂ ಸುವರ್ಣ

ಷಟ್‌ಷಷ್ಟಿಃ ಕಥಿತೋ ಯೋಗಿನ್ನೂರ್ಧ್ವಾಯಾಮೈಕಮೂಲತಃ ।
ಲಕ್ಷಯೋಜನಮಾನೇನ ಕೈಲಾಸೋ ಧರಣೀಧರಃ ॥೯॥

ಕುಲಾಚಲಾಸ್ಸಪ್ತಶತಂ ಪ್ರಾಕಾರಪರಿಘಾಸ್ತಥಾ ।
ಪ್ರಾಕಾರಸ್ಯಾಂತರಾಲಸ್ಯ ಸಪ್ತದ್ವೀಪಾಸ್ಸಸಾಗರಾಃ ॥೧೦॥

ಸಪ್ತಾಬ್ಧಯಸ್ಸುಧಾಂಭೋಧಿಕಲ್ಲೋಲಾಮಲವೀಜಿತಃ ।
ಕೋಟಿಯೋಜನಮಾನೇನ ಕೈಲಾಸೋ ಭೂಧರೋ ಮಹಾನ್ ॥೧೧॥

ರಾಜತೋ ರಾಜತೇಽತ್ಯಂತಂ ಪಂಚಾಶಲ್ಲಕ್ಷಮಾನತಃ ।
ಸಪ್ತಪಾತಾಲಮೂಲಾಂತಸ್ಸಪ್ತಲೋಕಾಂತ ಉಚ್ಛ್ರಯಃ ॥೧೨॥

ಮಹಾರಾಜತಭೂಭಾಗಶ್ಚಂದ್ರಕೋಟಿಸಮಪ್ರಭಃ ।
ನಾಗ್ನಿರ್ನವಿಧುರ್ನೋಽಸೂರ್ಯಸ್ತತ್ತೇಜಸ್ಸದೃಶೋ ಭುವಿ ॥೧೩॥

---

ಮಯವಾದದ್ದೇ. ಅಲ್ಲದೆ ಸುರಾಲಯವೆನಿಸಿದ ಆ ಮೇರುವು ಸಹಸ್ರಯೋಜನಗಳಷ್ಟು ಎತ್ತರವಾಗಿದೆ. ॥೮॥

ಎಲೈ ಮಹರ್ಷಿಯೇ, ಕೈಲಾಸಪರ್ವತದ ಎತ್ತರ ಮತ್ತು ವೈಶಾಲ್ಯ ಇವುಗಳ ವಿಸ್ತಾರವು ಅರುವತ್ತಾರುಲಕ್ಷಯೋಜನವುಳ್ಳದ್ದಾಗುತ್ತದೆ. ॥೯॥

ಆ ಕೈಲಾಸಪರ್ವತಕ್ಕೆ ಏಳುನೂರು ಕುಲಾಚಲಗಳು ಕೋಟೆಯಂತಿವೆ. ಆ ಕೋಟೆಯ ಒಳಭಾಗದಲ್ಲಿ ಸಪ್ತಸಮುದ್ರಗಳೂ ಸಪ್ತದ್ವೀಪಗಳೂ ಕಂಗೊಳಿಸುತ್ತಿವೆ. ॥೧೦॥

ಏಳುಸಮುದ್ರಗಳೂ ತಮ್ಮ ಸುಧೆಯ ಅಲೆಗಳ ಹೊಡೆತದಿಂದ ಕೈಲಾಸ ಪರ್ವತವನ್ನು ಸ್ಪರ್ಶಿಸುತ್ತಿವೆ. ಅಂತೂ ಒಟ್ಟಿನಲ್ಲಿ ಕೈಲಾಸಪರ್ವತವು ಕೋಟಿ ಯೋಜನ ವಿಸ್ತಾರವುಳ್ಳದ್ದೆಂದು ಹೇಳಬಹುದು. ॥೧೧॥

ಐವತ್ತುಲಕ್ಷಯೋಜನದ ಔನ್ನತ್ಯವನ್ನು ಪಡೆದು ಕೈಲಾಸವು ಪಾತಾಳ ಲೋಕದಿಂದ ಹಿಡಿದು ಹದಿನಾಲ್ಕುಲೋಕಗಳ ಪರ್ಯಂತವಾಗಿ ಹಬ್ಬಿರುತ್ತದೆ. ॥೧೨॥

ಕೈಲಾಸಪರ್ವತವು ಕೇವಲ ರಜತಮಯವಾದದ್ದು. ಅನೇಕಕೋಟಿ ಚಂದ್ರ ರಂತೆ ಪ್ರಕಾಶಿಸತಕ್ಕದ್ದು. ಅಗ್ನಿಯಾಗಲಿ, ಚಂದ್ರನಾಗಲಿ, ಸೂರ್ಯನಾಗಲಿ, ಕಾಂತಿಯಲ್ಲಿ ಕೈಲಾಸಪರ್ವತಕ್ಕೆ ಸರಿಸಮರೆನಿಸಲಾರರು. ॥೧೩॥

ಚತುರ್ದಶ ಮಹಾಲೋಕಾನುಚ್ಛ್ರಾಯಶಿಖರೈಃ ಸ್ವಯಂ ।
ಮಧ್ಯೇ ಸುಧಾಸಾಗರಸ್ಯ ಫೇನಮಂಡೋಪಮಸ್ಥಿತಃ ॥೧೪॥

ನ ಹರೋ ನ ಹರಿರ್ಧಾತಾ ಮಹೇಂದ್ರಾದ್ಯಾಶ್ಚ ದೇವತಾಃ ।
ನ ಸುಪರ್ಣೋರಗಾ ಯಕ್ಷಾ ನ ಗಂಧರ್ವಾ ದಿತೇಸ್ಸುತಾಃ ॥೧೫॥

ನ ವೀಕ್ಷಿತುಂ ಶಕ್ನುವಂತಿ ಕಿಂ ಪುನರ್ಗಂತುಮಂಜಸಾ ।
ತತ್ಪ್ರಭಾಭಿಹತಾ ಲೋಕಾ ಹರಾಜಹರಿಣಾಂ ದ್ವಿಜ ॥೧೬॥

ತತ್ತೇಜಸಾ ಪ್ರತಿಹತಾಸ್ಸೂರ್ಯೇಂದುಪವನಾನಲಾಃ ।
ಸುಧಾಸಾಗರಕಲ್ಲೋಲೈಃ ಕೈಲಾಸಸ್ಪರ್ಶವಾಯವಃ ॥೧೭॥

ಪುನಂತಿ ಲೋಕಾನಖಿಲಾನ್ವಿಷ್ಣುಬ್ರಹ್ಮಹರಾಮರಾನ್ ।
ಸುರಾಸುರಾಣಾಂ ಗಮನಂ ನ ತತ್ರ ಮನಸಾಪಿ ಹಿ ॥೧೮॥

---

ಕೈಲಾಸಪರ್ವತದ ಶಿಖರಗಳೂ ಸಹ ಹದಿನಾಲ್ಕು ಲೋಕಗಳನ್ನೂ ಮೀರುವಂತಹ ಎತ್ತರವುಳ್ಳವುಗಳು. ಅವೂ ಸಹ ಕ್ಷೀರಸಮುದ್ರದ ಮಧ್ಯಭಾಗದಲ್ಲಿರುವ ಶುಭ್ರವಾದ ನೊರೆಯ ರಾಶಿಯಂತೆ ಕೈಲಾಸವನ್ನು ಶೋಭಿಸತಕ್ಕವುಗಳೇ. ॥೧೪॥

ಹರಿ, ಹರ, ಬ್ರಹ್ಮ, ಇಂದ್ರ ಇನ್ನೂ ಉಳಿದ ದೇವತೆಗಳು, ಗರುಡರು, ನಾಗಗಳು, ಯಕ್ಷರು, ಗಂಧರ್ವರು, ದೈತ್ಯರು, ಇವರೇ ಮೊದಲಾದವರು ಸಹ ಕೈಲಾಸಪರ್ವತದ ಸಂಪೂರ್ಣ ಆಳವನ್ನು ತಿಳಿಯಲಾರರು. ॥೧೫॥

ಅಲ್ಲದೆ ಕೈಲಾಸಪರ್ವತವನ್ನು ಅವರು ನೋಡಲೂ ಆರರು. ಹಾಗಿರುವಾಗ ಯಾರು ತಾನೇ ಕೈಲಾಸಪರ್ವತವನ್ನು ಸುಲಭವಾಗಿ ಪ್ರವೇಶಿಸಬಲ್ಲರು? ಮತ್ತು ಕೈಲಾಸಪರ್ವತದ ಕಾಂತಿರಾಶಿಯಿಂದ ತ್ರಿಮೂರ್ತಿಗಳ ಲೋಕಗಳೆಲ್ಲಾ ಮಂಕಾಗಿರುತ್ತವೆ. ॥೧೬॥

ಕೈಲಾಸಪರ್ವತದ ಪ್ರಭೆಯಿಂದ ಸೂರ್ಯಚಂದ್ರರೂ, ವಾಯ್ವಗ್ನಿಗಳೂ ಮಂಕಾಗಿವೆ. ಕೈಲಾಸಪರ್ವತವು ಸರ್ವದಾ ಕ್ಷೀರಸಮುದ್ರದ ಅಲೆಗಳ ಮೇಲೆ ಬೀಸುವ ವಾಯುವಿನಿಂದ ಸೇವಿತವಾಗಿಯೇ ಇರುತ್ತದೆ. ॥೧೭॥

ಕೈಲಾಸಸ್ಪರ್ಶಮಾಡಿದ ವಾಯುವೇ ತ್ರಿಮೂರ್ತಿಗಳ ಪುರಗಳ ಮೇಲೆಲ್ಲಾ ಬೀಸಿ ಅವುಗಳನ್ನು ಪವಿತ್ರಗೊಳಿಸಿದೆ. ಸುರಾಸುರರು ತಮ್ಮ ಮನಸ್ಸಿನಿಂದಲೂ ಆ ಕೈಲಾಸವನ್ನು ಪ್ರವೇಶಿಸಲಾರರು. ॥೧೮॥

ನ ವೇದವಚನೈಶ್ಶಕ್ಯೋ ಮಹಾಕೈಲಾಸಪರ್ವತಃ ।
ತಲ್ಲೇಶಲೇಶಮಹಿಮಾಂ ಕಶ್ಶಕ್ತೋ ವಕ್ತುಮಪ್ಯಣು ॥೧೯॥

ಸಹಸ್ರವದನಶ್ಶೇಷಸ್ಸಹಸ್ರಾಕ್ಷೋಽಪಿ ನೇಕ್ಷತೇ ।
ಕಿಂ ಪುನರ್ಮಾನವಾಃ ಕ್ಷುದ್ರಾಃ ವರಾಕಾಸ್ತೇ ಸುರಾಸುರಾಃ ॥೨೦॥

ಶತಂ ಕುಲಾಚಲಾ ಮುಖ್ಯಾಃ ಪ್ರಾಕಾರಾ ಇವ ಸಂಸ್ಥಿತಾಃ ।
ಮಹದ್ಭಿರುಚ್ಛ್ರಿತೈಶ್ಶೃಂಗೈಃ ಕೇಚಿದ್ಗೋಪುರವತ್ ಸ್ಥಿತಾಃ ॥೨೧॥

ತದಂತರಾಂತರಾಲೇಷು ಪರಿಖಾಕೃತಯೋಽಬ್ಧಯಃ ।
ತತೋಽಪಿ ಸಪ್ತಪ್ರಾಕಾರಂ ಶಂಭೋರಂತರ್ಗೃಹಂ ಪರಂ ॥೨೨॥

ಪ್ರಾಕಾರಭೂತಾಸ್ತೇ ಶೈಲಾಸ್ತಾಂಚ್ಛೃಣುಷ್ವ ದ್ವಿಜೋತ್ತಮ ।
ಕುಮುದಃ ಪಾರಿಯಾತ್ರಶ್ಚ ಮೈನಾಕಃ ಪೂರ್ವದಿಗ್ಗತಾಃ ॥೨೩॥

---

ಸಕಲ ವೇದಗಳಿಗೂ ಮಹಾಕೈಲಾಸಪರ್ವತದ ಅರಿವು ಉಂಟಾಗಿಲ್ಲ. ಹಾಗಿರುವಾಗ ಕೈಲಾಸಮಹಿಮೆಯಲ್ಲಿ ಏಕದೇಶವನ್ನಾದರೂ ತಿಳಿಯಲು ಯಾರಿಗೆತಾನೆ ಶಕ್ತಿಯಿದ್ದೀತು ? ||೧೯||

ಸಹಸ್ರಬಾಯಿಗಳಿಂದ ಕೂಡಿರುವ ಆದಿಶೇಷನಿಗೂ ಕೈಲಾಸವರ್ಣನೆಯು ಅಸದಳವಾಗಿರುವಾಗ, ಅಲ್ಪಪ್ರಾಣಿಗಳಾದ ಮನುಷ್ಯರಾಗಲಿ, ದೇವರಾಕ್ಷಸರಾಗಲಿ ಹೇಗೆ ವರ್ಣಿಸಿಯಾರು ? ||೨೦||

ನೂರು ಕುಲಾಚಲಗಳು ಕೈಲಾಸಕ್ಕೆ ಕೋಟೆಯ ಗೋಡೆಯಂತಿವೆ. ಅದರಲ್ಲಿ ಎತ್ತರವಾಗಿರುವ ಕೆಲವು ಪರ್ವತಗಳು ಶಿಖರಗಳಂತಿವೆ. ಕೆಲವು ಗೋಪುರಗಳಂತೆ ಕಾಣುತ್ತಿವೆ. ||೨೧||

ಆ ಪರ್ವತಪ್ರಾಕಾರಗಳ ಒಳಭಾಗದಲ್ಲಿ ಸಾಗರಗಳು ಕಂದಕಗಳಂತಿವೆ. ಅದರ ಒಳಭಾಗದಲ್ಲಿ ಏಳುಸುತ್ತಿನ ಕೋಟೆಗಳಿವೆ. ಅದರ ಮಧ್ಯಭಾಗದಲ್ಲಿ ಪರಮೇಶ್ವರನ ವಾಸಗೃಹವಿರುವುದು. ||೨೨||

ಆ ಶಿವಗೃಹದ ಸುತ್ತಲೂ ಇರುವ ಪರ್ವತಗಳು ಈ ರೀತಿಯಾಗಿ ಗೋಡೆಯಂತಿವೆ. ಪೂರ್ವಭಾಗದಲ್ಲಿ ಕುಮುದ, ಪಾರಿಯಾತ್ರ, ಮೈನಾಕ ಎಂಬ ಪರ್ವತಗಳಿವೆ. ||೨೩||

ದರ್ದುರೋ ಮಲಯೋ ವಿಂಧ್ಯಃ ಪಶ್ಚಿಮೇ ಯೋಗಿಪುಂಗವ ।
ಉದಯಾಸ್ತಾಚಲೌ ಮುಂಜ ಉತ್ತರಸ್ಯಾಂ ದಿಶಿ ಸ್ಥಿತಾಃ ॥೨೪॥

ನೀಲೋ ದಕ್ಷಿಣಕೈಲಾಸೋ ಹಿಮವಾನ್ ದಕ್ಷಿಣೇ ಸ್ಥಿತಃ ।
ವಿಗಾಹ್ಯಾವಹಿತಾಸ್ಸರ್ವೇ ಚಾಬ್ಧಿಭಿಸ್ಸರ್ವತೋ ದಿಶಂ ॥೨೫॥

ದ್ವೀಪಾಬ್ಧಯಸ್ತೇ ಪರಿಘಾಸ್ಸಪ್ತ ಸಪ್ತೈವ ಪರ್ವತಾಃ ।
ತದಂತರಾಂತರಾಲೇಷು ವಿಹರಂತಿ ದಿವೌಕಸಃ ॥೨೬॥

ಗಂಧರ್ವಾಪ್ಸರಸಸ್ಸಿದ್ಧಾ ನಾಗಯಕ್ಷಾಸ್ಸುಪರ್ಣಕಾಃ ।
ಕಿನ್ನರಾಃ ಪುರುಷಾಃ ಪುಣ್ಯಾ ವಿದ್ಯಾಧರಸಚಾರಣಾಃ ॥೨೭॥

ಮುನಯೋ ಗಣಸಂಘಾಶ್ಚ ನಾನಾಭೂಮ್ಯೈಕಭೂಮಯಃ ।
ತತೋಽಪಿ ವಿಷ್ಣುಬ್ರಹ್ಮಾದ್ಯಾ ಈಶಾನಾ ರುದ್ರಭೂಮಯಃ ॥೨೮॥

---

ಪಶ್ಚಿಮಭಾಗದಲ್ಲಿ ದರ್ದುರ, ಮಲಯ, ವಿಂಧ್ಯ, ಈ ಪರ್ವತಗಳು ಗೋಡೆಯಂತಿವೆ. ಉದಯಪರ್ವತ, ಅಸ್ತಪರ್ವತ, ಮುಂಜಪರ್ವತ ಇವು ಉತ್ತರದಿಕ್ಕಿನ ಗೋಡೆಗಳು. ॥೨೪॥

ದಕ್ಷಿಣದಿಕ್ಕಿನಲ್ಲಿ ನೀಲ, ದಕ್ಷಿಣಕೈಲಾಸ, ಹಿಮವಂತ, ಈ ಪರ್ವತಗಳು ಪ್ರಾಕಾರವಾಗಿವೆ. ಆ ಪರ್ವತಗಳೆಲ್ಲಾ ಸಮುದ್ರದ ಒಳಭಾಗದಲ್ಲಿ ಮುಳುಗಿದವುಗಳಾಗಿ ನಿಂತಿವೆ. ॥೨೫॥

ಆ ಸಮುದ್ರಗಳಲ್ಲಿಯೇ ಏಳು ದ್ವೀಪಗಳು ವಿರಾಜಿಸುತ್ತಿವೆ. ಏಳು ಪರ್ವತಗಳಿಗೂ ಏಳು ದ್ವೀಪಗಳ ಸಂಬಂಧವಿದೆ. ಆ ದ್ವೀಪಗಳಲ್ಲಿ ದೇವತೆಗಳು ವಿಹರಿಸುತ್ತಿರುವರು. ॥೨೬॥

ಅಲ್ಲಿ ಗಂಧರ್ವರು, ಅಪ್ಸರಸ್ಸುಗಳು, ಸಿದ್ಧರೂ, ನಾಗರೂ, ಯಕ್ಷರೂ, ಸುಪರ್ಣರು, ಕಿನ್ನರರು, ಕಿಂಪುರುಷರು, ವಿದ್ಯಾಧರರು, ಚಾರಣರು, ಋಷಿಗಳೂ, ಗಣದೇವತೆಗಳೂ, ತ್ರಿಮೂರ್ತಿಗಳೂ, ಏಕಾದಶರುದ್ರರೂ ಇವರೆಲ್ಲರೂ ಅಲ್ಲಿ ವಿಹರಿಸುತ್ತಿರುವರು. ॥೨೭-೨೮॥

ವಿಹರಂತಿ ಪಯೋಂಭೋಧಿಪ್ರಾಕಾರವರಮಾಶ್ರಿತಾಃ ।
ಸ್ವಾದೂದಕಾಬ್ಧಿತೀರೇ ಚ ತತೋಽಪಿ ಪ್ರಮಥಾಧಿಪಾಃ ॥೨೯॥

ತತೋಽಪಿ ರತ್ನಪ್ರಾಕಾರೋ ದಶಸಾಹಸ್ರಯೋಜನಃ ।
ತದ್ರತ್ನಕಾಂತಿಧಾರಾಭಿರ್ಮಂಡಿತಂ ಭುವನತ್ರಯಂ ॥೩೦॥

ಮತ್ತಕೋಕಿಲನೇತ್ರಾಭಸ್ತತ್ರಾಸ್ತೇ ರತ್ನಪರ್ವತಃ ।
ಶತಯೋಜನಕೋಚ್ಛ್ರಾಯಃ ಪದ್ಮರಾಗನಗೋತ್ತಮಃ ॥೩೧॥

ಮಯೂಖಮಾಲಾವಿತತತನ್ಮಯೂಖತಿರಸ್ಕೃತಃ ।
ಚಂದ್ರಕಾಂತಮಣಿಪ್ರೋದ್ಯತ್ಪ್ರಾಕಾರೋಽಸ್ತಿ ತದಂತರಾ ॥೩೨॥

ಪಂಚಾಶತಂ ಸಹಸ್ರಂ ಚ ಯೋಜನಾಯಾಮತೋ ದ್ವಿಜ ।
ಸೋಮಾಚ್ಛಶತಪೀಯೂಷನಿರ್ಯದ್ಧಾರಾಸಮನ್ವಿತಃ ॥೩೩॥

---

ಸಮಸ್ತ ದೇವತಾವರ್ಗವೂ ಕ್ಷೀರಸಮುದ್ರದಲ್ಲಿ ವಿಹರಿಸುತ್ತಾ, ಅದರ ಪಕ್ಕದಲ್ಲಿರುವ ಪರ್ವತದಲ್ಲಿ ನೆಲಸಿರುವುದು. ಪ್ರಮಥಗಣಗಳೆಲ್ಲರೂ ಸ್ವಾದೂದಕ ಸಮುದ್ರದಲ್ಲಿಯೂ, ತತ್ಸಂಬಂಧವಾದ ಪರ್ವತದಲ್ಲಿಯೂ ಕ್ರೀಡಿಸುತ್ತಿರುವರು. ॥೨೯॥

ಅದರ ಮೇಲೆ ರತ್ನದ ಪ್ರಾಕಾರವೊಂದಿದೆ. ಅದು ಹತ್ತು ಸಹಸ್ರ ಯೋಜನ ವಿಸ್ತಾರವುಳ್ಳದ್ದಾಗಿದೆ. ಅದರ ಕಾಂತಿಯಿಂದ ಮೂರು ಲೋಕವೂ ಹೊಳೆಯುತ್ತಿದೆ. ॥೩೦॥

ಆ ಪರ್ವತವು ಕೋಗಿಲೆಗಳ ಕಣ್ಣಿನಂತೆ ಕಾಂತಿಯುಳ್ಳದ್ದಾಗಿದೆ. ನೂರು ಯೋಜನ ಎತ್ತರವುಳ್ಳದ್ದಾಗಿಯೂ, ಪದ್ಮದ ಕಾಂತಿಯಂತೆ ಕಾಂತಿಯುಳ್ಳದ್ದಾಗಿಯೂ ವಿರಾಜಿಸುತ್ತಿದೆ. ॥೩೧॥

ಸೂರ್ಯನ ಕಿರಣಗಳನ್ನೆಲ್ಲಾ ಅದು ಕಾಂತಿಯಲ್ಲಿ ತಿರಸ್ಕರಿಸಿದೆ. ಆ ರತ್ನಪರ್ವತದ ಪಕ್ಕದಲ್ಲಿ ಚಂದ್ರಕಾಂತಶಿಲೆಗಳಿಂದ ಕೂಡಿದ ಮತ್ತೊಂದು ಗೋಡೆಯಿದೆ.॥೩೨॥

ಆ ಚಂದ್ರಕಾಂತಶಿಲೆಯ ಪ್ರಾಕಾರವು ಐನೂರುಸಾವಿರ ಯೋಜನದ ಅಗಲವಾಗಿಯೂ, ಸರ್ವದಾ ಚಂದ್ರಮಂಡಲಗತವಾದ ಅಮೃತಧಾರೆಯಿಂದ ಕೂಡಿದ್ದಾಗಿಯೂ ಇರುತ್ತದೆ. ॥೩೩॥

ತತ್ಕಾಂತಿಸಾರಧಾರಾಭೀ ರಂಜಿತಾಸ್ತತ್ರ ಭೂಮಯಃ ।
ಹಿಮಸಾರಮಹಾತಾರಾಧಾರಾವ್ಯಾಪಿನಗೋತ್ತಮಃ ॥೩೪॥

ದಶಸಾಹಸ್ರಮಾನೇನ ತತ್ರಾಸ್ತೇ ಹೀರಕೋ ಹ್ಯಗಃ ।
ಇಂದ್ರನೀಲಾಮಲಮಣಿಪ್ರಾಕಾರೋಽಸ್ತಿ ತದಂತರೇ ॥೩೫॥

ಪಂಚಾಶತ್ಯೋಽಪಿ ಮಾನೇನ ನೀಲನೀಲೋತ್ಪಲದ್ಯುತಿಃ ।
ತನ್ನೈಲ್ಯಗರ್ಭಸೌಂದರ್ಯಧಾರಾಧೀರೈಕಭೂಮಯಃ ॥೩೬॥

ತತ್ರಾಸ್ತಿ ಪರ್ವತವರಶ್ಚೇಂದ್ರನೀಲಸಮಪ್ರಭಃ (ಶಿಲೋಚ್ಚಯಃ) ।
ನೀಲನೀರದಸಂಶ್ಲಿಷ್ಟವಿದ್ಯುಲ್ಲೇಖಾನ್ವಿತಚ್ಛವಿಃ ॥೩೭॥

ದಶಸಾಹಸ್ರವಿಸ್ತಾರಃ ಪರಿಣಾಹೇಽಪಿ ತಾದೃಶಃ ।
ಹರಿನ್ಮಣೀಂದ್ರಪ್ರವರಪ್ರಾಕಾರೋಽಸ್ತಿ ತದಂತರಾ ॥೩೮॥

---

ಆ ಪ್ರಾಕಾರದ ಶುಭ್ರಕಾಂತಿಯಿಂದ ತಪ್ಪಲು ಪ್ರದೇಶದ ಭಾಗವೆಲ್ಲಾ ರಂಜಿತವಾಗಿದೆ. ಆ ಪರ್ವತದ ಮೇಲ್ಭಾಗದಲ್ಲಿ ಹಿಮದಿಂದ ತುಂಬಿರುವ ನಕ್ಷತ್ರ ಪಂಕ್ತಿಗಳು ಅದನ್ನು ಮತ್ತಷ್ಟು ಕಾಂತಿಗೊಳಿಸಿವೆ. ||೩೪||

ಅಲ್ಲಿಂದ ಮುಂದೆ ಹತ್ತುಸಾವಿರ ಯೋಜನದಗಲ ಹೀರಕವೆಂಬ ಪರ್ವತವಿದೆ. ಅದು ಇಂದ್ರನೀಲಮಣಿಗಳಿಂದ ನಿಬದ್ಧವಾದ ಪ್ರಾಕಾರದ ಸಮೀಪದಲ್ಲಿದೆ. ||೩೫||

ಅದರ ಎತ್ತರ ಐವತ್ತು ಯೋಜನ. ಕೇವಲ ನೀಲಕಾಂತಿಯೇ ಅದರಿಂದ ಹೊರಡುವ ತೇಜಸ್ಸು. ಆ ನೀಲೀಕಾಂತಿಯು ಪರ್ವತದ ತಪ್ಪಲಿನ ಸರ್ವಾವಯವ ಭೂಮಿಯನ್ನೂ ತೇಜೋಮಯವನ್ನಾಗಿ ಮಾಡಿದೆ. ||೩೬||

ಆ ಪರ್ವತದ ಸಮೀಪದಲ್ಲಿಯೇ ಇಂದ್ರನೀಲಪರ್ವತವು ಕಂಗೊಳಿಸುತ್ತಿದೆ. ಅದಾದರೋ ಮಿಂಚಿನ ಕಾಂತಿಯಿಂದ ಕೂಡಿದ ನೀಲಿಯ ಮೇಘದಂತೆ ಹೊಳೆಯುತ್ತಿರುವುದು. ||೩೭||

ಅದೂ ಸಹ ವಿಸ್ತಾರದಲ್ಲಿ ಹತ್ತುಸಾವಿರಯೋಜನವಿದೆ. ಅದು ಒಂದು ದೊಡ್ಡ ಇಂದ್ರನೀಲಮಣಿಯಿಂದ ನಿರ್ಮಿತವಾದ ಗೋಡೆಯೊಂದರ ಒಳಭಾಗದಲ್ಲಿ ಕಾಣುವುದು. ||೩೮||

ತನ್ಮಣೀಂದ್ರಪ್ರಭಾಭಾಸಿಹರಿತಾ ಏವ ಭೂಮಯಃ ।
ಪ್ರವಾಲಪರ್ವತಸ್ತತ್ರ ವಿಂಶತ್ಸಾಹಸ್ರಮುನ್ನತಃ ॥೩೯॥

ಬಿಂಬಾಮಲಲಸತ್ಕಾಂತಿಕಾಂತೋ ಭೂಧರನಾಯಕಃ ।
ತದಂತರೇಪಿ ಪ್ರಾಕಾರೋ ಗೋಮೇದಮಣಿಕಲ್ಪಿತಃ ॥೪೦॥

ತ್ರಿಂಶತ್ಸಾಹಸ್ರಮಾನೇನ ಮಧುಪಿಂಗಲಸುಂದರಃ ।
ತತ್ರೋಚ್ಚಃ ಪರ್ವತೋ ವಿಪ್ರ ಕುರುವಿಂದಮಣಿಪ್ರಭಃ ॥೪೧॥

ಪಕ್ಷಸಂಖ್ಯಾಸಹಸ್ರೇಣ ಶಿಖರೈಶ್ಚಾಪಿ ತಾದೃಶಃ ।
ತಸ್ಯಾಂತರೇಪಿ ಪ್ರಾಕಾರಃ ಪುಷ್ಪರಾಗಶಿಲಾಂಚಿತಃ ॥೪೨॥

ಚತ್ವಾರಿಂಶತ್ಸಹಸ್ರಾಣಾಂ ಯೋಜನೋನ್ನತಮಾನತಃ ।
ತಸ್ಯಾಮಲಚ್ಛವಿಗಣೈಸ್ಸದೃಶಾಸ್ತತ್ರ ಭೂಮಯಃ ॥೪೩॥

---

ಅದರ ರತ್ನಕಾಂತಿಗಳಿಂದ ಭೂಮಿಯೆಲ್ಲಾ ಹಸುರುಬಣ್ಣದಿಂದ ಕೂಡಿದೆಯೋ ಎಂಬಂತೆ ಇರುವುದು. ಹಾಗೆಯೇ ಮುಂದೆ ಪ್ರವಾಳಪರ್ವತವೆಂಬ ಮುತ್ತಿನ (ಹವಳದ) ಬೆಟ್ಟವು ಇಪ್ಪತ್ತುಸಹಸ್ರಯೋಜನದ ಎತ್ತರದಲ್ಲಿ ಕಂಡುಬರುತ್ತದೆ. ॥೩೯॥

ಅದು ಪರಿಶುದ್ಧವಾದ ಕಾಂತಿಯಿಂದ ಪ್ರತಿಬಿಂಬಿಸತಕ್ಕದ್ದಾಗಿರುವುದು. ಅದರ ಮಧ್ಯದಲ್ಲಿ ಗೋಮೇದವೆಂಬ ದಿವ್ಯರತ್ನದಿಂದ ನಿರ್ಮಿತವಾದ ಪ್ರಾಕಾರವೊಂದು ಕಂಡುಬರುತ್ತದೆ. ॥೪೦॥

ಅದರ ಎತ್ತರ ಮೂವತ್ತುಸಹಸ್ರಯೋಜನವಾಗಿದೆ. ಜೇನುತುಪ್ಪದ ವರ್ಣ ದಿಂದ ಕೂಡಿರುವುದು. ಆ ಎತ್ತರವಾದ ಪರ್ವತವು ಕುರುವಿಂದ ಮಣಿಯಂತೆ ಕಾಂತಿಯುಳ್ಳದ್ದಾಗಿರುವುದು. (ಕುರುವಿಂದ=ದೊಡ್ಡತುಂಗಮುಸ್ತೆಗಿಡ) ॥೪೧॥

ಅದೂ ಸಹ ಎತ್ತರದಲ್ಲಿ ಹದಿನೈದುಸಾವಿರಯೋಜನದಷ್ಟಿದೆ. ಅದರ ಶಿಖರ ಗಳೂ ಬಹು ಉನ್ನತವಾಗಿವೆ. ಅದು ಪುಷ್ಪರಾಗದಂತೆ ಕಾಂತಿಯುಳ್ಳ ಪ್ರಾಕಾರವಾಗಿ ಕಾಣುತ್ತದೆ. ॥೪೨॥

ಆ ಪ್ರಾಕಾರವಾದರೋ ನಲವತ್ತುಸಹಸ್ರಯೋಜನಗಳ ಎತ್ತರವುಳ್ಳ ದ್ದಾಗಿಯೂ, ಪರಿಶುದ್ಧವಾದ ಕಾಂತಿಯಿಂದ ಭೂಮಿಯನ್ನೇ ಬೆಳಗಿಸತಕ್ಕದ್ದಾಗಿಯೂ ಕಂಗೊಳಿಸುತ್ತಿದೆ. ॥೪೩॥

ತತ್ರಾಪಿ ಭೂಧರಶ್ರೇಷ್ಠೋ ಮುಕ್ತಾಮಣಿಶತೈಶ್ಚಿತಃ ।
ಉನ್ಮತ್ತಾಖುಭುಜೋತ್ತುಂಗಲೋಚನಾಮಲಸಚ್ಛವಿಃ ॥೪೪॥

ತದಂತರಾ ತ್ವಿಷಾಕಾರವಿಂಶತ್ಸಾಹಸ್ರಮಾನತಃ ।
ತತ್ತ್ವಿಷಾ ಚಾಭಿತಸ್ಸರ್ವಪೀತೀಭೂತದಿಗಂತರಃ ॥೪೫॥

ವೈಡೂರ್ಯಾನೇಕಸೂತ್ರಾಚ್ಛಧಾರಾರಸವಿಜೃಂಭಿತಾಃ ।
ಭೂಮಯಸ್ತತ್ರ ಶೋಭಂತೇ ವಿಸ್ಮಯಾನಾಂ ಸ್ಮಯಪ್ರದಃ ॥೪೬॥

ತತ್ರಾಸ್ತಿ ಪರ್ವತವರೋ ನವರತ್ನಯುತಚ್ಛವಿಃ ।
ಕ್ವಚಿನ್ಮರಕತಸ್ವಚ್ಛಲಹರೀಹರಿತಾಕೃತಿಃ ॥೪೭॥

ಕ್ವಚಿದ್ವಿದ್ರುಮಸಂಕಾಶಸ್ಸಂಧ್ಯಾಘನನಿಭಃ ಕ್ವಚಿತ್ ।
ಕ್ವಚಿದ್ಧೀರಕಜಾತ್ಯಚ್ಛಫಲಮೂಲಸಮುಚ್ಛವಿಃ ॥೪೮॥

---

ಅಲ್ಲಿಯೇ ಮತ್ತೊಂದು ಪರ್ವತವಿದೆ. ಅದು ಅನೇಕ ಮುತ್ತುಗಳಿಂದ ಪ್ರಕಾಶವುಳ್ಳದ್ದಾಗಿದೆ. ಅಲ್ಲಿರುವ ರತ್ನಗಳೆಲ್ಲಾ ಬಲಿಷ್ಠವಾದ ಬೆಕ್ಕಿನ ಕಣ್ಣುಗಳಂತೆ ಹೊಳಪುಳ್ಳದ್ದಾಗಿ, ಶುಭ್ರವಾದ ಕಾಂತಿಯನ್ನು ಎರಚುತ್ತಾ ರಂಜಿಸುತ್ತಿವೆ. ॥೪೪॥

ಅದರ ಕಾಂತಿಯು ಇಪ್ಪತ್ತುಸಹಸ್ರಯೋಜನಪರ್ಯಂತ ವ್ಯಾಪಿಸತಕ್ಕದ್ದಾಗಿರುವುದು. ಆ ಪರ್ವತದ ಕಾಂತಿಯು ಸರ್ವತ್ರ ಹರಡಿ ದಿಗಂತವನ್ನೆಲ್ಲಾ ಹೊಂಬಣ್ಣವುಳ್ಳದ್ದನ್ನಾಗಿ ಮಾಡುತ್ತಿದೆ. ॥೪೫॥

ವೈಡೂರ್ಯಮಣಿಯ ಕಾಂತಿಯು ಸೂತ್ರರೂಪವಾಗಿ ಭೂಮಿಯಲ್ಲೆಲ್ಲಾ ವ್ಯಾಪಿಸಿದರೆ, ಭೂಮಿಯು ಯಾವ ರೀತಿ ಮನೋಹರವಾಗಿ ಕಾಣುವುದೋ, ಹಾಗೆ ಆ ಪರ್ವತದ ತೇಜಃಪ್ರವಾಹವು ಭೂಮಿಯನ್ನೆಲ್ಲಾ ಬೆಳಗಿಸಿ ಜನರಿಗೆ ಅತ್ಯಾಶ್ಚರ್ಯವನ್ನುಂಟುಮಾಡುವುದಾಗಿದೆ. ॥೪೬॥

ನವರತ್ನಗಳ ಕಾಂತಿಯಿಂದ ಹೊಳೆಯುವ ಮತ್ತೊಂದು ಪರ್ವತವು ಅಲ್ಲಿ ವಿರಾಜಿಸುತ್ತಿರುವುದು. ಅದು ಕೆಲವೆಡೆ ಮರಕತಗಳಂತೆ ಹೊಳೆಯುತ್ತಾ, ಆ ಪ್ರದೇಶವನ್ನೆಲ್ಲಾ ಹರಿದ್ವರ್ಣವನ್ನಾಗಿ ಮಾಡುತ್ತಿರುವುದು. ॥೪೭॥

ಮತ್ತೊಂದುಭಾಗದಲ್ಲಿ ಅದೇ ಪರ್ವತವು ಹವಳದಂತೆ ಹೊಳೆಯುತ್ತಾ ಸಂಧ್ಯಾಕಾಲದ ಮೇಘದಂತೆ ವಿರಾಜಿಸುವುದು. ಒಂದುಭಾಗದಿಂದ ದಪ್ಪವಾದ

ಕ್ವಚಿದ್ವೈಡೂರ್ಯಸೂತ್ರೋತ್ಥಭಾಭಾಸಿತದಿಗಂತರಃ ।
ಉನ್ಮತ್ತಕೋಕಿಲಾಕ್ಷಾಭಕುರುವಿಂದನಿಭಃ ಕ್ವಚಿತ್ ॥೪೯॥

ಪುಷ್ಪರಾಗಸರಾಗೋದ್ಯದ್ರಾಗರಕ್ತೋऽರುಣಃ ಕ್ವಚಿತ್ ।
ತೃಣಗ್ರಾಹಿಮಹಾನೀಲನೀಲಿಮ್ನಾ ಚ ನಭೋಪಮಃ ॥೫೦॥

ಕ್ವಚಿದ್ಗೋಮೇದಕಾಪಾರಮಧುಧಾರಾಸಮುಚ್ಛವಿಃ ।
ಮುಕ್ತಾಕಾಂತಿತಿರಸ್ಕಾರಿಶ್ಲಕ್ಷ್ಣನೈರ್ಮಲ್ಯಭಾಯುತಃ ॥೫೧॥

ಸ್ವಚ್ಛಾಚ್ಛಸ್ಫಟಿಕೋಪಾಂತಬಿಂಬಿತಾಖಿಲದಿಕ್ತಟಃ ।
ನಾನಾರಾಗಮಯೂಖೌಘೈಶ್ಚೇಂದ್ರಚಾಪನಿಭಃ ಕ್ವಚಿತ್ ॥೫೨॥

---

ಹೀರಕಮಣಿಯಂತೆ ಸ್ವಚ್ಛವಾದ ಹಣ್ಣಿನ ಕಾಂತಿಯನ್ನು ಕೊಟ್ಟು ಹೊಳೆಯುವುದು. ॥೪೮॥

ಒಂದುಕಡೆ ಆ ಪರ್ವತವು ವೈಡೂರ್ಯಮಣಿಯ ಕಾಂತಿಧಾರೆಯಂತೆ ಕಾಂತಿಯನ್ನು ಎರಚುತ್ತಾ ದಿಗಂತವನ್ನೆಲ್ಲಾ ಪ್ರಕಾಶಿಸುವಂತೆ ಮಾಡುವುದು. ಮತ್ತೊಂದು ಭಾಗದಲ್ಲಿ ಅದೇ ಪರ್ವತವು ಮದಿಸಿದ ಕೋಗಿಲೆಯ ಕಣ್ಣಿನಂತೆ ಹೊಳಪನ್ನು ಪಡೆದು ತುಂಗಮುಸ್ತಾ ಬಳ್ಳಿಯಂತೆ ಕಂಗೊಳಿಸುತ್ತಿರುವುದು. ॥೪೯॥

ಮತ್ತೊಂದುಭಾಗದಲ್ಲಿ ಅದೇ ಪರ್ವತವು ಹೂವಿನ ಕಾಂತಿಯನ್ನು ಪಡೆದು ಕೆಂಪಾದ ಕಿರಣವನ್ನು ಬೀರುತ್ತಿದೆ. ಬೇರೇ ಭಾಗದಲ್ಲಿ ಎಳೆಗರುಕೆಯ ಹಸುರು ಬಣ್ಣವನ್ನೂ, ಆಕಾಶದ ನೀಲವರ್ಣವನ್ನೂ ಕೊಡುತ್ತಿದೆ. ॥೫೦॥

ಕೆಲವು ಸ್ಥಳಗಳಲ್ಲಿ ಆ ಪರ್ವತವು ಗೋಮೇದರತ್ನದಂತೆ ಹೊಳೆಯುವುದು. ಮತ್ತು ಜೇನುತುಪ್ಪದ ಕಾಂತಿಯನ್ನು ಬೀರುವುದಾಗಿದೆ. ಮಾಧುರ್ಯದಲ್ಲಿ, ನೈರ್ಮಲ್ಯದಲ್ಲಿ ಮುತ್ತುಗಳ ಕಾಂತಿಯನ್ನು ತಿರಸ್ಕರಿಸುವಂತಿದೆ. ॥೫೧॥

ಒಂದುಕಡೆಯಲ್ಲಿ ಆ ಪರ್ವತವು ಶುಭ್ರವಾದ ಸ್ಫಟಿಕಶಿಲೆಯಂತೆ ಹೊಳೆಯುತ್ತಾ ತನ್ನದೇ ಆದ ಶುಭ್ರತೇಜಸ್ಸಿನಿಂದ ಸಮಸ್ತ ದಿಕ್ಕುಗಳನ್ನೂ ಬೆಳಗಿಸುತ್ತಿದೆ. ಹೀಗೆ ಅನೇಕ ಬಣ್ಣದ ಕಾಂತಿಯನ್ನು ಬೀರುತ್ತಾ ಇಂದ್ರಧನುಸ್ಸಿನ ಸೊಬಗನ್ನು ಬೀರುವುದಾಗಿದೆ. ॥೫೨॥

ತತ್ರಾಸ್ತಿ ಮಂಟಪವರಂ ನಾನಾಚಿತ್ರವಿಚಿತ್ರಿತಂ ।
ಪದ್ಮರಾಗಮಣಿಸ್ತಂಭಸ್ತಂಭಪೀಠಮನೋಹರಂ ॥೫೩॥

ಸಿಂಹಶಾರ್ದೂಲಶರಭಗಜಹಂಸಶುಕಾಕೃತಿಃ ।
ವ್ಯಾಲಶುಂಡಾನಲಿಸ್ವಾದಿ ಚಿತ್ರಚಿತ್ರಿತವಿಸ್ಮಯಂ ॥೫೪॥

ಏಕೈಕರತ್ನಸಂಕ್ಲುಪ್ತನೀಲೋಚ್ಛ್ರಾಯೈಕಭಾಸುರಃ ।
ಪಂಕ್ತಿಶಸ್ತಂಭಸಾಹಸ್ರೈರ್ನವರತ್ನಪರಿಷ್ಕೃತೈಃ ॥೫೫॥

ಅಪಾದಪೀಠಜಶ್ಲಕ್ಷ್ಣಗೋಪಾನಸಿಸುಭಿತ್ತಿಕಂ ।
ಸ್ವಚ್ಛಾದರ್ಶತಲಪ್ರಾಯಭೂಮಿಭಾಗೈಕರಂಜಿತಂ ॥೫೬॥

ತತ್ರ ಸ್ತಂಭಪ್ರಭಾಜ್ಯೋತ್ಸ್ನಾಪ್ರಭಾಕರಶತಪ್ರಭಂ ।
ನ ಸೂರ್ಯಚಂದ್ರೌ ಭಾಸೇತೇ ವಹ್ನಿನಕ್ಷತ್ರವಿದ್ಯುತಃ ॥೫೭॥

---

ಅಲ್ಲಿ ಒಂದು ದಿವ್ಯಮಂಟಪವಿದೆ. ಅದರಲ್ಲಿ ಚಿತ್ರವಿಚಿತ್ರವಾದ ವಸ್ತುಗಳು ಅಡಗಿವೆ. ಪದ್ಮರಾಗಮಣಿಗಳಿಂದ ಖಚಿತವಾದ ಸ್ತಂಭಗಳೂ ಅವುಗಳ ಪೀಠಗಳೂ ಆ ಮಂಟಪವನ್ನು ಮನೋಹರವನ್ನಾಗಿ ಮಾಡಿವೆ. ॥೫೩॥

ಸಿಂಹ, ಹುಲಿ, ಶರಭ, ಆನೆ, ಹಂಸ, ಗಿಳಿ ಇವುಗಳ ಆಕಾರದ ಪ್ರತಿಬಿಂಬಗಳೂ, ಹಾವು, ಶುಂಡ(?) ಕಮಲ ಮುಂತಾದ ಚಿತ್ರಗಳೂ ಆ ಮಂಟಪದಲ್ಲಿ ವಿಸ್ಮಯಜನಕವಾಗಿವೆ. ॥೫೪॥

ಆ ಮಂಟಪದಲ್ಲಿ ಸಾಲುಸಾಲಾಗಿ ನಿಂತಿರುವ ನವರತ್ನಮಯವಾದ ಅನೇಕ ಸಹಸ್ರ ಕಂಭಗಳು ಕಂಗೊಳಿಸುತ್ತಿವೆ. ಅದರಲ್ಲಿದ್ದ ಒಂದೊಂದು ನೀಲರತ್ನವೂ ನೀಲಕಾಂತಿಯನ್ನು ಬೀರುತ್ತಾ ಶೋಭಿಸುತ್ತಿದೆ. ॥೫೫॥

ಪಾದಪೀಠದಿಂದ ಹಿಡಿದು ಮೇಲಿನವರೆಗೂ ಕಾಂತಿಮತ್ತಾಗಿರುವ ಸೂರು ಕಟ್ಟುಗಳೂ, (ಥಾರಂಬ) ನಯವಾಗಿ ಚಿತ್ರವಿಚಿತ್ರವಾಗಿರುವ ಗೋಡೆಗಳೂ ಮನೋಹರವಾಗಿವೆ. ಆ ಮಂಟಪದ ನೆಲವಂತೂ ತೊಳೆದು ಶುಭ್ರವಾಗಿರುವ ಕನ್ನಡಿಯಂತೆ ಹೊಳೆಯುತ್ತಿರುವುದು. ॥೫೬॥

ಆ ಮಂಟಪದ ಕಂಬದಲ್ಲಿರುವ ರತ್ನಗಳ ಕಾಂತಿಯು, ಬೆಳದಿಂಗಳಿನ ಮತ್ತು ಎಳೆಬಿಸಿಲಿನ ಹೊಳಪನ್ನು ನೂರುಪಾಲಿನಷ್ಟು ಜಾಸ್ತಿಯಾಗಿ ಮೀರಿಸಿದ್ದಾಗಿದೆ. ಅದರಷ್ಟು ತೇಜಸ್ಸನ್ನು ಸೂರ್ಯಚಂದ್ರರೂ ಹೊಂದಿರಲಾರರು. ॥೫೭॥

ತಿರಸ್ಕೃತಾಃ ಪ್ರಭಾಸ್ತತ್ರ ನ ರಾತ್ರಿರ್ನ ದಿವಾ ಕ್ವಚಿತ್ ।
ಏವಂ ಲಕ್ಷಸ್ತಂಭಯುಕ್ತಾ ಮಂಟಪಾಸ್ತತ್ರಕಲ್ಪಿತಾಃ ॥೫೮॥

ಪರ್ಯಂತಗೋಪುರೋತ್ತುಂಗರತ್ನಸೌಧಾಯುತೈರ್ವೃತಃ ।
ಸಹಸ್ರಲಕ್ಷಫಲಕೈಸ್ತಂಭಕುಂಭೈರ್ಯುತೋ ಮುನೇ ॥೫೯॥

ಗೋಪುರಾಣಾಂ ಪ್ರಮಾಣಂ ತು ಮನಸಾಪಿ ನ ಶಕ್ಯತೇ ।
ನಾನಾರುದ್ರಾವತಾರಾದಿಮಣಿಕಲ್ಪಿತವಿಗ್ರಹಃ ॥೬೦॥

ಮೂರ್ತಯೋ ದೇವದೇವಸ್ಯ ದೇವ್ಯಾ ವಾಹನಸಂಯುತಾಃ ।
ಸ್ಕಂದಹೇರಂಬನಂದೀನಾಂ ಸಪ್ತಲೋಕಾಂತಮುಚ್ಛ್ರಿತಾಃ ॥೬೧॥

ಗೋಪುರಾಣಾಂ ತಲೈರ್ದಿವ್ಯೈಃ ವಿಸ್ತಾರಾಯಾಮಲಕ್ಷಕಂ ।
ಲಿಂಗೋದ್ಭವಸ್ತತಃ ಪಾರ್ಶ್ವೇ ವೃಷವಾಹಸ್ತತಃ ಪರಂ ॥೬೨॥

---

ಆ ಸ್ತಂಭಗಳ ಹೊಳಪು ಅಗ್ನಿ, ನಕ್ಷತ್ರ, ಮಿಂಚು ಇವುಗಳ ತೇಜಸ್ಸನ್ನು ಮಂಕುಮಾಡುವಂತಿದೆ. ರಾತ್ರಿಯಾಗಲಿ, ಹಗಲಾಗಲಿ ಆ ಸ್ತಂಭಗಳ ತೇಜಸ್ಸನ್ನು ಹೊಂದುವಂತಿಲ್ಲ. ಹೀಗೆ ಆ ಮಂಟಪವು ಲಕ್ಷಸ್ತಂಭಗಳಿಂದ ಕೂಡಿದ್ದಾಗಿ ಬಹು ಮನೋಹರವಾಗಿದೆ. ॥೫೮॥

ಆ ಮಂಟಪದ ಸುತ್ತಲೂ ಅನೇಕ ಗೋಪುರಗಳಿವೆ. ಅವುಗಳಲ್ಲಿ ರತ್ನ ನಿರ್ಮಿತಗಳಾದ ಕಲಶಗಳಿವೆ. ಇಂತಹ ಗೋಪುರ ಸಹಿತವಾದ ಸೌಧಗಳು ಹತ್ತು ಸಾವಿರ ಸಂಖ್ಯೆಯಲ್ಲಿವೆ. ಅವುಗಳ ಮೇಲಿದ್ದ ಕಲಶಗಳು ಫಲಯುಕ್ತಗಳಾಗಿ ಸಹಸ್ರ ಲಕ್ಷ ಸಂಖ್ಯೆಯಲ್ಲಿ ಕಂಡುಬರುತ್ತಿವೆ. ॥೫೯॥

ಆ ಗೋಪುರಗಳ ಪ್ರಮಾಣವನ್ನು ಮನಸ್ಸಿನಿಂದಲೂ ವರ್ಣಿಸಲಾಗುವುದಿಲ್ಲ. ಆ ಗೋಡೆಗಳ ಮೇಲೆ ಪರಶಿವನ ಅವತಾರ ಭೇದಗಳು ಚಿತ್ರರೂಪವಾಗಿಯೂ ರತ್ನವಿಗ್ರಹಗಳ ರೂಪವಾಗಿಯೂ ನಿರ್ಮಿಸಲ್ಪಟ್ಟಿವೆ. ॥೬೦॥

ಪರಶಿವನ ವಿವಿಧ ಆಕಾರಗಳೂ, ದೇವಿಯ ನಾನಾರೂಪಗಳೂ ವಾಹನಸಹಿತವಾಗಿ ರತ್ನಗಳಲ್ಲಿ ಕೆತ್ತಲ್ಪಟ್ಟಿವೆ. ಸ್ಕಂದ, ಗಣಪತಿ, ನಂದಿ ಇವರುಗಳ ಪ್ರತಿಬಿಂಬಗಳು ಊರ್ಧ್ವಲೋಕಪರ್ಯಂತವಾಗಿರುವಂತೆ ಚಿತ್ರಿತವಾಗಿವೆ. ॥೬೧॥

ಅಲ್ಲಿರುವ ಎಲ್ಲಾ ಗೋಪುರಗಳ ತಲಭಾಗದ ವಿಸ್ತಾರವು ಸುಮಾರು ಲಕ್ಷ

ಸಿಂಧುರತ್ವಕ್ಪರೀವೀತಃ ಕ್ವಚಿತ್ಸಾಂಬಸ್ಸಪುತ್ರಕಃ ।
ಸ್ಕಂದಹೇರಂಬಸಹಿತಃ ಕ್ವಚಿದ್ಗಣಗಣೈರ್ವೃತಃ ॥೬೩॥

ಉಮಾರ್ಧವಿಗ್ರಹಶ್ಚಾಪಿ ನೃತ್ತಾಟೋಪಯುತಃ ಕ್ವಚಿತ್ ।
ವಾಮಾಂಗದಕ್ಷಿಣಾಂಗೋದ್ಯಜ್ಜನಾರ್ದನವಿಧಿಃ ಕ್ವಚಿತ್ ॥೬೪॥

ದೇವೀಪರಿಣಯಾಕಾರಃ ಕ್ವಚಿದ್ಭಿಕ್ಷಾಟನಾಕೃತಿಃ ।
ಶೂಲಾಸಕ್ತಕರಶ್ಚಾಪಿ ಮೃಗಪಾಣಿಃ ಪುರಾರಿಹಾ ॥೬೫॥

ಅಂಧಕಾಸುರಸಂಹಾರೋ ದಕ್ಷಿಣಾಮೂರ್ತಿರೂಪಧೃಕ್ ।
ಮುನೀನಾಂ ಜ್ಞಾನದಸ್ಸಿದ್ಧಿಚಿನ್ಮುದ್ರಾಪರಿಚಿಹ್ನಿತಃ ॥೬೬॥

---

ಯೋಜನವಾಗಬಹುದು. ಆ ಗೋಪುರಗಳ ಪಕ್ಕದಲ್ಲಿ ನಾನಾವಿಧವಾದ ಶಿವಲಿಂಗಗಳಿವೆ. ಆ ಲಿಂಗಗಳಲ್ಲಿ ಕೆಲವು ವೃಷಭಾರೂಢಾಕೃತಿಯಲ್ಲಿವೆ. ॥೬೨॥

ಗಜಚರ್ಮಾಂಬರಧಾರಿಯಾದ ಲಿಂಗಗಳು ಕೆಲವು. ಪಾರ್ವತೀವಿನಾಯಕ ಸಹಿತವಾದ ದಿವ್ಯಾಕೃತಿ, ಷಣ್ಮುಖ, ಗಣಪತಿ ಇವರಿಬ್ಬರಿಂದಲೇ ಕೂಡಿರುವ ಶಿವಾಕೃತಿ, ಪ್ರಮಥಗಣಗಳಿಂದ ಆವೃತವಾಗಿರುವ ಮೂರ್ತಿ, ಹೀಗೆ ನಾನಾ ಆಕಾರದ ಶಿವಲಿಂಗಗಳಿವೆ. ॥೬೩॥

ಅರ್ಧನಾರೀಶ್ವರಮೂರ್ತಿ, ತಾಂಡವಮೂರ್ತಿ, ಎಡಬಲಭಾಗಗಳಲ್ಲಿ ಕ್ರಮವಾಗಿ ವಿಷ್ಣುವನ್ನೂ, ಬ್ರಹ್ಮನನ್ನೂ ಹೊಂದಿರುವ ಆಕಾರಗಳು, ಇಂತಹ ಶಂಕರವಿಗ್ರಹಗಳು ಅಲ್ಲಿ ಕಾಣುತ್ತಿವೆ. ॥೬೪॥

ಗಿರಿಜಾಕಲ್ಯಾಣದ ಚಿತ್ರ, ಬ್ರಹ್ಮಕಪಾಲಧಾರಿಯಾಗಿ ಭಿಕ್ಷೆಮಾಡಿದ ದೃಶ್ಯ, ತ್ರಿಶೂಲಧಾರಿಯಾದ ಆಕಾರ, ಜಿಂಕೆಯನ್ನು ಕೈಯ್ಯಲ್ಲಿ ಧರಿಸಿದ ವಿಗ್ರಹ, ತ್ರಿಪುರಗಳನ್ನು ನಾಶಗೊಳಿಸಿದ ಸನ್ನಿವೇಶ, ಇವೆಲ್ಲವೂ ಮೂರ್ತಿಮತ್ತಾದ ಆಕಾರದಲ್ಲಿ ನಿಂತಿವೆ. ॥೬೫॥

ಅಂಧಕಾಸುರಸಂಹಾರದ ವಿವರಣೆ, ದಕ್ಷಿಣಾಮೂರ್ತಿಯ ಆಕಾರವನ್ನು ಹೊಂದಿರುವಿಕೆ, ಋಷಿಗಳಿಗೆ ಉಪದೇಶಮಾಡುವಂತೆ ಜ್ಞಾನಮುದ್ರೆಯನ್ನು ತಳೆದಿರುವ ದಿವ್ಯ ಸುಂದರ ವಿಗ್ರಹ, ಇವೆಲ್ಲವೂ ಅಲ್ಲಿ ಕಂಗೊಳಿಸುತ್ತಿವೆ. ॥೬೬॥

ತತ್ಪುರುಷವಾಮದೇವಾದ್ಯಾ ಈಶಾನಾಘೋರಸಂಜ್ಞಕಾಃ ।
ಬಾಲೇಂದುಮುಕುಟಾಸ್ಸರ್ವೇ ಕಪರ್ದವರಶೋಭಿತಾಃ ॥೬೭॥

ರತ್ನಾಭರಣಭೂಷಾಢ್ಯಾಃ ಮೂರ್ತಯಶ್ಶಂಕರಸ್ಯ ಹಿ ।
ದಿಕ್ಪಾಲಪಾಲಿಕಾಭಿಶ್ಚ ತತ್ತದ್ರಾಗಮಣಿಪ್ರಭಾಃ ॥೬೮॥

ಕಲ್ಪಿತಾಃ ಪರಮೇಶೇನ ಶಿವಲೀಲಾವಿಚಿತ್ರಿತಾಃ ।
ಪರ್ಯಂತಸ್ಫಟಿಕಾಭಾಶ್ಚ ವೃಷಾ ನೀಲವಿಲೋಚನಾಃ ॥೬೯॥

ಮಹಾಶೃಂಗೈಕಮುಕುಟಘಂಟಾಮಣಿವಿಭೂಷಣಾಃ ।
ಗೋಪುರೋರ್ಧ್ವಗತಾಸ್ಸರ್ವೇ ಮಹಾಹೀರಕಶೃಂಗಕಾಃ ॥೭೦॥

ಪ್ರಾಕಾರರಾಜದ್ವೃಷಭಾ ಮಹಾರ್ಹಮಣಿಕಲ್ಪಿತಾಃ ।
ತಲಾನಾಂ ಕೋಟಿಭಿಶ್ಚಾಪಿ ಗೋಪುರಾಣಾಂ ಪ್ರಕಲ್ಪನೈಃ ॥೭೧॥

---

ತತ್ಪುರುಷ, ವಾಮದೇವ, ಈಶಾನ, ಅಘೋರ ಮೊದಲಾದ ಶಿವಮೂರ್ತಿಗಳ ವಿವಿಧ ಭೇದಗಳೆಲ್ಲಾ ಅಲ್ಲಿ ಚಿತ್ರರೂಪವಾಗಿ ತೋರಿಬರುತ್ತಿವೆ. ಅಲ್ಲದೆ ಬಾಲಚಂದ್ರನನ್ನು ಶಿರಸ್ಸಿನಲ್ಲಿ ಧರಿಸಿ, ಜಟಾಜೂಟಧಾರಿಯಾಗಿರುವ, ॥೬೭॥

ಶಂಕರನ ಮೂರ್ತಿಗಳು ರತ್ನಾಭರಣಗಳಿಂದ ಅಲಂಕೃತಗಳಾಗಿ ವಿರಾಜಿಸುತ್ತಿವೆ. ಸುತ್ತಲೂ ಅಷ್ಟದಿಕ್ಪಾಲಕರ ವಿಗ್ರಹಗಳಿವೆ. ಅವುಗಳೆಲ್ಲವೂ ಅವರವರ ವರ್ಣಾನುಸಾರವಾದ ರತ್ನಗಳಿಂದಲೇ ನಿರ್ಮಿತವಾಗಿವೆ. ॥೬೮॥

ಈ ವಿಧವಾದ ಚಿತ್ರಗಳೆಲ್ಲಾ ಪರಶಿವನ ಲೀಲೆಯಿಂದ ಪರಮೇಶ್ವರನ ತೃಪ್ತಿಗಾಗಿಯೇ ನಿರ್ಮಿಸಲ್ಪಟ್ಟವೆ. ಈ ಶಿವಲೀಲಾವಿಗ್ರಹಗಳ ಪಕ್ಕದಲ್ಲಿ ನೀಲಲೋಚನಗಳಾದ ವೃಷಭನ ವಿಗ್ರಹಗಳು ರಚಿತವಾಗಿವೆ. ॥೬೯॥

ಆ ಬಸವಗಳು ಎತ್ತರವಾದ ಕೋಡುಗಳಿಂದಲೂ, ಕೋಡುಗಳಿಗೆ ಹಾಕಿರುವ ಕಿರೀಟಗಳಿಂದಲೂ, ರತ್ನಘಂಟಾಮಾಲೆಗಳಿಂದಲೂ ಅಲಂಕೃತವಾಗಿವೆ. ಗೋಪುರದ ಮೇಲ್ಭಾಗದಲ್ಲಿರುವ ವೃಷಭಗಳೆಲ್ಲಾ ದೊಡ್ಡದಾದ ಹೀರಕವಜ್ರದಿಂದ ಕೂಡಿರುವ ಕೋಡುಗಳುಳ್ಳವುಗಳಾಗಿ ಕಾಣುತ್ತಿವೆ. ॥೭೦॥

ಎಲ್ಲಾ ಪ್ರಾಕಾರಗಳ ಅಗ್ರಭಾಗದಲ್ಲಿಯೂ, ಅಮೂಲ್ಯವಾದ ರತ್ನಗಳಿಂದ

**ಗೋಪುರಾಗ್ರಮಹಾರತ್ನಕಲಶೈಸ್ತ್ಯಕ್ತತಾರಕೈಃ ।**
**ದೋಧೂಯಮಾನೋಚ್ಚಲಿತಸಮೀರಣಪತಾಕಕಾಃ ॥೭೨॥**

**ತತ್ರ ಗರ್ಭಗೃಹಂ ಶಂಭೋರ್ನವರತ್ನಾನ್ವಿತೋಜ್ಜ್ವಲಂ ।**
**ತತ್ರಾಸ್ತಿ ಮಣಿಪೀಠೋದ್ಯಚ್ಚಂದ್ರಸ್ಫಟಿಕಸಂಭವಂ ॥೭೩॥**

**ಮಹಾಲಿಂಗಂ ಮಹಾಕಾರಂ ರತ್ನನಾಗಫಣಾನ್ವಿತಂ ।**
**ಮಹಾರತ್ನವನೇ ಜಾತಫುಲ್ಲಮಾಲಾವಿಭೂಷಿತಂ ॥೭೪॥**

**ಸುವರ್ಣಖಚಿತಾನೇಕಬಿಲ್ವಚಂಪಕಪೂಜಿತಂ ।**
**ಶಂಭುನಾ ಚ ಮಹಾದೇವ್ಯಾ ಲೋಕಾನುಗ್ರಹಕಾಮ್ಯಯಾ ॥೭೫॥**

---

ನಿರ್ಮಿತವಾದ ವೃಷಭಗಳು ವಿರಾಜಿಸುತ್ತಿವೆ. ಹೀಗೆ ಅಲ್ಲಿರುವ ಗೋಪುರಗಳ ತಲಭಾಗವೂ, ಅಗ್ರಭಾಗವೂ ಚಿತ್ರವಿಚಿತ್ರವಾಗಿ ಕಂಗೊಳಿಸುತ್ತಿವೆ. ॥೭೧॥

ಎಲ್ಲಾ ಗೋಪುರಗಳ ಮೇಲುಭಾಗದಲ್ಲಿಯೂ, ಮಹಾರತ್ನಗಳಿಂದ ಕೂಡಿದ ಕಲಶಗಳಿವೆ. ನಕ್ಷತ್ರಮಂಡಲಗಳನ್ನೂ ಆ ಗೋಪುರಗಳು ಭೇದಿಸಿಕೊಂಡು ಹೋಗಿರುವುದರಿಂದ ಆ ಭಾಗದಲ್ಲಿ ಯಾವ ನಕ್ಷತ್ರಗಳೂ ತೋರಿಬರುತ್ತಿಲ್ಲ. ಅಲ್ಲಿ ಕಟ್ಟಿರುವ ಬಾವುಟಗಳು ಯಾವಾಗಲೂ ಗಾಳಿಯಿಂದ ಚಲಿತವಾಗಿಯೇ ಇರುತ್ತವೆ. ॥೭೨॥

ಅದೇ ಗೋಪುರಗಳ ಮಧ್ಯಭಾಗದಲ್ಲಿ ಪರಮೇಶ್ವರನು ನೆಲಸಿರುವ ಗರ್ಭಗೃಹವಿದೆ. ಅದು ನವರತ್ನಗಳಿಂದ ನಿರ್ಮಿತವಾಗಿ ಕಾಂತಿಯನ್ನು ಸರ್ವತ್ರ ಹರಡತಕ್ಕದ್ದಾಗಿದೆ. ಆ ಗೃಹದ ಮಧ್ಯದಲ್ಲಿ ಉನ್ನತವಾದ ಚಂದ್ರಕಾಂತಶಿಲೆಯ ಮಣಿಪೀಠವೊಂದಿದೆ. ॥೭೩॥

ಅದರ ಮೇಲೆ ಎತ್ತರವಾದ ಲಿಂಗವೊಂದು ವಿರಾಜಿಸುತ್ತಿರುವುದು. ಸುತ್ತಲೂ ನಾಗರತ್ನಗಳಿಂದ ಯುಕ್ತವಾದ ಸರ್ಪದ ಹೆಡೆಗಳು ಕೂಡಿಕೊಂಡಿವೆ. ರತ್ನವನದಲ್ಲಿ ಬೆಳೆದು ಅರಳಿದ ಹೂವುಗಳಿಂದ ನಿರ್ಮಿತವಾದ ಪುಷ್ಪಮಾಲೆಯು ಆ ಲಿಂಗವನ್ನು ಅಲಂಕರಿಸಿದೆ. ॥೭೪॥

ಆ ಲಿಂಗವನ್ನು ಪರಮೇಶ್ವರನೂ, ಪಾರ್ವತಿಯೂ, ಲೋಕಾನುಗ್ರಹಕ್ಕಾಗಿ ಚಿನ್ನದಿಂದ ನಿರ್ಮಿತವಾದ ಬಿಲ್ವಪತ್ರೆಗಳಿಂದಲೂ, ಸಂಪಿಗೆ ಹೂವುಗಳಿಂದಲೂ ಪೂಜಿಸುತ್ತಿರುವರು. ॥೭೫॥

ಸಮರ್ಚಿತಂ ತ್ರಿಕಾಲೇಷು ಪ್ರದೋಷೇಷು ವಿಶೇಷತಃ ।
ತತ್ರಸ್ಥರತ್ನನಿರ್ಯಾತಕಾಂತಿಭಿರ್ದೀಪಿತಂ ತದಾ ॥೭೬॥

ತತ್ರಾತೋದ್ಯಾನಿ ಕುರ್ವಂತಿ ಗಣಾಶ್ಶಂಭೋರ್ಮಹಾತ್ಮನಃ ।
ಕಾಹಲೀ ಮುರಜಾಪಾರಮಡ್ಡುಡಿಂಡಿಮಝುರ್ಝರಾಃ ॥೭೭॥

ಶಂಖಮದ್ದಲಭೇರ್ಯಶ್ಚ ನಿಸ್ಸಾಣಾಃ ಪಟಹಾನಕಾಃ ।
ಗೋಮುಖಾಸ್ಸ್ವಸ್ತಿಪಾತಾಲವೇಣುವೀಣಾವಿನಾದಿತಾಃ ॥೭೮॥

ರುದ್ರಕನ್ಯಾಸಹಸ್ರಾಣಿ ನಾಟ್ಯಂ ಕುರ್ವಂತಿ ತತ್ರ ಹಿ ।
ಹಾವಭಾವಮನೋಜ್ಞಾನಿ ಪೇಶಲಾಲಾಪವಂತಿ ಚ ॥೭೯॥

ಯೌವನೋನ್ಮದಧಾರಾಣಿ ರಣಿತಾಂಘ್ರಿಜನೂಪುರೈಃ ।
ಕ್ವಣದ್ರತ್ನಜಟಾಟಂಕಕಪೋಲಾಮಲಸಚ್ಛವಿ ॥೮೦॥

---

ಹೀಗೆ ಪಾರ್ವತೀಪರಮೇಶ್ವರರು ತ್ರಿಕಾಲಗಳಲ್ಲಿಯೂ, ವಿಶೇಷವಾಗಿ ಪ್ರದೋಷಕಾಲಗಳಲ್ಲಿಯೂ ಆ ಲಿಂಗವನ್ನು ಪೂಜಿಸುತ್ತಿರುವರು. ಅಲ್ಲಿರುವ ಅಮೂಲ್ಯವಾದ ರತ್ನಗಳೇ ಸರ್ವದಾ ದೀಪಗಳಂತೆ ಉರಿಯುತ್ತಿರುತ್ತವೆ. ||೭೬||

ಅಲ್ಲಿ ಪರಶಿವನ ಪ್ರಮಥಗಣಗಳೆಲ್ಲವೂ ಕಾಳೆ, ತಮ್ಮಟೆ, ತಬಲ, ನಗಾರಿ, ಮದ್ದಲೆ ಮುಂತಾದ ವಾದ್ಯಧ್ವನಿಗೈಯ್ಯುತ್ತಾ ಲಿಂಗವನ್ನು ಸೇವಿಸುತ್ತಿರುವರು.||೭೭||

ಅಲ್ಲಿ ಶಂಖ, ಮದ್ದಲೆ, ಭೇರಿ, ನಿಸ್ಸಾಣ, ತಮಟೆ, ಆನಕವೆಂಬ ತಮ್ಮಟೆಯ ಭೇದ, ಗೋಮುಖಾಕಾರದ ವಾದ್ಯ, ಸ್ವಸ್ತಿಕವೆಂಬ ವಾದ್ಯ ಇನ್ನೂ ಕೊಳಲು, ವೀಣೆ ಮುಂತಾದ ವಾದ್ಯವಿಶೇಷಗಳು ಧ್ವನಿಗೈಯ್ಯುತ್ತಿವೆ. ||೭೮||

ಹಾಗೆಯೇ ಅನೇಕಜನ ರುದ್ರಕನ್ಯೆಯರು ತಮ್ಮ ಹಾವಭಾವವಿಲಾಸಗಳನ್ನು ತೋರ್ಪಡಿಸುತ್ತಾ, ಮೃದುಮಧುರವಾದ ಮಾತುಗಳಿಂದ ಮನೋಹರರಾಗಿ ಗಾನ ಭಾವಗಳ ವೈಖರಿಯನ್ನು ತೋರಿಸುತ್ತಾ ನಾಟ್ಯವಾಡುತ್ತಿರುವರು. ||೭೯||

ಅವರೆಲ್ಲರೂ ಸರಿಯಾದ ಪ್ರಾಯದಿಂದ ಕೂಡಿದವರಾಗಿ, ತಮ್ಮ ಕಾಲುಗಳಲ್ಲಿ ರತ್ನಮಯವಾದ (ಗಂಟೆಗಳನ್ನೂ) ಗೆಜ್ಜೆಗಳನ್ನೂ, ಕಾಲುಬಳೆಗಳನ್ನೂ ಕಟ್ಟಿಕೊಂಡು ನಾಟ್ಯವಾಡುತ್ತಿರುವರು. ಆಗ ಆ ಕಾಲಿನಿಂದ ಹೊರಟ ಇಂಪಾದ ಧ್ವನಿಯೂ,

ಧೂಪಾನೋದ್ಯೈಕಬಹಲಗಂಧಗಂಧಾಯಿತಾ ದಿಶಃ ।
ನಂದಿಪ್ರೋತ್ಸಾರಿತಗಣಾಸ್ತತ್ರಾಸ್ತೇ ಶಂಕರೋಽಂಬಯಾ ॥೮೧॥

ಪೂಜಿತಂ ತಂ ಮಹಾಲಿಂಗಂ ಪಶ್ಯನ್ ರತ್ನೈಃ ಸುಪೂಜಿತಂ ।
ರುದ್ರಕನ್ಯಾಕರಾಬ್ಜೋತ್ಥನಖಕ್ವಣನಘಟ್ಟಿತಂ ॥೮೨॥

ತಂತ್ರೀಮುಖೋತ್ಥಗಂಧರ್ವಗಾನಂ ಶೃಣ್ವನ್ ಸದಾಂಬಯಾ ।
ಶಿವಶಿವ ಶಿವ ಶಂಭೋ ಚಂದ್ರಮೌಲೇಽಮಲಾತ್ಮನ್ ।
ಹರ ಹರ ಗುರುಭಾರಂ ಶಾಂಭವಾನ್ ನೋದಯಸ್ವ ।
ವಿತರ ಪರಮಮುಕ್ತಿಂ ಸಂಸೃತಿರ್ನೋ ಕದಾಚಿತ್ ।
ಭವತು ಭವಭವಾಬ್ಧೇಸ್ತಾರಕಂ ತ್ವಾಂ ಪ್ರಪನ್ನಃ ॥೮೩॥

---

ಅವರ ಮಾತಿನ ಸೊಬಗೂ, ಅವರ ಸುಂದರವಾದ ಕಪೋಲಗಳ ಕಾಂತಿಯೂ, ನೋಡುವವರಿಗೆ ಬಹು ರಮ್ಯವಾಗಿ ಕಾಣುವುದು. ॥೮೦॥

ಅಲ್ಲಿ ಧೂಪಗಳಿಂದ ಹೊರಟಂತಹ ದಿವ್ಯಸುಗಂಧವು ಸಮಸ್ತ ದಿಕ್ಕುಗಳನ್ನೂ ಸುವಾಸನೆಯುಳ್ಳದ್ದನ್ನಾಗಿ ಮಾಡುವುದು. ಅಲ್ಲಿರುವ ಪ್ರಮಥಗಣಗಳೆಲ್ಲವೂ ನಂದೀಶ್ವರನ ಮೇಲ್ವಿಚಾರಣೆಯಲ್ಲಿ ಶಂಕರನ ಸುತ್ತಲೂ ನೆರೆದಿರುತ್ತವೆ. ಅಲ್ಲಿ ಶಂಕರನು ಪಾರ್ವತಿಯೊಡನೆ ಸರ್ವದಾ ನೆಲೆಸಿರುವನು. ॥೮೧॥

ಮೇಲೆ ಹೇಳಿದಂತೆ ಅಲ್ಲಿರುವ ದಿವ್ಯಲಿಂಗವನ್ನು ನಾನಾರತ್ನಗಳಿಂದ ಅರ್ಚಿಸಿ ನೋಡುತ್ತಿರುವನು. ಪೂಜಾಕಾಲದಲ್ಲಿ ರುದ್ರಕನ್ಯೆಯರು ತಮ್ಮ ದಿವ್ಯಹಸ್ತಗಳ ಉಗುರುಗಳ ಹೊಡೆತದಿಂದ ಮೀಟಿ, ಇಂಪಾಗಿ ಕೇಳಿಬರುವ ತಂತೀವಾದ್ಯಧ್ವನಿಗಳನ್ನೂ, ಇತರ ಗಂಧರ್ವರ ಗಾನಗಳನ್ನೂ ಕೇಳಿ ಆನಂದಿಸುತ್ತಾ ಪಾರ್ವತಿಯೊಡನೆ ಶಂಕರನು ಅಲ್ಲಿ ತೃಪ್ತನಾಗಿರುವನು. ॥೮೨॥

ಚಂದ್ರಶೇಖರನಾದ ಪರಶಿವನೇ, ಶಂಭುವೇ ನಮ್ಮನ್ನು ಕಾಪಾಡು. ಹರನೇ, ನಿನ್ನ ಭಕ್ತರಾದ ನಮ್ಮೆಲ್ಲರ ದುರಿತಭಾರವನ್ನೂ ನಾಶಮಾಡಿ, ನಮಗೆ ಆನಂದವನ್ನುಂಟುಮಾಡು. ಮತ್ತೆ ಈ ಸಂಸಾರದುಃಖವು ಒದಗದಂತೆ ನಮಗೆ ದಿವ್ಯಮುಕ್ತಿಯನ್ನು ಅನುಗ್ರಹಿಸು. ಭವತಾರಕನೂ, ಮುಕ್ತಿಪ್ರದನೂ ಆದ ನಿನ್ನನ್ನೇ ನಾವು ಈಗ ಮೊರೆಹೊಕ್ಕಿರುವೆವು. ॥೮೩॥

ಏವಂ ಶಂಕರನಾಮಸಾರಸುಧಯಾ ।
ಪ್ಲಾವ್ಯನ್ ಗಣಾನ್ ಶಂಕರಃ ।
ಪಶ್ಯೇತಿ ಪ್ರಸಭಂ ಶಿವಾವದನಜಾಂ ।
ಭೋಜಭ್ರಮತ್ಷಟ್ಪದಃ ॥೮೪॥

॥ ಈಶ್ವರ ಉವಾಚ ॥

ಕೈಲಾಸೇಶ್ವರಲಿಂಗಮೇತದಮಲಂ ದೃಷ್ಟಂ ಸಕೃತ್ಪೂಜಿತಂ ।
ಮಾಮುಷ್ಯಾಶು ಸುಧಾದ್ರ್ರಸಾರಹೃದಯಂ ಕರ್ತುಂ ಪ್ರವೃತ್ತಂ ಶಿವೇ ।
ಇತ್ಯಂಬಾವದನಂ ನಿರೀಕ್ಷ್ಯ ಭಗವಾನ್ ಪ್ರೋವಾಚ ಸಾಕ್ಷಾಚ್ಛಿವ ।
ಸ್ತಲ್ಲಿಂಗಾಲಯದರ್ಶನಂ ಚ ಸುಕರಂ ಪುಣ್ಯೈರಗಣ್ಯೈರಪಿ ॥೮೫॥

---

ಎಂದು ಶಂಕರನ ಪ್ರಮಥಗಣಗಳೆಲ್ಲವೂ ಶಂಕರನಾಮಗಳೆಂಬ ಅಮೃತಪ್ರವಾಹದಲ್ಲಿ ಮುಳುಗಿದವರಾಗಿ, ಶಂಕರನನ್ನು ನಾನಾವಿಧವಾಗಿ ಸ್ತುತಿಸುತ್ತಿರುವರು. ಪಾರ್ವತಿಯ ಮುಖಕಮಲಕ್ಕೆ ಭ್ರಮರದಂತಿರುವ ಪರಮೇಶ್ವರನು, ಆ ವಿಧವಾದ ತನ್ನ ಪೂಜಾಕಾಲದಲ್ಲಿ ಪ್ರಮಥಗಣಾಧೀಶರು ಸ್ತುತಿಸುತ್ತಿರುವುದನ್ನು ಕಂಡು ತೃಪ್ತಿಗೊಳ್ಳುವನು. ॥೮೪॥

ಆಗ ಮಹೇಶ್ವರನು ತನ್ನ ಪಾರ್ಶ್ವದಲ್ಲಿರುವ ದೇವಿಯನ್ನು ಕುರಿತು ಹೀಗೆ ಹೇಳುವನು. " ದೇವಿಯೇ, ಇದು ಕೈಲಾಸೇಶ್ವರಲಿಂಗವು. ಇದನ್ನು ಯಾರು ಒಂದು ಸಾರಿಯಾದರೂ ಭಕ್ತಿಯಿಂದ ದರ್ಶನಮಾಡುವರೋ, ಅಥವಾ ಪೂಜಿಸುವರೋ, ಅವರು ನನ್ನ ಅನುಗ್ರಹಕ್ಕೆ ಪಾತ್ರರಾಗುವರು. ಅಲ್ಲದೆ ಅವರು ನನಗೆ ತೃಪ್ತಿಯನ್ನುಂಟುಮಾಡುವವರಾಗುವರು. ನಿಜವಾಗಿಯೂ ಈ ಕೈಲಾಸೇಶ್ವರಲಿಂಗವನ್ನು ಪೂಜಿಸಬೇಕು" ಎಂದು ತನ್ನ ಪತ್ನಿಯಾದ ಜಗನ್ಮಾತೆಯ ಮುಖವನ್ನು ನೋಡುತ್ತಾ ಪರಮೇಶ್ವರನೇ ಹೇಳುವನು. ಹೀಗಿರುವಾಗ, ಎಲೈ ಜೈಗೀಷವ್ಯ ಮುನಿಯೇ, ಆ ಕೈಲಾಸೇಶ್ವರಲಿಂಗದ ದರ್ಶನವಾಗಲಿ, ಆ ಸ್ಥಳವನ್ನು ಸೇರುವುದಾಗಲಿ ಸಾಮಾನ್ಯರಿಗೆ ಸುಲಭವಲ್ಲ. ಅನೇಕವಾದ ಪುಣ್ಯಕರ್ಮಗಳನ್ನು ಮಾಡಿ ಸುಕೃತಿಗಳಾಗಿರುವವರಿಗೆ ಮಾತ್ರ ಅದು ಸುಲಭಸಾಧ್ಯವಾಗುವುದು. ॥೮೫॥

ನೋ ಪಶ್ಯಂತಿ ಸುರಾಸುರಾಃ ಪ್ರಮಥಪಾ ವಿಷ್ಣುರ್ವಿಧಿರ್ನೇಶ್ವರಃ ।
ಪಶ್ಯತ್ಯೇವ ಮಹೇಶ್ವರೋ ಗಿರಿಜಯಾ ಸ್ವಂ ಲಿಂಗಮುತ್ಯಾದರಾತ್ ।
ಭೋಗೀಭೋಗಫಣಾಮಣಿಪ್ರವಿಲಸಲ್ಲಿಂಗೈಕಮೌಲೀಲಸ ।
ಚ್ಚಂದ್ರಾಸಾರಕರಪ್ರಚಾರಜನಿತಾನಂಗಪ್ರಭಾವೋಜ್ಝಿತಂ ॥೮೬॥

ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ಕೈಲಾಸವರ್ಣನಂ ನಾಮ
ದ್ವಾದಶೋಽಧ್ಯಾಯಃ

---

ಆ ಲಿಂಗವನ್ನು ದೇವರಾಕ್ಷಸರಾರೂ ನೋಡಲಾರರು. ಬ್ರಹ್ಮ, ವಿಷ್ಣುಗಳಿಗೂ ಆ ಲಿಂಗವು ಅಷ್ಟು ಸುಲಭವಲ್ಲ. ಆದರೆ ಶಂಕರಪಾರ್ವತಿಯರು ಮಾತ್ರ ಸದಾ ಅದನ್ನು ದರ್ಶನಮಾಡುವರು. ಆ ದಿವ್ಯಲಿಂಗವು ಶ್ರೇಷ್ಠವಾದ ನಾಗರತ್ನಗಳಿಂದಲೂ ನಾಗಾಭರಣದಿಂದಲೂ, ಬಾಲಚಂದ್ರನ ಕಿರಣಗಳಿಂದಲೂ ಕೂಡಿ, ಸರ್ವರಿಗೂ ಮನಮೋಹಕವಾಗಿರುವುದಲ್ಲದೆ, ಸ್ವೇಚ್ಛೆಯಿಂದ ಜನರನ್ನು ದುರ್ಮಾರ್ಗಕ್ಕೆ ಎಳೆಯುವ ಮನ್ಮಥನ ಚೇಷ್ಟೆಗಳನ್ನೆಲ್ಲಾ ಕ್ಷಣಕಾಲದಲ್ಲಿ ನಾಶಮಾಡತಕ್ಕದ್ದಾಗಿರುವುದು. ಇಂತಹ ದಿವ್ಯಲಿಂಗವು ಮಹಾತ್ಮರಿಗೆ ಮಾತ್ರ ಗೋಚರವಾದೀತು. ಇತರರಿಗೆ ಸುಲಭವಲ್ಲ," ಎಂದು ಸ್ಕಂದಸ್ವಾಮಿಯು ಜೈಗೀಷವ್ಯಾದಿಗಳಿಗೆ ಹೇಳಿದನು. ॥೮೬॥

ಇಲ್ಲಿಗೆ ಶ್ರೀಶಿವರಹಸ್ಯದ ಪ್ರಥಮಾಂಶದಲ್ಲಿ ಕೈಲಾಸವರ್ಣನೆಯೆಂಬ
ಹನ್ನೆರಡನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

# ಅಥ ಶ್ರೀಶಿವರಹಸ್ಯೇ

## ತ್ರಯೋದಶೋಽಧ್ಯಾಯಃ

### ಪ್ರದೋಷಪೂಜಾವರ್ಣನಂ

|| ಸೂತ ಉವಾಚ ||

**ಕೈಲಾಸೇಶ್ವರಲಿಂಗಸ್ಯ ಮಹಾದೇವಸ್ಸನಾತನಃ ।**
**ವರಿವಸ್ಯಾಂ ಸ್ವಯಂ ಚಕ್ರೇ ಸರ್ವಪೂಜ್ಯೋಽಪಿ ಶಂಕರಃ ||೧||**

|| ಋಷಯ ಊಚುಃ ||

**ಸ ಕಥಂ ಸರ್ವಪೂಜ್ಯೋಽಪಿ ಭಗವಾನಗಜಾಪತಿಃ ।**
**ಕೈಲಾಸೇಶ್ವರಲಿಂಗಸ್ಯ ಪೂಜನಂ ಕೃತವಾನ್ ವದ ||೨||**

---

## ಶ್ರೀಶಿವರಹಸ್ಯದಲ್ಲಿ ಹದಿಮೂರನೆಯ ಅಧ್ಯಾಯ

ಸೂತಮಹರ್ಷಿಗಳು ವಾಜಶ್ರವಸಾದಿಮುನಿಗಳನ್ನು ಕುರಿತು "ಎಲೈ ಋಷಿವರ್ಯರೇ, ಪರಮೇಶ್ವರನು ಸರ್ವಪೂಜ್ಯನಾಗಿ ಆದ್ಯಂತರಹಿತನಾಗಿ ಮಹಾದೇವನೆನಿಸಿಕೊಂಡಿದ್ದರೂ, ತಾನು ಕೈಲಾಸೇಶ್ವರಲಿಂಗದ ಅರ್ಚನೆಯನ್ನು ಮಾತ್ರ ತಪ್ಪದೆ ಮಾಡುವನು" ಎಂದು ಹೇಳಲು ||೧||

ಆಗ ಋಷಿಗಳೆಲ್ಲರೂ "ಸೂತಮಹಾಮುನಿಯೇ, ಪಾರ್ವತೀಪತಿಯಾದ ಶಂಕರನು ಸಮಸ್ತರಿಗೂ ಪೂಜ್ಯನಾದವನಷ್ಟೆ. ಅಂತಹವನು ಕೈಲಾಸೇಶ್ವರ ಪೂಜೆಯನ್ನು ಮಾಡುವುದು ಏಕೆ? ಅದು ಹೇಗೆ ಸಮಂಜಸವಾದೀತು?" ಎಂದು ಪ್ರಶ್ನೆಮಾಡಿದರು. ||೨||

|| ಸೂತ ಉವಾಚ ||

ಏವಮೇವ ಪುರಾ ಪೃಷ್ಟೋ ಜೈಗೀಷವ್ಯೇನ ಶಾಂಕರಃ ।
ತಮಾಹ ವಿನಯಾನಮ್ರಂ ದೇವಸೇನಾಪತಿಃ ಪುರಾ ||೩||

|| ಸ್ಕಂದ ಉವಾಚ ||

ಸಾಧು ಪೃಷ್ಟಂ ತ್ವಯಾ ವಿಪ್ರ ತತ್ತೇ ವಕ್ಷ್ಯಾಮಿ ಸಾಂಪ್ರತಂ ।
ದೇವದೇವಸ್ಯ ಚರಿತಂ ಶೃಣ್ವತಾಮಘನಾಶನಂ ||೪||

ಸ ಸರ್ವಗೋಪ್ಯೋ ಧರ್ಮಾತ್ಮಾ ಸರ್ವಾಕಾರತಯಾ ಸ್ಥಿತಃ ।
ಲಿಂಗಾರ್ಚನಂ ಹಿ ಸರ್ವೇಷಾಂ ವಿಮುಕ್ತಿದಮಿತಿ ದ್ವಿಜಾಃ ||೫||

ಸ್ವಯಂ ಕರೋತಿ ಭಗವಾನಂಬಿಕಾಪತಿರೀಶ್ವರಃ ।
ಭುಕ್ತಿದಂ ಮುಕ್ತಿದಂ ಚೇತಿ ಸರ್ವೇಷಾಂ ಬೋಧನಾಯ ಹಿ ||೬||

ಸಂಸಾರಸಾಗರೇ ಮಗ್ನಾನ್ ಸಮುದ್ಧರ್ತುಂ ಮಹೇಶ್ವರಃ ।
ಕಾರ್ಯಂ ಸುರಾಸುರೈಶ್ಚೈವಂ ವಿಷ್ಣುಬ್ರಹ್ಮಮರುದ್ಗಣೈಃ ||೭||

---

ಆಗ ಸೂತಮಹರ್ಷಿಗಳು ಹೀಗೆ ಹೇಳಿದರು—ಎಲೈ ಋಷಿಗಳೇ, ಇದೇ ರೀತಿ ಹಿಂದೆ ಜೈಗೀಷವ್ಯಮಹರ್ಷಿಯು ಕುಮಾರಸ್ವಾಮಿಯನ್ನು ಪ್ರಶ್ನಿಸಿದಾಗ, ಕುಮಾರಸ್ವಾಮಿಯು ಹೀಗೆ ಬೋಧಿಸಿದನು. ||೩||

“ಜೈಗೀಷವ್ಯನೇ, ನೀನು ಸರಿಯಾಗಿ ಪ್ರಶ್ನೆಮಾಡಿರುವೆ. ದೇವದೇವನಾದ ಪರಮೇಶ್ವರನ ಚರಿತ್ರೆಯನ್ನು ಕೇಳತಕ್ಕದ್ದು ಪಾಪನಾಶಕವಲ್ಲವೇ? ||೪||

ಆ ಪರಶಿವನು ಸರ್ವರನ್ನೂ ರಕ್ಷಿಸುವವನು. ಧರ್ಮಿಷ್ಠನು. ನಾನಾಕಾರದಲ್ಲಿ ನಿಲ್ಲುವವನು. ಆದರೂ ಲಿಂಗಾರ್ಚನೆಯು ಸರ್ವರಿಗೂ ಮುಕ್ತಿಯನ್ನು ಕೊಡತಕ್ಕದ್ದೆಂಬುದನ್ನು ಸರ್ವರೂ ತಿಳಿಯಲಿ, ಎಂಬ ಉದ್ದೇಶದಿಂದಲೇ, ||೫||

ಪಾರ್ವತೀಪತಿಯಾದ ಶಂಕರನೂ ಕೈಲಾಸೇಶ್ವರಲಿಂಗಾರ್ಚನೆಯನ್ನು ಮಾಡುತ್ತಿರುವನು. ಅದರಿಂದಲೇ ಎಲ್ಲರೂ ಸಹ ಲಿಂಗಾರ್ಚನೆಗೆ ಭುಕ್ತಿ, ಮುಕ್ತಿ ಎಂಬ ಫಲಗಳಿವೆ ಎಂಬುದನ್ನು ತಿಳಿಯಬೇಕು. ||೬||

ಸಂಸಾರವೆಂಬ ಸಾಗರದಲ್ಲಿ ಮುಳುಗಿರುವ ಜನರನ್ನು ಉದ್ಧರಿಸುವುದಕ್ಕಾಗಿಯೇ ಮಹೇಶ್ವರನು ಹೀಗೆ ಮಾಡುತ್ತಿರುವನು. ಅಲ್ಲದೆ ದೇವರಾಕ್ಷಸರೂ, ಬ್ರಹ್ಮ,

ದೇವೈರ್ಮುನೀಂದ್ರೈರ್ಗಣಪೈರ್ದ್ವಿಜೈಶ್ಚೈವಾಥ ಶಾಂಕರೈಃ ।
ಪೂಜ್ಯೈವ ಪರಮಂ ಶ್ರೇಯ ಇತಿ ದರ್ಶಯಿತುಂ ಶಿವಃ ॥೮॥

ಸ್ವಯಂ ದೇವ್ಯಾ ಮಹಾದೇವಃ ಪೂಜಾಂ ಲಿಂಗೇ ಕರೋತಿ ಹಿ ।
ತಲ್ಲಿಂಗಪೂಜನಂ ದೇವ್ಯಾ ಶಿವೇನಾಕಾರಿ ತಚ್ಛೃಣು ॥೯॥

ಪ್ರಾತಸ್ಸಂಗವಮಧ್ಯಾಹ್ನಪ್ರದೋಷೇಷು ಮುನೀಶ್ವರಾಃ ।
ನಂದಿಕೇಶಾದಿಗಣಪೈ ರುದ್ರಾಣೀಭಿಸ್ಸದಾ ಶಿವಃ ॥೧೦॥

ಪೂಜಾಪ್ರಕಲ್ಪನಂ ಶಂಭೋಶ್ಶಂಭುನಾ ವರಿವಸ್ಯಯಾ ।
ಕೈಲಾಸೇಶ್ವರಲಿಂಗಸ್ಯ ಪೂಜನಂ ತಚ್ಛೃಣುಷ್ವ ಮೇ ॥೧೧॥

ಸಪ್ತಸಾಗರಪಾತ್ರೋತ್ಥರಸಧಾರಾದಿಭಿಶ್ಶಿವಃ ।
ಗಣಾನೀತೈಶ್ಚ ಸಂಭಾರೈರ್ಮನಸಾ ಕಲ್ಪನಕ್ಷಮೈಃ ॥೧೨॥

---

ವಿಷ್ಣು ಮುಂತಾದ ದೇವಶ್ರೇಷ್ಠರೂ, ಮುನಿಶ್ರೇಷ್ಠರೂ, ದ್ವಿಜಶ್ರೇಷ್ಠರೂ, ಶಾಂಕರರೂ, ಪ್ರಮಥಗಣಗಳೂ ಇದನ್ನರಿತು ಲಿಂಗಾರ್ಚನೆಯನ್ನು ಮಾಡಿ ಇಷ್ಟಾರ್ಥಗಳನ್ನು ಪಡೆಯಲಿ ಎಂಬುದೇ ಶಂಕರನ ಅಭಿಪ್ರಾಯ. ॥೭-೮॥

ಅದಕ್ಕಾಗಿಯೇ ಮಹಾದೇವನು ಪಾರ್ವತಿಯೊಡನೆ ಲಿಂಗಪೂಜೆಯನ್ನು ತಾನೇ ಮಾಡುತ್ತಿರುವನು. ॥೯॥

ಪ್ರಾತಃಕಾಲ, ಸಂಗವಕಾಲ, ಮಧ್ಯಾಹ್ನಕಾಲ, ಪ್ರದೋಷಕಾಲವೆಂಬ ನಾಲ್ಕು ಕಾಲಗಳು ಪೂಜೆಗೆ ನಿಯತವಾಗಿವೆ. ಆಗ ಪರಮೇಶ್ವರನು ನಂದಿಯೇ ಮೊದಲಾದ ಪ್ರಮಥಗಳೊಡನೆಯೂ, ರುದ್ರಾಣಿಯೇ ಮೊದಲಾದ ಸ್ತ್ರೀಯರೊಡನೆಯೂ ಕೂಡಿದವನಾಗಿ, ॥೧೦॥

ಕಲ್ಪವನ್ನನುಸರಿಸಿ, ಆ ಕೈಲಾಸೇಶ್ವರಪೂಜೆಯನ್ನು ನಡೆಸುವನು. ಆ ಪೂಜಾಕ್ರಮವನ್ನು ಈಗ ವಿವರಿಸುವೆನು, ಕೇಳು. ॥೧೧॥

ಏಳು ಸಮುದ್ರಗಳಿಂದಲೂ ಪ್ರತ್ಯೇಕಪ್ರತ್ಯೇಕವಾಗಿ ಆಯಾ ಸಮುದ್ರಗಳ ರಸ (ನೀರನ್ನು) ವನ್ನು ಶಿವಗಣಗಳಿಂದ ತರಿಸುವನು. ಅದರಿಂದ ಸಂತತವಾಗಿ ಆ ಲಿಂಗಕ್ಕೆ ಅಭಿಷೇಕಮಾಡುವನು. ಇನ್ನೂ ಪೂಜೆಗೆ ಶ್ರೇಷ್ಠವೆನಿಸಿದ ಅನೇಕ ಸಾಮಗ್ರಿಗಳನ್ನೂ ಪ್ರಮಥಗಣಗಳ ಸಹಾಯದಿಂದ ಒದಗಿಸಿಕೊಳ್ಳುವನು. ॥೧೨॥

ಪೂಜಯಾ ಭೋಗಮೋಕ್ಷೌ ಚ ಸರ್ವೇಷಾಂ ಚ ಪ್ರದರ್ಶಿತುಂ ।
ಕರೋತ್ಯಪಚಿತಿಂ ಶಂಭುಃ ಕೈಲಾಸೇಶ್ವರಪೂಜನಂ ॥೧೩॥

॥ ಜೈಗೀಷವ್ಯ ಉವಾಚ ॥

ತತ್ಪೂಜನಪ್ರಕಾರಂ ಮೇ ಕಥಯ ಶ್ರವಣೋದ್ಧತಃ ।
ಏಭಿರ್ಮುನಿವರೈರ್ದೇವೈರ್ಗಣೇಂದ್ರೈಶ್ಚ ವಿಶೇಷತಃ ॥೧೪॥

॥ ಸ್ಕಂದ ಉವಾಚ ॥

ಶೃಣು ತ್ವಂ ದೇವದೇವೇನ ಕೈಲಾಸೇಶ್ವರಪೂಜನಂ ।
ಯಥಾಕೃತಂ ಮಹೇಶೇನ ಶೃಣು ತ್ವಂ ಮುಕ್ತಿದಾಯಕಂ ॥೧೫॥

ಶ್ರವಣೇನಾಪಿ ಭಕ್ತಾನಾಂ ಸರ್ವೇಷಾಂ ಮುಕ್ತಿದಾಯಕಂ ।
ಶೃಣುಷ್ವೇಕಮನಾ ವಿಪ್ರ ತ್ವಮೇಭಿರ್ಭೂಸುರೈಸ್ಸುರೈಃ ॥೧೬॥

---

ಶಿವಪೂಜೆಯಿಂದ ಐಹಿಕ ಮತ್ತು ಆಮುಷ್ಮಿಕಗಳ ಸುಖವನ್ನು ಪಡೆಯಬಹುದು ಎಂಬುದನ್ನು ಪ್ರದರ್ಶಿಸುವುದೇ ಆ ಪೂಜೆಯ ಮುಖ್ಯ ಉದ್ದೇಶ" ಎಂದು ಸ್ಕಂದನು ಹೇಳುತ್ತಿರಲು, ॥೧೩॥

ಜೈಗೀಷವ್ಯ ಋಷಿಯು ಮತ್ತೆ ಸ್ಕಂದಸ್ವಾಮಿಯನ್ನು ಕುರಿತು "ಸ್ವಾಮಿಯೇ, ನಾನು ಆ ಪೂಜಾಕ್ರಮವನ್ನು ಕೇಳಲು ಆಸಕ್ತನಾಗಿದ್ದೇನೆ. ಹಾಗೆಯೇ ಇಲ್ಲಿ ನೆರೆದಿರುವ ಋಷಿಗಳೂ, ದೇವತೆಗಳೂ ಸಹ ಅದನ್ನೇ ತಿಳಿಯಲು ಕುತೂಹಲಿಗಳಾಗಿರುವರು. ಅದರಿಂದ ದಯೆಯಿಟ್ಟು ಅದನ್ನು ವಿವರಿಸಬೇಕು" ಎಂದು ಕೇಳಿಕೊಂಡನು. ॥೧೪॥

ಆಗ ಸ್ಕಂದಸ್ವಾಮಿಯು ಹೀಗೆ ಹೇಳತೊಡಗಿದನು—"ಋಷಿವರ್ಯನೇ, ಕೈಲಾಸೇಶ್ವರಪೂಜಾಕ್ರಮವನ್ನು ಕೇಳು. ಮಹೇಶ್ವರನಿಂದ ಆಚರಿತವಾದ ಆ ಕಲ್ಪವು ಕೇಳುವವರಿಗೆ ಮುಕ್ತಿಪ್ರದವಾಗುತ್ತದೆ. ॥೧೫॥

ಇದನ್ನು ಕೇಳುವಂತಹ ಈಶ್ವರಭಕ್ತರೆಲ್ಲರೂ ಸುಲಭವಾಗಿ ಮುಕ್ತರಾಗುವರು. ಆದ್ದರಿಂದ ಎಲೈ ಜ್ಞಾನಿಯೇ, ಇಲ್ಲಿ ನೆರೆದಿರುವ ಸಮಸ್ತ ದೇವಬ್ರಾಹ್ಮಣರಿಗೂ ತಿಳಿಯುವಂತೆ ನಾನು ಈ ವಿಷಯವನ್ನು ವಿವರಿಸುವೆನು. ಕೇಳು. ॥೧೬॥

ಗಣೌಘೈರ್ನಂದಿಕೇಶಾದ್ಯೈರಂಬಿಕಾಪತಿಪೂಜನಂ ।
ದೇವ್ಯೈ ದೇವೇನ ಕಥಿತಂ ಪೃಚ್ಛಂತ್ಯೈ ಶಂಕರಸ್ಸ್ವಯಂ ॥೧೭॥

ತದ್ವಕ್ಷ್ಯಾಮಿ ಸಮಾಸೇನ ಶೃಣು ತ್ವಂ ಪಾಪನಾಶನಂ ।
ಸ್ನಾತ್ವಾ ಕೈಲಾಸಗಂಗಾತಟಮಣಿಕಲಿತೇ ಮಂಟಪೇ ಶಂಭುರೀಶೋ
ದೇವ್ಯಾ ನಂದೀಶಮುಖ್ಯೈರ್ಗಣವರಸಹಿತೋ ಭಸ್ಮನೋದ್ಧೂಲ್ಯ ಗಾತ್ರಂ ।
ಸ್ಥಿತ್ವಾ ಲಿಂಗಾಲಯೇ ಸ್ವೇ ಮಣಿಗಣಖಚಿತೇ ಸ್ವಾಸನೇ ಸನ್ನಿವಿಷ್ಟ
ಶ್ಚೇಷ್ಟಸ್ಸರ್ವೇಷ್ಟದಾತಾ ಸಮಸಮಸಮದೋ ಹ್ಯರ್ಚತಿ ಪ್ರಾಜ್ಞವರ್ಯಃ ॥೧೮॥

ಕೃತ್ವಾ ಫಾಲತಲೇ ತ್ರಿಪುಂಡ್ರರಚನಾಂ ಬಾಲೇಂದುಮೌಲಿಸ್ಸ್ವಯಂ
ರುದ್ರಾಕ್ಷಾಮಲಹಾರಕಂಠವಲಯಃ ಪಂಚಾಸ್ಯಪಂಚಾಕ್ಷರಃ ।
ಕಿಂಚಿತ್ಕಿಂಚಿದುದಂಚದಂಚಲದೃಗಂಭೋಜಾವಲೀಮಾಲಿಕಾಂ
ವಾರಂ ವಾರಮಿಹಾರ್ಪಯತ್ಯಗಜಯಾ ಜೀವಜ್ಞಯಾರ್ಥೀ ಶಿವಃ ॥೧೯॥

---

ಈ ವಿಚಾರವನ್ನು ಇಲ್ಲಿ ನೆರೆದಿರುವ ಸಮಸ್ತ ಪ್ರಮಥಗಣಗಳೂ, ನಂದಿನಿಯೇ ಮೊದಲಾದ ಗಣನಾಯಕರೂ ತಿಳಿಯಲಿ. ಈ ಪೂಜಾಕ್ರಮವನ್ನು ಹಿಂದೆ ಪರಮೇಶ್ವರನೇ ಸಾಕ್ಷಾತ್ತಾಗಿ ಪಾರ್ವತಿಗೆ ಅವಳ ಕೋರಿಕೆಯಂತೆ ಹೇಳಿರುವನು. ||೧೭||

ಆದ್ದರಿಂದ ಆ ವಿಷಯವನ್ನು ನಿನಗೆ ಸಂಕ್ಷೇಪವಾಗಿ ವಿವರಿಸುವೆನು ಕೇಳು. ಶಂಕರನು ಪೂಜೆಗೆ ಮೊದಲು ಕೈಲಾಸಪರ್ವತದ ಸಮೀಪದಲ್ಲಿರುವ ಗಂಗಾನದಿಯ ರತ್ನಖಚಿತವಾದ ಸೋಪಾನಮಂಟಪದಲ್ಲಿ ಸ್ನಾನಮಾಡುವನು. ಆಗ ದೇವಿಯೂ ಪರಿವಾರಗಣಗಳೆಲ್ಲವೂ ಒಡನೆಯೇ ಸ್ನಾನಮಾಡುವರು. ಅಲ್ಲಿಂದ ಮುಂದೆ ಭಸ್ಮದಿಂದ ದೇಹವನ್ನು ಲೇಪಿಸಿಕೊಂಡು ಲಿಂಗವಿರತಕ್ಕ ಗರ್ಭಾಂಕಣದಲ್ಲಿರುವ ನವರತ್ನಮಯವಾದ ತನ್ನ ಪೀಠದಲ್ಲಿ ಕುಂಡಿಸುವನು. ಹೀಗೆ ಸರ್ವರ ಇಷ್ಟವನ್ನೆಲ್ಲಾ ಪೂರ್ತಿಗೊಳಿಸುವ ಮಹಾನುಭಾವನಾದ ಶಂಕರನು ಚಿತ್ತೈಕಾಗ್ರತೆಯಿಂದ ಮುಂದೆ ಲಿಂಗಾರ್ಚನೆಗೆ ಆರಂಭಿಸುವನು. ||೧೮||

ಪರಶಿವನು ಬಾಲಚಂದ್ರನನ್ನು ಶಿರಸ್ಸಿನಲ್ಲಿ ಧರಿಸಿರುವಂತೆ ತ್ರಿಪುಂಡ್ರಗಳನ್ನೂ ಹಣೆಯಲ್ಲಿ ಧರಿಸಿರುವನು. ಕತ್ತಿನಲ್ಲಿ ರುದ್ರಾಕ್ಷಿಯ ಶ್ರೇಷ್ಠವಾದ ಕಂಠೀಹಾರವು ಶೋಭಿಸುತ್ತಿರುವುದು. ಐದು ಮುಖಗಳಲ್ಲಿಯೂ ಕ್ರಮವಾಗಿ ಐದು ಅಕ್ಷರಗಳುಳ್ಳ ಪಂಚಾಕ್ಷರಿಯ ಮಂತ್ರವು ಉಚ್ಚರಿತವಾಗುತ್ತಿರುವುದು. ಹೀಗೆ ಕುಳಿತು ತನ್ನ

[1] ತತ್ರೇಶಾನವರಸ್ಯ ಪಂಚವರದಾಸ್ಯಾಸ್ಯಾಸ್ಯಪಂಚಾನನೇ
ಶಾನಸ್ಯೇಶ್ವರಲಿಂಗಮುದ್ಭುತತಮಂ ತತ್ಪಂಚವಕ್ತ್ರೇಶ್ವರಂ।
ತದ್ವಕ್ತ್ರಾಮಲತೋ ಝುರೀಭರರಸೈಃ ಪಂಚಾಪಗಾ ನಿಸ್ಸೃತಾಃ
ಕೈಲಾಸಾಚಲ [2] ನಿಮ್ನಗಾತಟಮಹಾಲಿಂಗೈಕಸೌಧಾಲಯಾಃ ॥೨೦॥

ಪ್ರಾಚ್ಯಾಂ ರತ್ನಾಚ್ಛಗಂಗಾ ಶಿವತರಗಭವಾ ದೇವಗಂಗಾಕಿಲಾಸ್ತೇ
ಪಶ್ಚಾತ್ಕೈಲಾಸಗಂಗಾ ತದಪರಭುವಿಗಾ ರತ್ನಸೋಪಾನಯುಕ್ತಾ।
ತತ್ರಾವಾಚ್ಯಾಂ ಚ ಶುದ್ಧಾ ಕಮಲಗಣಗಣೈಸ್ಸಂಯುತಾತ್ಯುಗ್ರಗಂಗಾ
ತನ್ಮಧ್ಯೇ ಬ್ರಹ್ಮಗಂಗಾ ಸ್ಫಟಿಕನಿಭಜಲಾ ಪಂಚ ತಾಃ ಪಂಚತಾಂತಾಃ॥೨೧॥

---

ಅರಳಿದ ಕಣ್ಣುಗಳಂತಿರುವ ಪದ್ಮಗಳ ಮಾಲಿಕೆಯನ್ನು, ಜೀವಿಗಳಿಗೆ ಜಯಸುಖವನ್ನುಂಟುಮಾಡುವ ಅಭಿಲಾಷೆಯಿಂದ ಜಗನ್ಮಾತೆಯೊಡಗೂಡಿ ಕೈಲಾಸಲಿಂಗಕ್ಕೆ ಪದೇ ಪದೇ ಅರ್ಪಿಸುತ್ತಿರುವನು. ||೧೯||

ಆ ಕೈಲಾಸಲಿಂಗವು ಸರ್ವರಿಗೂ ವರವನ್ನು ದಯಪಾಲಿಸುವ ಪಂಚಮುಖಗಳಿಂದ ಕೂಡಿದ್ದಾಗಿ ಪರಮೇಶ್ವರನಿಂದ ಪೂಜಿಸಲ್ಪಡತಕ್ಕದ್ದಾಗಿದೆ. ಅಲ್ಲದೆ ಮಹಾಮಹಿಮೆಯಿಂದ ಕೂಡಿ ಐದು ವದನಗಳಿಂದ ಶೋಭಿಸುತ್ತಿರುವುದು. ಆ ಐದು ಮುಖಗಳಿಂದಲೂ, ಐದು ಪವಿತ್ರವಾದ ನದಿಗಳು ಉದ್ಭವಿಸಿ, ಕೈಲಾಸಪರ್ವತದಿಂದ ಕೆಳಕ್ಕೆ ಹರಿದು, ಅನೇಕ ಲಿಂಗಗಳಿಂದ ಆವೃತವಾದ ದೇವಾಲಯಗಳ ಪಕ್ಕದಲ್ಲಿ ಹರಿದುಬರತಕ್ಕದ್ದಾಗುವುವು. ||೨೦||

ಪೂರ್ವಭಾಗದಲ್ಲಿ ಹರಿಯುವ ನದಿಯೇ ರತ್ನಗಂಗೆಯು. ಅದು ಅತ್ಯಂತ ಪರಿಶುದ್ಧವಾಗಿರುವುದು. ಇನ್ನು ಉತ್ತರದಿಕ್ಕಿಗೆ ಪ್ರವಹಿಸುವ ನದಿಯೇ ದೇವಗಂಗೆಯೆನಿಸುವುದು. ರತ್ನದ ಸೋಪಾನಗಳಿಂದ ಕೂಡಿ ಪಶ್ಚಿಮದಿಕ್ಕಿಗೆ ಹರಿಯುವ ಹೊಳೆಗೆ ಕೈಲಾಸಗಂಗೆಯೆಂಬ ಹೆಸರಿದೆ. ದಕ್ಷಿಣದಿಕ್ಕಿನಲ್ಲಿ ಹರಿದು ಅನೇಕ ಕಮಲಗಳಿಂದ ಶೋಭಿಸುತ್ತಿರುವುದೇ ಅತ್ಯುಗ್ರಗಂಗೆ. ಮಧ್ಯಭಾಗದಲ್ಲಿ ಸ್ಫಟಿಕದಂತೆ ಶುಭ್ರವಾಗಿ ಪ್ರವಹಿಸುತ್ತಿರುವುದೇ ಬ್ರಹ್ಮಗಂಗೆ. ಹೀಗೆ ಐದು ನದಿಗಳು ಐದು ಹೆಸರಿನಿಂದ ಆವಿರ್ಭವಿಸಿ ಮುಂದೆ ಮುಂದೆ ವಿಸ್ತಾರವಾಗಿ ಹರಿಯಲಾರಂಭಿಸುವುವು.||೨೧||

---

1 ತತ್ರೇಶಾನವರಸ್ಯ ಪಂಚವರಣಾಂ ಗಾತ್ರಸ್ಯ ಪಂಚಾನನೇ [ಪಾಠಾಂತರ]

2 ನಿಮ್ನಗಾಸ್ತಟಿ ಇತಿ ಪಾಠಾಂತರಂ

ಏತಾ ಯಾ ಮಣಿಲಿಂಗಪಂಚಮುಖತಸ್ಸನ್ನಿಸೃತಾ ಮಂಟಪಾ ।
ತ್ಪುಣ್ಯಾಃ ಪುಣ್ಯತರಂಗಶೀತಲಜಲಾಃ ಕೂಲಂಕಷಾಖ್ಯಾಃ ಪರಾಃ ।
ದಿವ್ಯಾಪಾದಶಿವಾಲಯಸ್ಥಿತಮಹಾಲಿಂಗೈಕಸಂಘಾಕುಲಾ ।
ಸ್ತೀರೇಷು ಪ್ರಥಿತೋರುಮಂಟಪಮಹೀಕ್ಲ್ಪಪ್ತ್ಯೈಸ್ಸುಧಾಬ್ಧಿಂಗಮಾಃ ॥೨೨॥

ನಾನಾಬಿಲ್ವವನೈರಪಾರತರುಜೈಃ ಫುಲ್ಲಪ್ರಸೂನಾಕುಲೈಃ ।
ಪಕ್ಷಿಣಾಂ ಚ ರವೈಶ್ಚ ತೀರವಕುಲೈ ರಕ್ತಚ್ಛದೈರ್ಹಲ್ಲಕೈಃ ।
ಕೋಕಾನಾಂ ಚ ಕುಲೈಸ್ಸುಕಚ್ಛಪಮಹಾಮೀನೈರ್ಬಕಾನಾಂ ಕುಲೈ ।
ಸ್ಸ್ರೋತೈಕೈಃ ಪೋತಕಚಕ್ರವಾಕಕುರರೈಃ ಪುಣ್ಯೈಶ್ಚ ಸತ್ಸಾರಸೈಃ ॥೨೩॥

ತತ್ತೀರಾಮಲಮಂಟಪೇ ಮಣಿಮಹಾಕ್ಲ್ಪಪ್ತೇ ಸುಸಿಂಹಾಸನೇ ।
ದೇವ್ಯಾ ನಂದಿಗಣೇಶ್ವರೈರ್ಹರವರಃ ಪಶ್ಯಂತ್ಸರಿನ್ನಿರ್ಝರೀಃ ।

---

ಈ ಐದು ನದಿಗಳು ಪರಮೇಶ್ವರನ ಪಂಚಮುಖಗಳಲ್ಲಿ ಹುಟ್ಟಿ, ಅನೇಕ ದಿವ್ಯಮಂಟಪಗಳಲ್ಲಿ ಹರಿಯುತ್ತಾ, ಪುಣ್ಯಕರವಾದ ತರಂಗಗಳಿಂದಲೂ, ತಂಪಾದ ನೀರಿನಿಂದಲೂ ಕೂಡಿ ಸರ್ವದಾ ದಡವನ್ನು ಕಟ್ಟಿ ಹರಿಯುತ್ತಿರುವುವು. ಇವುಗಳ ಅಕ್ಕಪಕ್ಕಗಳಲ್ಲಿ ಅನೇಕ ಶಿವಾಲಯಗಳು ನಿರ್ಮಿತವಾಗಿರುವುವು. ಎರಡು ಕಡೆಗಳಲ್ಲಿಯೂ ದೊಡ್ಡ ದೊಡ್ಡ ರತ್ನಖಚಿತವಾದ ಮಂಟಪಗಳಿರುವುವು. ಇಷ್ಟು ಮನೋಹರವಾಗಿ ಪ್ರವಹಿಸಿ ಕೊನೆಗೆ ಎಲ್ಲವೂ ಅಮೃತಸಮುದ್ರ (ಕ್ಷೀರಸಮುದ್ರ) ವನ್ನು ಸೇರುವುವು. ॥೨೨॥

ಆ ನದಿಗಳ ಪಾರ್ಶ್ವಗಳಲ್ಲಿ ಅನೇಕ ಪವಿತ್ರವಾದ ಬಿಲ್ವವೃಕ್ಷಗಳೂ, ಹೂವು, ಹಣ್ಣುಗಳಿಂದ ತುಂಬಿದ ನಾನಾಜಾತಿಯ ಮರಗಳೂ ವಿರಾಜಿಸುತ್ತಿವೆ. ಮನೋಹರವಾದ ಪಕ್ಷಿಗಳ ಧ್ವನಿಯು ಕಿವಿಗಿಂಪನ್ನುಂಟುಮಾಡುತ್ತಿವೆ. ಮೇಲ್ಭಾಗದಲ್ಲಿ ಚಕ್ರವಾಕಪಕ್ಷಿಗಳು ಹಾರಾಡುತ್ತಿವೆ. ನೀರಿನಲ್ಲಿ ಶ್ರೇಷ್ಠವಾದ ಆಮೆಗಳೂ, ದೊಡ್ಡ ದೊಡ್ಡ ಮೀನುಗಳೂ ಕಂಡುಬರುತ್ತಿವೆ. ಬಕಪಕ್ಷಿಗಳೂ, ಕಪೋತಗಳೂ ಚಕ್ರವಾಕಗಳೂ, ನೀರು ಕೊಕ್ಕರೆಗಳೂ, ಸಾರಸಪಕ್ಷಿಗಳೂ ಗುಂಪುಗುಂಪಾಗಿ ಅಲ್ಲಲ್ಲಿ ವಿಹರಿಸುತ್ತಿವೆ. ॥೨೩॥

ಆ ನದಿಗಳ ದಡದಲ್ಲಿರುವ ಶ್ರೇಷ್ಠವಾದ ರತ್ನಮಂಟಪದಲ್ಲಿ, ದಿವ್ಯಸಿಂಹಾಸನವೊಂದರಲ್ಲಿ ಪರಮೇಶ್ವರನು ದೇವಿಯೊಡನೆ ಕುಳಿತುಕೊಂಡು ನಂದೀಶ್ವರನೇ

**ಲಿಂಗಂ ಪಂಚಮುಖೇಶ್ವರಂ ಮಧುರಿಮಾನೇತ್ರಾಂಚಲೈಶ್ಶಂಕರ ।**
**ಸ್ತದ್ವಕ್ತ್ರಾಮಲಪಂಕಜೋದ್ಭವನದೀಃ ಪುಣ್ಯಾಸ್ತದಾಹೇಶ್ವರಃ ॥೨೪॥**

॥ ಈಶ್ವರ ಉವಾಚ ॥

**ಪ್ರಾಲೇಯಾಚಲಮಿಂದುಕುಂದಧವಲಂ ಗೋಕ್ಷೀರಫೇನಪ್ರಭಂ ।**
**ಭಸ್ಮಾಭ್ಯಂಗಮನಂಗದೇಹದಹನಜ್ವಾಲಾವಲೀಲೋಚನಂ ।**
**ವಿಷ್ಣುಬ್ರಹ್ಮಮರುದ್ಗಣಾರ್ಚಿತಪದಂ ಋಗ್ವೇದನಾದೋದಯಂ ।**
**ವಂದೇಽಹಂ ಸಕಲಂ ಕಲಂಕರಹಿತಂ ಸ್ಥಾಣೋರ್ಮುಖಂ ಪಶ್ಚಿಮಂ ॥೨೫॥**

**ಗೌರಂ ಕುಂಕುಮಪಂಕಿಲಂ ಸುತಿಲಕಂ ವ್ಯಾಪಾಂಡುಗಂಡಸ್ಥಲಂ ।**
**ಭ್ರೂವಿಕ್ಷೇಪಕಟಾಕ್ಷವೀಕ್ಷಣಲಸತ್ಸಂಸ್ರಸ್ತಕರ್ಣೋತ್ಪಲಂ ।**
**ಸ್ನಿಗ್ಧಂ ಬಿಂಬಫಲಾಧರಂ ಪ್ರಹಸಿತಂ ನೀಲಾಲಕಾಲಂಕೃತಂ ।**
**ವಂದೇ ಯಾಜುಷವೇದನಾದಜನಕಂ ವಕ್ತ್ರಂ ಹರಸ್ಯೋತ್ತರಂ ॥೨೬॥**

---

ಮೊದಲಾದವರೊಡನೆ ಸಂತೋಷದಿಂದಿರುವಾಗ ಒಂದುಸಾರಿ, ಪಂಚಮುಖೇಶ್ವರ ಲಿಂಗವನ್ನು ತನ್ನ ಕೋಮಲನೇತ್ರಗಳಿಂದ ನೋಡುತ್ತಾ, ಆ ಪಂಚಮುಖಗಳಿಂದ ಉದ್ಭವಗಳಾದ ನದಿಗಳನ್ನೂ ಪರಮೇಶ್ವರನ ಪಂಚಮುಖಗಳನ್ನೂ ಕಂಡು ಹೀಗೆ ಸ್ತುತಿಸಿದನು. ॥೨೪॥

ಸ್ಥಾಣುವಿನ ಪಶ್ಚಿಮಭಾಗದ ಮುಖವು ಹಿಮಾಲಯದಂತೆ ಶುಭ್ರವಾಗಿದೆ. ಚಂದ್ರನಂತೆ, ಕುಂದಪುಷ್ಪದಂತೆ ಧವಳವರ್ಣವುಳ್ಳದ್ದಾಗಿದೆ. ಹಸುವಿನ ಹಾಲಿನ ನೊರೆಯಂತೆ ಕಾಂತಿಯುಳ್ಳದ್ದಾಗಿದೆ. ಮುಖದಲ್ಲಿ ಭಸ್ಮಲೇಪನವೂ ಮನ್ಮಥನನ್ನು ಧ್ವಂಸಮಾಡಿದ ಅಗ್ನಿನೇತ್ರವೂ ವಿರಾಜಿಸುತ್ತಿದೆ. ಆ ಮುಖವನ್ನು ವಿಷ್ಣು, ಬ್ರಹ್ಮ, ಇನ್ನೂ ಇತರ ದೇವತೆಗಳು ಭಕ್ತಿಯಿಂದ ಪೂಜಿಸುತ್ತಿರುವರು. ಆ ಮುಖದಿಂದ ಹೊರಡುವ ಧ್ವನಿಯೇ ಋಗ್ವೇದವು. ಇಂತಹ ಮಹಿಮಾಪೂರ್ಣವಾಗಿ ಕಲಾ ಸಂಪನ್ನವಾಗಿ, ನಿಷ್ಕಳಂಕವಾಗಿರುವ ಪರಶಿವನ ಪಶ್ಚಿಮಮುಖವನ್ನು ನಾನು ವಂದಿಸುವೆನು. ॥೨೫॥

ಕೈಲಾಸೇಶ್ವರನ ಉತ್ತರಭಾಗದ ಮುಖವು ಶುಭ್ರವಾಗಿದೆ. ಕುಂಕುಮ ಕೇಸರಿಯಿಂದ ಲಿಪ್ತವಾಗಿದೆ. ಶ್ರೇಷ್ಠವಾದ ತಿಲಕವು ಹಣೆಯಲ್ಲಿ ಕಂಗೊಳಿಸುತ್ತಿದೆ. ಕಪೋಲಪ್ರದೇಶವು ಶ್ವೇತವರ್ಣವುಳ್ಳದ್ದಾಗಿಯೂ ಭ್ರೂವಿಕ್ಷೇಪದಿಂದ ಕೂಡಿದ

ಬಾಲಾರ್ಕಾಗ್ನಿತಟಿತ್ಪ್ರದೀಪ್ತಕನಕಪ್ರಸ್ಪರ್ಧಿತೇಜೋರುಣಂ ।
ಗಂಭೀರಧ್ವನಿಸಾಮವೇದಜನಕಂ ತಾಮ್ರಾಧರಂ ಸುಂದರಂ ।
ಅರ್ಧೇಂದುದ್ಯುತಿಲೋಲಪಿಂಗಲಜಟಾಭಾರಪ್ರಬದ್ಧೋರಗಂ ।
ವಂದೇ ಸಿದ್ಧಸುರಾಸುರೇಂದ್ರನಮಿತಂ ಪೂರ್ವಂ ಮುಖಂ ಶೂಲಿನಃ ॥೨೭॥

ಕಾಲಾಭ್ರಭ್ರಮರಾಂಜನದ್ಯುತಿನಿಭಂ ವ್ಯಾವೃತ್ತಪಿಂಗೇಕ್ಷಣಂ ।
ಕರ್ಣೋದ್ಭಾಸಿತಭೋಗಿಮಸ್ತಕಮಣಿಪ್ರೋದ್ಭಿನ್ನದಂಷ್ಟ್ರಾಂಕುರಂ ।
ಸರ್ಪಪ್ರೋತಕಪಾಲಶುಕ್ತಿಶಕಲಂ ವ್ಯಾಕೀರ್ಣಮಾಶೇಖರಂ ।
ವಂದೇ ದಕ್ಷಿಣಮೀಶ್ವರಸ್ಯ ವದನಂ ಚಾಥರ್ವನಾದೋದಯಂ ॥೨೮॥

---

ದೃಷ್ಟಿಯು ಮನೋಹರವಾಗಿಯೂ ಕಿವಿಯಮೇಲಿರುವ ಉತ್ಪಲವು ಸ್ವಲ್ಪ ಮಟ್ಟಿಗೆ ಕೆಳಭಾಗಕ್ಕೆ ಜಾರಿದ್ದಾಗಿಯೂ ಕಾಣುತ್ತಿದೆ. ಮುಖದಲ್ಲಿ ಸ್ನೇಹದ ಕಳೆಯು ಉಕ್ಕುತ್ತಿದೆ. ತೊಂಡೆಯ ಹಣ್ಣಿನಂತೆ ತುಟಿಯೂ ಮುಗುಳ್ನಗೆಯುಳ್ಳ ವದನವೂ ನೀಲವರ್ಣದ ಮುಂಗುರುಳೂ ಈ ಮುಖವನ್ನು ಮತ್ತೂ ಕಾಂತಿಯುಳ್ಳದ್ದನ್ನಾಗಿ ಮಾಡುತ್ತಿವೆ. ಈ ಮುಖದಿಂದ ಹೊರಡುವ ನಾದವೇ ಯಜುರ್ವೇದ. ಇಂತಹ ದಿವ್ಯ ಸುಂದರವಾದ ಉತ್ತರದಿಗ್ಭಾಗದ ಮುಖಕ್ಕೆ ನಾನು ಸಮಸ್ಕರಿಸುತ್ತೇನೆ. ॥೨೬॥

ಪೂರ್ವದಿಗ್ಭಾಗದ ಮುಖವಾದರೋ ಬಾಲಸೂರ್ಯನಂತೆ, ಅಗ್ನಿಜ್ವಾಲೆಯಂತೆ, ಮಿಂಚಿನ ಹೊಳಪಿನಂತೆ, ಚಿನ್ನದ ಬಣ್ಣದಂತೆ ಕೆಂಪುಬಣ್ಣವುಳ್ಳದ್ದಾಗಿದೆ. ಗಂಭೀರ ವಾದ ಸಾಮವೇದಕ್ಕೆ ನೆಲೆಯಾಗಿದೆ. ಸುಂದರವಾದ ಕೆಂಪುತುಟಿಗಳನ್ನು ಹೊಂದಿದೆ. ಜಟಾಜೂಟದಲ್ಲಿ ಬಾಲಚಂದ್ರನೂ ವಿಶಾಲವಾದ ಹೆಡೆಯುಳ್ಳ ಸರ್ಪರಾಜನೂ, ಬಂಧಿತರಂತೆ ನಿಂತಿರುವರು. ಹೀಗೆ ಸರ್ವಾಲಂಕೃತವಾಗಿ, ಸಿದ್ಧವಿದ್ಯಾಧರರಿಂದ ವಂದಿತವಾದ ಪೂರ್ವವದನಕ್ಕೆ ಭಕ್ತಿಯಿಂದೆರಗುವೆನು. ॥೨೭॥

ಇನ್ನು ದಕ್ಷಿಣಭಾಗದ ಈಶ್ವರವದನವು ಕರಿಯ ಮೇಘದಂತೆ, ಭ್ರಮರ ಗಳಂತೆ, ಕಾಡಿಗೆಯಂತೆ ಕಪ್ಪು ಕಾಂತಿಯುಳ್ಳದ್ದು. ಪಿಂಗಳವರ್ಣದ ಕಣ್ಣುಗಳಿಂದ ಕೂಡಿರತಕ್ಕದ್ದು. ಕಿವಿಯಲ್ಲಿ ನಾಗರತ್ನಗಳು ಸರ್ವದಾ ಹೊಳೆಯುತ್ತಿರುತ್ತವೆ. ಅದ ರಿಂದ ಕೋರೆದಾಡೆಗಳು ಪ್ರಕಾಶಿತವಾಗಿವೆ. ಸರ್ಪದಲ್ಲಿ ಪೋಣಿಸಿದ ಕಪೋಲಗಳೂ, ಮುತ್ತಿನಚಿಪ್ಪುಗಳೂ ಆ ಮುಖಕ್ಕೆ ಹಾರದಂತಾಗಿವೆ. ಅಥರ್ವಣವೇದಕ್ಕೆ ಮುಖ್ಯಾ ಶ್ರಯವಾದ ಇಂತಹ ದಕ್ಷಿಣ ವದನವನ್ನು ನಾನು ಶಿರಸಾ ನಮಿಸುವೆನು. ॥೨೮॥

ವ್ಯಕ್ತಾವ್ಯಕ್ತನಿರೂಪಿತಂ ಚ ಪರಮಂ ಶುದ್ಧಾಂಶಸತ್ವಾಧಿಕಂ
ತಸ್ಮಾದುತ್ತರತತ್ತ್ವಮಕ್ಷರಮಿದಂ ಧ್ಯೇಯಂ ಸದಾ ಯೋಗಿಭಿಃ ।
ಓಂಕಾರಾದಿಸಮಸ್ತಮಂತ್ರಜನಕಂ ಸೂಕ್ಷ್ಮಾತಿಸೂಕ್ಷ್ಮಂ ಪರಂ
ಧ್ಯಾಯೇತ್ಪಂಚಮಮೀಶ್ವರಸ್ಯ ವದನಂ ಖವ್ಯಾಪಿ ತೇಜೋಮಯಂ ॥೨೯॥

ಏತಾನಿ ಪಂಚವದನಾನಿ ಮಹೇಶ್ವರಸ್ಯ
ಯೇ ಕೀರ್ತಯಂತಿ ಮನುಜಾಸ್ಸತತಂ ಪ್ರಭಾತೇ ।
ಗಚ್ಛಂತಿ ತೇ ಶಿವಪದಂ ರುಚಿರೈರ್ವಿಮಾನೈಃ
ಕ್ರೀಡಂತಿ ಶಂಕರಗಣೈಸ್ಸತತಂ ಶಿವಾಗ್ರೇ ॥೩೦॥

ಇತ್ಯುಕ್ತ್ವಾ ನಿರಗಾತ್ತತೋ ಸುರಸರಿತ್ತೀರಾತ್ತದಾಂದೋಲಿತೈ
ಹಾರೈಸ್ತೈರ್ಭುಜಗೇಶ್ವರಪ್ರಕಲಿತೈ ರತ್ನಾಚ್ಛಸತ್ಪಾದುಕಃ ।
ಕೈಲಾಸೇಶ್ವರಧಾಮ ಸುಂದರಮಹಾನಂದೈಕಸಾರಾಸ್ಪದಂ
ದೃಷ್ಟ್ವಾ ಲಿಂಗವರಂ ಪ್ರದೋಷಸಮಯೇ ಸಂಪೂಜ್ಯ ಪೂಜಾಭರೈಃ ॥೩೧॥

---

ಇನ್ನು ತೇಜೋರೂಪಿಯಾದ ಐದನೆಯ ಮುಖದಲ್ಲಿ ವ್ಯಕ್ತ ಮತ್ತು ಅವ್ಯಕ್ತವಾದ ರೂಪಗಳು ಗೋಚರವಾಗುತ್ತಿವೆ. ಸತ್ವಗುಣಪ್ರಧಾನವಾಗಿ ಶುದ್ಧಾಂಶವುಳ್ಳದ್ದೆನಿಸಿದೆ. ಉತ್ತಮತತ್ತ್ವಪ್ರತಿಪಾದಕವಾಗಿ, ನಾಶರಹಿತವಾಗಿ, ಸರ್ವದಾ ಯೋಗಿಗಳಿಂದ ಸನ್ಮಾನಿತವಾಗಿದೆ. ಓಂಕಾರವೇ ಮೊದಲಾದ ಸಕಲ ಮೂಲಮಂತ್ರಗಳಿಗೂ ಆಶ್ರಯಸ್ಥಾನವಾಗಿದೆ. ಅತ್ಯಂತ ಸೂಕ್ಷ್ಮವಾದದ್ದು. ಆದರೂ ಆಕಾಶದಂತೆ ಸರ್ವವ್ಯಾಪಿಯಾಗಿರತಕ್ಕದ್ದು. ಇಂತಹ ಈಶ್ವರನ ಪಂಚಮಮುಖಕ್ಕೆ ವಂದನೆಯು. ||೨೯||

ಈ ವಿಧವಾದ ಶಂಕರನ ಪಂಚಮುಖಗಳನ್ನೂ ಯಾರು ಪ್ರತಿನಿತ್ಯವೂ ಮೇಲೆ ಹೇಳಿದ ರೀತಿಯಲ್ಲಿ ಧ್ಯಾನಿಸುವರೋ, ಅವರು ದೇಹಾಂತ್ಯದಲ್ಲಿ ಮನೋಹರವಾದ ದಿವ್ಯವಿಮಾನಾರೂಢರಾಗಿ, ಪ್ರಮಥಗಣಗಳಿಂದ ಕೂಡಿ, ಶಂಕರನ ಸಾನ್ನಿಧ್ಯವನ್ನು ಹೊಂದುವರು. ||೩೦||

ಎಂದು ಹೇಳುತ್ತಾ ಮಹಾದೇವನು ಆ ಪಂಚನದಿಗಳ ದಡದಿಂದ ಪ್ರಯಾಣ ಮಾಡಿದನು. ಹಾಗೆ ಹೋಗುವಾಗ ಕತ್ತಿನಲ್ಲಿ ಹಾಕಿಕೊಂಡಿದ್ದ ಸರ್ಪಹಾರವು ಅಲುಗಾಡಲಾರಂಭಿಸಿತು. ಹಾಗೆಯೇ ರತ್ನಮಯವಾದ ಪಾದುಕೆಗಳನ್ನು ಧರಿಸಿ ಕೈಲಾಸೇಶ್ವರ ದೇವಾಲಯಕ್ಕೆ ಪ್ರವೇಶಿಸಿದನು. ಆ ಆಲಯವಾದರೋ ಮಹಾ

ಶ್ರೀವಿಶ್ವೇಶ್ವರ ಉಗ್ರ ಉಗ್ರತನುಜಾರಾತಿಪ್ರಿಯಶ್ಶಂಕರ
ಶ್ಶ್ರೀಕಂಠಃ ಕಲುಷಾದ್ರಿಪಕ್ಷದಳನಸ್ವಾರಾಡಸಂಗಶ್ಶಿವಃ ।
ಪ್ರಾಹೋತ್ಫುಲ್ಲಸುರಕ್ತಪಂಕಜಲಸದ್ವಕ್ತ್ರೋ ಭವಾನೀಂ ಹರಃ
ಪಶ್ಯೇತಿ ಪ್ರಸಭಂ ಮದೀಯಮಹಿಮಾರಂಭೈಕಪೂಜಾಭರಂ ॥೩೨॥

॥ ಈಶ್ವರ ಉವಾಚ ॥

ಕುಂಭೈರಂಭೋಧರಾಚ್ಛಚ್ಛವಿಜಿತಧವಲೈಃ ಪೂರಿತೈಃ ಕ್ಷೀರವಾರ್ಧೌ
ಪರ್ವೋದ್ಯಚ್ಛಶಿಸನ್ನಿಭೈಸ್ಸ್ಫಟಿಕಜೈಃ ಕೋಟ್ಯಾವಧೀಸಂಖ್ಯಯಾ ।
ತತ್ಕ್ಷೀರೋತ್ತಮಮಂಡಸಾರಸುಭಗೈಸ್ಸಿಂಚಾಮಿ ಲಿಂಗೇ ಮಮ
ಕೈಲಾಸೇಶ್ವರನಾಮಕೇ ಜನಿಜರಾರೋಗಾಪಹೇ ಶಂಕರಿ ॥೩೩॥

---

ನಂದಕ್ಕೂ ಸೌಂದರ್ಯಕ್ಕೂ ತವರುಮನೆಯಂತಿರುವುದು. ಅಲ್ಲಿರುವ ದಿವ್ಯಲಿಂಗ ವನ್ನು ಪ್ರದೋಷಕಾಲದಲ್ಲಿ ಅರ್ಚಿಸಲು ಸಮಸ್ತ ಪೂಜಾದ್ರವ್ಯಗಳನ್ನೂ ಸಿದ್ಧಗೊಳಿಸಿ ಕೊಳ್ಳುವನು. ॥೩೧॥

ಆಗಲೇ ಪಾರ್ವತಿಯನ್ನು ಕರೆದು, ವಿಶ್ವೇಶ್ವರನೂ, ಉಗ್ರರೂಪಿಯೂ, ಮಹಾವಿಷ್ಣುವಿನಿಂದ ಪೂಜಿತನೂ ಆದ ಶಂಕರನು ಹೀಗೆ ಹೇಳುವನು. ಪರಮೇಶ್ವರನು ವಿಷಕಂಠನು. ಮತ್ತು ಪಾಪರಾಶಿಯೆಂಬ ಮಹಾಪರ್ವತಗಳ ರೆಕ್ಕೆಗಳನ್ನು ಕತ್ತರಿಸುವ ಸಾಮರ್ಥ್ಯವುಳ್ಳವನು. ಅಷ್ಟಾದರೂ ಸಂಗವಿವರ್ಜಿತನಾಗಿರುವನು. ಇಂತಹ ಮಹಾಮಹಿಮನೂ ಅರಳಿದ ರಕ್ತಕಮಲದಂತಿರುವ ಮುಖವುಳ್ಳವನೂ ಆದ ಶಂಭುವು ತಾನುಮಾಡುವ ಕೈಲಾಸೇಶ್ವರ ಪೂಜಾಕ್ರಮವನ್ನು ನೋಡು, ಬಾ ಎಂದು ಪಾರ್ವತಿಯೊಡನೆ ಹೀಗೆ ಹೇಳುವನು. ॥೩೨॥

ಶುಭ್ರವಾದ ಮೇಘವನ್ನೂ ಕಾಂತಿಯಿಂದ ಅಲ್ಲಗಳೆಯುವ, ಕ್ಷೀರಸಮುದ್ರ ದಲ್ಲಿರುವ ಕ್ಷೀರದಿಂದ ತುಂಬಿದ ಗಡಿಗೆಗಳನ್ನು ತರಿಸುವೆನು. ಆ ಗಡಿಗೆಗಳಾದರೋ ಪರ್ವಕಾಲದಲ್ಲಿ ಅಂದರೆ ಪೂರ್ಣಿಮೆಯಲ್ಲಿ ಕಂಡುಬರುವ ಚಂದ್ರನ ಪ್ರಕಾಶಕ್ಕಿಂತಲೂ ಅತಿಶಯವಾದ ಕಾಂತಿಯನ್ನು ಬೀರುವ ಸ್ಫಟಿಕದಿಂದ ನಿರ್ಮಿತವಾಗಿವೆ. ಅಂತಹ ಕೋಟ್ಯಂತರ ಕುಂಭಗಳಲ್ಲಿ ಉತ್ತಮವಾಗಿ ಮನೋಹರವಾಗಿರುವ ಕ್ಷೀರವನ್ನು ತುಂಬಿ, ಉತ್ಪತ್ತಿ, ನಾಶ, ಮತ್ತು ರೋಗಾದಿಗಳಿಂದ ದೂರನಾಗಿರುವ ಕೈಲಾಸೇಶ್ವರ ನಾಮಕನಾದ ಶಿವಲಿಂಗಕ್ಕೆ ಅಭಿಷೇಕಮಾಡುವೆನು. ॥೩೩॥

**ಆನೀತಂ ಮಮ ತತ್ಪಯೋಂಬುಧಿಭವಂ ವೀರೈರ್ಗಣೇಂದ್ರೈಶ್ಚಿವೇ**
**ಸದ್ವೃತ್ತಾಮಲಧಾರಯಾ ಜನಿಮುಮೇ ತುಷ್ಟಃ ಪ್ರದೋಷೇಷ್ವಹಂ ।**
**ಕಷ್ಟಾನಿ ಪ್ರಸಭಂ ಹರಾಮಿ ಸುಕೃತಾಂ ರಾಶಿಂ ದಿಶಾಮಿ ಕ್ಷಣಾತ್**
**ಸಿಂಚನ್ ಲಿಂಗಸುಪೂಜಕಾಯ ಗಿರಿಜೇ ತಸ್ಮಾದಹಂ ಪೂಜಯೇ ॥೩೪॥**

**ದಧ್ಯಂಭೋನಿಧಿಸಂಭವೈರ್ನಿಬಿಡಿತಂ ತತ್ಪಂಡಮುಂಡಂ ದಧಿ**
**ಪ್ರೋದ್ಯಡ್ಡಿಂಡಿಮಮಂಡಲಾಭಮುಗಜೇ ದತ್ವಾ ಸ್ವಲಿಂಗೋತ್ತಮೇ ।**
**ಗೋದೋಹಪ್ರಥಿತೇ ಪ್ರದೋಷಸಮಯೇ ಸಂದಾರಿತಾಘೌಘಕೇ**
**ಕಾರ್ಯಂ ಪೂಜನಮೇತದೇವ ಸಮಯೇ ಸರ್ವೈಸ್ಸುರೈರಪ್ಯಹಂ ॥೩೫॥**

**ತಲ್ಲಿಂಗಂ ಪರಿಪೂಜಯಾಮಿ ವಸುಧಾದ್ಯಗ್ಧಿರ್ಯಮೌಲೌ ನಿಶಂ**
**ಚೋತ್ತುಂಗಾಮಲರತ್ನಕುಂಭವಿಲಸತ್ಪ್ರಾಜ್ಯಾಜ್ಯಧಾರಾದಿಭಿಃ ।**

---

ಏಕೆಂದರೆ ನನ್ನನ್ನು ಯಾರು ಅಂತಹ ಕ್ಷೀರಸಮುದ್ರದಿಂದ ತರಲ್ಪಟ್ಟ ಕ್ಷೀರದಿಂದ ಧಾರಾಪೂರ್ವಕವಾಗಿ, ಪ್ರದೋಷಕಾಲದಲ್ಲಿ ಅಭಿಷೇಕಮಾಡಿ ಪೂಜಿಸುವರೋ, ಅಂತಹವರ ಕಷ್ಟಗಳನ್ನು ದೂರಮಾಡಿ ಅವರಿಗೆ ಸುಕೃತರಾಶಿಯನ್ನು ಅನುಗ್ರಹಿಸುವೆನು. ಪಾರ್ವತಿಯೇ, ಆದ್ದರಿಂದ ನಾನೂ ಸಹ ಅದನ್ನು ಭಕ್ತರಿಗೆ ತಿಳಿಸಲು ಪ್ರದೋಷಕಾಲದಲ್ಲಿ ಕೈಲಾಸೇಶ್ವರನನ್ನು ಭಕ್ತಿಯಿಂದ ಪೂಜಿಸುವೆನು. ||೩೪||

ಪ್ರದೋಷಕಾಲದಲ್ಲಿ ದಧಿಸಮುದ್ರದಿಂದ ತರಲ್ಪಟ್ಟ ಗರಣೆಗರಣೆಯಾದ ಮತ್ತು ಡಿಂಡಿಮ (?) ಮಂಡಲದಂತೆ ಶುಭ್ರವಾಗಿರುವ ಮೊಸರಿನಿಂದ ಅಭಿಷೇಕ ಮಾಡುವುದು ಅತ್ಯಂತ ಪುಣ್ಯಪ್ರದವಾದದ್ದು. ಆದ್ದರಿಂದ ಯಾವ ದೇವತೆಗಳೇ ಆಗಲಿ, ಮಾನವರೇ ಆಗಲಿ, ಹಸುವಿನ ಮೊಸರಿನಿಂದ ಪ್ರದೋಷಕಾಲದಲ್ಲಿ ನನ್ನ ಲಿಂಗಕ್ಕೆ ಅಭಿಷೇಕಮಾಡುವುದರಿಂದ ಅವರು ಪಾಪಗಳನ್ನೆಲ್ಲಾ ಕಳೆದು ಕೊಂಡು ಪವಿತ್ರರೆನಿಸುವರು. ಏಕೆಂದರೆ ಪ್ರದೋಷಕಾಲವೆಂಬುದು ಸಮಸ್ತ ಪಾಪ ನಿವಾರಕವಾದದ್ದೆಂಬುದರಲ್ಲಿ ಸಂದೇಹವಿಲ್ಲ. ||೩೫||

ನನ್ನ ಪ್ರಮಥಗಣವರ್ಗವು ಆಜ್ಯಸಮುದ್ರದಿಂದ, ಪರಿಶುದ್ಧವಾದ ರತ್ನಕುಂಭ ಗಳಲ್ಲಿ, ತೆಗೆದುಕೊಂಡು ಬಂದ ಆಜ್ಯವನ್ನು ಧಾರಾಕಾರವಾಗಿ ಆದಿಶೇಷನಿಂದ

ಸ್ವಾಜ್ಯಾಂಭೋಧಿಸಮಾಹೃತೈರ್ಮಮ ಗವ್ಯೈಸ್ಸಂಖ್ಯಾತಿಗಂ ತದ್ಘೃತಂ
ತತ್ರಾಜ್ಯಾಮಲಗಂಧಸಾರಸುಭಗಾ ಗಂಧೀಕೃತಾಸ್ತಾದಿಶಃ ॥೩೬॥

ಸಿಂಚಾಮಿ ಪ್ರಸಭಂ ಸುಗೋಘೃತಘನೈಃ ಕೈಲಾಸಲಿಂಗಂ ಮಮ
ಮಧ್ವಂಭೋಧಿಸಮಾಹೃತೈರ್ಮಣಿಘಟೈರ್ಮಾರ್ಧ್ವೀಕಸಾರಂ ಮಧು ।
ಗರ್ಭೋದ್ಯನ್ಮಣಿಸಾರಕಾಂತಿಸುಭಗೈರ್ಗೋಮೇದಕಾಚ್ಛಪ್ರಭೈಃ
ಸಿಂಚಾಮ್ಯದ್ರಿವರಾತ್ಮಜೇ ಸುಮಧುರಾಧಾರೇಯಗರ್ಭಂ ಮಧು॥೩೭॥

ಧಾರಾಕಾರಮದೀಯಲಿಂಗಶಿರಸಿ ಹರ್ಷೇಣ ಪಶ್ಯಾಂಬಿಕೇ ।
ಶೈಲೋದ್ದಾಮಶಿಖಾನಿಭಾಶ್ಶಿಖರಿತಾದುತ್ತುಂಗಸಾರೋಪಮಾಃ ।
ಪ್ರಾಲೇಯಾಚಲಮೌಲಿಸಾರಸುಭಗಾಶ್ಚಾಪಾಂಡುರಾಶ್ಶರ್ಕರಾ ।
ದತ್ವಾ ತನ್ಮಮ ಲಿಂಗಮೌಲಿವಿಲಸಚ್ಚಂದ್ರಾಂಶುಧಾರಾಸಮಂ ॥೩೮॥

---

ಅಲಂಕೃತನಾದ ಕೈಲಾಸೇಶ್ವರಲಿಂಗದ ಮೇಲೆ ಅಭಿಷೇಕಮಾಡುವೆನು. ಅಂತಹ ತುಪ್ಪದ ಸುವಾಸನೆಯಿಂದ ಸಮಸ್ತ ದಿಕ್ಕುಗಳೂ ಸುಗಂಧಮಯವಾಗಿರುತ್ತವೆ. ॥೩೬॥

ಹಾಗೆಯೇ ಸಮುದ್ರಮಧ್ಯದಲ್ಲಿ ಹುಟ್ಟಿ ದಿವ್ಯಕಾಂತಿಯುಳ್ಳ, ಗೋಮೇದಕ ರತ್ನದಿಂದ ನಿರ್ಮಿತವಾಗಿ ಪ್ರಕಾಶಿಸುತ್ತಿರುವ ದಿವ್ಯಘಟಗಳಲ್ಲಿ, ಗಟ್ಟಿಯಾದ ಹಸುವಿನ ತುಪ್ಪವನ್ನೂ ಮಧುಸಮುದ್ರದಿಂದ ಮಧುವನ್ನು ತರಿಸುವೆನು. ಅಂತಹ ಮಕರಂದನಿರ್ಮಿತವಾದ ಮಧುಧಾರೆಯಿಂದ ಕೈಲಾಸೇಶ್ವರನನ್ನು ಅಭಿಷೇಚಿಸುವೆನು. ದೇವಿಯೇ, ಹಾಗೆ ನಾನು ಉತ್ತಮವಾದ ಹಸುವಿನ ತುಪ್ಪದಿಂದ ಲಿಂಗವನ್ನೆಲ್ಲಾ ಬಳಿದು ಆದರ ಮೇಲೆ ಮಧುಧಾರಾಭಿಷೇಕಮಾಡುವೆನು. ॥೩೭॥

ಅಂಬಿಕೆಯೇ, ನೋಡು, ನನ್ನ ಪೂಜ್ಯಕೈಲಾಸೇಶ್ವರಲಿಂಗದ ಶಿರಸ್ಸಿನಮೇಲೆ ಸಕ್ಕರೆಯ ರಾಶಿಯನ್ನು ಧಾರಾಕಾರವಾಗಿ ಅಭಿಷೇಕಮಾಡುವೆನು. ಆ ಶರ್ಕರೆ ಯಾದರೋ ಕೈಲಾಸಪರ್ವತದಂತೆ ಶುಭ್ರವಾಗಿರುವುದು. ಹಿಮಾಲಯ ಪರ್ವತದ ಶಿಖರದಂತೆ ಶ್ವೇತವರ್ಣವುಳ್ಳದ್ದಾಗಿ, ಮನೋಹರವಾಗಿರುವುದು. ಧಾವಳ್ಯದಲ್ಲಿ ನನ್ನ ತಲೆಯಲ್ಲಿ ವಿರಾಜಿಸುವ ಚಂದ್ರಕಿರಣದಂತೆ ಸುಂದರವಾಗಿರುವುದು. ಅಂತಹ ಶರ್ಕರಾಭಿಷೇಕವನ್ನು ನೀನು ನೋಡುವವಳಾಗು. ॥೩೮॥

ಹರ್ಷಾತ್ಸ್ವಾನ್ತಹೃದಂತರಃ ಪ್ರತಿದಿನಂ ಹೃಷ್ಯಾಮಿ ಪಶ್ಯಾದ್ರಿಜೇ ।
ಕುಲ್ಯಾಸ್ತತ್ರ ಮನೋರಮಾದ್ರಿತನಯೇ ನಾರೇಲನೀರೋದ್ಭವಾಃ ।
ತಾಭಿಸ್ಸಂಭೃತಸದ್ಘಟಾದಿವಿತತೈರ್ಲಕ್ಷೈಃ ಪ್ರವಾಹಾಕುಲಾ ।
ತಲ್ಲಿಂಗಾಸೇಕನೀರೈಃ ಪ್ರವಹತಿ ಮಥುಜಾ ದೇವಗಂಗೇತಿ ನಾಮ್ನಾ ॥೩೯॥

ಸರ್ವೇ ವಿಷ್ಣುಪಿತಾಮಹೇಂದ್ರವರುಣಾಶ್ಚಾನಂದಭಕ್ತ್ಯಾವೃತಾ ।
ಸ್ತೀರ್ಥಂ ತೀರ್ಥಪರಂಪರೈಕಫಲದಂ ಜ್ಞಾತ್ವಾನುಭೂಯಾಪಿ ತೇ ।
ಸೇವಂತೇ ಸತತಂ ನಿತಾಂತಮಗಜೇ ಜೇತುಂ ಪುನಸ್ಸಂಸೃತಿಂ ।
ತುಂಗಾಘೌಘತರಂಗಭಂಗಸುಭಗಾಸ್ತಸ್ಯಾಂತರಾಸ್ತೇ ಸುರಾಃ ॥೪೦॥

ಸಪ್ತಚ್ಛದಾಚ್ಛಫಲಶೈಲವರೋದ್ರಿಕನ್ಯೇ ।
ಕ್ಲೃಪ್ತೇ ಮಯಾ ಸುಗುರುಪೀತತರುಶ್ಚ ಮೇರೋಃ ।
ತಜ್ಜೈಸ್ತ್ವಗಾರರಹಿತೈಶ್ಶಿಖಂಡಮೌಳಿ ।
ಲಿಂಗಾರ್ಚನಸ್ಯ ಫಲಮೇವ ಜನುರ್ಭವಾನಿ ॥೪೧॥

---

ದೇವಿಯೇ, ಇಲ್ಲಿ ಎಳನೀರು ಮತ್ತು ಏಲಕ್ಕಿ ಇವುಗಳಿಂದ ಮಿಶ್ರಿತವಾಗಿ, ನಿರ್ಮಾಣಮಾಡಿರುವ ಎಳನೀರಿನ ಕೊಳಗಳಿವೆ. ಆ ಕೊಳಗಳಿಂದ ಲಕ್ಷಾಂತರ ಸಂಖ್ಯೆಯ ಘಟಗಳಲ್ಲಿ ನಾರಿಕೇಳೋದಕವನ್ನು ತರಿಸಿ ಈ ಶಿವಲಿಂಗಕ್ಕೆ ಅಭಿಷೇಕ ಮಾಡುವೆನು. ನನ್ನ ಮನಃಪೂರ್ವಕವಾದ ಆನಂದದಿಂದ ಅಭಿಷೇಕಮಾಡಿದ ಈ ದ್ರವವಸ್ತುಗಳೇ ಪ್ರವಾಹರೂಪವಾಗಿ ಹರಿದು ಭೂಲೋಕದಲ್ಲಿ ದೇವಗಂಗೆಯೆಂದು ಪ್ರಸಿದ್ಧಿಗೊಂಡಿರುವುವು. ||೩೯||

ಈ ತೀರ್ಥೋದಕವನ್ನೇ ಪವಿತ್ರವನ್ನಾಗಿ ಭಾವಿಸಿ, ಬ್ರಹ್ಮ, ವಿಷ್ಣು, ವರುಣ ಮುಂತಾದವರು ಆನಂದದಿಂದಲೂ, ಭಕ್ತಿಯಿಂದಲೂ ಸೇವಿಸುತ್ತಿರುವರು. ಸಮಸ್ತ ತೀರ್ಥಪಾನಗಳಿಂದುಂಟಾದ ಸುಕೃತವನ್ನೆಲ್ಲಾ ಈ ತೀರ್ಥವು ಕೊಡುವುದರಿಂದ, ಉಳಿದ ಸಮಸ್ತ ದೇವತೆಗಳೂ ಸಹ ತಮ್ಮ ಸಂಸಾರದ ಬಂಧನಗಳನ್ನು ಕಳೆದು ಕೊಳ್ಳಲು ಪಾಪನಿವಾರಕವಾದ ಈ ತೀರ್ಥೋದಕದಲ್ಲಿ ಅಡಗಿರುವರು. ||೪೦||

ಎಲೌ ಭವಾನಿಯೇ, ಈ ಕೈಲಾಸೇಶ್ವರನ ಲಿಂಗದ ಅರ್ಚನೆಗಾಗಿಯೇ ಏಳಿಲೆ ಬಾಳೆಯ ಗಿಡಗಳನ್ನು ಮೇರುಪರ್ವತದ ಒಂದು ಭಾಗದಲ್ಲಿ ನಿರ್ಮಾಣ

ಉತ್ತುಂಗಸಾಲಸುರಸಾಲರಸಾಲಸಾರೈ ।
ನಿಷ್ಪಪ್ತಹೇಮುರ್ಝರಿಸೋದರಗರ್ಭಜಾತೈಃ ।
ತಲ್ಲಿಂಗಸೇಚನಮುನೋ ಸುಘಟ್ಯೈಃ ಕರೋಮಿ ।
ಪುಂಸಾಮಪಿ ಪ್ರಮಥನಾಥಪದಂ ದದಾತಿ ॥೪೨॥

ದೇವಿ ಸ್ತ್ರೀಕುಚಸನ್ನಿಕಾಶಲಿಕುಚಾಪಾರಪ್ರಭಾಗಂಧಜ
ಸ್ಫಾರಾಸಾರಮಹಾರಸಾದಿಕಲಶೈಸ್ಸಂಸೇಚಯಾಮ್ಯಂಬಿಕೇ ।
ಕೈಲಾಸಾಚಲಲಿಂಗಮೌಲಿವಿಲಸಲ್ಲಿಂಗೈಕಸದ್ಭೂಷಣಂ
ಲಿಂಗಂ ತ್ವೇತದಪಾರಗಂಧಲುಲಿತೈರ್ನೀರೈಶ್ಚ ಗಂಧೋದಕೈಃ ॥೪೩॥

---

ಮಾಡಿರುವೆನು. ಈ ರೀತಿ ಕದಳೀಫಲನಿಬಿಡವಾದ ಒಂದು ಪರ್ವತವೇ ಇಲ್ಲಿ ಕಂಗೊಳಿಸುತ್ತಿದೆ. ಅಲ್ಲಿ ಬೆಳೆದು ಪರಿಪಕ್ವವಾಗಿರುವ ದಿವ್ಯವಾದ ಕದಳೀಫಲಗಳನ್ನು ಅರ್ಪಿಸಿ ಈ ಲಿಂಗವನ್ನು ಈಗ ಪೂಜಿಸುವೆನು ನೋಡು. ||೪೧||

ಶ್ರೇಷ್ಠವಾದ ಮತ್ತು ರಸವತ್ತಾದ ಸಾಲವೃಕ್ಷಗಳ ಫಲ, ಮಾವಿನಹಣ್ಣುಗಳು ಇವುಗಳನ್ನು ತರಿಸಿ, ಅಪರಂಜಿಯ ದ್ರವಕಾಂತಿಯನ್ನು ಹೋಲುವಂತಹ ಅವುಗಳ ರಸವನ್ನು ತೆಗೆಸುವೆನು. ಆ ರಸಗಳನ್ನು ಗಡಿಗೆಗಳಲ್ಲಿ ತುಂಬಿ ಪರಶಿವಲಿಂಗಕ್ಕೆ ಅಭಿಷೇಕಮಾಡುವೆನು. ಹೀಗೆ ಯಾವ ಮನುಷ್ಯರು ಫಲಸಾರಗಳಿಂದ ಲಿಂಗಕ್ಕೆ ಅಭಿಷೇಕಮಾಡಿ ತೃಪ್ತಿಪಡಿಸುವರೋ, ಅಂತಹವರು ಸಾಕ್ಷಾತ್ಪ್ರಮಥಗಣಗಳಿಗೆ ಒಡೆಯರಾಗುವ ಪುಣ್ಯವನ್ನು ಸಂಪಾದಿಸುವರು. ||೪೨||

ದೇವಿಯೇ, ಈ ಕೈಲಾಸಲಿಂಗವು ಸಮಸ್ತ ಶಿವಲಿಂಗಗಳಿಗೂ ಭೂಷಣಪ್ರಾಯವಾಗಿ ಪ್ರಕಾಶಿಸುತ್ತಾ ಮಹಾಮಹಿಮೆಯುಳ್ಳದ್ದಾಗಿದೆ. ಇಂತಹ ಲಿಂಗಕ್ಕೆ, ಸ್ತ್ರೀಯರ ಕುಚಗಳಂತೆ ದುಂಡಾಗಿ ಶೋಭಿಸುವ ಕಿತ್ತಿಲೇ ಹಣ್ಣುಗಳನ್ನು ತರಿಸಿ, ಅದರ ರಸವನ್ನು ಬಿಂದಿಗೆಗಳಲ್ಲಿ ತುಂಬಿಸಿ, ಆ ಸುಗಂಧಮಯವಾದ ಲಿಕುಚರಸವನ್ನು ಅಭಿಷೇಕಮಾಡುವೆನು. ಹಾಗೆಯೇ ಈ ಪವಿತ್ರವಾದ ಲಿಂಗಕ್ಕೆ ದಿವ್ಯಗಂಧೋದಕವನ್ನು ಅಭಿಷೇಕಮಾಡಿ, ಅದರಿಂದ ಈ ಪ್ರದೇಶವೆಲ್ಲಾ ಸುಗಂಧಮಯವಾಗುವಂತೆ ಮಾಡುವೆನು. ||೪೩||

ಇಕ್ಷು ಸಾಗರಮಹೋರ್ಮಿಭಿರೀಶೇ
ಲಿಂಗಮೌಳಿರಿಯಮೇವ ವಿಶಿಷ್ಟಾ ।
ಸಿಕ್ತಯೇ ಘಟಸಹಸ್ರಸುಧಾರಾ
ಕಾರಿತಾ ಗಿರಿಸುತೇ ಕಮನೀಯಾ ॥೪೪॥

ಕೋಶೈಃ ಕಾನನಸಂಭವೈರ್ಮಧುಝರೀಸಾರಾತಿಸಾರಸ್ಫುಟಂ
ನಿರ್ಯತ್ಪೀತತರಾತಿಕಾಂತಿನಿವಹೈರ್ಗಂಧೀಕೃತಾಶಾಮುಖೈಃ ।
ತತ್ಕೋಶಾಮಲರಾಶಿಭಿರ್ಗಿರಿಸುತೇ ಸಚ್ಛನ್ನಮೈಶಂ ಶಿರಃ
ಪಶ್ಯಾಮಿ ಪ್ರಥಿತೇಕ್ಷಣಃ ಪ್ರಕಟಿತೇ ಪುಣ್ಯೇ ಪ್ರದೋಷೇ ಮಮ॥೪೫॥

ಕಸ್ತೂರೀಘನಸಾರಕುಂಕುಮಮಹಾಪಾಟೀರಸಾರೈರ್ಘಟೈ
ಶ್ಚಂದ್ರಾಸಾರವಿಲೋಲಿತಾಂಬುಘಟಿತೈಸ್ಸತ್ಪಾಟಲಾನೋದಿತೈಃ ।
ಶ್ರಾಂತಾ ಮೇ ಗಣಪುಂಗವಾಶ್ಚ ನಿತರಾಂ ಪುಣ್ಯೇ ಪ್ರದೋಷೇ ಮಮ
ಸ್ವಾದೂದಾಮಲನೀಲಧಾರಿತಘಟೋದ್ವಾಹೇ ಪರಂ ಶೈಲಜೇ ॥೪೬॥

---

ಈ ಕೈಲಾಸಲಿಂಗದ ಮೇಲ್ಭಾಗದಲ್ಲಿ ಸಹಸ್ರಾರು ಘಟಗಳಿಂದ ಕಬ್ಬಿನ ಹಾಲನ್ನು ಅಭಿಷೇಕಮಾಡಬೇಕೆಂಬ ಉದ್ದೇಶದಿಂದಲೇ, ಪಾರ್ವತಿಯೇ, ನಾನು ಸುಂದರವಾದ ಇಕ್ಷುಸಾಗರವನ್ನು ನಿರ್ಮಾಣಮಾಡಿಸಿರುವೆನು. ಆ ಇಕ್ಷುಸಾಗರಕ್ಕೆ ಈ ಲಿಂಗದಮೇಲೆ ಮಾಡುವ ಅಭಿಷೇಕವೇ ಮುಖ್ಯಫಲವಾಗಿದೆ. ||೪೪||

ಅರಣ್ಯದಲ್ಲಿ ಹುಟ್ಟಿ, ಮಕರಂದಗಳನ್ನು ಎರಚುತ್ತಾ, ಹೊಂಬಣ್ಣಗಳಿಂದ ಸುಂದರವಾಗಿರುವ ಮೊಗ್ಗುಗಳನ್ನು ತರಿಸುವೆನು. ಅವುಗಳ ವಾಸನೆಯು ದಿಗಂತವನ್ನೆಲ್ಲಾ ವ್ಯಾಪಿಸುವುದು. ಅಂತಹ ಸುಗಂಧಮಯವಾದ ಪುಷ್ಪರಾಶಿಗಳಿಂದ ಪರಮೇಶ್ವರನ ಲಿಂಗವನ್ನು ಅಲಂಕರಿಸುವೆನು. ಏಕೆಂದರೆ ಪ್ರದೋಷಕಾಲವು ಶಿವಾರ್ಚನೆಗೆ ಅತ್ಯಂತ ಶ್ರೇಷ್ಠವಲ್ಲವೆ? ಇದರಿಂದ ನನಗೆ ಮನಸ್ಸಿನಲ್ಲಿ ಅತ್ಯಾನಂದ ವುಂಟಾಗುವುದು. ||೪೫||

ಪುಣ್ಯತಮವಾದ ಈ ಪ್ರದೋಷಕಾಲದಲ್ಲಿ ಮಾಡುವ ಲಿಂಗಾರ್ಚನೆಗೆ ನನ್ನ ಪ್ರಮಥಗಣಗಳು, ನನಗೆ ಕಸ್ತೂರಿ, ಕುಂಕುಮಕೇಸರಿ, ಶ್ರೀಗಂಧ ಇಂತಹ ಸುಗಂಧ ದ್ರವ್ಯಪೂರಿತವಾದ ಘಟಗಳನ್ನು ಒದಗಿಸುವುದರಲ್ಲಿ ಬಳಲಿಹೋಗುವರು. ಹಾಗೆಯೇ ಅಭಿಷೇಕಾದಿಗಳಿಗೆ ಬೇಕಾಗುವ ಚಂದ್ರಕಿರಣಗಳಂತೆ ಶೀತಲಮಯವಾದ ಮತ್ತು

**ಶಂಖಾನಾಂ ಚ ಸಹಸ್ರಕೈರ್ಮಣಿಚಿತ್ರೈರ್ಗೋಶೃಂಗಧಾರಾದಿಭಿಃ ।**
**ಕ್ಷೀರಾಜ್ಯಾದಿಮಧುಪ್ರವಾಹಜಲಧಿಪ್ಲುಷ್ಟೈಶ್ಚ ತೈಲೈರಪಿ ।**
**ತದ್ಗಂಧೋತ್ತಮಪಿಷ್ಟಲೇಪನಗತಶ್ರೀಚಿಕ್ಕಣಾಘರ್ಷಣೈ ।**
**ಶ್ರೀಪತ್ರೈರ್ಮೃದುಸಾರಸೂಕ್ಷ್ಮತೃಣಕೈರುತ್ಪಂಚಗವ್ಯೈರಪಿ ॥೪೭॥**

**ಸೌವರ್ಣೋತ್ತಮಕುಂಭಸಂಭವಮಹಾಧಾರಾಸಹಸ್ರೈಶ್ಶತೈ ।**
**ರಘ್ಯೈರ್ರತ್ನಸುವರ್ಣಕಲ್ಪಿತಕುಶಾಗ್ರಾಂಬುದ್ಭವೈಸ್ತಜ್ಜಲೈಃ ।**
**ಅಷ್ಟಾಂಗಾರ್ಘ್ಯಕಕಲ್ಪಿತೈಸ್ಸುಮಧುರೈರ್ಗರ್ಭಾಂಬುಕುಂಭೈಶ್ಶಿವೇ ।**
**ಸಂಸಿಚ್ಯಾಖಿಲಮಿಂದುಕುಂದಜಮಹಾಪಾಟೀರಸತ್ಪಾಟಲಾಃ ॥೪೮॥**

---

ಸುಗಂಧಮಯವಾದ ನೀರಿನ ಗಡಿಗೆಗಳನ್ನೂ, ರುಚಿಕರವಾದ ಇತರ ಅಭಿಷೇಕದ ಸಂಭಾರಗಳನ್ನೂ ಹೊತ್ತುತರುವುದು ನನ್ನ ಸೇವಕರಿಗೆ ಅತ್ಯಾಯಾಸವಾಗುತ್ತದೆ. ಪಾರ್ವತಿಯೇ, ಹಾಗೆ ಅಷ್ಟು ಸಾಮಗ್ರಿಗಳನ್ನು ಒದಗಿಸಿಕೊಂಡು ಪ್ರದೋಷಕಾಲದಲ್ಲಿ ಶಿವಲಿಂಗಪೂಜೆಮಾಡುವೆನು. ॥೪೬॥

ಅಭಿಷೇಕಮಾಡುವುದಕ್ಕೆ ಸಹಸ್ರಾರು ಶಂಖಗಳನ್ನೂ, ರತ್ನಮಯವಾದ ಗೋವಿನ ಕೊಂಬುಗಳನ್ನು ತರಿಸಿರುವೆನು. ಅವುಗಳಲ್ಲಿ ಹಾಲು, ಮೊಸರು, ತುಪ್ಪ, ಜೇನುತುಪ್ಪ, ತೈಲ ಮುಂತಾದುವುಗಳನ್ನು ತುಂಬಿಕೊಂಡು ಲಿಂಗದ ಮೇಲೆ ಧಾರಾಕಾರವಾಗಿ ಅಭಿಷೇಕಮಾಡುವೆನು. ಅವುಗಳ ಗಂಧವೂ, ಉತ್ತಮವಾದ ಪಿಷ್ಟಪದಾರ್ಥವೂ ಒಟ್ಟುಗೂಡಿ ಶಿವಲಿಂಗದ ಮೇಲೆ ಹೆಪ್ಪುಗಟ್ಟುವುದು. ಅಂತಹ ಹೆಪ್ಪುಗಳನ್ನು ತೆಗೆದುಹಾಕಿ, ಅನಂತರ ಶಿವಲಿಂಗವನ್ನು ಬಿಲ್ವಪತ್ರೆ, ಮತ್ತು ಮೃದುವಾಗಿಯೂ ಸೂಕ್ಷ್ಮವಾಗಿಯೂ ಇರುವ ಗರಿಕೆ ಮುಂತಾದುವುಗಳಿಂದ ಪೂಜಿಸುವೆನು. ಪಂಚಗವ್ಯಾದಿಗಳಿಂದ ಕೈಲಾಸಲಿಂಗವನ್ನು ಸೇವಿಸುವೆನು. ॥೪೭॥

ಅನೇಕ ಚಿನ್ನದ ಕಲಶಗಳಲ್ಲಿ ರತ್ನ ಮತ್ತು ಸುವರ್ಣ, ಸುವರ್ಣಮಯವಾದ ದರ್ಭೆಯ ಚೂರು ಇವುಗಳನ್ನು ತುಂಬಿ, ಅವುಗಳಲ್ಲಿ ಮಧುರವಾದ ಮತ್ತು ಅರ್ಘ್ಯಕ್ಕೆ ಉಪಯುಕ್ತವಾದ ಪುಷ್ಪಮೂಲಾದಿಗಳೆಂಬ ಅಷ್ಟಾಂಗಗಳನ್ನೂ ಮಿಶ್ರಮಾಡಿ, ಪರಮೇಶ್ವರಲಿಂಗಕ್ಕೆ ಭಕ್ತಿಪೂರ್ವಕವಾಗಿ ಅರ್ಘ್ಯಪ್ರದಾನಮಾಡುವೆನು. ಈ ಅರ್ಘ್ಯೋದಕವು ಗಂಧಮಯವಾಗಿ ಸರ್ವತ್ರ ಸುಗಂಧವನ್ನು ಬೀರುತ್ತಾ ಮನೋಹರವಾಗಿರುವುದು. ॥೪೮॥

ನೋದೋತ್ಥಾಂಬುದಸನ್ನಿಭೈಶ್ಚ ಕಲಶೈಸ್ತೌರ್ಯತ್ರಿಕೋದ್ಭಾವನೈಃ ।
ಧೂಪೈಶ್ಚಾಪಿ ಮಹಾಮಧೂತ್ಥಮಧುಪರ್ಕಾಸಾರಸಾರೈರಪಿ ॥೪೯॥

ಪ್ರದೋಷಸಮಯೇ ಮಯಾ ಶರದುದೀಚರಾಕಾಶಶಿ ।
ಪ್ರಕಾಶಚಯಸೌಹೃದೈರ್ವಿರಲಕುಟ್ಮಲೈರಂಧತಾಂ ।
ಮದೀಯರಜತಾಚಲಪ್ರಕಟಶಂಕಿಭಾರಾಶಿಭಿಃ ।
ಸುಧಾಕರಕಲಾಲಸಲ್ಲಲಿತಲಿಂಗಮೌಲ್ಯರ್ಪಿತೈಃ ॥೫೦॥

ವೇದಾಶ್ಚತ್ವಾರ ಏತೇ ಪ್ರಥಿತತಮಯಶಸ್ತೋತ್ರಮಧಾರಾಸುರಾಗಾ ।
ಸ್ನಾನದೂದಾಮಲನೀರಸೇಚನವಿಧೌ ಶಾಖಾಶಿಖಾಭಿಃ ಕ್ರಮಾತ್ ।
ರುದ್ರಾಣಾಂ ಸ್ತವನೇನ ಮಾಮಪಿ ಶಿವೇ ಸಂತೋಷಯಂತಸ್ಥಿತಾ ।
ಮೂರ್ತಾಸ್ತೇ ವಿಹಿತಾಗ್ರಪಂಕಜಕರಾ ವಿಶ್ವಾಸಭೂತಾ ಮಮ ॥೫೧॥

---

ತಾನೇತಾನಾಗಿ ಮೇಲಕ್ಕೆದ್ದ ಶುಭ್ರವಾದ ಮೇಘದಂತಿರುವ ಕಲಶಗಳನ್ನೂ ತುತ್ತೂರಿಯೇ ಮೊದಲಾದ ವಾದ್ಯಗಳನ್ನೂ, ಸುಗಂಧಮಯವಾದ ಧೂಪಗಳನ್ನೂ, ಮಧುವಿನಿಂದ ನಿರ್ಮಿತವಾದ ಮಧುಪರ್ಕದ್ರವ್ಯಗಳನ್ನೂ ಈ ಪ್ರದೋಷಕಾಲದ ಅರ್ಚನೆಗಾಗಿ ಬಳಸುವೆನು. ॥೪೯॥

ಪರಶಿವನ ಲಿಂಗಮೌಲಿಗೆ ಒಪ್ಪುವಂತಹ ಹೂವುಗಳನ್ನು ಪ್ರದೋಷಕಾಲಾರ್ಚನೆಗಾಗಿ ತರಿಸುವೆನು. ಆ ಹೂವುಗಳಾದರೋ ಶರತ್ಕಾಲದ ಪೂರ್ಣಿಮಾಚಂದ್ರನ ಚಂದ್ರಿಕೆಯಂತೆ ಶುಭ್ರವಾಗಿರುತ್ತವೆ. ಅಲ್ಲದೆ ರಜತಾಚಲದ ಕಾಂತಿಯಂತೆ ಕಾಂತಿಯನ್ನು ಹೊಂದಿ ರಜತಾಚಲಭ್ರಾಂತಿಯನ್ನುಂಟುಮಾಡುತ್ತವೆ. ಇಂತಹ ಪುಷ್ಪಮಾಲೆಯನ್ನು ಚಂದ್ರಶೇಖರನಾಗಿ ವಿರಾಜಿಸುವ ಕೈಲಾಸೇಶ್ವರಲಿಂಗಕ್ಕೆ ಸಮರ್ಪಿಸುವೆನು. ॥೫೦॥

ದೇವಿಯೇ, ಪ್ರಸಿದ್ಧವಾದ ನಾಲ್ಕು ವೇದಗಳೂ ಪರಮೇಶ್ವರನ ಸ್ತುತಿಯನ್ನು ಪ್ರತಿಪಾದಿಸುತ್ತಾ ಚಿರಯಶಸ್ತೋತ್ರಮವನ್ನು ಸಂಪಾದಿಸಿವೆ. ಹಾಗೆಯೇ ವೇದಶಾಖೆಗಳೂ, ಶಿಖಾಭೂತವಾದ ಉಪನಿಷತ್ತುಗಳೂ ಭಗವತ್ಪ್ರಿಯವಾಗಿವೆ. ಆದ್ದರಿಂದ ಯಾರು ಈಶ್ವರಲಿಂಗಕ್ಕೆ ಶುದ್ಧವಾದ ನೀರಿನಿಂದ ಅಭಿಷೇಕ ಮಾಡುವರೋ, ಅವರು ಈ ವೇದಮಂತ್ರಗಳನ್ನೂ, ಉಪನಿಷದ್ವಾಕ್ಯಗಳನ್ನೂ, ಶ್ರೀರುದ್ರವೇ ಮೊದಲಾದ ಶಿವಸ್ತುತಿಪರಗಳಾದ ಮಂತ್ರಗಳನ್ನೂ, ಪಠಿಸುತ್ತಾ ಇರಬೇಕು. ಹಾಗೆಯೇ ರುದ್ರ

ಘನರಸಮೃಗನಾಭಿಸಾರಧಾರಾ
ಮೃಗಮದಪಲಲೀಪಟೀರಚಂದ್ರಗಂಧೈಃ ।
ಪರಿವೀತಂ ಭುಜಗೇಶಸನ್ನಿವೀತಂ
ಪ್ರಭಯಾ ಕೋಟಿಶಶಾಂಕಸೂರ್ಯತುಲ್ಯಂ ॥೫೨॥

ಗೋತ್ರಾಧಿರಾಜತನಯೇ ವಿನಯೇನ ಪಶ್ಯ
ಸಂಪಶ್ಯದಾತ್ಮಗತಿಸೌಖ್ಯದನೇಕಭಾಸ್ವತ್ ।
ಘುಮುಘುಮಿತಸುಗಂಧಗಂಧಿತಾಶಾ
ಮುಖಮುಖರೈಃ ಪರಿಲಿಪ್ಯ ಲಿಂಗಮೇತತ್ ॥೫೩॥

---

ತ್ರಿಶತಿಯೇ ಮೊದಲಾದುವುಗಳಿಂದ ಕಮಲಪುಷ್ಪಗಳನ್ನು ತನ್ನ ಹಸ್ತಾಗ್ರದಿಂದಲೇ ಪೂಜಿಸಬೇಕು. ಹೀಗೆ ಅಭಿಷೇಕವನ್ನೂ ಪುಷ್ಪಾರ್ಚನೆಯನ್ನೂ ಮಾಡಿದವರು ನನ್ನ ಪ್ರೀತಿಗೆ ಪಾತ್ರರಾಗುವರಲ್ಲದೆ ನನಗೂ ಹೆಚ್ಚಿನ ಸಂತೋಷವನ್ನುಂಟುಮಾಡುವವರಾಗುವರು. ॥೫೧॥

ಎಲೌ ಪಾರ್ವತಿಯೇ, ಶ್ರೇಷ್ಠವಾದ ರಸದ್ರವ್ಯಗಳಿಂದಲೂ, ಕಸ್ತೂರೀ ಮೃಗನಾಭಿಯಲ್ಲಿ ಹುಟ್ಟತಕ್ಕ ಕಸ್ತೂರಿಯಿಂದಲೂ, ಶ್ರೀಗಂಧ, ಚಂದನ ಮುಂತಾದ ವಸ್ತುಗಳಿಂದಲೂ ಕೂಡಿರುವ ಸುಗಂಧವನ್ನು ಶಿವಲಿಂಗಕ್ಕೆ ಲೇಪನಮಾಡಿರುವೆನು. ಆದಿಶೇಷನಿಂದ ಸುತ್ತಲ್ಪಟ್ಟು, ನಾಗಾಭರಣವನ್ನು ಇಟ್ಟಂತೆ ಈ ದಿವ್ಯಲಿಂಗವು ಶೋಭಿಸುತ್ತಿರುವುದು. ಈ ಅಲಂಕಾರಗಳಿಂದ ಪ್ರಕಾಶಿಸುವ ಕೈಲಾಸಲಿಂಗವು ಕೋಟಿ ಸಂಖ್ಯೆಯ ಸೂರ್ಯ ಚಂದ್ರರು ಒಟ್ಟಾಗಿ ಸೇರಿ, ಪ್ರಕಾಶಿಸುವಂತೆ ಪ್ರಕಾಶಮಾನವಾಗಿರುವುದು. ॥೫೨॥

ಪರ್ವತರಾಜಪುತ್ರಿಯೇ, ಮೋಕ್ಷವನ್ನು ದಯಪಾಲಿಸುವ ಮತ್ತು ಸರ್ವಸೌಖ್ಯಪ್ರದವಾಗಿ ತೇಜೋರೂಪವಾಗಿರುವ ಈ ಲಿಂಗವನ್ನು ನೋಡು. ಈ ಲಿಂಗದ ಸನ್ನಿಧಿಯಿಂದ ಹೊರಸೂಸುವ ಸುವಾಸನೆಯು ಸಮಸ್ತದಿಕ್ಕುಗಳನ್ನೂ ಸುಗಂಧಮಯವನ್ನಾಗಿ ಮಾಡಿದೆ. ಇಂತಹ ಮಹಾಮಹಿಮವಾದ ಕೈಲಾಸಲಿಂಗದ ದರ್ಶನ ಮಾಡು. ॥೫೩॥

ಪರಿಹೃಷ್ಟೋ ನಿತರಾಂ ಭವಾಮಿ ಗೌರಿ
ತ್ರಿದಶಾಲಭ್ಯಸುಗಂಧಯಕ್ಷಕರ್ದಮೈಃ ।
ಮಣಿಜಾಲಾತತರತ್ನಕೂಲಚಿತ್ರೈಃ
ಪರಿಧಾಯಾಮಲಸ್ವರ್ಣಸದ್ದುಕೂಲೈಃ ॥೫೪॥

ಶಿವಲಿಂಗಂ ಮಮ ಶೈಲರಾಜಕನ್ಯೇ
ಪರಿಪಶ್ಯಾಮಿ ಸುಗಂಧಿಗಂಧವಸ್ತ್ರೈಃ ।
ಬ್ರಹ್ಮಾಂಡಗೋಲಕಮುಮೇ ಪ್ರಭಯಾ ನ ತುಲ್ಯಂ
ಮಲ್ಲಿಂಗಗೋಲಕವರೋತ್ತಮರತ್ನಧಾರಾ (ಭಾಸಾ) ॥೫೫॥

ಸಾವಧೂತಶಶಿಮೌಲಿಕಲಾಲಲಾಮಂ
ತದ್ರತ್ನಮೌಲ್ಯಕಲನೇ ನ ವಿಧಿರ್ನವಿಷ್ಣುಃ ।
ಯಕ್ಷಾಧಿಪೋಽಪ್ಯಗಸುತೇಽದ್ಯ ವಿಕುಂಠಿತಾಕ್ಷಃ
ಕೇನ್ಯೇ ಕ್ಷಮಾ ವದ ಸಮಾನಹೃದಾ ನಿರೀಕ್ಷ್ಯ ॥೫೬॥

---

ದೇವಿಯೇ, ಯಾವ ದೇವತೆಗಳಿಗೂ ದೊರಕಲಾರದಂತಹ ಸುಗಂಧಯುತವಾದ ಯಕ್ಷಕರ್ದಮ (ಸಾಂಬ್ರಾಣಿಯಿಂದ ನಿರ್ಮಿತವಾದ ಗಂಧವಿಶೇಷ) ದಿಂದ ಈ ಲಿಂಗವನ್ನು ಲೇಪಿಸಿದ್ದೇನೆ. ನಾನಾರತ್ನಗಳಿಂದಲೂ, ಚಿತ್ರಗಳಿಂದಲೂ ಚಿತ್ರಿತವಾಗಿರುವ ಸುವರ್ಣಾಂಬರವನ್ನು ಲಿಂಗಕ್ಕೆ ಹೊದಿಸಿ, ನಾನು ಅತ್ಯಂತ ಹರ್ಷವುಳ್ಳವನಾಗಿದ್ದೇನೆ. ॥೫೪॥

ನಗರಾಜಪುತ್ರಿಯೇ, ಸುಗಂಧವುಳ್ಳ ವಸ್ತ್ರಗಳಿಂದಲೂ, ಪುಷ್ಪಾದಿಗಳಿಂದಲೂ ಅರ್ಚಿತವಾದ ಶಿವಲಿಂಗವು ಎಷ್ಟು ಕಾಂತಿಯುಳ್ಳದ್ದಾಗಿದೆ ನೋಡು. ಈ ಕೈಲಾಸಲಿಂಗದಲ್ಲಿರುವ ಸಕಲರತ್ನಗಳ ಕಾಂತಿಲಹರಿಯು, ಬ್ರಹ್ಮಾಂಡದಲ್ಲಿರುವ ಸಕಲ ಶ್ರೇಷ್ಠವಸ್ತುಗಳ ತೇಜಸ್ಸೆಲ್ಲವನ್ನೂ ಮೀರಿಸಿದ್ದಾಗಿದೆ. ॥೫೫॥

ದೇವಿಯೇ, ಕೈಲಾಸಲಿಂಗದ ಮೇಲೆ ಚಾಂಚಲ್ಯದಿಂದ ವಿರಾಜಿಸುತ್ತಿರುವ, ಮತ್ತು ಚಂದ್ರನಕಾಂತಿಯಂತೆ ಕಾಂತಿಯನ್ನು ಪಡೆದಿರುವ ದಿವ್ಯರತ್ನದ ಬೆಲೆಯನ್ನು ಬ್ರಹ್ಮನಾಗಲಿ, ವಿಷ್ಣುವಾಗಲಿ, ಧನಾಧಿಪನಾದ ಕುಬೇರನಾಗಲಿ ಅರಿಯಲಾರರು. ಹಾಗಿರುವಾಗ ನಿಷ್ಪಕ್ಷಪಾತಬುದ್ಧಿಯಿಂದ ಅದರ ಬೆಲೆಯನ್ನು ತಿಳಿಯುವ ಸಮರ್ಥರು ಲೋಕದಲ್ಲಿ ಮತ್ತಾರಿರುವರು? ॥೫೬॥

ಯದ್ದರ್ಶನೇನ ಸಮದುಃಖನಿರಾಮಣಂ ಸ್ಯಾ
ತ್ತದ್ರತ್ನವರ್ಯನಿಚಯೈರ್ಮಕುಟಾತಿಶೋಭಂ।
ಪೂರಿತಾಖಿಲಜನಾಜನಿಕಾಮಂ
ವಾಮದೇವಮಿಹ ಪಶ್ಯ ಸುಕಾಮಂ ॥೫೭॥

ಫಣಾಮಣಿಸಹಸ್ರಕೈರ್ವಿಧೃತವಕ್ತ್ರಮುಕ್ತಾಫಲೈಃ
ಪ್ರಭಾತತಸಭಾವಲೀಮಣಿಗಣಾತ್ತಕಾಂತ್ಯಾ ಯುತಂ।
ತ್ರಿಪುಂಡ್ರನಿಟಿಲೋಲ್ಲಸತ್ತಿಲಕಿತಾಚ್ಛಸದ್ಧೀರಕಂ
ಪ್ರಪಶ್ಯ ಗಿರಿಕನ್ಯಕೇ ವಿಮಲಮೌಲಿಲಿಂಗಂ ಮಮ ॥೫೮॥

ಸಹಸ್ರಮುಖಸತ್ಫಣಿಪ್ರವರಮೌಲಿಮಾಣಿಕ್ಯಸ
ದ್ದ್ಯುತೀವಿಜಿತಕಾಂತಿತೋ ಮಮ ಸ್ವಭೋಗಸಂವೇಷ್ಟಿತೈಃ।

---

ಈ ಕೈಲಾಸಲಿಂಗದ ದರ್ಶನದಿಂದಲೇ ಸಕಲ ದುಃಖಗಳೂ ನಾಶವಾಗುವುವು. ಲೋಕದಲ್ಲಿ ಶ್ರೇಷ್ಠರತ್ನಗಳು ಯಾವುವುಂಟೋ, ಅವೆಲ್ಲವೂ ಈ ಲಿಂಗದ ಕಿರೀಟದಲ್ಲಿ ಅಡಗಿ ನಿಂತಿವೆ. ಸಮಸ್ತ ಭಕ್ತರ ಇಷ್ಟಾರ್ಥಗಳನ್ನೆಲ್ಲಾ ಪೂರ್ತಿಗೊಳಿಸಿ ಶಾಶ್ವತವಾದ ಮುಕ್ತಿಯನ್ನು ದೊರಕಿಸುವಂತಹ ಈ ಉತ್ತಮ ಲಿಂಗವನ್ನು, ಗೌರಿಯೇ, ಭಕ್ತಿಯಿಂದ ದರ್ಶನಮಾಡು. ॥೫೭॥

ಗಿರಿಪುತ್ರಿಯೇ, ಆದಿಶೇಷನ ಸಹಸ್ರ ಹೆಡೆಗಳ ಸಹಸ್ರನಾಗರತ್ನಗಳೂ ಈ ಲಿಂಗದ ಮೇಲೆ ವಿರಾಜಿಸುತ್ತಿವೆ. ಆದಿಶೇಷನ ಸಹಸ್ರ ವದನಗಳೂ, ಒಂದೊಂದು ಮುತ್ತುಗಳನ್ನು ಕಚ್ಚಿಕೊಂಡು ಮೇಲೆ ನಲಿದಾಡುತ್ತಿವೆ. ಇನ್ನೂ ರತ್ನದ ಹಾರಗಳು ರಾಶಿರಾಶಿಯಾಗಿ ಲಿಂಗದ ಮೇಲೆ ಶೋಭಿಸುತ್ತಿವೆ. ಇವುಗಳ ದಿವ್ಯಕಾಂತಿಯಿಂದ ಸಭಾಂಗಣವೆಲ್ಲವೂ ಪ್ರಕಾಶಯುತವಾಗಿದೆ. ಶಿವಲಿಂಗದ ಹಣೆಯಲ್ಲಿ ತ್ರಿಪುಂಡ್ರಾಂಕನವಿದೆ. ಹಣೆಯ ಮಧ್ಯಭಾಗದಲ್ಲಿ ಹೀರಕವೆಂಬ ದಿವ್ಯರತ್ನವು ತಿಲಕದಂತೆ ಹೊಳೆಯುತ್ತಿದೆ. ಇಂತಹ ಕಾಂತಿಮತ್ತಾದ ದಿವ್ಯಲಿಂಗವನ್ನು ನೋಡಿ ಕೃತಾರ್ಥಳಾಗು. ॥೫೮॥

ಆದಿಶೇಷನ ಸಹಸ್ರ ಹೆಡೆಗಳಲ್ಲಿಯೂ ಹೊಳೆಯುವ ಮಾಣಿಕ್ಯಗಳು ಸಮಸ್ತ ರತ್ನಗಳ ಕಾಂತಿಯನ್ನೂ ಮೀರಿಸಿವೆ. ಅಂತಹ ಆದಿಶೇಷನೇ ನನ್ನ ಮತ್ತು ಕೈಲಾಸಲಿಂಗದ ಮೇಲೆಲ್ಲಾ ಸುತ್ತಿಕೊಂಡಿರುವನು. ಅವನ ಹೆಡೆಗಳ ಕಾಂತಿಯು ನನ್ನ

**ಫಣಾಫವಿಕೃತಾಂಬರಫ್ಫವಿಜಿತಾದ್ಯಸಚ್ಛತ್ರಕಂ**
**ಶಿವೇ ಶಿರಸಿ ಮೇ ಸದಾ ದಧತಿ ಲಿಂಗಮೌಲೌ ಮಮ ॥೫೯॥**

**ವಿಶ್ವೇಶ್ವರಾಖ್ಯವರಲಿಂಗಸಮಾನಮಾನ**
**ಮಾನಂದಸೌಖ್ಯದಮಿದಂ ಮಮ ಸುಪ್ರಿಯೇ ಯತ್ ।**
**ಹಂತುಂ ಸಮಗ್ರಜನಪಾತಕರಾಶಿಮೇವ**
**ಸರ್ವಾರ್ಥರಾಶಿದಮಿದಂ ಪರಿಪೂಜಯಾಮಿ ॥೬೦॥**

**ನಾನಾಮಣಿದ್ಯುತಿಸರಾವಲಿಭೂಷಿತಂ ತಂ ।**
**ಮಲ್ಲಿಂಗಮೇವ ಕಮಲಾಚ್ಛದೃಶಾ ಪ್ರಪಶ್ಯ ।**
**ಪುಣ್ಯೇ ಪ್ರದೋಷಸಮಯೇ ಮುದಿತಸ್ತ್ವಯಾಹಂ ।**
**ತಲ್ಲಿಂಗಮಧ್ಯಭವನೇ ಮಹಿಮಾಸ್ಥಿತೋಽಹಂ ॥೬೧॥**

---

ಮತ್ತು ಲಿಂಗದ ಮೇಲೆಲ್ಲಾ ವ್ಯಾಪಿಸಿ, ಮೇಲಿನ ಶ್ವೇತಚ್ಛತ್ರಿಯ ಹೊಳಪನ್ನು ಮಂಕುಮಾಡಿದೆ. ಈ ವಿಧವಾದ ಸೌಂದರ್ಯವನ್ನು ನನ್ನ ದೇಹದಲ್ಲಿಯೂ ಹಾಗೆಯೇ ಕೈಲಾಸಲಿಂಗದಲ್ಲಿಯೂ ಆದಿಶೇಷನು ಉಂಟುಮಾಡುತ್ತಿರುವನು. ॥೫೯॥

ಎಲೌ ಪ್ರಿಯಪತ್ನಿಯೇ, ಈ ಲಿಂಗದಲ್ಲಿರುವ ಮಹಿಮೆಯು, ಭೂಲೋಕದ ಕಾಶೀವಿಶ್ವೇಶ್ವರಲಿಂಗದಲ್ಲಿಯೂ ಇದೆಯೆಂಬುದನ್ನು ತಿಳಿ. ಆ ವಿಶ್ವೇಶ್ವರಲಿಂಗ ದಂತೆಯೇ ಇದೂ ಸಹ ಆನಂದವನ್ನೂ, ಸೌಖ್ಯವನ್ನೂ ಭಕ್ತರಿಗೆ ಒದಗಿಸುತ್ತದೆ. ಅಲ್ಲದೆ ಸಮಸ್ತರ ಪಾಪರಾಶಿಯನ್ನು ನಾಶಮಾಡಿ, ಸರ್ವರ ಇಷ್ಟಾರ್ಥಸಮೂಹ ವನ್ನೆಲ್ಲಾ ಒದಗಿಸುವ ಈ ಉತ್ತಮೋತ್ತಮಲಿಂಗವನ್ನು ಭಕ್ತಿಯಿಂದಾರಾಧಿಸುವೆನು. ॥೬೦॥

ಅನೇಕ ರತ್ನಮಾಲಿಕೆಗಳಿಂದ ಅಲಂಕೃತವಾದ ಈ ಕೈಲಾಸಲಿಂಗವನ್ನು ಕಮಲದಂತೆ ನಿರ್ಮಲವಾಗಿಯೂ, ವಿಶಾಲವಾಗಿಯೂ ಇರುವ ಕಣ್ಣುಗಳಿಂದ ನೋಡು. ಪುಣ್ಯಪ್ರದವಾದ ಪ್ರದೋಷಕಾಲದಲ್ಲಿ ಮಹಿಮಾಶಾಲಿಯಾಗಿ ನಾನು ಸಂತೋಷದಿಂದ ನಿನ್ನೊಡನೆ ಲಿಂಗಮಧ್ಯವರ್ತಿಯಾದ ಗೃಹದಲ್ಲಿ ವಾಸಮಾಡು ವೆನು. ಆದ್ದರಿಂದ ಪ್ರದೋಷಕಾಲದಲ್ಲಿ ಸರ್ವರೂ ಈಶ್ವರದೇವಾಲಯಕ್ಕೆ ಹೋಗಿ ಶಿವಲಿಂಗದರ್ಶನಮಾಡುವುದು ಒಳ್ಳೆಯದು. ॥೬೧॥

ವಿಕಸಿತಸಿತಪದ್ಮರತ್ನಕಂಜಮಾಲಾ ।
ನವನೀಲೋತ್ಪಲಜೈಸ್ಸಹಸ್ರಮಾಲಿಕಾಭಿಃ ।
ಮಧುಬಂಧುರಗಂಧದಿವ್ಯಗಂಧೈ ।
ಸ್ಸಿತಮಂದಾರಜರಕ್ತಮಾಲಿಕಾಭಿಃ ॥೬೨॥

ದಿನಾಂತಸಮಯೋಲ್ಲಸನ್ಮಧುರಗಂಧಜಾತೀಸರೈ ।
ರ್ವಸಂತಕಲಿಕಾಸ್ಫುರನ್ಮಧುರಗಂಧಮಲ್ಲೀಸರೈಃ ।
ವಿಕುಂಠಿತಮಿದಂ ಮಮ ಪ್ರಕಟಸೋಮಧಾಮಪ್ರಭಾ ।
ಸಮುತ್ಥಮಗಕನ್ಯಕೇ ವಿಮಲದ್ರೋಣಮಾಲಾಯುತಂ ॥೬೩॥

ಕದಂಬವನನೀಪಜಸ್ಫುರದಪಾರಮಾಲಾಭರೈ ।
ರ್ವಿಲೋಲವರಪೀಠಗಂ ಪ್ರಕಟಮೌಲಿಲಿಂಗಂ ಶಿವೇ ।
ಪ್ರಪಶ್ಯ ನಯನಾಂಚಲೈರ್ವಿಕಚಮಂಜರೀಕಪ್ರಭೈಃ ।
ಪ್ರದೋಷಸಮಯೇಂಬಿಕೇ ನಯನಜನ್ಮನಸ್ತತ್ಫಲಂ ॥೬೪॥

---

ಇಗೋ ನೋಡು. ಈ ಶಿವಲಿಂಗದ ಶಿರೋಭಾಗದಲ್ಲಿ ಅರಳಿದ ಕಮಲವನ್ನು ರತ್ನದ ಕಮಲದೊಂದಿಗೆ ಸೇರಿಸಿ, ಮಧ್ಯೆ ಮಧ್ಯೇ ನೀಲೋತ್ಪಲಗಳನ್ನೂ ಬೆರೆಸಿ ಕಟ್ಟಿರುವ ಸಾವಿರಾರು ಮಾಲಿಕೆಗಳು ವಿರಾಜಿಸುತ್ತಿವೆ. ಅಲ್ಲದೆ ಬಿಳಿಯ ಮಂದಾರಪುಷ್ಪಗಳನ್ನೂ, ಕೆಂಪಾದ ಪುಷ್ಪಗಳನ್ನೂ ಬೆರೆಸಿ ಕಟ್ಟಿದ ಪುಷ್ಪಮಾಲಿಕೆಗಳು ಒಂದುಕಡೆ ಮನೋಹರವಾಗಿ ಕಾಣುತ್ತಿವೆ. ಇಂತಹ ಸುಮಸರಗಳಿಂದ ಹೊರ ಹೊರಟ ಸುಗಂಧವು ಸರ್ವತ್ರ ಹರಡಿದ್ದಾಗಿದೆ. ॥೬೨॥

ಪ್ರದೋಷಕಾಲದಲ್ಲಿ ಅರಳುವ, ಮಧುರವಾದ ವಾಸನೆಯುಳ್ಳ ಜಾಜೀಹೂವುಗಳ ಮಾಲಿಕೆಯೂ, ವಾಸಂತಿಕಾಪುಷ್ಪಗಳ ಸುಗಂಧಮಯವಾದ ಹಾರಗಳೂ, ಮಲ್ಲಿಕಾಮಾಲೆಗಳೂ, ನನ್ನ ಈ ಕೈಲಾಸಲಿಂಗದ ಶಿರಸ್ಸನ್ನು ಅಲಂಕರಿಸಿವೆ. ಇದರ ಜೊತೆಗೆ ನನ್ನ ಲಿಂಗದ ಮೇಲಿನ ಚಂದ್ರಕಾಂತಿಯೂ, ಪರಿಶುದ್ಧವಾದ ತುಂಬೇ ಹೂವುಗಳ ಮಾಲೆಯೂ ಮತ್ತಷ್ಟು ಸೌಂದರ್ಯವನ್ನು ಹೆಚ್ಚಿಸುತ್ತಿವೆ. ॥೬೩॥

ಕದಂಬವನದಲ್ಲಿ ಹುಟ್ಟಿದ ಕದಂಬಪುಷ್ಪಗಳ ಹಾರದಿಂದ ಅಲಂಕೃತವಾಗಿ, ಸುಂದರಮಯವಾದ ಪೀಠದಲ್ಲಿ ಕುಳಿತು ರಾರಾಜಿಸುತ್ತಿರುವ ಈ ಲಿಂಗವನ್ನು ನೋಡು. ಅರಳಿದ ಪುಷ್ಪಗುಚ್ಛಗಳ ಕಾಂತಿಯಿಂದ ಕೂಡಿದ ನಿನ್ನ ಕಟಾಕ್ಷದಿಂದ

ತದ್ಬಿಲ್ವರತ್ನಕಮಲೈರಮಲೈರ್ಭವಾನಿ ।
ಪುನ್ನಾಗನಾಗನವಚಂಪಕದೂರ್ವಯಾಪಿ ।
ನೀಲೋತ್ಪಲೈರ್ದಮನಕೈಃ ಕರವೀರಜಾತಿ ।
ದ್ರೋಣಾರ್ಕಕಾಶಜವಕೈಃ ಕನಕೈಸ್ಸಮುಚ್ಯ ॥೬೫॥

ಸತ್ಪುಂಡರೀಕವಕುಲೈರ್ಧವಕರ್ಣಿಕಾರ
ಮಾಲೂರಕುಂದಕುಸುಮೈರತಿಹರ್ಷಿತೋಽಹಂ ।
ರಾಜೀವಾಮಲಮಲ್ಲಿಕಾಸುಮುಸರ
ಸ್ಫಾರೋತ್ಥಗಂಧಾಂಧಕೈಃ ।
ಲೋಲಂಬೈರ್ವಿಕಸತ್ಸುಮೋತ್ಥಮಧುಪೈಃ
ಪಶ್ಯಾಂತಿಕೇ ಪೂಜಿತಂ ।
ಏತಲ್ಲಿಂಗವರಂ ಪ್ರದೋಷಸಮಯೇ ಬಿಲ್ವೀದಲೋತ್ತಂಸಕಂ
ಧುತ್ತೂರೇಣ ಹಿ ಶೋಭತೇಽದ್ಯ ನಿತರಾಂ ಮೌಲಿಸ್ಥಚಂದ್ರಾಧಿಕಂ ॥೬೬॥

---

ಈ ಪ್ರದೋಷಕಾಲದಲ್ಲಿ ಶಿವದರ್ಶನಮಾಡು. ನಿನ್ನ ಕಣ್ಣು ಹುಟ್ಟಿದ್ದಕ್ಕೆ ಈ ದರ್ಶನವು ಸಾಫಲ್ಯವನ್ನುಂಟುಮಾಡುವುದು. ॥೬೪॥

ಈ ಕಾಲದಲ್ಲಿ ನೀನು ಬಿಲ್ವಪತ್ರೆಗಳಿಂದಲೂ, ರತ್ನಮಯವಾದ ಕಮಲಗಳಿಂದಲೂ, ಪುನ್ನಾಗಪುಷ್ಪಗಳಿಂದಲೂ, ಇನ್ನೂ ಸಂಪಗೆ, ದೂರ್ವೆ, ನೀಲೋತ್ಪಲ, ದವನ, ಕಣಿಗಲು, ಜಾಜೀ, ತುಂಬೆ, ಅರ್ಕಪುಷ್ಪ (ಎಕ್ಕದಹೂ) ಕಾಶಪುಷ್ಪ, ಸುವರ್ಣಪುಷ್ಪ ಇವೇ ಮೊದಲಾದ ಪುಷ್ಪವಿಶೇಷಗಳಿಂದ ಅರ್ಚನೆಮಾಡಿ ಶಿವಾನುಗ್ರಹವನ್ನು ಪಡೆಯುತ್ತಿರು. ॥೬೫॥

ಜಾತಿಯ ಕಮಲಗಳು, ವಕುಲಪುಷ್ಪಗಳು, ಕರ್ಣಿಕಾರಪುಷ್ಪ, ದರ್ದುರ, ಕೋಲುಮಲ್ಲಿಗೆ ಇವೇ ಮೊದಲಾದ ಪುಷ್ಪಗಳಿಂದ ಕೈಲಾಸಲಿಂಗವನ್ನು ಪೂಜಿಸುವೆನು. ಮತ್ತೂ ರಾಜೀವಪುಷ್ಪ, ಮಲ್ಲಿಕಾಪುಷ್ಪಮಾಲೆ ಇವುಗಳ ಚಾಂಚಲ್ಯದಿಂದ ಹೊರಟ ಸುವಾಸನೆಗೆ ಮರುಳಾಗಿ ಭ್ರಮರಗಳು ಆ ಹೂವುಗಳಲ್ಲಿರುವ ಮಕರಂದ ಪಾನಕ್ಕಾಗಿ ಪ್ರಯತ್ನಿಸಿ, ಪಾನಮಾಡಿ ಅನಂತರ ಝೇಂಕಾರದಿಂದ ಮೇಲೇಳುತ್ತಿವೆ. ಈರೀತಿ ವಿಧವಿಧವಾದ ಪುಷ್ಪಗಳಿಂದ ಪೂಜಿತವಾದ ದಿವ್ಯಲಿಂಗವನ್ನು ನೋಡು.

ಅಗರುತರುಜಾತಧೂಪಧೂಮ್ರೈಃ
ಬಹುಲಾವೋಪವಿಕಾಸಿದಿಕ್ಸಮೂಹೈಃ ।
ಮರುದಾಕುಲಲಂಬಿತೋರುಧಾರಾ
ವಿಕಸತ್ಸ್ವರ್ಗಪಥಾಃ ಪ್ರಚಾರಜಾಲೈಃ ॥೬೭॥

ಸುವರ್ಣಮಣಿಭಾಜನೇ ಶಿಶುನಭೋದ್ಯದಂಭೋಜಿನೀ
ಪ್ರಿಯಾಂಶುಚಯಸಂಕ್ರಮಿಪ್ರಕಟದಾಕ್ಷ್ಯರತ್ನಾಂಶುಭಿಃ ।
ಮನೋರಥಪಥಾತಿಗೈರ್ನವ ಸುಲಿಂಗಮಾಲಾಯಿತೈಃ
ಸುಪಾಂಡುರಶಶಿಪ್ರಭೈರ್ಹಿಮತುಷಾರಕುಂದಪ್ರಭೈಃ ॥೬೮॥

ಸುಚಂದ್ರವರಖಂಡಕೈರ್ವಿರಚಿತೋರುದೀಪಾವಲೀ
ಸುಗೋಘೃತಸುವರ್ತಿಕೋಜ್ವಲಸುದೀಪಜಾಲೈರಪಿ ।
ಗೃಹಾಂಕಣತಮಸ್ತತಿಪ್ರವಿದದಾರದೃತ್ಯಾದರೈ
ರಖಂಡತರಮಂಡನೈಃ ಪ್ರಥಿತಪದ್ಮಹಂಸೋಪಮೈಃ ॥೬೯॥

---

ದತ್ತೂರಿಯ ಹೂವೊಂದು ಶಿವಲಿಂಗದಮೇಲೆ ಎಷ್ಟುಸುಂದರವಾಗಿರುವುದು ? ಶಿರಸ್ಸಿನಲ್ಲಿರುವ ಚಂದ್ರನಿಗಿಂತಲೂ ಹೆಚ್ಚಾಗಿ ಹೊಳೆಯುತ್ತಿದೆಯಲ್ಲವೆ ? ॥೬೬॥

ಅಗರುವಿನ ಮರದಿಂದ ಹುಟ್ಟಿರುವ ಧೂಪದ ಹೊಗೆಯು ಸಮಸ್ತ ದಿಕ್ಕುಗಳಿಗೂ ವ್ಯಾಪಿಸಿ ಎಲ್ಲಾ ದಿಕ್ಕುಗಳನ್ನೂ ಸುವಾಸಿತವನ್ನಾಗಿ ಮಾಡಿದೆ. ಅಲ್ಲದೆ ಆ ವಾಸನೆಯು ವಾಯುವಿನ ಸಂಚಾರದ ಮೂಲಕ ಸರ್ವತ್ರ ಹರಡಿ, ಸ್ವರ್ಗಮಾರ್ಗವನ್ನೆಲ್ಲಾ ಆವರಿಸಿ ನಿಂತಿದೆ. ॥೬೭॥

ಪ್ರದೋಷಕಾಲದ ಅರ್ಚನೆಗಾಗಿ ಸುವರ್ಣಮಯವಾದ ಪಾತ್ರೆಯಲ್ಲಿ ಬಾಲಚಂದ್ರನ ಕಿರಣಗಳಂತಿರುವ ರತ್ನಹಾರಗಳನ್ನೂ, ಮನಸ್ಸಿನಿಂದಲೂ ಊಹಿಸಲಾಗದ ಮತ್ತು ಶುಭ್ರವಾದ ಚಂದ್ರನಂತೆ ಹೊಳೆಯುವ, ಹಿಮದಂತೆಯೂ, ಕೋಲುಮಲ್ಲಿಗೆಯಂತೆಯೂ ಪರಿಶುದ್ಧವಾಗಿರುವ ಪುಷ್ಪಮಾಲೆಗಳನ್ನೂ ಇರಿಸಿಕೊಂಡು ಅವುಗಳನ್ನು ದಿವ್ಯಲಿಂಗಕ್ಕೆ ಸಮರ್ಪಿಸುತ್ತಿರುವೆನು. ಬಾಲಚಂದ್ರನ ಆಕಾರದಂತೆ ನಿರ್ಮಾಣ ಮಾಡಿರುವ ಆರತಿಯ ತಟ್ಟೆಗಳಲ್ಲಿ, ಹಸುವಿನ ತುಪ್ಪದಲ್ಲಿ ನೆನೆಸಿದ ಬತ್ತಿಗಳನ್ನು ಹೊತ್ತಿಸಿಟ್ಟು, ದೀಪಾರತಿಯನ್ನು ಮಾಡುವೆನು. ಆ ದೀಪಗಳಾದರೋ ಗರ್ಭಾಂಕಣದಲ್ಲಿರುವ ಕತ್ತಲೆಯನ್ನೆಲ್ಲಾ ಹೊಡೆದೋಡಿಸುವಂತಿರುತ್ತವೆ. ಮತ್ತು ಪ್ರಸಿದ್ಧವಾದ

ಸುತಾರಕಗಣಾವಲೀಲಲಿತಮುಕ್ತಜಾಲಪ್ರಭೈ ।
ರ್ವಿಲೋಕಯ ಗಿರೀಂದ್ರಜೇ ಮಮ ಸುಮೌಲಿಭಾಸಂಕರೈಃ
ನಾನಾಭಕ್ಷ್ಯಮಹಾದ್ರಿಗಂಧಸುರಸಾಶ್ಚಾನೋದಿತಾಸ್ತಾದಿಶ ।
ಸ್ಸಸ್ವಾದ್ವನ್ನಜರಾಶಿಭಿಶ್ಚ ಘೃತಜೈಸ್ಸೂಪಪ್ರವಾಹೈಶ್ಶಿವೇ ॥೭೦॥

ಶಾಕೈಶ್ಶೈಲನಿಭೈರ್ಮಧುಪ್ರಮಥಿತೈಃ ಕ್ಷೀರಾದಿದಧ್ಯೋದನೈಃ
ಪ್ರಾಲೇಯಾಚಲಸನ್ನಿಭೈಸ್ಸುಗುಡಕೈರ್ನೈರ್ವೇದಿತೈಶ್ಶಂಕರಿ ।
ನಾರಿಕೇಲಲಿಕುಚೈಸ್ಸುಕಪಿತ್ಥೈ
ರ್ಮಾತುಲಿಂಗಕದಲೀಸುರಸಾಲೈಃ ॥೭೧॥

ಖರ್ಜೂರೈರ್ಬದರೀಸುಗಂಧಜರಸೈರ್ದಾಡಿಂಬನಾರಂಗಕೈಃ ।
ಕಂಕೋಲಾಮಲಕೈಸ್ಸುರಾದನಫಲೈರಾಜಾದನೈರ್ಜಾತಿಕೈಃ ।

---

ರಾಜಹಂಸಗಳಂತೆ ಕಮಲಗಳಂತೆ ಸಾಲುಸಾಲಾಗಿ ಬೆಳಗುವಂತಿರುತ್ತವೆ. ಮತ್ತು ಶಿವಲಿಂಗವನ್ನು ಬಹಳವಾಗಿ ಅಲಂಕರಿಸುತ್ತಿವೆ. ||೬೮-೬೯||

ಪಾರ್ವತಿಯೇ, ಹೊಳೆಯುವ ನಕ್ಷತ್ರಮಾಲೆಯಂತೆ ವಿರಾಜಿಸುವ ಮುತ್ತುಗಳ ಮಾಲೆಯು ನನ್ನ ಶಿರಸ್ಸಿನಲ್ಲಿ ಕಾಂತಿಮತ್ತಾಗಿರುವುದನ್ನು ನೋಡು. ಅಲ್ಲದೆ ನೈವೇದ್ಯಕ್ಕಾಗಿ ಇಟ್ಟಿರುವ ನಾನಾವಿಧವಾದ ಅನ್ನಗಳ ಮತ್ತು ಘೃತಭಕ್ಷ್ಯಗಳ, ತೊವ್ವೆ ಮುಂತಾದ ಭೋಜ್ಯವಸ್ತುಗಳ ಸುವಾಸನೆಯು ಸಮಸ್ತ ದಿಕ್ಕುಗಳನ್ನೂ ಸುಗಂಧಮಯವನ್ನಾಗಿ ಮಾಡುತ್ತಿದೆ. ||೭೦||

ಸ್ವಾಮಿಯ ನಿವೇದನಕ್ಕಾಗಿ, ಪರ್ವತೋಪಮವಾದ ಶಾಕವಸ್ತುಗಳನ್ನು ತರಿಸಿರುವೆನು. ಮಧುವಿನಂತೆ ರುಚಿಕರವಾಗಿರುವ, ಕ್ಷೀರಾನ್ನ, ದಧ್ಯೋದನಗಳು ಶುಭ್ರವಾದ ಹಿಮಾಲಯದಂತೆ ಕಂಗೊಳಿಸುತ್ತಿವೆ. ಗುಡಾನ್ನಗಳು ರಾಶಿರಾಶಿಯಾಗಿವೆ. ತೆಂಗಿನಕಾಯಿಗಳು, ಕಿತ್ತಲೆಹಣ್ಣುಗಳು, ಬೇಲದಹಣ್ಣುಗಳು, ಮಾದಳದ ಹಣ್ಣುಗಳು, ಬಾಳೆಯ ಹಣ್ಣುಗಳು, ಮಾವಿನಹಣ್ಣುಗಳು ಇವು ತಂಡತಂಡವಾಗಿ ಸ್ವಾಮಿಯ ನಿವೇದನಕ್ಕಾಗಿ ಸಿದ್ಧವಾಗಿವೆ. ||೭೧||

ಖರ್ಜೂರ, ಎಲಚೀ, ಸುಗಂಧಮಯವಾದ ದಾಳಿಂಬೆ, ಕಿತ್ತಲೆ, ಕಂಕೋಲ(?) ನೆಲ್ಲಿಕಾಯಿ, ದೇವತೆಗಳ ಫಲ, ರಾಜರಿಗೆ ಯೋಗ್ಯವಾದ ಹಣ್ಣುಗಳು, ಜಾತೀಫಲ,

ನೈವೇದ್ಯೇಕ್ಷುಜಕಾಂಡಕೈರ್ಗಿರಿವರಾಜ್ಞಾತೇ ಮುದೇ ಮೇ ಭವೇ ।
ತ್ತಾಂಬೂಲೈಃ ಖದಿರೈರ್ಲವಂಗಮುಖರೈರ್ಜಾತೀಫಲೈಲಾಯುತೈಃ ॥೭೨॥

ಮುಕ್ತಾ ಚೂರ್ಣಸುಪೂರ್ಣಪೂಗಮಧುರೈಃ ಕರ್ಪೂರಸಂವಾಸಿತೈ ।
ರುತ್ಫುಲ್ಲಾಮಲನಾಗವಲ್ಲಿಜದಲೈಃ ಪ್ರೋದ್ಯದ್ಗಿರೀಂದ್ರಪ್ರಭೈಃ ।
ನೈವೇದ್ಯಂ ಪರಿಕಲ್ಪಯಾಮಿ ಗಿರಿಜೇ ತಸ್ಮಿನ್ ಪ್ರದೋಷೇ ಹ್ಯಹಂ ।
ವೀಣಾನಿಕ್ವಣಮಂಜುಮಂಜುಲಸುಧಾಧಾರಾಸಮೈರ್ಗಾಯನೈಃ ॥೭೩॥

ಮನ್ನಾಮಾಮೃತಮಿಶ್ವರೇಶ್ವರಿ ಮುದಾ ರುದ್ರಾಣಿಭಿಃ ಕಲ್ಪಿತಂ ।
ಶಂಭೋ ಶಂಕರಧೂರ್ಜಟೇ ತ್ರಿನಯನ ಕಾಲಾಂಧಕಾರೇ ಹರ ।
ಪಾಹೀಶ ಪ್ರಮಥಾಧಿನಾಥ ಮಹಿಮನ್ ಲಿಂಗಾಕೃತೇ ಪಾಹಿ ಮೇ ।
ರತ್ನೈಃ ಕಲ್ಪಿತಮದ್ದಲಧ್ವನಿಯುತೈಶ್ಶಂಖೋತ್ಥನಾದೈಶ್ಶಿವೇ ॥೭೪॥

---

ಕಬ್ಬಿನ ಚೂರುಗಳು, ಇವೆಲ್ಲವನ್ನೂ ನಿವೇದನಕ್ಕೆಂದು ಒದಗಿಸಿಟ್ಟಿರುವೆನು. ತಾಂಬೂಲವನ್ನು, ಖದಿರಫಲ, ಲವಂಗ, ಜಾತೀಫಲ, ಏಲಕ್ಕಿ ಇವುಗಳ ಸಂಬಂಧ ದಿಂದ ಸ್ವಾದುವನ್ನಾಗಿ ಮಾಡಿ ಅರ್ಪಿಸುವೆನು. ॥೭೨॥

ತಾಂಬೂಲಚರ್ವಣಕ್ಕೆ ಉಪಯುಕ್ತವಾದ ಮುತ್ತಿನಚಿಪ್ಪಿನ ಸುಣ್ಣ, ತುಂಬಿದ ಅಡಕೆ, ಪಚ್ಚಕರ್ಪೂರ, ವಿಶಾಲವಾಗಿ ಕೋಮಲವಾಗಿರುವ ವಿಳ್ಳೆಯದೆಲೆ, ಇವು ಗಳನ್ನು ಪರ್ವತಸಮವಾಗಿ ರಾಶಿರಾಶಿಯಾಗಿ ತಂದು ಅರ್ಪಿಸುವೆನು. ಇದಾದಮೇಲೆ ಪವಿತ್ರವಾದ ಈ ಪ್ರದೋಷಕಾಲದಲ್ಲಿ ವೀಣಾಧ್ವನಿಯಿಂದ ಕೂಡಿದ ಇಂಪಾದ ಗಾನಗೋಷ್ಠಿಯನ್ನು ಏರ್ಪಡಿಸಿ ಸ್ತೋತ್ರಮಾಡುವೆನು. ॥೭೩॥

ಪಾರ್ವತಿಯೇ, ರುದ್ರಾಣಿಯರು ಮದ್ದಲೆಯ ಧ್ವನಿಯಿಂದಲೂ, ಶಂಖದ ಇಂಪಾದ ಗಾನದಿಂದಲೂ ಕೂಡಿ ಪವಿತ್ರವಾದ ನನ್ನ ನಾಮಾವಳಿಗಳಿಂದ ಕೂಡಿದ ಗೀತೆಯೊಂದನ್ನು ರಚಿಸಿರುವರು. "ಶಂಕರನೇ, ಸುಖಕರನೇ, ಧೂರ್ಜಟಿಯೇ, ತ್ರಿನಯನನಾಗಿ, ಕಾಲರುದ್ರನಾಗಿ, ಪ್ರಪಂಚವನ್ನು ನಾಶಮಾಡುವ ಮಹೇಶ್ವರನೇ, ನಮ್ಮನ್ನು ರಕ್ಷಿಸು. ಪ್ರಮಥಗಣಗಳಿಗೆ ಒಡೆಯನೆನಿಸಿ ಲಿಂಗಾಕೃತಿಯಿಂದಿರುವ ಪರಮೇಶ್ವರನೇ ನಮ್ಮನ್ನು ಕಾಪಾಡು" ಎಂಬರ್ಥಬೋಧಕವಾದ ಆ ಗೀತೆಯನ್ನು ಹಾಡುವರು. ॥೭೪॥

ಪ್ರೋದ್ಯತ್ಕಾಹಳನಿಸ್ಸ್ವನೈರ್ಮುಖರಿತಂ ತನ್ಮಡ್ಡುಡಿಂಡೀರವೈಃ ॥೭೫॥

ದುಂದುಭ್ಯಾಘಾತನಾದ್ಯೈರ್ಮಮ ಗಣವರಗಾಸ್ಯೋರುನಿಶ್ವಾಸರಾಗೈಃ
ವೇಣೂರಂಧ್ರನಿಷೇವಣಾಂಗುಲಿಭವೈಸ್ತಾಲೈಶ್ಚ ಸಜ್ಝಲ್ಲರೈಃ ।
ತುಷ್ಟೋಽಹಂ ಪ್ರಥಿತೇ ಪ್ರದೋಷಸಮಯೇ ತಲ್ಲಿಂಗಸೇಕಾದರೋ
ನಾನ್ಯತ್ಕಿಂಚಿದವೇದಿಷಂ ತ್ರಿಜಗತಾಂ ವ್ಯಾಪಾರಮಪ್ಯದ್ರಿಜೇ ॥೭೬॥

ರಂಗೇ ತುಂಗತರಂಗಭಂಗಚಪಲೈರ್ನೃತ್ಯೈರ್ಮಹಾಮುದ್ದಲೈ ।
ವೀಣಾವೇಣುನಿನಾದಸಾಮ್ಯಲಯತೋ ನೃತ್ಯಂತಿ ಲಿಂಗಾಗ್ರತಃ ।
ರುದ್ರಾಣೀಗಣಕೋಟಯೋತ್ರ ಸುಭಗೇ ಮಂಜೀರಶಿಂಜಸ್ವನೈ ।
ಶ್ಶಂಭೋ ಶಂಕರ ಸಾಂಬ ಪಾಹಿ ಶಿವ ನಸ್ತೂರ್ಣಂ ಪ್ರಸಾದಂ ಕುರು ॥೭೭॥

---

ಅಲ್ಲದೆ ಕಾಹಳೆಯ ಧ್ವನಿಯಿಂದಲೂ, ಮಡ್ಡು, ಡಿಂಡೀರವವೆಂಬ ವಾದ್ಯ ವಿಶೇಷಗಳ ಸ್ವರಗಳಿಂದಲೂ, ಮುಖರಿತವಾಗಿರುವ ಪ್ರದೇಶಗಳಲ್ಲಿ ನನ್ನ ಗಣನಾಯಕರು ಒಂದು ಕಡೆ ದುಂದುಭಿಯನ್ನು (ನಗಾರಿಯನ್ನು) ಬಾರಿಸುತ್ತಾ ಆಯಾಸದಿಂದ ತಾಳಕ್ಕೆ ಸರಿಯಾಗಿ ಉಸುರು ಬಿಡುತ್ತಿರುವರು. ಮತ್ತೊಂದೆಡೆಯಲ್ಲಿ, ಕೊಳಲನ್ನು ಬಾರಿಸುವವರು, ತಮ್ಮ ಕೈಬೆರಳುಗಳಿಂದ ರಂಧ್ರಗಳನ್ನು ಮುಚ್ಚುವವರಾಗಿ, ಅದರಿಂದಲೇ ರಾಗದ ತಾಳವನ್ನೂ ತೋರ್ಪಡಿಸುತ್ತಿರುವರು. ಇದರ ಮೇಲೆ ಝುಲ್ಲರಿಯ ವಾದ್ಯಧ್ವನಿಯು ಇಂಚರಗೈಯುತ್ತಿರುವುದು. ಈ ಗಾನಸಮುದ್ರದಲ್ಲಿ ಮುಳುಗಿ, ಏಕಾಗ್ರತೆಯಿಂದ ಶಿವಲಿಂಗಾಭಿಷೇಕಮಾಡುತ್ತಿರುವ ನನಗೆ ಪ್ರಪಂಚದ ಮತ್ತಾವ ವ್ಯಾಪಾರದಲ್ಲಿಯೂ ಮನಸ್ಸು ಓಡುವುದೇ ಇಲ್ಲ. ಪ್ರದೋಷಕಾಲದಲ್ಲಿ ಮಾನತ್ರನ್ನ ಮನಸ್ಸು ಹೀಗೆ ಲಿಂಗಾರ್ಚನೆಯಲ್ಲಿಯೇ ತೊಡಗಿರುವುದು. ||೭೫-೭೬||

ಈ ಕೈಲಾಸೇಶ್ವರಲಿಂಗದ ಮುಂದೆ ಎತ್ತರವಾದ ಒಂದು ನಾಟ್ಯರಂಗಪ್ರದೇಶವಿರುವುದು. ಅಲ್ಲಿ ರುದ್ರಾಣಿಯರ ತಂಡವು ತಮ್ಮ ಕಾಲುಗಳಿಗೆ ಮಧುರವಾಗಿ ಧ್ವನಿಗೈಯ್ಯುವ ಗೆಜ್ಜೆಗಳನ್ನು ಕಟ್ಟಿಕೊಂಡು ನಾಟ್ಯವಾಡುತ್ತಿರುವರು. ಅದಕ್ಕನುಸಾರವಾಗಿ ವೀಣೆ, ಕೊಳಲು, ಮದ್ದಲೆ ಮುಂತಾದ ವಾದ್ಯವಿಶೇಷಗಳು ಧ್ವನಿಮಾಡುತ್ತಾ ಗಾನಕ್ಕೆ ಸಹಾಯಮಾಡುತ್ತಿರುವುವು. ಗಾನಮಾಡುವ ಕೃತಿಯಲ್ಲಾದರೋ 'ಶಂಭೋ,

ಇತ್ಯೇವಂ ಸುಭಗಾ ವಿಲಾಸಮಧುರಾ ಹಾವೈಶ್ಚ ಭಾವೈರಪಿ
ಚೋತ್ಕ್ರಾಂತಾವೃತರತ್ನಕಾಂತಿವಿಲಸತ್ಪೂರ್ಣೇಂದುಸಾಮ್ಯಾನನಾ ।
ಕುಂಭೋದ್ಯತ್ಕರಿಕುಂಭಸನ್ನಿಭಕುಚಾಃ ಕಾಂಚೀರ್ಝುಣನ್ನಿಸ್ವನಾ ।
ಸ್ತಾಲೋತ್ಥಾಹತಿಪಾದಪದ್ಮಜರವೈಃ ಕುರ್ವಂತಿ ವಿದ್ಯುದ್ಧ್ವನಿಂ॥೭೮॥

ಗಣೇಶಕರಭಾಸ್ವತಾಂ ವಿವಿಧಲೋಕಸಾಮ್ರಾಜ್ಯಧು ।
ಗ್ವಿವಿಕ್ತಕೃತಲಾಂಛನೈಶ್ಶಶಿಸುವೃತ್ತಮುಕ್ತಾತತೈಃ ।
ಮಹೋಡುಗಣಮೌಕ್ತಿಕಪ್ರಕಟಿತಾರಪಂಕ್ತೀತತೈ ।
ಗಿರೀಂದ್ರತನಯೇ ಧೃತಾನ್ಯಮಿತಛತ್ರಕೋಟ್ಯೋ ಗಣೈಃ ॥೭೯॥

---

ಶಂಕರನೇ, ಸಾಂಬನೇ ನಮ್ಮನ್ನು ಅನುಗ್ರಹಿಸು, ನಮಗೆ ಪ್ರಸಾದವನ್ನು ನೀಡು" ಎಂಬರ್ಥವು ತೋರಿಬರುತ್ತಿರುವುದು. ||೭೭||

ರುದ್ರಾಣಿಯರು ಮನೋಹರವಾಗಿ, ಸಂತೋಷವನ್ನುಂಟುಮಾಡುವ ಹಾವ ಭಾವವಿಲಾಸಗಳನ್ನು ತೋರ್ಪಡಿಸುತ್ತಿರುವರು. ರತ್ನಾಭರಣದಿಂದಲೂ, ಸಹಜ ಸೌಂದರ್ಯದಿಂದಲೂ ಕೂಡಿ, ಪೂರ್ಣಚಂದ್ರನಂತೆ ಶೋಭಿಸುವ ಮುಖವುಳ್ಳವರಾಗಿರುವರು. ಆನೆಯ ಕುಂಭಸ್ಥಳದಂತೆ ಉನ್ನತವಾದ ಮತ್ತು ದುಂಡಾಗಿರುವ ಸ್ತನಗಳುಳ್ಳವರಾಗಿರುವರು. ಸೊಂಟದಲ್ಲಿರುವ ಒಡ್ಯಾಣದ ಗೆಜ್ಜೆಗಳಿಂದಲೂ ಕಾಲಕ್ಕೆ ಸರಿಯಾಗಿ ಇಡುವ ಕಾಲುಗಳ ವಿನ್ಯಾಸದಿಂದಲೂ ಹುಟ್ಟುವ ಧ್ವನಿಯು ವಿದ್ಯುದ್ಧ್ವನಿಯನ್ನು ಅನುಕರಿಸುತ್ತಿರುವುದು. ||೭೮||

ಗಣಪತಿಯೂ, ಇನ್ನೂ ಪ್ರಮಥಗಣನಾಯಕರ ಗುಂಪೂ ಸಹ ತಮ್ಮ ಕೈಗಳಲ್ಲಿ ಒಂದೊಂದು ಸುಂದರವಾದ ಛತ್ರಿಯನ್ನು ಹಿಡಿದು ಶಿವಲಿಂಗದ ಸುತ್ತಲೂ ನಿಂತಿರುವರು. ಆ ಛತ್ರಿಗಳೆಲ್ಲವೂ ಸಾಮ್ರಾಜ್ಯಾಧಿಪತಿಗಳಿಗೆ ಸಾಮಾನ್ಯವಾಗಿ ಯಾವಯಾವ ಚಿಹ್ನೆಗಳಿರುವುವೋ ಆ ಚಿಹ್ನೆಗಳೆಲ್ಲವನ್ನೂ ಹೊಂದಿವೆ. ಛತ್ರಿಗಳ ಸುತ್ತಲೂ ಚಂದ್ರನಂತೆ ದುಂಡಾಗಿ ಮನೋಹರವಾಗಿರುವ ಮುತ್ತುಗಳು ವಿರಾಜಿಸುತ್ತಿವೆ. ಇದನ್ನು ನೋಡಿದರೆ ಮುತ್ತುಗಳೆಂಬ ನಕ್ಷತ್ರಪಂಕ್ತಿಗಳು ಸಾಲುಸಾಲಾಗಿ ಬಂದು ನೆರೆದಿವೆಯೋ ಎಂಬಂತೆ ತೋರಿಬರುತ್ತಿರುವುದು. ಇಂತಹ ಮುತ್ತಿನ ಛತ್ರಿಗಳನ್ನು ಹಿಡಿದು ಗುಂಪುಗುಂಪಾಗಿ ಪ್ರಮಥಗಣಗಳ ಅಧಿನಾಯಕರು ನಿಂತಿರುವರು. ||೭೯||

(ವ)ಪರಟಾರಮಣೋತ್ಥಕಾಮಿತಾಂಗೋ ।
ತ್ಥಿತಪಕ್ಷ್ಮಾಹನನಾಭಚಾಮರೌಘೈಃ ।
ಗಣವೃಂದೈರಖಿಲೈಶ್ಚ ಸೇವ್ಯಮಾನಂ ।
ಮಮ ಲಿಂಗಾಲಯಧೂನನೈಶ್ಶಿವೇದ್ಯ ॥೮೦॥

ಪ್ರವಾಳಮಯದಂಡಿನಾ ಮಲಯಶೈಲಭೂಮಾರುತ ।
ಸುಪೋತತರವಾಯುನಾ ನಗವರಾರಿಪಾಣೀಜುಷಾ ।
ಜಯೇನ ಚಮರೀಮೃಗಪ್ರಚಲವಾಲಗುಚ್ಛಾತ್ಮನಾ ।
ಸುವೀಜಿತಮುಮೇ ತದಾ ಮಮ ಸುಲಿಂಗಮತ್ಯಾದರಾತ್ ॥೮೧॥

ಧೃತೈಃ ಪ್ರಮದಪಾಣಿಭಿಃ ವನಕಲಾಪಿಪುಚ್ಛೋಚ್ಚಯೈಃ ।
ಕೃತೈಃ ವ್ಯಜನಕೋಟಿಭಿರ್ಹರಿತಚಂದ್ರಕೋಟ್ಯಂಶುಭಿಃ ।
ಮದೀಯಮಣಿಮಂಟಪಂ ಹರಿಮಣೀಭಿರಾಕಲ್ಪಿತ ।
ಮಿವಾದ್ಯ ಗಿರಿಜೇ ತದಾ ಪ್ರಥಿತಭಾಭಿರಾದೀಪಿತಂ ॥೮೨॥

---

ಹಂಸಗಳಲ್ಲೆಲ್ಲಾ ಅತಿಶ್ರೇಷ್ಠವೆನಿಸಿದ ರಾಜಹಂಸಗಳ ಗರಿಗಳಂತೆ ಶುಭ್ರವಾಗಿ ಪ್ರಕಾಶಿಸುತ್ತಿರುವ ದಿವ್ಯಚಾಮರಗಳನ್ನು ಹಿಡಿದು ಪ್ರಮಥಗಣಗಳು ಸರ್ವದಾ ಶಿವಲಿಂಗವನ್ನು ಸೇವಿಸುತ್ತಿರುವರು. ಈ ಚಾಮರಗಳ ಬೀಸುವಿಕೆಯಿಂದ ಉಂಟಾದ ವಾಯುವು ಶಿವಾಲಯವನ್ನೆಲ್ಲಾ ಗುಡಿಸುತ್ತಿರುವುದೋ ಎಂಬಂತಿರುವುದು. ದೇವಿಯೇ ಈ ರೀತಿಯಾಗಿ ನಾನು ಚಾಮರದ ಸೇವೆಯನ್ನು ಕೈಲಾಸಲಿಂಗಕ್ಕೆ ಅರ್ಪಿಸುತ್ತಿರುವೆನು. ॥೮೦॥

ಈ ಚಾಮರಕ್ಕೆ ಇರುವ ದಂಡವು ಹವಳದಿಂದ ನಿರ್ಮಿತವಾಗಿದೆ. ಮಲಯ ಪರ್ವತದ ಮಂದಮಾರುತದಂತೆ ಗಾಳಿಯನ್ನು ಬೀಸತಕ್ಕದ್ದಾಗಿದೆ. ಇಂತಹ ಚಾಮರವನ್ನು ಸಾಕ್ಷಾದ್ದೇವೇಂದ್ರನೇ ಹಿಡಿದು, ಈ ಲಿಂಗದ ಪಕ್ಕದಲ್ಲಿ ನಿಂತು ಬೀಸುತ್ತಿರುವನು. ಚಾಮರಗಳ ಕೂದಲಾದರೋ ಚಮರೀಮೃಗದ ಬಾಲಕ್ಕೆ ಸಂಬಂಧಿಸಿದುದಾಗಿದೆ. ಇಂತಹ ಸುಂದರತರವಾದ ಚಾಮರದಿಂದ ಈ ಕೈಲಾಸಲಿಂಗವು ಸೇವಿತವಾಗಿರುವುದು. ॥೮೧॥

ಇದಲ್ಲದೆ ಅನೇಕಸ್ತ್ರೀಯರು ನವಿಲುಗರಿಗಳಿಂದ ನಿರ್ಮಿತವಾದ ಬೀಸಣಿಗೆಗಳನ್ನು ಹಿಡಿದು ಈ ಕೈಲಾಸಲಿಂಗವನ್ನು ಸೇವಿಸುತ್ತಿರುವರು. ಆ ಬೀಸಣಿಗೆಗಳಾ

ಪ್ರಮಥಪ್ರಕರೋರ್ಧ್ವಹಸ್ತಸಂಸ್ಥೈ ।
ರ್ಮಣಿವರ್ಯೈರ್ವಿವಿಧೈಸ್ಸರಾಗ್ರಲಂಬೈಃ ।
ವಿಲಸನ್ನವರತ್ನಗುಚ್ಛಸಚ್ಛೈಃ ।
ಧ್ರುವಮೀಶಾನವರಾಗ್ರಗಾಃ ಪತಾಕಾಃ ॥೮೩॥

ಲಿಂಗಪ್ರಕ್ರಮಣೈರಹಂ ಸ ಇತಿ ತಲ್ಲಿಂಗಪ್ರಣಾಮಾದರ ।
ಸ್ಸ್ವಾತ್ಮಾನಂ ಪರಿಚಿಂತಯಾಮಿ ಗಿರಿಜೇಽಪ್ಯಾನಂದಧಾರಾವೃತಃ ।
ಪ್ರತ್ಯತ್ಥಾಖಿಲಲೋಕಜಾಲಮಖಿಲಂ ಮತ್ತೋ ನ ಭಿನ್ನಂ ಕ್ವಚಿತ್ ।
ಕಿಂಚಿಚ್ಚಾಪಿ ಶಿವೇ ಮಮೈವ ಮನಸಸ್ಸಂಕಲ್ಪಜಾಲಂ ಜಗತ್ ॥೮೪॥

---

ದರೋ ಹರಿದ್ವರ್ಣದ ಚಂದ್ರಕಿರಣಗಳಂತೆ ಪ್ರಕಾಶಿತವಾಗಿವೆ. ಹೀಗೆ ಇಷ್ಟುಜನ ಸ್ತ್ರೀಯರು ಹಸುರುಬಣ್ಣದ ಬೀಸಣಿಗೆಗಳನ್ನು ಹಿಡಿದು ನಿಂತಿರುವುದರಿಂದ ನಮ್ಮ ಈ ರತ್ನಖಚಿತವಾದ ಶಿವಾಲಯವು, ಇಂದ್ರನೀಲಮಣಿಯಿಂದ ಕಲ್ಪಿತವಾಗಿದೆಯೋ ಎಂಬಂತೆ ಮನೋಹರವಾಗಿದೆ. ॥೮೨॥

ಪ್ರಮಥಗಣನಾಯಕರು ತಮ್ಮ ನೀಡಿದ ಕೈಗಳಲ್ಲಿ, ರತ್ನಖಚಿತವಾದ ಮಾಲಿಕೆಗಳಿಂದಲೂ ನವರತ್ನಗಳ ಗೊಂಡೆಗಳಿಂದಲೂ ಶೋಭಿಸುತ್ತಿರುವ ಪತಾಕೆಗಳನ್ನು ಹಿಡಿದು ನಿಂತಿರುವರು. ಅಲ್ಲದೆ ಇದರಿಂದ ಸಂತುಷ್ಟನಾಗುವ ಪರಶಿವನ ಅನುಗ್ರಹವನ್ನು ಸಹ ಯೋಚಿಸುತ್ತಿರುವರು. ॥೮೩॥

ದೇವಿಯೇ, ಇಷ್ಟು ವಿಜೃಂಭಣೆಯಿಂದ ಪೂಜೆಯನ್ನು ನಡೆಸುವಾಗ, ನಾನು ಆನಂದಪರವಶನಾಗುವೆನು. ಅಲ್ಲದೆ 'ಶಿವೋಹಂ' ಎಂಬ ಭಾವನೆಯಿಂದ ತನ್ನಲ್ಲಿ ಪರಬ್ರಹ್ಮಾಭೇದವನ್ನು ಅರಿತು ತನ್ಮೂಲಕವಾದ ಬ್ರಹ್ಮಾನಂದವನ್ನು ಪಡೆಯುವೆನು. ಪಾರ್ವತಿಯೇ, ಈ ಸಮಸ್ತ ಲೋಕವೆಲ್ಲಾ ನನ್ನ ಸ್ವರೂಪವೇ. ನನ್ನನ್ನು ಬಿಟ್ಟು ಬೇರೆ ಜಗತ್ತೇ ಇಲ್ಲ. ನನ್ನ ಸಂಕಲ್ಪವಶದಿಂದಲೇ ಈ ಚರಾಚರಾತ್ಮಕವಾದ ಜಗತ್ತು ಆವಿರ್ಭವಿಸಿದೆ. ಈ ನಿಶ್ಚಯದಿಂದಲೇ ನಾನು ಆ ಕಾಲದಲ್ಲಿ ಸೋಹಂಭಾವ ತಾಳಿ ಆನಂದದಿಂದಿರುವೆನು. ॥೮೪॥

ಮಯ್ಯೇವಾಗಸುತೇ ಲಯಂ ಪ್ರಯಾತಿ ನಿಖಿಲಂಚೈಕೋಽದ್ವ-
ಯೋಽಹಂ ಸದಾ ।
ನಾನೇತಿ ಪ್ರಸಭಂ ವದಂತಿ ನಿಗಮಾ ವಾಚಾಂ ಮನೋದೂರಗಂ ।
ಅನ್ಯಾನಂದಸಮಂ (ಅನ್ಯಾನಂದಮಮೇ) ಮದೀಯಮಮಲಂ
ಜಾನಂತಿ ನೋ ಯೋಗಿನೋ ।
ನೋ ವೇದಾ ಯತಯಸ್ಸುರಾಸುರಗಣಾ ವಿಷ್ಣ್ವಾದಯೋಽಪ್ಯಬ್ಜಜಾಃ ॥೮೫॥

ಜ್ಞಾನಂ ಜ್ಞೇಯಮಿದಂ ಜಗದ್ಗತಮುಮೇ ಜ್ಞಾತಾ ನ ಕಿಂಚಿತ್ಸ್ಥಿತಿ ।
ಭರ್ಗವಾಹಂ ಸುಖಧಾಮತೋ ಹಿ ಮಹತಾಂ ಹ್ರಸ್ವೋನ ಚಾಣುಸ್ಸ್ಥಿರಃ ।
ಸ್ವಾತ್ಮಾನಂದಮುಮೇ ಮಮಾಲ್ಪಕಮಿದಂ ಲಿಂಗೇಪ್ಯಲಿಂಗೋಽಸ್ಮ್ಯಹಂ ।
ಚಾಕಾಶಾದಿವಿದೂರಗಸ್ಥಿತಿಲಯೋತ್ಪತ್ತಿಷ್ವಸಂಗೋಽಸ್ಮ್ಯಹಂ ॥೮೬॥

---

ಈ ಸೃಷ್ಟವಾದ ಜಗತ್ತೆಲ್ಲಾ ನನ್ನಲ್ಲಿಯೇ ಕೊನೆಯಲ್ಲಿ ಲಯಹೊಂದುವುದು. ಆಗ ಬ್ರಹ್ಮ ಜಗತ್ತುಗಳಿಗೆ ಅಭೇದ ತೋರುವುದು. ಏಕತ್ವಬುದ್ಧಿಯುಂಟಾಗುವುದು. ಅದನ್ನೇ ವೇದಗಳು ನಾನಾರೀತಿಯಲ್ಲಿ ಉಪಪಾದನೆ ಮಾಡುತ್ತಿವೆ. ನಾನು ಮಾತಿಗೂ ಮನಸ್ಸಿಗೂ ಸಿಕ್ಕದವನು. ಪಾರ್ವತಿಯೇ, ಶುದ್ಧಾನಂದಸ್ವರೂಪಿಯಾದ ನನ್ನನ್ನು ಯೋಗಿಗಳೂ ಸರಿಯಾಗಿ ಅರಿಯಲಾರರು. ಅಲ್ಲದೆ ಯತಿಗಳೂ, ಸುರಾಸುರರೂ, ಬ್ರಹ್ಮವಿಷ್ಣ್ವಾದಿದೇವಶ್ರೇಷ್ಠರೂ ಸಹ ನನ್ನ ಸ್ವರೂಪವನ್ನು ಇನ್ನೂ ಪೂರ್ಣವಾಗಿ ಅರಿತವರಾಗಿಲ್ಲ. ॥೮೫॥

ದೇವಿಯೇ, ಜ್ಞಾನಜ್ಞೇಯರೂಪವಾದ ಈ ಜಗತ್ತನ್ನು ಸರಿಯಾಗಿ ತಿಳಿದವರು ಯಾರೂ ಇಲ್ಲ. ನಾನು ಸರ್ವವ್ಯಾಪಿಯು. ಸುಖಾಶ್ರಯನು. ಹ್ರಸ್ವನೂ ಅಲ್ಲ. ಅಣುವೂ ಅಲ್ಲ. ಸ್ಥಿರನಾದವನೂ ಅಲ್ಲ. ಕೇವಲ ಆನಂದಸ್ವರೂಪಿಯಾದವನು ನಾನು. ನಾನು ಈ ಲಿಂಗದಲ್ಲಿ ನೆಲಸಿರುವೆನಾದರೂ, ಲಿಂಗಸಂಬಂಧವು ನನಗೆ ಲೇಶವೂ ಇಲ್ಲ. ಆಕಾಶಾದಿಪಂಚಭೂತಗಳಿಗೆ ದೂರನೆನಿಸಿರುವವನು. ಉತ್ಪತ್ತಿ, ಸ್ಥಿತಿ, ಲಯಗಳಿಗೆ ಸಿಕ್ಕದಿರುವವನು ನಾನು. ಯಾವ ವಸ್ತುವಿನ ಸಂಸರ್ಗವೂ ನನಗಿರುವುದಿಲ್ಲ. ॥೮೬॥

ಇತ್ಯೇವಂ ಪರಮಾರ್ಥತಸ್ತ್ರಿಭುವನೇ ತಿಷ್ಠಾಮಿ ವಿಶ್ವಾತಿಗೋ ।
ಗೋಪ್ಯಂ ಮದ್ಧೃದಯಂ ಗಿರೀಂದ್ರತನಯೇ ತುಭ್ಯಂ ಮಯಾ ದರ್ಶಿತಂ।
ಇತ್ಯುಕ್ತ್ವಾ ಪರಮೇಶ್ವರಸ್ತ್ರಿಜಗತಾಂ ನಾಥೋಪಿ ವಿಶ್ವಾಕೃತಿ ।
ದೃಷ್ಟ್ವಾ ಲಿಂಗಮಪಾರಬಿಲ್ವಕುಸುಮೈಸ್ಸಂಪೂಜಿತಂ ಮಸ್ತಕೇ ॥೮೭॥

ದೃಷ್ಟ್ವಾ ತಾಮಗಜಾಂ ನನರ್ತ ಪರಮಾನಂದಪ್ರಸಾದೈಕಭೂಃ ।
ಕೈಲಾಸಾಚಲಮೌಲಿಮಂಟಪವರೇ ತಲ್ಲಿಂಗಸಾನ್ನಿಧ್ಯಕೇ ।
ಅಂಡಖಂಡನಮಹಾಘನಘೋಷ
ಶ್ಚಂಡತಾಂಡವಲಲದ್ವಿಧಿಮುಂಡಃ ।
ಕುಂಡಲೀಶಕೃತಕುಂಡಲಗಂಡ
ಸ್ತಂಡುಮಡ್ಡುನಿನದೋತ್ಥಲಯಾಂಘ್ರಿಃ ॥೮೮॥

---

ದೇವಿಯೇ, ಇದೇ ಪರಮಾರ್ಥವು. ಪ್ರಪಂಚವೇ ನಾನು. ಆದರೆ ಯಾವುದರ ಸಂಸರ್ಗವೂ ನನಗಿಲ್ಲ. ಆನಂದಮಯನಾದ ನಾನು ಜಗದಾತ್ಮನಾ ಪರಿಣತನಾಗುವೆನು. ಇದೇ ನನ್ನ ರಹಸ್ಯ. ಇದನ್ನು ನಿನಗೆ ಈಗ ವಿವರಿಸಿರುವೆನು. ಎಂದು ಹೇಳುತ್ತಾ ವಿಶ್ವಾತೀತನಾದರೂ ಶಂಕರನು ಲೋಕವ್ಯವಹಾರವನ್ನನುಸರಿಸಿ, ಶ್ರೇಷ್ಠವಾದ ಬಿಲ್ವದಳಗಳಿಂದಲೂ, ಪುಷ್ಪಸಮೂಹಗಳಿಂದಲೂ, ಶಿವಲಿಂಗವನ್ನು ಪೂಜಿಸಿದನು. ॥೮೭॥

ಅನಂತರದಲ್ಲಿ ಆನಂದಪರವಶನಾದ ಪರಮೇಶ್ವರನು ಪಾರ್ವತಿಯನ್ನು ನೋಡುತ್ತಾ, ಕೈಲಾಸೇಶ್ವರಲಿಂಗದ ಸನ್ನಿಧಿಯಲ್ಲಿ ದಿವ್ಯವಾದ ರಂಗಮಂಟಪದಲ್ಲಿ ನಾಟ್ಯವಾಡಲಾರಂಭಿಸಿದನು. ಒಡನೆಯೇ ಬ್ರಹ್ಮಾಂಡನಾಶಕಾಲದಲ್ಲಿ ಒದಗುವ ಮೇಘಗಳ ಗರ್ಜನೆಯೊಂದುಂಟಾಯಿತು. ಪರಶಿವನ ನಾಟ್ಯದಿಂದ ಅವನ ಕೈಯ್ಯಲ್ಲಿದ್ದ ಬ್ರಹ್ಮಕಪಾಲವು ಕುಣಿಯಲು ಆರಂಭವಾಯಿತು. ಭೂಮಿಯನ್ನು ಹೊತ್ತಿರುವ ಆದಿಶೇಷನ ತಲೆಯು ಅಲುಗಾಡಲಾರಂಭಿಸಿತು. ತಂಡುವೆಂಬ ಗಣಶ್ರೇಷ್ಠನು ಹೊಡೆಯುವ ಮದ್ದಲೆ ಮುಂತಾದ ವಾದ್ಯಧ್ವನಿಯನ್ನನುಸರಿಸಿ, ಪರಶಿವನ ಪಾದವಿನ್ಯಾಸವು ಶೋಭಿಸಲಾರಂಭಿಸಿತು. ॥೮೮॥

ನಂದಿಭೃಂಗಿಕೃತಡಿಂಡಿಮನಾದೈ ।
ರ್ಮಂಡಿತೋ ಹಿ ಶಿವಯಾ ಸ ಹಿ ರಂಗಃ ।
ಡುಂಡಿರಾಜಕೃತಶಂಖನಿನಾದೈ ।
ಸ್ತುಂಡಷಟ್ಕಕೃತತೂರ್ಯನಿನಾದೈಃ ॥೮೯॥

ಜಟಾಚ್ಛಟವಿಘರ್ಷಿತಾಃ ಪರಿಪತಂತಿ ತಾರಾಗಣಾ ।
ವಮಂತಿ ರುಧಿರಂ ಮುಖೈ ರ್ಭುವನನಾಗನಾಗಾನನಾಃ ।
ಜಗನ್ನಟನಸಂಭ್ರಮಾದ್ಭವತಿ ಹೇಲಯಾಂದೋಲಿತಂ ।
ಹರೀಂದ್ರವಿಧಯಸ್ಸುರಾ ಮುನಿಜನಾಸ್ಸಕಂಪಾಂಗಕಾಃ ॥೯೦॥

ಅಷ್ಟಾವಕ್ರಸುಗೀತಸಾಮಮುರಜೋಚ್ಚಂಡಪ್ರಚಂಡೋಲ್ಲಸ ।
ಡ್ಡಿಂಡೀಮಧ್ವನಿಮಡ್ಡುಮದ್ದಲಮಹಾಸಾಮಾಷ್ಟದಂಷ್ಟ್ರಾರವೈಃ ।
ಭ್ರಾಜತ್ಪದ್ಮಜಮುಂಡಷಂಡಜಮಹಾಮಾಲಾಲಸದ್ವಕ್ಷಸಂ ।
ಲೀಲಾಚಾಲಿತಹಸ್ತಕಂಕಣಮಹಾನಾಗೋರ್ಧ್ವಮೌಲೀಲಸತ್ ॥೯೧॥

---

ಶಿವನ ನಾಟ್ಯಕಾಲದಲ್ಲಿ ನಂದಿಯೂ, ಭೃಂಗಿಯೂ, ಡಿಂಡಿಮವಾದ್ಯಗಳನ್ನು ಬಾರಿಸುತ್ತಿದ್ದರು. ಪಾರ್ವತಿಯು ರಂಗಸ್ಥಳದಲ್ಲಿ ಮಂಡಿಸಿದ್ದಳು. ಗಣಪತಿಯು ಶಂಖಧ್ವನಿಮಾಡಿದನು. ಷಣ್ಮುಖನು ತುತ್ತೂರಿಯನ್ನೂದಿದನು. ॥೮೯॥

ಪರಶಿವನ ತಾಂಡವಕಾಲದಲ್ಲಿ ಅವನ ಜಟೆಯ ಹೊಡೆತದಿಂದ ಸಮಸ್ತ ನಕ್ಷತ್ರಗಳ ಗುಂಪೆಲ್ಲಾ ಚದುರಿಹೋಗಿ ಕೆಳಕ್ಕೆ ಬೀಳಲಾರಂಭಿಸಿದುವು. ಪರಮೇಶ್ವರನು ನಾಟ್ಯರಭಸದಲ್ಲಿಟ್ಟ ಪಾದತಲಾಘಾತವನ್ನು ತಡೆಯಲಾರದೆ, ಅಷ್ಟದಿಗ್ಗಜಗಳೂ, ಆದಿಶೇಷನೂ, ರಕ್ತವನ್ನು ಕಕ್ಕುತ್ತಿದ್ದರು. ಭೂಮಿಯು ತೂಗಾಡಲಾರಂಭಿಸಿತು. ಬ್ರಹ್ಮ, ವಿಷ್ಣು, ಇಂದ್ರ ಮೊದಲಾದ ದೇವಶ್ರೇಷ್ಠರೂ, ಮುನಿಜನರೂ, ಭಯದಿಂದ ನಡುಗಲಾರಂಭಿಸಿದರು. ॥೯೦॥

ಅಷ್ಟಾವಕ್ರನು ಮಧುರವಾಗಿ ಸಾಮಗಾನಮಾಡುತ್ತಿರುವನು. ಜೊತೆಯಲ್ಲಿ ಮದ್ದಲೆ, ಡಿಂಡಿಮ, ಮಡ್ಡು, ಮುರಜವಾದ್ಯಧ್ವನಿಗಳು ಬಹಳವಾಗಿ ಧ್ವನಿಗೈಯ್ಯುತ್ತಿರುವುವು. ಪರಮೇಶ್ವರನ ಎದೆಯ ಮೇಲೆ ಬಹಳ ಪ್ರಕಾಶಮಾನವಾದ ಹೂವಿನ ಸರವೂ, ರುಂಡಾಮಾಲೆಯೂ, ಕೈಯ್ಯಲ್ಲಿ ಬ್ರಹ್ಮನ ಕಪಾಲವೂ ಕಂಗೊಳಿಸುತ್ತಿ

(ರತ್ನಾಪ್ಲಾವಿತಕಾಂತಿರಂಜಿತದೃಶಂ ನೃತ್ಯಂತಮೈಕ್ಷಚ್ಛಿವಾ ।
ಚೋದ್ಯದ್ಭಾನುಮರೀಚಿಸನ್ನಿಭಜಟಾಸಾಮ್ರಾಜ್ಯಪಟ್ಟಾಯಿತಾ ।
ಲೋಲನ್ನೀಲಸುರತ್ನಪಂಕಜಲಸದ್ಗಂಗಾತರಂಗೋತ್ಥಿತಾ ।
ಪಾರಾವಾರಸುಧಾಘನೋತ್ಥನಟನಾಟೋಪಾ ಫಣೀಮಂಜುಲಂ ॥೯೨॥)

(ಇದರ ಪಾಠಾಂತರ ಹಸ್ತಲಿಖಿತಪ್ರತಿಯಲ್ಲಿ ಹೀಗಿದೆ)

ವರ್ಷಾಕಾಲಜಪಾಕಶಾಸನಸಮುತ್ಕೋದಂಡದಂಡಪ್ರಭಂ ।
ರತ್ನಾಪ್ಲಾವಿತಕಾಂತಿರಂಗಿತದೃಶಂ ನೃತ್ಯಂತಮೈಕ್ಷಚ್ಛಿವಾ ।
ಉದ್ಯದ್ಭಾನುಮರೀಚಿಸಂನಿಭಜಟಾಸಾಮ್ರಾಜ್ಯಪಾದಾರ್ಪಿತಾ ।
ಲೋಲಾನೀಲಸುರಕ್ತಪಂಕಜಲಸದ್ಗಂಗಾತರಂಗೋತ್ಥಿತಂ ॥

ಆನಮ್ರಾಖಿಲಲೋಕಜಾಲಮುಮಯಾ ಸದ್ರತ್ನರಂಗಾಂತರೇ ।
ನೃತ್ಯಂತಂ ದದೃಶುಸ್ಸರುದ್ರಗಣಪಾಃ ಕೈಲಾಸಮೌಲಿಸ್ಥಿತಂ ।
ಝುಲಂಝುಲಿತಕಂಕಣಂ ಪದವಲತ್ಕ್ವಣನ್ನೂಪುರಂ ।
ಕಿಣೀಕಿಣಿತಸಧ್ವನಿಂ ಸ್ಫಟಿಕರತ್ನಸನ್ಮೇಖಲಂ ॥೯೩॥

---

ರುವುವು. ನಾಟ್ಯರಭಸದಲ್ಲಿ ಕೈಬಳೆಯಂತಿರುವ ಆದಿಶೇಷನ ತಲೆಯು ಚಲಿಸುತ್ತಾ ಅವನ ಹೆಡೆಯ ಮೇಲಿರುವ ನಾಗರತ್ನವು ಸುಂದರವಾಗಿ ಹೊಳೆಯಲಾರಂಭಿಸಿತು. ॥೯೧॥

ತಾಂಡವೇಶ್ವರನ ನಾಟ್ಯಕಾಲದಲ್ಲಿ ಶಂಕರನ ದೇಹವು ವರ್ಷಋತುವಿನಲ್ಲಿ ಕಂಡುಬರುವ ಇಂದ್ರಧನುಸ್ಸಿನಂತೆ ಕಾಂತಿಮಯವಾಗಿತ್ತು. ರತ್ನಗಳ ಉತ್ತಮವಾದ ಕಾಂತಿಯಾಗರದಲ್ಲಿ ದೇಹವು ಮುಳುಗಿದೆಯೋ ಎಂಬಂತಿತ್ತು. ಶಂಕರನ ಜಟೆಯಾ ದರೋ ಉದಯಕಾಲದ ಸೂರ್ಯಕಿರಣದಂತೆ ಹೊಳೆಯುತ್ತಿತ್ತು. ಅಂತಹ ಜಟೆಯಲ್ಲಿ ಸುಖವಾಗಿ ನೆಲಸಿರುವ ದೇವಗಂಗೆಯು ಅರಳಿದ ಕಮಲಗಳಿಂದ ಮನೋ ಹರವಾಗಿ ತುಳುಕಾಡುತ್ತಿದ್ದಳು. ಆಗ ದೇವಗಂಗೆಯ ಅಲೆಗಳ ತುಂತುರುಗಳು ಸರ್ವತ್ರ ವ್ಯಾಪಿಯಾಗಿದ್ದುವು. ಹೀಗೆ ಸರ್ವಾಂಗಸುಂದರನಾದ ಪರಮೇಶ್ವರನನ್ನು ದೇವಿಯು ಆನಂದದಿಂದ ನೋಡಿದಳು. ॥೯೨॥

ಪರಶಿವನು ನಾಟ್ಯವಾಡುತ್ತಿರುವಾಗ ಭಕ್ತವೃಂದವೆಲ್ಲವೂ ಭಕ್ತಿನಮ್ರವಾಗಿ ನಿಂತಿದ್ದಿತು. ರತ್ನಮಯವಾದ ಪ್ರದೇಶದಲ್ಲಿ ಪಾರ್ವತಿಯು ನಿಂತು ಈ ನಾಟ್ಯಲಹರಿ

**ಘುಣಂಘುಣಕೃತಾರವಂ ಪದಗರತ್ನಮಂಜೀರಕೆಂ ।**
**ಚಟಚ್ಚಟರವೋತ್ಥಿತಪ್ರಪದಪದ್ಮಘೋಷಂ ಶಿವಂ ॥೯೪॥**

**ತೌರ್ಯತ್ರಿಕೋತ್ಥಿತಮಹಾರವಜಾತಘೋಷ ।**
**ಲೋಕತ್ರಯೋದ್ಗತಸುರಾಸುರಕಿನ್ನರೇಡ್ಯಂ ।**
**ಮಂದಸ್ಮಿತಾಖಿಲವಿಮೋಹನವೇಷಭೂಷಂ ।**
**ರಾಜಚ್ಛಶಾಂಕಮಹಸಾ ಧವಲೀಕೃತಾಶಂ ॥೯೫॥**

**ತಂ ನೀಲಲೋಹಿತಮುಮಾ ಜಗದಾದಿಹೇತುಂ ।**
**ನೃತ್ಯಂತಮಿಷ್ಟದಮುಪೈತಿ ಚ ತುಷ್ಟವಕ್ತ್ರಂ ।**
**ಅಷ್ಟಾಕೃತಿಂ ನಿಖಿಲಕಷ್ಟಹರಂ ಪ್ರದೋಷೇ ।**
**ಪಶ್ಯಚ್ಛಿವಾ ಸಕರುಣಾರಸಸಾರದೃಷ್ಟ್ಯಾ ॥೯೬॥**

---

ಯನ್ನು ನೋಡುತ್ತಿದ್ದಳು. ಕಂಕಣಧ್ವನಿಯು ಬಹಳ ಇಂಪಾಗಿತ್ತು. ಶಂಕರನ ಕಾಲಿನಲ್ಲಿದ್ದ ಬಳೆಗಳು ಕಿಣಕಿಣಧ್ವನಿಮಾಡುತ್ತಿದ್ದುವು. ಸ್ಫಟಿಕರತ್ನಗಳಿಂದ ನಿರ್ಮಿತವಾದ ಸೊಂಟದಪಟ್ಟಿಯಲ್ಲಿದ್ದ ಕಿರುಗೆಜ್ಜೆಗಳು ಝಣಝಣಾತ್ಕಾರ ಮಾಡುತ್ತಿದ್ದುವು. ಪಾದಾಗ್ರದಲ್ಲಿರುವ ಸಣ್ಣ ಗೆಜ್ಜೆಗಳು ಚಟಪಟಧ್ವನಿಮಾಡುತ್ತಾ ಕಾಲಿನ ಶಬ್ದವನ್ನು ಇಮ್ಮಡಿ ಮಾಡುತ್ತಿದ್ದುವು. ಇಂತಹ ನಾಟ್ಯೇಶ್ವರನಾದ ಶಂಭುವನ್ನು ರುದ್ರಗಣಗಳೂ, ಗಣಪತಿಯೇ ಮೊದಲಾದವರೂ ಆನಂದದಿಂದ ನೋಡುತ್ತಿದ್ದರು. ||೯೩-೯೪||

ಶಿವನರ್ತನಕಾಲದಲ್ಲಿ ಉಂಟಾದ ನೃತ್ಯ, ಗೀತ, ವಾದ್ಯಧ್ವನಿಗಳ ಐಕ್ಯತೆಯು ಲೋಕದಲ್ಲೆಲ್ಲಾ ಹರಡಿ, ಆದರಿಂದ ಪರಶಿವನ ನಾಟ್ಯವನ್ನು ಊಹೆಮಾಡಿದ ಸುರಾಸುರರಿಂದಲೂ, ಕಿನ್ನರರಿಂದಲೂ ಪೂಜಿತನಾದ ಪರಮೇಶ್ವರನನ್ನು ಪಾರ್ವತಿಯು ಸಂತೋಷದಿಂದ ನೋಡಿದಳು. ಅಲ್ಲದೆ ಪರಶಿವನ ಮುಗುಳ್ನಗೆಯ ಕಾಂತಿಯಿಂದ ಕೂಡಿದ ವೇಷಭೂಷಣಗಳು ಸರ್ವರನ್ನೂ ಮೋಹನಗೊಳಿಸತಕ್ಕವುಗಳಾಗಿದ್ದುವು. ಪ್ರಪಂಚವನ್ನೆಲ್ಲಾ ಬೆಳಗಿಸುವ ಚಂದ್ರಕಾಂತಿಯು ಈ ಪರಶಿವನ ದೇಹದಿಂದ ಹೊರಟು ಸಮಸ್ತದಿಕ್ಕುಗಳನ್ನೂ ಶುಭ್ರಕಾಂತಿಯುಳ್ಳವುಗಳನ್ನಾಗಿ ಮಾಡಿದ್ದಿತು. ||೯೫||

ಪರಮೇಶ್ವರನ ಕಂಠವಾದರೋ ನೀಲವರ್ಣವಿಶಿಷ್ಟವಾಗಿರುವುದು. ಚರಾಚರಾತ್ಮಕವಾದ ಜಗತ್ತಿಗೆಲ್ಲಾ ಮೂಲಕಾರಣನಾಗಿರುವ ಮಹೇಶ್ವರನು ಸಂತುಷ್ಟವಾದ ಮನ

ತಾಂ ವೀಕ್ಷ್ಯಾಗಸುತಾಂ ಸ್ಮಯನ್ನಿವ ಮಹಾದೇವಸ್ಸ ಕೈಲಾಸಭೂ ।
ಕೈಲಾಸೇಶ್ವರಪೂಜಯಾ ಸರಸಯಾ ಕಷ್ಟಾನಿ ಸಂಜಹ್ರಿವಾನ್ ।
ಲೋಕಾನಾಂ ಗಣಪಾತ್ಮನಾಮಥ ಉಮಾಂ ಪ್ರಾಹ ಪ್ರಸನ್ನಾನನಃ ।
ಪಶ್ಯಾಂಬೇತಿ ವದನ್ ಸದಾ ಶಿವತರೋರ್ಮೂರ್ಧ್ನೀಂದುಚೂಡಶ್ಶಿವಃ ॥೯೭॥

॥ ಈಶ್ವರ ಉವಾಚ ॥

ಕೈಲಾಸೇಶ್ವರಲಿಂಗಮೇತದಮಲಂ ಮುಕ್ತಿಪ್ರದಂ ಶಾಶ್ವತಂ ।
ಆಪಾತಾಲನಿಮಗ್ನಮೂಲಮಸಕೃತ್ಸಂಪೂಜಿತಂ ತನ್ಮಯಾ ।
ತಸ್ಯೋರ್ಧ್ವಾಮಲಮೌಲಿಮಪ್ಯಗಸುತೇ ಜಾನಂತಿ ನೈವಾಗಮಾ ।
ದೇವಾದ್ಯೈರ್ಮುನಿಭಿಸ್ತ್ವಯಾಪಿ ಚ ಮಯಾ ಕೋಽವಾಸ್ತಿ ತತ್ಪೂಜಕಃ ॥

---

ಸ್ಸುಳ್ಳವನಾಗಿ, ಭಕ್ತರ ಇಷ್ಟಗಳನ್ನು ಸಲ್ಲಿಸುವವನಾಗಿ ನರ್ತನಮಾಡುತ್ತಿರುವನು. ಶಿವನ ದೇಹವು ಅಷ್ಟಮೂರ್ತ್ಯಾತ್ಮಕವಾದದ್ದು. ಸಕಲ ಕಷ್ಟಗಳನ್ನೂ ನಿವಾರಿಸ ತಕ್ಕದ್ದು. ಇಂತಹ ಮಹಾಮಹಿಮವಾಗಿ ದಿವ್ಯಸುಂದರವಾಗಿರುವ ಪರಮೇಶ್ವರನ ನಾಟ್ಯವನ್ನು ಕರುಣಾರಸರಾಗಭರಿತವಾದ ನೋಟದಿಂದ ಪಾರ್ವತಿಯು ನೋಡಿದಳು. ॥೯೬॥

ಹಾಗೆ ಭಕ್ತಿಯಿಂದ ತನ್ನನ್ನು ನೋಡುತ್ತಿರುವ ಪಾರ್ವತಿಯನ್ನು ನೋಡಿ ಶಂಕರನು ಮುಗುಳ್ನಗೆ ನಗುತ್ತಾ ಹೀಗೆ ಹೇಳಿದನು. ಅಲ್ಲದೆ ತಾನು ಮಾಡಿದ ಕೈಲಾ ಸೇಶ್ವರಪೂಜೆಯ ಫಲವಾಗಿ ಭಕ್ತರಿಗೂ, ಸತ್ಪುರುಷರಿಗೂ ಒದಗುವಂತಹ ಕಷ್ಟಗಳನ್ನು ನಿವಾರಿಸುವ ಶಕ್ತಿಯು ಪರಮೇಶ್ವರನಿಗೆ ಒದಗಿತಾದ್ದರಿಂದಲೇ, ಶಂಕರನು ಪಾರ್ವತಿ ಯೊಡನೆ ವಿಶ್ವಾಸದಿಂದ "ಲೋಕಜನನಿಯೇ ಕೇಳು" ಎಂದು ಪ್ರಾರಂಭಿಸಿ ಮುಂದೆ ಹೇಳುವಂತೆ ಹೇಳಿದನು. ॥೯೭॥

ಪಾರ್ವತಿಯೇ, ಈ ಕೈಲಾಸೇಶ್ವರಲಿಂಗವು ಬಹಳ ಪವಿತ್ರವಾದದ್ದು. ಶಾಶ್ವತ ವಾದ ಮುಕ್ತಿಯನ್ನು ಅನುಗ್ರಹಿಸತಕ್ಕದ್ದು. ಇದರ ಬುಡವು ಪಾತಾಲಲೋಕ ಪರ್ಯಂತವಾಗಿ ವ್ಯಾಪಿಸಿದೆ. ಇಂತಹ ದಿವ್ಯಲಿಂಗವನ್ನು ನಾನು ಅನೇಕಸಾರಿ ಪೂಜಿಸಿರು ವೆನು. ಯಾವ ವೇದಗಳಿಗೂ, ದೇವತೆಗಳಿಗೂ, ಋಷಿಗಳಿಗೂ, ನಿನಗೂ, ನನಗೂ ಸಹ ಇದರ ಅಗ್ರಭಾಗವು ಗೋಚರಿಸುವಂತಿಲ್ಲ. ಹೀಗಿರುವಾಗ ಈ ಲಿಂಗವನ್ನು ದೃಢಮನಸ್ಸಿನಿಂದ, ಇದರ ತತ್ತ್ವವನ್ನರಿತು ಪೂಜಿಸುವವರು ಯಾರು? ॥೯೮॥

**(ಪೂಜಾಪೂಜಕಪೂಜ್ಯಶಬ್ದರಹಿತಂ ತತ್ಕೇವಲೋಽಹಂ ಶಿವ ।**
**ಸ್ತಲ್ಲಿಂಗಂ ವರದಂ ಸದಾಶಿವಮಯಂ ಮಚ್ಛೈಲರಾಜೇ ಶಿವೇ ।)**

(ಒಂದು ಪ್ರತಿಯಲ್ಲಿ ಮಾತ್ರ ಇದು ಹೆಚ್ಚಾಗಿದೆ)

**ಸಚ್ಚಿದ್ಬ್ರಹ್ಮಘನಂ ಸದಾಘನತರಾನಂದಪ್ರಕಾಶಾನ್ವಿತಂ ।**
**ಯತ್ತತ್ಕಾರಣಕಾರಣಂ ಪ್ರಣವಸನ್ನಾಮಾಕ್ಷರಂ ಚೇಶ್ವರಂ ॥**
**ವಾರಂ ವಾರಮುಪಾರವಾರಣಮಿದಂ ತತ್ತ್ವಂ ಪರಂ ಯೋಗಿನಾಂ ।**
**ಪೂಜಾಪೂಜಕಪೂಜ್ಯಶಬ್ದರಹಿತಂ ತತ್ಕೇವಲೋಽಹಂ ಶಿವಃ ॥೯೯॥**

**ತಥಾಪಿ ತಲ್ಲಿಂಗವರಂ ಸದಾಶಿವಂ ಚಕಾಸ್ತಿ ಮಚ್ಛೈಲವತೇ ಸದಾಂಬಿಕೇ ।**
**ತದ್ದರ್ಶನಾರ್ಥಂ ಮುನಯಸ್ಸುರಾಸುರಾ ।**
**ಸ್ತಪ್ಯಂತಿ ಚಾದ್ಯಾಪಿ ಜರಾಯುವಿಪ್ಲವಾಃ ॥೧೦೦॥**

---

ಈ ಕೈಲಾಸೇಶ್ವರ ಲಿಂಗವು ಸಚ್ಚಿದಾನಂದಾತ್ಮಕವಾದದ್ದು. ಭಕ್ತರ ಮನಸ್ಸಿನಲ್ಲಿ ಸರ್ವದಾ ಉತ್ತಮವಾದ ಆನಂದವನ್ನುಂಟುಮಾಡತಕ್ಕದ್ದು. ಯತ್ತಚ್ಛಬ್ದಗಳಿಂದ ತೋರಿಬರುವ ಕಾರ್ಯಕಾರಣರೂಪವಾಗಿರತಕ್ಕದ್ದೇ ಈ ಲಿಂಗವು. ಪ್ರಣವವೆಂಬ ಶ್ರೇಷ್ಠವಾದ ಮಂತ್ರಾತ್ಮಕವಾಗಿರುವುದರಿಂದ ತತ್ತ್ವಜ್ಞಾನಿಗಳಾದ ಯೋಗಿಗಳು ಪದೇ ಪದೇ ಈ ಲಿಂಗಸ್ವರೂಪವನ್ನೇ ಧ್ಯಾನಮಾಡಿ ಅದರಿಂದ ತಮ್ಮ ಅಂತರಂಗಗತವಾದ ಪಾಪಗಳನ್ನು ಕಳೆದುಕೊಂಡಿರುವರು. 'ಶಿವೋಽಹಂ' ಎಂಬ ಬುದ್ಧಿಯಿಂದ ಈ ಲಿಂಗಸ್ವರೂಪದಲ್ಲಿ ಲೀನನಾದವನಿಗೆ ಪೂಜೆ, ಪೂಜಕ, ಪೂಜ್ಯಲಿಂಗ ಇವುಗಳಿಗೆ ಪರಸ್ಪರವಾದ ಯಾವ ಭೇದವೂ ಇರುವುದಿಲ್ಲ. ಅಂದರೆ ಶಿವಸಾಯುಜ್ಯವನ್ನು ಪಡೆಯಬೇಕಾದರೆ ಏತಾದೃಶಕೈಲಾಸಲಿಂಗಾತ್ಮನಾಪರಿಣತನಾಗಿ ಜ್ಞಾನಿಯಾಗಬೇಕು. ॥೯೯॥

ಹಾಗಿದ್ದರೂ ಇಂತಹ ದಿವ್ಯಮಂಗಳಪ್ರದವಾದ ಈ ಕೈಲಾಸಲಿಂಗವು ನನ್ನ ಆಶ್ರಯಸ್ಥಾನವಾದ ಕೈಲಾಸಪರ್ವತದಲ್ಲಿ ಸರ್ವದಾ ನೆಲಸಿರತಕ್ಕದ್ದಾಗಿದೆ. ಈ ದಿವ್ಯಲಿಂಗದರ್ಶನಾರ್ಥವಾಗಿ ಅನೇಕಮಹರ್ಷಿಗಳೂ, ದೇವದಾನವರೂ, ತಮ್ಮ ಆಯುಸ್ಸನ್ನು ಕಳೆಯುತ್ತಾ ಉಗ್ರವಾದ ತಪಸ್ಸನ್ನಾಚರಿಸುತ್ತಿರುವರು. ॥೧೦೦॥

|| ದೇವ್ಯುವಾಚ ||

ತ್ವಯಾಪಿ ನ ಜ್ಞಾಯತ ಇತ್ಯಹೋ ಮೇ ।
ಸಾಶ್ಚರ್ಯಮುಕ್ತಂ ಹಿ ತ್ವಯಾ ಸದಾಶಿವ ।
ತವಾಪಿ ತತ್ಕಿಂ ಕೃತಲಿಂಗಪೂಜಯಾ
ರಹಸ್ಯಮೇತನ್ಮಮ ತದ್ವದ ಪ್ರಭೋ ॥೧೦೧॥

ಇತ್ಯುಕ್ತಂ ಗಿರಿಜಾಮನೋಹರವಚಶ್ಶ್ರುತ್ವಾ ಪ್ರಹಸ್ಯಾಂಬಿಕಾಂ ।
ಲೋಕಂ ಸೃಷ್ಟ್ವಮಥಾತ್ತಿ ಪಾತಿ ಸುತರಾಂ ತತ್ಪಾಲಕಶ್ಶಂಕರಃ ।
ವಾಚಾ ಚಂದನಶೀತಯಾ ಸುಖಕರಶ್ಶಿತಾಂಶುಧಾರೀ ಶಿವಃ ।
ಪ್ರಾಹೋತ್ಫುಲ್ಲಮನೋಹರಾಬ್ಜವದನೋ ದೇವೀಂ ತದಾ
ಭೂತಪಃ ॥೧೦೨॥

|| ಈಶ್ವರ ಉವಾಚ ||

ನ ಕರ್ಮಣಾ ನೈವ ಸಮಾಧಿಭಿರ್ಜಪೈ ।
ಸ್ತಪಸ್ಯಯಾ ವಾ ವಿವಿಧೈಶ್ಚ ಯಜ್ಞೈಃ ।

---

ಎಂದು ಪರಮೇಶ್ವರನು ಹೇಳಿದ ಮಾತುಗಳನ್ನು ಕೇಳಿ ದೇವಿಯು "ಸ್ವಾಮಿಯೇ, ಈ ಲಿಂಗದ ರಹಸ್ಯವು ನಿನಗೂ ಸರಿಯಾಗಿ ಗೊತ್ತಿಲ್ಲವೆಂದು ಹೇಳಿದೆಯಷ್ಟೆ. ಹಾಗಿರುವಾಗ ಇಷ್ಟು ಹೊತ್ತೂ ಈ ಲಿಂಗಪೂಜೆಯನ್ನು ಮಾಡಿದುದು ಏಕೆ ? ಇದರಿಂದ ಬರುವ ಫಲವೇನು ? ಈ ರಹಸ್ಯವನ್ನು ನನಗೆ ಕರುಣೆಯಿಂದ ಅನುಗ್ರಹಿಸು.'' ||೧೦೧||

ಹೀಗೆಂದು ಕೇಳಿ ಶಂಕರನು ನಗುತ್ತಾ ಮೃದುಮಧುರವಾದ ಮಾತಿನಿಂದ ದೇವಿಯನ್ನು ಕುರಿತು ಹೀಗೆ ಹೇಳಿದನು. ಕರುಣಾಮಯನಾದ ಶಂಕರನು ಲೋಕಗಳ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನಾಗಿ, ಸರ್ವರಿಗೂ ಆನಂದವನ್ನುಂಟುಮಾಡುವ ಚಂದ್ರನನ್ನು ತಲೆಯಲ್ಲಿ ಧರಿಸಿರುವವನಲ್ಲವೇ ? ಅಂತಹ ಪರಶಿವನ ಮಧುರವಾಣಿಯು ಯಾರಿಗೆ ತಾನೇ ಸುಖಕರವಾಗಿರಲಾರದು ? ||೧೦೨||

ಅನಂತರ ಶಂಕರನು ದೇವಿಗೆ ಹೇಳಿದ್ದೇನೆಂದರೆ, "ಎಲೌ ಗಿರಿಜೆಯೇ, ನಿಜವಾಗಿಯೂ ನನ್ನ ಸಾಯುಜ್ಯವನ್ನು ಹೊಂದಲಪೇಕ್ಷೆಯುಳ್ಳವರು ಮತ್ತಾವ

ಪ್ರತ್ಯೈಶ್ಚ ದಾನೈರ್ನಿಯಮೈರ್ಮನೋಶ್ವರಿ ।
ಪ್ರಾಪ್ನೋತಿ ಕಿಂ ಮತ್ಪದಪೂಜನಂ ವಿನಾ ॥೧೦೩॥

ತಸ್ಮಾದಹಂ ಲಿಂಗವರಂ ಸದಾ ಮುದಾ ।
ಸಂಪೂಜಯಾಮೀಷ್ಟದಮೇವ ಲೋಕಾನ್ ।
ಸಂಶಿಕ್ಷಿತುಂ ಕಾರ್ಯಮಿದಂ ವಿಮುಕ್ತ್ಯೈ ।
ಸರ್ವಾರ್ಥದಂ ಚೇತಿ ಮತಂ ಮುದೇ ಮಮ ॥೧೦೪॥

ಧ್ಯಾಯಾಮಿ ತದ್ವೇದಶಿರೋಽಧಿಗಮ್ಯ
ಮೋಂಕಾರಗಮ್ಯಂ ಪರಮಾರ್ಥತತ್ತ್ವಂ ।
ಸತ್ಯಂ ಶಿವಂ ಜ್ಞಾನಸುಖಂ ಸುಬೋಧಂ ।
ನಿರ್ದ್ವಂದ್ವಮದ್ವೈತಮನಂತರೂಪಂ ॥೧೦೫॥

---

ಕರ್ಮಗಳನ್ನೂ ಮಾಡಬೇಕಾಗಿಲ್ಲ. ಚಿತ್ತನಿರೋಧರೂಪವಾದ ಸಮಾಧಿಯಾಗಲಿ, ಜಪಗಳಾಗಲಿ, ತಪಸ್ಸಾಗಲಿ, ವಿಧವಿಧವಾದ ಯಜ್ಞಗಳಾಗಲಿ, ಇನ್ನೂ ಕಾಮ್ಯವ್ರತ, ದಾನ, ನಿಯಮಗಳಾಗಲಿ ಕಾರ್ಯಕಾರಿಯಾಗಲಾರವು. ಭಕ್ತಿಯಿಂದ ನನ್ನ ಪಾದದ ಪೂಜೆಯನ್ನು ಮಾಡಿದರೆ ಸಾಕು. ಅಂತಹವರು ನಿಜವಾಗಿಯೂ ನನ್ನ ಸನ್ನಿಧಿಯನ್ನು ಸುಲಭವಾಗಿ ಹೊಂದುವರು. ॥೧೦೩॥

ಆದ್ದರಿಂದಲೇ ನಾನು ಸಕಲರ ಇಷ್ಟಾರ್ಥವನ್ನೂ ಸಲ್ಲಿಸುವ ಈ ದಿವ್ಯಲಿಂಗವನ್ನು ಪೂಜಿಸುತ್ತಿರುವೆನು. ಇದನ್ನು ನೋಡಿಯಾದರೂ ಜನರು ಲಿಂಗಾರ್ಚನೆಯಲ್ಲಿ ತೊಡಗಿ, ತನ್ಮೂಲಕವಾಗಿ ನಿತ್ಯಾನಂದವನ್ನು ಪಡೆಯಲಿ ಎಂಬುದೇ ನಾನು ಈಗ ಮಾಡುತ್ತಿರುವ ಪೂಜೆಯ ಉದ್ದೇಶ. ॥೧೦೪॥

ಶಿವಲಿಂಗವು ವೇದಕ್ಕೆ ಶಿರಸ್ಸಿನಂತಿರುವ ಪ್ರಣವಮಂತ್ರದಿಂದ ಗಮ್ಯವಾಗತಕ್ಕದ್ದು. ಓಂಕಾರಾರ್ಥವೇ ಲಿಂಗಜ್ಞಾನವು. ಪರಮಾರ್ಥತತ್ತ್ವವನ್ನು ತೋರ್ಪಡಿಸತಕ್ಕದ್ದೇ ಶಿವಲಿಂಗವು. ಸತ್ಯರೂಪವಾಗಿ, ಮಂಗಳಪ್ರದವಾಗಿ, ಸುಖ, ಜ್ಞಾನ, ಏತದ್ರೂಪವಾಗಿರುವ ವಸ್ತುವೆಂದರೆ ಶಿವಲಿಂಗವೊಂದೇ. ಇದು ಸಜಾತೀಯವಾದ ದ್ವಿತೀಯವಸ್ತುರಹಿತವಾದದ್ದು. ಏಕರೂಪಿಯು. ಆದರೂ ಮಾಯಾಸಂಬಂಧದಿಂದ ನಾನಾರೂಪವಾಗಿ ತೋರತಕ್ಕದ್ದು. ॥೧೦೫॥

ಏಕಂ ಸ್ಥಿರಂ ಶಾಶ್ವತಮವ್ಯಯಂತತ್ ।
ಪ್ರಾಕ್ ಸೃಷ್ಟಿತೋ ವಿಶ್ವಮಿದಂ ನ ಯತ್ರ ।
ಸಂವೀಕ್ಷಿತಂ ತತ್ಪುನರುದ್ಬಭೂವ ।
ತದೇವ ಜಾಯೇ ಹೃದಿ ಭಾವಯಾಮಿ ॥೧೦೬॥

ಯಸ್ಮಾತ್ಪರಂ ನಾಪರಮಸ್ತಿ ಕಿಂಚಿತ್ ।
ಯಸ್ಮಾದ್ಗರೀಯೋ ನ ಹಿ ಕಿಂಚಿದಸ್ತಿ ।
ಯೇನೈವ ಪೂರ್ಣಂ ಪರಿದೃಶ್ಯಮಾನಂ ।
ವಿಶ್ವಂ ತದೇವಾದ್ಯ ವಿಭಾವಯಾಮಿ ॥೧೦೭॥

ಇತ್ಯುಕ್ತ್ವಾ ಗಿರಿಜಾಂ ಮಹಾಶಿವತರೋ ಧ್ಯಾಯನ್ ಭವಸ್ಸ್ಥಾಣುವ ।
ನ್ನಿರ್ವ್ಯಾಪಾರತರಂಗಸಾಗರ ಇವಾಪ್ಯಕ್ಷುಬ್ಧಗಾತ್ರಶ್ಶಿವಃ ।
ದೇವೀ ಚಾಪಿ ಮುಮೋದ ಹರ್ಷಭರಿತಾನಂದಾಂಗಕಾಸ್ತೇ ಗಣಾ ।
ಶ್ಚೇತ್ಥಂ ತಸ್ಯ ಸುಪೂಜನಂ ಮುನಿವರಾಸ್ಸತ್ಯಂ ವದಾಮಿ ಸ್ಫುಟಂ ॥೧೦೮॥

---

ಈ ಕೈಲಾಸೇಶ್ವರಲಿಂಗವು ಸ್ಥಿರವಾದದ್ದು. ಶಾಶ್ವತವಾದದ್ದು. ಇದಕ್ಕೆ ಎಂದೂ ನಾಶವಿಲ್ಲ. ಸೃಷ್ಟಿಗೆ ಮುಂಚೆಯೂ ಇತ್ತು. ಪ್ರಪಂಚವು ನಷ್ಟವಾದ ಮೇಲೂ ಇರುವುದು. ಮೊದಲು ಇದನ್ನು ನೋಡಿದ್ದರಿಂದ ಇದು ಈಗ ಉತ್ಪತ್ತಿ ಯಾಯಿತೆಂಬ ಭಾವನೆ ಬರುವುದೇ ಹೊರತು, ಇದಕ್ಕೆ ಆದಿಯಿಲ್ಲ. ಆದ್ದರಿಂದಲೇ ದೇವಿಯೇ ಈ ಲಿಂಗವನ್ನು ನಾನು ಪೂಜಿಸುತ್ತಿರುವೆನು. ॥೧೦೬॥

ಲೋಕದಲ್ಲಿ ಇದಕ್ಕಿಂತ ಬೇರೆಯಾದ ವಸ್ತು ಮತ್ತೊಂದಿಲ್ಲ. ಇದಕ್ಕಿಂತ ದೊಡ್ಡದಾದದ್ದೂ ಬೇರೊಂದಿಲ್ಲ. ಈ ಎದುರಿಗೆ ಗೋಚರಿಸುತ್ತಿರುವ ಜಗತ್ತಿನಲ್ಲೆಲ್ಲಾ ಪೂರ್ಣವಾಗಿ ಹರಡಿರತಕ್ಕದ್ದು ಇದೇ ಲಿಂಗವು. ಜಗತ್ತೇ ಇದು. ಇದರ ವಿಕಾರವೇ ಜಗತ್ತು ಎಂಬ ಭಾವನೆಯಿಂದ ನಾನು ಇದನ್ನು ಸೇವಿಸುತ್ತಿರುವೆನು. ॥೧೦೭॥

ಹೀಗೆ ಹೇಳಿ ಮಹೇಶ್ವರನು ಆ ಪರಬ್ರಹ್ಮರೂಪಿಯಾದ ಕೈಲಾಸೇಶ್ವರಲಿಂಗ ವನ್ನೇ ಸ್ಮರಿಸುತ್ತಾ ಸ್ಥಾಣುವಿನಂತೆ ನಿಶ್ಚಲವಾಗಿ ನಿಂತುಬಿಟ್ಟನು. ಆಗ ಶಂಕರನು ನಿಶ್ಚಲವಾದ ದೊಡ್ಡ ಸಮುದ್ರದಂತೆ ಕಾಣುತ್ತಿದ್ದನು. ಅಂಗಾಂಗಗಳೆಲ್ಲವೂ ಸ್ಥಿರ ವಾಗಿದ್ದು ಮನಸ್ಸು ಸಮಾಧಿಯಲ್ಲಿ ಅಡಗಿತು. ಇದನ್ನು ಕಂಡು ದೇವಿಯು ಮತ್ತೂ ಆನಂದಭರಿತಳಾದಳು. ಇಂತಹ ದೃಶ್ಯವನ್ನು ನೋಡಿದ ರುದ್ರಗಣಗಳೆಲ್ಲವೂ ಆನಂದಾ

**ಭಕ್ತ್ಯೈತಚ್ಛ್ರವಣಾತ್ ಪ್ರಕಿಲ್ಬಿಷಹರಂ ಚಾನೇನ ಸನ್ಮುಕ್ತಿ ।**
**ಮುಪ್ಯಂತೇ ಪ್ರಾಪ್ಯತ ಏವ ನಾತ್ರ ವಿಷಯಃ ಸತ್ಯಂ ವದಾಮಿ ಸ್ಫುಟಂ॥೧೯॥**

**ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ಕೈಲಾಸೇಶ್ವರಪ್ರದೋಷ ಪೂಜಾವರ್ಣನಂ ನಾಮ ತ್ರಯೋದಶೋಽಧ್ಯಾಯಃ**

---

ಬ್ಧಿಯಲ್ಲಿ ಮುಳುಗಿದವರಾಗಿ ಧನ್ಯರೆನಿಸಿದರು. ಎಲೈ ಜೈಗೀಷವ್ಯಾದಿ ಮಹರ್ಷಿಗಳೇ, ಹೀಗೆ ಮಹೇಶ್ವರನು ಕೈಲಾಸಪರ್ವತದಲ್ಲಿ ಕೈಲಾಸೇಶ್ವರಲಿಂಗವನ್ನು ಪ್ರದೋಷಕಾಲ ದಲ್ಲಿ ಅರ್ಚಿಸುವನು. ಇದು ಸತ್ಯವಾದದ್ದು. ||೧೮||

ಶಂಕರನು ಪಾರ್ವತಿಗೆ ತಾನು ಮಾಡುವ ಪೂಜಾವಿಧಾನವನ್ನು ಎದುರಿಗೆ ತೋರ್ಪಡಿಸಿ ಮತ್ತು ಈಶ್ವರಪೂಜಾಕ್ರಮದ ವರ್ಣನೆಯನ್ನು ವಿವರಿಸಿ, ಸುಮ್ಮನಾದನು. ಎಲೈ ಜೈಗೀಷವ್ಯಾದಿಗಳೇ, ಇದನ್ನು ಕೇಳಿದವರು ತಮ್ಮ ಸಕಲ ಪಾಪಗಳನ್ನು ಕಳೆದುಕೊಳ್ಳುವರು. ಇದರಂತೆ ಪೂಜಿಸಿದವರು ಸನ್ಮುಕ್ತಿಯನ್ನು ಹೊಂದುವರು. ಇದರಲ್ಲಿ ಸಂಶಯವಿಲ್ಲ. ||೧೯||

ಇಲ್ಲಿಗೆ ಶಿವರಹಸ್ಯದ ಪ್ರಥಮಾಂಶದಲ್ಲಿ ಕೈಲಾಸೇಶ್ವರ ಪ್ರದೋಷಪೂಜಾವರ್ಣನೆ ಯೆಂಬ ಹದಿಮೂರನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

# ಅಥ ಶ್ರೀಶಿವರಹಸ್ಯೇ

## ಚತುರ್ದಶೋಽಧ್ಯಾಯಃ

|| ಮುನಿದೇವಗಣಾ ಊಚುಃ ||

ಕುಮಾರಮಾರಸಂಕಾಶ ಮಾರಮಾರಾಂಗಸಂಭವ ।
ಉಮಾರಮಣಪಾದಾಬ್ಜಧ್ಯಾನಮಾರಿತಪಾತಕ ||೧||

ಅಸುರಾರಿಮಹಾಶೂರತಾರಕಾಸುರಸಂಹೃತೇ ।
ತ್ವತ್ತಶ್ಶ್ರುತಮಶೇಷೇಣ ಕೈಲಾಸೇಶ್ವರಪೂಜನಂ ||೨||

ಭವದ್ವಕ್ತ್ರೋತ್ಥಿತಶಿವಕಥಾನಂದಿತಮಾನಸಾಃ ।
ನಿರ್ಧೂತಪಾತಕಾ ಜಾತಾ ಧನ್ಯಾಃ ಪಾವನಪಾವನಾಃ ||೩||

---

## ಶ್ರೀಶಿವರಹಸ್ಯದಲ್ಲಿ ಹದಿನಾಲ್ಕನೆಯ ಅಧ್ಯಾಯ

ಶಿವರಹಸ್ಯವನ್ನು ಕೇಳಲಪೇಕ್ಷೆಯುಳ್ಳ ಸಕಲ ಮುನಿಗಳೂ, ದೇವತಾ ಗಣಗಳೂ, ಸ್ಕಂದಸ್ವಾಮಿಯನ್ನು ಕುರಿತು ಹೀಗೆ ಕೇಳಿಕೊಂಡರು. "ಸ್ವಾಮಿಯೇ, ನೀನು ಸೌಂದರ್ಯದಲ್ಲಿ ಮನ್ಮಥನಿಗೆ ಸದೃಶನಾಗಿರುವೆ. ಆದರೆ ಮನ್ಮಥನನ್ನು ನಾಶ ಮಾಡಿದ ಪರಶಿವನ ಪುತ್ರನಾಗಿರುವೆ. ಪಾರ್ವತೀಪತಿಯಾದ ಶಂಕರನ, ಪಾದಕಮಲ ಧ್ಯಾನದಿಂದ ನೀನು ಸಮಸ್ತ ಪಾಪಗಳನ್ನೂ ಕಳೆದುಕೊಂಡಿರುವೆ. ||೧||

ಎಲೈ ಕುಮಾರಸ್ವಾಮಿಯೇ, ರಾಕ್ಷಸರಲ್ಲಿ ಅತ್ಯಂತ ಶೂರನೆನಿಸಿದ ತಾರಕಾ ಸುರನನ್ನು ಕ್ಷಣಮಾತ್ರದಲ್ಲಿ ನೀನು ಧ್ವಂಸಮಾಡಿದೆಯಲ್ಲವೇ? ನಿನ್ನ ಮುಖ ದಿಂದಲೇ ನಾವು ಇಲ್ಲಿನವರೆಗೂ ಈಶ್ವರನು ಮಾಡುವ ಕೈಲಾಸೇಶ್ವರ ಪೂಜಾವಿಧಾನ ವನ್ನು ತಿಳಿದುಕೊಂಡವರಾದೆವು. ||೨||

ನಿನ್ನ ಬಾಯಿಂದ ಹೊರಟ ಶಿವಕಥೆಯನ್ನು ಕೇಳಿ ನಾವು ಹರ್ಷಚಿತ್ತರಾಗಿ ದ್ದೇವೆ. ನಮ್ಮ ಪಾಪವೆಲ್ಲಾ ನಾಶವಾಯಿತು. ನಿಜವಾಗಿಯೂ ಈಗ ನಾವು ಅತ್ಯಂತ ಧನ್ಯರೆನಿಸಿ ಪವಿತ್ರರಾಗಿರುವೆವು. ||೩||

ಪುನಶ್ಶಿವಕಥಾಸಿಂಧುತರಂಗೋದ್ಯತಮಾನಸಾನ್ ।
ಕುರುಷ್ವ ತ್ರಿಪುರಾರಾತಿವರಪುತ್ರಾತುಲಪ್ರಭ ॥೪॥

ಇತ್ಥಂ ದೇವೈಶ್ಚ ಮುನಿಭಿರ್ಗಣೇಂದ್ರೈಃ ಪ್ರಾರ್ಥಿತಸ್ತದಾ ।
ಕುಮಾರಃ ಪ್ರಾಹ ತಾನ್ ಧನ್ಯಾನ್ ಜೈಗೀಷವ್ಯಂ ಪುರಸ್ಸ್ಥಿತಂ ॥೫॥

ಪರಿಣತಹಿಮಧಾಮಕಾಂತವಕ್ತ್ರ
ಸ್ಸ್ಫುಟಪದ್ಮೋಪಮಲೋಚನೋ ನಗಾರಿಃ ।
ನವಚಂಪಕಕುಟ್ಮಲಾಭನಾಸಃ
ಕುರುವಿಂದಾಭರದೋ ಬಭಾಣ ವಿಪ್ರಂ ॥೬॥

ಪರ್ಣಾದಾ ಮುನಯಸ್ಸರ್ವೇ ಚಾಪರ್ಣಾಪತಿವೈಭವಂ ।
ತೂರ್ಣಮಭ್ಯರ್ಣಗಾಸ್ಸರ್ವೇ ಸಮಾಕರ್ಣಯತಾಧುನಾ ॥೭॥

---

ನೀನು ತ್ರಿಪುರಾರಾತಿಯಾದ ಪರಶಿವನಿಗೆ ವರಪುತ್ರನಾಗಿರುವೆ. ಆದ್ದರಿಂದ ಪುನಃ ನಾವು ಶಿವಕಥೆಯೆಂಬ ಸಮುದ್ರದ ಅಲೆಯಲ್ಲಿ ತೇಲಾಡುವಂತೆ ಮಾಡು. ಅಂದರೆ ಶಿವಸಂಬಂಧವಾದ ಕಥೆಗಳನ್ನು ನಮಗೆ ವಿವರಿಸಿ ಹೇಳು." ಎಂದು ಪ್ರಾರ್ಥಿಸಿಕೊಂಡರು ||೪||

ಹೀಗೆ ಸಕಲ ಋಷಿಗಳಿಂದಲೂ, ಗಣನಾಯಕರಿಂದಲೂ ಸ್ತುತ್ಯನಾದ ಕುಮಾರಸ್ವಾಮಿಯು ಸಂತುಷ್ಟನಾಗಿ, ಎದುರಿನಲ್ಲಿ ಕುಳಿತಿದ್ದ ಜೈಗೀಷವ್ಯಾದಿ ಸಕಲ ಮುನಿಗಳಿಗೂ ಸ್ಪಷ್ಟವಾಗಿ ತಿಳಿಯುವಂತೆ ವಕ್ತವ್ಯಾಂಶವನ್ನು ಮುಂದುವರಿಸಿದನು. ||೫||

ಶುಭ್ರವಾದ ಹಿಮಾಲಯದಂತೆ ಮನೋಹರವಾದ ಮುಖವುಳ್ಳವನೂ, ಅರಳಿದ ಕಮಲದಂತೆ ಕಣ್ಣುಳ್ಳವನೂ, ಕ್ರೌಂಚಪರ್ವತ ಭೇದಕನೂ ಆದ ಕುಮಾರ ಸ್ವಾಮಿಯು, ಹೊಸ ಸಂಪಿಗೆಯ ಮೊಗ್ಗಿನಂತೆ ನಾಸಿಕವುಳ್ಳವನಾಗಿ, ಕುರುವಿಂದ ಮಣಿಗಳಿಂದ ಕೂಡಿರುವ ಆಭರಣವುಳ್ಳವನಾಗಿ ಜೈಗೀಷವ್ಯಾದಿಗಳನ್ನು ಕುರಿತು ಹೀಗೆಂದನು. ||೬||

"ಪರ್ಣಾಶನದಿಂದ ಜೀವಿಸುವ ಮಹರ್ಷಿಗಳೇ, ನೀವೆಲ್ಲರೂ ಈಗ ನಾನು ಹೇಳಲಿರುವ ಪಾರ್ವತೀಪತಿಯಾದ ಮಹೇಶ್ವರನ ವೈಭವವನ್ನು ಕೇಳುವವರಾಗಿರಿ. ||೭||

ಸುವರ್ಣವಾಹನಾದ್ಯಾಶ್ಚ ಯೂಯಂ ಕರ್ಣರಸಾಯನಂ ।
ಅರ್ಣವಾಂತರ್ನಿವಸತೇಶ್ಚರಿತಂ ವರ್ಣಯಾಮ್ಯಹಂ ॥೮॥

ಮಹಾಕೈಲಾಸಭೂಭಾಗೇ ಪಂಚಕೋಟಿಪ್ರಮಾಣಕೇ ।
ಶೈಲಪ್ರಾಕಾರಮಧ್ಯೇ ತು ಗಣಾನಾಂ ವಸತಿಃ ಕೃತಾ ॥೯॥

ನವಲಕ್ಷಪ್ರಮಾಣೇನ ಪೂರ್ವದ್ವಾರಾದಿಗೋಪುರಂ ।
ನೀಲಶೈಲಜಸಾರೇಣ ನಾನಾರುದ್ರಗಣಾನ್ವಿತಂ ॥೧೦॥

ಪಟ್ಟಿಕಾಪಿಂಡಿಕಾದ್ಯೈಶ್ಚ ದೇವಕೋಟ್ಯಾ ಸುಶೋಭಿತಂ ।
ಮಹದ್ಭಿರುಚ್ಛ್ರಿತೈಶ್ಶೃಂಗೈರುಲ್ಲಿಖಂತಮಿವಾಂಬರಂ ॥೧೧॥

---

ಗರುಡವಾಹನನಾದ ವಿಷ್ಣುವೇ ಮೊದಲಾದ ದೇವತೆಗಳಿರಾ! ಸಮುದ್ರ ಮಧ್ಯಾಂತರ್ವರ್ತಿಯಾದ ಪರಮೇಶ್ವರನ ಕಥೆಯನ್ನು ಕರ್ಣರಸಾಯನವನ್ನಾಗಿ ಭಾವಿಸಿ ತಿಳಿದುಕೊಳ್ಳಿರಿ. ನಾನು ಈಗ ವರ್ಣಿಸುವೆನು. ॥೮॥

ಕೈಲಾಸವೆಂಬುದು ಐದುಕೋಟಿ ಯೋಜನ ಪ್ರಮಾಣವುಳ್ಳ ಭೂಭಾಗ. ಅದರ ಸುತ್ತಲೂ ಇರುವ ಪರ್ವತಗಳೇ ಅದಕ್ಕೆ ಪ್ರಾಕಾರವಾಗಿದೆ. ಆ ಪ್ರಾಕಾರಾಂತ ರ್ಭಾಗವೇ ಪ್ರಮಥಗಣಗಳಿಗೆ ಆಶ್ರಯಸ್ಥಾನ. ॥೯॥

ಅದರಲ್ಲಿ ಪೂರ್ವ ದಿಕ್ಕಿನ ದ್ವಾರವೂ ಮತ್ತು ಅದರ ಮೇಲಿರುವ ಗೋಪುರವು ಒಂಭತ್ತುಲಕ್ಷ ಯೋಜನ ಪ್ರಮಾಣವುಳ್ಳದ್ದಾಗಿದೆ. ಆ ಗೋಪುರವು ನೀಲಾಚಲದ ಸಾರವನ್ನೆಲ್ಲಾ ಹೊಂದಿದೆ. ಅನೇಕ ರುದ್ರಗಣಗಳು ಸರ್ವದಾ ಅದನ್ನು ಕಾದು ಕೊಂಡಿರುವುವು. ॥೧೦॥

ಆ ಗೋಪುರವು ಅಗಲವಾದ ಪಟ್ಟಿಗಳಿಂದಲೂ, ದುಂಡಾದ ಗೋಪುರ ಗಳಿಂದಲೂ ಕೂಡಿರುವುದು. ಅನೇಕ ದೇವತೆಗಳಿಗೆ ಆಶ್ರಯವಿತ್ತಿರುವುದು. ಅದರ ಅಗ್ರಭಾಗದಲ್ಲಿರುವ ಶಿಖರಗಳು ಅತ್ಯಂತ ಎತ್ತರವಾಗಿದ್ದು, ಅಂತರಿಕ್ಷವನ್ನೂ ಗೀಚು ವಂತೆ ಕಾಣುತ್ತಿರುವುವು. ॥೧೧॥

ದಶಸಾಹಸ್ರಫಲಕೈರ್ಗವಾಕ್ಷಿತಮಿವ ಸ್ಥಿತಂ ।
ವೃಷಭೈಶ್ಚ ಶಿಲಾರಾಜದ್ಭದ್ರರೂಪೈಃ ಪರೀವೃತಂ ॥೧೨॥

ನಂದೀಶ್ವರಾಲಯಂ ತತ್ರ ಹೇಮರೌಪ್ಯವಿರಾಜಿತಂ ।
ನಾನಾಸೌಧತಲೋಪೇತವನವಾಟೀವಿರಾಜಿತಂ ॥೧೩॥

ಸಹಸ್ರಸ್ತಂಭಸಂಯುಕ್ತಂ ಪತಾಕೋಜ್ಜ್ವಲಕುಂಭಕಂ ।
ಕೆಕ್ಷ್ಯಾಗವಾಕ್ಷವಿತತಂ ಸಿಂಹಾಸನವರಾನ್ವಿತಂ ॥೧೪॥

ತತ್ರಸ್ಥನಂದಿಕೇಶಾನಂ ಸ್ವರ್ಣವೇತ್ರಲಸತ್ಕರಂ ।
ನವರತ್ನಪ್ರಭಾಭಾಸ್ವತ್ಕಿರೀಟಕಸುಶೋಭಿತಂ ॥೧೫॥

ಸೋಮಧಾಮಸಮಾನಾಸ್ಯಂ ರಾಜದ್ಬಾಲೇಂದುಶೇಖರಂ ।
ಚತುರ್ಭುಜಮುದಾರಾಂಗಂ ತ್ರಿಪುಂಡ್ರೋಜ್ಜ್ವಲಫಾಲಕಂ ॥೧೬॥

---

ಆ ಪೂರ್ವದ್ವಾರವು ಹತ್ತುಸಾವಿರ ಹಲಗೆಗಳಿಂದ ನಿರ್ಮಿತವಾಗಿ ಅಷ್ಟು ಗವಾಕ್ಷಿಗಳಿಂದ ಕೂಡಿದೆಯೋ ಎಂಬಂತೆ ತೋರಿಬರುವುದು. ಕಲ್ಲಿನಲ್ಲಿ ಸುಂದರವಾಗಿ ನಿರ್ಮಿತವಾಗಿರುವ ವೃಷಭ ವಿಗ್ರಹಗಳು ಅಲ್ಲಿ ವಿಶೇಷವಾಗಿರುವುವು. ॥೧೨॥

ಅಲ್ಲಿಯೇ ನಂದೀಶ್ವರನ ಮನೆಯಿರುವುದು. ಅದು ಚಿನ್ನದಿಂದಲೂ, ಬೆಳ್ಳಿಯಿಂದಲೂ ನಿರ್ಮಿತವಾಗಿದೆ. ಆ ಮನೆಗೆ ಅನೇಕ ಉಪ್ಪರಿಗೆಗಳೂ, ಪಕ್ಕದಲ್ಲಿ ಹಲವಾರು ಉದ್ಯಾನವನಗಳೂ ಶೋಭಿಸುತ್ತಿರುವುವು. ॥೧೩॥

ಆ ಮನೆಗೆ ಸಾವಿರ ಕಂಭಗಳಿವೆ. ಧ್ವಜಗಳೂ ಕಲಶಗಳೂ ಸದಾ ಹೊಳೆಯುತ್ತಿರುವುವು. ಸಾಲುಸಾಲಾದ ಕಿಟಕಿಗಳೂ, ಉತ್ತಮವಾದ ಸಿಂಹಾಸನಗಳೂ ಬಹು ರಮ್ಯವಾಗಿ, ಕಾಣುತ್ತಿರುವುವು. ॥೧೪॥

ಅಲ್ಲಿ ನಂದೀಶ್ವರನು ಚಿನ್ನದ ಬೆತ್ತವನ್ನು ಕೈಯ್ಯಲ್ಲಿ ಹಿಡಿದು, ನವರತ್ನಗಳ ಕಾಂತಿಯಿಂದ ವಿರಾಜಮಾನವಾದ ಕಿರೀಟವನ್ನು ಧರಿಸಿ ಸರ್ವದಾ ಪ್ರಕಾಶಿಸುತ್ತಿರುವನು. ॥೧೫॥

ಅವನ ಮುಖವು ಪರಮೇಶ್ವರನ ಮುಖದಂತೆಯೇ ಕಾಣುವುದು. ಬಾಲಚಂದ್ರನನ್ನು ಅವನೂ ಹಣೆಯಲ್ಲಿ ಧರಿಸಿರುವನು. ಅವನ ನಾಲ್ಕು ಭುಜಗಳಿಂದಲೂ, ತ್ರಿಪುಂಡ್ರಾಂಕಿತವಾದ ಹಣೆಯಿಂದಲೂ ವಿರಾಜಿಸುವನು. ॥೧೬॥

ಭಸ್ಮಾಭ್ಯಕ್ತಂ ಜಟಾಶೋಭಿಮಸ್ತಕಂ ರಕ್ತಕುಂಡಲಂ ।
ಮುಕ್ತಾಂತರಿತರುದ್ರಾಕ್ಷಮಾಲಾಶತವಿರಾಜಿತಂ ॥೧೭॥

ಸುಯಶಾಪತಿಮಾಶಾಸ್ಯ ಧ್ಯಾನಪೂತಹೃದಂತರಂ ।
ಗಣೇಂದ್ರೈಶ್ಚ ಮುನೀಂದ್ರೈಶ್ಚ ಸುರೇಂದ್ರೈರ್ನಾರದಾದಿಭಿಃ ॥೧೮॥

ಗಂಧರ್ವಾಪ್ಸರಸಾಂ ಸಂಘೈರುದ್ರೈರ್ನಾಗೈಶ್ಚ ಸಿದ್ಧಕೈಃ ।
ಉಪಾಸಿತಂ ಮಹಾತ್ಮಾನಮಿಂದ್ರೇಣ ಮರುತೋ ಯಥಾ ॥೧೯॥

ಸೇವಿತಂ ನಂದಿಕೇಶಾನಂ ಪ್ರಮುಖೈಃ ಪರಿವಾರಿತಂ ।
ತತ್ರಾಲಯಂ ಮಹೇಶಸ್ಯ ನವರತ್ನವಿಚಿತ್ರಿತಂ ॥೨೦॥

ಹೇಮಪ್ರಾಕಾರಸಂಪನ್ನಂ ನಾನಾವೃಷಭಶೋಭಿತಂ ।
ಗರ್ಭಾಗಾರಂ ತತ್ರ ಶಂಭೋಸ್ಸ್ಫಟಿಕೋಪಲನಿರ್ಮಿತಂ ॥೨೧॥

---

ನಂದೀಶ್ವರನ ಮುಖವು ಭಸ್ಮದಿಂದ ಲಿಪ್ತವಾಗಿದೆ. ಜಟೆಯಿಂದ ಅಲಂಕೃತವಾಗಿದೆ. ಕಿವಿಯಲ್ಲಿ ರಕ್ತವರ್ಣದ ಕುಂಡಲಗಳಿವೆ. ನೂರಾರು ರುದ್ರಾಕ್ಷಿಯ ಸರಗಳು ಕತ್ತಿನಲ್ಲಿ ವಿರಾಜಿಸುತ್ತಿವೆ. ||೧೭||

ಪಾರ್ವತೀಪತಿಯಾದ ಶಂಕರನನ್ನೇ ಸರ್ವದಾ ಧ್ಯಾನಿಸುತ್ತಾ ತನ್ನ ಮನಸ್ಸನ್ನೂ ಪರಿಶುದ್ಧಗೊಳಿಸಿಕೊಂಡಿರುವನು. ಅವನ ಸುತ್ತಲೂ, ಪ್ರಮಥಗಣನಾಯಕರೂ, ಮಹರ್ಷಿಗಳೂ, ದೇವಶ್ರೇಷ್ಠರೂ, ಸಿದ್ಧರೂ, ಸಾಧ್ಯರೂ, ಗಂಧರ್ವರೂ, ಅಪ್ಸರಸ್ಸುಗಳೂ, ನೆರೆದಿರುವರು. ಏಕಾದಶರುದ್ರರೂ, ನಾಗಗಳೂ, ಇನ್ನೂ ಉಳಿದ ದೇವಯೋನಿಗಳೆಲ್ಲರೂ, ದೇವತೆಗಳು ದೇವೇಂದ್ರನನ್ನು ಸೇವಿಸುವಂತೆ ಸರ್ವದಾ ಸುಯಶಾಪತಿಯಾದ ನಂದಿಯನ್ನೇ ಓಲೈಸುತ್ತಿರುವರು. ||೧೮-೧೯||

ಈ ರೀತಿ ಪ್ರಮಥಗಣಗಳಿಂದ ಸೇವಿತನಾದ ನಂದೀಶ್ವರನ ಮನೆಯ ಒಂದು ಭಾಗದಲ್ಲಿಯೇ ಪರಮೇಶ್ವರನ ನಿವಾಸಸ್ಥಾನವಿದೆ. ಆ ಶಿವದೇವನ ಗೃಹವು ನವರತ್ನಗಳಿಂದ ನಿರ್ಮಿತವಾದುದು. ||೨೦||

ನಂದೀಶ್ವರನು ಆ ದೇವರ ಮನೆಗೆ ಚಿನ್ನದ ಪ್ರಾಕಾರವನ್ನು ಮಾಡಿಸಿರುವನು. ಸುತ್ತಲೂ ಅನೇಕ ಬಸವಗಳನ್ನು ಕೆತ್ತಿಸಿರುವನು. ಅದರ ಮಧ್ಯದಲ್ಲಿ ಸ್ಫಟಿಕ ಶಿಲೆಯಿಂದ ನಿರ್ಮಿತವಾದ ಶಿವಲಿಂಗದ ಗರ್ಭಗೃಹವಿರುವುದು. ||೨೧||

ನಂದೀಶ್ವರಾಭಿಧಂ ಲಿಂಗಂ ತತ್ರಾಸ್ತ್ಯೇಕಂ ಮನೋಹರಂ ।
ದರ್ಶನಾತ್ಸ್ಪರ್ಶನಾಚ್ಚಾಪಿ ಪಾಪಸಂಘನಿಬರ್ಹಣಂ ॥೨೨॥

ಧೂಪೈರ್ದೀಪೋಪಹಾರಾದ್ಯೈರ್ಭಕ್ಷ್ಯೈರ್ಭೋಜ್ಯೈಶ್ಚ ನಿತ್ಯಶಃ ।
ಕಮಲಾಮಲಮಾಲಾಭಿರ್ನೀಲೋತ್ಪಲಸಹಸ್ರಕೈಃ ॥೨೩॥

ಬಿಲ್ವಚಂಪಕಪುನ್ನಾಗಬಕಧುತ್ತೂರಪಾಟಲೈಃ ।
ಸಹಸ್ರಬಿಲ್ವಪತ್ರೈಶ್ಚ ಪಂಚಾಮೃತನಿಷೇಚನೈಃ ॥೨೪॥

ಸಾಮ್ರಾಣ್ಯಗುರುಧೂಪೈಶ್ಚ ದೀಪೈಃ ಕರ್ಪೂರಖಂಡಜೈಃ ।
ಪೂಜಯಂತಂ ಮಹೇಶಾನಂ ನಂದಿಕೇಶಂ ಶಿಲಾದಜಂ ॥೨೫॥

ಸ್ತೋತ್ರೈಸ್ಸ್ತುವಂತಮೀಶಾನಂ ತ್ರಿಕಾಲಂ ಸಾವಧಾನತಃ ।
ತತ್ಸ್ತುತಿಂ ಕಥಯಾಮ್ಯದ್ಯ ತನ್ಮುನೇ ಶೃಣು ಸಾದರಂ ॥೨೬॥

---

ಅಲ್ಲಿ ಒಂದು ಶಿವಲಿಂಗವನ್ನು ಪ್ರತಿಷ್ಠಿಸಿರುವನು. ಅದು ಬಹು ಮನೋಹರವಾಗಿರುವುದು. ಅದಕ್ಕೆ ನಂದೀಶ್ವರನೆಂಬ ಹೆಸರಿಟ್ಟಿರುವನು. ಅದು ಮಹಾಮಹಿಮೆಯುಳ್ಳದ್ದಾಗಿ, ದರ್ಶನದಿಂದ ಸ್ಪರ್ಶನದಿಂದ ಭಕ್ತರ ಅನೇಕ ಪಾಪಗಳನ್ನು ಪರಿಹರಿಸುತ್ತಲಿರುವುದು. ॥೨೨॥

ನಿತ್ಯವೂ ನಂದೀಶ್ವರನು ಆ ಲಿಂಗವನ್ನು ಅರಳಿದ ಕಮಲಗಳಿಂದಲೂ, ಮತ್ತು ನೀಲೋತ್ಪಲ ಪುಷ್ಪಗಳಿಂದಲೂ, ಸಹಸ್ರ ನಾಮಾರ್ಚನೆಯು ಪೂರ್ವಕವಾಗಿ ಆರಾಧಿಸುವನು. ಅನಂತರ ಧೂಪ, ದೀಪ, ಭಕ್ಷ್ಯಭೋಜ್ಯಗಳ ನಿವೇದನ ಇವೇ ಮೊದಲಾದುವುಗಳಿಂದ ಪೂಜಿಸುವನು. ॥೨೩॥

ಬಿಲ್ವಪತ್ರೆ, ಸಂಪಿಗೆಹೂವು, ಪುನ್ನಾಗಪುಷ್ಪ, ಬಕಪುಷ್ಪ, ದತ್ತೂರಿ, ಪಾದರಿ, ಮುಂತಾದ ಪತ್ರಪುಷ್ಪಗಳಿಂದ ಸಹಸ್ರ ನಾಮಾರ್ಚನೆ ಮಾಡುವನು. ಪಂಚಾಮೃತಗಳಿಂದ ನಿತ್ಯವೂ ಅಭಿಷೇಕಮಾಡುವನು. ॥೨೪॥

ಸಾಮ್ರಾಣಿ, ಅಗುರು, ಧೂಪ, ದೀಪ, ಕರ್ಪೂರಾರತಿ ಮುಂತಾದುವುಗಳಿಂದ ಮಹೇಶ್ವರರೂಪಿಯಾದ ನಂದಿಕೇಶ್ವರನನ್ನು ಪೂಜಿಸಿ, ತ್ರಿಕಾಲಗಳಲ್ಲಿಯೂ ಶಿಲಾದಪುತ್ರನಾದ ನಂದಿಯು ಆ ಶಿವಲಿಂಗದ ಮುಂದೆ ನಿಂತು ಶಂಕರನನ್ನು ಹೀಗೆ ಸ್ತುತಿ

॥ ನಂದಿಕೇಶ್ವರ ಉವಾಚ ॥

ಇಂದುಖಂಡಲಲಿತಾಮಲಮೌಲೇ ।
ಕುಂದಕಾಂತಿಸದೃಶೋತ್ತಮದೇಹ ।
ಇಂದಿರಾರಮಣಲೋಚನಪೂಜ್ಯ ।
ಮನ್ಮನೋಗಹನಪಂಕಜವಾಸ ॥೨೭॥

॥ ಸ್ಕಂದ ಉವಾಚ ॥

ಇತ್ಥಂ ಸ್ತುವಂತಂ ತಂ ಲಿಂಗಂ ಪ್ರಾಕ್ಪ್ರಾಕಾರಸ್ಯ ಸೌಧಗಃ ।
ಸಂಸ್ಥಿತಸ್ಸಂಯಶಾನಾಥೋ ಗಣಕೋಟಿಪರೀವೃತಃ ॥೨೮॥

ನಿಷಧೋ ಹೇಮಕೂಟಶ್ಚ ಪ್ರಾಕ್ಪ್ರಾಕಾರಸ್ಯ ಪರ್ವತಾಃ ।
ಪಂಚಲಕ್ಷಪ್ರಮಾಣೇನ ತತ್ರೈವಾಗ್ನೇಯಗೋಪುರಂ ॥೨೯॥

---

ಸುವನು. ಎಲೈ ಮುನಿಯೇ, ಆ ಸ್ತೋತ್ರವನ್ನು ಈಗ ವಿವರಿಸಿ ಹೇಳುವೆನು ಕೇಳು. ॥೨೫-೨೬॥

" ಎಲೈ ಪರಮೇಶ್ವರನೇ, ನೀನು ಬಾಲಚಂದ್ರನನ್ನು ನಿನ್ನ ಮನೋಹರ ವಾದ ಶಿರಸ್ಸಿನಲ್ಲಿ ಧರಿಸಿರುವೆ. ನಿನ್ನ ದೇಹವಾದರೋ, ಕೋಲುಮಲ್ಲಿಗೆ ಹೂವಿನಂತೆ ಶುಭ್ರವರ್ಣವುಳ್ಳದ್ದಾಗಿ ಕಾಂತಿಮತ್ತಾಗಿದೆ. ಲಕ್ಷ್ಮೀಪತಿಯಾದ ವಿಷ್ಣುವು ನಿನ್ನ ಮೇಲಿನ ಭಕ್ತ್ಯತಿರೇಕದಿಂದ ತನ್ನ ಕಣ್ಣನ್ನೇ ಕಿತ್ತು ನಿನ್ನ ಪಾದಕ್ಕೆ ಅರ್ಪಿಸಿದನು. ಇಂತಹ ನೀನು ನನ್ನ ಮನಸ್ಸೆಂಬ ಕಮಲದಲ್ಲಿ ವಾಸಮಾಡುತ್ತಿರುವೆ. ಮಹೇಶ್ವ ರನೇ, ನಿನಗೆ ವಂದಿಸುವೆನು." ॥೨೭॥

ಹೀಗೆ ಲಿಂಗವನ್ನು ಸ್ತುತಿಸುತ್ತಾ ಪ್ರಾಕ್ಪ್ರಾಕಾರದ ಸೌಧಭಾಗದಲ್ಲಿ ಸುಯ ಶಾಪತಿಯಾದ ನಂದೀಶ್ವರನು ಅನೇಕ ರುದ್ರಗಣಗಳಿಂದ ಕೂಡಿ ವಿರಾಜಿಸುವನು. ॥೨೮॥

ಪೂರ್ವದಿಕ್ಕಿನಲ್ಲಿ ನಿಷಧ, ಹೇಮಕೂಟವೆಂಬ ಪರ್ವತಗಳೇ ಕೋಟೆಗೋಡೆ ಯಂತಿರುವುವು. ಹಾಗೆಯೇ ಆಗ್ನೇಯ ದಿಕ್ಕಿನಲ್ಲಿಯೂ ಐದು ಲಕ್ಷ ಯೋಜನ ಪರಿಮಿತಿಯುಳ್ಳ ಗೋಪುರವಿದೆ. ॥೨೯॥

**ರುದ್ರಾವತಾರಚರಿತ್ರೈರ್ವೃಷಭೈಶ್ಶಿಖರೈರ್ವೃತಂ ।**
**ತತ್ರಾಲಯಂ ಮಹೇಶಸ್ಯ ಗಣೇಂದ್ರಸ್ಯ ಮಹಾತ್ಮನಃ ॥೩೦॥**

**ಲಿಂಗಾಕಾರಂ ತತ್ರ ಶಂಭುಸ್ಸುಕೇಶೇಶ್ವರಸಂಜ್ಞಿತಂ ।**
**ಪೂಜಿತೋ ಗಣಪೇಂದ್ರೇಣ ಗಣಲಕ್ಷಪರೀವೃತಃ ॥೩೧॥**

**ಸುಕೇಶೇನ ಸ್ತುತಂ ಲಿಂಗಂ ಸುಕೇಶೇಶ್ವರಸಂಜ್ಞಿತಂ ।**
**ಪೂಜಿತಂ ಚ ತ್ರಿಲೋಕೇಷು ಬಿಲ್ವಪತ್ರೈಸ್ಸುನ್ಯೈಸ್ತಥಾ ॥೩೨॥**

॥ ಸುಕೇಶ ಉವಾಚ ॥

**ಪಂಚಕೋಶಗಗನಾತಿಗ ಶಂಭೋ ।**
**ವ್ಯೋಮಕೇಶ ಗುಣಸಾರಸಹಂಸ ।**
**ಕಾಶಿಕಾಪುರನಿವಾಸ ಮಹೇಶ ।**
**ಪಾಹಿ ಶಂಕರ ಸುಕೇಶಮಹೇಶ ॥೩೩॥**

---

ಆ ಗೋಪುರದಲ್ಲಿ ರುದ್ರಾವತಾರದ ವಿಗ್ರಹಗಳೂ ಅನೇಕ ವೃಷಭವಿಗ್ರಹಗಳೂ ಇರುವುವು. ಅನೇಕ ಶಿಖರಗಳು ಆ ಗೋಪುರದಲ್ಲಿ ಕಂಡುಬರುತ್ತಿವೆ. ಅಲ್ಲಿ ಗಣಗಳಿಗೆ ಒಡೆಯನಾದ ಸುಕೇಶನೆಂಬವನು ಒಂದು ಶಿವಾಲಯವನ್ನು ನಿರ್ಮಿಸಿರುವನು. ॥೩೦॥

ಅಲ್ಲಿ ಪ್ರತಿಷ್ಠಿಸಿರುವ ಲಿಂಗಕ್ಕೆ ಸುಕೇಶೇಶ್ವರನೆಂದು ಹೆಸರಿದೆ. ಆ ಲಿಂಗವನ್ನು ಸುಕೇಶನು ಬಿಲ್ವಪತ್ರಗಳಿಂದಲೂ, ಹೂವುಗಳಿಂದಲೂ ಲಕ್ಷಗಣಗಳಿಂದ ಕೂಡಿದವನಾಗಿ ಸರ್ವದಾ ಪೂಜಿಸುವನು. ॥೩೧॥

ಹಾಗೆ ಸುಕೇಶನು ಪೂಜಿಸಿದ್ದರಿಂದಲೇ ಆ ಲಿಂಗಕ್ಕೆ ಸುಕೇಶೇಶ್ವರನೆಂದು ಹೆಸರಾಯಿತು. ಆ ಲಿಂಗವನ್ನು ಬಿಲ್ವಪತ್ರೆಯೇ ಮೊದಲಾದ ಪೂಜಾಸಾಮಗ್ರಿಗಳಿಂದ ತ್ರಿಲೋಕದವರೂ ಪೂಜಿಸುವರು. ॥೩೨॥

"ಶಂಭುವೇ, ನೀನು ಮನುಷ್ಯದೇಹದಲ್ಲಿರುವ ಪಂಚಕೋಶಗಳಿಗೂ ಬ್ರಹ್ಮರಂಧ್ರಕ್ಕೂ ಸಿಕ್ಕದಿರುವ ಶಕ್ತಿಯುಳ್ಳವನು. ಜಗದ್ವ್ಯಾಪಿಯಾದ ಆಕಾಶವೇ ನಿನ್ನ ಕೇಶಗಳು. ಸಾರಸ, ಹಂಸಗಳಂತೆ ನಿನ್ನ ಗುಣಗಳು ಶುಭ್ರವಾಗಿ ಸರ್ವತ್ರ ಹರಡಿವೆ. ಕಾಶಿಕಾಪುರದಲ್ಲಿ ವಾಸಮಾಡುವ ಅಭಿಲಾಷೆಯುಳ್ಳವನೇ, ಸುಕೇಶೇ

ನೀಲಶ್ಚ ಮಂದರಶ್ಚೈವ ಪ್ರಾಕಾರೇ ದಕ್ಷಿಣೇ ನಗಾಃ ।
ತತ್ರಾಪಿ ಗೋಪುರಂ ಶಂಭೋರ್ನಾನಾರುದ್ರಗಣಾವೃತಂ ॥೩೪॥

ದಶಲಕ್ಷಪ್ರಮಾಣೇನ ಚೋಚ್ಛ್ರಿತಂ ಗಗನಾತಿಗಂ ।
ಉಲ್ಲಿಖಂತಂ ದೇವಮಾರ್ಗಂ ಸಹಸ್ರತಲಸಂಯುತಂ ॥೩೫॥

ರುದ್ರಾವತಾರಕ್ರೀಡಾಭಿರ್ವೃಷಸ್ತಂಭೈಶ್ಚ ಶೋಭಿತಂ ।
ಚಂಡೀಶ್ವರಾಲಯಂ ತತ್ರ ತಪ್ತಹೇಮವಿಭೂಷಿತಂ ॥೩೬॥

ಸಹಸ್ರಸ್ತಂಭಸಂಯುಕ್ತಂ ಮುಕ್ತಾವಿತತತೋರಣಂ ।
ನೀಲಸನ್ಮಣಿಕ್ಲುಪ್ತಂ ಚ ಕಕ್ಷ್ಯಾಶತವಿರಾಜಿತಂ ॥೩೭॥

---

ಶ್ವರನೇ, ಮಹೇಶ್ವರನೇ, ನನ್ನನ್ನು ರಕ್ಷಿಸು.” ಎಂದು ಸುಕೇಶನು ಮಹೇಶ್ವರನನ್ನು ಸರ್ವದಾ ಸ್ತುತಿಸುವನು. ॥೩೩॥

ಹಾಗೆಯೇ, ದಕ್ಷಿಣಭಾಗದಲ್ಲಿ ನೀಲ ಮತ್ತು ಮಂದರಪರ್ವತಗಳು ಪ್ರಾಕಾರಗಳಾಗಿವೆ. ಅಲ್ಲಿರುವ ಒಂದು ಗೋಪುರದಲ್ಲಿ ಅನೇಕ ರುದ್ರಗಣಗಳಿಂದ ಆವೃತವಾದ ಶಂಕರನ ದೇವಾಲಯವಿದೆ. ॥೩೪॥

ಆ ದಕ್ಷಿಣಗೋಪುರವು ಔನ್ನತ್ಯದಲ್ಲಿ ಹತ್ತುಲಕ್ಷಯೋಜನ ಪ್ರಮಾಣದಿಂದ ಗಗನಮಾರ್ಗವನ್ನು ಮೀರಿ ಮೇಲೆ ಹೋಗಿದೆ. ದೇವಮಾರ್ಗವನ್ನು ಗೀರುತ್ತಿದೆಯೋ ಎಂಬಂತೆ ಆ ಗೋಪುರವು ಸಾವಿರ ಕಂಬಗಳಿಂದ ಕೂಡಿದ್ದಾಗಿ ಮನೋಹರವಾಗಿರುವುದು. ॥೩೫॥

ಅಲ್ಲಿ ರುದ್ರಾವತಾರಗಳು ಚಿತ್ರರೂಪವಾಗಿ ವರ್ಣಿತವಾಗಿವೆ. ವೃಷಭವಿಗ್ರಹಯುಕ್ತವಾದ ಸ್ತಂಭಗಳು ಬಹಳವಾಗಿವೆ. ಅದೇಭಾಗದಲ್ಲಿ ಚಿನ್ನದಿಂದ ಅಲಂಕೃತವಾದ ಚಂಡೀಶ್ವರಾಲಯವಿದೆ. ॥೩೬॥

ಚಂಡೀಶ್ವರಾಲಯವು ಸಾವಿರ ಕಂಬಗಳುಳ್ಳದ್ದು. ಅಲ್ಲಿ ಮುತ್ತಿನ ತೋರಣಗಳೂ, ನೀಲಮಣಿಗಳ ಮೇಲ್ಕಟ್ಟುಗಳೂ, ಸಾಲುಸಾಲಾಗಿ ತೋರಿಬರುತ್ತಿರುವುವು. ॥೩೭॥

ಸೋಪಾನೈರತ್ನಸಚ್ಛನ್ನೈರುಪೇತಂ ವನಭೂಷಿತಂ ।
ತತ್ರ ಸಿಂಹಾಸನಾಸೀನಂ ವಿದ್ಯುತ್ಪಿಂಗಜಟಾಧರಂ ॥೩೮॥

ಪರ್ವಶರ್ವರಿನಾಥಾರ್ಧಧರಂ ಭಸ್ಮವಿಭೂಷಿತಂ ।
ತ್ರಿಪುಂಡ್ರವಿಲಸತ್ಫಾಲಂ ರುದ್ರಾಕ್ಷಾಭರಣಾನ್ವಿತಂ ॥೩೯॥

ಮಹಾರ್ಹವಸನೋಪೇತಂ ನಾನಾರತ್ನಪರಿಷ್ಕೃತಂ ।
ನಿಮೀಲಿತಾಕ್ಷಂ ಧ್ಯಾಯಂತಂ ದಿವ್ಯಂ ಶಂಭೋಃ ಪದಾಂಬುಜಂ॥೪೦॥

ಕಿಂಪೂರುಷೈಸ್ಸಿದ್ಧಸಾಧ್ಯೈರ್ಮುನಿಬೃಂದೈರ್ಯಮೇನ ಚ ।
ಗಣೇಂದ್ರೈಸ್ಸೇವಿತಪದಂ ರುದ್ರಸಂಘೈರ್ನಿಷೇವಿತಂ ॥೪೧॥

---

ಆ ದೇವಾಲಯಕ್ಕೆ ರತ್ನಖಚಿತವಾದ ಮೆಟ್ಟಲುಗಳಿವೆ. ಸುತ್ತಲೂ ಉದ್ಯಾನ ವನಗಳಿವೆ. ಅದರ ಮಧ್ಯದಲ್ಲಿ ಮಿಂಚಿನಂತೆ ಹೊಳೆಯುತ್ತಾ, ಜಟೆಯಿಂದ ಕೂಡಿ ಸಿಂಹಾಸನದಲ್ಲಿ ಮಂಡಿಸಿರುವ ಪರಶಿವನ ಲಿಂಗವಿದೆ. ॥೩೮॥

ಅರ್ಧಚಂದ್ರನು ಆ ಮಹೇಶ್ವರಲಿಂಗದ ಮೌಲಿಯಲ್ಲಿರುವನು. ಶಂಕರಲಿಂಗ ವೆಲ್ಲಾ ಭಸ್ಮದಿಂದ ಅಲಂಕೃತವಾಗಿದೆ. ಹಣೆಯಲ್ಲಿ ತ್ರಿಪುಂಡ್ರವಿದೆ. ರುದ್ರಾಕ್ಷಿಯ ಆಭರಣವು ದೇಹವನ್ನೆಲ್ಲಾ ಅಲಂಕರಿಸಿದೆ. ॥೩೯॥

ಅಮೂಲ್ಯವಾದ ವಸ್ತ್ರವೂ, ಅಮೂಲ್ಯವಾದ ರತ್ನಗಳೂ, ಆ ಶಂಕರನ ದೇಹವನ್ನು ಅಲಂಕರಿಸಿವೆ. ಕೈಲಾಸೇಶ್ವರ ಲಿಂಗವನ್ನು ಧ್ಯಾನಮಾಡುವ ಮುದ್ರೆ ಯಲ್ಲಿ ಕಣ್ಣುಗಳನ್ನು ಅರ್ಧ ಮುಚ್ಚಿದಂತೆ ತೋರುವ ಆ ಚಂಡೀಶ್ವರಲಿಂಗವು ಬಹು ರಮ್ಯವಾಗಿದೆ. ॥೪೦॥

ಆ ಚಂಡೀಶ್ವರನನ್ನೂ, ಕಿಂಪುರುಷರು, ಸಿದ್ಧರೂ, ಸಾಧ್ಯರೂ, ಮುನಿಗಳ ಗುಂಪೂ, ಯಮಧರ್ಮರಾಯನೂ, ಸದಾ ಸೇವಿಸುತ್ತಿರುವರು. ಅಲ್ಲದೆ ಸಮಸ್ತ ರುದ್ರಗಣಗಳೂ, ಪ್ರಮಥಗಣಗಳೂ, ಅಲ್ಲಿ ನೆರೆದು ಚಂಡೀಶ್ವರನ ಸೇವೆ ಮಾಡುತ್ತಿ ರುವರು. ॥೪೧॥

ತತ್ರೇಶ್ವರಸ್ಯ ಸದನಂ ಮದನಾಂತಕರಸ್ಯ ಚ ।
ಪ್ರಾಕಾರಗೋಪುರೋಪೇತಂ ನವರತ್ನಪ್ರಕಲ್ಪಿತಂ ॥೪೨॥

ಚಂಡಿಕೇಶೇಶ್ವರಂ ಲಿಂಗಂ ಚಂಡಪಾಪಪ್ರಣಾಶನಂ ।
ತಲ್ಲಿಂಗಜ್ಯೋತಿಷಾ ಸರ್ವೇ ದ್ಯೋತಿತಾಸ್ಸೂರ್ಯಸೋಮಕಾಃ ॥೪೩॥

ತಲ್ಲಿಂಗಂ ಪೂಜಯತ್ಯೇಷ ಚಂಡಿಕೇಶಸ್ತ್ರಿಕಾಲತಃ ।
ಬಿಲ್ವೈರ್ಮಂದಾರಕುಸುಮೈರ್ಮಲ್ಲಿಕಾಕರವೀರಕೈಃ ॥೪೪॥

ಕರ್ಣಿಕಾರೈರಪಾಮಾರ್ಗೈರ್ಮಾಲತೀಭಿಶ್ಚ ಶಂಕರಂ ।
ಧೂಪದೀಪೋಪಹಾರಾದ್ಯೈರ್ನರ್ತನೈಃ ಕರತಾಲಕೈಃ ॥೪೫॥

ಸ್ತೋತ್ರೈಸ್ಸ್ತೌತಿ ಮಹಾದೇವಂ ಪ್ರಾಂಜಲಿಶ್ಚಂಡಿಕೇಶ್ವರಃ ॥೪೬॥

ಚಂಡೀಶ ಖಂಡಪರಶೋ ಶಶಿಖಂಡಚೂಡ ।
ಬ್ರಹ್ಮಾಂಡಮೌಳಿಗ ಧರಾಧರಕಾರ್ಮುಕೇಶ ।

---

ಆ ಚಂಡೀಶ್ವರಾಲಯಕ್ಕೆ ಅನೇಕ ಪ್ರಾಕಾರಗಳೂ, ಗೋಪುರಗಳೂ, ನವರತ್ನಗಳಿಂದ ಕಲ್ಪಿತಗಳಾಗಿ ಸುತ್ತಲೂ ವಿರಾಜಿಸುತ್ತಿರುವುವು. ॥೪೨॥

ಅಲ್ಲಿ ಸರ್ವಪಾಪನಿವಾರಕವಾದ ಚಂಡೀಶ್ವರಲಿಂಗವಿರುವುದು. ಅದು ಮಹಾತೇಜಸ್ಸುಳ್ಳದ್ದು. ಅದರ ತೇಜಸ್ಸಿನಿಂದಲೇ ಸೂರ್ಯಚಂದ್ರರು ಇಂದೂ ಶೋಭಿಸುತ್ತಿರುವರು. ॥೪೩॥

ಆ ಚಂಡಿಕೇಶೇಶ್ವರನನ್ನು ಚಂಡಿಕೇಶನು ತ್ರಿಕಾಲಗಳಲ್ಲಿಯೂ ಬಿಲ್ವಪತ್ರೆ, ಮಂದಾರಪುಷ್ಪ, ಮಲ್ಲಿಗೆ, ಕಣಿಗಲು ಮುಂತಾದ ಪುಷ್ಪಗಳಿಂದ ಅರ್ಚಿಸುತ್ತಿರುವನು. ॥೪೪॥

ಇನ್ನೂ ಗಿರಿಕರ್ಣಿಕೆ, ಉತ್ತರಿಣೀ, ಮಾಲತೀ ಮುಂತಾದ ಪುಷ್ಪಗಳಿಂದ ಅರ್ಚಿಸುತ್ತಾ, ಧೂಪ, ದೀಪ, ನೈವೇದ್ಯಾದಿಗಳಿಂದ ಸ್ವಾಮಿಯನ್ನು ತೃಪ್ತಿಪಡಿಸಿ, ತಾಳಗಳನ್ನು ಹೊಡೆಯುತ್ತಾ ನರ್ತನಮಾಡಿ, ವಿಧವಿಧವಾದ ಸ್ತುತಿಗಳಿಂದ ಸ್ವಾಮಿಯನ್ನು ಚಂಡೀಶ್ವರನು ಹೀಗೆ ಸ್ತುತಿಸುವನು. ॥೪೫-೪೬॥

“ಎಲೈ ಚಂಡೀಶ್ವರನೇ, ಖಂಡಪರಶುವೇ ಚಂದ್ರಶೇಖರನೇ, ನನ್ನನ್ನು ರಕ್ಷಿಸು. ನೀನು ಬ್ರಹ್ಮಾಂಡವನ್ನು ಮೀರಿದವನಾಗಿರುವೆ. ನಿನಗೆ ಮೇರು ಪರ್ವತವೇ

ವಿಧ್ಯುತ್ಥಮುಂಡವರಮೂಲಕ ಕುಂಡಲೀಶ ।
ಚೋಚ್ಚಂಡತಾಂಡವ ಮಹೇಶ್ವರ ಶೂಲದಂಡ ॥೪೭॥

ಇತ್ಥಂ ವಿಧಾಯ ಸ್ತುತಿಮಾದರೇಣ ।
ಚಂಡೀಶ್ವರಸ್ತ್ರಿಜಗತಾಂ ಪತಿಮಿಂದುಮೌಳಿಂ ।
ನತ್ವಾ ಮಹೇಶ್ವರಪದಾಂಬುರುಹಂ ಸದೈವ ।
ಧ್ಯಾಯಂತ್ಸದೈವ ಹೃದಯಾಬ್ಜಸುಖಂ ವಿಧತ್ತೇ ॥೪೮॥

**ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ಕೈಲಾಸಪ್ರಾಕಾರವರ್ಣನಂ ನಾಮ ಚತುರ್ದಶೋಽಧ್ಯಾಯಃ**

---

ಒಂದು ಬಿಲ್ಲಾಗುವುದು. ಬ್ರಹ್ಮನ ತಲೆಯ ಬುರುಡೆಯೇ ಮೊದಲಾದ ಅನೇಕ ರುಂಡಗಳನ್ನು ಮಾಲೆಯನ್ನಾಗಿ ಮಾಡಿಕೊಂಡಿರುವೆ. ಸರ್ಪಗಳಿಗೆಲ್ಲಾ ಅಧಿರಾಜನಾಗಿ, ಪ್ರಚಂಡವಾದ ನಾಟ್ಯಗಳನ್ನಾಡುತ್ತಾ ಮಹೇಶ್ವರನೆನಿಸಿಕೊಂಡು, ತ್ರಿಶೂಲಧಾರಿಯಾಗಿರುವ ಪರಮೇಶ್ವರನೇ ನನ್ನನ್ನು ಸಲಹು.'' ॥೪೭॥

ಹೀಗೆ ಚಂಡೀಶ್ವರನು ಭಕ್ತಿಯಿಂದ ತ್ರಿಲೋಕೇಶ್ವರನೂ, ಚಂದ್ರಮೌಳಿಯೂ ಆದ ಪರಶಿವನನ್ನು ಬಹುವಾಗಿ ಸ್ತುತಿಸಿ, ಆ ಮಹೇಶ್ವರನ ಪಾದಕಮಲವನ್ನೇ ಸರ್ವದಾ ಧ್ಯಾನಿಸುತ್ತಾ ಬ್ರಹ್ಮಾನಂದವನ್ನು ಅನುಭವಿಸಿದನು, ಎಂದು ಕುಮಾರಸ್ವಾಮಿಯು ಜೈಗೀಷವ್ಯಾದಿಮಹರ್ಷಿಗಳಿಗೆ ಹೇಳಿದನು. ॥೪೮॥

ಇಲ್ಲಿಗೆ ಶಿವರಹಸ್ಯದ ಪ್ರಥಮಾಂಶದಲ್ಲಿ ಕೈಲಾಸಪ್ರಕಾರವರ್ಣನೆಯನ್ನು ತಿಳಿಸುವ ಹದಿನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

# ಅಥ ಶ್ರೀಶಿವರಹಸ್ಯೇ

## ಪಂಚದಶೋಽಧ್ಯಾಯಃ

### ಶೈಲಪ್ರಾಕಾರವರ್ಣನಂ

॥ ಸ್ಕಂದ ಉವಾಚ ॥

ನೈಋತೇ ಗೋಪುರಂ ಶಂಭೋಃ ಪಂಚಲಕ್ಷಪ್ರಮಾಣಕಂ ।
ರುದ್ರಾಣಾಂ ಚರಿತೈಶ್ಚೈವ ಶೋಭಿತಂ ಶಿಖರೈರಪಿ ॥೧॥

ಬಾಣಸ್ತತ್ರ ಮಹಾದೇವಮುಪಾಸ್ತೇ ಗಣಲಕ್ಷಕೈಃ ।
ನವರತ್ನಸರೋಭೂಷೋ ಮಹಾಪ್ರಾಸಾದಮಧ್ಯಗಃ ॥೨॥

ತದಾಲಯಂ ರತ್ನಕ್ಲಪ್ತಂ ಸಹಸ್ರಸ್ತಂಭಮಂಡಿತಂ ।
ತತ್ರ ಬಾಣೇಶ್ವರಾಗಾರಂ ತೇನ ಲಿಂಗಂ ಸಮರ್ಚಿತಂ ॥೩॥

---

## ಶ್ರೀಶಿವರಹಸ್ಯದಲ್ಲಿ ಹದಿನೈದನೆಯ ಅಧ್ಯಾಯ

ಹಾಗೆಯೇ ಕೈಲಾಸದ ನೈಋತ್ಯಭಾಗದಲ್ಲಿ ಒಂದು ಪ್ರಾಕಾರವಿದೆ. ಆ ಪ್ರಾಕಾರವು ಐದುಲಕ್ಷ ಯೋಜನ ವಿಸ್ತಾರವುಳ್ಳದ್ದಾಗಿದೆ. ಅಲ್ಲಿಯೂ ರುದ್ರಾವತಾರಗಳ ಚರಿತ್ರೆಯನ್ನು ತೋರಿಸುವ ಚಿತ್ರಗಳು ಶಿಖರಗಳಲ್ಲಿ ವಿರಾಜಿಸುತ್ತಿವೆ, ಎಂದು ಸ್ಕಂದನು ನೈಋತ್ಯಭಾಗದ ಪ್ರಾಕಾರವನ್ನು ವರ್ಣಿಸಲಾರಂಭಿಸಿದನು. ॥೧॥

ಅಲ್ಲಿ ಬಾಣನೆಂಬ ಹರಭಕ್ತನು ಲಕ್ಷಪ್ರಮಥಗಣಗಳೊಡನೆ ಕೂಡಿ ಮಹಾದೇವನನ್ನು ಪೂಜಿಸುತ್ತಾ ನೆಲಸಿರುವನು. ಅಲ್ಲಿರುವ ದೊಡ್ಡ ಉಪ್ಪರಿಗೆ ಮನೆಯ ಮಧ್ಯಭಾಗದಲ್ಲಿ ನವರತ್ನಮಯವಾದ ಸರೋವರವೊಂದಿದೆ. ॥೨॥

ಆ ಮನೆಯಾದರೋ, ರತ್ನಗಳಿಂದಲೇ ನಿರ್ಮಿತವಾಗಿದೆ. ಸಾವಿರ ಕಂಬಗಳಿಂದ ಅದು ಅಲಂಕೃತವಾಗಿದೆ. ಅಂತಹ ದಿವ್ಯ ಸದನದಲ್ಲಿ ಬಾಣನಿಂದ ಪೂಜಿತವಾದ ಬಾಣೇಶ್ವರಲಿಂಗವು ಪ್ರತಿಷ್ಠಾಪಿಸಲ್ಪಟ್ಟಿದೆ. ॥೩॥

**ಮಂಟಪೈರ್ಗೋಪುರೈರ್ಯುಕ್ತಂ ತ್ರಿಕಾಲಂ ಬಿಲ್ವಪಲ್ಲವೈಃ ।**

**ಬಾಣೇಶ ಶಂಭೋ ಹರಿಬಾಣಪಾಣೇ ।**
**ತ್ವಂ ಪಾಹಿ ಗಂಗಾಧರ ಚಂದ್ರಚೂಡ ।**
**ವಿಶ್ವೇಶ ಭರ್ಗ ಮದನಾಂತಕ ಕಾಲಕಾಲ ।**
**ಮಾಮದ್ಯ ಶಂಕರ ವಿಭೋ ಗಣನಾಥಪೂಜ್ಯ ॥೪॥**

**ಭದ್ರಾಣಿ ಮೇ ಸಂವಿಧತ್ಸ್ವಾದ್ಯ ಶಂಭೋ ।**
**ದೀಕ್ಷಾದಿದಕ್ಷಾಧ್ವರಧ್ವಂಸಕಾವ ।**
**ಮಹೇಶಾನ ಪಂಚಾನನೇಂದುಪ್ರಕೃಷ್ಟೈ**
**ಕಥಾಮು ಪ್ರಭೋ ಸಂಪ್ರಸೀದ ಪ್ರಸೀದ ಪ್ರಸೀದ ॥೫॥**

॥ ಸ್ಕಂದ ಉವಾಚ ॥

**ಇತ್ಥಂ ಸ್ತೌತಿ ಗಣೇಂದ್ರೋಽಸೌ ಬಾಣೋ ಬಾಣೇಶ್ವರಂ ಶಿವಂ ।**
**ನೈಋತೇ ಗೋಪುರೇ ತತ್ರ ಪ್ರಾಸಾದವರಮಧ್ಯಗಃ ॥೬॥**

---

ಅನೇಕ ಗೋಪುರಗಳಿಂದ ಕೂಡಿದ ಆ ಮಂಟಪದಲ್ಲಿ ಬಾಣೇಶ್ವರಲಿಂಗವನ್ನು ಬಾಣನು ಪೂಜಿಸುತ್ತಾ ತ್ರಿಕಾಲಗಳಲ್ಲಿಯೂ ಬಿಲ್ವಪತ್ರಾದಿಗಳಿಂದ ಅರ್ಚಿಸುತ್ತಿರುವನು.

“ಬಾಣೇಶ್ವರನೇ, ಶಂಕರನೇ, ವಿಷ್ಣುವನ್ನೇ ಬಾಣವನ್ನಾಗಿ ಉಳ್ಳವನೇ ನನ್ನನ್ನು ಕಾಪಾಡು. ನೀನು ಗಂಗೆಯನ್ನೂ, ಚಂದ್ರನನ್ನೂ ತಲೆಯಲ್ಲಿ ಧರಿಸಿಕೊಂಡಿರುವೆ. ಲೋಕಕ್ಕೆ ಒಡೆಯನೆನಿಸಿ, ಮನ್ಮಥನಾಶಕನಾಗಿ ಕಾಲನಿಗೂ ಕಾಲನೆನಿಸಿರುವೆ. ಶಂಕರನೇ, ಗಣನಾಥರಿಂದ ಪೂಜಿತನಾದವನೇ, ನನ್ನನ್ನು ರಕ್ಷಿಸು. ॥೪॥

ಶಂಭುವೇ, ನನಗೆ ಸಕಲ ಮಂಗಳಗಳನ್ನೂ ಒದಗಿಸು. ಆದಿಯಜ್ಞಕರ್ತನಾದ ದಕ್ಷಬ್ರಹ್ಮನನ್ನು ಧ್ವಂಸಮಾಡಿದವನೇ, ನನ್ನನ್ನು ಕಾಪಾಡು. ಐದು ಮುಖಗಳಿಂದ ಕೂಡಿ, ಚಂದ್ರನನ್ನು ಶಿರಸ್ಸಿನಲ್ಲಿ ಧರಿಸಿಕೊಂಡಿರುವ ಮಹೇಶ್ವರನೇ, ನನಗೆ ಪ್ರಸನ್ನನಾಗು. ಅನುಗ್ರಹಮಾಡು. ನನ್ನನ್ನು ರಕ್ಷಿಸು” ಎಂದು ಬಾಣನು ಮಹೇಶ್ವರನನ್ನು ಸ್ತುತಿಸುವನು. ॥೫॥

ಹೀಗೆ ನೈಋತ್ಯಭಾಗದಲ್ಲಿರುವ ಬಾಣನು ಗೋಪುರದ ಮಧ್ಯದಲ್ಲಿ ಪ್ರಾಸಾದಾಂತರ್ಭಾಗದಲ್ಲಿರುವ ಶಿವಲಿಂಗವನ್ನು ಬಹುವಾಗಿ ಸ್ತುತಿಸಿದನು. ॥೬॥

ಅಸ್ತಾದ್ರಿಃ ಪಾರಿಯಾತ್ರಶ್ಚ ಪಶ್ಚಾತ್ಪ್ರಾಕಾರಸನ್ನಗಾಃ ।
ತತ್ರೈವ ಗೋಪುರಂ ಶಂಭೋರ್ದಶಲಕ್ಷೈಕಯೋಜನಂ ॥೭॥

ಪಟ್ಟಿಕಾ ದೇವಗೋಷ್ಠೈಶ್ಚ ಸ್ತಂಭೈಃ ಕುಂಭೈಶ್ಚ ಕೋಣಜೈಃ ।
ರುದ್ರಾವತಾರಕ್ರೀಡಾಭೀ ರಚಿತಂ ವೃಷಭೈರ್ವೃತಂ ॥೮॥

ಕಲಾನಾಂ ಚ ಸಹಸ್ರೇಣ ನಿರ್ಮಿತಂ ಚಿತ್ರವೇದಿಕಂ ।
ಸುವರ್ಣರತ್ನಕಲಶೈಃ ಕೈಲಾಸಾದತಿಸುಂದರಂ ॥೯॥

ತತ್ರಾಸ್ತಿ ಸೌಧಪ್ರವರಂ ಸಹಸ್ರಸ್ತಂಭಮಂಡಿತಂ ।
ಮಣಿಮಾಣಿಕ್ಯಖಚಿತಂ ದಿವ್ಯಸಿಂಹಾಸನೈರ್ವೃತಂ ॥೧೦॥

ಧೂಪದೀಪಾದಿಬಹುಲಂ ಭಕ್ಷ್ಯಭೋಜ್ಯಸಮನ್ವಿತಂ ।
ತತ್ರ ಭೃಂಗೀ ಮಹಾತೇಜಾ ಭಸ್ಮೋದ್ಧೂಲಿತವಿಗ್ರಹಃ ॥೧೧॥

---

ಇನ್ನು ಪಶ್ಚಿಮದಿಗ್ಭಾಗದಲ್ಲಿ ಪಶ್ಚಿಮಾಚಲ, ಪಾರಿಯಾತ್ರಗಳೆಂಬ ಪರ್ವತಗಳೇ ಪ್ರಾಕಾರಗಳಾಗಿವೆ. ಅಲ್ಲಿರುವ ಗೋಪುರವು ಹತ್ತು ಲಕ್ಷ ಯೋಜನವುಳ್ಳದ್ದಾಗಿದೆ. ॥೭॥

ಪಟ್ಟಿಗಳೂ, ದೇವತಾಗಾರಗಳೂ, ಸ್ತಂಭಗಳು, ಕಲಶಗಳು, ರುದ್ರಾವತಾರ ಪ್ರದರ್ಶಕವಾದ ಚಿತ್ರಗಳೂ, ಬಸವನ ವಿಗ್ರಹಗಳೂ ಅಲ್ಲಿ ಅಸಂಖ್ಯಾತವಾಗಿವೆ. ॥೮॥

ಅಲ್ಲಿಯೂ ಸಹಸ್ರ ಕಂಬಗಳು ಚಿತ್ರಗಳಿಂದ ಅಲಂಕೃತವಾಗಿವೆ. ಆಶ್ಚರ್ಯಕರವಾದ ಜಗಲಿಗಳೂ ಕಂಗೊಳಿಸುತ್ತಿವೆ. ಆ ಗೋಪುರಪ್ರದೇಶವು ಸುವರ್ಣಗಳಿಂದಲೂ, ರತ್ನಗಳಿಂದಲೂ ಅಲಂಕೃತವಾಗಿ ಕೈಲಾಸಪರ್ವತಕ್ಕಿಂತಲೂ ಹೆಚ್ಚು ಸುಂದರವಾಗಿದೆ. ॥೯॥

ಅಂತಹ ಗೋಪುರದ ಕೆಳಭಾಗದಲ್ಲಿ ಒಂದು ದಿವ್ಯ ಸೌಧವಿದೆ. ಅದಕ್ಕೂ ಸಾವಿರ ಕಂಬಗಳಿವೆ. ಆ ಸೌಧದ ಮಧ್ಯಭಾಗದಲ್ಲಿ ಮಣಿ, ಮಾಣಿಕ್ಯಗಳಿಂದ ಅಲಂಕೃತವಾದ ದಿವ್ಯಸಿಂಹಾಸನವೊಂದು ಪ್ರಕಾಶಿಸುತ್ತಿರುವುದು. ॥೧೦॥

ಅಲ್ಲಿ ಧೂಪದೀಪಾದಿಗಳೂ, ಭಕ್ಷ್ಯಭೋಜ್ಯಾದಿಗಳೂ ವಿಶೇಷವಾಗಿವೆ. ಇವುಗಳನ್ನು ಹೊಂದಿ ಭೃಂಗಿಯೆಂಬ ಮಹಾತೇಜಸ್ವಿಯೊಬ್ಬನು ಭಸ್ಮದಿಂದ ಲಿಪ್ತವಾದ ಅವಯವವುಳ್ಳವನಾಗಿ, ಅಲ್ಲಿ ನೆಲಸಿರುವನು. ॥೧೧॥

ತ್ರಿಪುಂಡ್ರವಿಲಸತ್ಫಾಲೋ ಮಣಿಮಾಣಿಕ್ಯಕಂಕಣಃ ।
ಚಂದ್ರಾರ್ಧಶೇಖರಾಬದ್ಧರಾಜತ್ಪಿಂಗಜಟಾಧರಃ ॥೧೨॥

ಸಿಂಹಾಸನಸ್ಥೋ ವರದೋ ಗಂಧರ್ವೈರ್ಗಣಪೈರ್ವೃತಃ ।
ವರುಣಾದಿಸುದಿಕ್ಪಾಲೈರ್ಗರುಡೈರಪ್ಸರೋಗಣೈಃ ॥೧೩॥

ಸೇವಿತೋ ರತ್ನಸೌಧಸ್ಥೋ ದಶಲಕ್ಷಗಣೈರ್ವೃತಃ ।
ವಾಸುಕಿಶ್ಶಂಖಪಾಲಶ್ಚ ಕಂಬಲಾಶ್ವತರೌ ತಥಾ ॥೧೪॥

ಶೇಷಶ್ಚ ತಕ್ಷಕಶ್ಚೈವ ದೈತ್ಯನಾಥಾ ನೃಪಾಸ್ತಥಾ ।
ಉಪಾಸತೇ ಭೃಂಗಿರಿಟಿಶ್ಶಿವಧ್ಯಾನಹತಾಶುಭಃ ॥೧೫॥

ತತ್ರಾಸ್ತಿ ಗರ್ಭಭವನಂ ಪ್ರಾಕಾರವರಗೋಪುರಂ ।
ಭೃಂಗೀಶ್ವರಾಖ್ಯಂ ತಲ್ಲಿಂಗಂ ಸಂಪೂಜ್ಯ ಸ್ತೌತಿ ಭಕ್ತಿತಃ ॥೧೬॥

---

ಅವನ ಹಣೆಯಲ್ಲಿ ತ್ರಿಪುಂಡ್ರವಿದೆ. ಕೈಯ್ಯಲ್ಲಿ ರತ್ನ ಮತ್ತು ಮಾಣಿಕ್ಯಗಳಿಂದ ಕೂಡಿದ ಕಂಕಣವಿದೆ. ಚಂದ್ರನನ್ನು ತಲೆಯಲ್ಲಿ ಧರಿಸಿರುವನು. ಅವನಿಗೆ ಪಿಂಗಳ ವರ್ಣದ ಜಟೆಯೂ ಇರುವುದು. ॥೧೨॥

ಆ ಭೃಂಗಿಯು, ಸಿಂಹಾಸನದಲ್ಲಿ ಮಂಡಿಸಿ ಭಕ್ತರಿಗೆಲ್ಲಾ ವರದನಾಗಿರುವನು. ಅವನ ಸುತ್ತಲೂ, ಗಂಧರ್ವರೂ, ಗಣನಾಥರೂ, ವರುಣನೇ ಮೊದಲಾದ ದಿಕ್ಪಾಲಕರೂ, ಗರುಡರೂ, ಅಪ್ಸರಸ್ಸುಗಳೂ ಸದಾ ನೆರೆದು ಸೇವಿಸುತ್ತಿರುವರು. ॥೧೩॥

ರತ್ನಸೌಧಗಳಲ್ಲಿ ವಿಹರಿಸುತ್ತಾ ಹತ್ತು ಲಕ್ಷ ಪ್ರಮಥಗಣಗಳಿಂದ ಕೂಡಿರುವನು. ವಾಸುಕಿ, ಶಂಖಪಾಲ, ಕಂಬಲ, ಅಶ್ವತರ, ಮುಂತಾದವರು ಸದಾ ಸನ್ನಿಹಿತರಾಗಿರುವರು. ॥೧೪॥

ಶೇಷ, ತಕ್ಷಕ, ಮೊದಲಾದವರೂ, ದೈತ್ಯೇಶ್ವರರೂ, ರಾಜರೂ, ಭೃಂಗಿರಿಟಿಯೂ, ಶಿವಧ್ಯಾನದಿಂದ ಪವಿತ್ರಾತ್ಮರೆನಿಸಿಕೊಂಡು ಸರ್ವದಾ ಭೃಂಗಿಯನ್ನು ಸೇವಿಸುತ್ತಿರುವರು. ॥೧೫॥

ಆ ದಿವ್ಯಹರ್ಮ್ಯದ ಮಧ್ಯಭಾಗದಲ್ಲಿ ಶ್ರೇಷ್ಠವಾದ ಪ್ರಾಕಾರದಿಂದಲೂ ಗೋಪುರದಿಂದಲೂ ಅಲಂಕೃತವಾಗಿರುವ ಒಂದು ಗರ್ಭಾಂಕಣವಿದೆ. ಅಲ್ಲಿ ಭೃಂಗೀ

ಪಂಚಾಮೃತೈಃ ಫಲರಸೈಃ ಪಂಚಗವ್ಯೋದಕೈರಪಿ ।
ಚಂದನೈಃ ಪುಷ್ಪಮಾಲಾಭಿರ್ಬಿಲ್ವಮಂದಾರಚಂಪಕೈಃ ॥೧೭॥

ಧೂಪೈರ್ದೀಪೈಸ್ತಥಾಪುಷ್ಪೈರ್ನೈವೇದ್ಯೈರ್ಮುಖವಾಸಜೈಃ ।

॥ ಭೃಂಗೀ ಉವಾಚ ॥

ಭೃಂಗೀಶ ಮೇ ಮನಸಿಜಸ್ತವಪಾದಪದ್ಮ ।
ಭೃಂಗೋ ಭವತ್ವನುದಿನಂ ಸರಸಾನುಮೋದಃ ।
ಪ್ರಾಪ್ನೋತು ಭಕ್ತಿಮಖಿಲಾಂ ತವ ಪಾದಪದ್ಮೇ ।
ಮಾಯಾ ತು ಯಾತು ದುರಿತಂ ಚರಿತಂ ತವೇಶ ॥೧೯॥

ಶ್ರೀಶಂಕರಾಮಯಹರೇಶ್ವರ ವಿಶ್ವಮೂರ್ತೇ ।
ವಿಶ್ವಾಧಿಕೇಶ ಕರಸಂಗಿಕುರಂಗಬಾಲ ।
ಮಂದಾರಕುಂದನವಚಂಪಕಬಿಲ್ವಮಾಲಾ ।
ದಿವ್ಯೋತ್ತಮಾಂಗದಭುಜಂಗ ಸುರೇಶ ಪಾಹಿ ॥೨೦॥

---

ಶ್ವರನೆಂಬ ಶಿವಲಿಂಗವಿದೆ. ಅದನ್ನು ಭೃಂಗಿಯು ಬಹಳ ಭಯಭಕ್ತಿಗಳಿಂದ ಪೂಜಿಸುತ್ತಿರುವನು. ॥೧೬॥

ಪಂಚಾಮೃತ, ಪಂಚಗವ್ಯ, ಅನೇಕ ಫಲರಸಗಳು, ಹೂವು, ಗಂಧ, ಬಿಲ್ವಪತ್ರೆ, ಮಂದಾರ, ಸಂಪಗೆ ಮೊದಲಾದ ಉತ್ತಮಜಾತಿಯ ಪುಷ್ಪಗಳು ಇವುಗಳಿಂದಲೂ, ಧೂಪ, ದೀಪ, ನೈವೇದ್ಯ, ಮುಖವಾಸನ್ನೇ ಮೊದಲಾದ ಪೂಜೋಪಚಾರಗಳಿಂದಲೂ ನಿತ್ಯವೂ ಭೃಂಗಿಯು ಆರಾಧಿಸುತ್ತಿರುವನು. ॥೧೭॥

“ ಎಲೈ ಭೃಂಗೀಶ್ವರನೇ, ನನ್ನ ಮನಸ್ಸು ನಿನ್ನ ಪಾದಪದ್ಮದ ಮಕರಂದಾಸ್ವಾದಮಾಡುವ ದುಂಬಿಯಂತಾಗಲಿ. ಮತ್ತು ನನಗೆ ನಿನ್ನ ಪಾದಪದ್ಮಾರಾಧನೆಯಲ್ಲಿ ಮನಸ್ಸು ಸ್ಥಿರವಾಗಿರಲಿ. ನನ್ನ ಅಜ್ಞಾನವು ಕಣ್ಮರೆಯಾಗಲಿ. ನನ್ನ ದುರಿತವೆಲ್ಲವೂ ನಿನ್ನ ಅನುಗ್ರಹಬಲದಿಂದ ನಿವಾರಣೆಯಾಗಲಿ. ॥೧೯॥

ಶಂಕರನೇ, ಸಕಲ ರೋಗನಿವಾರಕನೇ, ವಿಶ್ವಮೂರ್ತಿಯೇ, ವಿಶ್ವರಕ್ಷಕನೇ ಕಾಪಾಡು. ನೀನು ಅಭಿಮಾನದಿಂದ ಜಿಂಕೆಯ ಮರಿಯನ್ನು ಕೈಯ್ಯಲ್ಲಿ ಹಿಡಿದುಕೊಂಡಿರುವೆಯಷ್ಟೆ. ಮಂದಾರ, ಕೋಲುಮಲ್ಲಿಗೆ, ಬಿಲ್ವಪತ್ರೆ, ಮುಂತಾದ ಪತ್ರ

॥ ಸ್ಕಂದ ಉವಾಚ ॥

ಇತ್ಥಂ ಸ್ತೌತಿ ಸದಾ ಕಾಲಂ ಶಂಕರಂ ಲೋಕಶಂಕರಂ ।
ಗಣಾನಾಂ ಶತಲಕ್ಷೈಶ್ಚ ಸ್ವಸಮಾನೈಃ ಪರೀವೃತಃ ॥೨೧॥

ವಾಯವ್ಯೇ ಗೋಪುರಂ ಶಂಭೋಃ ಪಂಚಲಕ್ಷಪ್ರಮಾಣತಃ ।
ರುದ್ರಾವತಾರಕ್ರೀಡಾಭಿರನ್ವಿತಂ ಮಣಿವೇದಿಕೈಃ ॥೨೨॥

ರತ್ನಕುಂಭಶತಾಕೀರ್ಣಂ ವಾಯುಧೂತಪತಾಕಕಂ ।
ವೃಷಭಾಲಂಕೃತಂ ದಿವ್ಯಂ ತತ್ರ ಸೌಧಂ ಮಹಾತ್ಮನಃ ॥೨೩॥

ಸಹಸ್ರಸ್ತಂಭಸಂಯುಕ್ತಂ ಹೇಮಾಸನಸಮಾಶ್ರಿತಂ ।
ರಿಟಿರಾಸ್ತೇ ಶಿವಧ್ಯಾನವಿಧೂತಾಖಿಲಹೃತ್ತಮಃ ॥೨೪॥

---

ಪುಷ್ಪಗಳಿಂದ ಕೂಡಿರುವ ಮಾಲಿಕೆಯನ್ನು ಧರಿಸಿ, ತೋಳಿನಲ್ಲಿ ಸರ್ಪವನ್ನೇ ಬಳೆಯನ್ನಾಗಿ ಮಾಡಿಕೊಂಡಿರುವ ಸುರಾಧಿಪತಿಯೇ, ನನ್ನನ್ನು ಸಲಹು." ||೨೦||

ಹೀಗೆ ಭೃಂಗಿಯು ತನ್ನಂತೆಯೇ ಇರುವ ನೂರುಲಕ್ಷ ಗಣಗಳಿಂದ ಕೂಡಿ ಮೇಲೆ ಹೇಳಿದಂತೆ ಲೋಕಸುಖಪ್ರದನಾದ ಶಂಕರನನ್ನು ಸರ್ವದಾ ಪೂಜಿಸುತ್ತಿರುವನು. ||೨೧||

ಅಲ್ಲಿಂದ ಮುಂದೆ ವಾಯುವ್ಯದಿಗ್ಭಾಗದಲ್ಲಿಯೂ ಒಂದು ಶಿವಾಲಯದ ಗೋಪುರವಿದೆ. ಅದರ ಎತ್ತರವು ಐದು ಲಕ್ಷ ಯೋಜನ ಪರಿಮಿತಿಯುಳ್ಳದ್ದಾಗಿದೆ. ಆ ಗೋಪುರವೂ ರುದ್ರಾವತಾರಕ್ರೀಡೆಗಳನ್ನು ವಿಗ್ರಹಗಳಿಂದ ತೋರ್ಪಡಿಸುತ್ತಿದೆ. ಅಲ್ಲಿ ರತ್ನಮಯವಾದ ಅನೇಕ ವೇದಿಕೆಗಳಿರುವುವು. ||೨೨||

ಆ ಶಿವಾಲಯವು ಅನೇಕ ರತ್ನಮಯವಾದ ಕಲಶಗಳಿಂದಲೂ, ಗಾಳಿಯಿಂದ ಚಲನೆಪಡೆದಿರುವ ಪತಾಕೆಗಳಿಂದಲೂ ದಿವ್ಯವಾದ ವೃಷಭವಿಗ್ರಹಗಳಿಂದಲೂ ಶೋಭಿತವಾಗಿದೆ. ||೨೩||

ಅದಕ್ಕೆ ಸಾವಿರ ಕಂಬಗಳಿವೆ. ಮಧ್ಯದಲ್ಲಿ ಸುವರ್ಣಸಿಂಹಾಸನವಿರುವುದು. ಅದರಲ್ಲಿ ರಿಟಿಯು ಶಿವಧ್ಯಾನಮಾಡುತ್ತಾ, ಜ್ಞಾನಿಯಾಗಿ ಮಂಡಿಸಿರುವನು. ||೨೪||

ಭಸ್ಮಾಭ್ಯಕ್ತಸ್ತ್ರಿಪುಂಡ್ರಾಂಕೋ ರತ್ನಾಕಲ್ಪವಿಭೂಷಿತಃ ।
ಸೋಮಾರ್ಧಶೇಖರೋದ್ಭಾಸಿಮುಕುಟೋ ವಾಯುಸೇವಿತಃ ॥೨೫॥

ದ್ವಿಲಕ್ಷಗಣಪೈಶ್ಚೈವ ರುದ್ರವೃಂದೈರ್ನಿಷೇವಿತಃ ।
ತತ್ರ ಗರ್ಭಗೃಹಂ ಶಂಭೋ ರಿಟೇಶಾಖ್ಯಮಹೇಶಿತುಃ ॥೨೬॥

ಪ್ರಾಕಾರಗೋಪುರೋಪೇತಂ ಧೂಪೈರ್ದೀಪೈರ್ಮನೋಹರೈಃ ।
ಜಾತೀಮಲ್ಲಿಕಾಮಂದಾರಬಿಲ್ವೈರಭ್ಯರ್ಚ್ಯ ಶಂಕರಂ ॥೨೭॥

ಕೃತಾಂಜಲಿಪುಟಸ್ತೌತಿ ರಿಟೇಶಂ ಭಕ್ತಿಭಾವಿತಃ ।
ಸಮುದ್ಯತ್ಪುಲಕೋ ದೇವಂ ತ್ರಿಕಾಲಂ ಲಿಂಗಸಂಸ್ಥಿತಂ ॥೨೮॥

---

ರಿಟಿಯು, ಭಸ್ಮಲಿಪ್ತಾಂಗನಾಗಿರುವನು. ತ್ರಿಪುಂಡ್ರವು ಹಣೆಯಲ್ಲಿ ವಿರಾಜಿಸುತ್ತಿರುವುದು. ರತ್ನಾಭರಣಗಳಿಂದ ಹೊಳೆಯುತ್ತಿರುವನು. ಶಿರಸ್ಸಿನಲ್ಲಿ, ಪ್ರಜ್ವಲಿಸುವ ಕಿರೀಟವೂ, ಅರ್ಧಚಂದ್ರನೂ ಶೋಭಿಸುತ್ತಿರುವುವು. ದಿಕ್ಪಾಲಕನಾದ ವಾಯುವು ಸದಾ ಅವನನ್ನೇ ಸೇವಿಸುತ್ತಿರುವನು. ॥೨೫॥

ಅವನ ಸುತ್ತಲೂ ಎರಡು ಲಕ್ಷ ರುದ್ರಗಣಗಳು ನೆರೆದಿರುವರು. ಅಲ್ಲಿಯೇ ಶಂಕರನ ಗರ್ಭಗೃಹವೊಂದಿರುವುದು. ಅಲ್ಲಿಯ ಶಿವಲಿಂಗಕ್ಕೆ ರಿಟೇಶನೆಂಬ ಹೆಸರಿರುವುದು. ॥೨೬॥

ಆ ಶಿವಾಲಯಕ್ಕೂ ವಿಶಾಲವಾದ ಪ್ರಾಕಾರವೂ, ಉನ್ನತವಾದ ಗೋಪುರವೂ ಇರುವುದು. ಅಂತಹ ದೇವಾಲಯದಲ್ಲಿ ರಿಟಿಯು ಜಾಜೀ, ಮಲ್ಲಿಗೆ, ಮಂದಾರ, ಬಿಲ್ವ ಮಂತಾದ ಪುಷ್ಪಗಳಿಂದಲೂ, ಪತ್ರಗಳಿಂದಲೂ ಶಿವಲಿಂಗವನ್ನು ಅರ್ಚಿಸುತ್ತಿರುವನು. ॥೨೭॥

ರಿಟೇಶನಲ್ಲಿ ಅತ್ಯಂತಭಕ್ತಿಯುಳ್ಳವನಾಗಿ ರಿಟಿಯು ಅಂಜಲಿಬದ್ಧನಾಗಿ ಸ್ವಾಮಿಯ ಎದುರಿನಲ್ಲಿ ನಿಂತು ತ್ರಿಕಾಲಗಳಲ್ಲಿಯೂ ಭಗವಂತನನ್ನು ಹೀಗೆ ಧ್ಯಾನಿಸುವನು. ॥೨೮॥

|| ರಿಟಿರುವಾಚ ||

ವಿಶ್ವೇಶ ವಿಶ್ವ ಮದನಾಂತಕ ವಿಶ್ವಮೂರ್ತೇ ।
ಗೌರೀವರಾಮರಭುಜಂಗಫಣಾಭಿರಾಮ ।
ಗಂಗಾಧರಾಂಧಕರಿಪೋ ಪ್ರಮಥಾಧಿನಾಥ ।
ಪಾಹೀಶ ಮಾಮುಕಧಿಯಾದ್ಯ ಲಲಾಮಸೋಮ ॥೨೯॥

|| ಸ್ಕಂದ ಉವಾಚ ||

ಇತ್ಥಂ ಸ್ತೌತಿ ರಿಟಿರ್ಭಕ್ತ್ಯಾ ರಿಟೀಶಂ ಮುದಿತಾಂತರಃ ।
ತತೋತ್ತರೇ ಚ ಪ್ರಾಕಾರೇ ಸಂಸ್ಥಿತಾಶ್ಚ ಕುಲಾಚಲಾಃ ॥೩೦॥

ದುಂದುಭಿರ್ಮಂದರೋ ನಾಮ್ನಾ ಪರ್ವತೋ ರೈವತಸ್ತತಃ ।
ತತ್ರಾಪಿ ಗೋಪುರಂ ಶಂಭೋರ್ದಶಲಕ್ಷೋರ್ಧ್ವಗಂ ಸ್ಥಿತಂ ॥೩೧॥

ಸಹಸ್ರತಲಸಂಯುಕ್ತಂ ಪಟ್ಟಿಕಾವೇದಿಕಾನ್ವಿತಂ ।
ರತ್ನಶೃಂಗಾಗ್ರವಿಲಸದ್ಧ್ವಯಮಾನಪತಾಕಕಂ ॥೩೨॥

---

"ಸ್ವಾಮಿಯೇ, ಪರಮೇಶ್ವರನೇ, ನೀನು ಲೋಕದೊಡೆಯನು. ಮನ್ಮಥನನ್ನು ನಾಶಮಾಡಿದವನು, ಲೋಕವೇ ನಿನ್ನ ಆಕಾರ, ಗೌರಿಗೆ ಪತಿಯೆನಿಸಿ, ಭುಜಂಗಫಣೆಗಳಿಂದ ಸುಂದರನಾಗಿರುವೆ. ಗಂಗೆಯನ್ನು ಧರಿಸಿರುವವನು ನೀನು. ಅಂಧಕಾಸುರ ಸೂದನನೂ ನೀನೇ. ಪ್ರಮಥಗಣಗಳಿಗೆ ಒಡೆಯನೆನಿಸಿ, ಚಂದ್ರಚೂಡನಾಗಿರುವ ಮಹೇಶ್ವರನೇ, ನನ್ನ ಹೃದಯದಲ್ಲಿ ಸರ್ವದಾ ನೀನು ನೆಲಸಿ ನನ್ನನ್ನು ರಕ್ಷಿಸು." ||೨೯||

ಹೀಗೆ ರಿಟಿಯು ಭಕ್ತಿಯಿಂದ ರಿಟೀಶದೇವನನ್ನು ಸ್ತುತಿಸಿ, ಸಂತುಷ್ಟನಾಗಿ ವಾಸಿಸುತ್ತಿರುವನು. ಅಲ್ಲಿಂದ ಮುಂದೆ ಉತ್ತರದಿಕ್ಕಿನಲ್ಲಿ ಅನೇಕ ಕುಲಪರ್ವತಗಳು ಪ್ರಾಕಾರರೂಪವಾಗಿ ನಿಂತಿರುವುವು. ||೩೦||

ದುಂದುಭಿ, ಮಂದರ, ರೈವತ ಮುಂತಾದ ಪರ್ವತಗಳು ಅದಕ್ಕೆ ಪ್ರಾಕಾರಗಳ ಗೋಡೆಗಳಂತಿವೆ. ಆ ಉತ್ತರದಿಕ್ಕಿನಲ್ಲಿರುವ ಗೋಪುರವು ಹತ್ತುಲಕ್ಷಯೋಜನದಷ್ಟು ಎತ್ತರದಲ್ಲಿದೆ. ||೩೧||

ಆ ಗೋಪುರಕ್ಕೆ ಸಾವಿರ ಅಂತಸ್ತುಗಳಿವೆ. ವಿಶಾಲವಾದ ವೇದಿಕೆಗಳಿಂದ

ರುದ್ರಾವತಾರಕ್ರೀಡಾಭಿರನ್ವಿತಂ ವೃಷಭೈರಪಿ ।
ತತ್ರಾಸ್ತಿ ಸೌಧಪ್ರವರಂ ಮಾಣಿಕ್ಯತಲಕುಟ್ಟಿಮಂ ॥೩೩॥

ಸಹಸ್ರಕನಕಸ್ತಂಭೈರ್ನಿರ್ಮಿತಂ ವನರಾಜಿತಂ ।
ಹೇಮಸಿಂಹಾಸನೈರ್ಯುಕ್ತಂ ಧೂಪಗಂಧಾನುಮೋದಿತಂ ॥೩೪॥

ಮಣಿಪ್ರಭಾಭಾಸಿತಂ ಚ ತಿರಸ್ಕೃತನಭೋಂಕಣಂ ।
ಕಾಲಾಗ್ನಿರುದ್ರಸ್ತತ್ರಾಸ್ತೇ ಯಕ್ಷೇಶೈಶ್ಚ ನಿಷೇವಿತಃ ॥೩೫॥

ಭಸ್ಮರುದ್ರಾಕ್ಷಪೀತಾಂಗೋ ಮುಕ್ತಾಮಾಣಿಕ್ಯಭೂಷಣಃ ।
ಮುಕುಟೋದ್ಯತ್ಸುಧಾಧಾಮಖಂಡೋಜ್ವಲಿತವಕ್ತ್ರಕಃ ॥೩೬॥

---

ಕೂಡಿರುತ್ತದೆ. ರತ್ನಮಯವಾದ ಶಿಖರಗಳಲ್ಲಿ ಗಾಳಿಯಿಂದ ಅಲ್ಲಾಡುವ ಧ್ವಜಗಳು ಅಸಂಖ್ಯಾತವಾಗಿವೆ. ॥೩೨॥

ಆ ಶಿಖರಗಳಲ್ಲಿ ರುದ್ರನ ಅವತಾರಗಳನ್ನು ವಿವರಿಸುವ ಬೊಂಬೆಗಳಿವೆ. ಶಿಖರಗಳ ಮುಂಭಾಗದಲ್ಲೆಲ್ಲಾ ಬಸವನ ವಿಗ್ರಹಗಳು ಶೋಭಿಸುತ್ತಿವೆ. ಆ ಶಿಖರದ ಕೆಳಭಾಗದಲ್ಲಿ ಮಾಣಿಕ್ಯಗಳಿಂದ ಕೆತ್ತಿದ ಭೂಮಿಯುಳ್ಳ ಸೌಧವೊಂದಿರುವುದು.॥೩೩॥ ಅದಕ್ಕೆ ಸಾವಿರ ಚಿನ್ನದ ಕಂಬಗಳಿವೆ. ಸುತ್ತಲೂ ಉದ್ಯಾನವನಗಳಿವೆ. ಹೇಮ ಸಿಂಹಾಸನಗಳು ಬಹಳವಾಗಿರುವುವು. ದೇವಾಲಯವೆಲ್ಲವೂ ಧೂಪ, ಗಂಧ ಇವುಗಳ ಸುವಾಸನೆಯಿಂದ ಸುವಾಸಿತವಾಗಿರುವುದು. ॥೩೪॥

ಮತ್ತು ರತ್ನದ ಕಾಂತಿಯಿಂದ ಪ್ರಕಾಶಮಾನವಾಗಿರುವುದು. ಆಕಾಶಮಂಡಲ ವನ್ನೇ ತಿರಸ್ಕರಿಸುವಂತಿರುವುದು. ಅಂತಹ ದಿವ್ಯಸೌಧವಲ್ಲಿ ಕಾಲಾಗ್ನಿರುದ್ರನು, ಯಕ್ಷೇಶ್ವರೊಡಗೂಡಿ ವಾಸಿಸುತ್ತಿರುವನು. ॥೩೫॥

ಕಾಲಾಗ್ನಿರುದ್ರನು ಭಸ್ಮ, ರುದ್ರಾಕ್ಷಿ ಇವುಗಳಿಂದ ಅಲಂಕೃತನಾಗಿರುವನು. ಮುತ್ತು, ರತ್ನಗಳ ಒಡವೆಗಳಿಂದ ಶೋಭಿಸುತ್ತಿರುವನು. ಶಿರಸ್ಸಿನಲ್ಲಿ ಕಿರೀಟವೂ, ಅರ್ಧಚಂದ್ರಾಕಾರವೂ, ವಿರಾಜಿಸುತ್ತಿರುವುದು. ಮುಖದಲ್ಲಿ ವಿಶೇಷವಾದ ಕಾಂತಿ ಯಿರುವುದು. ॥೩೬॥

ತ್ರಿಪುಂಡ್ರರೇಖಾವಿತತಫಾಲಭಾಗಮನೋಹರಃ ।
ತ್ರಿಶೂಲಪಾಣಿರ್ವರದೋ ಹೇಮಸಿಂಹಾಸನಸ್ಥಿತಃ ॥೩೭॥

ಕುಬೇರೇಣ ಚ ದೇವೈಶ್ಚ ಪಂಚಲಕ್ಷಗಣೈರಪಿ ।
ಹೇತಿಪಾಶಮಹಾಶೂಲಧರೈಸ್ತ್ರೈರಹಿಮನ್ಯುಭಿಃ ॥೩೮॥

ತತ್ರಾಗಾರಂ ಮಹೇಶಸ್ಯ ಕಾಲರುದ್ರೇಶ್ವರಸ್ಯ ಚ ।
ಪ್ರಾಕಾರಗೋಪುರಯುತಂ ಧೂಪದೀಪಶತಾವೃತಂ ॥೩೯॥

ನೈವೇದ್ಯೈಶ್ಚಂದನೈಶ್ಚೈವ ಬಿಲ್ವಮಂದಾರಪಂಕಜೈಃ ।
ಸಂಪೂಜ್ಯ ಪರಯಾ ಭಕ್ತ್ಯಾ ಸ್ತೌತಿ ದೇವಂ ಪಿನಾಕಿನಂ ॥೪೦॥

॥ ಕಾಲಾಗ್ನಿರುದ್ರ ಉವಾಚ ॥

ತ್ರಿಯಂಬಕ ಸದಾಶಿವ ತ್ರಿಪುರಮಾರಕಾಲಾಂತಕ ।
ತ್ರಿಶೂಲವರಪಾಶಸಂಯುತಕರಾದ್ರಿಬಾಣಾಸನ ।

---

ಹಣೆಯಲ್ಲಿ ತ್ರಿಪುಂಡ್ರರೇಖೆಯೂ, ಕೈಯಲ್ಲಿ ತ್ರಿಶೂಲವೂ ಮನೋಹರವಾಗಿ ಕಾಣುತ್ತಿರುವುದು. ಸರ್ವದಾ ಸುವರ್ಣಸಿಂಹಾಸನದಲ್ಲಿ ಮಂಡಿಸಿರುವನು. ಭಕ್ತರಿಗೆ ವರವನ್ನು ದಯಪಾಲಿಸುತ್ತಾ ವರದನೆನಿಸಿರುವನು. ॥೩೭॥

ಕುಬೇರನೂ ಅಲ್ಲಿ ನೆಲಸಿರುವನು. ಐದು ಲಕ್ಷ ಗಣಗಳೂ ಆ ಭಾಗದಲ್ಲಿ ವಾಸಿಸುತ್ತಿರುವರು. ಆಯುಧಗಳು, ಪಾಶಗಳು, ತ್ರಿಶೂಲಗಳು, ಸರ್ಪಗಳು, ಮುಂತಾದ ವಸ್ತುಗಳಿಂದ ಆ ಸೌಧವು ಪ್ರಕಾಶಿಸುತ್ತಿರುವುದು. ॥೩೮॥

ಆ ಸೌಧದಲ್ಲಿ ಕಾಲರುದ್ರೇಶ್ವರನ ಲಿಂಗವಿರುವುದು. ಆ ಸೌಧಕ್ಕೆ ಪ್ರಾಕಾರವೂ, ಗೋಪುರವೂ ವಿರಾಜಿಸುತ್ತಿರುವುದು. ಧೂಪ, ದೀಪಾದಿಗಳಿಂದ ಕೂಡಿ ಆ ಹರ್ಮ್ಯವು ಅತ್ಯಂತ ಪ್ರಕಾಶಮಾನವಾಗಿರುವುದು. ॥೩೯॥

ನಾನಾವಿಧವಾದ ನೈವೇದ್ಯಾದಿಗಳಿಂದಲೂ, ಬಿಲ್ವ, ಮಂದಾರ, ಕಮಲ ಮುಂತಾದ ಪುಷ್ಪಗಳಿಂದ ರಚಿತವಾದ ಮಾಲೆಗಳಿಂದಲೂ, ಕಾಲಾಗ್ನಿರುದ್ರನು ಕಾಲರುದ್ರೇಶನನ್ನು ಅರ್ಚಿಸಿ, ದೇವರನ್ನು ಹೀಗೆ ಪ್ರಾರ್ಥಿಸುವನು. ॥೪೦॥

“ ಪರಮೇಶ್ವರನೇ, ನೀನು ತ್ರ್ಯಂಬಕನು. ಸದಾ ಮಂಗಳಪ್ರದನು. ತ್ರಿಪುರ

ಪ್ರಸಾದಜನಿತಾನನ ಪ್ರಕಟಚಂಡಧಾಮಾಗಮ ।
ಸುಧಾಂಶುಕಶಿಖಂಡಕ ಸುರಸನಾಥ ಮಾಂ ಪಾಲಯ ॥೪೧॥

ಇತಿ ಸ್ತೌತಿ ಪ್ರಹೃಷ್ಟಾತ್ಮಾ ಕಾಲರುದ್ರೋ ಮಹೇಶ್ವರಂ ।
ತಸ್ಯ ಪ್ರಾಕಾರಕೋಣೇ ಚಾಪ್ಯೈಶಾನ್ಯಾಂ ದಿಶಿ ಸಂಸ್ಥಿತಃ ॥೪೨॥

ವೀರಭದ್ರಸ್ತದೈವಾಸ್ತೇ ಗಣಲಕ್ಷೈಃ ಪರೀವೃತಃ ।
ತದುತ್ತರಂ ಹಿ ಕೈಲಾಸಂ ತತ್ರ ಗೋಪುರಮುತ್ತಮಂ ॥೪೩॥

ಪಂಚಲಕ್ಷಪ್ರಮಾಣೇನ ವೇದಿಕಾಪಟ್ಟಿಕಾನ್ವಿತಂ ।
ಸುವರ್ಣರತ್ನಖಚಿತಂ ಕಲಶೈಶ್ಶೋಭಿತಂ ಮುನೇ ॥೪೪॥

---

ಗಳನ್ನು ನಾಶಮಾಡಿ, ಯಮನಿಗೂ ಯಮನಂತಿರುವವನಾಗಿದ್ದೀಯೇ, ನಿನ್ನ ಕೈಯ್ಯಲ್ಲಿ, ತ್ರಿಶೂಲ, ಪಾಶ, ಮೇರುಪರ್ವತವೆಂಬ ಧನುಸ್ಸು, ಇವುಗಳು ಸರ್ವದಾ ತೋರಿಬರುತ್ತಿವೆ. ನಿನ್ನ ಮುಖವು ಸರ್ವದಾ ಪ್ರಸನ್ನವಾಗಿರುವುದು. ಸೂರ್ಯನ ತೇಜಸ್ಸಿಗೆ ನಿನ್ನ ಶರೀರವೇ ಆಶ್ರಯ. ಚಂದ್ರಬಿಂಬವನ್ನು ಶಿರಸ್ಸಿನಲ್ಲಿ ಧರಿಸಿ, ಶ್ರೇಷ್ಠವಾದ ರಸಗಳಿಗೆಲ್ಲಾ ಒಡೆಯನಾಗಿರುವ ಪರಮೇಶ್ವರನೇ, ನನ್ನನ್ನು ಕಾಪಾಡು." ||೪೧||

ಎಂಬುದಾಗಿ ಕಾಲರುದ್ರನು ಮಹೇಶ್ವರನನ್ನು ಸಂತೋಷದಿಂದ ಸ್ತುತಿಸುವನು. ಹಾಗೆಯೇ, ಈಶಾನ್ಯದಿಕ್ಕಿನಲ್ಲಿ ಪ್ರಾಕಾರವೊಂದು ಶೋಭಿಸುತ್ತಿರುವುದು. ||೪೨||

ಅಲ್ಲಿ ವೀರಭದ್ರನು ಲಕ್ಷಗಣಪರಿವೃತನಾಗಿ ನೆಲಸಿರುವನು. ಅದರ ಸಮೀಪದಲ್ಲಿ ಕೈಲಾಸಪರ್ವತವಿರುವುದು. ಅದಕ್ಕೂ ಶ್ರೇಷ್ಠವಾದ ಗೋಪುರವೊಂದಿರುವುದು. ||೪೩||

ಅದು ಐದು ಲಕ್ಷಯೋಜನದಷ್ಟು ಎತ್ತರವಿರುವುದು. ಅದರಲ್ಲಿ ವೇದಿಕೆಗಳೂ ಪಟ್ಟಿಗಳೂ ಕಂಗೊಳಿಸುತ್ತಿರುವುವು. ಅದಕ್ಕೆ ಸುವರ್ಣಗಳಿಂದಲೂ, ರತ್ನಗಳಿಂದಲೂ ನಿರ್ಮಿತವಾದ ಕಲಶಗಳು ಅಸಂಖ್ಯಾತವಾಗಿ ಪ್ರಕಾಶಿಸುತ್ತಿರುವುವು. ||೪೪||

**ರುದ್ರಾವತಾರವೃಷಭೈಶ್ಶೋಭಿತಂ ತನ್ಮನೋಹರಂ।**
**ತತ್ರ ಸೌಧವರೇ ಕ್ಲೃಪ್ತೇ ಸಹಸ್ರಸ್ತಂಭಮಂಟಪೇ ॥೪೪॥**

**ಹೇಮರತ್ನಚಿತೇ ದಿವ್ಯಹೇಮಸಿಂಹಾಸನಸ್ಥಿತಃ।**
**ಈಶಾನೇನ ಚ ರುದ್ರೈಶ್ಚ ಗಣಲಕ್ಷಸಮನ್ವಿತಃ ॥೪೫॥**

**ಭಸ್ಮೋದ್ಧೂಲಿತಸರ್ವಾಂಗಸ್ತ್ರಿಪುಂಡ್ರಪರಿಚಿಹ್ನಿತಃ।**
**ರಾಜದ್ರತ್ನಾಂಗದೈರ್ಯುಕ್ತೋ ಮಣಿರುದ್ರಾಕ್ಷಹಾರಕಃ ॥೪೬॥**

**ಮುಕುಟೋದ್ಯತ್ಸುಧಾಧಾಮಖಂಡಾರ್ಧಜಟಿಲಾಲಕಃ।**
**ಸದಾಶಿವಾರ್ಚಕವರಶ್ಶೂಲಹಸ್ತೋ ಹಿ ಭೈರವಃ ॥೪೭॥**

---

ಆ ಶಿಖರದಲ್ಲಿ ರುದ್ರಾವತಾರದ ಚಿತ್ರಗಳೂ, ಬಸವನ ವಿಗ್ರಹಗಳೂ, ಕಂಗೊಳಿಸುತ್ತಿರುವುವು. ಆ ಶಿಖರಕ್ಕೆ ಸಂಬಂಧಿಸಿದ ಉಪ್ಪರಿಗೆ ಮನೆಯೊಂದಿದೆ. ಅದು ಬಹಳ ರಮ್ಯವಾಗಿರುವುದು. ಅಲ್ಲಿ ಸಾವಿರ ಕಂಭಗಳಿಂದ ಕೂಡಿದ ಮಂಟಪ ವಿರುವುದು. ॥೪೪॥

ಅದರ ಮಧ್ಯಭಾಗದಲ್ಲಿ ಸುವರ್ಣದಿಂದಲೂ, ರತ್ನದಿಂದಲೂ ನಿರ್ಮಿತವಾದ ಸಿಂಹಾಸನವೊಂದಿದೆ. ಅದರಲ್ಲಿ ದಿಕ್ಪಾಲಕನಾದ ಈಶಾನನಿಂದಲೂ, ರುದ್ರಗಣ ಗಳಿಂದಲೂ, ಒಂದುಲಕ್ಷ ಸೈನ್ಯದಿಂದಲೂ ಪರಿವೃತನಾಗಿ ವೀರಭದ್ರನು ಮಂಡಿಸಿರು ವನು. ॥೪೫॥

ವೀರಭದ್ರನ ಸರ್ವಾಂಗವೂ ಭಸ್ಮದಿಂದ ಲಿಪ್ತವಾಗಿದೆ. ತ್ರಿಪುಂಡ್ರದಿಂದ ಹಣೆಯು ಅಲಂಕೃತವಾಗಿದೆ. ರತ್ನದ ತೋಳುಬಳೆಗಳನ್ನು ಧರಿಸಿ, ಮಣಿರುದ್ರಾಕ್ಷಿಗಳ ಹಾರವನ್ನು ಹಾಕಿಕೊಂಡು ವೀರಭದ್ರನು ಕಂಗೊಳಿಸುತ್ತಿರುವನು. ॥೪೬॥

ವೀರಭದ್ರನು ದಿವ್ಯವಾದ ಕಿರೀಟವನ್ನು ಧರಿಸಿರುವನು. ಅವನ ಶಿರೋ ಭಾಗದಲ್ಲಿ ಅರ್ಧಚಂದ್ರನು ವಿರಾಜಿಸುವನು. ಚಂದ್ರಕಾಂತಿಯಿಂದ ಮುಂಗುರುಳು ತೇಜೋಮಯವಾಗಿರುವುದು. ತ್ರಿಶೂಲವನ್ನು ಕೈಯ್ಯಲ್ಲಿ ಹಿಡಿದು ಸರ್ವದಾ ಸದಾ ಶಿವನ ಅರ್ಚನೆಯಲ್ಲಿಯೇ ನಟ್ಟ ಮನಸ್ಸುಳ್ಳವನಾಗಿ, ನೋಡುವುದಕ್ಕೆ ಭಯಂಕರ ನಾಗಿ ಕಾಣುತ್ತಿರುವನು. ॥೪೭॥

ತತ್ರೈಕಂ ಭವನಂ ಶಂಭೋರ್ವೀರಭದ್ರೇಶ್ವರಸ್ಯ ಚ ।
ನವರತ್ನಾಂಕಿತಂ ದಿವ್ಯಂ ಪ್ರಾಕಾರವರಗೋಪುರಂ ॥೪೮॥

ಧೂಪಾಮೋದಿತದಿಕ್ಚಕ್ರಂ ಮಣಿದ್ಯುತಿವಿರಾಜಿತಂ ।
ತಲ್ಲಿಂಗಂ ಪೂಜಯತ್ಯೇವ ಬಿಲ್ವಮಂದಾರಚಂಪಕೈಃ ॥೪೯॥

ದೀಪೋಪಹಾರಧೂಪೈಶ್ಚ ಚಂದನೇನಾಕ್ಷತಾದಿಭಿಃ ।
ಸ್ತೌತಿ ಹೃಷ್ಟಸ್ತ್ರಿಕಾಲಂ ಸ ತಲ್ಲಿಂಗಂ ಪಾರಮೇಶ್ವರ ॥೫೦॥

॥ ವೀರಭದ್ರ ಉವಾಚ ॥

ಕ್ಷಯದ್ವೀರ ದಕ್ಷಾಧ್ವರಧ್ವಂಸಕಾಶಾ ।
ವಸೇಶಾನ ಚಾಶಾವಿಹೀನೇತಿತುಷ್ಟಃ ।
ತ್ವಮೇವಾಸಿ ಭದ್ರಂ ತ್ವಮೇವಾಸ್ಯ ಭದ್ರಂ ।
ಸತಾಂ ಚಾಸತಾಮಾಶು ಮಾಂ ಮೋಕ್ಷಯಾದ್ಯ ॥೫೧॥

---

ಅಂತಹ ವೀರಭದ್ರನು ಶಿವಾರ್ಚನೆಗಾಗಿ ಒಂದು ಗರ್ಭಾಗಾರವನ್ನು ನಿರ್ಮಿಸಿ ಕೊಂಡಿರುವನು. ಅಲ್ಲಿ ವೀರಭದ್ರೇಶ್ವರನೆಂಬ ಹೆಸರಿನ ಲಿಂಗವೊಂದನ್ನು ಪ್ರತಿಷ್ಠೆ ಮಾಡಿರುವನು. ಆ ಆಲಯದ ಪ್ರಾಕಾರವೂ, ಗೋಪುರವೂ ನವರತ್ನಮಯವಾಗಿ ಪ್ರಕಾಶಿಸುತ್ತಿರುವುದು. ॥೪೮॥

ಆ ಗರ್ಭಾಗಾರವು ಧೂಪದ ವಾಸನೆಯಿಂದ ತುಂಬಿರುವುದು. ಅಲ್ಲದೆ ಆ ಸುವಾಸನೆಯು ಸಮಸ್ತದಿಕ್ಕುಗಳಿಗೂ ವ್ಯಾಪಿಸುತ್ತಿರುವುದು. ರತ್ನಕಾಂತಿಗಳಿಂದ ಶಿವಾಲಯವು ಹೊಳೆಯುತ್ತಿರುವುದು. ಇಂತಹ ಸ್ಥಲದಲ್ಲಿ ವೀರಭದ್ರನು ಬಿಲ್ವ, ಮಂದಾರ, ಸಂಪಗೆ ಮೊದಲಾದ ಪುಷ್ಪಗಳಿಂದ ಲಿಂಗವನ್ನು ಪೂಜಿಸುತ್ತಿರುವನು. ॥೪೯॥

ದೀಪಗಳಿಂದಲೂ, ಧೂಪಗಳಿಂದಲೂ, ಗಂಧಾಕ್ಷತಾದಿಗಳಿಂದಲೂ, ದಿವ್ಯವಾದ ಉಪಹಾರದ್ರವ್ಯಗಳಿಂದಲೂ, ಆ ಪರಶಿವನ ಲಿಂಗವನ್ನು ತ್ರಿಕಾಲದಲ್ಲಿಯೂ ಆರಾಧಿ ಸುತ್ತಿರುವನು. ॥೫೦॥

" ನಮ್ಮ ಪಾಪಗಳನ್ನೆಲ್ಲಾ ನಾಶಮಾಡಿದ ಶಂಭುವೇ, ದಕ್ಷಬ್ರಹ್ಮನ ಯಜ್ಞವನ್ನು ನಾಶಮಾಡಿದವನೇ, ಆಶಾಪಾಶವನ್ನು ದೂರಮಾಡಿರುವವನೇ,

**ಇತ್ಥಂ ಸ್ತೌತಿ ಸದಾ ಶಂಭುಂ ವೀರಭದ್ರೋ ಗಣಾಗ್ರಣೀಃ ।**
**ಶೈಲಾವರಣಮೇತದ್ವೈ ಶಂಭೋಶ್ಶಿವಗಣಾಶ್ರಯಂ ॥೫೨॥**

**ದಶಲಕ್ಷಪ್ರಮಾಣೇನ ಪರಿಖಾಕೃತಿವಿಸ್ತರಂ ।**
**ಗೋಪುರಾರ್ಬುದಕೋಪೇತಂ ರಮ್ಯಮಂಟಪಮಂಡಿತಂ ॥೫೩॥**

**ಸಹಸ್ರನಿಯುತಸ್ತಂಭೈಃ ಕುಂಭೈಶ್ಚಾಪಿ ಸಮನ್ವಿತಂ ।**
**ರಮ್ಯಲಿಂಗಾಲಯೋತ್ತುಂಗರಾಜದ್ವೃಷಭಶೇಖರೈಃ ॥೫೪॥**

**ಧಗದ್ಧಗಿತದಿಕ್ಚಕ್ರಂ ಶೈಲಾವರಣಮೀಶಿತುಃ ।**
**ವ್ಯಾಯಾಮಾಯತದೀರ್ಘಂ ಚಾಪ್ಯೇತದ್ವೋಽಭಿಹಿತಂ ಮಯಾ॥೫೫॥**

---

ನಿತ್ಯತೃಪ್ತನೇ ನಿನಗೆ ವಂದನೆ. ಸತ್ಪುರುಷರಿಗೆ ಮಂಗಳಸ್ವರೂಪನೂ ನೀನೇ. ದುಷ್ಟರನ್ನು ಶಿಕ್ಷಿಸಿ ಅವರಿಗೆ ಶುಭವನ್ನುಂಟುಮಾಡುವವನೂ ನೀನೇ. ಇಂತಹ ಮಹಾಮಹಿಮನಾದ ಪರಮೇಶ್ವರನೇ, ನನಗೆ ಈಗ ನಿತ್ಯಾನಂದರೂಪವಾದ ಮೋಕ್ಷವನ್ನು ಅನುಗ್ರಹಿಸು" ಎಂದು ವೀರಭದ್ರನು ಸ್ವಾಮಿಯನ್ನು ಸರ್ವದಾ ಸ್ತುತಿಸುವನು. ||೫೧||

ಹೀಗೆ ಗಣಶ್ರೇಷ್ಠನಾದ ವೀರಭದ್ರನು ಶಂಕರನನ್ನು ಸರ್ವದಾ ಪೂಜಾದಿಗಳಿಂದ ತೃಪ್ತಿಪಡಿಸುವನು. ಅಲ್ಲಿಯೇ ಶಂಭುವಿನ ಗಣಗಳಿಗೆ ಆಶ್ರಯಸ್ಥಾನವಾದ ಶೈಲಾವರಣವೊಂದಿರುವುದು. ||೫೨||

ಆ ಶೈಲಾವರಣವು ಹತ್ತುಲಕ್ಷ ಯೋಜನಪರಿಮಿತಿಯುಳ್ಳದ್ದಾಗಿದೆ. ಸುತ್ತಲೂ ಕಂದಕವು ನಿರ್ಮಿತವಾಗಿದೆ. ಅರ್ಬುದಸಂಖ್ಯೆಯಲ್ಲಿ ಗೋಪುರಗಳಿವೆ. ದಿವ್ಯವಾದ ಮಂಟಪಗಳಿವೆ. ||೫೩||

ಆ ಶೈಲಾವರಣಕ್ಕೆ ಹತ್ತುಸಾವಿರ ಕಂಭಗಳಿವೆ. ಅಷ್ಟೇ ಕಲಶಗಳು ಅಲಂಕೃತವಾಗಿವೆ. ಹಾಗೆ ಲಿಂಗಾಲಯದ ಮೇಲೆ ಬಹಳ ಎತ್ತರವಾದ ವೃಷಭಾಕೃತಿಯಿಂದ ಕೂಡಿದ ರಮ್ಯವಾದ ಶಿಖರಗಳಿವೆ. ||೫೪||

ಅಂತಹ ಮಹೇಶ್ವರನ ಆವಾಸಸ್ಥಾನವಾದ ಶೈಲಾವರಣದ ಕಾಂತಿಯು ಸಮಸ್ತ ದಿಕ್ಕುಗಳಲ್ಲಿಯೂ ಧಗಧಗಾಯಮಾನವಾಗಿ ವ್ಯಾಪಿಸಿದೆ. ಇದರ ಉದ್ದ ಮತ್ತು ಅಗಲವನ್ನು ನಾನು ಹಿಂದೆಯೇ ನಿನಗೆ ತಿಳಿಸಿರುವೆನು. ||೫೫||

ಏವಮಾಭ್ಯಂತರಾಃ ಕ್ಲುಪ್ತಾಃ ಪ್ರಾಕಾರವರಗೋಪುರಾಃ ।
ಸಹಸ್ರಪ್ರಮಥಾಧೀಶೈಸ್ಸಪ್ತಸಾಗರಮಧ್ಯಗೈಃ ॥೫೬॥

ಶೈಲದ್ವೀಪಸರಿದ್ಭಿಶ್ಚ ನಿರ್ಮಿತಂ ವಿಪಿನೈರಪಿ ।
ಧ್ಯಾತ್ವಾ ಧ್ಯೇಯಮಿದಂ ವಿಪ್ರಗಣೋ ಭವತಿ ಶಾಂಕರಃ ॥೫೭॥

ನೈವ ಪ್ರಾಕಾರಮಧ್ಯೇ ಹರವಿಧಿಹರಯೋ ನೋ ಗಣಾ ನಾಪಿ ವಾತೋ ।
ನೋ ಚಂದ್ರೋ ನ ಚ ಸೂರ್ಯರಶ್ಮಿನಿಚಯೋ ನಾಗ್ನಿತ್ರಯಂ ನೋ ಸುರಾಃ।
ಏಕಸ್ತತ್ರ ಮಹೇಶ್ವರೋ ವಿಹರತಿ ಸ್ವೈರಂ ಸಹಾಂಬೋ ಮುದಾ ।
ತದ್ವೇದ್ಯೈರಪಿ ವಕ್ತುಮೇವ ನ ಭವೇತ್ಕಾ ವಾ ಕಥಾನ್ಯಸ್ಯ ಹಿ ॥೫೮॥

ಶರಶರಧಿರಥಾಂಗಂ ಯಂತೃಯಾನಂ ವಹಾನ್ವೈ
ಧನುವರಮಥ ತಜ್ಜ್ಯಾ ವೈರಿವರ್ಗಂ ರಥೀ ಚ ।

---

ಈರೀತಿಯಾಗಿ ಕೈಲಾಸಪರ್ವತದ ಒಳ ಅಂಗಳದಲ್ಲಿ ಪ್ರಾಕಾರಗಳೂ, ಗೋಪುರಗಳೂ, ಅಸಂಖ್ಯಾತವಾಗಿವೆ. ಸಾವಿರಾರು ಪ್ರಮಥಗಣಾಧೀಶರು ಅಲ್ಲಿ ಸರ್ವದಾ ನೆಲಸಿರುವರು. ಸಪ್ತಸಾಗರಗಳ ಮಧ್ಯದಲ್ಲಿ ಕೈಲಾಸವಿರುವುದು. ನಾನಾ ಶೈಲಗಳೂ, ದ್ವೀಪಗಳೂ, ನದಿಗಳೂ, ಅನೇಕ ಉದ್ಯಾನಗಳೂ ಅಲ್ಲಿ ಮನೋಹರಾಕಾರದಲ್ಲಿರುವುವು. ಯಾರು ಈರೀತಿ ಸಂಪತ್ಸಮೃದ್ಧವಾದ ಪ್ರದೇಶದಲ್ಲಿ ನೆಲಸಿರುವ ಧ್ಯೇಯವಸ್ತುವಾದ ಪರಶಿವನನ್ನು ಸರ್ವದಾ ಸ್ಮರಿಸುವರೋ ಅವರೇ ಜ್ಞಾನಿಗಳು. ನಿಜವಾದ ಶಂಕರಕಿಂಕರರೆಂದರೆ ಅವರೇ. ॥೫೬-೫೭॥

ಆ ಶೈಲಾವರಣದ ಮಧ್ಯಭಾಗಕ್ಕೆ ಬ್ರಹ್ಮ, ವಿಷ್ಣು, ರುದ್ರರು ಪ್ರವೇಶಿಸಲಾರರು. ಯಾವ ಪ್ರಮಥಗಣವೂ ಅಲ್ಲಿ ನಿಲ್ಲಲಾರದು. ವಾಯು ಸಂಚಾರಕ್ಕೂ ಅಲ್ಲಿ ಅವಕಾಶವಿಲ್ಲ. ಸೂರ್ಯ, ಚಂದ್ರ, ಅಗ್ನಿ ಮುಂತಾದ ಯಾವ ದೇವತೆಗಳಿಗೂ ಅದು ಆಶ್ರಯವೆನಿಸಲಾರದು. ಅಂತಹ ಸ್ಥಳದಲ್ಲಿ ಪರಮೇಶ್ವರನೊಬ್ಬನೇ ಪಾರ್ವತಿಯೊಡನೆ ಸದಾ ವಿಹರಿಸುತ್ತಿರುವನು. ಅಂತಹ ಪರಮೇಶ್ವರನ ವಾಸಸ್ಥಾನವನ್ನು ವೇದಗಳೂ ಸಹ ಸರಿಯಾಗಿ ತಿಳಿಯಲಾರವು. ಹೀಗಿರುವಾಗ ಉಳಿದವರು ತಿಳಿಯುವುದು ಹೇಗೆ? ॥೫೮॥

ಪರಮೇಶ್ವರನಿಗೆ ಶರವೇ ಹರಿ. ಬತ್ತಳಿಕೆಯೇ ಬ್ರಹ್ಮ, ವೇದಗಳೇ ಗಾಲಿಗಳು. ರಥವೇ ಭೂಮಿ. ನೊಗಗಳು ಸೂರ್ಯಚಂದ್ರರು. ಎಳೆಯುತಕ್ಕ ಕುದುರೆಗಳು

ಹರಿವಿಧಿಶ್ರುತಯಃ ಕ್ಷ್ಮಾ ಪುಷ್ಪವಂತೌ ತಥಾಬ್ಧಿ
ರ್ನಗವರ ಉರಗೇಂದ್ರಸ್ತ್ರೈಪುರಂ ಶ್ರೀಮಹೇಶಃ ॥೫೯॥

ನಿಶ್ವಾಸಶ್ರುತಿರೇಕ ಏವ ಭಗವಾನಾಸ್ತೇ ಸಹಾಂಬೋ ಭವ
ಸ್ತಸ್ಯಾಪಾರವಿಚಿತ್ರಸರ್ಗಬಹುಳಾಸ್ಸ್ವಾಭಾವಿಕಾಶ್ಶಕ್ತಯಃ।
ತಸ್ಯಾನಂದಘನಸ್ಯ ಭಕ್ತಿಪರಮಾ ಭಾವಾ ಗಣಾಸ್ತೇ ದ್ವಿಜಾ
ಬ್ರಹ್ಮೇಂದ್ರಾದಿಮರುತ್ಪದೇಷು ವಿಹಿತಾಸ್ಸಕ್ತಾ ಮಹೇಶಾರ್ಚನೇ ॥೬೦॥

**ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ಕೈಲಾಸಪ್ರಾಕಾರವರ್ಣನಂ ನಾಮ ಪಂಚದಶೋಽಧ್ಯಾಯಃ**

---

ಸಮುದ್ರಗಳು. ಧನುಸ್ಸೇ ಮೇರುಪರ್ವತ. ಆದಿಶೇಷನೇ ಮೌರ್ವೀ, ತ್ರಿಪುರಾಸುರರೇ ಶತ್ರುಗಳು. ಇವರನ್ನು ನಿಗ್ರಹಿಸಲು ರಥಿಕನಾಗಿ ಕುಳಿತಿರುವವನೇ ಮಹೇಶ್ವರನು. ||೫೯||

ಆ ಮಹೇಶ್ವರನ ಉಸುರೇ ವೇದಗಳು. ತಾತ್ತ್ವಿಕವಾಗಿ ಹೇಳುವುದಾದರೆ ಅಖಂಡಜಗದಾತ್ಮಕವಾದ ಮೂರ್ತಿಯೊಂದೇ ಪರಮೇಶ್ವರನು. ಪಾರ್ವತೀಸಮೇತನಾಗಿರುವುದರಿಂದ ಸಮಸ್ತ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಕಾರ್ಯಗಳಿಗೆ ಬೇಕಾದ ಶಕ್ತಿಯು ಸ್ವಾಭಾವಿಕವಾಗಿ ಪರಶಿವನಲ್ಲಡಗಿದೆ. ಪರಮಾನಂದ ರೂಪಿಯೇ ಶಂಕರನು. ಅವನನ್ನು ಸಾಕ್ಷಾತ್ಕರಿಸಿಕೊಳ್ಳಲು ಮುಖ್ಯವಾಗಿ ಬೇಕಾದದ್ದು ಭಕ್ತಿಯೊಂದೇ. ಯಾರು ಬ್ರಹ್ಮ, ಇಂದ್ರ, ದೇವತೆಗಳು ಮುಂತಾದ ಸ್ಥಾನಗಳಲ್ಲಿದ್ದು, ಮಹೇಶ್ವರನನ್ನು ಭಕ್ತಿಯಿಂದರ್ಚಿಸುವರೋ, ಅವರೇ ದ್ವಿಜರು. ಅವರೇ ಶಿವಗಣಗಳಾಗಲು ಅರ್ಹತೆಯುಳ್ಳವರು. ||೬೦||

ಇಲ್ಲಿಗೆ ಶಿವರಹಸ್ಯದ ಪ್ರಥಮಾಂಶದಲ್ಲಿ ಶೈಲಪ್ರಾಕಾರವರ್ಣನೆಯೆಂಬ ಹದಿನೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

# ಅಥ ಶ್ರೀಶಿವರಹಸ್ಯೇ

## ಷೋಡಶೋಽಧ್ಯಾಯಃ

### ಪಂಚಬ್ರಹ್ಮಪ್ರಕಾರವರ್ಣನಂ

॥ ಜೈಗೀಷವ್ಯ ಉವಾಚ ॥

**ಶಿಖಿವಾಹ ನಮಸ್ತೇಽಸ್ತು ನಗಪೌತ್ರ ಮಹಾಪ್ರಭೋ ।**
**ಸುಂದರಾನನಸಂದೋಹ ದ್ವಾದಶೋತ್ಪಲಲೋಚನ ॥೧॥**

**ನಾಕನಾಯಕ ಮೈನಾಕಮಾತುಲಾನಲಸಂಭವ ।**
**ಶೋಕಮೂಕಸುದೈತ್ಯಾಜಿಗತಪ್ರಾಣಾಪಹಾರಕ ॥೨॥**

**ತಾರಕಕ್ರೌಂಚಮಥನ ಪುನರ್ವಿಸ್ತರತೋ ವದ ।**
**ನ ಹಿ ತೃಪ್ಯಾಮಿ ತೇ ವಕ್ತ್ರಕಥಾರಸಝುರೀಭರೈಃ ॥೩॥**

---

## ಶ್ರೀಶಿವರಹಸ್ಯದಲ್ಲಿ ಹದಿನಾರನೆಯ ಅಧ್ಯಾಯ

ಜೈಗೀಷವ್ಯಮಹಾಮುನಿಯು ಕುಮಾರಸ್ವಾಮಿಯನ್ನು ಕುರಿತು, "ಎಲೈ ಮಯೂರವಾಹನನೇ, ನಗರಾಜನಾದ ಹಿಮಾಲಯನಿಗೆ ಪೌತ್ರನೆನಿಸಿ ಸುಂದರವಾದ ಷಣ್ಮುಖಗಳಿಂದಲೂ, ದ್ವಾದಶಲೋಚನಗಳಿಂದಲೂ ವಿರಾಜಮಾನನಾಗಿರುವ ಸ್ವಾಮಿಯೇ, ನಿನಗೆ ನಮಸ್ಕಾರ. ॥೧॥

ಸ್ವರ್ಗಲೋಕಕ್ಕೆ ನಾಯಕನಾಗಿರುವ ಷಣ್ಮುಖಸ್ವಾಮಿಯೇ, ನಿನಗೆ ಲೋಕ ಪ್ರಸಿದ್ಧನಾದ ಮೈನಾಕಪರ್ವತವು ಸೋದರಮಾವನಾಗಿರುವನಲ್ಲವೆ! ಪರಮಪವಿತ್ರ ವಾದ ಅಗ್ನಿಯೇ ನಿನ್ನ ಉತ್ಪತ್ತಿಸ್ಥಾನ. ದುಃಖಿತರಾಗಿ ಅಜ್ಞಾನಿಗಳಾಗಿರುವ ಸಕಲ ರಾಕ್ಷಸರನ್ನೂ ಯುದ್ಧದಲ್ಲಿ ಕೊಂದು ಲೋಕೋಪಕಾರಮಾಡಿರುವೆ. ಇಂತಹ ನಿನಗೆ ವಂದನೆ. ॥೨॥

ತಾರಕಾರಿಯಾಗಿ, ಕ್ರೌಂಚಪರ್ವತ ನಾಶಕನಾದ ಸ್ವಾಮಿಯೇ, ಇಲ್ಲಿನವರೆಗೂ

**ಪುನಃ ಕಿಯಂತಃ ಪ್ರಾಕಾರಾ ಗೋಪುರಾಟ್ಟಾಲಸುಂದರಾಃ ।**
**ಕೈಲಾಸಸ್ಯ ಮಹೇಶಸ್ಯಾವಸತೇರತುಲಸ್ಯ ಚ ॥೪॥**

॥ ಸೂತ ಉವಾಚ ॥

**ಇತ್ಥಂ ನಂದಿತಮಂದಾರೋ ಜೈಗೀಷವ್ಯೇನ ಚೋದಿತಃ ।**
**ಸುರಾನ್ ಗಣಾನ್ ಮುನೀಂಶ್ಚೈವ ಪ್ರೋತ್ಫುಲ್ಲಾನನಪಂಕಜಃ ॥೫॥**
**ಉವಾಚ ಪ್ರಮಥೇಶಾನಂ ನತ್ವಾ ದೇವೀಂ ಸ್ವಮಾತರಂ ॥೬॥**

॥ ಸ್ಕಂದ ಉವಾಚ ॥

**ಶೃಣುಧ್ವಂ ಬ್ರಹ್ಮವಿಚ್ಛ್ರೇಷ್ಠಾ ಮುನಯಶ್ಚ ಗಣೋತ್ತಮಾಃ ।**
**ಜೈಗೀಷವ್ಯ ಮಹಾಪ್ರಾಜ್ಞ ಶೃಣುಧ್ವಮಮಲಾಃ ಕಥಾಃ ॥೭॥**

---

ನಿನ್ನ ಬಾಯಿಯಿಂದ ಬಂದಂತಹ ಶಿವಕಥಾಮೃತಪ್ರವಾಹದ ಸವಿಯನ್ನು ನಾನು ಅನುಭವಿಸಿದೆನು. ಅಷ್ಟಾದರೂ ನನಗೆ ತೃಪ್ತಿಯಾಗಲಿಲ್ಲ. ಅತಿಶಯವಾದ ಶಿವಕಥಾ ಶ್ರವಣದಲ್ಲಿ ಇನ್ನೂ ಕುತೂಹಲಿಯಾಗಿರುವ ನನಗೆ ಮುಂದಿನ ವಿಷಯಗಳನ್ನು ವಿವರಿಸು. ||೩||

ಶಿವನ ವಾಸಸ್ಥಲವಾದ ಕೈಲಾಸಪರ್ವತಕ್ಕೆ ಮೇಲೆ ಹೇಳಿದುವುಗಳಲ್ಲದೆ ಇನ್ನೂ ಯಾವುದಾದರೂ ಪ್ರಾಕಾರಗಳಾಗಲಿ, ಗೋಪುರಗಳಾಗಲಿ ಇದ್ದರೆ ಅವೆಲ್ಲ ವನ್ನೂ ವಿವರವಾಗಿ ತಿಳಿಸಬೇಕು" ಎಂದು ಪ್ರಾರ್ಥಿಸಿಕೊಂಡನು. ||೪||

ಜೈಗೀಷವ್ಯನ ಪ್ರಾರ್ಥನೆಯನ್ನು ಕೇಳಿ ಮಂದರವಾಸಿಯಾದ ಷಣ್ಮುಖನು ಅಲ್ಲಿ ನೆರೆದಿದ್ದ ಸುರರನ್ನೂ, ಋಷಿಗಳನ್ನೂ ಹರ್ಷದಿಂದ ನೋಡುತ್ತಾ ವಿಕಸಿತ ವದನನಾಗಿ ಲೋಕಮಾತಾಪಿತೃಗಳಾದ ಪಾರ್ವತೀಪರಮೇಶ್ವರನನ್ನು ವಂದಿಸಿ ಹೀಗೆ ಹೇಳಲಾರಂಭಿಸಿದನು, ಎಂದು ಸೂತಮಹರ್ಷಿಗಳು ಮೌನಿಭಾರ್ಗವಾದಿಗಳಿಗೆ ತಿಳಿಸಿದರು. ||೫-೬||

ಎಲೈ ಬ್ರಹ್ಮಜ್ಞಾನಿಗಳಾದ ಮಹರ್ಷಿಗಳೇ, ಗಣೋತ್ತಮರೇ, ಜೈಗೀಷವ್ಯನೇ, ಈಗ ನಾನು ಹೇಳುವ ಪವಿತ್ರವಾದ ಶಿವಕಥೆಗಳನ್ನು ಕೇಳಿರಿ. ||೭||

ಶಂಭೋರ್ವಿಚಿತ್ರವಿಭವಾಶ್ಶ್ರೋತ್ರಪಾತ್ರಾನುಲಾಃ ಕಥಾಃ ।
ಕ್ಷೀರೋದಧಿಮಹಾಖಾತಪ್ರಾಕಾರೋಽಸ್ತಿ ತದಂತರೇ ॥೮॥

ಉದ್ಭೂತಚಂದ್ರಕಿರಣೈಸ್ತರಂಗೈಶ್ಚೈವ ಭಾಸುರಃ ।
ರಜತೋಚ್ಛ್ರಾಯಶೃಂಗಾಗ್ರೋ ಮಹಾವೃಷಭಲಾಂಛಿತಃ ॥೯॥

ನಾನಾಗೋಪುರರತ್ನೌಘಪ್ರಭಾಭಾಸಿತದಿಙ್ಮುಖಃ ।
ಸ್ಫಟಿಕೈಃ ಕೃತದೇವೇಶವರಸುಂದರವಿಗ್ರಹೈಃ ॥೧೦॥

ಶೋಭಿತೋ ಗೋಪುರಾಣಾಂ ಚ ಸಮೂಹೈಃ ಪರಿಶೋಭಿತಃ ।
ತತ್ಪೂರ್ವದೇಶೇ ದೇವಸ್ಯ ತತ್ಪೂರ್ವಸ್ಯ ಮನೋಹರಂ ॥೧೧॥

---

ಪರಮೇಶ್ವರನ ಕಥೆಗಳು ವಿಚಿತ್ರತರವಾದವುಗಳು. ಶ್ರವಣಮಾಡಿದವರ ಕಿವಿಗಳನ್ನು ಪವಿತ್ರಗೊಳಿಸುವುವು; ಆದ್ದರಿಂದ ನಾನು ಹೇಳುವ ಪರಶಿವನ ಕಥಾಲಹರಿಯಲ್ಲಿ ಮನಸ್ಸುಳ್ಳವರಾಗಿರಿ. ಪರಮೇಶ್ವರನ ಆವಾಸಸ್ಥಾನದ ಪೂರ್ವ ಭಾಗದಲ್ಲಿ ಕ್ಷೀರಸಮುದ್ರವಿದೆಯಷ್ಟೆ. ಅದರ ಪಕ್ಕದಲ್ಲಿ ಒಂದು ದೊಡ್ಡ ಪ್ರಾಕಾರ ವಿದೆ. ॥೮॥

ಆ ಪ್ರಾಕಾರವು ಉದಯಿಸುವ ಚಂದ್ರಕಿರಣಗಳಿಂದ ಶೋಭಿತವಾಗಿದೆ. ಕ್ಷೀರಸಮುದ್ರದ ಅಲೆಗಳಿಂದ ಹೊಡೆಯಲ್ಪಡುತ್ತಿದೆ. ಆ ಪ್ರಾಕಾರದ ಮೇಲ್ಭಾಗದಲ್ಲಿ ಬೆಳ್ಳಿಯ ಶಿಖರವಿದೆ. ಅದರಲ್ಲಿ ಅನೇಕ ಬಸವಗಳ ಗುರುತುಗಳಿವೆ. ॥೯॥

ಆ ಪ್ರಾಕಾರಕ್ಕೆ ಅನೇಕ ಗೋಪುರಗಳಿವೆ. ಅವುಗಳೆಲ್ಲಾ ರತ್ನನಿರ್ಮಿತಗ ಳಾಗಿವೆ. ಅವುಗಳ ಕಾಂತಿಯು ಸಕಲ ದಿಕ್ಕುಗಳನ್ನೂ ಬೆಳಗಿಸುತ್ತಿದೆ. ಅಲ್ಲಲ್ಲಿ ಸ್ಫಟಿಕಮಯವಾದ ದೇವತಾವಿಗ್ರಹಗಳು ಪ್ರಕಾಶಿಸುತ್ತಿವೆ. ॥೧೦॥

ಇಷ್ಟು ಸುಂದರವಾದ ಗೋಪುರಗಳ ಸಮೂಹದಿಂದ ವಿರಾಜಿಸುವ ಪ್ರಾಕಾ ರವು ದೇವದೇವನಾದ ಶಂಕರನ ನಿವಾಸಸ್ಥಾನಕ್ಕೆ ಪ್ರಾಗ್ಭಾಗದಲ್ಲಿ ಅತ್ಯಂತ ಮನೋ ಹರವಾಗಿರುವುದು. ॥೧೧॥

ಗೋಪುರಂ ಸೌಧಸುಭಗಂ ಸ್ತಂಭವಿದ್ರುಮಪುತ್ರಿಕಂ ।
ಮಣಿಕ್ಲಿಪ್ತಚ್ಛವಲಭೀನಿರ್ಯತ್ಪಾರಾವತೀಗಣಂ ॥೧೨॥

ತತ್ರ ಸಿಂಹಾಸನವರಂ ನವರತ್ನವಿಚಿತ್ರಿತಂ ।
ತತ್ರ ಸ್ಥಿತೈರ್ಗಣೈರ್ದೇವೈಶ್ಶೂಲತೇಜೋಲಸತ್ಕರೈಃ ॥೧೩॥

ಕಪರ್ದಧೃತಚಂದ್ರಾರ್ಕೈರ್ಭಸಿತಾಮಲಲೋಚನೈಃ ।
ತ್ರಿಪುಂಡ್ರವಿಲಸತ್ಫಾಲೈರ್ವಿಲಸತ್ಫಾಲಲೋಚನೈಃ ॥೧೪॥

ರತ್ನಾಂತರಿತರುದ್ರಾಕ್ಷಮಾಲಾಲಳಿತಕಂಧರೈಃ ।
ನೀರದೋದ್ಯತ್ಪ್ರಭಾಭಾಸ್ವನ್ನೀರಜೋಪಮಕಂಧರೈಃ ॥೧೫॥

ವಾತಾಶನಕೃತೋಚ್ಛ್ವಾಸಚಲದ್ಧಾರಮನೋಹರೈಃ ।
ಮಹಾಡಮರುನಾದೇನ ಭೀಷಿತಾಖಿಲದಿಕ್ತಟೈಃ ॥೧೬॥

---

ಗೋಪುರವು ಸುಧಾಲಿಪ್ತವಾಗಿ ರಮ್ಯವಾಗಿರುವುದು. ಪ್ರತಿಸ್ತಂಭದಲ್ಲಿಯೂ ಹವಳಗಳ ಬೊಂಬೆಗಳಿರುವುವು. ಕಂಬಗಳ ಮೇಲೆ ಇರುವ ದಾರಂಬಗಳು (ವಲಭಿ) ರತ್ನಗಳ ಕಾಂತಿಯಿಂದ ಸುಂದರವಾಗಿರುವುವು. ಅವುಗಳಲ್ಲಿ ಹೆಣ್ಣುಪಾರಿವಾಳಗಳು ವಾಸಮಾಡುತ್ತಾ ವಿಹರಿಸುತ್ತಿರುವುವು. ॥೧೨॥

ಆ ಗೋಪುರಾಂತರ್ವರ್ತಿಯಾಗಿ ಒಂದು ಸಿಂಹಾಸನವಿರುವುದು. ಅದು ನವರತ್ನಗಳಿಂದ ನಿರ್ಮಿತವಾಗಿದೆ. ಅದರ ಸುತ್ತಲೂ ಕೈಯ್ಯಲ್ಲಿ ತ್ರಿಶೂಲಗಳನ್ನು ಹಿಡಿದಿರುವ ಪ್ರಮಥಗಣಗಳು ನೆರೆದಿರುವರು. ॥೧೩॥

ಆ ಶಿವಗಣನಾಯಕರು ತಮ್ಮ ತಮ್ಮ ಜಟಾಜೂಟಗಳಲ್ಲಿ ಸೂರ್ಯಚಂದ್ರರನ್ನು ಅಡಗಿಸಿಕೊಂಡಿರುವರು. ಹಣೆಯಲ್ಲಿ ತ್ರಿಪುಂಡ್ರಾಂಕಿತವಾದ ಭಸ್ಮವೂ, ನಿರ್ಮಲವಾದ ಫಾಲಲೋಚನಗಳೂ ವಿರಾಜಿಸುತ್ತಿರುವುವು. ॥೧೪॥

ಅವರ ಕತ್ತಿನಲ್ಲಿ ರತ್ನಮಯವಾದ ರುದ್ರಾಕ್ಷಿಯ ಸರಗಳು ಅಲುಗಾಡುತ್ತಿವೆ. ಅವುಗಳಿಂದ ಕೂಡಿರುವ ಕಂಠಪ್ರದೇಶಗಳು, ಮೇಘಗಳ ಮಧ್ಯದಲ್ಲಿ ಹೊರಡುವ ಮಿಂಚಿನಂತೆ ಹೊಳೆಯುತ್ತಾ ಶಂಖದಂತೆ ಮನೋಹರವಾಗಿ ಕಾಣುವುವು. ॥೧೫॥

ಕಂಠಪ್ರದೇಶದಲ್ಲಿ ಸರ್ಪಗಳು ಹಾರವಾಗಿರುವುದರಿಂದ, ಅವುಗಳ ಉಸುರಿನ ಗಾಳಿಯಿಂದ ಮುಕ್ತಾಹಾರಗಳು ಅಲುಗಾಡುತ್ತಿವೆ. ಅವರು ಬಾರಿಸುತ್ತಿರುವ ಡಮರು ನಾದದ ಧ್ವನಿಗೆ ಸಮಸ್ತ ದಿಙ್ಮಂಡಲಗಳೂ ಹೆದರಿಹೋಗಿವೆ. ॥೧೬॥

ಫಣಾಮಣಿಕೃತಾಪಾರನೂಪುರಾಂಗದಕಂಕಣೈಃ ।
ರಣನ್ಮಂಜೀರವಲಯೈಸ್ಸಿಂಹಸಂಹನನೈರ್ಗಣೈಃ ॥೧೭॥

ಪುಂಡರೀಕಾಜಿನಭವತ್ಕೃಷ್ಣರೇಖಾಕಟೀತಟೈಃ ।
ಮಹೇಭಚರ್ಮವಸನೈರ್ಬಾಲಾತಪಸಮಪ್ರಭೈಃ ॥೧೮॥

ಗಣೇಂದ್ರೈರ್ವಾರಣೇಂದ್ರಾಭೈಃ ಕರಿಶುಂಡೋರುಬಾಹುಭಿಃ ।
ಅಹಿಮನ್ಯುಭಿರುತ್ಕೃಷ್ಟೈಃ ಕೋಟಿಭಿರ್ಗಣಪೈರ್ವೃತಃ ॥೧೯॥

ಪೃಷತ್ಕಕರನಿಸ್ತ್ರಿಂಶ[1]ಬಾಣಾಸನಧರೈರ್ವರೈಃ ।
ಪೂರ್ವತೋ ಭಾತಿ ತತ್ಪೂರ್ಷಶ್ಚೇಂದುಕುಂದಸಮಪ್ರಭಃ ॥೨೦॥

---

ಅವರು ಧರಿಸಿರುವ ಕಾಲುಬಳೆಗಳೂ, ತೋಳುಬಳೆಗಳೂ, ಕೈಬಳೆಗಳೂ ನಾಗರತ್ನವಿಕಾರಗಳೇ ಆಗಿವೆ. ಗೆಜ್ಜೆಗಳಿಂದ ಧ್ವನಿಮಾಡುವ ಬಳೆಗಳನ್ನು ಧರಿಸಿರುವರು. ಅವರೆಲ್ಲರೂ ಬಲದಲ್ಲಿ ಸಿಂಹವನ್ನು ಸಹ ಸಂಹರಿಸುವಂತಹ ವೀರರೇ ಆಗಿರುವರು. ॥೧೭॥

ಸರ್ವದಾ ಅವರು ವ್ಯಾಘ್ರಾಜಿನವನ್ನು ಉಡುವುದರಿಂದ ಅವರ ಸೊಂಟ ಪ್ರದೇಶವೆಲ್ಲವೂ ಕರಿಯ ಗುರುತುಳ್ಳದ್ದಾಗಿದೆ. ಬಾಲಸೂರ್ಯನ ಬಿಸಿಲಿನಂತೆ ಹೊಳೆಯುವ ಗಜಚರ್ಮಗಳನ್ನು ಎಲ್ಲರೂ ಹೊದ್ದಿರುವರು. ॥೧೮॥

ಮದ್ದಾನೆಯಂತೆ ಬಲಿಷ್ಠರಾಗಿರುವರು. ಆನೆಯ ಸೊಂಡಲಿನಂತೆ ನೀಳವಾದ ಬಾಹುಗಳಿಂದ ಕೂಡಿರುವರು. ಬಲಿಷ್ಠವಾದ ಸರ್ಪಗಳನ್ನೇ ಆಭರಣವನ್ನಾಗಿ ಉಳ್ಳ ಇಂತಹ ಕೋಟಿ ಸಂಖ್ಯೆಯ ಗಣದೇವತೆಗಳು ಅಲ್ಲಿ ನೆರೆದಿರುವರು. ॥೧೯॥

ಪ್ರಮಥಗಣವರ್ಗದವರೆಲ್ಲರೂ, ತಮ್ಮ ತಮ್ಮ ಕೈಗಳಲ್ಲಿ ಬಾಣ, ಹರಿತವಾದ ಕತ್ತಿ ಮೊದಲಾದ ಆಯುಧಗಳನ್ನೂ, ಶ್ರೇಷ್ಠವಾದ ಧನುಸ್ಸುಗಳನ್ನೂ ಹಿಡಿದಿರುವರು. ಇಂತಹ ಗಣಗಳ ಮುಂದೆ, ತತ್ಪುರುಷ ಸ್ವಾಮಿಯು ಚಂದ್ರನಂತೆಯೂ ಕೋಲು ಮಲ್ಲಿಗೆಯ ಹೂವಿನಂತೆಯೂ, ಕಾಂತಿಯುಳ್ಳವನಾಗಿ, ಪೂರ್ವಭಾಗದಲ್ಲಿ ಪ್ರಕಾಶಿಸುತ್ತಿರುವನು. ॥೨೦॥

---

1 ನಿಸ್ತ್ರಿಂಶ-ಪಾಠಾಂತರ.

ಜಟಾಮುಕುಟಸಂಶೋಭಿರಾಜರಾಜಕಲಾಧರಃ ।
ಭಸ್ಮಾಭ್ಯಕ್ತಸ್ತ್ರಿಪುಂಡ್ರಾಂಕಶ್ಚತುರ್ಬಾಹುರುದಾರಧೀಃ ॥೨೧॥

ತ್ರಿನೇತ್ರೋ ನೀಲಕಂಠಶ್ಚ ಬಾಲಸೂರ್ಯಾಯುತಪ್ರಭಃ ।
ತತ್ಪೂರುಷಂ ಮಹಾಲಿಂಗಂ ಸಂಪೂಜ್ಯ ವರಿವಸ್ಯಯಾ ॥೨೨॥

ಸಮರ್ಚಯತಿ ವಿಪ್ರೇಂದ್ರ ಬಿಲ್ವಪತ್ರೈಶ್ಶಿವಾರ್ಚಕಃ ।
ಸ್ತುವತೇ ಸಾವಧಾನೇನ ತಲ್ಲಿಂಗಂ ರತ್ನಧಾಮಗಂ ॥೨೩॥

ಸ್ವಚ್ಛ[1]ಛತ್ರಾಭಿರಾಮಂ ಛವಿಜಿತರಜತಂ ಛಂದಸಾಂ ಗೀತತುಷ್ಟಂ ।
ಸ್ವಚ್ಛಂ[2]ದಾಯಾಂ ನಿರಿಚ್ಛೋದಧಿನಿಜಮ[3]ಹಿಗೋಚ್ಛನ್ನಮಚ್ಛಾಚ್ಛದೇಹಂ ।
ಛದ್ಮೇಭಾರಿಚ್ಛದಾಚ್ಛಚ್ಛದಮಜಮಜರಂ ಪಿಂಛ[4]ತಾಪಿಂಛಗುಚ್ಛ ।
ಛಾಯಾಸಚ್ಛಾಯವಾ[5]ಮಾಂಗಮಮರಧಿಷಣಂ ಸದ್ವಿಪಚ್ಛೇದನೇಚ್ಛಂ ॥೨೪॥

---

ತತ್ಪುರುಷಮೂರ್ತಿಯ ಶಿರಸ್ಸಿನಲ್ಲಿ ಜಟೆಯೂ, ಕಿರೀಟವೂ, ಚಂದ್ರಕಲೆಯೂ ಪ್ರಕಾಶಿಸುತ್ತಿರುವುದು. ದೇಹವೆಲ್ಲವೂ ಭಸ್ಮಲಿಪ್ತವಾಗಿರುವುದು. ಹಣೆಯಲ್ಲಿ ತ್ರಿಪುಂಡ್ರವಿರುವುದು. ನಾಲ್ಕು ಕೈಗಳಿಂದಲೂ, ಉದಾರ ಭಾವದಿಂದಲೂ ಆ ಮೂರ್ತಿಯು ಶೋಭಿಸುತ್ತಿರುವುದು. ||೨೧||

ತತ್ಪುರುಷಮೂರ್ತಿಯು ನೀಲಕಂಠನಾಗಿಯೂ, ಮೂರು ಕಣ್ಣುಗಳುಳ್ಳವನಾಗಿಯೂ ಇರುವನು. ದೇಹವು ಬಾಲಸೂರ್ಯನಂತೆ ಕಾಂತಿಯುಳ್ಳದ್ದಾಗಿರುವುದು. ಇಂತಹ ತತ್ಪುರುಷಮೂರುತಿಯು ತತ್ಪೂರುಷ ಲಿಂಗವನ್ನು ಭಕ್ತಿಯಿಂದ ಪೂಜಿಸುತ್ತಿರುವನು. ||೨೨||

ಮತ್ತು ಬಿಲ್ವಪತ್ರೆಗಳಿಂದ ಸಾವಧಾನವಾಗಿ ಲಿಂಗಪೂಜೆಮಾಡುವನು. ಆ ಮೇಲೆ ರತ್ನಗಳಿಗಾಶ್ರಯವಾದ ಆ ತತ್ಪುರುಷಲಿಂಗವನ್ನು ಈರೀತಿ ಸ್ತುತಿಸುವನು||೨೩||

" ತತ್ಪೂರುಷ ಲಿಂಗಾತ್ಮಕನಾದ ಪರಶಿವನು ನಿರ್ಮಲವಾದ ಛತ್ರಿಯಿಂದ ಸುಂದರನಾಗಿರುವನು. ಶುಭ್ರವಾದ ತೇಜಸ್ಸಿನಿಂದ ರಜತವನ್ನೂ ತಿರಸ್ಕರಿಸುತ್ತಿರುವನು.

---

1 ಸ್ವಚ್ಛಛಾಯಾಭಿರಾಮಂ
2 ಸ್ವಚ್ಛಂದಾಪಾಂ ಸರಿಚ್ಛೋದಧಿ
3 ನಿಜಮಹಿಮಾಚ್ಛನ್ನ
4 ಪಿಂಛಿತಾಪಿಂಛ
5 ವಾಮಾಂಗಮಮದಧಿಷಣೇ

ಆಶೀವಿಷಾಂಗದ ಸದೈವ ಮಹೇಶ ಕಾಶೀ ।
ವಾಸೀಕೃತಾನಂದವನ ಪ್ರಸೀದ ।
ಸಂಸಾರವಾರಾಶಿತರೇ ಪುರಾರೇ ।
ಕೀನಾಶನಾಥ ಭಯಮಾಶು ವಿನಾಶಯಾದ್ಯ ॥೨೫॥

॥ ಸ್ಕಂದ ಉವಾಚ ॥

ಇತ್ಥಂ ಸ್ತೌತಿ ಸದಾ ಕಾಲಂ ಪುರುಷಃ ಪುರುಷೇಶ್ವರಂ ।
ತತ್ರಾಸ್ತೇ ಗಣಪಾಧೀಶಃ ಪ್ರಾಚೀಂ ತಾಂ ಪಾಲಯನ್ ದಿಶಂ ॥೨೬॥

ಕ್ಷಾರೋದಧಿಪರೀವೃತ್ತಃ ಕಾಲಾಯಸವಿನಿರ್ಮಿತಃ ।
ಪ್ರಾಕಾರೋ ರಾಜತೇ ವಿಪ್ರ ದಕ್ಷಿಣೇ ಗೋಪುರೈರ್ವೃತಃ ॥೨೭॥

---

ವೇದಸ್ತುತಿಗಳಿಂದ ತೃಪ್ತನಾಗಿರುವನು. ನಿಷ್ಕಾಮವೆಂಬ ದೊಡ್ಡ ಗುಣಕ್ಕೆ ಸಮುದ್ರದಂತಿರುವನು. ತನ್ನ ಮಹಿಮೆಯಿಂದ ಲೋಕವನ್ನೆಲ್ಲಾ ಮುಚ್ಚಿರುವವನು. ಅತಿ ಸ್ವಚ್ಛವಾದ ಶರೀರವುಳ್ಳವನು. ಲೋಕದಲ್ಲಿರುವ ಕಪಟವೆಂಬ ಮದ್ದಾನೆಯನ್ನು ಸಿಂಹದಂತೆ ನಾಶಪಡಿಸಿ, ಅದರ ಚರ್ಮವನ್ನು ತಾನು ಧರಿಸಿಕೊಂಡಿರುವನು. ಇಂತಹ ಶಿವನಿಗೆ ಜನನಮರಣಗಳಿಲ್ಲ. ಹೊಂಗೆಯ ಚಿಗುರಿನ ಗೊಂಚಲಿನಂತೆ ನೀಲವರ್ಣವಿಶಿಷ್ಟನಾಗಿ, ಮದರಹಿತವಾದ ಬುದ್ಧಿಯುಳ್ಳ ಪರಮೇಶ್ವರನನ್ನು ನಾನು ಸರ್ವದಾ ಧ್ಯಾನಿಸುವೆನು. ॥೨೪॥

ಸರ್ಪವನ್ನೇ ತೋಳುಬಳೆಯಾಗಿ ಉಳ್ಳ ಮಹೇಶ್ವರನೇ, ನೀನು ಸರ್ವದಾ ಕಾಶೀಕ್ಷೇತ್ರದಲ್ಲಿ ವಾಸಿಸುವವನಾಗಿ, ಜನರಿಗೆ ಹೆಚ್ಚಿನ ಆನಂದವನ್ನುಂಟುಮಾಡುತ್ತಿರುವೆ. ಸಂಸಾರವೆಂಬ ಸಮುದ್ರದಿಂದ ದಾಟಿಸುವ ಶಕ್ತಿಯುಳ್ಳ ತ್ರಿಪುರಾರಿಯೇ, ಯಮನನ್ನು ನಾಶಪಡಿಸಿದವನೇ, ನನಗೆ ಒದಗಿರುವ ಭಯವನ್ನು ನಿವಾರಿಸು."॥೨೫॥

ಹೀಗೆ ತತ್ಪುರುಷಮೂರ್ತಿಯು ಪುರುಷಶ್ರೇಷ್ಠನಾದ ಮಹೇಶ್ವರನನ್ನು ಸರ್ವದಾ ಧ್ಯಾನಿಸುತ್ತಾ ಪೂರ್ವದಿಕ್ಕನ್ನು ಕಾಪಾಡುತ್ತಾ ಗಣಪರಿಗೆಲ್ಲಾ ಅಧೀಶ್ವರನಾಗಿ ವಾಸಮಾಡುತ್ತಿರುವನು. ॥೨೬॥

ಮಹೇಶ್ವರಾವಾಸಸ್ಥಾನದ ದಕ್ಷಿಣ ಭಾಗದಲ್ಲಿ ಲವಣಸಮುದ್ರವಿದೆ. ಅದರ ಮುಂದುಗಡೆ ಕಬ್ಬಿಣದಿಂದ ನಿರ್ಮಿತವಾದ ಪ್ರಾಕಾರವಿದೆ. ಆ ಪ್ರಾಕಾರಕ್ಕೆ ಎತ್ತರವಾದ ಗೋಪುರಗಳಿವೆ. ॥೨೭॥

ಲವಣಾಂಭೋಧಿಕಲ್ಲೋಲಘುರ್ಘುರಾನಿಲಘೋಷಿತಃ ।
ತತ್ರ ನಾನಾಮಹಾಭೋಗಫಣಾರತ್ನಾಲಯೋ ಮಹಾನ್ ॥೨೮॥

ಸೌಧಾಂತರಸ್ಥಪೀಠಸ್ಥೋ ಭ್ರುಕುಟೀಕುಟಿಲಾನನಃ ।
ಉಚ್ಚಂಡತರಕೋದಂಡಖಂಡಿತಾರಾತಿಮಂಡಲಃ ॥೨೯॥

ಜಟಾಮಂಡಲಗೋದ್ಭಾಸಿ ಸುಧಾಮಂಡಲಶೇಖರಃ ।
ವಿದ್ಯುಲ್ಲತೇವ ಘನವದ್ದಂಷ್ಟ್ರಾಶೋಭಿತವಕ್ತ್ರಕಃ ॥೩೦॥

ನೀಲಾಮಲತನೂಭಾಸ್ವದ್ಭಾಸಿತಾಲೇಪಸುಂದರಃ ।
ಸಜಲೋದ್ದಾಮಘನಗಗರ್ಭಾಂತರಸುವಿದ್ಯುತಾ ॥೩೧॥

ಸದೃಶಾಮಲಪುಂಡ್ರಾಂಕಸ್ತಿಲಕಾಕಲ್ಪಭೂಷಿತಃ ।
ಧನುರ್ಹೇತಿಧರಸ್ತಾದೃಗ್ಗಣಪೈರಭಿತೋ ವೃತಃ ॥೩೨॥

---

ಆ ಕಬ್ಬಿಣದ ಪ್ರಾಕಾರಕ್ಕೆ ಕ್ಷಾರಸಮುದ್ರದ ಅಲೆಗಳು ಹೊಡೆಯುವುದರಿಂದ ಉಂಟಾಗುವ ವಾಯುವು ಭಯಂಕರಧ್ವನಿಗೈಯ್ಯುತ್ತಿದೆ. ಅಲ್ಲಿ ದೊಡ್ಡ ದೊಡ್ಡ ಶರೀರಗಳುಳ್ಳ ಸರ್ಪಗಳೂ, ನಾಗರತ್ನಗಳೂ ಅಸಂಖ್ಯಾತವಾಗಿವೆ. ॥೨೮॥

ಅಲ್ಲಿ ಅಘೋರಮೂರ್ತಿಯಿರುವನು. ಆ ಮೂರ್ತಿಯು ಯಾವಾಗಲೂ ಅಲ್ಲಿರುವ ಉಪ್ಪರಿಗೆಯ ಮೇಲಿನ ದಿವ್ಯಪೀಠದಲ್ಲಿ ಮಂಡಿಸಿರುವನು. ಸರ್ವದಾ ತನ್ನ ಹುಬ್ಬು ಗಂಟಿಹಾಕಿಕೊಂಡು ವಕ್ರವಾದ ಮುಖವುಳ್ಳವನಾಗಿರುವನು. ತನ್ನ ಬಲಿಷ್ಠವಾದ ಧನುಸ್ಸಿನ ಸಹಾಯದಿಂದ ಶತ್ರುವ್ಯೂಹವನ್ನೆಲ್ಲಾ ಧ್ವಂಸಮಾಡಿರುವನು. ॥೨೯॥

ಶಿರಸ್ಸಿನಲ್ಲಿ ಜಟಾಜೂಟವಿರುವುದು. ಚಂದ್ರಮಂಡಲವು ಅಲ್ಲಿ ವಿರಾಜಿಸುತ್ತಿರುವುದು. ಕೋರೆಹಲ್ಲುಗಳ ಕಾಂತಿಯು ಮಿಂಚಿನಂತೆ ಹೊಳೆಯುತ್ತಿರುವುದು. ಈರೀತಿ ಅಘೋರಮೂರ್ತಿಯ ಮುಖವು ಅತ್ಯಂತ ಪ್ರಕಾಶಮಾನವಾಗಿರುವುದು. ॥೩೦॥

ಅಘೋರನ ದೇಹವು ನೀಲವರ್ಣವಿಶಿಷ್ಟವಾಗಿದೆ. ಅದರ ಮೇಲೆ ಭಸ್ಮವು ಭೂಷಿತವಾಗಿದೆ. ಹಣೆಯಲ್ಲಿ ತ್ರಿಪುಂಡ್ರವೂ, ತಿಲಕವೂ ಕಂಡುಬರುತ್ತಿದೆ. ಇದನ್ನು ನೋಡಿದರೆ ಜಲಗರ್ಭಿತವಾದ ನೀಲಿಯಮೇಘದಲ್ಲಿ ಅಡಗಿರುವ ಮಿಂಚಿನ ಹೊಳಪು ಸ್ಮರಣೆಗೆ ಬರುವಂತಿದೆ. ದೇಹದಲ್ಲಿ ಇನ್ನೂ ಕಾಂತಿಯುಕ್ತವಾದ ಆಭರಣಗಳು

**ಪ್ರಸನ್ನಕರಸಂಕಾಶದೋರ್ದಂಡವರಚಂಡಕೈಃ ।**
**ಬ್ರಹ್ಮಾಂಡಸ್ಫೋಟನಾರಾವೈಃ ಕೋದಂಡವರಮಂಡಿತೈಃ ॥೩೩॥**

**ಅಘೋರೋ ಘೋರವದನಃ ಪಾತಿ ತಾಂ ದಕ್ಷಿಣಾಂ ದಿಶಂ ।**
**ಚಂಡಾಜ್ಞಾನತಮೋಚ್ಚಂಡಖಂಡನೇ ಮಂಡಿತಾಲಕಃ ।**
**ಅಘೋರೇಶಂ ಮಹಾಲಿಂಗಂ ಸಂಪೂಜ್ಯ ಸ್ತೌತಿ ಭಕ್ತಿತಃ ॥೩೪॥**

**ಸಜ್ಜನ್ನಿರ್ಜರರಾಜರಾಜಮುಕುಟೀ ನೀರಾಜನಭ್ರಾಜಿಪ ।**
**ದ್ರಾಜೀವಂ ಜಗದಾರ್ತಿಭಂಜನರತಂ ಜೇತಾರಮಾಜೌ ಪುರಾಂ ।**
**ಆಸಾಮ್ರಾಜ್ಯಮಿಹೈವ ಜೀವಿತನಯೇ ಸಾಯುಜ್ಯಮೇವೇಜ್ಯಯಾ ।**
**ದಾತಾರಂ ಭಜ ಧೂರ್ಜಟಿಂ ಸ್ವಹೃದಯ ಮೇ ಜಹ್ನುಕನ್ಯಾಭುಜಂಗಂ॥೩೫॥**

---

ಕಂಗೊಳಿಸುತ್ತಿವೆ. ಕೈಯ್ಯಲ್ಲಿ ಧನುಸ್ಸನ್ನೂ, ನಾನಾವಿಧವಾದ ಆಯುಧಗಳನ್ನೂ ಹಿಡಿದಿದ್ದಾನೆ. ಅಂತಹ ಅನೇಕ ಗಣಾಧೀಶ್ವರರು ಸುತ್ತಲೂ ನೆರೆದಿರುವರು.॥೩೧-೩೨॥

ಪ್ರಸನ್ನವಾದ ಹಸ್ತದಿಂದಲೂ, ಶ್ರೇಷ್ಠವಾದ ಮತ್ತು ಬ್ರಹ್ಮಾಂಡವನ್ನೂ ಭೇದಿಸುವ ಧ್ವನಿಯುಳ್ಳ ಬಿಲ್ಲಿನಿಂದ ಅಲಂಕೃತವಾದ ಬಾಹುದಂಡಗಳಿಂದಲೂ ಪ್ರಕಾಶಿಸುತ್ತಿರುವನು. ॥೩೩॥

ಹೀಗೆ ಅಘೋರಮೂರ್ತಿಯು ಘೋರಾಕಾರವುಳ್ಳವನಾಗಿ, ಪಾಪಭೂಯಿಷ್ಠವಾದ ಅಜ್ಞಾನವೆಂಬ ಕತ್ತಲೆಯನ್ನು ನಿವಾರಣೆ ಮಾಡುತ್ತಾ, ಸುಂದರವಾದ ಮುಂಗುರುಳಗಳಿಂದ ಅಲಂಕೃತನಾಗಿ ಸರ್ವದಾ ಅಘೋರೇಶ್ವರನೆಂಬ ಮಹಾಲಿಂಗವನ್ನು ಭಕ್ತಿಯಿಂದ ಪೂಜೆಗೈಯ್ಯುತ್ತಲಿರುವನು. ॥೩೪॥

"ಪರಮೇಶ್ವರನ ಪಾದಕಮಲಕ್ಕೆ ಸಕಲ ದೇವತೆಗಳೂ, ದೇವೇಂದ್ರನೂ ಕುಬೇರನೂ ಸರ್ವದಾ ವಂದಿಸುತ್ತಿರುವರು. ಆ ದೇವತೆಗಳ ಶಿರಸ್ಸಿನಲ್ಲಿರುವ ಕಿರೀಟದ ರತ್ನಗಳಿಂದ ವಿಶೇಷವಾಗಿ ಪರಮೇಶ್ವರನ ಪಾದಕಮಲವು ಹೊಳೆಯುತ್ತಿರುವುದು. ಮಹಿಮಾಪೂರ್ಣನಾದ ಶಂಕರನು ಜಗತ್ತಿನಲ್ಲಿರುವ ಸಮಸ್ತ ಭಕ್ತರ ದುಃಖಗಳನ್ನೆಲ್ಲಾ ನಿವಾರಣೆಮಾಡತಕ್ಕವನಾಗಿರುವನು. ತ್ರಿಪುರಗಳನ್ನು ಯುದ್ಧದಲ್ಲಿ ನಾಶಮಾಡಿರುವನು. ಶಿವತೃಪ್ತಿಕರವಾದ ಯಾಗಗಳನ್ನು ಮಾಡುವವರಿಗೆ ಶಂಕರನು ಈ ಲೋಕದಲ್ಲಿಯೇ ಸಾಮ್ರಾಜ್ಯಸುಖವನ್ನೆಲ್ಲಾ ಒದಗಿಸುವನು. ಇಂತಹ ಸುಖಪ್ರದಾತೃವಾದ, ಜಾಹ್ನವಿಯನ್ನು ಶಿರಸ್ಸಿನಲ್ಲಿ ಧರಿಸಿರುವ ಧೂರ್ಜಟಿಯು ಸರ್ವದಾ

**[1]ಅನಿಕಟಗಮುಕಪಟಗಿರಾ ।**
**ಮುಹಿಕಟಕಂ ನಟನಲಂಪಟಂ ಖಪಟಂ ।**
**ಅಘಪಟಲಪಾಟನಪಟುಂ ।**
**ಹಾಟಕಗೋಧಾರಿಧಾರಿಣಂ ವಂದೇ ॥೩೬॥**

॥ ಸ್ಕಂದ ಉವಾಚ ॥

**ಪ್ರತೀಚ್ಯಾಮಪಿ ತತ್ರಾಸ್ತಿ ಪ್ರಾಕಾರಃ ಪುಷ್ಪರಾಗಜಃ ।**
**ಪುಷ್ಪರಾಗಮಣಿಜ್ಯೋತಿರ್ವಿಭಾಸಿತದಿಗಂತರಃ ॥೩೭॥**

**ತನ್ಮಣೀಂದ್ರಕೃತಾನೇಕರುದ್ರಕ್ರೀಡಾದಿವಿಗ್ರಹೈಃ ।**
**ವೃಷಭೈಸ್ತಾದೃಶೈರೇವ ಗೋಪುರಾಗ್ರಪ್ರಕಲ್ಪಿತೈಃ ॥೩೮॥**

---

ನನ್ನ ಮನೋರಾಜ್ಯದಲ್ಲಿ ನೆಲಸಿರಲಿ. ಎಲೈ ಮನಸ್ಸೇ, ಸರ್ವದಾ ಅಂತಹ ಪರಮೇಶ್ವರನನ್ನು ಸೇವಿಸು. ||೩೫||

ಪರಶಿವನು ಸರ್ವದಾ ಋಷಿಸಮೂಹಮಧ್ಯವರ್ತಿಯು. ಕಪಟಮಿಶ್ರವಲ್ಲದ ಅಂದರೆ, ಸತ್ಯವಾಕ್ಸ್ವರೂಪನು. ಸರ್ಪವನ್ನೇ ತೋಳು ಬಳೆಯನ್ನಾಗಿಯುಳ್ಳವನು. ನಾಟ್ಯದಲ್ಲಿ ಆಸಕ್ತನು. ದಿಗಂಬರನು. ಪಾಪರಾಶಿಯನ್ನೆಲ್ಲಾ ಕ್ಷಣಮಾತ್ರದಲ್ಲಿ ಧ್ವಂಸಮಾಡತಕ್ಕವನು. ಹಿರಣ್ಯರೇತಸ್ಕನಾದ ಅಗ್ನಿಯನ್ನೇ ಹಣೆಯಲ್ಲಿ ಧರಿಸಿರತಕ್ಕವನು. ಇಂತಹ ಪರಮೇಶ್ವರನನ್ನು ನಾನು ಭಕ್ತಿಯಿಂದ ವಂದಿಸುವೆನು." ಎಂದು ಅಘೋರಮೂರ್ತಿಯು ಧ್ಯಾನಿಸುವನು. ||೩೬||

ಇದೇ ರೀತಿ ಪಶ್ಚಿಮದಿಗ್ಭಾಗದಲ್ಲಿಯೂ ಪುಷ್ಯರಾಗರತ್ನಗಳಿಂದ ನಿರ್ಮಿತವಾದ ಪ್ರಾಕಾರವಿರುವುದು. ಅದು ತನ್ನ ನೈಸರ್ಗಿಕವಾದ ಕಾಂತಿಯಿಂದ ದಿಗಂತವನ್ನೆಲ್ಲಾ ಬೆಳಗಿಸುತ್ತಿರುವುದು. ||೩೭||

ಅದೇ ಪುಷ್ಯರಾಗಮಣಿಗಳಿಂದಲೇ ರುದ್ರಾವತಾರದ ವಿಗ್ರಹಗಳು ಮಾಡಲ್ಪಟ್ಟು ಅಲ್ಲಿ ಸ್ಥಾಪಿತವಾಗಿವೆ. ಅದೇ ರತ್ನಗಳಿಂದಲೇ ವೃಷಭಗಳು ನಿರ್ಮಿತವಾಗಿ ಗೋಪುರಗಳ ತುದಿಯಲ್ಲಿ ಸ್ಥಾಪಿಸಲ್ಪಟ್ಟಿವೆ. ||೩೮||

---

1 ಮುನಿಕಟಗಮುಕಟ, ಗಿರಮುಹಿಕಟಕಂ (ಪಾ. ರ)

ಗೋಪುರೈರ್ಭೂಧರಾಕಾರೈ ರಾಜತ್ಕಲಶಸುಂದರೈಃ ।
ತತ್ರಾಸ್ತಿ ಭವನಂ ಪುಣ್ಯಂ ನಾನಾಮಣಿವಿರಾಜಿತಂ ॥೩೯॥

ವೇದಿಕಾಪಟ್ಟಿಕೋಪೇತಂ ಸಿಂಹಾಸನವರೈರ್ವೃತಂ ।
ಸದ್ಯೋಜಾತಂ ಸುಖಾಸೀನಂ ಕ್ಷಾರಸಾರವಿಭೂಷಿತಂ ॥೪೦॥

ಪೂರ್ವಜಾತನಿಶಾನಾಥಭಾಸುರಾಂಗಮನೋಹರಂ ।
ರಾಜತ್ಪಿಂಗಾಮಲಜಟಾಕೃತಾಪೀಡನಿಶಾಕರಂ ॥೪೧॥

ಉಡುನಾಯಕಸಂಶೋಭಿಫಾಲಾನಲವಿಲೋಚನಂ ।
ಪ್ರಚಂಡತರಮಾರ್ತಾಂಡ ಮಂಡಲೋತ್ತಮಭೂಷಿತಂ ॥೪೨॥

ನೀಲೇಂದೀವರಸಂಕಾಶಗ್ರೀವಾವಲಯಸುಂದರಂ ।
ಪುಷ್ಪರಾಗಕೃತಾನೇಕಮಾಲಾಕಲಿತಕಂಧರಂ ॥೪೩॥

---

ಆ ಭಾಗದಲ್ಲಿರುವ ಗೋಪುರಗಳು ಪರ್ವತಾಕಾರದಲ್ಲಿವೆ. ಪ್ರತಿ ಗೋಪುರದ ಮೇಲೂ ಸುಂದರವಾದ ಕಲಶಗಳು ಇಡಲ್ಪಟ್ಟಿವೆ. ಅನೇಕ ರತ್ನಗಳಿಂದ ವಿರಾಜಮಾನವಾದ ದಿವ್ಯಭವನವೊಂದು ಆ ಗೋಪುರಗಳ ಮಧ್ಯೆ ಇರುವುದು. ॥೩೯॥

ಆ ಮನೆಯಲ್ಲಿ ಅನೇಕ ಜಗಲಿಗಳೂ, ಸಮಭೂತಲಗಳೂ ದಿವ್ಯಸಿಂಹಾಸನಗಳೂ ವಿಶೇಷವಾಗಿವೆ. ಅಲ್ಲಿರುವ ಒಂದು ದಿವ್ಯಸಿಂಹಾಸನದಲ್ಲಿ ದಿವ್ಯರತ್ನಗಳಿಂದಲಂಕೃತನಾಗಿ ಸುಖವಾಗಿ ಮಂಡಿಸಿರುವನು. ॥೪೦॥

ಆ ಸದ್ಯೋಜಾತಮೂರ್ತಿಯು ಸದ್ಯೋಜಾತೇಶ್ವರಲಿಂಗವನ್ನು ಪೂಜಿಸುವನು. ಆ ಲಿಂಗವಾದರೋ, ಪೂರ್ವದಿಕ್ಕಿನಲ್ಲಿ ಉದಯವಾದ ಪೂರ್ಣಚಂದ್ರನಂತೆ ಮನೋಹರವಾಗಿರುವುದು. ಪ್ರಕಾಶಮಾನವಾಗಿ ಪಿಂಗಳವರ್ಣದಿಂದಿರುವ ಜಟೆಯಿಂದಲೂ, ಬಾಲಚಂದ್ರನಿಂದಲೂ ಅಲಂಕೃತವಾಗಿರುವುದು. ॥೪೧॥

ತಲೆಯಲ್ಲಿ ಚಂದ್ರನೂ, ಹಣೆಯಲ್ಲಿ ಅಗ್ನಿನೇತ್ರವೂ ಪ್ರಕಾಶಿಸುತ್ತಿರುವುದು. ಆ ಲಿಂಗದ ಕಾಂತಿಯಾದರೋ, ತೀಕ್ಷ್ಣಕಿರಣಗಳುಳ್ಳ ಸೂರ್ಯನಂತೆ ಶೋಭಿಸುತ್ತಿರುವುದು. ॥೪೨॥

ಆ ಸದ್ಯೋಜಾತೇಶ್ವರನ ಕಂಠಪ್ರದೇಶವು ನೀಲೋತ್ಪಲದಂತೆ ನೀಲವರ್ಣವಿಶಿಷ್ಟವಾಗಿ, ದುಂಡಾಗಿರುವುದು. ನಾನಾಬಣ್ಣದ ಪುಷ್ಪಗಳಿಂದ ನಿರ್ಮಿತವಾದ ಹೂಮಾಲೆಗಳು ಆ ಕಂಠಪ್ರದೇಶವನ್ನು ಅಲಂಕರಿಸಿರುವುವು. ॥೪೩॥

ವ್ಯೆಯಾಘ್ರಚರ್ಮವಿಲಸತ್ಕಟಿರತ್ನಸುಕಾಂಚಿಕಂ ।
ಅಹಿಮುಖ್ಯವರಾನೇಕತಾದೃಶೈರ್ಗಣಪೈರ್ಯುತಂ ॥೪೪॥

ಪಾಶಾಂಕುಶಾಭಯಕರಂ ಪಾಶಿನಾ ಪರಿಸೇವಿತಂ ।
ದಧಿಮಂಡಮಹಾಂಭೋಧಿಮಧ್ಯಸೌಧವರಾಶ್ರಯಂ ॥೪೫॥

ಗಣೈಶ್ಚಾಪಿ ಮಹೋದಂಡಡಿಂಭಾರಾವನಿಭೀಷಣೈಃ ।
ಸೇವಿತಂ ಪಾಶಿಭಿಸ್ತತ್ರ ಪಶ್ಚಿಮಾಂ ಪಾತಿ ತಾಂ ದಿಶಂ ।
ಸದ್ಯೋಜಾತೇಶ್ವರಂ ಲಿಂಗಂ ಸ್ತೌತಿ ಭಕ್ತ್ಯಾ ಪ್ರಪೂಜಯನ್ ॥೪೬॥

ಪಾಟೀರದ್ರುಮಕೀಟಕೇತನಜಟಾಕೋಟೀರಭಾಗೇ ರಟ ।
ತ್ಸ್ವಾಟೋಚ್ಚೈಸ್ತಟಿನೀಸ್ಯದಾರ್ಭಟತಟಜ್ಝಾಟೀಕೃತಾಹಿಚ್ಛಟ ।

---

ಸೊಂಟಪ್ರದೇಶದಲ್ಲಿ ಹುಲಿಯ ಚರ್ಮವೂ ಅದರ ಮೇಲೆ ರತ್ನಮಯವಾದ ಒಡ್ಯಾಣವೂ ವಿರಾಜಿಸುತ್ತಿರುವುದು. ಸುತ್ತಲೂ ನಾಗಶ್ರೇಷ್ಠರೇ ಮೊದಲಾದ ಶ್ರೇಷ್ಠಗಣಾಧಿನಾಯಕರು ನೆರೆದಿರುವರು. ॥೪೪॥

ಕೈಗಳಲ್ಲಿ ಪಾಶ, ಅಂಕುಶ, ಅಭಯಮುದ್ರೆ, ಇವುಗಳಿವೆ. ಇಂತಹ ದಿವ್ಯಲಿಂಗವನ್ನು ಸರ್ವದಾ ಪಶ್ಚಿಮದಿಕ್ಪಾಲಕನಾದ ವರುಣನು ಸೇವಿಸುತ್ತಿರುವನು. ಆ ಗರ್ಭಗೃಹವಾದರೋ, ದಧಿಸಮುದ್ರದ ಮಧ್ಯಭಾಗದಲ್ಲಿರುವ ಒಂದು ಸೌಧವನ್ನು ಆಶ್ರಯಿಸಿದ್ದಾಗಿರುವುದು. ॥೪೫॥

ಮಹಾಪರಾಕ್ರಮಿಗಳೂ, ಭಯಂಕರಾಕೃತಿಯುಳ್ಳವರೂ ಆದ ಗಣಗಳು ಆ ಮೂರ್ತಿಯನ್ನು ಸರ್ವದಾ ಸೇವಿಸುತ್ತಿರುವರು. ಇಂತಹ ಸದ್ಯೋಜಾತೇಶ್ವರಸ್ವಾಮಿಯು ಯಾವಾಗಲೂ ಪಶ್ಚಿಮದಿಕ್ಕನ್ನು ರಕ್ಷಿಸುತ್ತಾ ನೆಲಸಿರುವನು. ಮಹೇಶ್ವರನನ್ನು ಸದ್ಯೋಜಾತ ಮೂರ್ತಿಯು ಭಕ್ತಿಯಿಂದ ಸರ್ವದಾ ಅರ್ಚಿಸುತ್ತಿರುವನು. ॥೪೬॥

"ಮಹೇಶ್ವರನೇ, ಚಂದನದ್ರುಮವನ್ನು ವಿಶೇಷವಾಗಿ ಆಶ್ರಯಿಸಿರುವ ಸರ್ಪವೇ ನಿನ್ನ ಜಟಾಜೂಟವನ್ನಲಂಕರಿಸಿರುವುದು. ಅಂತಹ ಜಟಾಜೂಟದಲ್ಲಿ ವಿಹರಿಸುವ ಗಂಗಾಪ್ರವಾಹದ ವೇಗದಿಂದುಂಟಾದ ಆರ್ಭಟಕ್ಕೆ ಹೆದರಿ, ದಡದಲ್ಲಿರುವ ಸರ್ಪಗಳೆಲ್ಲಾ ನಿನ್ನ ಜಟೆಯಲ್ಲಿ ಐಕ್ಯವನ್ನು ಹೊಂದುತ್ತಿರುವುವು. ಕುದುರೆ

ಘೋಟಾಕೃತ್ರಿಮ ಗೋಕಟೀತಟಪಟೀಭೂತೇಭಚರ್ಮಾಂಬರ ।
[1] ಕ್ಷೋಣೀರುಣ್ಣಿಕಟಾಟಖಾಟವಿಟಪಿನ್ ಮಚ್ಚಿತ್ತತಟ್ಯಾಮಟ ॥೪೮॥

ವತಂಸಿತಸುಧಾಕರಂ ವರಗುಣೌಘರತ್ನಾಕರಂ ।
ಸ್ಫುರನ್ನಿಟಿಲಲೋಚನಜ್ವಲನದಗ್ಧಮೀನಧ್ವಜಂ ।
ಕುಲಾಚಲಕುಮಾರಿಕಾಕುಚತಟೀಪಟೀರಾಂಕಿತಂ ।
ಭಜಾಮಿ ಭಜತಾಂ ಸದಾಭಯದಮೀಶ್ವರಂ ಶಂಕರಂ ॥೪೯॥

ಇತಿ ಸ್ತೌತಿ ಸದಾ ಲಿಂಗಂ ಸದ್ಯೋಜಾತೋ ಮಹೇಶ್ವರಂ ।
ತದುತ್ತರೇಪಿ ಪ್ರಾಕಾರೋ ಗೋಮೇಧಮಣಿಕಲ್ಪಿತಃ ॥೫೦॥

ಘೃತೋದೇನಾವೃತಸ್ತತ್ರ ತತ್ಕಲ್ಲೋಲೋತ್ಥವಾಯುಭಿಃ ।
ಪರೀವೀತೋ ಗೋಪುರೈಶ್ಚ ತನ್ಮಣೀಂದ್ರಕೃತೈಶ್ಶುಭೈಃ ॥೫೧॥

---

ಯಂತೆಯೇ ಕಂಡುಬರುವ ವೃಷಭದಮೇಲೆ ಮಂಡಿಸಿ, ಗಜಚರ್ಮವನ್ನು ಹೊದ್ದಿರುವ ಮಹಾದೇವನೇ, ಸ್ವರ್ಗಲೋಕದ ಕಲ್ಪವೃಕ್ಷದಂತೆ ಭಕ್ತರಿಗೆ ಇಷ್ಟಾರ್ಥವನ್ನು ಸಲ್ಲಿಸುತ್ತಾ ಸರ್ವತ್ರ ಸಂಚಾರಮಾಡುವ ಮಹೇಶ್ವರನೇ, ನನ್ನ ಮನಸ್ಸೆಂಬ ಪ್ರದೇಶದಲ್ಲಿ ವಿಹರಿಸು. ||೪೮||

ಪರಶಿವನಿಗೆ ಚಂದ್ರನೇ ಭೂಷಣವಸ್ತು. ಆತನು ಸಮಸ್ತ ಗುಣರಾಶಿಗಳಿಗೂ ರತ್ನಾಕರನಂತಿರುವವನು. ತನ್ನ ಹಣೆಗಣ್ಣಿನ ಜ್ವಾಲೆಯಿಂದ ಮನ್ಮಥನನ್ನು ಸುಟ್ಟು ಬೂದಿಮಾಡಿರುವನು. ಪಾರ್ವತಿಯ ಆಲಿಂಗನದಿಂದ, ದೇವಿಯ ಕುಚ ಸಂಬಂಧವಾದ ಗಂಧವು ಶಂಕರನ ಹೃದಯವನ್ನು ಗುರುತುಳ್ಳದ್ದನ್ನಾಗಿ ಮಾಡಿದೆ. ಇಂತಹ ಲೋಕ ಶಂಕರನೂ, ಭಕ್ತರಿಗೆ ಅಭಯಪ್ರದನೂ ಆದ ಪರಮೇಶ್ವರನನ್ನು ನಾನು ಸರ್ವದಾ ಸೇವಿಸುವೆನು." ||೪೯||

ಹೀಗೆ ಸದ್ಯೋಜಾತನು ಸದ್ಯೋಜಾತೇಶ್ವರಲಿಂಗವನ್ನು ಭಕ್ತಿಯಿಂದ ಸ್ತುತಿಸುತ್ತಿರುವನು. ಹಾಗೆಯೇ ಉತ್ತರ ದಿಗ್ಭಾಗದಲ್ಲಿಯೂ ಗೋಮೇಧರತ್ನದಿಂದ ನಿರ್ಮಿತವಾದ ಪ್ರಾಕಾರವೊಂದಿರುವುದು. ||೫೦||

ಅದು ಘೃತ (ತುಪ್ಪದ) ಸಮುದ್ರದಿಂದ ಆವೃತವಾಗಿರುವುದು. ಆ ಸಮುದ್ರದ

---

1 ಸ್ವಕ್ಷೋಣೀರುಹ ನಿಷ್ಕುಟಾಢ್ಯ ವಿಟಪಿನ್ (ಪಾ.ರ.)

ವರರುದ್ರಾವತಾರೋದ್ಯದ್ವಿಗ್ರಹೈರ್ವೃಷಭೈರ್ಯುತಂ ।
ಶೋಭಿತಂ ತತ್ಪ್ರಭಾಭಿಶ್ಚ ತತ್ರಾಸ್ಥಾನಂ ಚ ತಸ್ಯ ಹಿ ॥೫೨॥

ಸೌಧೈರಪಾರಶಿಖರೈರ್ಬಹುಸ್ತಂಭವಿರಾಜಿತೈಃ ।
ತತ್ರ ಸಂಸ್ಥಂ ಮಹಾಬಾಹುಂ ವಾಮದೇವಂ ತ್ರಿಲೋಚನಂ ॥೫೩॥

ಸಿಂಹಾಸನೇ ಸುಖಾಸೀನಂ ಭಸ್ಮೋದ್ಧೂಲನಪಾಂಡರಂ ।
ಹರಿನ್ಮಣಿನಿಭಾಕಾರಂ ವಿದ್ಯುನ್ನಿಭಜಟಾಧರಂ ॥೫೪॥

ತ್ರಿಪುಂಡ್ರಾಂಕಿತಸತ್ಫಾಲಂ ಖಡ್ಗಖೇಟಧರಂ ಶುಭಂ ।
ಪ್ರಸನ್ನಾಸ್ಯಂ ನೀಲಕಂಠಂ ರಾಜದಿಂದುಕಲಾಧರಂ ॥೫೫॥

---

ಮೇಲೆ ಬೀಸುವ ಗಾಳಿಯು ಗೋಮೇಧಮಣಿಯಿಂದ ಕಲ್ಪಿತವಾದ ಗೋಪುರಗಳನ್ನೆಲ್ಲಾ ಮುಚ್ಚಿರುವುದು. ॥೫೧॥

ಆ ಗೋಪುರಗಳಲ್ಲಿಯೂ ರುದ್ರಾವತಾರದ ಚಿತ್ರಗಳೂ, ಬಸವನ ವಿಗ್ರಹಗಳೂ ಅದೇ ರತ್ನದಿಂದಲೇ ನಿರ್ಮಿತವಾಗಿ ಶೋಭಿಸುತ್ತಿವೆ. ಅದರ ಕಾಂತಿಯಾದರೋ ಸರ್ವತ್ರ ಹರಡಿ ಆ ಪ್ರದೇಶವನ್ನೆಲ್ಲಾ ರಾಜಾಸ್ಥಾನವನ್ನಾಗಿ ಮಾಡಿದೆ. ॥೫೨॥

ಅನೇಕ ಶಿಖರಗಳಿಂದಲೂ, ರತ್ನಸ್ತಂಭಗಳಿಂದಲೂ ಕೂಡಿರುವ ಸೌಧಗಳು ಅಲ್ಲಿ ಹೇರಳವಾಗಿರುವುವು. ಆ ಮಧ್ಯಸೌಧದಲ್ಲಿ ವಾಮದೇವಮೂರ್ತಿಯೂ ತ್ರಿಲೋಚನನಾಗಿ, ಮಹಾಬಾಹುವಾಗಿ ವಿರಾಜಿಸುತ್ತಿರುವನು. ॥೫೩॥

ಆ ವಾಮದೇವ ಮೂರ್ತಿಯು ವಾಮದೇವೇಶ್ವರನನ್ನು ಸರ್ವದಾ ಪೂಜಿಸುತ್ತಿರುವನು. ವಾಮದೇವೇಶ್ವರನಾದರೋ, ರತ್ನಸಿಂಹಾಸನದಲ್ಲಿ ಸುಖವಾಗಿ ಕುಳಿತಿರುವನು. ಭಸ್ಮಲೇಪದಿಂದ ಸ್ವಾಮಿಯ ದೇಹವು ಶುಭ್ರವಾಗಿ ಕಾಣುತ್ತಿರುವುದು. ಇಂದ್ರನೀಲಮಣಿಯಂತೆ ದೇಹವು ನೀಲವರ್ಣವಿಶಿಷ್ಟವಾಗಿರುವುದು. ಮಿಂಚಿನ ಬಳ್ಳಿಯಂತೆ ಜಟೆಯು ಸದಾ ನೀಳವಾಗಿ ಪ್ರಕಾಶಿತವಾಗಿರುವುದು. ॥೫೪॥

ಹಣೆಯಲ್ಲಿ ತ್ರಿಪುಂಡ್ರವಿದೆ. ಖಡ್ಗವನ್ನೂ, ಗುರಾಣಿಯನ್ನೂ (ಆಯುಧ ವಿಶೇಷ) ಧರಿಸಿರುವ ಕೈಗಳಿವೆ. ಮುಖವು ಪ್ರಸನ್ನವಾಗಿದೆ. ಕಂಠವು ನೀಲವರ್ಣವುಳ್ಳದ್ದಾಗಿದೆ. ಚಂದ್ರನು ಶಿರಸ್ಸಿನಲ್ಲಿ ಬಹುವಾಗಿ ಶೋಭಿಸುತ್ತಿರುವನು. ॥೫೫॥

ಹರಿತೈರ್ಗಣಪೈಶ್ಚೈವ ವಾಯುಭಿಃ ಪರಿಸೇವಿತಂ ।
ಉದ್ಯನ್ಮರತಕೀಗರ್ಭಸುಂದರೈರ್ವಾಯುವೇಗಿತೈಃ ॥೫೬॥

ತ್ರಿಪುಂಡ್ರಚಂದ್ರಾರ್ಧಹರೈರ್ಜಟಾಮಂಡಲಮಸ್ತಕೈಃ ।
ಬಾಣಬಾಣಾಸನಧರೈರ್ಹಲ್ಲಕಾಭೂಷಭೂಷಿತೈಃ ॥೫೭॥

ವಲ್ಲಕೀಮುರಜೋತ್ತುಂಗಮೃದಂಗವರವಾದಕೈಃ ।
ಸೇವಿತಂ ಪರಿತೋ ವೀರೈಶ್ಶೂಲಾಮಲಲಸತ್ಕರೈಃ ॥೫೮॥

ವಾಮದೇವಂ ಸಾಮಜಾತಾಜಿನಬದ್ಧಕಟೀತಟಂ ।
ಕಂಠೇ. ಭುಜಂಗಸಂಯುಕ್ತಂ ಮೃಗೇಂದ್ರಾಮಲಲೋಚನಂ ॥೫೯॥

---

ಹರಿದ್ವರ್ಣವಿಶಿಷ್ಟರಾದ ಗಣನಾಯಕರು ಸರ್ವದಾ ಸ್ವಾಮಿಯನ್ನು ಸೇವಿಸುತ್ತಿರುವರು. ಅವರೂ ಸಹ ಹಸುರುವರ್ಣದ ಪಚ್ಚೆಯಿಂದ ಕೂಡಿದ ಆಭರಣಗಳನ್ನು ಧರಿಸಿದವರಾಗಿ ವಾಯುವೇಗದಿಂದ ವಿಹರಿಸುತ್ತಿರುವರು. ಅದೇ ರೀತಿಯಲ್ಲಿರುವ ವಾಯುವೂ ಸಹ ವಾಮದೇವೇಶ್ವರನನ್ನು ಸೇವಿಸುತ್ತಿರುವುದು. ||೫೬||

ಆ ಗಣಗಳು ಹಣೆಯಲ್ಲಿ ತ್ರಿಪುಂಡ್ರವನ್ನೂ, ಅರ್ಧಚಂದ್ರನನ್ನೂ ಧರಿಸಿರುವರು. ಅವರ ಜಟಾಮಂಡಲದಿಂದ ಶಿರಸ್ಸು ಸುಂದರವಾಗಿರುವುದು. ಎಲ್ಲರೂ ಧನುರ್ಬಾಣಗಳನ್ನು ಹಿಡಿದಿರುವರು. ಸೌಗಂಧಿಕಪುಷ್ಪಮಾಲೆಯಿಂದ ಅಲಂಕೃತರಾಗಿರುವರು. ||೫೭||

ಅನೇಕ ಪ್ರಮಥವರ್ಗದವರು, ವೀಣೆ, ಮದ್ದಲೆ, ಮೃದಂಗ ಮುಂತಾದ ಉತ್ತಮವಾದ ವಾದ್ಯಗಳನ್ನು ಬಾರಿಸುತ್ತಿರುವರು. ಹಲವರು ತ್ರಿಶೂಲಗಳನ್ನು ಕೈಯ್ಯಲ್ಲಿ ಹಿಡಿದು ಸರ್ವದಾ ಸ್ವಾಮಿಯನ್ನು ಓಲೈಸುತ್ತಿರುವರು. ||೫೮||

ವಾಮದೇವೇಶ್ವರನು ಗಜಚರ್ಮವನ್ನು ಸೊಂಟದಲ್ಲಿ ಧರಿಸಿಕೊಂಡಿರುವನು. ಕಂಠದಲ್ಲಿ ಸರ್ಪಗಳು ಶೋಭಿಸುತ್ತಿರುವುವು. ಕಣ್ಣುಗಳು ಸಿಂಹಲೋಚನಗಳಂತೆ ರಕ್ತವರ್ಣವಾಗಿರುವುವು. ||೫೯||

**ಕುಬೇರೇಣೋತ್ತರಾಂ ಪಾತಿ ದಿಶಂ ಯಕ್ಷೇಶ್ವರಾನ್ವಿತಂ।**
**ವಾಮದೇವೇಶ್ವರಂ ಲಿಂಗಂ ಸಂಪೂಜ್ಯಾಸ್ತುವದೀಶ್ವರಂ ॥೬೦॥**

॥ ವಾಮದೇವ ಉವಾಚ ॥

**ತಿಷ್ಠಂತೇ ಸ್ತುತಿಪಾಠನೇ ತವ ವಿಭೋ ನಿಷ್ಠ್ಯೂತನಿಷ್ಠೀವವ**
**ಚ್ಛಾಠ್ಯಂ ನಿಷ್ಠುರತಾಂ ವಿಧೂಯ ಮನಸಾ ಬ್ರಹ್ಮೈಕನಿಷ್ಠಾಃ ಕತಿ।**
**ವೈಕುಂಠಾರ್ಚಿತರತ್ನಪೀಠನಿಲಯ ಶ್ರೀಕಂಠ ಕಂಠೋಲ್ಲಸ**
**ನ್ನೀಲ ಜ್ಯೇಷ್ಠಕನಿಷ್ಠಕುಷ್ಠಹನನ ಶ್ರೇಷ್ಠಾಂತರಾತಿಷ್ಠ ಮೇ ॥೬೧॥**

**ಸುರಕುವಲಯಸೋಮಂ ವಾಮದೇವಾಖ್ಯಸಾಮ**
**ಸ್ತುತಮಖಿಲಗುಣಾನಾಂ ಪೀಮಧಾಮಾನಮೀಶಂ।**
**ಜಗದವನವಿನಾಶಂ ಶಾಂಭವೋದ್ಯತ್ಸುಕಾಮಂ**
**ನಿಜನಯನಕಟಾಕ್ಷೈರ್ದಗ್ಧಕಾಮಂ ಭಜೇಽಹಂ ॥೬೨॥**

---

ವಾಮದೇವಮೂರ್ತಿಯು, ಅಂತಹ ವಾಮದೇವೇಶ್ವರಲಿಂಗವನ್ನು ನಿತ್ಯವೂ ಪೂಜಿಸುತ್ತಾ, ಕುಬೇರನೊಡನೆಯೂ, ಯಕ್ಷರೊಡನೆಯೂ, ಆ ಉತ್ತರ ದಿಕ್ಕನ್ನು ಕಾಪಾಡುತ್ತಿರುವನು. ||೬೦||

"ಮಹಾದೇವನೇ, ಬ್ರಹ್ಮಜ್ಞಾನಿಗಳಾದವರು ಸರ್ವದಾ ನಿನ್ನನ್ನೇ ಸ್ಮರಿಸುತ್ತಾ, ನಿನ್ನನ್ನೇ ಹೊಗಳುತ್ತಾ, ಕೃತ್ರಿಮವನ್ನೂ, ನಿಷ್ಠುರಸ್ವಭಾವವನ್ನೂ ದೂರಮಾಡಿ, ಮನಸ್ಸನ್ನು ನಿನ್ನಲ್ಲಿಯೇ ನಿಲ್ಲಿಸಿರುವರು. ನಿನ್ನನ್ನು ಸಾಕ್ಷಾನ್ಮಹಾ ವಿಷ್ಣುವೂ ಸಹ ಅರ್ಚಿಸಿರುವನು. ರತ್ನಪೀಠಗಳಲ್ಲಿ ಕುಳಿತು, ಶ್ರೀಕಂಠ ನೆನಿಸಿ, ಕಂಠದಲ್ಲಿ ನೀಲವರ್ಣವನ್ನು ತೋರ್ಪಡಿಸುತ್ತಾ, ಲೋಕಕ್ಕೆಲ್ಲಾ ಹಿರಿಯವನಂತೆಯೂ, ಪದಾರ್ಥಗಳಲ್ಲೆಲ್ಲಾ ಸೂಕ್ಷ್ಮವಸ್ತುವಿನಂತೆಯೂ ಕಂಡುಬರುವ ಸರ್ವ ವ್ಯಾಧಿನಾಶಕನಾದ ಪರಮೇಶ್ವರನೇ, ನೀನು ಸರ್ವದಾ ನನ್ನ ಮನಸ್ಸಿನಲ್ಲಿ ನೆಲೆಗೊಂಡಿರು. ||೬೧||

ಪರಮೇಶ್ವರನೇ, ನೀನು ದೇವತೆಗಳೆಂಬ ನೈದಿಲೆಗಳಿಗೆ ಚಂದ್ರನಂತಿರುವೆ. ವಾಮದೇವವೆಂಬ ಹೆಸರಿನ ಸಾಮವೇದದಿಂದ ಸ್ತುತಿಸಲ್ಪಟ್ಟಿರುವೆ. ಸಕಲ ಸದ್ಗುಣಗಳಿಗೂ ನೀನೇ ಆಶ್ರಯನು. ನೀನೇ ತೇಜಸ್ಸಿಗೆ ಒಂದು ಮೇರೆ. ಲೋಕದ ಸೃಷ್ಟಿಸ್ಥಿತಿಲಯಗಳಿಗೆ ನೀನೇ ಕಾರಣನು. ನಿನ್ನ ಭಕ್ತರ ಕೋರಿಕೆಗಳನ್ನೆಲ್ಲಾ ಪೂರ್ಣಗೊ

**ಏವಂ ಸ್ತೌತಿ ಮಹಾದೇವಂ ವಾಮದೇವಃ ಪ್ರಸನ್ನಧೀಃ ।**
**ತದಂತರಾ ಗಿರೇರ್ಮೂರ್ಧ್ನಿ ಸಂಸ್ಥೋ ಹೀರಕಸೌಧಕಃ ॥೬೩॥**

**ರುದ್ರಾವತಾರಪ್ರಭವೈರ್ವಿಗ್ರಹೈರ್ವೃಷಭೈರಪಿ ।**
**ಉರಗೇಂದ್ರಮಹಾಹಾರೋ ಮಧ್ಯಂದಿನರವಿಪ್ರಭಃ ॥೬೪॥**

**ಶರ್ವರೀಶಾನಮಕುಟೀಭೂತಿಭೂಷಿತವಿಗ್ರಹಃ ।**
**ಗಜೇಂದ್ರಚರ್ಮವಸನೋ ಹೀರಮಾಲಾಕೃತಾಂಗಕಃ ॥೬೫॥**

**ಅಂತರಿಕ್ಷೈರುದ್ರಗಣೈಃ ಪಾತಿ ವ್ಯೋಮ ಮನೋಹರಂ ।**
**ನಿಷಂಗಿಭಿಃ ಕವಚಿಭಿಶ್ಛುರಿಕಾಹೇತಿಧಾರಿಭಿಃ ॥೬೬॥**

---

ಳಿಸುವ ಶಕ್ತಿ ನಿನಗಲ್ಲದೆ ಮತ್ತಾರಿಗಿರುವುದು. ನಿನ್ನ ಉಗ್ರವಾದ ಕಟಾಕ್ಷದಿಂದಲ್ಲವೇ ಮನ್ಮಥನು ಹತನಾದದ್ದು. ಇಂತಹ ಮಹಿಮಾಶಾಲಿಯಾದ ನಿನ್ನನ್ನು ನಾನು ಭಕ್ತಿಯಿಂದ ಸೇವಿಸುವೆನು. ||೬೨||

ಹೀಗೆ ವಾಮದೇವಮೂರ್ತಿಯು ಶುದ್ಧಮನಸ್ಸಿನಿಂದ ಪರಮೇಶ್ವರನನ್ನು ಭಜಿಸುವನು. ಈ ನಾಲ್ಕು ದಿಕ್ಕುಗಳ ಮಧ್ಯಭಾಗದ ಪರ್ವತದ ಮೇಲುಗಡೆಯಲ್ಲಿ ಹೀರಕಮಣಿಗಳಿಂದ ಅಲಂಕೃತವಾದ ಒಂದು ಉಪ್ಪರಿಗೆ ಮನೆಯಿದೆ. ||೬೩||

ಆ ಮನೆಯು ರುದ್ರಾವತಾರದ ವಿಗ್ರಹಗಳನ್ನೂ, ವೃಷಭಾಕೃತಿಗಳನ್ನೂ ಒಳಗೊಂಡದ್ದಾಗಿದೆ. ಆ ಮನೆಗೆ ಆದಿಶೇಷನೇ ರತ್ನಹಾರದಂತಿರುವನು. ಮಧ್ಯಾಹ್ನ ಕಾಲದ ಸೂರ್ಯನಂತೆ ಅದು ಸದಾ ತೇಜಸ್ಸುಳ್ಳದ್ದಾಗಿರುವುದು. ||೬೪||

ಅಲ್ಲಿ ಈಶಾನಮೂರ್ತಿಯು ಚಂದ್ರನನ್ನು ತನ್ನ ಕಿರೀಟದಲ್ಲಿರಿಸಿಕೊಂಡು, ಅನೇಕ ಆಭರಣಗಳಿಂದ ಅಲಂಕೃತನಾಗಿರುವನು. ಗಜಚರ್ಮಾಂಬರಧಾರಿಯಾಗಿ, ಹೀರರತ್ನಗಳಿಂದ ಭೂಷಿತವಾದ ಅಂಗವುಳ್ಳವನಾಗಿರುವನು. ||೬೫||

ಅಲ್ಲದೆ ಈಶಾನಮೂರ್ತಿಯು ಅಂತರಿಕ್ಷಗತರಾದ ರುದ್ರಗಣಗಳಿಂದ ಕೂಡಿ ಮನೋಹರವಾದ ಅಂತರಿಕ್ಷವನ್ನು ಕಾಪಾಡುತ್ತಿರುವನು. ಆ ರುದ್ರಗಣಗಳು ಬಾಣ, ಬತ್ತಳಿಕೆ, ಕವಚ ಇನ್ನೂ ಇತರ ಆಯುಧಗಳು ಇವುಗಳನ್ನು ಧರಿಸಿ ನಿಂತಿರುವರು. ||೬೬||

**ವ್ಯೋಮಕೇಶಪ್ರಸಾದೇನ ಚೇಶಾನಶ್ಶೋಷಿತಾ ಸತಾಂ ।**
**ಈಶಾನೇಶಂ ಮಹಾಲಿಂಗಂ ಸಂಪೂಜ್ಯ ಸ್ತೌತಿ ಭಕ್ತಿತಃ ॥೬೭॥**

॥ ಈಶಾನ ಉವಾಚ ॥

**ರಥಂತರರವಪ್ರಿಯಂ ರಥರಥಾಂಗಪಾಣೀಶರಂ ।**
**ಮನೋರಥಪಥಾತಿಗಂ ಸುರಥನಾಥಸತ್ಕಂಕಣಂ ।**
**ಭಗೀರಥಪಥಾನುಗಾವಿಹಿತಜಹ್ನುಕನ್ಯಾಜಟಂ ।**
**ಭಜಾಮಿ ಸುರಗೋರಥಪ್ರಿಯಮಪಾರಪಾಪಾಪಹಂ ॥೬೮॥**

**ಚಷಕೇ ನಿಜವಾಜಿಹೇಷಿತೈಶ್ಚರಣೇ ವಾಯುಸುಭೋಜಿಶಿಂಜಿತೈಃ ।**
**ಕಟಿಸೀಮ್ನಿ ಸುಭೂರಿಬೃಂಹಿತೈರ್ಮುಖರಂ ದೈವತಮಾವಿರಸ್ತು ಚಿತ್ತೇ॥೬೯॥**

---

ಈಶಾನಮೂರ್ತಿಯು ವ್ಯೋಮಕೇಶನ ಅನುಗ್ರಹದಿಂದ ಸತ್ಪುರುಷರನ್ನೆಲ್ಲಾ ಕಾಪಾಡುತ್ತಿರುವನು. ಹಾಗೆಯೇ ಈಶಾನೇಶನೆಂಬ ಹೆಸರಿನ ಮಹಾಲಿಂಗವನ್ನು ಭಕ್ತಿಯಿಂದ ಅರ್ಚಿಸುತ್ತಿರುವನು. ॥೬೭॥

" ಮಹೇಶ್ವರನು ರಥಂತರವೆಂಬ ಸಾಮಗಾನಕ್ಕೆ ಪ್ರಿಯನಾದವನು. ರಥ, ಚಕ್ರ, ಬಾಣ, ಇವುಗಳನ್ನು ಕೈಯ್ಯಲ್ಲಿ ಧರಿಸಿರುವನು. ಇಷ್ಟಾರ್ಥಗಳನ್ನು ನೆರವೇರಿಸುವುದರಲ್ಲಿ ಮಹಾಮಹಿಮನು. ಆದಿಶೇಷನನ್ನು ಕಂಕಣವನ್ನಾಗಿ ಉಳ್ಳವನು. ಭಗೀರಥನನ್ನೇ ಅನುಸರಿಸಿಬಂದ ಭಾಗೀರಥಿಯನ್ನೇ ಶಿರಸ್ಸಿನಲ್ಲಿ ಧರಿಸಿರುವನು. ಸುರರನ್ನೇ ವಾಹನಗಳನ್ನಾಗಿ ಹೊಂದಿರುವ ರಥದಲ್ಲಿ ಆಸಕ್ತಿಯುಳ್ಳವನು. ಇಂತಹ ಸಮಸ್ತ ಪಾಪ ನಿವಾರಕನಾದ ಪರಮೇಶ್ವರನನ್ನು ನಾನು ಮನಸಾ ಸ್ಮರಿಸುವೆನು. ॥೬೮॥

ವಾಜಿಗಮನದಂತೆ ಗಮನವುಳ್ಳ ಕಾಲಿನಲ್ಲಿ ಕುದುರೆಯ ಹೇಷಾರವವೂ, ಯಜಮಾನರೂಪಿಯಾಗಿ, ಹೋಮಪಾತ್ರೆಯನ್ನು ಹಿಡಿದಿರುವ ಕೈಯ್ಯಲ್ಲಿ ಸರ್ಪದ ಧ್ವನಿಯೂ, ಗಜಾಜಿನದಿಂದ ಕೂಡಿರುವ ಸೊಂಟದ ಪ್ರದೇಶದಲ್ಲಿ ಗಜಗರ್ಜನೆಯೂ ಕಂಡು ಬರುತ್ತಿರುವುದು. ಹೀಗೆ ಸರ್ವಾವಯವದಲ್ಲಿಯೂ ಮುಖರೀಭೂತವಾಗಿರುವ ಶಿವಾತ್ಮಕವಾದ ದೈವವು ನನಗೆ ಪ್ರಸನ್ನವಾಗಲಿ. ॥೬೯॥

ಅಶ್ವೀಕೃತಸ್ವೀಕೃತವೇದರಾಶಿ
ರ್ನಾಂಗೀಕೃತಾಂಗೀಕೃತಶಂಬರಾರಿಃ ।
ಅಸ್ತ್ರೀಕೃತಸ್ತ್ರೀಕೃತದಾನವಾರಿ
ರ್ದೇವಸ್ಸದಾ ಮೇ ಹೃದಯೇ ಚಕಾಸ್ತು ॥೭೦॥

ಏವಂ ಸ್ತೌತಿ ಸದಾಕಾಲಮೀಶಾನೋ ಗಣಪಾವೃತಃ ।
ಅಂತರಾಃ ಪರಿಘಾಶ್ಚೈವ ಪ್ರಾಕಾರವರಗೋಪುರಂ ॥೭೧॥

ಮಹಾಕೈಲಾಸಭವನೇ ಮಣಿಕಲ್ಪಿತಮುತ್ತಮಂ ।
ರತ್ನಪ್ರಾಕಾರಮೇತದ್ಧಿ ಪಂಚಬ್ರಹ್ಮಪ್ರಕಲ್ಪಿತಂ ॥೭೨॥

ಮಹೇಶೇನ ತದಾ ವಿಪ್ರ ಶ್ರವಣಾದಘನಾಶನಂ ॥೭೩॥

ವಿಚಿತ್ರಂ ಶಿವನಿರ್ಮಾಣಂ ವಿಚಿತ್ರಂ ಶಿವಚೇಷ್ಟಿತಂ ।
ವಿಚಿತ್ರಾ ಶಿವಮಾಯಾ ಸಾ ಮಹಾಮಾಯಸ್ಯ ಶೂಲಿನಃ ॥೭೪॥

---

ಚತುರ್ವೇದಗಳನ್ನು ನಾಲ್ಕು ಕುದುರೆಗಳನ್ನಾಗಿ ಮಾಡಿಕೊಂಡು ಅಂಗವಿಶಿಷ್ಟನಾದ ಮನ್ಮಥನನ್ನು ಅನಂಗನನ್ನಾಗಿಮಾಡಿದ, ಮೋಹಿನೀವೇಷದಲ್ಲಿದ್ದ ಮಹಾವಿಷ್ಣುವನ್ನು ಪುರುಷಶ್ರೇಷ್ಠನನ್ನಾಗಿ ಮಾಡಿದ, ಪರಮೇಶ್ವರನು ಸರ್ವದಾ ನನ್ನ ಮನಸ್ಸಿನಲ್ಲಿ ಪ್ರಕಾಶಿಸುತ್ತಿರಲಿ." ॥೭೦॥

ಹೀಗೆ ಈಶಾನಮೂರ್ತಿಯು ಪ್ರಮಥಗಣಗಳಿಂದ ಕೂಡಿದವನಾಗಿ ಸರ್ವಕಾಲದಲ್ಲಿಯೂ ಮಹೇಶ್ವರನನ್ನು ಸ್ತುತಿಸುತ್ತಿರುವನು. ಹೀಗೆ ಅನೇಕ ಕೋಟೆಗಳಿಂದಲೂ ಕಂದಕಗಳಿಂದಲೂ ತುಂಬಿರುವ ಶ್ರೇಷ್ಠವಾದ ಮತ್ತೊಂದು ಗೋಪುರವಿರುವುದು. ॥೭೧॥

ಆ ಗೋಪುರವು ಮಹಾಕೈಲಾಸ ಭವನಕ್ಕೆ ಸೇರಿದುದು. ಅದು ರತ್ನನಿರ್ಮಿತವಾದದ್ದು. ಪ್ರಾಕಾರವೂ ರತ್ನಮಯವಾಗಿದೆ. ತತ್ಪುರುಷಾದಿ ಪಂಚಬ್ರಹ್ಮರಿಗಾಗಿ ಮಹೇಶ್ವರನಿಂದಲೇ ಕಲ್ಪಿಸಲ್ಪಟ್ಟುದು. ॥೭೨॥

ಅಂತಹ ಪ್ರಾಕಾರದಲ್ಲಿರುವ ಭವನದಲ್ಲಿ ಮಹೇಶ್ವರನಿರುವನು. ಈ ಭವನ ವಿಷಯವನ್ನು ಕೇಳಿದವರು ಸರ್ವಪಾಪ ವಿಮುಕ್ತರಾಗುವರು. ಶಿವ ನಿರ್ಮಾಣವೆಲ್ಲಾ

ಯಸ್ಯಾಂಶಲೇಶಲವಲೇಶಶತಾಂಶಲೇಶ
ಲೇಶೈರ್ಜಗಜ್ಜನನಕರ್ಮಗತಿಪ್ರಣಾಶಂ ।
ಕುರ್ವಂತಿ ವಾಮಭುಜಭೂರ್ಮಧುಕೈಟಭಾರಿ
ರ್ದಕ್ಷಾಂಗನೇತ್ರಜನನೌ ಭವತಾಂ ಹರಾಜೌ ॥೭೫॥

ಕ್ವಚಿತ್ಕಲ್ಪೇ [1]ಸ್ರಷ್ಟಾ ಹರವಿಧಿಮುಕುಂದಾಃ ಪ್ರತಿಭುವಃ ।
ಕ್ವಚಿದ್ಬ್ರಹ್ಮಾ ವಿಷ್ಣುಃ ಕ್ವಚಿದಪಿ ಚ ರುದ್ರೋಽಪಿ ಕರಣಂ ।
ಜಗತ್ಸಂಸ್ಥಾನಾಶಪ್ರಕೃತಿಜಗುಣೈಃ ನೈವ ಕರಣಾ ।
ಭಜಂತಶ್ಚಾನ್ಯೋನ್ಯಂ ಜನಕಜನನಾಶ್ಯಂಭುಕೃಪಯಾ ॥೭೬॥

---

ವಿಚಿತ್ರಕರವಾದುದು. ಶಂಕರನ ಕಾರ್ಯಗಳೆಲ್ಲಾ ಆಶ್ಚರ್ಯಕರವಾದುದು. ಶಿವಮಾಯೆ (ಶಿವಶಕ್ತಿ) ಯಂತೂ ಹೇಳಲಸಾಧ್ಯವಾದ ಆಶ್ಚರ್ಯವುಳ್ಳದ್ದು. ಇಂತಹ ಮಾಯಾ ಸಂಬಂಧಿಯೂ, ತ್ರಿಶೂಲಿಯೂ ಆದ ಈಶ್ವರನ ವಿಕಾರವೇ ಈ ಜಗತ್ತಲ್ಲವೇ? ||೭೩-೭೪||

ಪರಶಿವನ ಎಡಭುಜದಿಂದ ಹುಟ್ಟಿದ ಮಹಾವಿಷ್ಣುವೂ, ಬಲಭುಜದಲ್ಲಿ ಜನಿಸಿದ ಬ್ರಹ್ಮನೂ, ನೇತ್ರದಿಂದುದಯಿಸಿದ ಕಾಲರುದ್ರನೂ, ಪರಮೇಶ್ವರನ ಅಂಶ ಗಳಲ್ಲಿ ಅತ್ಯಂತ ಸೂಕ್ಷ್ಮವಾದ ಯಾವುದೋ ಒಂದಂಶದ ಸಹಾಯವನ್ನು ಪಡೆದು, ಈ ನಿಮ್ಮ ಲೋಕಗಳನ್ನೆಲ್ಲಾ, ಸೃಷ್ಟಿ, ಸ್ಥಿತಿ ಲಯಗಳೆಂಬ ಕಾರ್ಯಗಳಿಂದ ನಡೆಸು ತ್ತಿರುವರು. ಈ ತ್ರಿಮೂರ್ತಿಗಳನ್ನು ಆಯಾ ಕಾರ್ಯಗಳಲ್ಲಿ ಸಮರ್ಥರನ್ನಾಗಿ ಮಾಡಿರು ವುದು ಈ ಶಿವಶಕ್ತಿಯ ಏಕಮಾತ್ರಾಂಶವಲ್ಲವೇ? ||೭೫||

ಕೆಲವು ಕಲ್ಪಗಳಲ್ಲಿ ಬ್ರಹ್ಮ, ವಿಷ್ಣು, ರುದ್ರ, ಇವರು ಮೂರು ಜನರೂ, ಒಬ್ಬನಿಂದಲೇ ಸೃಷ್ಟರಾಗುವರು. ಕೆಲವು ಸೃಷ್ಟಿಗಳಲ್ಲಿ ಈ ತ್ರಿಮೂರ್ತಿಗಳೂ ಜಗತ್ತಿನ ಸೃಷ್ಟಿಗೆ ಕಾರಣರಾಗುವರು. ಆದರೆ ಜಗತ್ತಿನ ಸೃಷ್ಟಿ, ಸ್ಥಿತಿ, ಲಯ ಈ ಕಾರ್ಯಗಳನ್ನು ಮಾಡುವ ನೈಸರ್ಗಿಕವಾದ ಗುಣವೊಂದು ಪ್ರತ್ಯೇಕವಿರುವುದು. ಆದರೂ ಅವರು ಆಯಾ ಕಾರ್ಯಗಳಿಗೆ ಸಾಧಕರಾಗಿರುವುದು ಪರಮೇಶ್ವರನ ಅನುಗ್ರಹಬಲದಿಂದಲೇ ಅಲ್ಲವೇ? ||೭೬||

---

1. ಸೃಷ್ಟ್ವಾ (ಪಾ. ರ.)

ಮನೋವಾಚಾಂ ಚಕ್ಷುರ್ವಿಷಯಮಪಿ ನೋ ತಸ್ಯ ಚರಿತಂ ।
ಶಿವಸ್ಯೈತಾ ಲೀಲಾಃ ಪ್ರಥಿತವಿತತಾ ಚಾಗತಗತಾಃ ।
ಸ್ವತಂತ್ರೋಽಯಂ ಶಂಭುರ್ಗುಣಗಣವಿಹೀನೋಽಪಿ ಸಗುಣ ।
ಸ್ವಯಾ ಶಕ್ತ್ಯಾ ಚಿತ್ರಂ ವಿದಧತಿ ಗಿರೀಶೋಽದ್ಯ ಜಗತಿ ॥೭೭॥

ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ಪಂಚಬ್ರಹ್ಮಪ್ರಾಕಾರವರ್ಣನಂ ನಾಮ ಷೋಡಶೋಽಧ್ಯಾಯಃ

---

ಮನಸ್ಸಿಗೂ, ಮಾತಿಗೂ ದೃಷ್ಟಿಗೂ ಶಂಕರನ ಕಾರ್ಯಗಳು ಕಂಡುಬರುತ್ತವೆ. ಆದರೆ ಶಂಕರನ ಭಾವವುಮಾತ್ರ ಮೇಲಿನ ಯಾವುದಕ್ಕೂ ಗೋಚರಿಸಲಾರದು. ಅವನ ಲೀಲೆಗಳೋ ಪ್ರಸಿದ್ಧವಾಗಿವೆ. ಹಿಂದೆ ಎಷ್ಟೋ ಆಗಿವೆ. ಮುಂದೆ ಅನೇಕವಾಗಿ ಆಗುವುವು. ಶಂಭುವು ಸ್ವತಂತ್ರನು. ನಿರ್ಗುಣನಾಗಿದ್ದರೂ ಸ್ವಶಕ್ತಿಯಿಂದ ಸಗುಣನಾಗಿ ಕಂಡುಬರುವನು. ಹೀಗೆ ಪರಮೇಶ್ವರನು ಆತ್ಮಶಕ್ತಿಯಿಂದ ನಾನಾ ರೀತಿಯಾಗಿ ಜಗತ್ತಿನಲ್ಲಿ ವಿಚಿತ್ರವನ್ನು ತೋರಿಸುತ್ತಿರುವನು. ॥೭೭॥

ಇಲ್ಲಿಗೆ ಶಿವರಹಸ್ಯದ ಪ್ರಥಮಾಂಶದಲ್ಲಿತತ್ಪುರುಷಾದಿ ಪಂಚಬ್ರಹ್ಮರ ಪ್ರಾಕಾರಗಳನ್ನು ವರ್ಣಿಸುವ ಹದಿನಾರನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

# ಅಥ ಶ್ರೀಶಿವರಹಸ್ಯೇ

## ಸಪ್ತದಶೋಽಧ್ಯಾಯಃ

### ಕೈಲಾಸಪ್ರಾಸಾದವರ್ಣನಂ

|| ಸ್ಕಂದ ಉವಾಚ ||

**ತದಂತರೇಽಪಿ ಪ್ರಾಕಾರಶ್ಚಂದ್ರಕಾಂತಶಿಲಾಮಯಃ ।**
**ಕಲಧೌತಮಹಾಸಾನುಶಿಖರೋಪರಿ ಸಂಸ್ಥಿತಃ ॥೧॥**

**ಪಂಚಲಕ್ಷಪ್ರಮಾಣೇನ ಚಾಯಾಮೇನೋಚ್ಛ್ರಯೇಣ ಚ ।**
**ಪರಿಣಾಹೇಽಪಿ ವಿಪ್ರೇಂದ್ರ ಪರಿವರ್ತೋಽಜ್ಜ್ವಲಪ್ರಭಃ ॥೨॥**

**ಕನಕಾಮಲಕುಂಭಾಗ್ರೋ ರತ್ನಭ್ರಾಜನ್ಮಣಿಪ್ರಭಃ ।**
**ಸುಧಾಬ್ಧಿಜಲಕಲ್ಲೋಲವಿಲಸತ್ಪಾದಪೀಠಕಃ ॥೩॥**

---

## ಶ್ರೀಶಿವರಹಸ್ಯದಲ್ಲಿ ಹದಿನೇಳನೆಯ ಅಧ್ಯಾಯ

ಹಿಂದೆ ಹೇಳಿದ ಪ್ರಾಕಾರಗಳ ಮಧ್ಯದಲ್ಲಿ ಚಂದ್ರಕಾಂತಶಿಲಾಮಯವಾದ ಒಂದು ಪ್ರಾಕಾರವಿರುವುದು. ಅದು ಅತ್ಯಂತ ಶುಭ್ರವಾಗಿ ಹೊಳೆಯುವ ಕೈಲಾಸ ಪರ್ವತದ ತಪ್ಪಲು ಪ್ರದೇಶದ ಎತ್ತರದಭಾಗದಲ್ಲಿದೆ. ||೧||

ಅದು ಐದು ಲಕ್ಷ ಯೋಜನ ಎತ್ತರವಾಗಿಯೂ, ಅಷ್ಟೇ ಅಗಲವಾಗಿಯೂ, ಇದೆ. ಅಷ್ಟೇ ಸಂಖ್ಯೆಯ ಯೋಜನದಷ್ಟು ವಿಶಾಲವಾಗಿಯೂ, ಅತಿಶಯವಾದ ಕಾಂತಿಯುಳ್ಳದ್ದಾಗಿಯೂ ಇದೆ. ||೨||

ಅದರ ಮೇಲೆ ಶುದ್ಧವಾದ ಸುವರ್ಣದ ಕಲಶಗಳು ವಿರಾಜಿಸುತ್ತಿವೆ. ರತ್ನಗಳ ಕಾಂತಿಯು ಹೊಳೆಯುತ್ತಿದೆ. ಆ ಪ್ರಾಕಾರದ ತಲಭಾಗವು ಕ್ಷೀರಸಮುದ್ರದ ಅಲೆಗಳಿಂದ ಕೂಡಿದ್ದಾಗಿ ಮನೋಹರವಾಗಿ ಕಾಣುತ್ತಿರುವುದು. ||೩||

ಚತುರ್ದಿಕ್ಷು ಮಹಾದ್ವಾರಗೋಪುರೋತ್ತಮಶೇಖರಃ ।
ಸೋಮಧಾಮಾಯುತೋದ್ಭಾಸಿ ಚಾಕಚಕ್ಯಜಿತಾಂತರಃ ॥೪॥

ಜಗಚ್ಚಕ್ರಮಹಾಬಿಂಬಬಿಂಬಿತಾಂತರಸುಂದರಃ ।
ತತ್ಕಾಂತಿಕಾಂತಧಾರಾಭಿರ್ದಿಶೋಽಪಿ ಧವಳೀಕೃತಾಃ ॥೫॥

ಉದ್ಯತ್ಸುಧಾಂಶುಕಿರಣನಿಸ್ಯಂದೋತ್ಸ್ಪೃಷ್ಟನೀರಕಃ ।
ಸುಧಾತರಂಗನೃತ್ಯೋರ್ಧ್ವಹಾಸಫೇನೋಪಮೋಽಮಲಃ ॥೬॥

ಕೈಲಾಸಾಚಲಸರ್ವಸ್ವಸಾರಭೂತೋಽಯಮುತ್ತಮಃ ।
ಧವಲಿಮ್ನಾ ತು ಯೇ ಲೋಕೇ ಪಾದಪಾಸ್ಸಂತಿ ವರ್ಣನೇ ॥೭॥

---

ಆ ಪ್ರಾಕಾರಕ್ಕೆ ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ಮಹಾದ್ವಾರಗಳಿವೆ. ಅವುಗಳ ಮೇಲೆಲ್ಲಾ ಎತ್ತರವಾದ ಶಿಖರಗಳಿವೆ. ಆ ಶಿಖರಗಳು ಹತ್ತುಸಾವಿರ ಚಂದ್ರರಂತೆ ಥಳಥಳಿಸುತ್ತಿವೆ. ॥೪॥

ಅಷ್ಟು ಶುಭ್ರವಾಗಿರುವುದರಿಂದಲೇ ಪ್ರಪಂಚವೆಲ್ಲಾ ಅವುಗಳಲ್ಲಿ ಪ್ರತಿಫಲಿಸಿ ಪ್ರಪಂಚಬಿಂಬವು ಸುಂದರವಾಗಿ ಕಾಣುವಂತಿದೆ. ಅಂತಹ ಶಿಖರಗಳ ಉಜ್ಜ್ವಲ ಕಾಂತಿಯು ಸಮಸ್ತ ದಿಕ್ಕುಗಳಿಗೂ ವ್ಯಾಪಿಸಿ ಅವುಗಳನ್ನೆಲ್ಲಾ ಕಾಂತಿಮಯವನ್ನಾಗಿ ಮಾಡಿದೆ. ॥೫॥

ಚಂದ್ರನ ಕಿರಣಗಳು ಆ ಚಂದ್ರಕಾಂತಶಿಲೆಯ ಪ್ರಾಕಾರದ ಮೇಲೆ ಬಿದ್ದ ಒಡನೆಯೇ, ಅದರಿಂದ ಹೊರಡುವ ನೀರು ಶೀತಲವಾಗಿ ಹಿತವಾಗಿರುತ್ತದೆ. ಅಂತಹ ಪ್ರಾಕಾರವು ಕ್ಷೀರಸಮುದ್ರದ ಶುಭ್ರವಾದ ನೊರೆಗಳಂತೆ ಶುಭ್ರವರ್ಣವುಳ್ಳದ್ದಾಗಿದೆ. ॥೬॥

ಲೋಕದಲ್ಲಿ ಧಾವಳ್ಯದಿಂದ ರಂಜಿಸುವ ಎಷ್ಟು ವೃಕ್ಷವಿಶೇಷಗಳಿವೆಯೋ, ಶುಭ್ರಕಾಂತಿಯ ಉದ್ದೇಶದಿಂದ ಎಷ್ಟು ವಸ್ತುಗಳು ಅತಿಶಯವಾಗಿ ವರ್ಣಿತವಾಗಿಯೋ, ಅವೆಲ್ಲಕ್ಕಿಂತಲೂ ಈ ಪ್ರಾಕಾರವು ಶುಭ್ರತರವಾಗಿದೆ. ಒಟ್ಟಿನಲ್ಲಿ ಈ ಪ್ರಾಕಾರವು ಕೈಲಾಸಪರ್ವತದ ಸಾರವಸ್ತುಗಳ ಸರ್ವಸ್ವವೋ ಎಂಬಂತೆ ಶ್ರೇಷ್ಠವಾದುದಾಗಿದೆ. ॥೭॥

ತೇಷಾಮುಪ್ಯತಿಧಾವಲ್ಯಾನುಪಮುಸ್ಸ ದ್ವಿಜೋತ್ತಮ ।
ತತ್ಪ್ರಾಕಾರಮಹಾಮೌಲೌ ಸ್ಫಟಿಕೋಪಲನಿರ್ಮಿತಾಃ ॥೮॥

ವೃಷಭಾ ನೀಲನಯನಾಃ ಪುಚ್ಛೇ ಶೃಂಗೇ ವಿಭೂಷಿತಾಃ ।
ಕುರುವಿಂದೋಲ್ಲಸಜ್ಜಿಹ್ವಾಃ ಕಕುದಾಭೋಗಭಾಸುರಾಃ ॥೯॥

ಕರ್ಣಾಗ್ರಲಂಬಿತಾತ್ಯುಚ್ಚಸ್ಫುರಚ್ಚಾಮರಪಂಕ್ತಯಃ ।
ಕೇಚಿದಾನಂದಭರಿತಾಃ ಪಶ್ಯಂತ್ಯನ್ಯೋನ್ಯವೀಕ್ಷಣೈಃ ॥೧೦॥

ಕೇಚಿತ್ಸುರಭಿಪಾಶ್ಚಾತ್ಯಭಾಗಭೋಗೈಕಸಂಭ್ರಮಾಃ ।
ನಿವೃತೋದ್ಯದ್ಧೀರಕಾಂತಿದಂತಾವಲಿವಿಭೂಷಿತಾಃ ॥೧೧॥

---

ಆ ಪ್ರಾಕಾರಕ್ಕೆ ಶುಕ್ಲವರ್ಣದಲ್ಲಿ ಸದೃಶವಾದ ಮತ್ತೊಂದು ವಸ್ತುವೇ ಇಲ್ಲವೆನ್ನಬಹುದು. ಆ ಪ್ರಾಕಾರಗಳ ಮೇಲ್ಭಾಗದಲ್ಲಿ ಸ್ಫಟಿಕ ಶಿಲೆಗಳಿಂದ ನಿರ್ಮಿತವಾದ, ||೮||

ನೀಲವರ್ಣದ ಕಣ್ಣುಗಳಿಂದ ವಿರಾಜಿಸುವ ಬಸವನ ವಿಗ್ರಹಗಳಿವೆ. ಅವುಗಳ ಬಾಲ ಮತ್ತು ಕೋಡುಗಳು ವಿಶೇಷವಾದ ಆಭರಣಗಳಿಂದ ಅಲಂಕೃತವಾಗಿವೆ. ನಾಲಿಗೆಗಳು ಕುರುವಿಂದ (ದೊಡ್ಡತುಂಗಮುಸ್ತೇ) ದಂತೆ ಶುಭ್ರವಾಗಿವೆ. ಬೆನ್ನು ಮೇಲಿನ ಹಿಳಲುಗಳು ವಿಶಾಲವಾಗಿ ಸುಂದರವಾಗಿವೆ. ||೯||

ಅವುಗಳ ಕಿವಿಯ ತುದಿಯಲ್ಲಿ ನೇತಾಡುತ್ತಿರುವ ಸುಂದರವಾಗಿರುವ ಚಾಮರಗಳು ರಮಣೀಯವಾಗಿವೆ. ಕೆಲವು ಬಸವಗಳು ಒಂದನ್ನೊಂದನ್ನು ನೋಡುವಂತೆ ನಿಂತು ಆನಂದವನ್ನು ಮುಖದಲ್ಲಿ ಸೂಚಿಸುತ್ತಾ ನಿಂತಿವೆ. ||೧೦||

ಕೆಲವು ವೃಷಭಗಳು ಹಸುವಿನ ಹಿಂಭಾಗವನ್ನು ಹತ್ತಿ ಸಂಭೋಗ ಸುಖವನ್ನು ಹೊಂದುವುದರಲ್ಲಿ ಆಸಕ್ತಿಯುಳ್ಳವುಗಳಾಗಿರುತ್ತವೆ. ಆಗ ತಮ್ಮ ಬಾಯಲ್ಲಿರುವ ಹೀರರತ್ನದಂತೆ ಕಾಂತಿಯುಳ್ಳ, ಹಲ್ಲುಗಳ ಸಾಲನ್ನು ಕಿರಿಯುತ್ತಾ ನಿಂತಿರುವುವು. ಇಂತಹ ನೈಸರ್ಗಿಕ ಕಾರ್ಯಾಸಕ್ತಗಳಾದ ವೃಷಭಗಳು ಸುಂದರವಾಗಿ ಕಾಣುತ್ತಿರುವುವು. ||೧೧||

ಕೇಚಿದಾತಾಮ್ರನೇತ್ರಾಂತಾಸ್ಸುರಘಟ್ಟಮಹೋಪಲಾಃ ।
ಪ್ರವಾಲಮಣಿಕ್ಲ್ಪಪ್ತೇನ ಲಂಬಿನಾ ವೃಷಣೇನ ಚ ॥೧೨॥

ನಂದಂತಿ ಘನಸನ್ನಾಹಧ್ವನಿಭಿರ್ಜಿತದಿಙ್ಮುಖಾಃ ।
ಏವಂ ತತ್ರ ಮಹಾಸೌಧಪ್ರಾಕಾರವರಸಂಸ್ಥಿತಾಃ ॥೧೩॥

ಕಲ್ಪಕಾನಾಂ ವನಂ ತತ್ರ ಛದಪುಷ್ಪಫಲಾವೃತಂ ।
ನಾನಾಪಲಾಶಕಲಿಕಾಕುಸುಮೈಃ ಫುಲ್ಲಶೇಖರಂ ॥೧೪॥

ರತ್ನಾಲವಾಲಕಲಿತಂ ರಾಜದ್ರಾಮಣ್ಯವೇದಿಕಂ ।
ತತ್ರ ತತ್ಸುಮಗಂಧೋದ್ಯದ್ಬಂಧುರಾಮಲಮಾರುತಂ ॥೧೫॥

---

ಕೆಲವು ವೃಷಭಗಳು ತಮ್ಮ ಕಣ್ಣುಗಳನ್ನು ಕೆಂಪಾಗಿ ಮಾಡಿಕೊಂಡು, ದೊಡ್ಡ ದೊಡ್ಡ ಬಂಡೆಗಳನ್ನು ಗುದ್ದುತ್ತಿರುವುವು. ಅವುಗಳ ವೃಷಣಪ್ರದೇಶವು ಹಿಂಭಾಗದಲ್ಲಿ ನೇತಾಡುತ್ತಾ ಪ್ರವಾಳಗಳಂತೆ ಹೊಳೆಯುತ್ತಿರುವುವು. ||೧೨||

ಕೆಲವು ಎತ್ತುಗಳು ಗುಟುರುಹಾಕುವುದರಿಂದ ಸಮಸ್ತ ದಿಕ್ಕುಗಳನ್ನೂ ಹೆದರಿಸುವಂತೆ ಕಾಣುತ್ತಿವೆ. ಹೀಗೆ ನಾನಾ ರೀತಿಯಲ್ಲಿ ಪ್ರಾಕಾರದ ಮೇಲೆ ದೊಡ್ಡ ದೊಡ್ಡ ಬಸವನ ವಿಗ್ರಹಗಳು ವಿರಾಜಿಸುತ್ತಿವೆ. ||೧೩||

ಅವುಗಳ ಪಕ್ಕದಲ್ಲಿ ಕಲ್ಪವೃಕ್ಷಗಳ ಉದ್ಯಾನಗಳೂ, ಅಲ್ಲಿ ವಿಧವಿಧವಾದ ವೃಕ್ಷಗಳು ಮೊಗ್ಗು, ಹೂವು, ಹಣ್ಣು ಇವುಗಳಿಂದ ಕೂಡಿ ಶೋಭಿಸುತ್ತಿವೆ. ಅಲ್ಲಲ್ಲಿ ಮುತ್ತುಗದ ಮರಗಳ ಕೆಂಪಾದ ಹೂವುಗಳಿಂದಲೂ ಮೊಗ್ಗುಗಳಿಂದಲೂ ಆ ಉದ್ಯಾನಗಳ ಶಿರೋಭಾಗವೆಲ್ಲಾ ರಮಣೀಯವಾಗಿ ಕಂಡುಬರುತ್ತಿದೆ. ||೧೪||

ಪ್ರತಿವೃಕ್ಷಗಳಿಗೂ ರತ್ನನಿರ್ಮಿತವಾದ ಪಾತಿಗಳಿವೆ. ಪ್ರಕಾಶಮಾನವಾದ ಮಣಿನಿಬದ್ಧವಾದ ಜಗಲಿಗಳಿವೆ. ಆ ಮರಗಳ ಹೂವಿನಿಂದ ಹೊರಟ ಸುವಾಸನೆಯನ್ನು ಹೊತ್ತು ವಾಯುವು ಸರ್ವತ್ರ ಹರಡಿ ಆ ವನವನ್ನೆಲ್ಲಾ ಸುಗಂಧಮಯವನ್ನಾಗಿ ಮಾಡಿದೆ. ||೧೫||

ಘ್ರಾಣತರ್ಪಣಮತ್ಯಂತಂ ಶೀತಾಸಾರವಿಸಾರಿಣಂ ।
ವಸಂತಪ್ರಮುಖಾನೇಕೈಃ ಋತುಭಿಃ ಪರಿವಾರಿತಂ ॥೧೬॥

ಕಾಮಾಧಿಕಪ್ರದಂ ತತ್ರ ತತ್ಕಲ್ಪಕಕುಲಂ ಮಹತ್ ।
ಮಂದಾರಪಾರಿಜಾತೈಶ್ಚ ಸಂತಾನೈಶ್ಚಂದನೈರ್ವೃತಂ ॥೧೭॥

ನಯನಾನಂದಜನನಂ ತಾಪತ್ರಯನಿವಾರಕಂ ।
ತತ್ಕೈಲಾಸಮಹಾಸಾರಸಾರಭೂತಂ ಮನೋಹರಂ ॥೧೮॥

ಹರಿನ್ಮಣಿನಿಭಂ ಸ್ವಚ್ಛಛತ್ರಛಾಯಾಸಮಪ್ರಭಂ ।
ತತ್ಸಮಪ್ರಭವಾಮೋದಘುಮುಘುಮಿತಮಾರುತಂ ॥೧೯॥

---

ಆ ವನಗಳು ಸರ್ವರ ಘ್ರಾಣೇಂದ್ರಿಯಕ್ಕೂ ತೃಪ್ತಿಯನ್ನುಂಟುಮಾಡುತ್ತಿರುವುವು. ತಂಪಾದ ಜಲಬಿಂದುಗಳನ್ನು ಎರಚುತ್ತಾ ಸರ್ವಮನೋರಂಜಕವಾಗಿರುವುವು. ವಸಂತವೇ ಮೊದಲಾದ ಆರು ಋತುಗಳೂ ಅಲ್ಲಿ ಸರ್ವದಾ ನೆಲಸಿರುವುವು. ॥೧೬॥

ಆ ಉದ್ಯಾನವನವು ಕೇಳಿದ ಇಷ್ಟಾರ್ಥಗಳನ್ನು ಒದಗಿಸತಕ್ಕದ್ದಾಗಿರುವುದು. ಅದರಲ್ಲಿ ಮಂದಾರ, ಪಾರಿಜಾತ, ಕಲ್ಪವೃಕ್ಷ, ಶ್ರೀಗಂಧವೃಕ್ಷಗಳು ಇವೆಲ್ಲವೂ ಹೇರಳವಾಗಿವೆ. ॥೧೭॥

ಅದು ಕಣ್ಣಿಗೆ ಮನೋಹರವಾಗಿರುವುದು ಮಾತ್ರವಲ್ಲದೆ ಮನುಷ್ಯರಿಗೆ ಒದಗುವ ತಾಪತ್ರಯಗಳನ್ನು ಸಹ ನಿವಾರಣೆಮಾಡತಕ್ಕದ್ದಾಗಿರುವುದು. ಕೈಲಾಸಪರ್ವತದಲ್ಲಿರುವ ಸಮಸ್ತ ಸಾರವೂ ಆ ಉದ್ಯಾನವನದಲ್ಲಿ ಸೇರಿರುವುದರಿಂದ ಅದು ಅತ್ಯಂತ ಮನೋಹರವಾಗಿದೆ. ॥೧೮॥

ಇಂದ್ರನೀಲಮಣಿಯಂತೆ ಕಾಂತಿಯುಳ್ಳದ್ದಾಗಿಯೂ, ಛತ್ರಿಯಂತೆ ಸುಂದರವಾಗಿ ಕಾಣುವ ವೃಕ್ಷಚ್ಛಾಯೆಯುಳ್ಳದ್ದಾಗಿಯೂ ಆ ಉದ್ಯಾನವು ರಂಜಿಸುತ್ತಿರುವುದು. ಅಲ್ಲಿರುವ ಪುಷ್ಪಗಳ ಸುವಾಸನೆಯಿಂದ ಮಂದಮಾರುತವು ಸುಗಂಧಮಯವಾಗಿ ಬೀಸುತ್ತಿರುವುದು. ॥೧೯॥

ವಿಷ್ಣುಬ್ರಹ್ಮಾಸುರೇಂದ್ರಾದ್ಯಾ ಮುನಯಶ್ಚ ಗಣಾಸ್ಸುರಾಃ ।
ತೃಪ್ತಾಂತರಾಃ ಪ್ರಮುದಿತಾ ನೇಚ್ಛಂತ್ಯೇವ ಹಿ ನಂದನಂ ॥೨೦॥

ತತ್ಸುಖಾಂಶಶತಾಂಶಾಂಶಶತಕಂ ತತ್ರ ನಾಸ್ತಿ ಹಿ ।
ಇತ್ಯನ್ಯೋನ್ಯಂ ಸಂವದಂತಿ ಕಥಂ ತತ್ಪ್ರಾಪ್ಯತೇ ವನಂ ॥೨೧॥

ಕೇವಲಂ ಶ್ರೀಮಹೇಶಸ್ಯ ಪ್ರಸಾದೇನ ವಿನಾ ದ್ವಿಜ ।
ನಾಸ್ಮಾಕಂ ಪ್ರಸರಸ್ತತ್ರ ಚೇತಿ ವಿಸ್ಮಾಯಿತಾಂತರಾಃ ॥೨೨॥

ತತ್ರೋತ್ಫುಲ್ಲಮಹಾರತ್ನಸೋಪಾನಾವಲಿಭಾಸುರಾಃ ।
ಸ್ವಚ್ಛಾಚ್ಛಸ್ಫಟಿಕಾಕಾರಪಾನೀಯೋತ್ತಮಸಂವೃತಾಃ ॥೨೩॥

---

ವಿಷ್ಣು, ಬ್ರಹ್ಮ, ಇಂದ್ರ, ಇನ್ನೂ ಉಳಿದ ದೇವತೆಗಳು, ದೇವರ್ಷಿಗಳು ಇವರೆಲ್ಲರೂ ಈ ಉದ್ಯಾನದ ಸೊಬಗನ್ನು ನೋಡಿ ತೃಪ್ತಿಯುಳ್ಳವರಾಗಿ ನಂದನ ವನವನ್ನು ಅಷ್ಟಾಗಿ ಬಯಸುವುದೇ ಇಲ್ಲ. ॥೨೦॥

ಕೈಲಾಸಪರ್ವತದ ಉದ್ಯಾನದ ಶತಾಂಶಾಂಶದ ನೂರನೇ ಒಂದುಭಾಗದಷ್ಟು ಸುಖವೂ ಇಂದ್ರನ ನಂದನವನದಲ್ಲಿ ದೊರಕಲಾರದೆಂದು ಪರಸ್ಪರವಾಗಿ ದೇವತೆಗಳು ಮಾತನಾಡಿಕೊಳ್ಳುವರು. ಹೀಗಿರುವಾಗ ಅವರು ಆ ಉದ್ಯಾನವನ್ನು ಬಿಡುವುದು ಹೇಗೆ? ಇಂದ್ರನ ಉದ್ಯಾನವನ್ನು ಹೊಂದುವುದು ಹೇಗೆ? ॥೨೧॥

ಈ ಉದ್ಯಾನಕ್ಕೆ ಬಂದಿರುವ ಅನ್ಯಾದೃಶಸೌಂದರ್ಯವು ಶ್ರೀಮಹೇಶ್ವರನ ಅನುಗ್ರಹದಿಂದಲೇ ಹೊರತು ಮತ್ತೆ ಬೇರೆಯಲ್ಲ. ನಮ್ಮ ಮಹಿಮೆಯು ಇದರಲ್ಲಿ ಏನೂ ನಡೆಯುವಂತಿಲ್ಲವೆಂದು ದೇವತೆಗಳೆಲ್ಲರೂ ಆಶ್ಚರ್ಯಪಡುತ್ತಿರುವರು. ॥೨೨॥

ಆ ವನದಲ್ಲಿ ಅರಳಿದ ಕಮಲಗಳಿಂದ ಕೂಡಿ, ರತ್ನದ ಸೋಪಾನಾವಳಿಗಳಿಂದ ರಂಜಿಸುವ ಸರಸ್ಸುಗಳಿವೆ. ಅದರಲ್ಲಿ ಸ್ವಚ್ಛವಾದ ಸ್ಫಟಿಕದಂತಿರುವ ನಿರ್ಮಲವಾದ ನೀರು ಕಂಗೊಳಿಸುತ್ತಿರುವುದು. ॥೨೩॥

**ಸುವರ್ಣಮೃದುಲಾಲೋಲಮೃಣಾಲೋಚ್ಛ್ರಿತಕುಂಡಲೈಃ ।**
**ರತ್ನಕಲ್ಹಾರಕಂಜೈಶ್ಚ ಕುಮುದೈಶ್ಚೈವ ಶೋಭಿಕಾಃ ॥೨೪॥**

**ಉತ್ಫುಲ್ಲರತ್ನಕಮಲಸಹಸ್ರದಳಸಂವೃತಾಃ ।**
**ಹರಿನ್ಮಣೀಂದ್ರವಿತತಹರಿಚ್ಛದವರೈರ್ಯುತಾಃ ॥೨೫॥**

**ತತ್ಪತ್ರವಿಲಸನ್ನೀಲವೇಲಮುಕ್ತಾಫಲೋಪಮಾಃ ।**
**ತತ್ಪಂಕಜರಜಃಪುಂಜರಂಜಿತಾಮಂದಮಾರುತಾಃ ॥೨೬॥**

**ತದ್ವೃಂದಮಧುರಾಮೋದವಿಸರ್ಪಿತದಿಗಂತರಾಃ ।**
**ನೀರನೀರಜವಲ್ಲ್ಯೋಽಪಿ ವಿತತಾಸ್ತತ್ರ ಶಾಂಕರ ॥೨೭॥**

**ಇಂದ್ರನೀಲಕೃತಾನೇಕಕಲಿಕೋದ್ದಾಮಕೇಸರೈಃ ।**
**ವೇಲ್ಲಿತಾಕೀಲಿತಾಪಾರನೀಲೇಂದೀವರಭಾಸುರಾಃ ॥೨೮॥**

---

ಒಳ್ಳೆಯ ಬಣ್ಣದಿಂದಲೂ ಮಾರ್ದವದಿಂದಲೂ ಬಳುಕುತ್ತಿರುವ ತಾವರೆಯ ದಂಟುಗಳು ಅಲ್ಲಿ ತುಂಬಿವೆ. ಅಲ್ಲದೆ ರತ್ನದಂತೆ ಹೊಳೆಯುವ ಕಲ್ಹಾರಪುಷ್ಪಗಳೂ, ನೈದಿಲೆಗಳೂ, ತಾವರೆಗಳೂ ವಿಶೇಷವಾಗಿ ಪ್ರಕಾಶಿಸುತ್ತಿವೆ. ॥೨೪॥

ತಾವರೆಗಳು ಅರಳಿ ಸಹಸ್ರದಳಗಳಿಂದ ಶೋಭಿಸುತ್ತಿವೆ. ಇಂದ್ರನೀಲಮಣಿಯಂತೆ ಹರಡಿದ ನೀಲೋತ್ಪಲಗಳೂ ಅಲ್ಲಲ್ಲಿ ಕಂಗೊಳಿಸುತ್ತಿವೆ. ॥೨೫॥

ಆ ಕಮಲದ ಎಲೆಗಳಲ್ಲಿ ನೀರಿನ ಹನಿಗಳು ಮುತ್ತಿನಂತೆ ಕಂಗೊಳಿಸುತ್ತಿವೆ. ಕಮಲಗಳ ಪರಾಗಗಳಿಂದ ಪ್ರಕಾಶಮಾನವಾದ ಮಂದಮಾರುತಗಳು ಮನೋಹರವಾಗಿ ಬೀಸುತ್ತಿವೆ. ॥೨೬॥

ಆ ಮಾರುತವು ಸಮಸ್ತ ದಿಕ್ಕುಗಳಿಗೂ ಹರಡಿ ದಿಗಂತವನ್ನೆಲ್ಲಾ ಸುವಾಸಿತವನ್ನಾಗಿ ಮಾಡಿದೆ. ಆ ಕೊಳಗಳಲ್ಲಿ ತಾವರೆಬಳ್ಳಿಗಳು ಸುತ್ತಲೂ ಹರಡಿ ಕೊಳವನ್ನು ರಮ್ಯವಾದದ್ದನ್ನಾಗಿ ಮಾಡಿವೆ. ॥೨೭॥

ಅಲ್ಲದೆ ಇಂದ್ರನೀಲಮಣಿಗಳಂತೆ ವಿರಾಜಿಸುವ ಅನೇಕ ಮೊಗ್ಗುಗಳಿಂದಲೂ, ಕೇಸರಗಳಿಂದಲೂ ಆ ಕೊಳಗಳು ತುಂಬಿ ನೀಲೋತ್ಪಲಗಳಿಂದಾವೃತವಾದ ಬಾವಿಗಳಂತೆ ಕಾಂತಿಯನ್ನುಂಟುಮಾಡುತ್ತಿವೆ. ॥೨೮॥

ವಿಕಚತ್ಕುಮುದಾಸಾರಕೇಸರಚ್ಛದಸಂವೃತಾಃ ।
ಕಾಸಾರಸಾರಸರಲಚಲನಾಚಲಪತ್ರಕಾಃ ॥೨೯॥

ಉದ್ಯತ್ಸುಪುಂಡರೀಕಾಚ್ಛತುಚ್ಛೀಕೃತಸುಧಾವಲಿಃ ।
ಸಂತ್ಯತ್ರನೀರಜದಲಸ್ವಚ್ಛಶಾರದವತ್ ಸ್ಥಿತಃ ॥೩೦॥

ತಸ್ಯಾಂತೇ ರತ್ನವಿಲಸತ್ಪದ್ಮರಾಗಮಣಿದ್ಯುತಿಃ ।
ಪ್ರಾಸಾದಶ್ಶೃಂಗಸಾಹಸ್ರೈಃ ಪರಿತಸ್ಸರಸಸ್ತದಾ ॥೩೧॥

ವಿಚಿತ್ರಾಪಾರಸದ್ರತ್ನಸ್ತಂಭಪಂಕ್ತಿವಿರಾಜಿತಃ ।
ತದ್ವಿದ್ರುಮಲತಾಜಾಲಸ್ತಂಭವಿದ್ರುಮಪುತ್ರಿಕೇಃ ॥೩೨॥

ಗೋಪಾನಸೀಗತಾಪಾರಗವಾಕ್ಷೋಜ್ಜ್ವಲಕುಂಭಕಃ ।
ರಾಜತ್ಸುರತ್ನಕಲಶಪ್ರಭಾಕೀಲಿತದಿಙ್ಮುಖಃ ॥೩೩॥

---

ಅರಳಿದ ನೈದಿಲೆಗಳಿಂದ ಎರಚಲ್ಪಡುವ ಕೇಸರಗಳಿಂದಲೂ, ಹೂವುಗಳ ರೇಕುಗಳಿಂದಲೂ ಆ ಕೊಳಗಳು ತುಂಬಿಹೋಗಿವೆ. ಕೊಳಗಳ ನೀರು ಸ್ವಲ್ಪಮಟ್ಟಿಗೆ ಚಲಿಸುವುದರಿಂದ, ಕಮಲದ ಎಲೆಗಳೂ ಸಹ ಹೆಚ್ಚಾಗಿ ಚಲಿಸದೆ ನಿಶ್ಚಲವಾಗಿ ನಿಂತಿರುವಂತೆ ಕಾಣುತ್ತಿವೆ. ॥೨೯॥

ಅರಳಿದ ಕಮಲಗಳ ಶುಭ್ರಕಾಂತಿಯು ಅಮೃತದ ಶುಭ್ರತೆಯನ್ನು ತಿರಸ್ಕರಿಸುತ್ತಿದೆ. ಒಟ್ಟಿನಲ್ಲಿ ಆ ಸರಸ್ಸುಗಳು ಬಿಳೀ ಕಮಲದ ಎಸಳುಗಳಿಂದ ಕೂಡಿ ಶರತ್ಕಾಲದ ಬೆಳದಿಂಗಳಂತೆ ಶೋಭಿಸುತ್ತಿವೆ. ॥೩೦॥

ಈ ಕೊಳದ ಪಕ್ಕದಲ್ಲಿಯೇ ಮನೋಹರವಾದ ಅರಮನೆಯಿರುವುದು. ಅದು ಪದ್ಮರಾಗಮಣಿಯಂತೆ ಹೊಳೆಯುತ್ತಿರುವುದು. ಆ ಮನೆಗೆ ಅನೇಕ ಶಿಖರಗಳಿವೆ. ಸುತ್ತಲೂ ಸುಂದರವಾದ ಸರಸ್ಸುಗಳಿವೆ. ॥೩೧॥

ಪ್ರಾಸಾದಕ್ಕೆ ರತ್ನಮಯವಾದ ಕಂಬಗಳ ಸಾಲುಗಳಿವೆ. ಆ ಕಂಬಗಳಿಗೆಲ್ಲಾ ಹವಳದ ಬಳ್ಳಿಗಳು ಹಬ್ಬಿಕೊಂಡಿವೆ. ಮಧ್ಯಭಾಗದಲ್ಲಿ ಹವಳದಿಂದಲೇ ನಿರ್ಮಿತವಾದ ಬೊಂಬೆಗಳಿವೆ. ॥೩೨॥

ಮುಂಜೂರಿನ ಮರದಮೇಲೆಯೂ, ಕಿಟಕಿಗಳ ಮೇಲೆಯೂ ಸಾಲು ಸಾಲಾದ ಕಲಶಗಳಿವೆ. ಮನೆಯಮೇಲ್ಭಾಗದಲ್ಲಿ ರತ್ನಮಯವಾಗಿ ಪ್ರಭಾಪೂರಿತವಾಗಿರುವ

ಉದ್ಯದ್ಭಾನುಸಹಸ್ರಾಭಃ ಕಿಂಜಲ್ಕಾಕೃತಿಭಾಸುರಾಃ ।
ಕ್ವಚಿತ್ಸಿಂಹಾಸನಂ ತತ್ರ ನವರತ್ನವಿಚಿತ್ರಿತಂ ॥೩೪॥

ಕ್ವಚಿನ್ಮಂಚಾ ರತ್ನಪಾದಾ ಮೂಲಕೇ ವಿದ್ರುಮಾನ್ವಿತಾಃ ।
ಸ್ಫಟಿಕೋಪಲಸಂಕ್ಲಪ್ತತಲಾದಿವಿತತಾಶ್ಶುಭಾಃ ॥೩೫॥

ಹರಿನ್ಮಣಿತಲಾಶ್ಚಾಪಿ ಕುರುವಿಂದತಲಾಮಲಾಃ ।
ಇಂದ್ರನೀಲಮಣಿಕ್ಲಪ್ತಮಹಾಪೀಠಮನೋಹರಾಃ ॥೩೬॥

ಮುಕ್ತಾವಿತಾನಕಲಿತಾ ಮಣಿಲಂಬಿತಶೃಂಖಲಾಃ ।
ಮಂಚಾ ಮನೋಜ್ಞಾ ರುಚಿರಾಸ್ಸೋಪಧಾನೋಪಶೋಭಿತಾಃ ॥೩೭॥

---

ದೊಡ್ಡ ಕಲಶವೊಂದಿರುವುದು. ಅದರ ಕಾಂತಿಯು ದಿಗಂತವನ್ನೆಲ್ಲಾ ವ್ಯಾಪಿಸಿರುವುದು. ॥೩೩॥

ಆ ಗೃಹವು ಉದಯಕಾಲದ ಸೂರ್ಯನಂತೆ ಕಾಂತಿಯುಳ್ಳದ್ದಾಗಿದೆ. ತಾವರೆಯ ಕೇಸರಗಳಂತೆ ಸರ್ವತ್ರ ವ್ಯಾಪನ ಶಕ್ತಿಯುಳ್ಳದ್ದಾಗಿದೆ. ಇಂತಹ ದಿವ್ಯಹರ್ಮ್ಯದ ಮಧ್ಯಭಾಗದಲ್ಲಿ ನವರತ್ನಮಯವಾದ ದಿವ್ಯಸಿಂಹಾಸನವೊಂದಿರುವುದು. ॥೩೪॥

ಕೆಲವು ಕಡೆಗಳಲ್ಲಿ ದಿವ್ಯವಾದ ಮಂಚಗಳಿವೆ. ಅದರ ಕಾಲುಗಳು ರತ್ನ ನಿರ್ಮಿತವಾಗಿವೆ. ಮಧ್ಯೆ ಹವಳಗಳನ್ನು ಕೆತ್ತಿರುವರು. ಮಂಚದ ಮೇಲೆಲ್ಲಾ ಸ್ಫಟಿಕಶಿಲೆಗಳನ್ನು ಹರಡಿರುವರು. ॥೩೫॥

ಇನ್ನೂ ಕೆಲವು ಆಸನಗಳು ಹಸುರು ಮಣಿಯಿಂದ ಆವೃತವಾಗಿವೆ. ದೊಡ್ಡ ತುಂಗಮುಸ್ತೆಯಂತಿರುವ ರತ್ನನಿರ್ಮಿತವಾಗಿ ವಿಶಾಲವಾದ ಆಸನವುಳ್ಳದ್ದಾಗಿವೆ. ಇಂದ್ರನೀಲಮಣಿನಿರ್ಮಿತವಾದ ಆಸನಗಳು ನೋಡಲು ಅತ್ಯಂತ ಮನೋಹರಗಳಾಗಿವೆ. ॥೩೬॥

ಪ್ರತಿ ಮಂಚಗಳಿಗೂ ಮುತ್ತಿನ ಮೇಲ್ಕಟ್ಟುಗಳೂ ರತ್ನಗಳ ಗೊಂಚಲಿಂದ ಕೂಡಿದ ಸರಪಳಿಗಳು ನಿರ್ಮಿತವಾಗಿವೆ. ಮಂಚಗಳ ಮೇಲೆ ಮನೋಹರವಾದ ದಿಂಬುಗಳೂ ಪ್ರಕಾಶಿಸುತ್ತಿವೆ. ॥೩೭॥

ಪುಷ್ಪರಾಗಕಗೋಮೇದವೈಡೂರ್ಯತಲಕಾಂತಿಭಿಃ ।
ಭಾಂತಿ ತತ್ರ ಮಹಾಪೀಠಾ ವಿದ್ಯುದುದ್ಯತ್ಪ್ರಭಾಯುತಾಃ ॥೩೮॥

ಕ್ವಚಿನ್ನಿಮ್ನಭ್ರಮಾಸ್ತತ್ರ ಪತಂತಿ ಪ್ರಸಭಂ ಗಣಾಃ ।
ಉನ್ನತೇಷು ಪ್ರದೇಶೇಷು ನಿಮ್ನಭ್ರಾಂತಿಕರಾಸ್ಸದಾ ॥೩೯॥

ಸ್ಥಲೇ ಜಲಭ್ರಮಶ್ಚಾಪಿ ಜಲೇ ತತ್ರ ಸ್ಥಲಭ್ರಮಃ ।
ನಾನಾರತ್ನಪತತ್ಪತ್ರಶುಕಶಾರಿಕರಾವಿತಃ ॥೪೦॥

ರತ್ನಪಂಜರಮಧ್ಯಸ್ಥಶುಕಶಾರಿಕಪಂಕ್ತಿಭಿಃ ।
ಕ್ರೀಡಾಮಯೂರೈರ್ವಲಭೀಲಂಬಿಪಿಚ್ಛೈಕಭಾಸುರಃ ॥೪೧॥

ತತ್ರ ಪಕ್ಷಿಗಣಾಸ್ಸರ್ವೇ ಶಿವ ಶಂಕರ ಪಾಹಿ ನಃ ।
ಧೂಪಧೂಮಮಹಾಗಂಧಬಂಧುರಾಮಲಮಾರುತಃ ॥೪೨॥

---

ಉಳಿದ ದೊಡ್ಡ ದೊಡ್ಡ ಪೀಠಗಳು, ಪುಷ್ಪರಾಗ, ಗೋಮೇಧಕ, ವೈಡೂರ್ಯ ಮುಂತಾದ ರತ್ನಗಳಿಂದ ನಿರ್ಮಿತವಾಗಿವೆ. ಅವು ಮಿಂಚಿನ ಹೊಳಪಿನಂತೆ ಹೊಳಪುಳ್ಳವುಗಳಾಗಿವೆ. ||೩೮||

ಆ ದಿವ್ಯಮಂಟಪದಲ್ಲಿ ಗಣದೇವತೆಗಳು ಸಂಚರಿಸುವಾಗ, ಶಿಲ್ಪಕಲಾಚಾತುರ್ಯದಿಂದ ಹಳ್ಳವಾಗಿರುವ ಪ್ರದೇಶಗಳನ್ನು ದಿಣ್ಣೆಗಳೆಂದೂ ದಿಣ್ಣೆಯಾಗಿರುವ ಸ್ಥಳಗಳನ್ನು ಹಳ್ಳವೆಂದೂ ತಿಳಿದು ಬೀಳುತ್ತಿರುವರು. ||೩೯||

ಅಲ್ಲಿ ಭೂಪ್ರದೇಶವು ಜಲಮಯವಾಗಿದ್ದಂತೆಯೂ ನಿಜವಾದ ಜಲಭಾಗವು ಸ್ಥಲದಂತೆಯೂ, ಕಾಣುವುದು. ನಾನಾವಿಧವಾದ ಮತ್ತು ರತ್ನಕೃತವಾದ ಹಕ್ಕಿಗಳ ಮಧ್ಯೆ ಗಿಳಿ, ಶಾರಿಕ ಮುಂತಾದ ಪಕ್ಷಿಗಳೂ ಮೃದುವಾಗಿ ಧ್ವನಿಮಾಡುತ್ತಿರುವುವು. ||೪೦||

ರತ್ನಪಂಜರಗಳಲ್ಲಿ ಗಿಳಿ, ಶಾರಿಕ ಮುಂತಾದ ಹಕ್ಕಿಗಳು ಸಾಲಾಗಿ ಧ್ವನಿಗೈಯ್ಯುತ್ತಿರುವುವು. ಕ್ರೀಡಾಪ್ರಧಾನವಾದ ನವಿಲುಗಳು ತಮ್ಮ ಗರಿಗಳನ್ನು ನೇತಾಡಿಸುತ್ತಾ ಮುಂಜೂರಿನಲ್ಲಿ ಸುಖವಾಗಿ ಕುಳಿತುಕೊಂಡಿರುವುವು. ||೪೧||

ಆ ಹಕ್ಕಿಗಳ ಗುಂಪೆಲ್ಲವೂ ಶಿವನೇ, ಶಂಕರನೇ, ನಮ್ಮನ್ನು ಕಾಪಾಡು ಎಂಬರ್ಥ ಬರುವಂತೆ ಧ್ವನಿಮಾಡುತ್ತಿರುವುವು. ಅಲ್ಲಿ ಬೀಸುವ ವಾಯುವು ಧೂಪದ ಹೊಗೆಯಿಂದ ಕೂಡಿ ಸುವಾಸನೆಯುಳ್ಳದ್ದಾಗಿ ಬೀಸುತ್ತಿರುವುದು. ||೪೨||

ಮಣಿಪ್ರಭಾಭಿಸ್ಸತತಂ ಸೋಮಸೂರ್ಯೌ ತಿರಸ್ಕೃತೌ ।
ಸರಸೀಮಧ್ಯಸಂಕ್ಲೃಪ್ತಸೌಧೋದ್ಯದ್ವರಕುಂಭಕಃ ॥೪೩॥

ಮಣಿಸ್ತಂಭಕೃತಾಸಾರಭಾಭಾಸಿತದಿಗಂತರಃ ।
ಸುವರ್ಣಾಂಬರಸಂಕ್ಲುಪ್ತನಿತತಾಮಲಮೌಕ್ತಿಕೈಃ ॥೪೪॥

ಜಾಲಿಕಾಪಾಲಿಕಾಪಾರವಿತಾನಾವಲಿಭಾಸುರಃ ।
ತನ್ಮಧ್ಯಹೀರಕೋತ್ತುಂಗಸಿಂಹಾಸನವರಾಶ್ರಿತಃ ॥೪೫॥

ತತ್ರ ದೇವ್ಯಾ ಮಹಾದೇವೋ ವಿಹಾರಶಯನಾಸನೈಃ ।
ಸರಃ ಪ್ರಾಂತೋರುಕಲಶಧಾರಾಸಾರೋರ್ಧ್ವಶೀಕರೈಃ ॥೪೬॥

ಯನ್ನೀರತೀರಗಂಧೋದ್ಯದ್ಧಾರಾಸಾರೌಘಶೀಕರೈಃ ।
ಕದಾಚಿತ್ತತ್ರ ಮಧ್ಯಸ್ಥೋ ದೇವ್ಯಾ ವ್ಯಜನಹಸ್ತಯಾ ॥೪೭॥

---

ಅಲ್ಲಿರುವ ರತ್ನಗಳು ತಮ್ಮ ಕಾಂತಿಯಿಂದ ಸೂರ್ಯಚಂದ್ರರನ್ನು ತಿರಸ್ಕರಿಸುತ್ತಿರುವುವು. ಸರೋವರಗಳ ಮಧ್ಯಭಾಗದಲ್ಲಿ ನಿರ್ಮಿತವಾಗಿರುವ ಸೌಧದಲ್ಲಿ ಶ್ರೇಷ್ಠವಾದ ಒಂದು ರತ್ನಕಲಶವಿರುವುದು. ॥೪೩॥

ಸೌಧಕ್ಕೆ ಸಂಬಂಧಿಸಿದ ರತ್ನಸ್ತಂಭಗಳಲ್ಲಿರುವ ರತ್ನಗಳ ಕಾಂತಿಯು ದಿಗಂತವನ್ನೆಲ್ಲಾ ತೇಜೋಮಯವನ್ನಾಗಿ ಮಾಡಿದೆ. ಚಿನ್ನದ ಬಟ್ಟೆಯಲ್ಲಿ ಮಧ್ಯೆ ಮಧ್ಯೇ ಮುತ್ತುಗಳನ್ನು ಕೆತ್ತಿ ಅದನ್ನು ಮೇಲ್ಭಾಗದಲ್ಲೆಲ್ಲಾ ಬಿಗಿದಿರುವರು. ॥೪೪॥

ಅದರ ಕೆಳಭಾಗದಲ್ಲಿ ಬಲೆಯಂತಿರುವ ಮೇಲ್ಕಟ್ಟುಗಳನ್ನು ಕಟ್ಟಿರುವರು. ಅದು ನೋಡಲು ಬಹು ಮನೋಹರವಾಗಿರುವುದು. ಇಂತಹ ಸೌಧದ ಮಧ್ಯಭಾಗದಲ್ಲಿ ಎತ್ತರವಾದ ಸಿಂಹಾಸನವೊಂದು ವಿರಾಜಿಸುತ್ತಿರುವುದು. ॥೪೫॥

ಅಲ್ಲಿ ಮಹಾದೇವನು ಪಾರ್ವತಿಯೊಡನೆ, ವಿಹಾರಾರ್ಥವಾದ ಮಂಚಗಳಲ್ಲಿ ಮಂಡಿಸಿರುವರು. ಸುತ್ತಲೂ ಸರೋವರದ ಪ್ರಾಂತಭಾಗದಿಂದ ಹಾರಿಬರುವ ಕಲಶೋದಕಗಳ ತುಂತುರುಗಳು ಮನಸ್ಸಿಗೆ ಆನಂದವನ್ನುಂಟುಮಾಡುತ್ತಿರುವುವು. ॥೪೬॥

ಹಾಗೆಯೇ ಕೊಳದ ತೀರದಿಂದ ಸುಗಂಧಮಯವಾಗಿ ಧಾರಾಕಾರವಾಗಿ ಬರುವ ನೀರಿನ ತುಂತುರುಗಳು ಪಾರ್ವತೀಪರಮೇಶ್ವರರನ್ನು ಆನಂದಗೊಳಿಸುತ್ತಿವೆ.

ಸೇವಿತಶ್ಶ್ರೀಮಹೇಶಾನಃ ಕ್ವಚಿತ್ಸೀಠಸ್ಥಿತಶ್ಶಿವಃ ।
ತತ್ರ ನಾನಾವಿಧಾಃ ಕ್ರೀಡಾ ದೇವ್ಯಾ ಚಕ್ರೇ ಮಹೇಶ್ವರಃ ॥೪೮॥

ವಿಚಿತ್ರಾಣಾಂ ಚರಿತ್ರಾಣಾಂ ತ್ರಿಣೇತ್ರಪ್ರಿಯಕಾಮ್ಯಯಾ ।
ದೇವ್ಯಾ ಪ್ರಮುದಿತೋ ದೇವಸ್ತತ್ರ ಸೌಧವರೇಷು ಚ ॥೪೯॥

ಕಾಶ್ಚಿತ್ತತ್ರ ವದಾಮ್ಯದ್ಯ ಶೃಣು ಭೂಸುರ ಶಾಂಭವ ।
ವಿಪಿನೇ ಸರಸಸ್ತೀರೇ ಪ್ರಾಸಾದಾಗ್ರೇಷು ಗೋಪುರೇ ॥೫೦॥

ವಿಜಹಾರ ಮಹಾದೇವೋ ಭವಾನ್ಯಾ ಶಂಕರಸ್ತದಾ ।
ಶೈಲಮಾಲೋಕಯದ್ದೇವೋ ದೇವ್ಯಾ ದೇವೀಸಖೀಗಣೈಃ ॥೫೧॥

ಅದರ್ಶಯದ್ವಿಚಿತ್ರಾಣಿ ತಸ್ಮಿನ್ ಕೈಲಾಸಪರ್ವತೇ ॥೫೨॥

---

ಹೀಗಿರಲು ಪಾರ್ವತಿಯು ಒಂದೊಂದು ಸಾರಿ ಬೀಸಣಿಗೆಯನ್ನು ಕೈಯ್ಯಲ್ಲಿ ಹಿಡಿದು ಪರಮೇಶ್ವರನನ್ನು ಸೇವಿಸುವಳು. ॥೪೭॥

ಹಾಗೆ ದೇವಿಯಿಂದ ಸೇವಿಸಲ್ಪಟ್ಟು ಸಿಂಹಾಸನಾಧಿಷ್ಠಿತನಾದ ಶಂಕರನು ಸಂತೋಷದಿಂದ ದೇವಿಯೊಡನೆ ನಾನಾ ವಿಧವಾದ ಕ್ರೀಡಾದಿಗಳನ್ನು ಆಡಲುಪಕ್ರಮಿಸುವನು. ॥೪೮॥

ಆ ಆಟಗಳು ವಿಚಿತ್ರವಾಗಿರುವುವು. ಮತ್ತು ಯೋಗ್ಯರೀತಿಯಿಂದಿರುವುವು. ದೇವಿಯು ಪರಮೇಶ್ವರನಿಗೆ ಸಂತೋಷವನ್ನುಂಟುಮಾಡಲೋಸುಗ ನಾನಾ ವಿಧವಾದ ಕ್ರೀಡೆಗಳನ್ನು ಆ ದಿವ್ಯ ಸೌಧದಲ್ಲಿ ನಡೆಸುವಳು. ॥೪೯॥

ಆ ದಿವ್ಯಕ್ರೀಡೆಗಳಲ್ಲಿ ಕೆಲವನ್ನು ಮಾತ್ರ ಈಗ ವಿವರಿಸುವೆನು. ಆ ಕ್ರೀಡೆಗಳು ಅನೇಕ ಉದ್ಯಾನಗಳಲ್ಲಿಯೂ, ಸರೋವರದ ತೀರಗಳಲ್ಲಿಯೂ, ಪ್ರಾಸಾದಗಳಲ್ಲಿಯೂ, ಗೋಪುರಾಗ್ರಭಾಗದಲ್ಲಿಯೂ, ನಡೆಯುವುವು. ॥೫೦॥

ಮಹಾದೇವನು ಭವಾನಿಯೊಡನೆ ಕೂಡಿದವನಾಗಿ, ಸಖೀಗಣಗಳಿಂದ ಕೂಡಿ ಕ್ರೀಡಾಪರ್ವತವನ್ನು ಸಂತೋಷದಿಂದ ನೋಡುವನು. ॥೫೧॥

ಮತ್ತು ಆ ಕೈಲಾಸಪರ್ವತದಲ್ಲಿರುವ ವಿಚಿತ್ರವಾದ ವಸ್ತುಗಳನ್ನೆಲ್ಲಾ ಕ್ರಮವಾಗಿ ತೋರಿಸಲಾರಂಭಿಸುವನು. ॥೫೨॥

ಸಾಲತಾಲಕೃತಮಾಲತಮಾಲೈರಾಮಲಕ್ಯವಕುಲಾರ್ಜುನಪಾಟಲೈಃ ।
ಪಾನಸೈರ್ಲಿಕುಚಬಾಹ್ಲಿಕನೀಪೈದಾಡಿಮೈಶ್ಚ ಸುರಸಾಲರಸಾಲೈಃ ॥೫೩॥

ಜಂಬೂನಿಂಬಕದಂಬಜೈಃ ಫಲಭರೈಸ್ತಕ್ಕೋಲಹಿಂತಾಲಕೈ ।
ರಂಕೋಲೈಸ್ಸರಲೈರಶೋಕತಿಲಕೈಸ್ತಿಂದೂಕಮಾಲೂರಕೈಃ ।
ಪುನ್ನಾಗೈರ್ನಗನಾಗಸರ್ಜರಸಿಕೈಃ ಚಾಂಪೇಯಮಾಧೂಕಕೈಃ ।
ಪ್ಲಕ್ಷಾಶ್ವತ್ಥಕಪಿತ್ಥತಿಂತ್ರಿಣಿಭವೈರ್ಭೂನಿಂಬಜಾಲೈರ್ಧವೈಃ ॥೫೪॥

ವಟಕುಟಜಕುರಂಟೈಃ ಕರ್ಣಿಕಾರಾಶ್ವಮಾರೈಃ
ಖರಬದರಪಲಾಶೈಲೋರ್ಧ್ರಸಚ್ಛಂದನೈಶ್ಚ ।
ಕುರವಕಶುಕತುಂಡೈಶ್ಶಿಂಶುಪಾಚೇಂಗುದೀಭಿ
ರ್ಲಿಕುಚವಿಕಚಭಂಡೈಃ ಕೇತಕೈಸ್ಸಿಂಧುವಾರೈಃ ॥೫೫॥

---

ಆ ಕೈಲಾಸಪರ್ವತ ಪ್ರದೇಶದಲ್ಲಿ ಸಾಲವೃಕ್ಷಗಳು (ಮದ್ದೀಮರ) ಮಾಲಾಕಾರವಾಗಿರುವ ಹೊಂಗೆಯ ಮರಗಳು, ನೆಲ್ಲಿ, ಪಗಡೇಮರ, ಕೆಂಪುಮದ್ದೀಮರ, ಪಾದರಿ, ಹಲಸು, ನಿಂಬೆ, ಹಿಂಗು, ಕದಂಬ, ದಾಳಿಂಬ, ಸಿಹಿಯಾದ ಮಾವು ಮುಂತಾದ ವೃಕ್ಷಗಳು ಹೇರಳವಾಗಿ ಕಂಡು ಬರುತ್ತಿರುವುವು. ||೫೩||

ನೇರಳೆ, ಬೇವು, ಕದಂಬ, ಫಲಸಹಿತವಾದ ತಕ್ಕೋಲವೆಂಬ ವೃಕ್ಷ, ಕರೀತಾಳೆಯಗಿಡ, ಅಂಕೋಲ, ಸರಲ, ಅಶೋಕ, ತಿಲಕ, ತುಂಬೆ, ಬಿಲ್ವವೃಕ್ಷ, ಪುನ್ನಾಗ, ಬೆಟ್ಟಸಂಪಿಗೆ, ಸರ್ಜವೃಕ್ಷಗಳು, ನಾಗಕೇಸರ, ಹಿಪ್ಪೇಗಿಡ, ಬಸರೀಮರ, ಅಶ್ವತ್ಥ, ಬೇಲದಮರ, ಹುಣಿಸೆ, ನೆಲಬೇವು, ಧನವೃಕ್ಷ, ಮುಂತಾದ ವೃಕ್ಷಗಳು ಅಲ್ಲಿ ಶೋಭಿಸುತ್ತಿರುವುವು. ||೫೪||

ಆಲ, ಕಾಡುಮಲ್ಲಿಗೆ ಗಿಡ, ಕುರಂಟ (ಗೋರಂಟೀ) ಕರ್ಣಿಕಾರ (ಬೆಟ್ಟದಾವರೆ), ಅಶ್ವಮಾರ (ಮದ್ದೀಮರ), ಕಗ್ಗಲಿ, ಎಲಚಿ, ಮುತ್ತುಗ, ಲೋಧ್ರವೆಂಬ ಹವಳದಗಿಡ, ಶ್ರೀಗಂಧವೃಕ್ಷ, ಕುರವಕ, ಗಿಳೀಮೂತಿಯಗಿಡ, ಶಿಂಶುಪಾವೃಕ್ಷ, ಇಂಗುದೀವೃಕ್ಷ, ಗಜಸಿಂಬೆ, ವಿಕಚಭಂಡ (?), ಕೇದಗೀ (ತಾಳೆ), ಸಿಂಧುವಾರ (ಲಕ್ಕೀಗಿಡ). ||೫೫||

ಕೇದಾರಕೋವಿದಾರೈಶ್ಚ ದೇವದಾರುಕಪಿತ್ಥಕೈಃ ।
ತಗರಾಗರುಕೃಷ್ಣಾಭೈಸ್ತುಂಗನೀಪಕಕಮ್ರಕೈಃ ॥೫೬॥

ಮಂದಾರದ್ವಯಪಾರಿಜಾತವಕಜೈರರ್ಕೈಶ್ಚ ಸಪ್ತಚ್ಛದೈಃ
ಪೂಗೀನಾರಲಖರ್ಜೂರೈಶ್ಚ ಕುಟಜೈರ್ನಾರಂಗಜಾತೀದ್ರುಮೈಃ ।
ಪ್ಲಕ್ಷೋದುಂಬರಕಂದಲೈರ್ಮುನಿಭವೈ ರಾಜಾದನೈರ್ಬರ್ಬರೈ
ಶ್ಯಲ್ಮಲ್ಯೈರ್ವರಶಿಗ್ರುಕೈರ್ಮಧುಭವೈಸ್ಸನ್ಮಾತುಲಿಂಗೈರಪಿ ॥೫೭॥

ಭೂತಾವಾಸಹರೀತಕೀತ್ರಿಕಟುಕೈಶ್ಶಮ್ಯುದ್ಭವೈಃ ಕಿಂದರೈಃ
ಪ್ರಾಚೀನಾಮಲಕೈಃ ಕರಂಜಕಕುಭೈರ್ಗಂಧಾತ್ತಜಂಬೂಫಲೈಃ ।
ಬಂಧೂಕೈಶ್ಚಿರಬಿಲ್ವಜೈಶ್ಚ ತರಗೈಃ ಕೃಷ್ಣಾಗರೂತ್ಥೈರ್ದ್ರುಮೈ
ರ್ಮಾಲಿಂಗೈಶ್ಚ ಶಿರೀಷಕೈಃ ಕುಸುಮಿತೈರನ್ಯೈಶ್ಚ ಶಾಖಾಶತೈಃ ॥೫೮॥

---

ಕೇದಾರ (ಬತ್ತದಗದ್ದೆಗಳು), ಕೋವಿದಾರ (ಕೆಂಪುಕಂಚವಾಳ), ದೇವದಾರು, ಬಿಲ್ವ, ತಗರ (ತಗರೇ) ಅಗರು, ಎತ್ತರವಾದ ನೀಪವೃಕ್ಷ, ಕಮ್ರ (ಕದಂಬವೃಕ್ಷ ವಿಶೇಷ) ಇಂತಹ ಫಲಭರಿತವಾದ ವೃಕ್ಷಗಳೂ ಅಲ್ಲಿವೆ. ॥೫೬॥

ಮಂದಾರವೃಕ್ಷಗಳು, ಪಾರಿಜಾತ, ಬಕ (ಬಕಪುಷ್ಪ), ಎಕ್ಕ, ಏಳೆಲೆಬಾಳೆಗಿಡ, ಅಡಕೆಮರ, ತೆಂಗು, ಖರ್ಜೂರ, ಕುಟಜ, ಕಿತ್ತಲೆ, ಜಾಜೀ ಗಿಡಗಳು, ಬಸರಿ, ಅತ್ತಿ; ಕಂದಲೆ (ಋಷಿಗಳ ಆಹಾರ) ರಾಜಾನ್ನ (ಬತ್ತ) ಬರ್ಬರದೇಶದ ವೃಕ್ಷಗಳು, ಬೂರುಗದಮರ, ವರಶಿಗ್ರು (ನುಗ್ಗೀಮರ) ವಸಂತಕಾಲದ ಮಾತುಲಿಂಗವೃಕ್ಷ (ಮಾದವಾಳದಗಿಡ). ॥೫೭॥

ಸಮಸ್ತ ದೇವತಾವಾಸಸ್ಥಾನವಾದ ಅಳಲೇಕಾಯಿಗಿಡ, ತ್ರಿಕಟುಕ (ಕಟುರೋಹಿಣೀ) ಬನ್ನೀಮರ, ಕಿಂದರ (ಬೆಟ್ಟದಗೋಣೀ) ಹಳೇನೆಲ್ಲಿ, ಹೊಂಗೆ, ಕರಂಜ (ಹುಲಿಯುಗುರಿನಗಿಡ) ಕಕುಭ, ವೀಣೆಯಕರಿವೆ, ಸುಗಂಧಮಯವಾದ ನೇರಳೇಗಿಡ, ದಾಸವಾಳ, ಚಿರಬಿಲ್ವ, ತರಗ (ಗರೀ) ಕರೀ ಅಗುರುವೃಕ್ಷ, ಮಾಲಿಂಗ (ಮಾದಳದ) ಬಾಗೇಹೂ, ಇನ್ನೂ ವಿಧವಿಧವಾದ ಪುಷ್ಪಮಯವಾದ ವೃಕ್ಷಗಳು ಅಲ್ಲಿರುವುವು. ॥೫೮॥

ಮಲ್ಲೀಮಾಲತಿಜಾತಿಕಾಸುರಭಿತೈಸ್ಸಾಯಂತನೋನ್ನಿದ್ರಿತೈ
ಶ್ಚಂದ್ರಾಪಾರವಿಕಾಸಿತೈರತಿಸಿತೈಸ್ಸಚ್ಚಂದ್ರಿಕಾವಲ್ಲಿಭಿಃ ।
ವಲ್ಲೀನಾಂ ನಿವಹೈಃ ಕದಂಬಜರಜಸ್ಸಂದೋಹಗಂಧಾನಿಲೈ
ರುತ್ಫುಲ್ಲೈಸ್ತಿಲಕೈಸ್ತಮಾಲಜಸುಮೈಃ ಫುಲ್ಲೈರ್ಲಸತ್ಕೇಸರೈಃ ॥೫೯॥

ಕುಂದೈರಿಂದುಕರಪ್ರಸಾರಿತಮುಖೈರಾಲೋಲಸಪ್ತಚ್ಛದೈಃ
ಕೌಸುಂಭೈರರುಣಪ್ರಭಾಸುಮಧುರೈಃ ಪ್ರೋದ್ಭೂತಸತ್ಕೇಸರೈಃ ।
ದ್ರಾಕ್ಷಾಗುಚ್ಛಸುವಲ್ಲಿಕಾಸಿತಸಿತಾಃ ಪುಂಡ್ರೇಕ್ಷುಸಾರಾಕರಾಃ
ಪೂಗದ್ರೂಕಬಲೀಕೃತಾಂಗಮಧುರಾಸ್ಸನ್ನಾಗವಲ್ಲೀಲತಾಃ ॥೬೦॥

ಮಂದಾರಸುಂದರತರುಪ್ರಕರೈಃ ಪ್ರಫುಲ್ಲೈ
ರುತ್ಫುಲ್ಲದಾಡಿಮಸುಮೈರ್ಬಕಕರ್ಣಿಕಾರೈಃ ।
ಪೀತಾಯಮಾನಸುಷಮಾಯುತಚಂಪಕೈಸ್ತೈ
ರುತ್ಫುಲ್ಲಪಾಟಲಕದಂಬಜರಾಜವೃಕ್ಷೈಃ ॥೬೧॥

---

ಮಲ್ಲಿಗೆ, ಮಾಲತೀ, ಜಾಜೀ, ಮುಂತಾದ ಹೂವುಗಳು ಸಾಯಂಕಾಲದಲ್ಲಿ ಅರಳಿ ಘಮಘಮಿಸುತ್ತಿರುವುವು. ಚಂದ್ರಿಕಾಬಳ್ಳಿಗಳು ಗುಂಪುಗುಂಪಾಗಿ ಬೆಳೆದಿರುವುವು. ಕದಂಬವೃಕ್ಷಗಳ ಹೂವುಗಳು ಮಕರಂದದಿಂದ ಕೂಡಿ ಸುವಾಸನಾವಿಶಿಷ್ಟವಾಗಿ ರಂಜಿಸುತ್ತಿರುವುವು. ಅರಳಿದ ತಿಲಕಪುಷ್ಪಗಳೂ, ಹೊಂಗೆಯ ಹೂವುಗಳೂ ವಿಕಸಿತವಾದ ಕೇಸರಪುಷ್ಪಗಳೂ, ಬಹಳವಾಗಿ ವಿರಾಜಿಸುತ್ತಿರುವುವು. ॥೫೯॥

ಚಂದ್ರನಿಗೆ ಅಭಿಮುಖವಾಗಿದ್ದು ಅರಳಿರುವ ಕೋಲುಮಲ್ಲಿಗೆಗಳೂ, ಏಳೆಲೆ ಬಾಳೆಗಿಡದ ಎಲೆಗಳು ಗಾಳಿಯಿಂದ ಅಲ್ಲಾಡುವುದೂ ನೋಡುವುದಕ್ಕೆ ಬಹು ರಮ್ಯವಾಗಿರುವುವು. ಕೆಂಪಾದ ಕಾಂತಿಯಿಂದ ಕೂಡಿ ಅರಳಿದ ಕೇಸರಗಳಿಂದ ಶೋಭಿಸುವ, ಕಾಡುಹೂಗಳು ರಮ್ಯವಾಗಿರುವುವು. ದ್ರಾಕ್ಷಾಬಳ್ಳಿಗಳ ಗೊಂಚಲುಗಳಿಂದ ಆ ವನವೆಲ್ಲಾ ಅತ್ಯಂತ ಶುಭ್ರವಾಗಿ ತೋರಿಬರುತ್ತಿರುವುದು. ಕಬ್ಬಿನ ಗದ್ದೆಗಳೂ, ಅಡಕೆ ಮರಗಳ ಸುತ್ತಲೂ ಹಬ್ಬಿ ಸಿಹಿಯಾಗಿರುವ ವಿಳ್ಳೆಯದೆಲೆಯ ಬಳ್ಳಿಗಳೂ, ಅತಿಶಯವಾಗಿ ಪ್ರಕಾಶಿಸುತ್ತಿರುವುವು. ॥೬೦॥

ಸುಂದರವಾಗಿ ಅರಳಿರುವ ಹೂಗಳುಳ್ಳ ಮಂದಾರವೃಕ್ಷಗಳ ಸಮೂಹವೂ, ವಿಕಸಿತವಾದ ದಾಳಿಂಬದ ಹೂವುಗಳೂ ಬಕ, ಕರ್ಣಿಕಾರ ಮುಂತಾದ ಪುಷ್ಪಗಳೂ,

ಸತ್ಕಿಂಶುಕೈಶ್ಚುಕಮುಖೈರ್ವರಶಲ್ಮಲೀಭಿಃ
ಪುನ್ನಾಗನಾಗನವನೀಪಸುಮೈಃ ಪ್ರಫುಲ್ಲೈಃ ।
ಭಾರಾತಿಭಾರಶಿಖರೈಃ ಕಲಧೌತಶೈಲಃ
ಪಶ್ಯಾಂಬಿಕೇಽದ್ಯ ಸುಮನೋಹರವೃಕ್ಷಸಂಘೈಃ ॥೬೨॥

ವಲ್ಲೀವಿಕಾಸಿತತನುಃ ಪ್ರಸಭಂ ಭವಾನಿ ।
ಪ್ರೋದ್ಯಸ್ಸುಧಾಂಶುಚಯಕೋಟಿನಿಭೋ ವಿಭಾತಿ ॥೬೩॥

ಉತ್ಫುಲ್ಲಾಮಲಪುಂಡರೀಕಕುಮುದೈರ್ನೀಲೋತ್ಪಲೈಸ್ಸುಂದರೈ
ರಾರಕ್ತಾಂಬುಜಕಂಜನೀಭಿರಭಿತಸ್ಸದ್ರತ್ನಸೋಪಾನಕೈಃ ।
ತತ್ಪ್ರಾಂತಾಮಲಬಿಲ್ವಮೂಲಜಮಹಾಲಿಂಗಾಕೃತಿಶ್ಶಂಕರ
ಸ್ತುಷ್ಯತ್ಯೇವ ಸರಸ್ಸು ರುದ್ರಗಣಸೈರ್ದೇವ್ಯಾ ಗಿರೀಂದ್ರೇಽಧಿಕಂ ॥೬೪॥

---

ಅತಿಶಯವಾದ ಸೌಂದರ್ಯದಿಂದ ಕೂಡಿರುವ ಹೊಂಬಣ್ಣದ ಸಂಪಿಗೆ ಹೂವುಗಳೂ, ಪ್ರಫುಲ್ಲವಾದ ಪಾದರೀ, ಕದಂಬ, ರಾಜವೃಕ್ಷ, ಮುಂತಾದ ಸುಂದರವಾದ ಮರಗಳೂ ಅಲ್ಲಿ ತೋರಿಬರುತ್ತಿರುವುವು. ॥೬೧॥

ಗಿಣಿಯ ಮುಖದಂತಿರುವ ಮುತ್ತುಗದ ಹೂಗಳು, ಬೂರುಗದ ಮರಗಳ ಪುಷ್ಪಗಳೂ, ಹಾಗೆಯೇ ನಾಗಸಂಪಿಗೆ, ಕದಂಬಕುಸುಮ, ಇನ್ನೂ ವಿಧವಿಧವಾದ ಪುಷ್ಪಗಳಿಂದ ಕೂಡಿದ ಮರಗಳು ಇವುಗಳಿಂದ ಬಹು ಭಾರವಾಗಿ ತೋರಿಬರುವ ಶಿಖರಗಳುಳ್ಳ ಈ ಕೈಲಾಸಪರ್ವತವು ಎಷ್ಟು ಶುಭ್ರವಾಗಿ ಕಾಣುತ್ತಿದೆ ನೋಡು. ಎಂದು ಪರಮೇಶ್ವರನು ಪಾರ್ವತಿಗೆ ಕೈಲಾಸಪರ್ವತದ ಸೊಬಗನ್ನು ವಿವರಿಸುವನು. ॥೬೨॥

ಮತ್ತು "ಎಲೌ ಭವಾನಿಯೇ, ನಾನಾವಿಧವಾದ ಬಳ್ಳಿಗಳಿಂದ ಕೂಡಿರುವ ಕೈಲಾಸಪರ್ವತವು ಕೋಟಿಚಂದ್ರರ ಕಾಂತಿಗೆ ಸಮನಾಗಿ ಹೊಳೆಯುತ್ತಿದೆ ನೋಡು" ಎಂದು ಆಗಾಗ ಹೇಳುವನು. ॥೬೩॥

ಅಲ್ಲದೆ ಆ ಪರ್ವತದಲ್ಲಿ ಪರಿಶುದ್ಧವಾದ ಕಮಲಗಳೂ, ನೈದಿಲೆಗಳೂ ನೀಲೋತ್ಪಲಗಳೂ, ಇವುಗಳಿಂದ ಕೂಡಿದ ಸರೋವರಗಳು ಅತಿಶಯವಾಗಿ ಕಾಣುತ್ತಿರುವುವು. ಇಂತಹ ಸರಸ್ಸುಗಳಲ್ಲಿ, ರಕ್ತಕಮಲಗಳು ಅಲ್ಲಲ್ಲಿ ವಿಕಸಿತವಾಗಿ ರಮ್ಯವಾಗಿ ಕಾಣುತ್ತಿರುವುವು. ಸುತ್ತಲೂ ರತ್ನಮಯವಾದ ಸೋಪಾನಗಳು

ತದ್ಧ್ಯಾನಧಾರಾಮೃತಪಾನಪೀನಾ
ಸ್ಸ್ವಾತ್ಮೈಕತಾನಾ ಇವ ಚಕ್ರವಾಕಾಃ ।
ಸರಸ್ಸು ಕಲ್ಲೋಲಚಲಾಕ್ತಪಕ್ಷಾ
ಹಂಸಾ ಬಕಾಸ್ಸಾರಸಪಂಕ್ತಯಶ್ಚ ॥೬೫॥

ನಾರ್ದ್ರೀಕೃತಾಂಗಾಃ ಖಲು ಸಂಚರಂತಿ
ಭಾವಾ ಭವಾಬ್ಧಾವಿವ ಮೇ ಪ್ರಭಾವಾತ್ ॥೬೬॥

ಕಪಿವರಕುಲಮಾದ್ಯಚ್ಚಾಲನಾಲೋಕನಾದ್ಯೈಃ
ಫಲಪತನಜವರ್ಷೈಃ ಪುಷ್ಪರೇಣುಪ್ರಕೀರ್ಣೈಃ ।
ಶಿಖರಿಶಿಖರಸಾರಾ ಭೂಮಯಶ್ಯೋಭಂತೇ
ಕರಿಕಟಮದಧಾರಾಪ್ರಸ್ರವೈಃ ಪಂಕಿಲಾಶ್ಚ ॥೬೭॥

---

ವಿರಾಜಿಸುವುವು. ಇಂತಹ ಸರೋವರಗಳ ಪಕ್ಕದಲ್ಲಿ ಮಹಾಲಿಂಗಾಕೃತಿಯಾದ ಪರಶಿವನು ಬಿಲ್ವವೃಕ್ಷಗಳ ಬುಡಗಳಲ್ಲಿ ಕುಳಿತು ದೇವಿಯೊಡನೆಯೂ ಪ್ರಮಥಗಣಗಳೊಡನೆಯೂ ಆ ಪರ್ವತದಲ್ಲಿ ನಿತ್ಯಾನಂದರೂಪಿಯಾಗಿರುವನು. ॥೬೪॥

ಅಲ್ಲಿ ಚಕ್ರವಾಕ ಪಕ್ಷಿಗಳು ಪಾರ್ವತೀಪರಮೇಶ್ವರರ ಧ್ಯಾನವೆಂಬ ಅಮೃತಪಾನದಿಂದ ಕೊಬ್ಬಿದವುಗಳಾಗಿ ತಮ್ಮ ಆತ್ಮವನ್ನು ಭಗವಂತನಲ್ಲಿ ಏಕೀಕರಿಸಿವೆಯೋ ಎಂಬಂತೆ ತೋರಿಬರುತ್ತಿವೆ. ಕೊಳಗಳಲ್ಲಿ ಕಂಡುಬರುವ ಅಲೆಗಳ ಹನಿಗಳಿಂದ ನೆನೆದ ರೆಕ್ಕೆಗಳುಳ್ಳ ಹಂಸಗಳೂ, ಬಕಗಳೂ, ಸಾರಸ ಪಕ್ಷಿಗಳೂ ಅಲ್ಲಿ ಮನೋಹರವಾಗಿ ನಲಿದಾಡುತ್ತಿರುವುವು. ॥೬೫॥

ನನ್ನ ಅನುಗ್ರಹದಿಂದ ಜ್ಞಾನಿಗಳಾದ ಮಹೇಶ್ವರಭಕ್ತರು ಸಂಸಾರಸಮುದ್ರದಲ್ಲಿ ಸಿಕ್ಕಿದ್ದರೂ, ಹೇಗೆ ಸಂಸಾರ ಸಂಬಂಧವಿಲ್ಲದೆ ಇರುವರೋ, ಹಾಗೆಯೇ ಈ ಪಕ್ಷಿಗಳು ನೀರಿನಲ್ಲಿ ಸಂಚರಿಸುತ್ತಿದ್ದರೂ, ತಮ್ಮ ಅವಯವಗಳನ್ನು ನೆನೆಸಿಕೊಳ್ಳದೆ ಓಡಾಡುತ್ತಿರುವುವು. ॥೬೬॥

ಆ ಪರ್ವತದಲ್ಲಿ ಕಪಿಗಳ ಓಡಾಟದಿಂದ ಅಲುಗಿದ ಮರಗಳಿಂದ ಹಣ್ಣುಗಳು ಉದುರಿ ಕೆಳಗೆ ಬೀಳುವುವು. ಆ ಹಣ್ಣುಗಳು ಮಧುರವಾಗಿಯೂ, ಪುಷ್ಪಗಳ ಮಕರಂದದಿಂದ ಸುವಾಸಿತಗಳಾಗಿಯೂ ಇರುವುವು. ಹಾಗೆಯೇ ಆ ಪರ್ವತದ ಶಿಖರ

ಶುಕಬಕಪಿಕಕಾಕಕೋಕಧೂಕ್ಕೈ ।
ರ್ನಿಭೃತವಿನಾದಿತಚಕ್ರವಾಕಪಾಕ್ಯೈಃ ।
ಗಹನವಿಪಿನಶಾಖಿಮುಸ್ತಸಂಸ್ಥಾ ।
ಮಧುರಾರಾವವಿನಾದಿಚಕ್ರವಾಕ್ಯೈಃ ॥೧೮॥

ಗಿರಿವರಶಿಖರಾಗ್ರೇ ನೃತ್ತಸಾಟೋಪಬರ್ಹಾ ।
ಹರಿಕುಲಕೃತಘೋಷೈರ್ಬೃಹ್ಮಿತೈರ್ವಾರಣಾನಾಂ ।
ಗಿರಿಶಿರಸಿ ನಿನಾದೈಸ್ಸಾರಸಾನಾಂ ಶುಕಾನಾಂ ।
ಪಿಕರವಕಲಕಂಠೈರ್ನಾದಿತಸ್ತದ್ಗೃಹಾಂತಃ ॥೧೯॥

ಫಲಕುಲಸುಮಭಾರೈರ್ದೀರ್ಘಿಕಾ ನಮ್ರಶಾಖಾ ।
ವ್ರಜದಲಿಕುಲಮಾಲಾ ನೀಲನೀಲಾಬ್ಜತುಲ್ಯಾಃ ।
ಮಧುರರಸಸುಪೇಶೀಲಂಬಹಸ್ತಾಗ್ರಶಾಖಾ ।
ಹರಗಿರಿವರಭಾಗಾ ಭಾಂತಿ ಸೌವರ್ಣವೃಕ್ಷಾಃ ॥೨೦॥

---

ಭಾಗವೆಲ್ಲಾ ಮದ್ದಾನೆಗಳ ಕಪೋಲ ಪ್ರದೇಶಗಳಿಂದ ಸೋರುತ್ತಿರುವ ಮದೋದಕದಿಂದ ಕೆಸರುಳ್ಳದ್ದಾಗಿ ಶೋಭಿಸುತ್ತಿರುವುದು. ||೧೭||

ಗಿಳಿ, ಬಕ, ಕೋಗಿಲೆ, ಕಾಗೆ, ಚಕ್ರವಾಕ ಈ ಪಕ್ಷಿಗಳ ಧ್ವನಿಯು ಚಕ್ರವಾಕ ಪಕ್ಷಿಗಳ ಧ್ವನಿಯೊಂದಿಗೆ ಕೂಡಿ ಏಕಶ್ರುತಿಯುಳ್ಳವುಗಳಂತಾಗಿವೆ. ಅವುಗಳ ಧ್ವನಿಗೆ ಮೆಚ್ಚಿ ತಲೆದೂಗುವುವೋ ಎಂಬಂತೆ ಅರಣ್ಯ ನಿವಾಸಿಗಳಾದ ವೃಕ್ಷಗಳ ಮೇಲೆ ಚಕ್ರವಾಕಗಳು ಧ್ವನಿಗೈಯ್ಯುತ್ತಿರುವುವು. ||೧೮||

ಕೈಲಾಸಪರ್ವತದ ಅಗ್ರಭಾಗದಲ್ಲಿ, ಮದದಿಂದ ನರ್ತಿಸುವ ನವಿಲುಗಳ ಕೇಕಾಧ್ವನಿಯೂ, ಸಿಂಹಗಳಿಂದ ಕೇಳಿಬರುವ ಘೋಷಣವೂ, ಆನೆಗಳ ಗರ್ಜನೆಯೂ, ಸಾರಸಪಕ್ಷಿಗಳ ಇಂಚರವೂ, ಗಿಳಿಗಳ ಅವ್ಯಕ್ತ ಮಧುರಧ್ವನಿಯೂ, ಇವೆಲ್ಲವೂ ಒಟ್ಟಾಗಿ ಸೇರಿ ಮಹೇಶ್ವರಾಲಯದಲ್ಲಿ ಮನೋಹರವಾಗಿ ಪ್ರತಿಫಲಿಸುತ್ತಿರುವುವು. ||೧೯||

ಕೊಳಗಳ ಪಕ್ಕದಲ್ಲಿರುವ ಮರಗಳು ಫಲಪುಷ್ಪಗಳ ಭಾರದಿಂದ ಕೊಳದ ನೀರಿನ ಮೇಲಕ್ಕೆ ಬಗ್ಗಿರುವುವು. ಆ ಹೂವು ಹಣ್ಣುಗಳಮೇಲೆ ಹಾರಾಡುವ ನೀಲ

**ಮಹಿಷಚಮರಕುಂಜದಂತಶೃಂಗೈಃ ।**
**ಖರಖುರಘಟ್ಟನಶೈಲಸಾನುನಿಮ್ನಃ ।**
**ಸುಮನಜಗತವಾಯುಬಂಧುರಾನುಮೋದ ।**
**ದ್ರುಮರಜಸಂಕೃತಿದ್ರೋಣಿಲಂಬಿಕ್ಷ್ಮಾದ್ರಃ ॥೭೧॥**

**ಕಲಧೌತನಗಪ್ರಶಸ್ತಮುಸ್ತಾ ।**
**ಪುಲಕಾಮ್ರೇಡಿತಕೋಲಜಾಲಮೇತತ್ ।**
**ಸಿತದಂಷ್ಟ್ರೋತ್ಥಿತಘೋಣಘುರ್ಘುರೋರುರಾವಂ ।**
**ಪಶ್ಯ ಮುದಾ ಗಿರೀಂದ್ರಜಾತೇ ॥೭೨॥**

---

ಭ್ರಮರಗಳು ನೋಡುವವರಿಗೆ ನೀಲೋತ್ಪಲಗಳ ಭ್ರಾಂತಿಯನ್ನುಂಟುಮಾಡುವುವು. ಇತರ ಕಡೆಗಳಲ್ಲಿ ಫಲಪುಷ್ಪಗಳ ಬಣ್ಣದಿಂದ ವಿರಾಜಿಸುವ ಮರಗಳು ತಮ್ಮ ಕೊಂಬೆಗಳೆಂಬ ಕೈಗಳಿಂದ ಬರುವ ಅತಿಥಿಗಳಿಗೆ ಮಧುರವೂ, ಮನೋಹರವೂ ಆದ ಫಲಗಳನ್ನು ನೀಡುತ್ತಿವೆಯೋ ಎಂಬಂತೆ ತೋರಿಬರುತ್ತಿವೆ. ॥೭೦॥

ಆ ಪರ್ವತ ಭಾಗದಲ್ಲಿ ಕಾಡೆಮ್ಮೆಗಳು, ಚಮರೀಮೃಗಗಳು, ಬಲಿಷ್ಠವಾದ ಆನೆಗಳು, ಇವುಗಳ ಕಾಲಿನ ತುಳಿತದಿಂದ, ಕೊಂಬುಗಳ ತಿವಿತದಿಂದ, ಹಲ್ಲುಗಳ ಬಗೆತದಿಂದ ಭೂಮಿಯು ಅಲ್ಲಲ್ಲಿ ಹಳ್ಳವಾಗಿರುವುದು. ಇಂತಹ ಹಳ್ಳಗಳಲ್ಲಿ, ಸುವಾಸನಾವೃತವಾದ ಗಾಳಿಯಿಂದ ತರಲ್ಪಟ್ಟ ಮಕರಂದಗಳೂ, ಅವುಗಳಿಂದ ಉತ್ಪನ್ನವಾದ ಜೇನುತುಪ್ಪವೂ ಕಾಲುವೆಯಂತೆ ಹರಿದು ಬಂದು ಅಲ್ಲಿ ತುಂಬುತ್ತಿವೆ. ॥೭೧॥

ದೇವಿಯೇ, ಅತ್ಯಂತ ಶುಭ್ರವಾಗಿರುವ ಈ ಕೈಲಾಸಪರ್ವತದಲ್ಲಿ ಪ್ರಶಸ್ತವಾಗಿ ಬೆಳೆದಿರುವ ಮುಸ್ತೆಯನ್ನು ತಿಂದು ರೋಮಾಂಚದಿಂದ ದ್ವಿಗುಣಿತವಾದ ಆಕಾರವನ್ನು ತಾಳಿ ಓಡಾಡುತ್ತಿರುವ ಹಂದಿಯ ಗುಂಪುಗಳನ್ನು ನೋಡು. ಅವುಗಳಿಗೆ ಎಷ್ಟು ಬಿಳುಪಾದ ಕೋರೆಹಲ್ಲುಗಳಿವೆ? ಅವುಗಳಿಂದ ಕೂಡಿರುವ ನಾಸಾಭಾಗದಿಂದ ಘುರ್ಘುರಧ್ವನಿಮಾಡುತ್ತಾ ಓಡಾಡುತ್ತಿರುವ ಈ ಪ್ರಾಣಿಗಳನ್ನು ನೋಡು" ಎಂದು ಪರಮೇಶ್ವರನು ದೇವಿಗೆ ತೋರಿಸುವನು. ॥೭೨॥

ಹರಿಖರನಖರೈರ್ವಿದಾರಿತೋದ್ಯತ್ಕರಿ ।
ಕುಂಭೋದ್ಯತರಕ್ತಯುಕ್ತಮುಕ್ತಾ ।
ಮಣಿಜಾಲಾವೃತಭೂಮಿಭಾಗಮೇತತ್ ।
ದ್ವಿಪಕುಲಮಿದಮುತ್ಯುದಾರಘೋಷಂ ।
ಹರಿಣೋ ಧಾವತಿ ಸಿಂಹನಾದಭೀತಃ ॥೭೩॥

ವಲ್ಮೀಕೋರ್ಧ್ವಫಣಂ ಫಣೀಶ್ವರಕುಲಂ ವಾತೋತ್ಥದಿಕ್ಚಕ್ರಕಂ ।
ಚಾರ್ತತ್ರಸ್ತವಿಲೋಚನಂ ಹರಿರವೈರ್ಭೀತ್ಯಾ ಪ್ರಸೂತಂ ಶಿಶುಂ ।
ತ್ಯಕ್ತ್ವಾ ಧಾವತಿ ಪಶ್ಯ ಪಶ್ಯ ಗಿರಿಜೇ ।
ಪ್ರೋಡ್ಡೀನಮೇಣೀಕುಲಂ ॥೭೪॥

ಕೈಲಾಸಾಚಲರತ್ನಸೌಧಗಮಹಾಸಿಂಹಾಸನಾಧ್ಯಾಸಿತೋ ।
ದೇವ್ಯುತ್ಫುಲ್ಲಮುಖಾರವಿಂದವಿಗಲನ್ಮಾಧ್ವೀಕಸಾರಂ ಮಧು ।

---

"ಅಲ್ಲದೆ ಈ ಪರ್ವತದಲ್ಲಿ ಓಡಾಡುವ ಭಯಂಕರವಾದ ಸಿಂಹಗಳು ತಮ್ಮ ಕ್ರೂರವಾದ ನಖಾಯುಧಗಳಿಂದ ಮದ್ದಾನೆಗಳ ಕುಂಭಸ್ಥಳವನ್ನು ಭೇದಿಸುತ್ತಿವೆ. ಆ ಸಮಯದಲ್ಲಿ ಮೇಲಕ್ಕೆ ಹಾರುವ, ರಕ್ತ ಬಿಂದುಗಳಿಂದ ಕೂಡಿರುವ, ಮುತ್ತುಗಳು ಈ ಪ್ರದೇಶದಲ್ಲೆಲ್ಲಾ ಬಹಳವಾಗಿ ಬಿದ್ದಿರುವುವು. ಇದನ್ನು ನೋಡಿ ಉಳಿದ ಆನೆಗಳ ಗುಂಪು ಕೂಗುತ್ತಾ ಚದರಿ ಓಡುತ್ತಿರುವುದು. ಇತ್ತಲಾಗಿ ಸಿಂಹನಾದಕ್ಕೆ ಹೆದರಿ ಜಿಂಕೆಗಳ ಗುಂಪಂತೂ ವೇಗವಾಗಿ ಓಡುತ್ತಿರುವುದನ್ನು ನೋಡು" ಎಂದು ಶಂಕರನು ದೇವಿಗೆ ತೋರಿಸುತ್ತಿರುವನು ॥೭೩॥

ಹುತ್ತದಮೇಲೆ ತಮ್ಮ ಹೆಡೆಗಳನ್ನಿಟ್ಟು ದಿಕ್ಕುವಿದಿಕ್ಕುಗಳಿಂದ ಬೀಸುವ ವಾಯುವನ್ನು ಸೇವಿಸುತ್ತಾ ಇರುವ ಸರ್ಪಕುಲವನ್ನು ನೋಡು. ಇತ್ತಕಡೆ ಸಿಂಹದ ಭಯಂಕರ ಧ್ವನಿಗೆ ಹೆದರಿ, ಚಂಚಲವಾದ ಕಣ್ಣುಗಳುಳ್ಳವಾಗಿ, ಆಗ ತಾನೆ ಪ್ರಸುವಿಸಿದ ಮರಿಯನ್ನು ಸಹ ಬಿಟ್ಟು ಕುಪ್ಪಳಿಸಿ ಓಡುತ್ತಲಿರುವ ಜಿಂಕೆಯ ಸಮೂಹವನ್ನು ನೋಡು." ಎಂದು ಶಂಕರನು ದೇವಿಗೆ ಆ ಪರ್ವತದ ಸೊಬಗನ್ನು ಹೇಳುತ್ತಿರುವನು. ॥೭೪॥

ಹಾಗೆಯೇ ಪರಶಿವನು ಕೈಲಾಸಾಚಲದ ಮಧ್ಯಭಾಗದಲ್ಲಿರುವ ದಿವ್ಯ ಸೌಧದಲ್ಲಿ ಸಿಂಹಾಸನಾರೂಢನಾಗಿ ಕುಳಿತು, ದೇವಿಯ ಮುಖಕಮಲವನ್ನು ನೋಡುತ್ತಾ,

ಪೀತ್ವಾ ಲೋಚನಷಟ್ಪದೈರ್ವದತಿ ತಾಂ ಪಶ್ಯೇತಿ ಲಿಂಗಾನ್ಯುಮೇ ।
ಬಿಲ್ವೀಕೋಮಲಪಲ್ಲವೈರನುದಿನಂ ಕೈಲಾಸಶೃಂಗೇಽರ್ಚಿತಂ ॥೭೫॥

ಪಶ್ಯಾಂಬಿಕೇ ಮದನಮತ್ತಮಯೂರಪಿಂಛೈ ।
ಸ್ಸಚ್ಛಾದಿತಾನಿ ಚಮರೀಗಣಪುಚ್ಛಭಾರೈಃ ।
ಸಂವೀಜಿತಾನಿ ಕರಿವಿಸ್ತೃತಕರ್ಣತಾಲೈ ।
ಸ್ಸಿಕ್ತಾನಿ ತದ್ವನಗವಾಂ ಪಯಸೈವ ನಿತ್ಯಂ ॥೭೬॥

ಸಂಘರ್ಷಣಾನ್ಮೃಗಕರೀಂದ್ರಸುದೇಹಭಾರೈ ।
ರ್ಬಿಲ್ವಚ್ಛದೈಃ ಪತನತಃ ಪರಿಪೂಜಿತಾನಿ ॥೭೭॥

|| ಸ್ಕಂದ ಉವಾಚ ||

ಗೌರೀಯಲ್ಲಕಭಲ್ಲಶೌರಿರುರಗೋಽಸಚ್ಛಿಂಜಿನೀ ತೇ ನಗೋ ।
ಲೀಲಾಕಾರ್ಮುಕತಾಂ ದಧಾತಿ ಭಗವನ್ ಭಿಲ್ಲಾಕೃತೇ ತೇಽಧುನಾ ।

---

ಆಕೆಯ ಮುಖಸೌಂದರ್ಯವೆಂಬ ಮಧುವನ್ನು ತನ್ನ ಲೋಚನಗಳೆಂಬ ಭ್ರಮರಗಳ ಸಹಾಯದಿಂದ ಆಸ್ವಾದಿಸುತ್ತಾ ಹೀಗೆ ಹೇಳುವನು " ಉಮೆಯೇ, ಇಲ್ಲಿ ನೋಡು, ಈ ಕೈಲಾಸಪರ್ವತದ ಶಿಖರದಲ್ಲಿ ಬಿಲ್ವವೃಕ್ಷದ ಚಿಗುರುಗಳಿಂದ ನಿತ್ಯವೂ ಪೂಜಿಸಲ್ಪಡುವ ಶಿವಲಿಂಗಗಳು ಎಷ್ಟು ಮನೋಹರವಾಗಿರುವುವು ? ||೭೫||

ಈ ಶಿವಲಿಂಗಗಳ ಎದುರಿನಲ್ಲಿ ಮದಿಸಿದ ನವಿಲುಗಳು ತಮ್ಮ ಗರಿಗಳನ್ನು ಕೆದರಿಕೊಂಡು ಕುಣಿಯುತ್ತಿರುವುವು. ಚಮರೀಮೃಗಗಳು ತಮ್ಮ ಬಾಲವೆಂಬ ಚಾಮರಗಳಿಂದ ಶಿವಲಿಂಗಗಳನ್ನು ಮುಚ್ಚುತ್ತಿರುವುವು. ಆನೆಗಳು ತಮ್ಮ ವಿಶಾಲವಾದ ಕಿವಿಗಳಿಂದ ಲಿಂಗಗಳನ್ನು ಬೀಸುತ್ತಿರುವುವು. ಅಲ್ಲಲ್ಲಿ ಓಡಾಡುವ ಹಸುಗಳು ತಮ್ಮ ಹಾಲನ್ನು ಲಿಂಗಗಳ ಮೇಲೆ ಸುರಿಸುತ್ತಾ ಕ್ಷೀರಾಭಿಷೇಕ ಮಾಡುತ್ತಿರುವುವು. ಆನೆಗಳೂ, ಸಿಂಹಗಳೂ, ತಮ್ಮ ಶರೀರವನ್ನು ಲಿಂಗಗಳಿಗೆ ಉಜ್ಜುತ್ತಾ ಲಿಂಗಗಳನ್ನು ಸೇವಿಸುತ್ತಿರುವುವು. ಬಿಲ್ವವೃಕ್ಷಗಳು ತಮ್ಮ ಪತ್ರೆಗಳನ್ನು ಲಿಂಗಗಳ ಮೇಲೆ ಬೀಳಿಸುತ್ತಾ ನಿತ್ಯವೂ ಅರ್ಚಿಸುತ್ತಿರುವುವು." ಎಂದು ಶಂಕರನು ದೇವಿಗೆ ಆ ಲಿಂಗಗಳ ಸೌಂದರ್ಯವನ್ನು ವಿವರಿಸುತ್ತಿರುವನು. ||೭೭||

ಎಂದು ಕುಮಾರಸ್ವಾಮಿಯು ಜೈಗೀಷವ್ಯ ಮಹಾಮುನಿಗೆ ಕೈಲಾಸಪರ್ವತದ ವಿಷಯವನ್ನೆಲ್ಲಾ ವಿವರಿಸಿ, ಕೊನೆಯಲ್ಲಿ ತಾನು ಹೀಗೆ ಪರಮೇಶ್ವರನನ್ನು ಸ್ತುತಿ

ವೇದಾಸ್ತೇ ತುರಗಾ ವಿಧಿರ್ನಿಯತಿಕೃದ್ವಿಶ್ವೇಶ ವಿಶ್ವಾಧಿಕ ।
ತ್ವಲ್ಲೀಲಾಧಿಗಮೇನ ಸರ್ವಜಗತಾಂ ನಾಶಪ್ರಭಾವಸ್ಥಿತಿಃ ॥೨೮॥

ವೀಕ್ಷಾ ಶಿಕ್ಷಿತಮನ್ಮಥತ್ರಿಪುರಕ ದಕ್ಷಾದಿದೀಕ್ಷಾಪಹ ।
ತ್ರ್ಯಕ್ಷಾಕ್ಷಾದಿವಿದೂರ ಭಿಕ್ಷಿತಮಹಾಮೌನೀಂದ್ರ ವಿಜ್ಞಾನದ ।
ಈಕ್ಷಾ ಭೋಜನಪಕ್ಷಪಾತ ದಯಯಾ ।
ಕಕ್ಷಾಧಿನಾಸಾವ ಮಾಂ ॥೨೯॥

ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ಕೈಲಾಸಪ್ರಾಸಾದವರ್ಣನಂ ನಾಮ ಸಪ್ತದಶೋಽಧ್ಯಾಯಃ

---

ಸುವನು. “ಭಗವಂತನೂ, ವಿಶ್ವೇಶ್ವರನೂ, ವಿಶ್ವಾಧಿಕನೂ ಆದ ಪರಮೇಶ್ವರನೇ, ನಿನಗೆ ತ್ರಿಪುರಾಸುರ ನಾಶಕಾಲದಲ್ಲಿ ಸಾಕ್ಷಾನ್ಮಹಾವಿಷ್ಣುವೇ ಬಾಣವಾದನಲ್ಲವೇ? ಆದಿಶೇಷನೇ ಆ ಬಾಣಕ್ಕೆ ಆಶ್ರಯ ಕೊಡುವ ಮೌರ್ವಿಯಂತಾದನು. ಮೇರುಪರ್ವತವೇ ನಿನಗೆ ಧನುಸ್ಸಿನಂತಾಗಿ ನಿಂತಿತು. ನೀನು ಮಾತ್ರ ಭಿಲ್ಲನಂತೆ ವೇಷವನ್ನು ಧರಿಸಿ ನಿಂತಿದ್ದೆಯಲ್ಲವೆ. ನಾಲ್ಕು ವೇದಗಳೇ ನಾಲ್ಕು ಕುದುರೆಗಳಾದವು. ಬ್ರಹ್ಮನೇ ಸಾರಥಿಯಾಗಿದ್ದನು. ಪರಶಿವನೇ, ನಿನ್ನ ಲೀಲೆಗೆ ಸಿಕ್ಕದಿದ್ದ ಪ್ರಪಂಚವಾವುದು? ಈ ಪ್ರಪಂಚದ ನಾಶವೂ ನಿನ್ನ ಒಂದು ಲೀಲೆಯೇ ಅಲ್ಲವೆ? ॥೨೮॥

ಮಹೇಶ್ವರನೇ, ನಿನ್ನ ಕ್ರೂರದೃಷ್ಟಿಪಾತದಿಂದಲೇ ಲೋಕಮೋಹಕನಾದ ಮನ್ಮಥನು ಭಸ್ಮವಾದನು. ಲೋಕನಾಶಕರಾದ ತ್ರಿಪುರಾಸುರರು ದಗ್ಧರಾದರು. ಅಹಂಕಾರದಿಂದ ಕೊಬ್ಬಿದ್ದ ದಕ್ಷಬ್ರಹ್ಮನು ತನ್ನ ಯಾಗದೀಕ್ಷೆಯನ್ನು ನಿನ್ನ ದ್ವೇಷದಿಂದಲೇ ಕಳೆದುಕೊಂಡನು. ನೀನು ಮೂರು ಕಣ್ಣುಗಳನ್ನು ಹೊಂದಿ ತ್ರಿನಯನನೆನಿಸಿರುವೆ. ಇಂದ್ರಿಯ ವ್ಯಾಪಾರಾದಿಗಳಿಗೆ ಸಿಲುಕದೆ ಜಿತೇಂದ್ರಿಯನೆನಿಸಿಕೊಂಡಿರುವೆ. ಜ್ಞಾನಸಾಧನೆಗಾಗಿ ಭಿಕ್ಷಾದಿಗಳಿಂದ ವರ್ತಿಸುವ ಮಹಾ ಮಹಾ ಋಷಿಗಳಿಗೆಲ್ಲಾ ನೀನು ಪೂಜ್ಯದೇವತೆಯೆನಿಸಿರುವೆ. ಭಕ್ತರಿಗೆ ವಿಶೇಷವಾದ ಜ್ಞಾನದಾಯಕನೂ ನೀನೇ ಆಗಿರುವೆ. ಮಹೇಶ್ವರನೇ, ನಿನ್ನ ಕೃಪಾದೃಷ್ಟಿಯೇ ಭಕ್ತರಿಗೆ ಸುಖಭೋಜನದ ಸೌಖ್ಯವನ್ನು ಒದಗಿಸುವುದಾಗುವುದು. ಪ್ರಪಂಚವನ್ನೆಲ್ಲಾ ನಿನ್ನ

ತೋಳುಬಲದಲ್ಲಿ ಅಡಗಿಸಿಕೊಂಡಿರುವೆಯಲ್ಲವೇ! ಇಂತಹ ಮಹಾಮಹಿಮನೂ, ಸ್ವಯಂಪ್ರಕಾಶಕನೂ, ಸಚ್ಚಿದಾನಂದರೂಪಿಯೂ ಆದ ಪರಮೇಶ್ವರನೇ, ನನ್ನನ್ನು ನಿನ್ನ ದಯಾದೃಷ್ಟಿಯಿಂದ ಕಾಪಾಡು ಎಂದು ಕುಮಾರಸ್ವಾಮಿಯು ಪರಮೇಶ್ವರನನ್ನು ಬಹುವಾಗಿ ಸ್ತುತಿಸಿದನು. ||೭೯||

ಇಲ್ಲಿಗೆ ಶ್ರೀಶಿವರಹಸ್ಯದ ಪ್ರಥಮಾಂಶದಲ್ಲಿ ಕೈಲಾಸಪ್ರಾಸಾದವರ್ಣನೆಯೆಂಬ ಹದಿನೇಳನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

# ಅಥ ಶ್ರೀಶಿವರಹಸ್ಯೇ

## ಅಷ್ಟಾದಶೋಽಧ್ಯಾಯಃ

### ಕೈಲಾಸಮೌಲಿ ವರ್ಣನಂ

|| ಸ್ಕಂದ ಉವಾಚ ||

**ಹೀರಾಕಾರಮಹಾಸೌಧೇ ಘರ್ಮತಪ್ತೋ ಹಿ ಶಂಕರಃ ।**
**ದೇವ್ಯಾ ಸರಸ್ತಟೇ ರತ್ನಸಿಂಹಾಸನವರೇ ಸ್ಥಿತಃ ||೧||**

**ಸುಚಂದ್ರಚಂದನದ್ರಾವವಿಲೇಪಿತಮಹಾಂಗಕಃ ।**
**ಮಹಾಗರುಮಹಾಧೂಮವಿಧೂಪಿತಶಿಖಸ್ತದಾ ||೨||**

**ರತ್ನಪಾತ್ರಸ್ಥಿತಾಪಾರಮಹಾಮೋದಾನ್ನಭೋಜನಃ ।**
**ತತೋಽಪಿ ಕಲ್ಪಕಫಲಂ ದೇವ್ಯಾ ಭುಕ್ತಂ ಮಹೇಶ್ವರಃ ||೩||**

---

## ಶ್ರೀಶಿವರಹಸ್ಯದಲ್ಲಿ ಹದಿನೆಂಟನೆಯ ಅಧ್ಯಾಯವು

ಕುಮಾರಸ್ವಾಮಿಯು ಜೈಗೀಷವ್ಯಮಹರ್ಷಿಯನ್ನು ಕುರಿತು, ಕೈಲಾಸಶಿಖರವನ್ನು ವರ್ಣಿಸಲು ಆರಂಭಿಸಿ ಕಥೆಯನ್ನು ಹೀಗೆ ಮುಂದುವರಿಸುವನು. ಪರಶಿವನ ಸೌಧವೆಂಬುದು ಹೀರವೆಂಬ ರತ್ನದ ಆಕಾರದಂತಿರುವುದು. ಅಂತಹ ದಿವ್ಯಪ್ರಾಸಾದದಲ್ಲಿ ಬಿಸಿಲಿನ ಬೇಗೆಯಿಂದ ತಪ್ತನಾದ ಶಂಕರನು, ದೇವಿಯೊಡನೆ ಸರೋವರದ ದಡದಲ್ಲಿ ಒಂದು ರತ್ನಸಿಂಹಾಸನದ ಮೇಲೆ ಕೂಡುವನು. ||೧||

ಬಿಸಿಲಿನ ವೇಗದ ಶಾಂತಿಗಾಗಿ ಚಂದ್ರನಂತೆ ಶುಭ್ರವಾಗಿ ಹೊಳೆಯುವ ಶ್ರೀಗಂಧದಿಂದ ತನ್ನ ದೇಹವನ್ನು ಲೇಪಿಸಿಕೊಂಡಿರುವನು. ಶಂಕರನ ಜಟಾಭಾಗವು ಅಗರುವಿನ ಧೂಮದಿಂದ ಸುವಾಸನೆಯುಳ್ಳದ್ದಾಗಿರುವುದು. ||೨||

ರತ್ನಮಯವಾದ ಪಾತ್ರೆಗಳಲ್ಲಿ ಸುವಾಸನಾಯುಕ್ತವಾದ ಮಧುರಾನ್ನವನ್ನು

**ಸುರತ್ನ ಖಚಿತಾನೇಕರತ್ನಪಾತ್ರಸ್ಥಿತಾನ್ ಫಲಾನ್ ।**
**ದೃಷ್ಟ್ವಾ ತುಷ್ಯತಿ ದೇವೇಶಃ ಕದಾಚಿದಮೃತಾಶನಃ ॥೪॥**

**ರತ್ನಾದರ್ಶವಿಲೋಕಾಚ್ಚ ಪ್ರತಿಬಿಂಬೈಕದರ್ಶನಃ ।**
**ದೇವ್ಯಾ ಲಲಾಟಫಲಕೇ ತಿಲಕಂ ರತ್ನನಿರ್ಮಿತಂ ॥೫॥**

**ಕಲ್ಪಯತ್ಯತಿಹೃಷ್ಟಾತ್ಮಾ ಸದಾನಂದಘನಶ್ಶಿವಃ ।**
**ಪಾಟೀರಚಂದ್ರಕಸ್ತೂರೀಲಿಪ್ತಂ ಮಲಯಪಂಕಜಂ ॥೬॥**

**ದೇವೀಂ ವಿಲೇಪ್ಯ ಸಂಹೃಷ್ಟಸ್ಸ್ವಾಂಗಮಾಶೋಽತಿಹರ್ಷಿತಃ ।**
**ದೇವ್ಯಾ ಧಮ್ಮಿಲ್ಲಮಲ್ಲೀನಾಂ ಘ್ರಾಣಾನಂದಕುತೂಹಲಃ ॥೭॥**

---

ಭುಂಜಿಸುವನು. ಮತ್ತು ದೇವಿಯು ಸಂತೋಷದಿಂದ ತಿನ್ನುವ ಕಲ್ಪವೃಕ್ಷದ ಫಲವನ್ನು ನೋಡಿ ತಾನೂ ಸಹ ತೃಪ್ತನಾಗುವನು. ॥೩॥

ಹಾಗೆಯೇ ರತ್ನಪಾತ್ರಗಳಲ್ಲಿಟ್ಟಿರುವ ವಿಧವಿಧವಾದ ಹಣ್ಣುಗಳನ್ನು ನೋಡಿ, ಅಮೃತಾಶನನಾದ ಪರಮೇಶ್ವರನು ಸಂತುಷ್ಟನಾಗುವನು. ॥೪॥

ರತ್ನ ನಿರ್ಮಿತವಾದ ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ನೋಡಿ ಹರ್ಷಗೊಳ್ಳುವನು. ಮತ್ತು ದೇವಿಯ ಮುಖಕ್ಕೆ ರತ್ನನಿರ್ಮಿತವಾದ ತಿಲಕವನ್ನೂ ತಾನೇ ಇಡುವನು. ಸ್ವಯಮಾನಂದಸ್ವರೂಪಿಯಾದರೂ ಶಂಕರನು ವ್ಯವಹಾರಮಾರ್ಗವನ್ನನುಸರಿಸಿ ಸಂತುಷ್ಟನಾದವನಂತೆ ನಟಿಸುವನು. ಶ್ರೀಗಂಧ, ಚಂದನ, ಕಸ್ತೂರಿ ಮುಂತಾದ, ಮಲಯಪರ್ವತ ಜನ್ಯವಾದ ಸುಗಂಧದ್ರವ್ಯಗಳಿಂದ ನಿರ್ಮಿತವಾದ ಗಂಧವನ್ನು, ॥೫-೬॥

ದೇವಿಯ ಅಂಗಗಳಿಗೆ ಬಳಿದು, ತಾನೂ ಸಹ ತನ್ನ ಅಂಗಗಳಿಗೆ ಲೇಪಿಸಿಕೊಳ್ಳುವನು. ದೇವಿಯು ತನ್ನ ಕೇಶಪಾಶದಲ್ಲಿ ಮುಡಿದುಕೊಂಡಿರುವ ಮಲ್ಲಿಗೆಯ ಹೂವುಗಳ ವಾಸನೆಯನ್ನು ಆಘ್ರಾಣಿಸುವುದರಲ್ಲಿ, ತಾನು ಕುತೂಹಲಿಯಾಗಿರುವನು. ॥೭॥

ಕಲ್ಪಕಾಮೋದಬಹುಲಪುಷ್ಪಸ್ರಗ್ಭಿಶ್ಚ ಭೂಷಣೈಃ ।
ತ್ಯಕ್ತ್ವಾ ಕಪರ್ದಂ ಮುಕುಟಂ ರತ್ನಕಲ್ಪಿತಮುತ್ತಮಂ ॥೮॥

ಧಾರಯತ್ಯತಿಸಂಹೃಷ್ಟಶ್ಚಂದ್ರದ್ವಂದ್ವಂ ಮಹೇಶ್ವರಃ ।
ಹಾರಕೇಯೂರವಲಯೈರ್ಭೂಷಾಂ ಸ್ವಾಂ ಕಲಯತ್ಯುಮಾಂ ॥೯॥

ಕಾಕೋದರಮಹಾರತ್ನಂ ತ್ಯಕ್ತ್ವಾ ರತ್ನಪ್ರಭಾಧಿಕಂ ।
ನವರತ್ನಮಹಾಹಾರಾವಲೀಲಂಬಿತಮೌಕ್ತಿಕೈಃ ॥೧೦॥

ಸ್ವಕಂಠಂ ಕೀಲಯತ್ಯೇವ ದೇವ್ಯಾಃ ಕಂಠೇಪಿ ಶಂಕರಃ ।
ಶಿತಿಕಂಠೋ ವಿರೂಪಾಕ್ಷೋ ದೇವ್ಯಾ ಕ್ರೀಡತಿ ತತ್ರ ಹಿ ॥೧೧॥

ಏವಂ ವಿಹರತೋಸ್ತತ್ರ ಬ್ರಹ್ಮಕಲ್ಪಶತಂ ಗತಂ ।
ಭೂತಂ ಭಾವಿ ಭವತ್ತತ್ರ ಕಾಲಕಲ್ಪಂ ದ್ವಿಜೋತ್ತಮಾಃ ॥೧೨॥

---

ಕಲ್ಪವೃಕ್ಷದ ಸುಗಂಧಮಯವಾದ ಪುಷ್ಪಗಳಿಂದ ರಚಿತವಾದ ಹಾರವನ್ನೂ, ಇನ್ನೂ ಅನೇಕಭೂಷಣಗಳನ್ನೂ ದೇವಿಗೆ ಧರಿಸುವನು. ತನ್ನ ಜಟಾಜೂಟದಲ್ಲಿದ್ದ ರತ್ನಮಯವಾದ ಕಿರೀಟವನ್ನು ತೆಗೆದು ದೇವಿಯ ಶಿರಸ್ಸಿನ ಮೇಲಿಡುವನು. ತನ್ನ ಶಿರಸ್ಸಿನಲ್ಲಿರುವ ಚಂದ್ರಕಲೆಯನ್ನು ದೇವಿಯ ಚಂದ್ರಕಲೆಯೊಡನೆ ಸೇರಿಸಿ ನಿಲ್ಲಿಸುವನು. ರತ್ನಹಾರಗಳನ್ನೂ, ರತ್ನವಲಯಗಳನ್ನೂ ದೇವಿಗೆ ಹಾಕಿ ಅಲಂಕರಿಸಿ ತನ್ನಂತೆಯೇ ಇರುವ ದೇವಿಯನ್ನು ನೋಡಿ ಆನಂದಗೊಳ್ಳುವನು. ||೮||

ತನ್ನಲ್ಲಿರುವ ರತ್ನಶ್ರೇಷ್ಠವಾದ ನಾಗರತ್ನವನ್ನು ದೇವಿಗೆ ಅರ್ಪಿಸುವನು. ನವರತ್ನಗಳಿಂದ ಸುಂದರವಾಗಿರುವ ಹಾರವನ್ನು ದೇವಿಯ ಕತ್ತಿಗೆ ಹಾಕುವನು. ||೯||

ಹಾಗೆಯೇ ದೇವಿಯ ಕತ್ತಿನಲ್ಲಿರುವ ಹಾರಗಳನ್ನು ತಾನು ಧರಿಸುವನು. ಈ ರೀತಿ ವಿಷಕಂಠನೂ, ವಿರೂಪಾಕ್ಷನೂ ಆದ ಶಂಕರನು ದೇವಿಯೊಡನೆ ಕೈಲಾಸ ಶಿಖರದಲ್ಲಿ ವಿಹರಿಸುವನು. ||೧೧||

ಹೀಗೆ ಮಹೇಶ್ವರನು ಪಾರ್ವತಿಯೊಡನೆ ಆಡುತ್ತಿರುವಾಗಲೇ ನೂರು ಬ್ರಹ್ಮ ಕಲ್ಪಗಳು ಕಳೆದುಹೋಗುತ್ತವೆ. ಅಲ್ಲದೆ ಅನೇಕ ಹಿಂದಿನ ಮತ್ತು ಮುಂದಿನ ಕಲ್ಪಗಳು ಉಳಿದ ದೇವತೆಗಳಿಗೆ ಕಳೆದುಳಿದು ಹೋಗುತ್ತವೆ. ||೧೨||

ಕಾಲಾತೀತಸ್ಯ ದೇವಸ್ಯ ಸದಾ ಮೃತ್ಯುಂಜಯಸ್ಯ ಚ ।
ತಸ್ಯ ಕ್ಷಣಾರ್ಧಂ ತಾಃ ಕ್ರೀಡಾಃ ಕೇನ ವಕ್ತುಂ ಹಿ ಪಾರ್ಯತೇ ॥೧೩॥

ಧಾರಾಸಾರಗೃಹೇಷು ಶಂಖಮುರಜೋದ್ಘುಷ್ಟೇಷು ತುಷ್ಟಶ್ಶಿವ ।
ಶ್ಚಂದ್ರೋಶೀರಸುಗಂಧಬಂಧುರಜಲೈಸ್ಸತ್ಪಾಟಲಾಮೋದಿತೈಃ ।
ಲಾಲಾಟೋತ್ಥಹುತಾಶಸೂರ್ಯಕಿರಣೈಸ್ಸಂತಪ್ತಗಾತ್ರೋಽಂಬಯಾ ।
ಲೀಲಾಲಾಲಿತರತ್ನಕೀರಕರಯಾಧ್ಯಾಸ್ತೇ ಚ ಸಿಂಹಾಸನೇ ॥೧೪॥

ಹೀರಾಗಾರನಿಬದ್ಧರತ್ನಜಮಹಾಡೋಲಾಸನಾಡೋಲನೈಃ ।
ರತ್ನಶ್ವೇತಜಕಾಂತಿಬೃಂದನಿವಹೈಸಚ್ಛೀತವಾತೋತ್ಥಿತೈಃ ।
ಸೂಕ್ಷ್ಮೈರಂಬರಕಾಂತಿಭಿರ್ವಿಕಸಿತೈಸ್ಸಚ್ಛೈಲಸಾನುಪ್ರಭೈ ।
ರಂಬಾಮೀಕ್ಷತಿ ಲೋಕಯೇತಿ!ಸಸುಧಾಕಲ್ಲೋಲವಾರಾಂನಿಧಿಃ॥೧೫॥

---

ಕಾಲಾತೀತನೂ, ಮೃತ್ಯುಂಜಯನೂ ಆದ ಮಹೇಶ್ವರನಿಗೆ ಅಷ್ಟು ಕಾಲವೂ ಕ್ಷಣಾರ್ಧದಂತೆ ಆಟದಲ್ಲಿ ಕಳೆದುಹೋಗುತ್ತದೆ. ಹೀಗಿರುವಾಗ ಅವನ ಲೀಲೆಯನ್ನು ಚೆನ್ನಾಗಿ ತಿಳಿದು ಹೇಳುವವನು ಯಾವನು ? ||೧೩||

ಪರಶಿವನ ಲಲಾಟದಲ್ಲಿ ಅಗ್ನಿಯಿರುವನು. ಒಂದು ನೇತ್ರದಲ್ಲಿ ಸೂರ್ಯನು ನೆಲಸಿರುವನು. ಇವರಿಬ್ಬರ ತೀಕ್ಷ್ಣವಾದ ತೇಜಸ್ಸಿನಿಂದ ತಪ್ತಹೃದಯನಾದ ಶಂಕರನು ವಾರಿಧಾರಾಸಾರದಿಂದ ಕೂಡಿದ ಮನೆಯಲ್ಲಿ, ಶಂಖ, ಮದ್ದಲೆ ಮುಂತಾದ ವಾದ್ಯ ಧ್ವನಿಗಳನ್ನು ಕೇಳುತ್ತಾ ದಿವ್ಯಸಿಂಹಾಸನದಲ್ಲಿ ಮಂಡಿಸಿರುವನು. ಸುತ್ತಲೂ ಚಂದ್ರನಂತೆ ಶೀತಲವಾಗಿ ಲಾಮಂಚಾದಿ ದ್ರವ್ಯಗಳಿಂದ ಸುವಾಸಿತವಾಗಿರುವ ಜಲಶೀಕರಗಳು, ಪಾಟಲಪುಷ್ಪಾದಿಗಳ ವಾಸನೆಯನ್ನು ಹೊಂದಿ ಶಿವನನ್ನು ಆನಂದ ಗೊಳಿಸುತ್ತಿರುವುವು. ಪಕ್ಕದಲ್ಲಿ ದೇವಿಯು ಕೈಯ್ಯಲ್ಲಿ ಕ್ರೀಡಾರ್ಥವಾಗಿರುವ ಗಿಣಿಯನ್ನು ಹಿಡಿದು ಅದೇ ಸಿಂಹಾಸನದಲ್ಲಿ ಮಂಡಿಸಿರುವಳು. ||೧೪||

ದಪ್ಪವಾದ ರತ್ನಗಳಿಂದ ನಿರ್ಮಿತವಾದ ದೊಡ್ಡ ತೊಟ್ಟಿಲಿನಲ್ಲಿ ಪರಮೇಶ್ವರನು ಪತ್ನಿಯೊಡನೆ ಒಮ್ಮೆ ಕುಳಿತಿರುವನು. ರತ್ನಗಳ ಶುಭ್ರವಾದ ಕಾಂತಿಯು ಬಹಳವಾಗಿ ಇವರನ್ನು ಕಾಂತಿವಿಶಿಷ್ಟರನ್ನಾಗಿ ಮಾಡಿರುವುದು. ಅವರುಟ್ಟಿರುವ ದಿವ್ಯವಸ್ತ್ರಗಳಾದರೋ, ಸೂಕ್ಷ್ಮವಾಗಿದ್ದು ಹೊಳೆಯುತ್ತಿರುವುವು. ಆ ಕಾಂತಿಗಳ ಜೊತೆಗೆ ಕೈಲಾಸ

ಮಣಿದ್ವೀಪನೀಪಾನ್ ಪ್ರಪಶ್ಯಾಂಬಿಕೇ ತ್ವಂ ।
ತವಾಪಾರಮೋದಪ್ರದಾ ಸಾ ಚ ಭೂಮಿಃ ।
ಸುಧಾಸಿಂಧುಕಲ್ಲೋಲಶೀತಾತಿವಾತೋ ।
ಮಹಾನಂದಕಂದಂ ವಿಧತ್ತೇ ಮಹೇಶಿ ॥೧೬॥

ಹರಿನ್ಮಣಿನಿಭೇಽದ್ರಿಜೇ ತವ ಶರೀರಕಾಂತ್ಯಾಧಿಕಂ ।
ಸಮಸ್ತಕಲಧೌತಜೋಽಪ್ಯಗವರೋಽಯಮಪ್ಯುನ್ನತಃ ।
ವಿಭಾತಿ ಹರಿತಪ್ರಭಸ್ಸಮೃಗಪಕ್ಷಿವಲ್ಲೀದ್ರುಮಃ ।
ಪ್ರಪಶ್ಯ ಮುಕುರೇಂಬಿಕೇ ತವ ಸರೂಪಭಾಗ್ಯಾಧಿಕಃ ॥೧೭॥

---

ಪರ್ವತದ ನೈಸರ್ಗಿಕಕಾಂತಿಯು ಪಾರ್ವತೀಪರಮೇಶ್ವರರನ್ನು ಮತ್ತೂ ಶೋಭಾಯಮಾನವನ್ನಾಗಿ ಮಾಡಿರುವುದು. ಈ ಸಮಯದಲ್ಲಿ ಸುಧಾಸಮುದ್ರದಂತೆ ತೇಜಸ್ವಿಯಾದ ಪರಶಿವನು ಪಾರ್ವತಿಯನ್ನು ಪ್ರೇಮಪರವಶನಾಗಿ ನೋಡುವನು. ॥೧೫॥

ಅಲ್ಲದೆ ಪಾರ್ವತಿಯನ್ನು ಕುರಿತು ಹೀಗೆ ಹೇಳುವನು. "ಎಲೌ ಗಿರಿಜೆಯೇ. ಇಲ್ಲಿ ನೋಡು. ಮಣಿದ್ವೀಪದಲ್ಲಿ ಬೆಳೆದಿರುವ ಕದಂಬ ವೃಕ್ಷಗಳು ಎಷ್ಟು ಸುಂದರವಾಗಿವೆ? ಆ ನೀಪವನವೇ ಅಲ್ಲವೇ ನಿನಗೆ ಹೆಚ್ಚಿನ ತುಷ್ಟಿಯನ್ನುಂಟುಮಾಡತಕ್ಕದ್ದು? ಅಲ್ಲಿ ಬೀಸುವ ಗಾಳಿಯಾದರೋ ಅಮೃತ ಸಮುದ್ರದ ಅಲೆಗಳಿಂದ ಉಂಟಾದ ತುಂತುರುಗಳನ್ನು ತಂದು ಎರಚತಕ್ಕದ್ದಾಗಿದೆ. ಇದು ಎಷ್ಟುರಮಟ್ಟಿನ ಆಹ್ಲಾದಕರವಾಗಿದೆ ನೋಡು. ॥೧೬॥

ಇಲ್ಲಿ ನೋಡು. ಪಾರ್ವತಿಯೇ, ನಿನ್ನ ಶರೀರಕಾಂತಿಯು ಇಂದ್ರನೀಲಮಣಿಯ ತೇಜಸ್ಸಿಗೆ ಸಮನಾಗಿದೆ. ಅಂತಹ ಕಾಂತಿಯನ್ನು ಹೊಂದಿ ಈ ಪರ್ವತವು ಮತ್ತೂ ಅತಿಶಯವಾಗಿ ಹೊಳೆಯುತ್ತಿದೆ. ಸ್ವಭಾವವಾಗಿಯೇ ಈ ಅದ್ರಿಯು ಅತ್ಯಂತ ಶುಭ್ರವರ್ಣವುಳ್ಳದ್ದು. ಅದರಲ್ಲೂ ಈ ಹರಿದ್ವರ್ಣದ ವೃಕ್ಷಗಳು, ಬಳ್ಳಿಗಳು, ಮೃಗಪಕ್ಷಿಗಳು ಇಲ್ಲಿ ವಿಹರಿಸುತ್ತಾ ಪರ್ವತದ ಶೋಭಾತಿಶಯವನ್ನು ಹೆಚ್ಚಿಸಿವೆ. ಇಂತಹ ಅಸದೃಶವಾದ ಸೊಬಗಿನಿಂದ ಬೆಳಗುವ ಈ ಪರ್ವತವನ್ನು ರತ್ನಮಯವಾದ ಈ ಕನ್ನಡಿಯಲ್ಲಿ ನೋಡು. ॥೧೭॥

ಮನ್ಮೌಲಿಸ್ಥಿತಚಂದ್ರಕಾಂತಿನಿಕರೈಃ ಕಾಂತ್ಯಾ ಸ್ವಯಾ ಶೈಲರಾಟ್ ।
ಸ್ವಾಮ್ಯಾಪಾರಶಿಖಾಭಿನೃತ್ತಶಿಖಿಭಿಃ ಪುಂಸ್ಕೋಕಿಲಾನಾಂ ರವೈಃ ।
ಸಾರಂಗೈರುರುಕೈರ್ಬಕೈಶ್ಚಮರಿಭಿಃ ಪ್ರೋದ್ಧೂತಪುಚ್ಛೈಸ್ಸದಾ ।
ಖಡ್ಗಾನಾಂ ನಿವಹೈರ್ಲಲಾಯಜಕುಲೈಃ ಪ್ರೋಡ್ಡೀನದೇಣೀಕುಲೈಃ॥೧೮॥

ಹರಿತಮಣಿತೃಣಾಗ್ರಂ ಸಂಚರಂತಶ್ಚರಂತಿ ।
ಕನಕಮಯಮೃಗಾಸ್ತೇ ಮುಕ್ತಬಿಂದೂಚಿತಾಂಗಾಃ ।
ರಜತನಿಭಕಪೋತಾ ರತ್ನಪಾದಾಃ ಕಣಾಶಾ ।
ಸ್ವಕಗಲರಣಿತೈಸ್ತೇ ಸ್ವಪ್ರಿಯಾಪೃಷ್ಠಲಗ್ನಾಃ ॥೧೯॥

ಹಂಸಾನಾಂ ಚ ಕುಲಂ ಸ್ವವಕ್ತ್ರಜಮಹಾಮುಕ್ತಾಫಲೈಃ ಪಕ್ಷತಿ।
ನ್ಯಾಧೂನಾತ್ತದಿಗಂತಕಾಂತಿಬಹುಲಾಸ್ತೇ ಸ್ವಚ್ಛದೇಹಾಮಲಾಃ ।

---

ನನ್ನ ಶಿರಸ್ಸಿನಲ್ಲಿರುವ ಚಂದ್ರನ ಕಾಂತಿಯು ಈ ಶುಭ್ರವಾದ ಕೈಲಾಸ ಪರ್ವತದಮೇಲೆ ವ್ಯಾಪಿಸಿದೆ. ಅಲ್ಲದೆ, ತಮ್ಮದೇ ಆದ ಒಂದು ನರ್ತನದಿಂದ ಕುಣಿಯುತ್ತಿರುವಾಗ ನವಿಲುಗಳ ನಾಟ್ಯ ಧ್ವನಿಯಿಂದಲೂ, ಪುಂಸ್ಕೋಕಿಲಗಳ ಇಂಚರದಿಂದಲೂ ಈ ಗಿರಿಯು ಮತ್ತಷ್ಟು ಆಹ್ಲಾದಕರವಾಗಿದೆ. ಎಲ್ಲೆಲ್ಲಿ ನೋಡಿದರೂ, ಕೃಷ್ಣಸಾರಗಳೂ, ಸಾರಂಗಗಳೂ, ಬಕಗಳೂ, ಕೆದರಿದ ಬಾಲವುಳ್ಳ ಚಮರೀಮೃಗಗಳೂ ಕಂಡುಬರುತ್ತಿವೆ. ಕಾಡೆಮ್ಮೆಗಳ ಗುಂಪು ಒಂದು ಕಡೆ ಭಯಂಕರವಾಗಿದೆ. ಕುಪ್ಪಳಿಸಿ ಹಾರಿಹೋಗುವ ಜಿಂಕೆಗಳ ಸಮೂಹವು ವನವನ್ನು ಬಹಳವಾಗಿ ಅಲಂಕರಿಸಿವೆ. ॥೧೮॥

ಈ ಭಾಗದಲ್ಲಿ ಸುವರ್ಣಮಯವಾದ ಜಿಂಕೆಗಳು, ಯಾವ ಗುರುತುಗಳೂ ಇಲ್ಲದೆ, ತುಂಬಿದ ದೇಹವುಳ್ಳವುಗಳಾಗಿ, ನೀಲಮಣಿಯಂತಿರುವ ಹುಲ್ಲುಗರಿಕೆಯನ್ನು ಮೆಲ್ಲುತ್ತಾ ಅಲ್ಲಲ್ಲಿ ಓಡಾಡುತ್ತಿವೆ. ಬೆಳ್ಳಿಯಂತೆ ಶುಭ್ರವಾಗಿರುವ ಕಪೋತಗಳು ರತ್ನದಂತೆ ಹೊಳೆಯುವ ಕಾಲುಗಳಿಂದ ಕೂಡಿ, ತಮ್ಮ ಮೆಚ್ಚುಗೆಗೆ ಪಾತ್ರವಾದ ಹೆಣ್ಣುಪಾರಿವಾಳಗಳ ಬೆನ್ನಿನಭಾಗದಲ್ಲಿ ಕುಳಿತು, ತಮ್ಮ ಅವ್ಯಕ್ತಮಧುರವಾದ ನಾದದಿಂದ ಕೂಡಿ ಆಹಾರದ ಕಣಗಳನ್ನು ಆರಿಸಿ ತಿನ್ನುತ್ತಿವೆ. ॥೧೯॥

ಇತ್ತಲಾಗಿ ಹಂಸಗಳು ತಮ್ಮ ಮುಖಾಗ್ರಗಳಲ್ಲಿ ಮುತ್ತಿನ ಫಲಗಳನ್ನು ಕಚ್ಚಿಕೊಂಡು, ಶುಭ್ರವಾದ ಗರಿಗಳನ್ನು ಬಡಿಯುತ್ತಾ, ಗರಿಗಳ ಶುಭ್ರತೇಜಸ್ಸನ್ನು

ಕ್ರೀಡಂತಿ ಪ್ರಸಭಂ ಪ್ರಭೂತಪಯಸಿ ಪ್ರೋತ್ಫುಲ್ಲರಕ್ತಾಬ್ಜಿನೀ ।
ಮಧ್ಯಸ್ಥಾ ಇವ ಚಕ್ರವಾಕಜಕುಲಂ ಮೌನಂ ವಿಧತ್ತೇ ಶಿವೇ ॥೨೦॥

ಸುಖಯತಿ ಮೃದುವಾತೋಽಪ್ಯತ್ರ ಭೀತ್ಯಾ ಮಮಾದ್ಯ ।
ಮೃಗಮದಸುಮಸಂಸ್ಥೈರ್ಗಂಧಮಾದ್ಯತ್ಪರಾಗೈಃ ॥೨೧॥

ಕಸ್ತೂರೀಮೃಗಕಾ ಅಪಿ ದ್ರುತತರಂ ಧಾವಂತಿ ಗಂಧಾಶಯಾ ।
ಸ್ವಸ್ಯಾಂಗಸ್ಥಿತಮಪ್ಯಮೇ ನ ಹಿ ತರಾಂ ಜಾನಂತಿ ಮೂಢಾ ಇವ ।
ದೇಹೇಷು ಸ್ಥಿತಮಪ್ಯಮೇ ಮುನಿಸುರಾ ಜಾನಂತಿ ನೋ ಮಾಂ ಯಥಾ ।
ತದ್ವತ್ತೇಽಪಿ ಮೃಗಾ ವಿಮೂಢಮತಯಃ ಕೈಲಾಸಶೈಲೇ ಮಮ ॥೨೨॥

---

ದಿಕ್ಕುಗಳಿಗೆಲ್ಲಾ ಹರಡುತ್ತಾ ವಿಹರಿಸುತ್ತಿವೆ. ಅಲ್ಲದೆ ದೊಡ್ಡದಾದ ಸರೋವರದಲ್ಲಿ ಕೆಂದಾವರೆಗಳ ಮಧ್ಯದಲ್ಲಿ ನಿಂತಿವೆಯೋ ಎಂಬಂತೆ ಅಲ್ಲಲ್ಲಿ ನಿಶ್ಚಲವಾಗಿ ನಿಲ್ಲುತ್ತಿವೆ. ಹಾಗೆಯೇ ಚಕ್ರವಾಕಪಕ್ಷಿಗಳ ತಂಡವೂ ಸಹ ಮೌನದಿಂದ ಅಲ್ಲಲ್ಲಿ ನಿಶ್ಶಬ್ದವಾಗಿ ನಿಂತಿವೆ. ॥೨೦॥

ಮಂದಮಾರುತವಾದರೋ ನನಗೆ ಹೆದರಿ, ಕಸ್ತೂರಿ, ಮತ್ತು ಸುವಾಸನಾ ಯುಕ್ತವಾದ ಇತರ ಪುಷ್ಪಗಳು, ಇವುಗಳಿಂದ ಸೊಂಪಾದ ವಾಸನೆಯನ್ನು ಪಡೆದು ನಿದಾನವಾಗಿ ಬೀಸುತ್ತಾ ನನಗೆ ಸುಖವನ್ನುಂಟುಮಾಡುತ್ತಿದೆ. ॥೨೧॥

ದೇವಿಯೇ, ಇಲ್ಲಿ ನೋಡು, ಕಸ್ತೂರೀಮೃಗಗಳು ತಮ್ಮಲ್ಲಿಯೇ ಉತ್ತಮವಾದ ವಾಸನೆಯುಳ್ಳ ಕಸ್ತೂರಿಯನ್ನು ಹೊಂದಿವೆ. ಆದರೂ ಸುಗಂಧಮಯವಾಗಿರುವ ಸ್ಥಳಾಂತರವನ್ನು ಹುಡುಕಿಕೊಂಡು ಓಡಾಡುತ್ತವೆ. ತಮ್ಮಲ್ಲಿಯೇ ಸುಗಂಧ ವಸ್ತುವಿದೆ ಎಂಬುದನ್ನು ಮರತೇ ಬಿಟ್ಟಿವೆ. ಹಾಗೆಯೇ ಅನೇಕ ಮಹರ್ಷಿಗಳೂ ದೇವತೆಗಳೂ ತಮ್ಮ ಹೃದಯದಲ್ಲಿಯೇ ಅಡಗಿಕೊಂಡಿರುವ ನನ್ನನ್ನು ಸರಿಯಾಗಿ ತಿಳಿಯಲಾರದೆ, ನಾನಿರುವ ಸ್ಥಳಗಳನ್ನು ಹುಡುಕಿಕೊಂಡು ಅಲೆಯುತ್ತಿರುವರು. ಈ ಕಸ್ತೂರೀಮೃಗಗಳಂತೆ ಆ ಮುನಿಜನರೂ ಮೂರ್ಖರ ಗುಂಪಿಗೆ ಸೇರಿದವರೇ ಅಲ್ಲವೆ? ॥೨೨॥

ಮೃದುತರಕೇತಕಧೂಲೀಪಾಲೀ ।
ಪಿಂಜರಿತಶೈಲವರಸಾನುಃ ।
ಕೋ ನು ಸುಸ್ವನ್ನ ಭಜೇತಾ ।
ಪ್ಯತ್ರಸ್ಥಾ ದಿವಿಷದೋ ಹಸಂತ್ಯೇವ ॥೨೩॥

ಹರಿನ್ಮಣಿನಿಭಾಶ್ಶುಕಾ ವದನರತ್ನಗೋಮೇದಕಾ ।
ಸ್ಸುರತ್ನಮಣಿಕಲ್ಪಿತಾಃ ಕನಕಹೀರನೀಲಪ್ರಭಾಃ ।
ವದಂತಿ ನಗಮೌಲಿಗಾಶ್ಶಿವ ಶಿವ ಪ್ರಭೋ ಪಾಹಿ ನಃ ।
ಪ್ರಕೃಷ್ಟದಯಯಾ ದೃಶಾ ಪ್ರಮಥನಾಥ ಕಷ್ಟಂ ಹರ ॥೨೪॥

ಸುಶಾರಿಕಸುಕೋಕಿಲಾ ಹರ ಹರೇಶ ವಿಶ್ವೇಶ್ವರಾ ।
ಪ್ಯನಾಥಜನವತ್ಸಲ ಪುರಹರ ಪ್ರಪಶ್ಯಾದ್ಯ ನಃ ।

---

ಪಾರ್ವತಿಯೇ, ಈ ಪರ್ವತದ ತಪ್ಪಲುಪ್ರದೇಶವೆಲ್ಲಾ ಮೃದುವಾದ ಕೇದಗೀ ಹೂವಿನ ಧೂಳಿಯಿಂದ ಮುಚ್ಚಿಹೋಗಿರುವುದಷ್ಟೆ. ಶುಭ್ರವಾಗಿರುವ ಈ ಪರ್ವತ ಭಾಗವು ಆ ಧೂಳಿಯಿಂದ ಹೊಂಬಣ್ಣವುಳ್ಳದ್ದಾಗಿ ಕಾಣುತ್ತಿರುವುದು. ಇಂತಹ ಸುಂದರತರವಾದ ಸಾನುಪ್ರದೇಶವನ್ನು ಸೇವಿಸಿ ಹರ್ಷಚಿತ್ತರಾಗದಿರುವವರು ಯಾರಿರುವರು ? ಅದಕ್ಕಾಗಿಯೇ ದೇವತೆಗಳು ಇಲ್ಲಿ ನೆಲಸಿ ಸದಾ ಆನಂದಪಡುತ್ತಿರುವರು. ॥೨೩॥

ನೀಲಮಣಿಯಂತಿರುವ ಗಿಳಿಗಳು, ತಮ್ಮ ಕೊಕ್ಕುಗಳಲ್ಲಿ ಗೋಮೇದಕವೆಂಬ ರತ್ನವನ್ನು ಕಚ್ಚಿಕೊಂಡಿವೆ. ಅವುಗಳನ್ನು ನೋಡಿದರೆ, ರತ್ನಕಲ್ಪಿತಗಳೋ ಎಂಬ ಭ್ರಾಂತಿಯುಂಟಾಗುತ್ತದೆ. ಸುವರ್ಣದ ಮತ್ತು ಹೀರವೆಂಬ ದಪ್ಪರತ್ನಗಳ ಪ್ರಭೆಯು ತೋರಿಬರುತ್ತದೆ. ಇಂತಹ ಶುಕಗಳು ಕೈಲಾಸಪರ್ವತದ ಶಿಖರಭಾಗದಲ್ಲಿ ಓಡಾಡುತ್ತಾ, ಶಂಭೋ, ಶಂಕರನೇ, ಪ್ರಮಥನಾಥನೇ, ಅತಿಶಯವಾದ ನಿನ್ನ ಕರುಣಾಕಟಾಕ್ಷದಿಂದ ನಮ್ಮನ್ನು ಕಾಪಾಡು, ನಮ್ಮ ಕಷ್ಟಗಳನ್ನು ಪರಿಹರಿಸು, ಎಂದು ಧ್ವನಿಮಾಡುತ್ತಿರುವುವು. ॥೨೪॥

ಹಾಗೆಯೇ, ಶಾರಿಕಗಳೂ, ಕೋಗಿಲೆಗಳೂ, ಈ ಪರ್ವತದ ಅಗ್ರಭಾಗದಲ್ಲಿ, ಗಂಗಾನದಿಯ ದಡದಲ್ಲಿ ವಿಹರಿಸುತ್ತಿವೆ. ಅವುಗಳೂ ಸಹ ಕಾಂತಿಯಲ್ಲಿ ರತ್ನಗಳನ್ನು ಹೋಲುತ್ತಿವೆ. ತರಲಮಣಿಯಂತೆ ಆವುಗಳ ಕಣ್ಣುಗಳು ಕೆಂಪುಬಣ್ಣದಿಂದಿವೆ.

ಇತಿ ಧ್ವನಿಕೃತಸ್ಸದಾ ಶಿಖರಿಶೀರ್ಷಜಹ್ನೂದ್ಗತಾ ।
ಸ್ಸುರತ್ನಮಣಿಸನ್ನಿಭಾಸ್ತರಲಕಾಂತರಕ್ತಾಕ್ಷಕಾಃ ॥೨೫॥

ಪಶ್ಯಾದ್ರಿಜೇ ಕಿಸಲಯಂ ಸುರಸಾಲಜಾತಂ ।
ಪುಂಸ್ಕೋಕಿಲಾಃ ಸ್ವಲಪನೇನ ತುದಂತಿ ಭುಕ್ತ್ಯೈ ।
ಕೀರಾನನೇ ಪರಿಪತಂತ್ಯಲಯಃ ಪ್ರಕಾಮಂ ।
ಜಂಬೂಫಲಭ್ರಮುಜಿತಶ್ಶುಕ ಏಷ ಮೂಢಃ ॥೨೬॥

ಪಲಾಶಕಲಿಕಾಭ್ರಮಾನ್ಮಧುಪರಾಗಸೌಖ್ಯಾದಸೌ ।
ಯಥಾ ವಿಷಯಿಣೋಂಬಿಕೇ ಸುಕೃತತರ್ಷದುಃಖಾಕುಲಾಃ ॥೨೭॥

ವೃಕ್ಷಾಲಂಬಿತಶೃಂಖಲಾಸು ಚಲಿತೇ ವೈಡೂರ್ಯಮಂಚೇ ಶಿವ
ಸ್ತದ್ವತ್ಪುಷ್ಪಕಕಾಂತಿರಾಗವಿಲಸನ್ಮಂಚಸ್ಥಿತಾ ಸಾಂಬಿಕಾ ।
ಡೋಲಾಡೋಲನಕೈರ್ವನೇ ವಿಹರತಸ್ಸ್ವೈರಂ ಶಿವೌ ಸುಂದರೌ
ದೇವೀಭಿಃ ಕಲಿತೈಸ್ಸುಚಾಮರಗಣೈಸ್ಸೇವ್ಯೌ ಚ ವೃತ್ತೌ ತದಾ ॥೨೮॥

---

ಸುಂದರವಾದ ಆ ಪಕ್ಷಿಗಳು, “ಪರಮೇಶ್ವರನೇ, ವಿಶ್ವೇಶ್ವರನೇ, ಅನಾಥಜನರಕ್ಷಕನೇ, ತ್ರಿಪುರಾರಿಯೇ, ನಮ್ಮನ್ನು ದಯಾದೃಷ್ಟಿಯಿಂದ ಉದ್ಧರಿಸು” ಎಂದು ಸರ್ವದಾ ಧ್ವನಿಗೈಯ್ಯುತ್ತಿರುವುವು. ||೨೫||

ದೇವಿಯೇ, ನೋಡು. ಗಂಡುಕೋಗಿಲೆಗಳು, ದೇವಸಾಲವೃಕ್ಷಗಳ ಚಿಗುರನ್ನು ತಮ್ಮ ಆಹಾರಾರ್ಥವಾಗಿ ಕಚ್ಚಿ ತಿನ್ನುತ್ತಿವೆ. ಭ್ರಮರಗಳು ಗಿಳಿಯ ಕೊಕ್ಕನ್ನು ಮುತ್ತುಗದ ಹೂವಿನ ಮೊಗ್ಗೆಂದು ತಿಳಿದು, ಅದರಲ್ಲಿರುವ ಪರಾಗವನ್ನು ಕುಡಿಯುವ ಆಸೆಯಿಂದ ಗಿಳಿಯ ಮುಖಕ್ಕೆ ಮುತ್ತುತ್ತಿವೆ. ಆ ಗಿಳಿಗಳೋ, ಕಪ್ಪಾಗಿರುವ ಈ ದುಂಬಿಗಳನ್ನು ನೇರಳೆಹಣ್ಣುಗಳೆಂದು ತಿಳಿದು ಅವನ್ನು ಭಕ್ಷಿಸಲು ತೊಡಗುತ್ತವೆ. ಇದೇರೀತಿ ಇಂದ್ರಿಯಸುಖಗಳಿಗೆ ಸಿಕ್ಕಿದ ಜನರು ಉತ್ತಮವಸ್ತುಗಳನ್ನು ಭೋಗ್ಯವಸ್ತುಗಳೆಂಬ ಭ್ರಾಂತಿಯಿಂದ ಹೊಂದಲೆತ್ನಿಸಿ ಕೊನೆಗೆ ದುಃಖಕ್ಕೀಡಾಗುವರು. ||೨೬-೨೭||

ಪಾರ್ವತೀಪರಮೇಶ್ವರರು ಒಂದು ತೂಗುತೊಟ್ಟಿಲಿನಲ್ಲಿ ಕುಳಿತಿರುವರು. ಆ ತೊಟ್ಟಿಲಿನ ಸರಪಣಿಯಾದರೋ ಒಂದು ಮರದ ಕೊಂಬೆಗೆ ಕಟ್ಟಿಹಾಕಲ್ಪಟ್ಟಿದೆ.

ಶ್ರೀಚಂದನಪ್ರಭವಸಾರವಿಲಿಪ್ತಗಾತ್ರಾ
ಚಿಕ್ರೀಡತುರ್ನಗಸುಮೋದ್ಧೃತವಾಯುಗಂಧೈಃ ।
ನಖಮುಖವಿಘಟಿತದಾಡಿಮೀಫಲೋದ್ಯ
ನ್ಮಣಿನಿಭಬೀಜವರಂ ದದಾತಿ ದೇವೀ ॥೨೯॥

ಸ್ವಕರಾಂಬುಜಸಂಸ್ಥಕೀರವಕ್ತ್ರ
ಚ್ಛದನಂ ವೀಕ್ಷ್ಯ ಮಹೇಶಿತುಃ ಸಹಾಸಂ ।
ಕೀರೋಪಿ ಶಂಕರಮುಖಾಬ್ಜಮವೇಕ್ಷ್ಯ ದೇವೀಂ
ನತ್ವಾ ಗಿರಾ ಸಮಭಿಯಾಚತ ಬಾಲವಾಚಾ ॥೩೦॥

---

ಶಿವನು ಕುಳಿತಿರುವ ಪೀಠವಾದರೋ ವೈಡೂರ್ಯಮಣಿಯಿಂದ ನಿರ್ಮಿತವಾದದ್ದು. ಪಾರ್ವತಿಯು ಪುಷ್ಪರಾಗದಿಂದ ಹೊಳೆಯುವ ಮಂಚದಲ್ಲಿ ಮಂಡಿಸಿರುವಳು. ಆ ಮರದ ಅಧೋಭಾಗದಲ್ಲಿ ಈ ತೊಟ್ಟಿಲು ತೂಗಾಡುತ್ತಿರುವುದು. ಲೋಕೋತ್ತರ ಸೌಂದರ್ಯದಿಂದ ಕೂಡಿದ ಈ ಶಿವದಂಪತಿಗಳು, ಚಾಮರಗಳನ್ನು ಹಿಡಿದಿರುವ ಅಪ್ಸರಸ್ತ್ರೀಯರಿಂದ ಸೇವಿಸಲ್ಪಡುತ್ತಾ ಆನಂದದಿಂದಿರುವರು. ॥೨೮॥

ಶಂಕರಪಾರ್ವತಿಯರು ಸುಗಂಧಮಯವಾದ ಶ್ರೀಗಂಧದ ಸಾರವನ್ನು ಶರೀರಗಳಿಗೆ ಲೇಪಿಸಿಕೊಂಡಿರುವರು. ಕೈಲಾಸಪರ್ವತದಲ್ಲಿ ಹುಟ್ಟಿ ಬೆಳೆದ ಪುಷ್ಪಗಳ ವಾಸನೆಯನ್ನು ತಂದ ವಾಯುವು ಅವರನ್ನು ಸೇವಿಸುತ್ತಿರುವುದು. ಇಂತಹ ಸಮಯದಲ್ಲಿ ಪಾರ್ವತಿಯು ತನ್ನ ಕೈಯುಗುರುಗಳಿಂದ ದಾಳಿಂಬವನ್ನು ಬಿಡಿಸಿ ಅದರಿಂದ ತೆಗೆದ ಮಣಿಯಂತೆ ಹೊಳೆಯುವ ದಾಡಿಮೀಹಣ್ಣುಗಳ ಕಾಳುಗಳನ್ನು ಸ್ವಾಮಿಗೆ ಅರ್ಪಿಸುವಳು. ॥೨೯॥

ಹಾಗೆ ಕೊಡುವಾಗ ದೇವಿಯು ತನ್ನ ಕೈಯ್ಯಲ್ಲಿರುವ ಗಿಳಿಯ ಮುಖವನ್ನೂ, ಮಹೇಶ್ವರನ ನಗುಮುಖವನ್ನೂ ನೋಡಿ ಆನಂದಪಡುವಳು. ಗಿಳಿಯಾದರೋ ಶಂಕರನ ಮುಖಕಮಲವನ್ನು ನೋಡಿ, ದೇವಿಯನ್ನು ವಂದಿಸಿ ಬಾಲಭಾಷೆಯಿಂದ ಹೀಗೆ ಕೇಳಿಕೊಳ್ಳುವುದು. ॥೩೦॥

ದೇಹೀಶ ಶಂಕರ ವಿಭೋ ಶಶಿಖಂಡಚೂಡ
ಮಾದ್ಯದ್ರಸಾಲಕದಲೀಫಲಸಾರಭಂಗಂ ।
ಆಜ್ಞಾಪಯೇತಿ ತವ ನಾಮ ವದಾಮಿ ಶಂಭೋ
ವಿಶ್ವೇಶ ಚಾತ್ತುಮಿತಿ ತಸ್ಯ ಗಿರಾ ಸಹಾಸಃ ॥೩೧॥

ಇಂದ್ರನೀಲಮಣಿಕಲ್ಪಿತಸೌಧೇ
ಮಂಚಸಂಸ್ರುತಶಶಿದ್ಯುತಿಕಾಂತೇ ।
ತಲ್ಪಕೇಽಧಿಶಯಿತಸ್ಯ ಪುರಾರೇಃ
ಪಾದಪಂಕಜಯುಗಂ ಸ್ವಕರಾಬ್ಜೈಃ ॥೩೨॥
ರಂಗಮಂಡಲಗತಾ ಮುಹುರಂಬಾ
ವೀಣಯಾ ವದತಿ ಶಂಕರನಾಮ

ರತ್ನೋತ್ಥಾಮಲಸೌಧಭೂಮಿಷು ಪುರೋ ದೇವಸ್ಯ ದೇವ್ಯಾಃ ಪುರೋ
ರುದ್ರಾಣ್ಯೋ ನವಯೌವನಾವೃತಕುಚಾಃ ಕ್ರೀಡಂತಿ ಹಲ್ಲೀಸಕೈಃ ।

---

"ಸಮಸ್ತ ಪ್ರಾಣಿಗಳಿಗೂ ಒಡೆಯನಾಗಿರುವ ಶಂಕರನೇ, ಸರ್ವವ್ಯಾಪಿಯೇ, ಚಂದ್ರಶೇಖರನೇ, ರಸಭರಿತವಾದ ಮಾವು, ಬಾಳೆ ಮುಂತಾದ ಹಣ್ಣುಗಳ ಸಾರವನ್ನು ಭಕ್ಷಿಸುವುದಕ್ಕೆ ನನಗೆ ಅಪ್ಪಣೆಕೊಡು ಎಂದು ನಿನ್ನ ನಾಮಗಳನ್ನು ಈಗ ಸ್ಮರಿಸುತ್ತಿರುವೆನು. ನನ್ನ ಕೋರಿಕೆಯನ್ನು ಈಡೇರಿಸು" ಎಂದು ಯಾಚಿಸುತ್ತಿರುವಾಗ ಪರಮೇಶ್ವರನು ಮಂದಹಾಸದೊಡನೆ ನೋಡಿ ಸಂತೋಷಪಡುವನು. ॥೩೧॥

ಹೀಗೆ ವಿಹರಿಸಿ ಶಂಕರನು ಇಂದ್ರನೀಲಮಣಿಯಿಂದ ನಿರ್ಮಿತವಾದ ದಿವ್ಯ ಪ್ರಾಸಾದವನ್ನು ಹೊಂದಿ, ಅಲ್ಲಿ ಚಂದ್ರಕಾಂತಿಯಿಂದ ಹೊಳೆಯುವ ದಿವ್ಯವಾದ ಮಂಚದ ಮೇಲೆ ಮಲಗಿಕೊಳ್ಳುವನು. ಆಗ ದೇವಿಯು ತನ್ನ ಕಮಲದಂತಿರುವ ಹಸ್ತಗಳಿಂದ ಪರಶಿವನ ಪಾದಗಳನ್ನು ಒತ್ತುವಳು. ಆಮೇಲೆ ಮುಂಭಾಗದ ರಂಗಸ್ಥಳದಲ್ಲಿ ಕುಳಿತು ವೀಣೆಯ ಮೇಲೆ ಶಂಕರನ ನಾಮಗಳನ್ನು ನುಡಿಸುವಳು. ಮತ್ತು ಹಾಡುವಳು. ॥೩೨॥

ಹೀಗಿರುವ ಶಂಕರ ಪಾರ್ವತಿಯರ ಮುಂಭಾಗದಲ್ಲಿ ರತ್ನಮಯವಾದ ಸೌಧಭಾಗದಲ್ಲಿ ಯುವತಿಯರೂ, ಕುಚಭರದಿಂದ ಸುಂದರಿಯರೂ ಆದ ರುದ್ರಾಣಿ

ಮಲ್ಲೀಗುಚ್ಛಕಚಾನತಕರಾಃ ಪ್ರೋದ್ಯಜ್ಝಣನ್ನೂಪುರಾಃ
ಕೈಲಾಸಾಚಲಮೌಲಿಗಾಸ್ಸುಮಧುರಂ ಗಾಯಂತಿ ನೃತ್ಯಂತಿ ಚ ॥೩೩॥

ವಿಶ್ವೇಶ ವಿಶ್ವಾಧಿಕ ದೀನಬಂಧೋ
ಪಾಹೀಶ ಶಂಭೋ ದಯಯಾರ್ದ್ರದೃಷ್ಟ್ಯಾ ।
ಪಾಹಿ ಪ್ರಸೀದ ಮದಮತ್ತಮರಾಲರಾಜ
ಮಾತಂಗಜೈತ್ರಗಮನೇ ಜಗತಾಂ ಜನಿತ್ರಿ ॥೩೪॥

ಆಸಪ್ತಲೋಕಾವಧಿ ಶೈಲಮೌಲಾ
ಸ್ವಶೇಖರಾಪಾರತ್ವಿಷಾ ತಿರಸ್ಕೃತೌ ।
ತತ್ರಸ್ಥಾ ಏವ ಪ್ರಣಮಂತಿ ದೇವಾ
ಸ್ತೌ ಚಂದ್ರಸೂರ್ಯೌ ಗತಿವರ್ಜಿತೌ ಭಯಾತ್ ॥೩೫॥

---

ಯರು ನಾಟ್ಯವಿಶೇಷಗಳನ್ನು ತೋರ್ಪಡಿಸುತ್ತಾ ಕ್ರೀಡಿಸುವರು. ಮತ್ತು ಮಲ್ಲಿಗೆಯ ದಂಡೆಯನ್ನು ತಲೆಯಲ್ಲಿ ಮುಡಿದು, ಧ್ವನಿಮಾಡುವ ಕಾಲುಬಳೆಯನ್ನು ಹಾಕಿಕೊಂಡು, ಕೈಲಾಸಪರ್ವತಾಗ್ರದಲ್ಲಿ ಮಧುರವಾಗಿ ಹಾಡುತ್ತಾ, ನರ್ತನಮಾಡುವರು. ॥೩೩॥

ಆ ರುದ್ರಾಣಿಯರು ಈ ಅರ್ಥದ ಪದ್ಯಗಳನ್ನು ಹಾಡುವರು. " ಲೋಕೇಶ್ವರನೇ, ಲೋಕಾತೀತನೇ, ದೀನಬಂಧುವೇ, ನಮ್ಮನ್ನು ರಕ್ಷಿಸು. ದಯಾದೃಷ್ಟಿಯಿಂದ ನಮ್ಮನ್ನು ನೋಡು. ಲೋಕಮಾತೆಯೇ, ಮದಿಸಿದ ರಾಜಹಂಸದಂತೆಯೂ, ಮತ್ತಮಾತಂಗದಂತೆಯೂ ಮಂದಗಮನವುಳ್ಳ ತಾಯಿಯೇ, ನಮಗೆ ಪ್ರಸನ್ನಳಾಗು." ॥೩೪॥

ಕೈಲಾಸಪರ್ವತದ ಶಿಖರವು ಮೇಲಿನ ಏಳುಲೋಕಗಳನ್ನೆಲ್ಲಾ ಭೇದಿಸಿಕೊಂಡು ಹೋಗಿದೆ. ಅಲ್ಲದೆ ಆ ಶಿಖರವು ತನ್ನ ಕಾಂತಿಯಿಂದ ಸೂರ್ಯಚಂದ್ರರನ್ನು ಮೀರಿದ್ದಾಗಿದೆ. ಇದನ್ನು ನೋಡಿದ ಚಂದ್ರಸೂರ್ಯರು ಈ ಶಿಖರವನ್ನು ದಾಟಿ ಹೋಗಲಾರದೆ ಭಯದಿಂದ ಅಲ್ಲಿಯೇ ನಿಂತುಬಿಡುವರು. ಉಳಿದ ದೇವತೆಗಳೂ ಅಲ್ಲಿಯೇ ನಿಂತು ಪರಮೇಶ್ವರನಿಗೆ ನಮಸ್ಕರಿಸುತ್ತಿರುವರು. ಅಷ್ಟು ಉನ್ನತವಾಗಿ ಕಾಂತಿಮತ್ತಾಗಿರುವುದು, ಆ ಪರ್ವತಶಿಖರ. ॥೩೫॥

ಮಹೇಶ್ವರಾಪಾರದಯಾವಿಧಾನಂ
ಸುಧಾಬ್ಧಿಕಲ್ಲೋಲಿತಪಾದಪೀಠಂ ।
ಸಮುಲ್ಲಿಖಂತಂ ಶಿಖರೈರಪಾರೈ
ರ್ಲೋಕಾಂಸ್ತ್ವಹೋ ತಂ ಕಲಧೌತಶೈಲಂ ॥೩೬॥

ಶೋಶುಭ್ಯೇತ ಸದೈವ ತತ್ರ ನ ದಿವಾ
ರಾತ್ರಿರ್ಮಹೇಶಾಶ್ರಯಾತ್ ।
ನೋ ಗಂಧರ್ವಮರುದ್ಗಣಾ ಮುನಿಗಣಾ
ನೋ ಬ್ರಹ್ಮವಿಷ್ಣೂ ಸುರಾಃ ॥೩೭॥

ನೋ ವಾತಿ ವಾಯುಃ ಪ್ರಸಭಂ ಹಿ ತತ್ರ
ತಿಗ್ಮಾಂಶುಶೀತಾಂಶುರುಭೌ ಹಿ ಬಿಭ್ಯತಃ ।
ಅಗ್ನಿರ್ನದೃಷ್ಟಸ್ಸ್ವಶಿಖಾವಲೀಢಂ
ಕಕ್ಷೇಷು ತತ್ಕೀಚಕವೇಣುಸಂಘೇ ॥೩೮॥

---

ಕೈಲಾಸವು ಮಹೇಶ್ವರನ ಅಪಾರದಯೆಗೆ ಮುಖ್ಯಪಾತ್ರವಾಗಿದೆ. ಅಮೃತ ಸಮುದ್ರವು ಕೈಲಾಸಪರ್ವತದ ಪಾದಪ್ರದೇಶವನ್ನು ತನ್ನ ಅಲೆಗಳಿಂದ ತೊಳೆಯುತ್ತಿರುವುದು. ಸಮಸ್ತ ಊರ್ಧ್ವಲೋಕಗಳನ್ನೂ ಇದರ ಶಿಖರವು ಗೀಚುತ್ತಿರುವುದು. ಸ್ವಭಾವವಾಗಿ ಅತ್ಯಂತ ಶುಭ್ರವಾಗಿರುವ ಈ ಕೈಲಾಸವು ಒಟ್ಟಿನಲ್ಲಿ ಬಹು ಆಶ್ಚರ್ಯಕರವಾಗಿ ರಜತಮಯವಾಗಿ ಕಾಣುತ್ತಿರುವುದು. ॥೩೬॥

ಕೈಲಾಸಪರ್ವತದಲ್ಲಿ ಮಹೇಶ್ವರನು ನೆಲಸಿರುವುದರಿಂದ ಅದು ಸರ್ವದಾ ಏಕರೀತಿಯಲ್ಲಿ ಪ್ರಕಾಶಿಸುತ್ತಿರುವುದು. ಹಗಲು ರಾತ್ರಿಗಳ ವ್ಯತ್ಯಾಸವೇ ಅಲ್ಲಿ ತಿಳಿಯುವುದಿಲ್ಲ. ಅಲ್ಲದೆ, ಯಾವ ಗಂಧರ್ವರೇ ಆಗಲಿ, ಮರುದ್ಗಣಗಳೇ ಆಗಲಿ, ಮುನಿಗಳಾಗಲಿ ಅದನ್ನು ಸುಲಭವಾಗಿ ಹೊಂದಲಾರರು. ಹೆಚ್ಚೇನು? ಬ್ರಹ್ಮ, ವಿಷ್ಣು ಮೊದಲಾದ ಸುರಶ್ರೇಷ್ಠರಿಗೂ ಆ ಪರ್ವತವು ದುರ್ಲಭವಾದದ್ದಾಗಿರುವುದು. ॥೩೭॥

ಗಾಳಿಯು ಬಿರುಸಾಗಿ ಎಂದೂ ಅಲ್ಲಿ ಬೀಸುವುದಿಲ್ಲ. ಸೂರ್ಯಚಂದ್ರರು ಹೆದರಿ ತಮ್ಮ ಕಾಂತಿಯನ್ನು ಎಂದಿಗೂ ಹೆಚ್ಚಾಗಿ ಪ್ರಸರಿಸುವುದಿಲ್ಲ. ಅಗ್ನಿಯು ಅಲ್ಲಿ ಬೆಳೆದಿರುವ ಬಿದಿರುಮೆಳೆಗಳ ಗುಂಪಿನಲ್ಲಿ ಯಾವಾಗಲೂ ತನ್ನ ಜ್ವಾಲೆಯನ್ನು ಬೀರಲಾರನು. ಇದರಿಂದ ಕಾಡುಕಿಚ್ಚೆಂಬುದು ಅಲ್ಲಿ ಸ್ವಪ್ನಪ್ರಾಯವಾಗಿದೆ. ॥೩೮॥

**ಏಕೋ ರುದ್ರ ಇತಿ ಶ್ರುತಿಸ್ತದಿತರೋ ನಾಸ್ತ್ಯೇವ ತತ್ರಾಗಮೋ**
**ದೇವ್ಯಾ ದತ್ತಕರಸ್ಸದೈವ ಪಶುಪಸ್ತತ್ರೈವ ಸಂಚಾರ್ಯಸೌ ।**
**ಪಶ್ಯನ್ ಲಿಂಗಕದಂಬಕಂ ಗಿರಿವರಂ ಫುಲ್ಲದ್ರುಮಾಣಾಂ ಗಣಂ**
**ತತ್ರಾಸಾರಸುಗೋಪುರಾಂಕಣಗತಸ್ಸ್ವೈರಂ ಸದಾ ಶಂಕರಃ ॥೩೯॥**

**ತತ್ಪ್ರಾಕಾರವರ್ಯೈಕರಕ್ಷಣಚಣಾಸ್ಸಂತ್ಯೇವ ಕೋಟ್ಯೋ ಗಣಾ**
**ರುದ್ರಾಣ್ಯಶ್ಚ ಚರಂತಿ ತಸ್ಯ ಸವಿಧಂ ನಾನ್ಯೇ ಗಣಾ ವಾ ಸುರಾಃ ।**
**ವಾತೋಪಿ ನ ಪ್ರಚಲತಿ ದ್ಯುಮಣೇಃ ಕರಾ ವಾ**
**ಸೋಮಸ್ಯ ಸುಂದರಕರಾಃ ಪ್ರಭವಂತಿ ನೈವ ॥೪೦॥**

**ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ಕೈಲಾಸಮೌಲಿವರ್ಣನಂ ನಾಮ ಅಷ್ಟಾದಶೋಽಧ್ಯಾಯಃ**

---

ಸಮಸ್ತ ಶ್ರುತಿಗಳೂ, ನಿಖಿಲಾಗಮಶಾಸ್ತ್ರಗಳೂ, ಲೋಕದಲ್ಲಿ ಶಿವನೊಬ್ಬನೇ ದೇವರು, ತದ್ಭಿನ್ನವಾದ ಮತ್ತೊಂದು ಪೂಜ್ಯವಸ್ತುವಿಲ್ಲವೆಂದು ಸದಾ ಘೋಷಿಸುತ್ತಿವೆ. ಅಂತಹ ಪರಶಿವನು ಸದಾ ದೇವಿಯೊಡಗೂಡಿ ಅಜ್ಞಾನಿಗಳನ್ನು ರಕ್ಷಿಸುತ್ತಾ, ವೃಷಭಾರೂಢನಾಗಿ, ಕೈಲಾಸದಲ್ಲಿರುವನು. ಮತ್ತು ಅಲ್ಲಿರುವ ಸಮಸ್ತ ಶಿವಲಿಂಗಗಳನ್ನೂ, ಅರಳಿದ ಪುಷ್ಪಗಳನ್ನೂ, ಚಿಗುರಿದ ಮರಗಳನ್ನೂ, ನೋಡುತ್ತಾ ಮನೋಹರವಾದ ಶಿಖರಗಳಿಂದಲೂ, ಗೋಪುರಗಳಿಂದಲೂ ರಮಣೀಯವಾಗಿರುವ ಕೈಲಾಸದಲ್ಲಿ ಆನಂದಮಯನಾಗಿ ಸಂಚರಿಸುತ್ತಿರುವನು. ॥೩೯॥

ಆ ಕೈಲಾಸಪರ್ವತದ ಶಿವಾಲಯಪ್ರಾಕಾರದ ರಕ್ಷಣೆಗಾಗಿ ಕೋಟಿಸಂಖ್ಯೆಯ ಶಿವಗಣಗಳು ಸಿದ್ಧವಾಗಿವೆ. ಪರಶಿವನ ಅಕ್ಕಪಕ್ಕದಲ್ಲಿ ರುದ್ರಾಣಿಯರ ವಿನಾ ಮತ್ತಾವದೇವತೆಗಳ ಸುಳಿವೂ ತೋರಿಬರುವುದಿಲ್ಲ. ವಾಯುವೂ ಅಲ್ಲಿ ವೇಗವಾಗಿ ಬೀಸಲಾರದು. ಸೂರ್ಯನು ತನ್ನ ತೀಕ್ಷ್ಣಕಿರಣಗಳನ್ನಾಗಲಿ, ಚಂದ್ರನು ಶೀತಲವಾದ ಕಾಂತಿಯನ್ನಾಗಲಿ ಅಲ್ಲಿ ಎಂದಿಗೂ ಬೀರುವುದಿಲ್ಲ. ಇದೆಲ್ಲಕ್ಕೂ ಮಹೇಶ್ವರನ ತೇಜಸ್ಸೇ ಮುಖ್ಯಕಾರಣ. ॥೪೦॥

ಇಲ್ಲಿಗೆ ಶಿವರಹಸ್ಯದ ಪ್ರಥಮಾಂಶದಲ್ಲಿ ಕೈಲಾಸಮೌಲಿ ವರ್ಣನೆಯೆಂಬ ಹದಿನೆಂಟನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

# ಅಥ ಶ್ರೀಶಿವರಹಸ್ಯೇ

## ಏಕೋನವಿಂಶೋಽಧ್ಯಾಯಃ

### ಕೈಲಾಸವರ್ಣನಂ

|| ಸ್ಕಂದ ಉವಾಚ ||

**ತದಂತರಾಸ್ತಿ ಪ್ರಾಕಾರೋ ವೈಡೂರ್ಯಮಣಿಕಲ್ಪಿತಃ ।**
**ರಾಜಲ್ಲಲಾಮವೃಷಭೈರ್ವೈಡೂರ್ಯಮಣಿಕಲ್ಪಿತೈಃ ॥೧॥**

**ತತ್ಸೂತ್ರಸಂಕ್ರಮಾಕ್ರಾಂತಿಕಾಂಚಿತಾಖಿಲಪರ್ವತಃ ।**
**ನಿಷ್ಟಪ್ತರಜತೋದ್ಭಾಸ್ತತ್ತತ್ಕಾಂತ್ಯಾ ಪೀತವತ್ ಸ್ಥಿತಃ ॥೨॥**

**ತತ್ರ ಪುಷ್ಪವನಂ ದಿವ್ಯಂ ನಾನಾರತ್ನಗಣಾನ್ವಿತಂ ।**
**ನೀಲಗೋಮೇದಹೀರೈಶ್ಚ ಪುಷ್ಪರಾಗೈಃ ಪ್ರವಾಲಕೈಃ ॥೩॥**

---

ಶ್ರೀಶಿವರಹಸ್ಯದಲ್ಲಿ ಹತ್ತೊಂಬತ್ತನೆಯ ಅಧ್ಯಾಯ

ಕೈಲಾಸಪರ್ವತದ ಶಿಖರಗಳ ಮಧ್ಯಭಾಗದಲ್ಲಿ ವೈಡೂರ್ಯಮಣಿಗಳಿಂದ ರಂಜಿತವಾದ ಒಂದು ಪ್ರಾಕಾರವಿದೆ. ಅದರಲ್ಲಿ ವೈಡೂರ್ಯಮಣಿಗಳಿಂದಲೇ ನಿರ್ಮಿತವಾಗಿ ಬಹಳವಾಗಿ ವಿರಾಜಿಸುವ ಬಸವನ ವಿಗ್ರಹಗಳು ಅನೇಕವಾಗಿವೆ. ||೧||

ಅವುಗಳ ಸೂತ್ರದಿಂದ ಹುಟ್ಟಿದ ಕಾಂತಿಯು ಸಮಸ್ತ ಪರ್ವತಗಳ ಮಧ್ಯಭಾಗಕ್ಕೆ ಸೇರಿ ಅದು ಒಂದು ಒಡ್ಯಾಣದಂತೆ ಕಾಣುತ್ತಿದೆ. ಪರ್ವತದ ಕಾಂತಿಯು ಬೆಳ್ಳಿಯಂತೆ ಶುಭ್ರವಾಗಿ ಹರಡಿರುವುದರಿಂದಲೂ, ಸೂತ್ರಗಳ ಕಾಂತಿಯು ಹೊಂಬಣ್ಣವಾಗಿರುವುದರಿಂದಲೂ, ವಿಲಕ್ಷಣವಾದ ಕಾಂತಿಯುಳ್ಳದ್ದಾಗಿರುವುದು. ||೨||

ಅಲ್ಲಿಯೇ ಒಂದು ಪುಷ್ಪವನವಿರುವುದು. ಅದರಲ್ಲಿ ನಾನಾವಿಧವಾದ ರತ್ನಗಳಿರುವುವು. ನೀಲ, ಗೋಮೇದಕ, ಹೀರಮಣಿ, ಇವುಗಳೂ ಸಹ ಪುಷ್ಯರಾಗಗಳಿಂದ ಕೂಡಿ ರಂಜಿಸುತ್ತಿರುತ್ತದೆ. ||೩||

ಕುರುವಿಂದೈರ್ಮರಕತೈರ್ಮುಕ್ತಾಭಿರಭಿಶೋಭಿತೈಃ ।
ನೀಲೋತ್ಪಲಾಮಲಜಲಂ ಕಾಸಾರಮಭಿತಸ್ಸ್ಥಿತಂ ॥೪॥

ಪ್ರವಾಲೈಸ್ಸ್ತಬಕೈಶ್ಚೈವ ಕಲಿಕೋತ್ಫುಲ್ಲಪುಷ್ಪಕೈಃ ।
ತತ್ತದ್ರತ್ನೈಶ್ಚ ಸಂಕ್ಲುಪ್ತೈರಿಂದ್ರಚಾಪನಿಭಪ್ರಭೈಃ ॥೫॥

ವಿತತಾಚ್ಛಮಣಿಭ್ರಾಜಚ್ಛಾಣೋಲ್ಲೀಢಕರಪ್ರಭೈಃ ।
ದ್ಯೋಭೂಮಿಸರ್ವಲೋಕೇಷು ತಾದೃಶಂ ನ ವನಂ ಕ್ವಚಿತ್ ॥೬॥

ಸೌಂದರ್ಯಸಾರಸರ್ವಸ್ವಂ ರಮ್ಯಂ ಮಂಜುಳಮಾರುತಂ ।
ಸುವರ್ಣಚಂಪಕೋತ್ಫುಲ್ಲಧೂಲಿಕೋದ್ಯತ್ಸಮೀರಣಂ ॥೭॥

---

ಕುರುವಿಂದಮಣಿ, ಪಚ್ಚೆ, ಮುತ್ತು ಇವುಗಳಿಂದ ಅಲಂಕೃತವಾಗಿ, ಆ ವನದ ಮಧ್ಯದಲ್ಲಿ ಇರುವ ಒಂದು ಕೊಳದ ಸುತ್ತಲೂ ನೀಲೋತ್ಪಲಗಳು ಅಮಲವಾದ ಕಾಂತಿಯಿಂದ ವಿರಾಜಿಸುತ್ತಿರುವುವು. ॥೪॥

ಆ ವನದಲ್ಲಿ ಹವಳದ ಬಳ್ಳಿಗಳೂ, ಹೂವಿನ ಗೊಂಚಲುಗಳೂ, ಅರಳಿದ ಮೊಗ್ಗುಗಳೂ, ಕಾಮನಬಿಲ್ಲಿನ ಕಾಂತಿಯನ್ನು ಬೀರುವ ಅದೇ ಬಣ್ಣಗಳ ರತ್ನಗಳೂ ಅಲ್ಲಿ ವಿರಾಜಿಸುತ್ತಿರುವುವು. ॥೫॥

ಆ ಉದ್ಯಾನದಿಂದ ಹೊರಡುವ ಕಾಂತಿಯಾದರೊ, ಸಾಣೆಹಿಡಿದು ಹೊಳಪು ಗೊಟ್ಟಿರುವ ನಿರ್ಮಲವಾದ ರತ್ನಗಳ ಕಾಂತಿಗೆ ಸದೃಶವಾಗಿ ಕಾಣುತ್ತಿರುವುದು. ಒಟ್ಟಿನಲ್ಲಿ ಅಂತಹ ಉದ್ಯಾನವು, ಸ್ವರ್ಗ, ಮರ್ತ್ಯವೇ ಮೊದಲಾದ ಯಾವ ಲೋಕಗಳಲ್ಲಿಯೂ ಕಂಡುಬರಲಾರದು. ॥೬॥

ಸೌಂದರ್ಯದ ಸಾರವೇ ಆ ಉದ್ಯಾನವೆನ್ನಬಹುದು. ಇಂಚರವಿಡುವ ಪಕ್ಷಿಗಳ ಧ್ವನಿಯಿಂದಲೂ, ಸುವರ್ಣದಿಂದ ರಂಜಿಸುವ ಸಂಪಿಗೆ ಮೊದಲಾದ ಪುಷ್ಪ ಪರಾಗದಿಂದ ಕೂಡಿ ಬೀಸುವ ಮಂದಮಾರುತದಿಂದಲೂ ಆ ವನವು ನೋಡುವವರಿಗೆ ರಮ್ಯವಾಗಿ ಕಾಣುತ್ತಿರುವುದು. ॥೭॥

ತದ್ವಾತಸ್ಪರ್ಶನೇನಾಪಿ ಬ್ರಹ್ಮವಿಷ್ಣುಮಹೇಶ್ವರಾಃ ।
ಕೃತಕೃತ್ಯಾ ಭವಂತ್ಯೇವ ತದಾ ಧನ್ಯತರಾಸ್ಸುರಾಃ ॥೮॥

ಹರಿನ್ಮಣಿನಿಭಾಕಾರೈಃ ಕೇಕ್ಯಾಲಂಬಿತತತ್ಸುನ್ಯೈಃ ।
ಪ್ರಫುಲ್ಲತತ್ಸುಮಾಮೋದಧೂಲೀಕೇಲಿಸುಗಂಧಿಧೃಕ್ ॥೯॥

ಪಾಟಲಾಮೋದವಹಲಮಿಂದೀವರಗಣಾವೃತಂ ।
ಭ್ರಮುತ್ಸಾರಂಗಸಂಲೂನನವಶಾದ್ವಲಸುಂದರಂ ॥೧೦॥

ಶಷ್ಪಾವೃತೇನ ಭೂರ್ಭಾತಿ ಮಹಾಮರಕತೋಪಲೈಃ ।
ಸ್ವಚ್ಛಂದಚಮರೀಪುಚ್ಛವೀಜನೋದ್ಗೀತಷಟ್ಪದೈಃ ॥೧೧॥

ಕರ್ಣಿಕಾರೈಸ್ಸ್ವರ್ಣವರ್ಣೈರ್ನಭೋ ಭಾತಿ ಹಿರಣ್ಮಯಂ ।
ಶುಭ್ರಾಭ್ರಚಯಸಂಕಾಶಕಾಶಮಂದಾರಸಂಯುತಂ ॥೧೨॥

---

ಆ ವನದ ವಾಯುಸ್ಪರ್ಶದಿಂದಲೇ ತ್ರಿಮೂರ್ತಿಗಳು ಕೃತಕೃತ್ಯರೆನಿಸುವರು. ಉಳಿದ ದೇವತೆಗಳು ಅದರಿಂದ ತಾವು ಧನ್ಯರಾದೆವೆಂದು ಭಾವಿಸುವರು. ॥೮॥

ಇಂದ್ರನೀಲಮಣಿಯಂತೆ ಹೊಳೆಯುತ್ತಾ ನವಿಲುಗಳು ಕೇಕಾಧ್ವನಿ ಮಾಡುತ್ತಾ ಓಡಾಡುತ್ತಿರುವುವು. ಮತ್ತು ಅರಳಿದ ವಿಧವಿಧವಾದ ವಾಸನೆಗಳಿಂದಲೂ, ಪುಷ್ಪರೇಣುಗಳಿಂದಲೂ, ಕೂಡಿ ಬೀಸುವ ವಾಯುವು ಅಲ್ಲಲ್ಲಿ ಸಂಚರಿಸುತ್ತಿರುವುದು. ॥೯॥

ಪಾದರೀಹೂವಿನ ವಾಸನೆಯೂ, ಕಮಲಗಳ ಸಾಲಿನ ಸೊಬಗೂ ಆ ಉದ್ಯಾನದಲ್ಲಿ ಕಂಡುಬರುವುದು. ಅಲ್ಲಿ ಬೆಳೆದಿರುವ ಮೃದುವಾದ ಹುಲ್ಲನ್ನು ಅಲ್ಲಲ್ಲಿ ಓಡಾಡುವ ಸಾರಂಗಗಳು ಕಚ್ಚಿತಿಂದು ಅವುಗಳನ್ನು ಅರ್ಧಚ್ಛಿದ್ರವನ್ನಾಗಿ ಮಾಡಿವೆ.॥೧೦॥

ಮರಕತ ಮಣಿಯಂತೆ ಹಸುರಾಗಿರುವ ಹುಲ್ಲುಗರಿಕೆಗಳಿಂದ ಆ ವನವು ಮತ್ತೂ ರಮ್ಯವಾಗಿರುವುದು. ಸ್ವೇಚ್ಛೆಯಾಗಿ ಬಾಲವನ್ನು ಅಲ್ಲಾಡಿಸುತ್ತಾ ಓಡಾಡುವ ಚಮರೀಮೃಗಗಳ ಬಾಲಗಳ ಬೀಸುವಿಕೆಯಿಂದ ಮೇಲೆದ್ದು ಭ್ರಮರಗಳು ಇಂಪಾಗಿ ಧ್ವನಿಗೈಯ್ಯುತ್ತಿರುವುವು. ॥೧೧॥

ಚಿನ್ನದಬಣ್ಣದ ಕರ್ಣಿಕಾರ ಪುಷ್ಪಗಳ ಕಾಂತಿಯಿಂದ ಅಂತರಿಕ್ಷವೂ ಸಹ ಹಿರಣ್ಮಯವಾಗಿದೆಯೋ ಎಂಬಂತೆ ತೋರುತ್ತಿರುವುದು. ಒಂದುಕಡೆ ಶುಭ್ರವಾದ

ರಕ್ತಾಚ್ಛಮಣಿಮಂದಾರಫುಲ್ಲಕೋರಕಕೈಶ್ಶುಭೈಃ ।
ತದ್ಗಂಧಬಂಧುರಾಮೋದಶೀತಬಂಧುರಮಾರುತಂ ॥೧೩॥

ತಮಾಲಸಾಲಜೋದ್ವಾಮಘುರ್ಘರಾರಾವಭೀಷಣಂ ।
ಆರಗ್ವಧಸುಮಾಲೋತ್ಥಫುಲ್ಲಮಂಜರಿಶೋಭಿತಂ ॥೧೪॥

ಶುಕತುಂಡಪ್ರಭಾಸ್ವಚ್ಛಪಲಾಶೈರ್ಗುಚ್ಛಸುಂದರೈಃ ।
ಫುಲ್ಲಪುನ್ನಾಗಜೈಶ್ಚೈವ ಸುಮೈಸ್ತತ್ಕೋರಕೈರಪಿ ॥೧೫॥

ನಭೋವಿಕೀರ್ಣತಾರಾಭಂ ಭಾತಿ ಮುಕ್ತಾಇವಾಧಿಕಂ ।
ದೇವದಾರುಸುಮೈಃ ಫುಲ್ಲೈಃ ಕದಂಬಾಲಂಬಿಗುಚ್ಛಕೈಃ ॥೧೬॥

---

ಆಕಾಶದ ಕಾಂತಿಯಿಂದ, ಉದ್ಯಾನವನದಲ್ಲಿರುವ ಕಾಶಪುಷ್ಪಗಳೂ, ಮಂದಾರಪುಷ್ಪಗಳೂ, ಆಕಾಶವರ್ಣವನ್ನು ಹೊಂದಿದವುಗಳಾಗಿ ಪ್ರಕಾಶಿಸುತ್ತಿವೆ. ॥೧೨॥

ಕೆಂಪುರತ್ನದಂತೆ ವಿರಾಜಿಸುವ ಮಂದಾರಪುಷ್ಪಗಳೂ, ಅರಳಿದ ಮೊಗ್ಗುಗಳು ಬಹಳವಾಗಿವೆ. ಅವುಗಳ ವಾಸನೆಯುಂತೂ, ಶೀತಮಾತಗಳಿಂದ ಚದರಲ್ಪಟ್ಟು ಹೃದಯಾಹ್ಲಾದಕವಾಗಿರುತ್ತದೆ. ॥೧೩॥

ಹೊಂಗೆಯ ಮತ್ತು ಸಾಲವೃಕ್ಷಗಳಲ್ಲಿ ಬೀಸುವ ವಾಯುವು ಭಯಂಕರವಾಗಿ ಬೀಸುವುದು. ಕಕ್ಕೇಗಿಡಗಳ ಸಾಲಿನಲ್ಲಿ ಬೀಸುವ ವಾಯುವಾದರೋ ಸುವಾಸನಾಯುಕ್ತವಾಗಿ ಪುಷ್ಪರೇಣುಗಳಿಂದ ಕೂಡಿರುವುದು. ॥೧೪॥

ಗಿಳಿಯ ಕೊಕ್ಕಿನಂತೆ ರಕ್ತವರ್ಣವಾಗಿ ಹೊಳೆಯುವ ಮುತ್ತುಗದಹೂವುಗಳೂ, ಅರಳಿದ ನಾಗಸಂಪಿಗೆ, ಸುಗಂಧಮಯುವಾದ ಹೂಗಳೂ, ಮೊಗ್ಗುಗಳೂ ಅಲ್ಲಿ ವಿಶೇಷವಾಗಿರುವುವು. ॥೧೫॥

ಆ ಉದ್ಯಾನದಲ್ಲಾದರೋ, ದೇವದಾರುವೃಕ್ಷಗಳ ಹೂವು, ಕದಂಬಪುಷ್ಪಗಳು ಇವು ಗೊಂಚಲುಗೊಂಚಲಾಗಿ ಕಂಡುಬರುತ್ತಿರುವುವು. ಇವುಗಳಿಂದ ತುಂಬಿದ ಆ ಉದ್ಯಾನವು, ಅಂತರಿಕ್ಷದಲ್ಲಿ ಹೊಳೆಯುವ ನಕ್ಷತ್ರಗಳಂತೆಯೂ, ಮುತ್ತಿನ ಗೊಂಚಲಂತೆಯೂ ಹೊಳೆಯುತ್ತಿರುವುದು. ॥೧೬॥

ಶೇಫಾಲಿಗುಚ್ಛೈರಾತಾಮ್ರೈಃ ಕುಬ್ಜಾಮ್ರನಿಬಿಡಚ್ಛದೈಃ ।
ಕುರವಾಮೋದವಕುಲಮಂಜರೀಭಿರ್ಮನೋಹರಂ ॥೧೭॥

ಉದ್ಯದಿಂದುಕರಸ್ವಚ್ಛಗುಚ್ಛೈರಲ್ಲಕಸಲ್ಲಕೈಃ ।
ಭಲ್ಲಭಲ್ಲಾತಕೋದ್ದಾಮಪಾರಿಭದ್ರೋದ್ಭವೈಸ್ಸುಮೈಃ ॥೧೮॥

ತಮಾಲಪಿಪ್ಪಲೀಗುಚ್ಛಸುಮಾಮೋದಿತಮಾರುತಂ ।
ಉಗ್ರಗಂಧಾಯಿತದಿಶಾಸಮೂಹೈರ್ಮಧುಕೋದ್ಭವೈಃ ॥೧೯॥

ಪತತ್ಸುಮೈಶ್ಚ ಭೂರ್ಭಾತಿ ತಾರಾ ಇವ ನಭಶ್ಚ್ಯುತಾಃ ।
ಪುಣ್ಯಕ್ಷಯಾದಿವೋತ್ತುಂಗಾ ಯಥಾ ಸುಕೃತಿನೋಽಫಲಾಃ ॥೨೦॥

ಪನಸೋದ್ದಾಮಮೂಲಸ್ಥಫಲಭಾರಾವನಾಮಿತಂ ।
ಸುವರ್ಣಕಂದುಕಾಕಾರವಿಲಸಲ್ಲಿಕುಚೈರಪಿ ॥೨೧॥

---

ಗಿಡ್ಡಾಗಿ ಬೆಳೆದು ಬಗ್ಗಿರುವ ಮಾವಿನಮರದ ಚಿಗುರುಗಳು ಕೆಂಪಾಗಿ, ಭ್ರಮರಗಳ ಗುಂಪಿನಿಂದ ಪ್ರಕಾಶಮಾನವಾಗಿವೆ. ಕುರವಪುಷ್ಪಗಳು, ವಕುಲಪುಷ್ಪಗಳು ಗೊಂಚಲುಗೊಂಚಲಾಗಿ ಬೆಳೆದು ಬಗ್ಗಿರುವುವು. ॥೧೭॥

ಅರಳಿದ ಸರ್ಜಪುಷ್ಪಗಳೂ, ಭಲ್ಲಾತಕ (ಬಿಳೀಗೋರಂಟೀ), ಪಾರಿಭದ್ರ (ಹಂದರುಪುಷ್ಪ) ಹೂವುಗಳು ಉದಯಕಾಲದ ಚಂದ್ರನಂತೆ ಶುಭ್ರವಾಗಿ ಹೊಳೆಯುತ್ತಿರುವುವು. ॥೧೮॥

ಹೊಂಗೆ, ಹಿಪ್ಪಲೀ ಈ ಮರಗಳ ವಾಸನೆಯನ್ನು ಹೊಂದಿ ವಾಯುವು ದಿಕ್ಕುಗಳನ್ನೆಲ್ಲಾ ಕಟುವಾಸನೆಯುಳ್ಳದ್ದನ್ನಾಗಿ ಮಾಡಿದೆ. ಪ್ರತಿದಿಕ್ಕೂ ಈ ವಾಸನೆಯಿಂದ ದುಂಬಿಗಳನ್ನು ಹೊಂದಿಕೊಂಡು ಝೇಂಕಾರಮಾಡುವಂತಿದೆ. ॥೧೯॥

ಸುಕೃತಿಗಳು ಸ್ವರ್ಗದಲ್ಲಿ ತಮ್ಮ ಪುಣ್ಯಫಲವನ್ನು ಅನುಭವಿಸಿಕೊಂಡು ಮತ್ತೆ ಭೂಲೋಕಕ್ಕೆ ಬಿದ್ದು ಜನ್ಮತಾಳುವಂತೆ ಹೂವುಗಳು ಮರಗಳಿಂದ ಕಳಚಿಕೊಂಡು ಕೆಳಗೆ ಬಿದ್ದಿರುವುವು. ಇದನ್ನು ನೋಡಿದರೆ ನಕ್ಷತ್ರಗಳು ಅಂತರಿಕ್ಷದಿಂದ ಭೂಮಿಗೆ ಜಾರಿ ಬಿದ್ದಿವೆಯೋ ಎಂಬಂತಿದೆ. ॥೨೦॥

ದಪ್ಪವಾದ ಹಲಸಿನ ಹಣ್ಣುಗಳನ್ನು ಹೊರಲಾರದೆ, ಹಲಸಿನ ಮರವೇ ನೆಲಕ್ಕೆ ಬಗ್ಗಿರುವಂತೆ, ಹಲಸಿನ ಮರದ ಬುಡದಲ್ಲಿ ಹಣ್ಣುಗಳು ತುಂಬಿರುತ್ತವೆ.

ಸೌರಭಾಮೋದಪಕ್ವೋದ್ಯಚ್ಛಲಾಟುಕುಲಕೈರಪಿ ।
ಉತ್ತುಂಗಮಾತುಲುಂಗೈಶ್ಚ ಸ್ಥೂಲನಿಮ್ನೋರುಶಾಖಕೈಃ ॥೨೨॥

ರಸಗರ್ಭರಸಾಲೈಶ್ಚ ಕಮ್ರಕಾಮ್ರಜಜ್ಜೈಃ ಫಲೈಃ ।
ಮಹಾನೀಲಮಣಿಪ್ರಖ್ಯೈರ್ಜಂಬುಕಾರಂಜಕೈರ್ವೃತಂ ॥೨೩॥

ಅನಮ್ರದಾಡಿಮೋತ್ಫುಲ್ಲಸುಮೈಸ್ಸ್ಫುಟಿತತತ್ಫಲೈಃ ।
ಅಂಕೋಲಕೈಶ್ಶಿರೀಷೈಶ್ಚಾಪ್ಯರ್ಜುನಭ್ರಾಜಿಗುಚ್ಛಕೈಃ ॥೨೪॥

ಪಕ್ವಬಿಲ್ವಫಲಾಮೋದತತ್ಸುಮೋದ್ಬುದ್ಧಗಂಧಿತಂ ।
ಪತತ್ಕಪಿತ್ಥನಿವಹೈಸ್ತಥೈವಾಮಲಕಾದಿಭಿಃ ॥೨೫॥

---

ಹಣ್ಣಾದ ಗಜನಿಂಬೆಯು ಚಿನ್ನದ ಚೆಂಡಿನಂತೆ ಪ್ರಕಾಶಮಾನವಾಗಿ ಕಾಣುತ್ತಿರುವುದು. ॥೨೧॥

ಸುವಾಸನೆಯಿಂದಲೂ, ಅರ್ಧಪಕ್ವವಾಗಿರುವುದರಿಂದಲೂ, ದೋರಹಣ್ಣುಗಳು ಅಲ್ಲಲ್ಲಿ ಬಿದ್ದು ಚಲ್ಲಾಡುತ್ತಿರುವುವು. ಮಾದವಾಳದ ಹಣ್ಣುಗಳು (ಸೀನಿಂಬೆ) ದೊಡ್ಡ ಮತ್ತು ಕುಳ್ಳಾದ ಕೊಂಬೆಗಳಿಂದ ಕೂಡಿದ ಗಿಡಗಳಲ್ಲಿ ಬಹಳವಾಗಿ ಕಂಡುಬರುತ್ತಿವೆ. ॥೨೨॥

ರಸಭರಿತವಾದ ಬಾಳೆಹಣ್ಣುಗಳೂ, ಸುಂದರವಾದ ಮಾವಿನಹಣ್ಣುಗಳೂ, ನೀಲಮಣಿಯಂತಿರುವ ನೇರಲೆ, ಕಾರಂಜಿ ಈ ಹಣ್ಣುಗಳೂ ಅಲ್ಲಲ್ಲಿ ಕಾಣುತ್ತಿರುವುವು. ॥೨೩॥

ಬಗ್ಗಿರುವ ದಾಳಿಂಬೆಗಿಡಗಳಲ್ಲಿ ಕೆಂಪಾದ ಹೂವುಗಳೂ, ಬಿರಿದಿರುವ ಹಣ್ಣುಗಳೂ, ಸುಂದರವಾಗಿರುವುವು. ಅಲ್ಲದೆ, ಅಂಕೋಲ, ಬಾಗೆ, ಮತ್ತೀಮರ ಈ ವೃಕ್ಷಗಳಲ್ಲಿ ಸುಂದರತರವಾದ ಹೂಗೊಂಚಲುಗಳು ಬಹಳವಾಗಿರುವುವು. ॥೨೪॥

ಬಿಲ್ವವೃಕ್ಷದಿಂದ ಹಣ್ಣುಗಳೂ, ಹೂವುಗಳೂ ಸುಗಂಧಮಯವಾಗಿ ಅಲ್ಲಲ್ಲಿ ಬಿದ್ದಿರುವುವು. ಬೇಲದ ಹಣ್ಣುಗಳೂ, ನೆಲ್ಲಿಯ ಕಾಯಿಗಳೂ, ರಾಶಿರಾಶಿಯಾಗಿ ಅಲ್ಲಲ್ಲಿ ಬಿದ್ದಿರುವುವು. ॥೨೫॥

ನಾರಂಗರಂಜಿತೋತ್ತುಂಗಶಾಖಶಾಖಾಭಿರನ್ವಿತಂ ।
ವಾದಾಮಾಕ್ರೂರಖರ್ಜೂರತತ್ಫಲಾನಮ್ರಶಾಖಕಂ ॥೨೬॥

ಜಾತೀಫಲರಸಾಸ್ವಾದಮಾದ್ಯತ್ಕಪಿಕುಲಾಕುಲಂ ।
ರಮ್ಯತಾಲೀವನೋದ್ಭೂತಗಂಧಾನಂದಿತಮಾರುತಂ ॥೨೭॥

ಹರಿದ್ರತ್ನನಿಭಾತ್ಯಚ್ಛಸುಪೀತಕದಲೀದಲೈಃ ।
ರಮ್ಯಸಪ್ತಚ್ಛದೋಪೇತಂ ನಾರೇಲಫಲಗುಚ್ಛಕೈಃ ॥೨೮॥

ಸಿತಾಸಿತಫಲಾನಮ್ರಮಾರುತೋದ್ಧೂತಮೌಲಿಭಿಃ ।
ಉದ್ಯದ್ದ್ಯುಮಣಿಗರ್ಭಾಭಪೂಗೀಫಲಭರೈರ್ದ್ರುಮೈಃ ॥೨೯॥

ಸ್ತಬಕಾನತಿಸಂಫುಲ್ಲರಾಜತ್ಕುಟಜಪಂಕ್ತಿಭಿಃ ।
ಕುಟಜೈರ್ವಟಜೈಶ್ಚೈವ ಕೂಟಾಗಾರಮಿವ ಸ್ಥಿತಂ ॥೩೦॥

---

ಕಿತ್ತಲೆಹಣ್ಣುಗಳು ಮರಗಳ ಕೊಂಬೆಗಳಲ್ಲಿ ಸಾಲುಸಾಲಾಗಿ ರಂಜಿಸುತ್ತಿರುವುವು. ಬಾದಾಮಿ, ಖರ್ಜೂರ, ಈ ಹಣ್ಣುಗಳ ಭಾರದಿಂದ ಮರಗಳು ಬಗ್ಗಿಹೋಗಿರುವುವು. ॥೨೬॥

(ಜಾಜೀಕಾಯಿ) ಜಾತೀಫಲದ ರಸವನ್ನು ಪಾನಮಾಡಿದ ಕಪಿಗಳು ಗುಂಪಾಗಿ ತುಂಬಿಕೊಂಡಿರುವುವು. ತಾಳೆಮರದ ಹೂವಿನ ಪರಾಗವನ್ನು ಹೊತ್ತು ಸುಗಂಧಮಯವಾಗಿ ಓಡಾಡುವ ವಾಯುವು ಅಲ್ಲಲ್ಲಿ ಬೀಸುತ್ತಿರುವುದು. ॥೨೭॥

ನೀಲಮಣಿಯಂತೆ ಶೋಭಿಸುವ ಬಾಳೆಯೆಲೆಗಳೂ, ಸುಂದರವಾದ ಏಳೆಲೆ ಬಾಳೆಗಿಡಗಳೂ, ತೆಂಗಿನಕಾಯಿಗಳ ಗೊಂಚಲುಗಳೂ ಅತಿ ಮನೋಹರವಾಗಿ ಕಾಣುತ್ತಿರುವುವು. ॥೨೮॥

ಬಿಳುಪು ಮತ್ತು ಕಪ್ಪುಬಣ್ಣಗಳಿಂದ ಕೂಡಿ, ಗಾಳಿಯ ವೇಗದಿಂದ ತಲೆದೂಗುತ್ತಿರುವ ಅಡಕೆಮರಗಳಲ್ಲಿ ಬಾಲಸೂರ್ಯನ ತೇಜಸ್ಸನ್ನು ಪಡೆದಿರುವ ಅಡಕೆಕಾಯಿಗಳ ಗೊಂಚಲುಗಳು ಬಹುಮನೋಹರವಾಗಿ ಕಂಡುಬರುವುವು. ॥೨೯॥

ಕಾಡುಗೋರಂಟಿಹೂವುಗಳು ಗೊಂಚಲುಗೊಂಚಲಾಗಿ ಬಿಟ್ಟಿರುವುವು. ಕುಟಜಗಳು, ವಟಜಗಳೂ ಇವೇ ಮೊದಲಾದುವುಗಳಿಂದ ಕೂಡಿದ ಈ ಯುದ್ಯಾನವು

ವಿಭ್ರಾಜದ್ಧವಳಾತ್ಯಚ್ಛಬಾಲಾರ್ಕಸುಮಕೇಸರಂ ।
ನೀಪಾನೋಕಹಜಾತ್ಯುಚ್ಚೈರಶೋಕೈಶ್ಶೋಕನಾಶಕೈಃ ॥೩೧॥

ಪ್ರಭಾತಬುದ್ಧಸದ್ಬೋಧಿದ್ರುಮಚ್ಛದರವಾಂಡಜೈಃ ।
ವಕುಲೈರ್ಧವಕೇಲೈಶ್ಚ ಕೇಸರಾಮೋದಸುಂದರೈಃ ॥೩೨॥

ತಕ್ಕೋಲಾಂಕೋಲಕೈಶ್ಶುಭ್ರೈಸ್ಸುಗಂಧಬದರೀಧನ್ವೈಃ ।
ಸುಗಂಧಬಂಧು(ಜೀಮೂಕ)ಜಂಬೂಕಸುಗಂಧಾಮೋದಿಮಾರುತಂ ॥೩೩॥

ಕಂದರ್ಪವರ್ಷ್ಮಸಂಕಾಶಕಾಶ್ಮೀರದ್ರುಮಕೇಸರೈಃ ।
ತಗರಾಮೋದಬಹುಲಂ ಕೃಷ್ಣಾಗರುನಗೈರ್ಯುತಂ ॥೩೪॥

---

ಕೂಟಾಗಾರದಂತೆ (ಹಲವಾರುಜಾತಿಯುವರು ವಾಸಮಾಡುವ ಮನೆ) ಕಂಗೊಳಿಸುತ್ತಿರುವುದು. ॥೩೦॥

ಕದಂಬವೃಕ್ಷದಲ್ಲಿಯೂ, ಶೋಕವನ್ನು ನಾಶಮಾಡುವ ಅಶೋಕವೃಕ್ಷದಲ್ಲಿಯೂ ಬಿಟ್ಟಿರುವ ಹೂವುಗಳು ಬಾಲಸೂರ್ಯನಂತೆ ಹೊಳೆಯುವ ಕೇಸರಗಳುಳ್ಳದ್ದಾಗಿ ಶುಭ್ರತೇಜಸ್ಸಿನಿಂದ ಪ್ರಕಾಶಿಸುತ್ತಿರುವುವು. ॥೩೧॥

ಅರಳೀಮರದ ಎಲೆಗಳು ಬೆಳಗಿನ ಹೊತ್ತಿನಲ್ಲಿ ಗಾಳಿಯಿಂದ ಪಟಪಟಗುಟ್ಟಿ ಅಲ್ಲಿ ವಾಸಿಸುವ ಪಕ್ಷಿಗಳನ್ನೆಲ್ಲಾ ಎಚ್ಚರಗೊಳಿಸುವುವು. ಅಲ್ಲಿಯೇ ವಕುಲಪುಷ್ಪಗಳೂ, ಉಮ್ಮತ್ತೀಹೂವುಗಳೂ, ತಮ್ಮ ಸುಂದರವಾದ ಕೇಸರಗಳಿಂದ ಸುವಾಸನೆಯುಳ್ಳದ್ದಾಗಿವೆ. ॥೩೨॥

ತಕ್ಕೋಲ, ಅಂಕೋಲ, ಸುಗಂಧವಾದ ಬದರೀಮರ, ಸುವಾಸನೆಯುಳ್ಳ ಹೊನ್ನೇಮರ ಇವುಗಳ ಹೂವಿನ ವಾಸನೆಯನ್ನು ಹೊತ್ತು ವಾಯುವೂ ಸುಗಂಧಿತವಾಗಿ ಚಲಿಸುತ್ತಿರುವುದು. ॥೩೩॥

ಕಾಶ್ಮೀರದೇಶದ ಮರಗಳು ಮನ್ಮಥನ ದೇಹದಂತೆ ಮನೋಹರವಾಗಿರುವುವು. ಆ ಮರದ ಹೂಗಳ ಕೇಸರಗಳು ತರಗಪುಷ್ಪ (?)ಗಳ ಮತ್ತು ಕರೀ ಅಗುರು ಮರಗಳ ಹೂವುಗಳ ವಾಸನೆಯಿಂದ ಕೂಡಿ ಘಮಘಮಿಸುತ್ತಿವೆ. ॥೩೪॥

**ಲೋಧ್ರವಧ್ರಜಭೇರುಂಡಕಾಂಡತಾಂಡವಗುಚ್ಛಕಂ ।**
**ವಟಂ ತಪಸ್ಯಂತಮಿವ ಸಟಾಜಾಲಾಂಚಿತಂ ಸ್ಥಿತಂ ॥೩೫॥**

**ಖದಿರೈರ್ಬದರೈಶ್ಚೈವ ಪ್ರವಾಲಾ ಇವ ತತ್ಫಲೈಃ ।**
**ಕೋವಿದಾರಮಹಾಶಾಖಾವಿದಾರಿತನಭೋಘಟಂ ॥೩೬॥**

**ಭಲ್ಲಾಲಿಂಗಿತಸನ್ಮಲ್ಲೀಸುಮಬಂಧುರಮಾರುತಂ ।**
**ವೇಣುಸಂಘರ್ಷಣರವವೀಣಾನಾದೋಪಮಂ ವನೇ ॥೩೭॥**

**ಸಲ್ಲಕೀಸಲ್ಲಯೈರ್ಯುಕ್ತಂ ಮಲ್ಲೀವಲ್ಲೀಕೃತಾಂಗಕಂ ।**
**ಹಲ್ಲೀಶಲಾಸ್ಯಂ ಕುರ್ವದ್ಭಿಶ್ಶಾಖಾಭಿಃ ಫುಲ್ಲಭಲ್ಲಕಂ ॥೩೮॥**

---

ಲೋಧ್ರ (ಹಿಪ್ಪೇಮರದ ಭೇದ) ವೃಕ್ಷ, ಬಜೇಮರ ಇವುಗಳಲ್ಲಿ ಗಂಡಭೇರುಂಡಪಕ್ಷಿಗಳು ಹಾರಾಡುತ್ತಿರುವುದರಿಂದ ಆ ಮರದ ಹೂಗೊಂಚಲುಗಳು ಚಲಿಸುತ್ತಿರುತ್ತವೆ. ಆಲದಮರವಾದರೋ ಬಿಳಲುಗಳನ್ನು ಬಿಟ್ಟು ನಿಂತಿರುವುದರಿಂದ ತಪಸ್ವಿಯಾದ ಋಷಿಯ ಸಾಮ್ಯವನ್ನು ಪಡೆಯುತ್ತಿರುವುದು. ||೩೫||

ಕಗ್ಗಲೀಮರದ, ಬೋರೇಮರದ ಹಣ್ಣುಗಳು ಹವಳಗಳಂತೆ ಅಲ್ಲಲ್ಲಿ ಕಂಡು ಬರುತ್ತಿವೆ. ಕೆಂಪುಕಂಚವಾಳದ ಮರಗಳು ಅಂತರಿಕ್ಷಪರ್ಯಂತವಾಗಿ ಬೆಳೆದು ಅದನ್ನು ಮುಟ್ಟುತ್ತಿವೆಯೋ ಎಂಬಂತಿವೆ. ||೩೬||

ಭಲ್ಲ (ಸರ್ಜವೃಕ್ಷ) ಮರಕ್ಕೆ ಹಬ್ಬಿರುವ ಮಲ್ಲಿಕಾ ಲತೆಗಳಲ್ಲಿ ಸುಗಂಧಮಯವಾದ ಮಲ್ಲಿಗೆಯ ಹೂವುಗಳಿರುವುವು. ಅವುಗಳಿಂದ ಹೊರಡುವ ಸೌಗಂಧ್ಯವನ್ನು ಎರಚುತ್ತಾ ವಾಯುವು ಬೀಸುತ್ತಿರುವುದು. ಅಲ್ಲಲ್ಲಿ ಬಿದಿರುಮೆಳೆಗಳ ಘರ್ಷಣದಿಂದ ವೀಣಾನಾದವು ಉದ್ಯಾನವನದಲ್ಲಿರುವಂತೆ ತೋರಿಬರುವುದು. ||೩೭||

ಆನೇಬೇಲದ ಮರಗಳು ಲಯ (ಮಟ್ಟು) ವನ್ನು ಹೇಳುವಂತೆ ತೂಗಾಡುತ್ತಿವೆ. ಮಲ್ಲಿಕಾಲತೆಯನ್ನೇ ದೇಹವನ್ನಾಗಿ ಮಾಡಿಕೊಂಡಿರುವ ಅರಳಿದ ಭಲ್ಲಕ ಪುಷ್ಪವು (ಬಾಣಾಕಾರದ ಪುಷ್ಪವಿಶೇಷ) ತನ್ನ ಶಾಖೆಗಳಿಂದ ಹಲ್ಲೀಶಲಾಸ್ಯವನ್ನು ಮಾಡುತ್ತಿದೆಯೋ ಎಂಬಂತಿದೆ. (ಹಲ್ಲೀಶಲಾಸ್ಯವೆಂದರೆ, ಗಂಡಸರ ನೇತೃತ್ವದಲ್ಲಿ ಮಾಡುವ ಸ್ತ್ರೀಯರ ನಾಟ್ಯ ಎಂದು ಹೇಳಬಹುದು). ||೩೮||

**ಗಂಧಗಂಧಿತದಿಕ್ಚಕ್ರಂ ವಕ್ರಾಂಗಂ ಶಾಖಿಸುಂದರಂ ।**
**ನೈಕಂಕತಂ ವಿಕರ್ಷಂತಂ ನಭೋಮಂಡಲಗಾನ್ ಗ್ರಹಾನ್ ॥೩೯॥**

**ಉಡುಪೋಡುಗಣಾಕಾರಪುಲ್ಲದ್ಗಲಿತತತ್ಸುಮಂ ।**
**ನಲ್ವಮಾತ್ರಮಹಾಶಾಖಂ ತದ್ರತ್ನವಿಪಿನಂ ಮಹತ್ ॥೪೦॥**

**ಚಂದನೈರ್ನಯನಾನಂದಿಸುಸುಗಂಧಿಸುಮಾರುತಂ ।**
**ಆಂದೋಲಿತಮಹಾಶಾಖಾಲಂಬಿತಾಘೋಮುಃಖಸ್ರಜಂ ॥೪೧॥**

**ಗುಚ್ಛಗುಂಜದಲಿವ್ರಾತಂ ರಸದಾಂದೋಲಿಸುಂದರಂ ।**
**ನವವಾಟೀಪರಿವೃತಂ ರತ್ನಕಾಂತಿಝರೀಭರಂ ॥೪೨॥**

---

ನಭೋಮಂಡಲದಲ್ಲಿರುವ ಗ್ರಹಗಳನ್ನೆಲ್ಲಾ ಎಳೆದು ಹಿಡಿದಿರುವ ಖಮಧ್ಯಸ್ಥಾನದಂತೆ ಆ ಉದ್ಯಾನವು, ತನ್ನ ಸುವಾಸನೆಯಿಂದ ಅಖಿಲದಿಕ್ಕುಗಳನ್ನು ಸುವಾಸನೆಯುಳ್ಳದ್ದನ್ನಾಗಿ ಮಾಡುತ್ತಿರುವುದು. ವಿಧವಿಧವಾದ ವೃಕ್ಷಗಳಿಂದ ನೋಡಲು ರಮ್ಯವಾಗಿ ಕಂಡುಬರುತ್ತಿರುವುದು. ॥೩೯॥

ಮರಗಳಿಂದ ಉದುರಿದ ಹೂವುಗಳು ಭೂಮಿಯಲ್ಲೆಲ್ಲಾ ಹರಡಿ ನಕ್ಷತ್ರಗಳ ಭ್ರಾಂತಿಯನ್ನುಂಟುಮಾಡುತ್ತಿವೆ. ಅಲ್ಲಿರುವ ಒಂದೊಂದು ಮರವೂ ನಾಲ್ಕುನೂರು ಮೊಳ ಪ್ರಮಾಣದಷ್ಟು ವಿಶಾಲವುಳ್ಳದ್ದಾಗಿದೆ. ಆ ಅರಣ್ಯವು ರತ್ನಮಯವಾಗಿದ್ದಂತೆ ತೋರಿಬರುವುದು. ॥೪೦॥

ಅಲ್ಲಿರುವ ಚಂದನವೃಕ್ಷಗಳು ನಯನ ಮನೋಹರವಾಗಿರುವುವು. ಅಲ್ಲದೆ ಅಲ್ಲಿ ಬೀಸುವ ವಾಯುವು ಸುಗಂಧಮಯವಾಗಿರುವುದು. ದೊಡ್ಡ ದೊಡ್ಡ ಮರಗಳು ಗಾಳಿಯಿಂದ ಅಲ್ಲಾಡುತ್ತಿರುವಾಗ ಆ ಮರದ ಹೂವುಗಳಿಗೆ ಮುತ್ತಿಕೊಂಡಿದ್ದ ಭ್ರಮರಗಳು ಸಾಲುಸಾಲಾಗಿ ಕಾಣುತ್ತಾ ದೊಡ್ಡದಾದ ಮಾಲಾಕಾರದಲ್ಲಿ ತೋರುತ್ತಿರುವುವು. ಆ ಭ್ರಮರಗಳಾದರೋ ಇಂಪಾಗಿ ಧ್ವನಿಗೈಯ್ಯುತ್ತಾ ಅಲ್ಲಿಂದಿಲ್ಲಿಗೆ ಓಡಾಡುತ್ತಾ ನಯನಮನೋಹರವಾಗಿ ಕಾಣುತ್ತಿರುವುವು. ಆ ಉದ್ಯಾನದ ಪಕ್ಕದಲ್ಲಿಯೇ ಒಂದು ಪುಷ್ಪವಾಟಿಯಿರುವುದು. ರತ್ನಕಾಂತಿಯ ಪ್ರವಾಹವೇ ಅಲ್ಲಿ ಹರಿಯುತ್ತಿರುವಂತೆ ತೋರಿಬರುವುದು. ॥೪೧-೪೨॥

ತತ್ರಾಚ್ಛರತ್ನಸ್ಫಟಿಕರಾಜಜ್ಜ್ವಲತರಂಗಕಂ ।
ವನಸೌರಭಶೀತಾಚ್ಛಶೀಕರಾಸಾರಮಾರುತಂ ॥೪೩॥

ಗಂಧಗಂಧಿತಪದ್ಮೋತ್ಥರಜಃಪಟಲಸುಂದರಂ ।
ನೀಲನಾಲೀಕಸುಭಗಂ ಸರಸ್ತತ್ರ ವಿರಾಜತೇ ॥೪೪॥

ರತ್ನಸೋಪಾನಸಂಬದ್ಧಂ ಚಲದಾರಕ್ತಹಲ್ಲಕಂ ।
ತನ್ಮಧ್ಯಸೌಧಶೃಂಗಾಗ್ರಕಲಶೋಜ್ಜ್ವಲದೀಪ್ತಿಮತ್ ॥೪೫॥

[1] ವಿದ್ರುಮಾಮಲಬಿಂಬೋದ್ಯತ್ಕನಕಾಂತತರಂಗಕಂ ।
ಸಹಸ್ರಸ್ತಂಭವಿತತಂ ಪೀಠಗೋಪಾನಸೀಯುತಂ ॥೪೬॥

---

ಅಲ್ಲಿಯೇ ಒಂದು ಸರೋವರವಿರುವುದು. ಅದಕ್ಕೆ ನಿರ್ಮಲವಾದ ರತ್ನಗಳನ್ನೂ, ಸ್ಫಟಿಕಗಳನ್ನೂ ಸುತ್ತಲೂ ಹದ್ದಿರುವರು. ಅವುಗಳ ಕಾಂತಿಯಿಂದ ಆ ಸರೋವರದ ಅಲೆಗಳು ಪ್ರಕಾಶಮಾನವಾಗಿರುವುವು. ಉದ್ಯಾನದ ಪುಷ್ಪಗಳ ವಾಸನೆಯನ್ನು ಹೊತ್ತುತಂದ ವಾಯುವು ಈ ಸರೋವರದ ಅಲೆಗಳ ಶೀತಲವಾದ ತುಂತುರುಗಳಿಂದ ಕೂಡಿ ಆಹ್ಲಾದಕರವಾಗಿರುವುದು. ॥೪೩॥

ಮತ್ತು ಅದೇ ವಾಯುವು ತಾವರೆಯ ಪುಷ್ಪಗಳಿಂದ ಹುಟ್ಟಿದ ಮಕರಂದವನ್ನೂ ಹೊತ್ತು ಮೃದುವಾಗಿ ಬೀಸುತ್ತಿರುವುದು. ನೀಲೋತ್ಪಲಗಳ ದಂಟಿನಿಂದ ಸುಂದರವಾಗಿ ಆ ಸರಸ್ಸು ವಿರಾಜಿಸುತ್ತಿರುವುದು. ॥೪೪॥

ಆ ಸರೋವರದ ಸೋಪಾನವೆಲ್ಲಾ ರತ್ನನಿರ್ಮಿತವಾದುದು. ಕೆಂಪಾದ ಸೌಗಂಧಿಕಪುಷ್ಪಗಳು ಅಲೆಗಳ ಹೊಡೆತದಿಂದ ಚಲಿಸುತ್ತಿರುವುವು. ಆ ಸರೋವರದ ಮಧ್ಯಭಾಗದಲ್ಲಿ ಒಂದು ದಿವ್ಯಸೌಧವಿರುವುದು. ಅದರ ಶಿಖರದಲ್ಲಿ ದೀಪ್ತಿಮತ್ತಾದ ಒಂದು ಕಲಶವಿದೆ. ॥೪೫॥

ಹವಳದ ಶುಭ್ರವಾದ ಬಿಂಬದಂತೆ ಪ್ರಕಾಶಿಸುವ ಸುವರ್ಣಮಯವಾದ ರಂಗಮಂಟಪವೊಂದು ಆ ದಿವ್ಯಸೌಧದಲ್ಲಿರುವುದು. ಅದಕ್ಕೆ ಸಾವಿರ ಕಂಬಗಳಿವೆ. ಮಧ್ಯೆ ಎತ್ತರವಾದ ಪೀಠವೂ, ಮುಂಜೂರಿನ ಕೆಳಭಾಗದಲ್ಲಿರುವ ವಲಭೀ ಪ್ರದೇಶವೂ ಸುಂದರವಾಗಿ ಕಂಗೊಳಿಸುತ್ತಿರುವುದು. ॥೪೬॥

---

1. ವಿದ್ರುಮಾಮಲ ಬಿಂಬೋದ್ಯತ್ಕಾನಕಾಂತರ ರಂಗಕಂ. (ಪಾ. ರ.)

**ರಾಜತ್ಪ್ರನಾಲವೃಷಭಂ ದೋಧೂಯಿತಪತಾಕಕಂ ।**
**ತತ್ರೋಜ್ಜ್ವಲನ್ಮಹಾರತ್ನವೇದಿಕಾಸಮಲಂಕೃತಂ ॥೪೭॥**

**ಇಂದುಕಾಂತಿತಿರಸ್ಕಾರಿಹೀರಧಾರಾಸಮಾವೃತೇ ।**
**ಸಿಂಹಾಸನವರೇ ದೇವ್ಯಾ ಸಹಾಸ್ತೇ ವೃಷಭಧ್ವಜಃ ॥೪೮॥**

**ಜಿಘ್ರಂಸ್ತದ್ವನಸಂಪುಲ್ಲಸುಮಗಂಧಂ ಮನೋಹರಂ ।**
**ಮರಾಲಕುಲಸಂಚಾರಂ ಸಾರಸಾನಾಂ ರವಂ ಹರಃ ॥೪೯॥**

**ದೇವ್ಯಾಃ ಪಶ್ಯನ್ಮುಖಾಂಭೋಜಂ ಕಾಲಂ ನಯತಿ ಶಂಕರಃ ।**
**ತತ್ರೈವ ರುದ್ರಕೋಟ್ಯೋಽಪಿ ಶೂಲಾಮಲಲಸತ್ಕರಾಃ ॥೫೦॥**

---

ಅದರ ಮೇಲುಗಡೆ ಹೊಳೆಯುವ ಹವಳಗಳಿಂದ ನಿರ್ಮಿತವಾದ ಬಸವನ ವಿಗ್ರಹಗಳಿವೆ. ಮೇಲಿರುವ ಧ್ವಜಗಳು ಗಾಳಿಯಿಂದ ಚಲಿಸುತ್ತಿರುವುವು. ಅಲ್ಲಿ ಅತ್ಯಂತ ಪ್ರಕಾಶಮಾನವಾಗಿ ಮಹಾರತ್ನಗಳಿಂದ ನಿರ್ಮಿತವಾದ ಜಗುಲಿಯೊಂದಿರುವುದು. ||೪೭||

ಅದರಮೇಲೆ ಒಂದು ಸಿಂಹಾಸನವು ಇಡಲ್ಪಟ್ಟಿದೆ. ಅದಕ್ಕೆ ಚಂದ್ರಕಾಂತಿಯನ್ನು ಸಹ ಮಂಕುಮಾಡುವಂತಹ ಹೀರ (ದಪ್ಪ) ರತ್ನಗಳನ್ನು ಜೋಡಿಸಲಾಗಿದೆ. ಆ ಸಿಂಹಾಸನದ ಮೇಲೆ ಪರಮೇಶ್ವರನು ಪಾರ್ವತಿಯೊಡನೆ ಸುಖವಾಗಿ ಕುಳಿತಿರುವನು. ||೪೮||

ಆ ವನದ ಪುಷ್ಪಗಳ ಮಕರಂದವನ್ನು ಹೊತ್ತು ತರುವ ವಾಯುವನ್ನು ಸೇವಿಸುತ್ತಾ ಹಂಸಗಳ ಸಂಚಾರವನ್ನೂ, ಸಾರಸಪಕ್ಷಿಗಳ ಇಂಚರವನ್ನೂ ನೋಡಿ, ಕೇಳುತ್ತಾ ಪರಮೇಶ್ವರನು ತೃಪ್ತಿಪಡುವನು. ||೪೯||

ಹಾಗೆಯೇ ದೇವಿಯ ಮುಖವನ್ನು ನೋಡಿ ಹಿಗ್ಗುವನು. ಹೀಗೆ ಸಂತೋಷದಿಂದ ಅಲ್ಲಿ ಶಂಕರನು ಕಾಲಕಳೆಯುವನು. ಅಲ್ಲಿಯೇ, ತ್ರಿಶೂಲವೇ ಮೊದಲಾದ ಆಯುಧಗಳನ್ನು ಧರಿಸಿರುವ ಅನೇಕಕೋಟಿಸಂಖ್ಯೆಯ ರುದ್ರರು ವಾಸಿಸುತ್ತಿರುವರು. ||೫೦||

ಪ್ರಾಕಾರಂ ಪರಿರಕ್ಷಂತಿ ಬಹಿಸ್ತತ್ರಾಂತರೇ ತು ನ ।
ತತ್ಪ್ರಾಕಾರಂ ತದ್ವನಂ ಚ ನಳಿನೀಂ ತಾಂ ಚ ಸುಂದರಾಂ ॥೫೧॥

ತೇ ರುದ್ರಾ ದೇವದೇವಸ್ಯ ಚಂದ್ರಚೂಡಸ್ಯ ಶಾಸನಾತ್ । ॥೫೨॥

॥ ಈಶ್ವರ ಉವಾಚ ॥

ಗಿರೀಂದ್ರಶಿಖರಸ್ರುತೈರ್ಹರಿತಪೀತನೀಲಾರುಣೈ ।
ಸ್ಸ್ರವಜ್ಝರಿಭರೀಭರೈರ್ನಿಖಿಲರೀತಿನಿರ್ವಾಸಿತೈಃ ।
ಸ್ರವತ್ಕರಟಿಕುಂಭವತ್ಪಟುಮದಪ್ರಭೋಯಂ ಗಿರಿ ।
ಸ್ತಮಾಲತಿಲಕೈರ್ಘನೈಸ್ತಿಲಕಿತೋ ಗಿರಿಗೈರಿಕೈಃ ॥೫೩॥

ನಗೇಂದ್ರವರಚಾರಣೈಃ ಪ್ರತಿಕೃತೈಶ್ಚ ಸದ್ವಾರಣೈಃ ।
ಮಹೇಂಗುದಮನೋಹರಜ್ವಲಿತತೇಜವಲ್ಲೀಗಣೈಃ ।
ವಿಭಾತಿ ಮಮ ಶೈಲರಾಟ್ ಗಿರಿವರಾಂಗಕನ್ಯೇ ಭಜ ॥೫೪॥

---

ಆ ಪ್ರಾಕಾರದ ಹೊರಭಾಗದಲ್ಲಿ ಬಹಳವಾಗಿ ಪ್ರಾಕಾರ ರಕ್ಷಕರಿರುವರು. ಒಳಭಾಗವು ಮಾತ್ರ ಯಾರಿಗೂ ಪ್ರವೇಶಕ್ಕೆ ಸಾಧ್ಯವಿಲ್ಲವಾಗಿದೆ. ಆದರೆ ಚಂದ್ರ ಶೇಖರನಾದ ಮಹೇಶ್ವರನ ಅಪ್ಪಣೆಯಿಂದ ರುದ್ರಗಣಗಳು ಆ ಉದ್ಯಾನವನ್ನೂ, ಪ್ರಾಕಾರವನ್ನೂ, ಸರಸ್ಸನ್ನೂ ರಕ್ಷಿಸಿಕೊಂಡಿರುವರು. ॥೫೧-೫೨॥

ಪರಮೇಶ್ವರನು ಆ ಪರ್ವತದ ವಿಷಯವಾಗಿ ಹೀಗೆ ದೇವಿಗೆ ಅಪ್ಪಣೆಕೊಡಿಸಿರುವನು. ಈ ಪರ್ವತದ ಶಿಖರದಿಂದ, ಹಸುರು, ಹಳದಿ, ನೀಲ, ಕೆಂಪು, ಮುಂತಾದ ಬಣ್ಣಗಳಿಂದ ಕೂಡಿದ ಜಲಪ್ರವಾಹಗಳು ಹರಿಯುತ್ತಿವೆ. ಇದನ್ನು ನೋಡಿದರೆ ಮದ್ದಾನೆಯ ಶಿರೋಭಾಗದಿಂದ ಸುರಿಯುವ ಮದೋದಕದ ನೆನಪು ಬರುತ್ತದೆ. ಶಿಖರಭಾಗವು ಆನೆಯ ಕುಂಭ ಸ್ಥಳದಂತೆ, ಹೊಂಗೆಯ ಮರಗಳಿಂದಲೂ, ಕಗ್ಗಲಿಯ ಮರಗಳಿಂದಲೂ ಕೂಡಿ ಕಪ್ಪುಬಣ್ಣವುಳ್ಳದ್ದಾಗಿದೆ. ಅಲ್ಲಲ್ಲಿರುವ ಗೈರಿಕಾದಿ ಧಾತುಗಳು ಈ ಪರ್ವತಕ್ಕೆ ತಿಲಕದಂತೆ ತೋರಿಬರುತ್ತಿವೆ. ॥೫೩॥

ಈ ಪರ್ವತದಲ್ಲಿ ಅನೇಕ ಜನ ಚಾರಣರೂ, ತತ್ಸದೃಶವಾದ ವಾರಣಗಳೂ (ಮದ್ದಾನೆಗಳು) ಬಹಳವಾಗಿ ವಿರಾಜಿಸುತ್ತಿರುವರು. ದೊಡ್ಡದೊಡ್ಡ ಇಂಗುದಿಯೇ ಮುಂತಾದ ಮರಗಳೂ, ತೇಜೋಮಯವಾದ ಬಳ್ಳಿಗಳೂ ಬಹಳವಾಗಿ ಈ ಪರ್ವತ

ತದ್ಬಿಲ್ವಮೂಲಪರಿಕಲ್ಪಿತರತ್ನವೇದಿ
ಮಧ್ಯಸ್ಥರತ್ನಕಮಲಾಮಲಕರ್ಣಿಕಾಯಾಂ ।
ದೃಷ್ಟ್ವಾ ಗಿರೀಂದ್ರತನಯಾಂಚಿತಬಾಹುರೀಶ
ಶ್ಚಂದ್ರೋಪಲಾಕಲಿತಲಿಂಗವರೇಷು ದೇವ್ಯಾ ॥೫೫॥

ಸಮರ್ಚಯತಿ ದೂರ್ವಯಾ ಹರಿಮಣಿಪ್ರಭಾಭಾಧಿಕೇ ।
ಪ್ರಕೃಷ್ಟತರಕಾಂತಯಾ ದ್ಯುಮಣಿಬಾಲಕಾಂತಿಪ್ರಭೈಃ ।
ನವಾರುಣಸುಬಿಲ್ವಜೈಶ್ಛದವರೈರ್ಮುಹುಶ್ಶಂಕರಃ ।
ಫಲೈಶ್ಚ ರಸಗರ್ಭಿತೈರ್ವಿಮಲಜಂಬುನಾರಂಗಕೈಃ ॥೫೬॥

ಸುದಾಡಿಮವರೋದ್ಭವೈರ್ವಿದಲಿತಪ್ರಭಾಭಾಸುರೈಃ ।
ಕಪಿತ್ಥಕದಲೀಫಲೈ ರಸರಸಾಲಪಕ್ವೈಃ ಫಲೈಃ ।
ನಿವೇದ್ಯ ಗಿರಿಜಾಕರೇ ದಧತಿ ರಕ್ತಕಂಜಾಧಿಕೇ ॥೫೭॥

---

ವನ್ನು ಅಲಂಕರಿಸುವುವು. ಗಿರಿರಾಜಪುತ್ರಿಯೇ, ಈ ಗಿರಿಯ ಶೃಂಗಾರವನ್ನು ನೋಡು. ||೫೪||

ಎಂದು ಹೇಳುತ್ತಾ ಶಂಕರನು ಪಾರ್ವತಿಯಿಂದ ಆಲಿಂಗಿತನಾಗಿ ಬಿಲ್ವವೃಕ್ಷದ ಬುಡದಲ್ಲಿ, ರತ್ನಕಮಲಗಳಿಂದ ನಿರ್ಮಿತವಾದ ವೇದಿಕೆಯಲ್ಲಿ, ಚಂದ್ರಕಾಂತ ಶಿಲೆಯಿಂದ ಉಪಕಲ್ಪಿತವಾದ ಅನೇಕ ಶ್ರೇಷ್ಠ ಲಿಂಗಗಳನ್ನು ನೋಡುತ್ತಲಿರುವನು. ||೫೫||

ಹಾಗೆಯೇ ಪಾರ್ವತೀಸಮೇತನಾಗಿ, ಮಹಾದೇವನು ಇಂದ್ರನೀಲಮಣಿಯ ಕಾಂತಿಯನ್ನು ಸಹ ಮೀರಿಸಿ ಹೊಳೆಯುವ ಗರಿಕೆಯಿಂದಲೂ, ಬಾಲಸೂರ್ಯನಂತೆ ತೇಜಸ್ಸುಳ್ಳ ಕೆಂಪಾದ ಬಿಲ್ವಪತ್ರೆಯ ಚಿಗುರುಗಳಿಂದಲೂ, ಇನ್ನೂ ಕಾಂತಿಮಯವಾದ ಪುಷ್ಪಗಳಿಂದಲೂ, ರಸವತ್ತಾದ, ನೇರಳೆ, ಕಿತ್ತಲೆ ಮುಂತಾದ ಹಣ್ಣುಗಳಿಂದಲೂ ಪೂಜಿಸುವನು. ||೫೬||

ಬಿರಿದಿರುವ ದಾಳಿಂಬೆಹಣ್ಣುಗಳನ್ನೂ, ಪಕ್ವವಾಗಿರುವ ಬೇಲದಹಣ್ಣುಗಳನ್ನೂ, ರಸವತ್ತಾದ ಬಾಳೆಹಣ್ಣುಗಳನ್ನೂ, ಇನ್ನೂ ರುಚಿಕರವಾದ ಮಾವಿನಹಣ್ಣುಗಳನ್ನೂ, ಲಿಂಗಗಳಿಗೆ ನಿವೇದಿಸಿ, ಶಂಕರನು ಪ್ರೀತಿಯಿಂದ ನೈವೇದ್ಯವಾದ ಪ್ರಸಾದವನ್ನು ಕಮಲದಂತೆ ರಕ್ತವರ್ಣವಾಗಿ ರಂಜಿಸುವ ದೇವಿಯ ಕೈಯಲ್ಲಿಡುವನು. ||೫೭||

ಶರಣ್ಯೋ ದೇವೇಶಃ ಪ್ರಥಿತಮಹಿಮಾ ವೇದಶಿಖರೈಃ ।
ನತಾನಾಮುದ್ಬೋಧೇ ಪ್ರಕಟಕರುಣೋ ವಾರಣಶಿರಾಃ ।
ಪ್ರಚಂಡೋಚ್ಚಂಡಾಂಡಸ್ಫುಟನವಿಧಿಜೋದ್ದಂಡಕುಹರೋ ।
ಹರೋಚ್ಚಂಡಾಖಂಡಪ್ರಮದಮುದಿತಸ್ತಾಂಡವವರಃ ॥೫೮॥

॥ ಸ್ಕಂದ ಉವಾಚ ॥

ಮುಕುಂದಬ್ರಹ್ಮೇಂದ್ರೈರಮರತಿಲಕೈಸ್ಸೇವಿತಪರೋ ।
ಗಣೈಶ್ಚಂಡೀಶಾದ್ಯೈಸ್ಸುರವರತುಹಂಡಾದಿಗಣಪೈಃ ॥೫೯॥

ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ಕೈಲಾಸಪ್ರಾಸಾದವರ್ಣನಂ ನಾಮ ಏಕೋನವಿಂಶೋಽಧ್ಯಾಯಃ

---

ಹೀಗೆ ಭಕ್ತರಕ್ಷಕನೂ, ವೇದ ಮತ್ತು ಉಪನಿಷತ್ತುಗಳಿಂದ ಸ್ತುತ್ಯನೂ ಆದ ಮಹೇಶ್ವರನು ಭಕ್ತಿಯಿಂದ ಅರ್ಚಿಸಿದವರಿಗೆ ದಯೆಯಿಂದ ಜ್ಞಾನಪ್ರದಾನಮಾಡುತ್ತಿರುವನು. ಅದೇ ರೀತಿ ಗಜಮುಖನಾದ ಗಣಪತಿಯೂ ಸಹ ದಯಾಶಾಲಿಯಾಗಿ ಅಲ್ಲಿ ವಿಹರಿಸುತ್ತಿರುವನು. ಅನಂತರ ಶಂಕರನು, ಅಖಂಡಬ್ರಹ್ಮಾಂಡವು ಅಲ್ಲಾಡುವಂತೆ ಅಮಿತವಾದ ಸಂತೋಷದಿಂದ ತಾಂಡವವನ್ನಾಡಲು ಆರಂಭಿಸುವನು. ॥೫೮॥

ಆ ತಾಂಡವೇಶ್ವರನ ನಾಟ್ಯಕಾಲದಲ್ಲಿ ದೇವಶ್ರೇಷ್ಠರಾದ ವಿಷ್ಣು, ಬ್ರಹ್ಮ ಇವರೇ ಮೊದಲಾದವರೂ, ಚಂಡೀಶನೇ ಮೊದಲಾದ ರುದ್ರಯೋನಿಗಳೂ, ತುಹಂಡನೇ ಮೊದಲಾದ ಪ್ರಮಥಗಣಾಧೀಶರೂ ಒಟ್ಟಾಗಿ ನಿಂತು ಪರಶಿವನ ನಾಟ್ಯವನ್ನು ನೋಡಿ ಆನಂದಪಡುತ್ತಾ, ಅವನ ಪಾದಕಮಲವನ್ನು ಭಕ್ತಿಯಿಂದ ಸೇವಿಸುತ್ತಿರುವರು ಎಂದು ಕುಮಾರಸ್ವಾಮಿಯು, ಜೈಗೀಷವ್ಯಮಹಾಮುನಿಗೆ ಹೇಳಿದನೆಂಬಲ್ಲಿಗೆ ॥೫೯॥

ಶ್ರೀಶಿವರಹಸ್ಯದ ಪ್ರಥಮಾಂಶದಲ್ಲಿ ಕೈಲಾಸಪರ್ವತದವರ್ಣನೆಯೆಂಬ ಹತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

# ಅಥ ಶ್ರೀಶಿವರಹಸ್ಯೇ

## ವಿಂಶೋಽಧ್ಯಾಯಃ

### ಶಿವಕ್ಷೇತ್ರವರ್ಣನಂ

ತತ್ರಾಂತರೇಽಪಿ ಪ್ರಾಕಾರೋ ಲಕ್ಷಯೋಜನವಿಸ್ತರಃ ।
ಹೀರಸಾರಮಹಾಧಾರಾತಿರಸ್ಕೃತಶಶಿದ್ಯುತಿಃ ॥೧॥

ಕೈಲಾಸಾಚಲಕಾಂತ್ಯಾ ಚ ತದ್ಧೀರಪ್ರಭಯಾಪಿ ಚ ।
ಸುಧಾಂಬುಧಿಮಹಾವೀಚೀಬಿಂಬಿತೇಂದುಕರೈರಪಿ ॥೨॥

ಮಹೇಶಮುಕುಟೋದ್ದಾಮಚಂದ್ರಾಸ್ಫಾರಕಲಾದಿಭಿಃ ।
ಭಾಭಾಸಿತದಿಶಾಸ್ತೋಮಸ್ತತ್ಪ್ರಾಕಾರಾಗ್ರಶೃಂಗಕೈಃ ॥೩॥

---

ಶ್ರೀಶಿವರಹಸ್ಯದಲ್ಲಿ ಇಪ್ಪತ್ತನೆಯ ಅಧ್ಯಾಯ

ಆ ಪ್ರಾಕಾರದ ಒಳಭಾಗದಲ್ಲಿ ಮತ್ತೊಂದು ಪ್ರಾಕಾರವಿರುವುದು. ಅದರ ವಿಸ್ತಾರ ಲಕ್ಷಯೋಜನ. ಅದು ಅನೇಕ ದಿವ್ಯರತ್ನಗಳ ಕಾಂತಿಯುಳ್ಳದ್ದಾಗಿ ಚಂದ್ರನ ಕಾಂತಿಯನ್ನೂ ಸಹ ತಿರಸ್ಕರಿಸುವಂತಿದೆ. ॥೧॥

ಕೈಲಾಸಪರ್ವತದ ಕಾಂತಿಯೂ, ಅದರಲ್ಲಿ ನಿಬದ್ಧವಾಗಿರುವ ರತ್ನಪ್ರಭೆಯೂ, ಮನೋಹರವಾಗಿರುವುದು. ಕ್ಷೀರಸಮುದ್ರದ ದೊಡ್ಡ ದೊಡ್ಡ ಅಲೆಗಳಲ್ಲಿ ಚಂದ್ರನ ಕಿರಣಗಳು ಪ್ರತಿಫಲಿಸಿ ನೋಡಲು ದಿವ್ಯವಾಗಿ ಕಾಣುತ್ತಿರುವುದು. ॥೨॥

ಮಹೇಶ್ವರನ ತಲೆಯಲ್ಲಿರುವ ಕಿರೀಟದ ರತ್ನಕಾಂತಿಯೂ, ಚಂದ್ರನ ಕಿರಣಗಳೂ ಆ ಪ್ರಾಕಾರದ ದಶದಿಕ್ಕುಗಳನ್ನೂ ತೇಜೋಮಯವನ್ನಾಗಿ ಮಾಡುತ್ತಿವೆ. ಆ ಪ್ರಾಕಾರದ ಶಿಖರಾಗ್ರಗಳಾದರೋ, ॥೩॥

ಚಂದ್ರಸೂರ್ಯಗ್ರಹಾಸ್ತಾರಾವಿದ್ಯುತೋಽಪ್ಯನಲೋ ದ್ವಿಜಾಃ ।
ತಿರಸ್ಕೃತಾಸ್ತತ್ಪ್ರಭಾಭಿಸ್ತದ್ಗೋಪುರವರಾಗ್ರಗಾಃ ॥೪॥

ಮಹೀಹೀರಕಸಂಕ್ಲೃಪ್ತಾ ನೀಲನೇತ್ರಾ ವಿಶಾಣಿನಃ ।
ತದಗ್ರಗೋಪುರಂ ಶುಭ್ರಂ ಪಂಚಲಕ್ಷಪ್ರಮಾಣಕಂ ॥೫॥

ಆಸಪ್ತಪಾತಾಲತಲಾದುತ್ಥಿತಂ ಹೀರಕಲ್ಪಿತಂ ।
ಕಪೋತಪ್ಯಾಲಿಪಾಲೀಭಿರ್ದೇವಸಂಘವಿರಾಜಿತಂ ॥೬॥

ರುದ್ರಾವತಾರಕ್ರೀಡಾಭಿಃ ಕಲಶೈರ್ವೃಷಭೈರಪಿ ।
ತಸ್ಮಿನ್ನೂರ್ಧ್ವತಲೇ ದೇವ್ಯಾ ದಿವ್ಯಸಿಂಹಾಸನಾಶ್ರಯಃ ॥೭॥

ಕೈಲಾಸಶೈಲವರಗೋಪುರಹೀರಸೌಧೇ ।
ದಿವ್ಯೈರನೇಕಮಣಿಕಲ್ಪಿತವಿಷ್ಟರಸ್ಥಃ ।

---

ತಮ್ಮ ಕಾಂತಿಗಳಿಂದ ಸೂರ್ಯಚಂದ್ರರನ್ನೂ, ಗ್ರಹತಾರೆಗಳನ್ನೂ, ಮಿಂಚನ್ನೂ ತಿರಸ್ಕರಿಸಿರುವುವು. ||೪||

ಆ ಗೋಪುರಾಗ್ರಗಳು, ಭೂಮಿಯಲ್ಲಿ ಶ್ರೇಷ್ಠವಾದ ಹೀರಕರತ್ನಗಳಿಂದ ಗಳಿಂದ ನಿರ್ಮಿತವಾಗಿವೆ. ಅಲ್ಲಿ ನೀಲವರ್ಣದ ಕಣ್ಣುಗಳುಳ್ಳ ಮತ್ತು ಕೊಂಬುಗಳಿಂದ ಲಂಕೃತವಾದ ಬಸವನ ವಿಗ್ರಹಗಳಿವೆ. ಹಾಗೆ ಆ ಗೋಪುರಗಳು ಐದುಲಕ್ಷ ಸಂಖ್ಯೆಯಲ್ಲಿರುವುವು. ||೫||

ಆ ಪ್ರಾಕಾರದ ಗೋಡೆಗಳು ಪಾತಾಲಲೋಕದಿಂದ ಮೇಲಕ್ಕೆದ್ದಿರುವುವು. ಪ್ರತಿ ಪ್ರಾಕಾರವೂ ಹೀರರತ್ನ ಕಲ್ಪಿತವಾದದ್ದೇ. ಅವುಗಳಲ್ಲೆಲ್ಲಾ ಕಪೋತಗಳು ವಾಸಿಸುವಂತಹ ಪಾಲಿಕೆಗಳು ವಿಶೇಷವಾಗಿವೆ. ಅನೇಕ ದೇವತೆಗಳು ಅಲ್ಲಿ ವಾಸ ಮಾಡುತ್ತಿರುವರು. ||೬||

ಅಲ್ಲಿ ರುದ್ರಾವತಾರದ ಕ್ರೀಡಾವಿಗ್ರಹಗಳು ಬಹಳವಾಗಿರುವುವು. ಅನೇಕ ಕಲಶಗಳೂ, ಬಸವನ ವಿಗ್ರಹಗಳೂ ವಿರಾಜಿಸುತ್ತಿರುವುವು. ಅದರ ಮೇಲ್ಭಾಗದಲ್ಲಿ ದೇವಿಯೊಡನೆ ದಿವ್ಯಸಿಂಹಾಸನದಲ್ಲಿ ಮಹೇಶ್ವರನು ಮಂಡಿಸಿರುವನು. ||೭||

ಹೀಗೆ ಕೈಲಾಸಪರ್ವತದ ಗೋಪುರಾಗ್ರದಲ್ಲಿ ಹೀರರತ್ನಗಳಿಂದ ಅಲಂಕೃತ

ದೇವ್ಯೈ ವದತ್ಪಶುಪತಿಸ್ಸಮಹಚ್ಚ ಕಾಲಂ ।
ದೇವಾದಿಲೋಕಮಖಿಲಂ ಕಥಯತ್ಯಮಾಯೈ ॥೮॥

ಕೈಲಾಸಶೈಲಶಿಖರಸ್ಥಿತದಿವ್ಯಲಿಂಗ ।
ಸಂಖ್ಯಾಹರೀಂದ್ರವಿಧಿಭಿಸ್ತ್ವಹಿನಾಯಕೇನ ।
ಗಣ್ಯಂತ ಏವ ದಿವಿ ತಾರಕಪಾಂಸುಜಾಲಂ ।
ಧಾರಾಪಿ ವರ್ಷಜನಿತಾಶ್ಶೃಣು ಶೈಲಕನ್ಯೇ ॥೯॥

ಲಿಂಗಾನಾಂ ಕುಲಮೇತದೇವ ಗಿರಿಜೇ ಮಂದಾರಮಾಲಾರ್ಚಿತಂ ।
ಬಿಲ್ವೈಕೋಮಲಪಲ್ಲವೈರಭಿನವೈರ್ದೂರ್ವಾಂಕುರೈಶ್ಶಂಕರಿ ।
ಕಾಲೇ ಪುಣ್ಯತಮೇ ಪ್ರದೋಷಸಮಯೇ ವೀತಾಘಸಂಘೇ ಶಿವೇ ।
ಕಾರ್ಯಂ ಸರ್ವಸುರಾಸುರೈರಪಿ ಮಯಾ ರತ್ನಪ್ರಭಾದೀಪಿತಂ ॥೧೦॥

ಕೈಲಾಸಾಚಲಲಿಂಗಮಂಡಲಮಿದಂ ಭಾಸ್ವಜ್ಜಟಾಮಂಡಲಂ ।
ಗಂಗಾತುಂಗತರಂಗಶಂಕಿತಮಹಾಕಾಕೋದರಾಕಲ್ಪಕಂ ।

---

ವಾದ ಪ್ರದೇಶದಲ್ಲಿ ಮಣಿಖಚಿತವಾದ ಪೀಠದಲ್ಲಿ ಕುಳಿತು ಪರಮೇಶ್ವರನು ದೇವಿಗೆ ಸಕಲ ಲೋಕಗಳ ಸ್ವರೂಪವನ್ನೂ ವಿವರಿಸಲಾರಂಭಿಸಿದನು. ||೮||

" ದೇವಿಯೇ, ಈ ಕೈಲಾಸ ಶಿಖರದಲ್ಲಿರುವ ದಿವ್ಯ ಲಿಂಗಗಳ ಸಂಖ್ಯೆಯನ್ನು ತಿಳಿಯಲು, ವಿಷ್ಣು, ಇಂದ್ರ, ಬ್ರಹ್ಮ, ಆದಿಶೇಷ ಇವರು ಮಾತ್ರ ಸಮರ್ಥರು. ಅಂತರಿಕ್ಷದ ನಕ್ಷತ್ರಗಳನ್ನು, ವೃಷ್ಟಿಕಾಲದಲ್ಲಿ ಬೀಳುವ ನೀರಿನ ಹನಿಗಳನ್ನು ಹೇಗೆ ಎಣಿಸಲಸಾಧ್ಯವೋ ಹಾಗೆ ಈ ಶಿವಲಿಂಗಗಳ ಸಂಖ್ಯೆಯು ಗಣನಾತೀತವಾದದ್ದು. ||೯||

ದೇವಿಯೇ, ಈ ಶಿವಲಿಂಗಗಳು ಮಂದಾರಪುಷ್ಪಗಳಿಂದ ಪೂಜಿತವಾಗಿವೆ. ಬಿಲ್ವ, ದೂರ್ವೆ, ಇನ್ನೂ, ವಿಧವಿಧವಾದ ಚಿಗುರುಗಳು, ಇವುಗಳಿಂದ ಶ್ರೇಷ್ಠತಮವಾದ ಪ್ರದೋಷ ಸಮಯದಲ್ಲಿ ಪಾಪನಿವಾರಕನಾದ ಶಿವನನ್ನೂ ಪೂಜಿಸಬೇಕು. ದೇವಾಸುರರೂ, ನಾನೂ ಆ ರೀತಿ ಈ ದಿವ್ಯಲಿಂಗಗಳನ್ನು ಪ್ರದೋಷಕಾಲದಲ್ಲಿ ಪೂಜಿಸುವೆವು. ||೧೦||

ಕೈಲಾಸ ಪರ್ವತದಲ್ಲಿರುವ ಲಿಂಗಗಳ ಸಮೂಹವು ಜಟಾಮಂಡಲಗಳಿಂದ ಅಲಂಕೃತವಾಗಿದೆ. ಇಂತಹ ಸ್ವಚ್ಛವಾದ ಲಿಂಗಗಳಲ್ಲಿ ಗಂಗಾ ತರಂಗಗಳ ಭ್ರಾಂತಿ

ಮಂದಾರದ್ರುಮಪುಷ್ಪಸಂಚಯಮಹಾಬಿಲ್ವಾದಿಮಲ್ಲೀಸುಮೈ ।
ರತ್ನಾಗಾರಸುಕುಂಭಮಧ್ಯವಿಲಸನ್ಮಧ್ಯೇ ಸ್ಥಿತಂ ಪಶ್ಯ ಮೈ ॥೧೧॥

ಬಿಲ್ವಾನಾಂ ಮೂಲಭಾಗೇ ವಿಲಸತಿ ಮಣಿಭಿಶ್ಚಂದನೈಶ್ಶೀತಶೀತೈಃ ।
ಕರ್ಪೂರೈಶ್ಚ ಸುಗಂಧಿತೇ ಹರಿಗಣೈರಾಮೋದಜಿಘ್ರಾಸುಭಿಃ ।
ನಿತ್ಯಂ ವೇಷ್ಟಿತಮೌಳಿಭಾಗಮಮಲೈಸ್ತಚ್ಛೀತವಾತಾಶನೈ ।
ಸ್ಸೇವ್ಯೋಽಹಂ ಕರುಣಾಪಯೋನಿಧಿರುಮೇ ಲೋಕೇ ಸ್ವಲಿಂಗೋಚ್ಚಯಂ ॥

ಸ್ವೀಯೈರ್ಮೌಲಿಶಶಾಂಕದೀಧಿತಿಚಯೈ ರ್ಗಾಂಗೈರಿವಾಂಭೋಭರೈ ।
ಕೂಜತ್ಕೋಕಿಲಸದ್ದ್ವಿಜೈರಿವ ಮಹಾರುದ್ರಾದಿಸನ್ಮಂತ್ರಿತೈಃ ।
ಸರ್ವಾಂಗೇಷ್ವಭಿಷಿಕ್ತಮೈಶ್ವರಮಹಾಲಿಂಗಂ ಚ ತತ್ಪತ್ರಕೈ ।
ರ್ವಾತೈರೇವ ವಿಲೂನವೃತ್ತಪತಿತೈಸ್ಸಂಪೂಜಿತಂ ಪಶ್ಯ ಮೇ ॥೧೩॥

---

ಯನ್ನುಂಟುಮಾಡಿ ದೊಡ್ಡ ಸರ್ಪಗಳು ಇಲ್ಲಿ ಸಂಚರಿಸುತ್ತಾ ಲಿಂಗಗಳಿಗೆ ಅಲಂಕಾರ ವಸ್ತುಗಳಾಗಿವೆ. ಅಲ್ಲದೆ ಮಂದಾರಪುಷ್ಪ, ಬಿಲ್ವಪತ್ರೆ, ಮಲ್ಲಿಗೆಯ ಹೂವು ಇವೇ ಮೊದಲಾದುವುಗಳಿಂದ ಅರ್ಚಿತವಾಗಿ, ರತ್ನಾಹಾರಗಳ ಮಧ್ಯದಲ್ಲಿ ವಿರಾಜಿಸುತ್ತಲಿರುವ ಈ ಶಿವಲಿಂಗವನ್ನು ನೋಡು. ಎಷ್ಟು ಮನೋಹರವಾಗಿರುವುದು! ॥೧೧॥

ಈ ಕೈಲಾಸಲಿಂಗಗಳ ಸಮೂಹವು ಬಿಲ್ವವೃಕ್ಷಗಳ ಮೂಲಭಾಗದಲ್ಲಿ ಪ್ರಕಾಶಿಸುತ್ತಿದೆ. ಶೀತಲವಾದ ಚಂದನದಿಂದಲೂ, ತಂಪಾದ ಕರ್ಪೂರದಿಂದಲೂ ಸುಗಂಧಮಯವಾಗಿದೆ. ಪುಷ್ಪಗಳ ಸುವಾಸನೆಗೆ ಪಕ್ಷಿಗಳು ಬಂದು ಮುತ್ತಿಕೊಂಡಿವೆ. ಶೀತವಾತಾಶನಗಳಾದ ಸರ್ಪಗಳು ಲಿಂಗಗಳ ಮೌಳಿಭಾಗವನ್ನು ಅಲಂಕರಿಸುತ್ತಿವೆ. ಇಂತಹ ದಿವ್ಯ ವಸ್ತುಗಳಿಂದ ದೇವಿಯೇ, ನಾನು ಅಲ್ಲಿ ಸೇವಿಸಲ್ಪಡುತ್ತಿರುವೆನು. ॥೧೨॥

ದೇವಿಯೇ, ಶಿವಲಿಂಗದಮೇಲಿರುವ ಚಂದ್ರಕಾಂತಿಯೆಂಬ ಗಂಗೋದಕವನ್ನು ಮೇಘಗಳು ಅಭಿಷೇಕಮಾಡುತ್ತಿವೆಯೋ ಎಂಬಂತೆ ತೋರುತ್ತಿದೆ. ಕೋಗಿಲೆಗಳೆಂಬ ಬ್ರಾಹ್ಮಣರು ತಮ್ಮ ನಾದವೆಂಬ ರುದ್ರಪಾರಾಯಣದಿಂದ ನನ್ನನ್ನು ಹೊಗಳುತ್ತಿವೆ. ಪ್ರದಕ್ಷಿಣಾಕಾರವಾಗಿ ಬೀಸುವ ವಾಯುವು ಬಿಲ್ವಪತ್ರಗಳನ್ನು ತಂದು ಶಿವಲಿಂಗವನ್ನು ಅರ್ಚಿಸುವಂತಿದೆ. ಇಂತಹ ಕೈಲಾಸಲಿಂಗವನ್ನು ನೋಡು. ॥೧೩॥

ಏಷಾಮುಗ್ರಭುವಿ ಪ್ರಚಂಡಜರಯಾ ಪ್ರೋಚ್ಚಂಡಪಿಂಛೋತ್ಥಿತೈ ।
ರ್ವಾತೈರೇವ ಶಿಖಂಡಿಮಂಡಲಮಿದಂ ಪ್ರೋಚ್ಚಂಡಸತ್ತಾಂಡವಂ ।
ಕೇಕಾಲಾಪಮನೋಹರಂ ಚ ವಿಪಿನೇ ಸನ್ನರ್ತಕೀನಾಂ ದಶಾಂ ।
ಪ್ರಾಪ್ಯೈವೋದ್ಗಾಯತೀವ ಪ್ರಥಿತಬಹುರಸಂ ಪುಣ್ಯಸಂಘೈಃ ಕಿಲೇದಂ॥೧೪॥

ಅಸ್ಮಿನ್ ಬಿಲ್ವವನೇ ನವಾರುಣದಲಾಕ್ರಾಂತೋರುಶಾಖಾನ್ವಿತೇ ।
ಪ್ರಚ್ಛಾಯೇ ಚಮರೀಗಣಾಃ ಪತನತೋ ಭೀತ್ಯೈವ ಮೂಲಂ ಗತಾಃ ।
ತತ್ರತ್ಯೇಷು ಪತತ್ಪತ್ರನಿಚಯೋತ್ಸಂಗಾಕುಲತ್ಪತ್ರಕೈಃ ।
ಪುಚ್ಛೈಶ್ಚಾಮರ ಪಂಕ್ತಿವಚ್ಛಕಲಿತೈರ್ವಿಜಂತಿ ಲಿಂಗಾನ್ಯಮೇ ॥೧೫॥

ಸಂತುಷ್ಟಾ ಭವ ಶೈಲನಂದಿನಿ ಶಿವೇ ನಾತಃ ಪರಂ ವಿದ್ಯತೇ ।
ಮಲ್ಲಿಂಗಾರ್ಚನಮೇವ ಸಾಧನಪರಂ ಮುಕ್ತಿಪ್ರದಂ ಶಾಶ್ವತಂ ।

---

ಶಿವಲಿಂಗಗಳ ಮುಂಭಾಗದಲ್ಲಿ ತಮ್ಮ ಗರಿಗಳನ್ನು ಕೆದರಿಕೊಂಡು, ಮಂದ ಮಾರುತದಿಂದ ಕೂಡಿ ನವಿಲುಗಳ ತಂಡವು ನಾಟ್ಯವಾಡುತ್ತಿವೆ. ಬಾಯಲ್ಲಿ ಕೇಕಾರವ ಗೈಯ್ಯುತ್ತಾ ನರ್ತಕಿಯರಂತೆ ಗಾನಮಾಡುತ್ತಿವೆ. ಹೀಗೆ ಮಯೂರಗಳಿಂದ ಸೇವಿತ ವಾಗಿ ಮಹಾಮಹಿಮೆಯಿಂದ ಕೂಡಿರುವ ದಿವ್ಯಲಿಂಗಗಳನ್ನು ಪುಣ್ಯಾತ್ಮರು ಭಕ್ತಿಯಿಂದ ಪೂಜಿಸುವರು. ||೧೪||

ಈ ಬಿಲ್ವವನವಾದರೋ, ಕೆಂಪಾದ ಎಸಳುಗಳಿಂದಲೂ ಶಾಖೆಗಳಿಂದಲೂ ಕೂಡಿ ನೋಡಲು ಬಹು ಮನೋಹರವಾಗಿರುವುದು. ಇದರ ನೆರಳಿನಲ್ಲಿ ಚಮರೀ ಮೃಗಗಳು ಕೈಲಾಸಪರ್ವತದಿಂದ ಎಲ್ಲಿ ಬೀಳುವೆವೋ ಎಂಬ ಭಯದಿಂದ ಚಲಿಸದೆ ಬುಡದಲ್ಲಿಯೇ ನಿಂತಿವೆ. ಬಿಲ್ವವೃಕ್ಷಗಳ ಮೇಲೆ ಪಕ್ಷಿಗಳ ತಂಡವು ಕುಳಿತು ಚಲನಗ ಳಿಂದ ಪತ್ರೆಗಳನ್ನು ಲಿಂಗಗಳ ಮೇಲೆ ಬೀಳಿಸುತ್ತಿವೆ. ಚಮರೀಮೃಗಗಳು ಸಾಲಾಗಿ ತಮ್ಮ ಬಾಲಗಳನ್ನು ಮೇಲೆತ್ತಿಕೊಂಡು ಬೀಸುತ್ತಲಿವೆ. ಇದರಿಂದ ಈ ಲಿಂಗಸಮೂಹವು ಚಮರೀಮೃಗಗಳಿಂದ ಸೇವಿಸಲ್ಪಡುತ್ತಿದೆಯೋ ಎಂಬಂತೆ ಕಂಡುಬರುತ್ತಿದೆ. ||೧೫||

ಎಲೌ ದೇವಿಯೇ, ನನ್ನ ಲಿಂಗದ ಅರ್ಚನೆಯೊಂದನ್ನು ಭಕ್ತಿಯಿಂದ ನಡೆ ಸುವುದಾದರೆ, ಅವರಿಗೆ ಮುಕ್ತಿಯು ಅತ್ಯಂತ ಸುಲಭವೆನಿಸುವುದು. ನಿಜವಾಗಿಯೂ ಲಿಂಗಾರ್ಚನೆಯು ಮೋಕ್ಷಕ್ಕೆ ಸಾಕ್ಷಾತ್ಕಾರಣವಾಗುವುದು. ಉಳಿದ ಜಪತಪಾದಿಗಳು,

ಕಿಂ ಯಜ್ಞೈರಖಿಲವ್ರತಾದಿಚರಣೈಃ ಕಿಂ ದಾನಸಂಘೈರ್ಜಪೈ ।
ರೇತತ್ಕಿಂ ವಿತನೋತಿ ಮುಕ್ತಿರಿತಿ ಯಾ ಸಾ ಧೀರ್ಹಿ ದುಃಖಾತ್ಮನಾಂ ॥೧೬॥

ಉದ್ಯದ್ಬಾಲದಿವಾಕರೇಂದುಸದೃಶೈಃ ಕೈಲಾಸಶೃಂಗಾಗ್ರಗೈ ।
ರ್ಮಾಣಿಕ್ಯಾಮಲಹೀರಕೈಶ್ಚ ಕಲಿತೈಸ್ಸೌಧಾಗ್ರಶೃಂಗೈ ಶ್ಶಿವೇ ।
ತತ್ತಲ್ಲೋಕನಿವಾಸಿಭಿಸ್ಸುರಗಣೈಸ್ಸಂಜಾತವಿಸ್ಮಾಪಕೈ ।
ರ್ನಾನಾಸೂರ್ಯಶಶಾಂಕಸಂಭವಮಹಾಕಾಂತ್ಯಾಧಿಕಂ ಶೋಭತೇ ॥೧೭॥

ಕೈಲಾಸಾಚಲಸಾನುಪಾದಶಿಖರೇ ಸತ್ಯಾಧಿಕೇ ಮೇರುಗಾ ।
ಲೋಕಾಲೋಕಿನ ಏವ ತತ್ರ ವಿಹಿತಾ ದಿಕ್ಪಾಲಸಂಘಾಶ್ಶಿವೇ ।
ಬ್ರಹ್ಮಾವಿಷ್ಣುಮಹೇಶ್ವರಾಮರವರಾಸ್ಸಪ್ತರ್ಷಯೋಽಮೀ ಗ್ರಹಾ ।
ಶ್ಚೌತ್ತಾನಾತ್ಮಜ ಏಷ ಭಾಂತಿ ನಿತರಾಂ ತಾರಾಗಣಾ ರಾಶಯಃ ॥೧೮॥

---

ಯಜ್ಞವ್ರತಾದಿಗಳು ಶಾಶ್ವತವಾದ ಮುಕ್ತಿಯನ್ನು ಎಂದಿಗೂ ಕೊಡಲಾರವು. ಲಿಂಗಾರ್ಚನೆಯ ಮುಂದೆ ಉಳಿದ ದಾನಧರ್ಮಾದಿಗಳು ವ್ಯರ್ಥವೆನಿಸುವುವು. ಆದರೆ ಮೇಲೆ ಹೇಳಿದ ಜಪತಪಾದಿಗಳು ಮೋಕ್ಷವನ್ನು ಒದಗಿಸುತ್ತವೆಯೆಂಬ ವಾಕ್ಯಗಳು ಕೇವಲ ಮಂದಾಧಿಕಾರಿಗಳಿಗೇ ಹೊರತು ಜ್ಞಾನಿಗಳಿಗಲ್ಲ. ಪಾರ್ವತಿಯೇ ಇದನ್ನು ತಿಳಿದು ನೀನು ಸಂತುಷ್ಟಳಾಗು. ||೧೬||

ಈ ಕೈಲಾಸಶಿಖರದ ಅಗ್ರಭಾಗದಲ್ಲಿ ಮಾಣಿಕ್ಯ, ಅಮಲಹೀರರತ್ನ ಮುಂತಾದ ದಿವ್ಯಮಣಿಗಳಿವೆ. ಅವೆಲ್ಲವೂ ಬಾಲಸೂರ್ಯರಂತೆಯೂ, ಪೂರ್ಣಚಂದ್ರನಂತೆಯೂ ಪ್ರಕಾಶಮಾನವಾಗಿವೆ. ಇವುಗಳ ಕಾಂತಿಯನ್ನು ನೋಡಿ, ಸ್ವರ್ಗಾದಿ ಲೋಕಗಳಲ್ಲಿ ವಾಸಿಸುವ ದೇವತೆಗಳು ಸಹ ಆಶ್ಚರ್ಯಪಡುತ್ತಿರುವರು. ಇಂತಹ ತೇಜಃಪುಂಜದಿಂದ ರಂಜಿಸುವ ಈ ಶಿವಲಿಂಗತಂಡವು ಅನೇಕ ಸೂರ್ಯಚಂದ್ರರ ಕಾಂತಿಯನ್ನು ಮೀರಿಸಿ ಹೊಳೆಯುತ್ತಿರುವುದು. ನೋಡು. ||೧೭||

ಗಿರಿಜೆಯೇ, ಈ ಕೈಲಾಸಪರ್ವತದ ತಪ್ಪಲುಪ್ರದೇಶವೇ ಬ್ರಹ್ಮನ ಸತ್ಯಲೋಕಕ್ಕಿಂತಲೂ ಎತ್ತರವಾದ ಭಾಗದಲ್ಲಿದೆ. ಅಲ್ಲಿಯೇ ಸಮಸ್ತಲೋಕಗಳನ್ನೂ ರಕ್ಷಿಸುತ್ತಿರುವ ಇಂದ್ರಾದಿ ದಿಕ್ಪಾಲಕರು ನೆಲಸಿರುವರು. ಬ್ರಹ್ಮ, ವಿಷ್ಣು, ಮಹೇಶ್ವರ, ಸಪ್ತರ್ಷಿಗಳು, ಇನ್ನೂ ಉಳಿದ ದೇವಶ್ರೇಷ್ಠರು, ನವಗ್ರಹಗಳು, ಉತ್ತಾನಪಾದ

**ತೇ ಮೇರುಂ ಪರಿತೋ ಭ್ರಮಂತಿ ಗಿರಿಜೇ ಪಶ್ಯಾಧುನಾ ಸಂತತಂ ।**
**ತತ್ತದ್ಗೋಪುರಮಧ್ಯಭಾಗವಿಲಸತ್ತೌರ್ಯತ್ರಿಕಾಣಾಂ ಸ್ವನೈಃ ।**
**ತತ್ತತ್ಕಾಲಶಿವಾರ್ಚನೇಷು ಕಲಿತೈರ್ಭೇರೀಜಶಂಖಾರವೈಃ ।**
**ಕೈಲಾಸೋಽಪ್ಯಯಮಿಶ್ವರೇಶ್ವರಿ ಮಹಾಸನ್ನಾದನಾದಾಂತರಃ ॥೧೯॥**

**ಮೇಘಾನಾಂ ಶತಕೈರಪಿ ಪ್ರಮುದಿತೋ ಘೋಷೈಕಭೂಷಾಮುಖಃ ।**
**ವಸುಧಾಧರಕಂದರಾಂತರಸ್ಥಾ ರದಖಂಡದ್ವಿರದಾಃ ಕಿಶೋರಸಿಂಹಾಃ ।**
**ಸ್ವಕಕಂಧರಕೇಸರೈರ್ನಗೇಂದ್ರಂ ಪರಿನಿಂದಂತಿ ವಿದೀಪ್ತಮಿತ್ಯಮೇಽದ್ಯ ॥**

**ರವಿರಥತುರಗೋತ್ಥಹೇಷಘೋಷಂ ।**
**ಪರಿಶೃಣ್ವಂತಿ ಇಮೇ ಹಯಾರಿಸಂಘಾಃ ।**
**ವಿನತಾನನಕರ್ಣಶೃಂಗನೇತ್ರಾ ।**
**ಸ್ತಟದುತ್ಥಾಖಿಲಘಸ್ಮರೈಕರಾವಾಃ ॥೨೦॥**

---

ರಾಯನ ಮಗನಾದ ಧ್ರುವನು ತಾರಾಮಂಡಲಗಳು ಇವರೆಲ್ಲರೂ ಆ ತಪ್ಪಲುಪ್ರದೇಶ ದಲ್ಲಿಯೇ ವಾಸಿಸುತ್ತಿರುವರು. ||೧೮||

ಆ ಗ್ರಹಾದಿಗಳು ಮೇರುಪರ್ವತವನ್ನು ಸುತ್ತುತ್ತಿರುವರು. ಆ ಪರ್ವತ ವಾದರೋ ಅನೇಕ ಶಿಖರಗಳುಳ್ಳದ್ದಾಗಿ, ಪ್ರತಿದೇವತೆಗಳಿಗೂ ಆವಾಸಸ್ಥಾನವಾಗಿರು ವುದು. ಹಾಗೆ ಸುತ್ತುತ್ತಾ ದೇವತೆಗಳು ಕಾಲಕಾಲಕ್ಕೆ ಸರಿಯಾಗಿ ತಪ್ಪದೆ ಶಿವಾ ರ್ಚನೆಮಾಡುತ್ತಿರುವರು. ಅವರು ಆ ಕಾಲದಲ್ಲಿ ನಡೆಸುವ ಪೂಜಾದಿಗಳಿಗಾಗಿ ತುತ್ತೂರಿ, ಭೇರಿ, ಶಂಖ ಮುಂತಾದ ವಾದ್ಯಗಳು ಧ್ವನಿಮಾಡುವುದನ್ನು ಕೇಳು. ಒಟ್ಟಿನಲ್ಲಿ ಈ ಕೈಲಾಸಪರ್ವತವೇ ಆ ಪೂಜಾಕಾಲದ ವಾದ್ಯಧ್ವನಿಗಳಿಂದಾವೃತ ವಾಗಿದೆ, ಎಂಬುದನ್ನು ನೀನು ದೃಢವಾಗಿ ನಂಬು. ||೧೯||

ಈ ಕೈಲಾಸವು ನಾನಾ ವಿಧವಾದ ಮೇಘರಾಜಿಗಳಿಂದ ಪ್ರಕಾಶಿಸುತ್ತಾ, ಮೇಘಧ್ವನಿಯಿಂದ ಸಂತೃಪ್ತಿ ಪಡೆದಿದೆಯೋ ಎಂಬಂತೆ ತೋರಿಬರುವುದು. ಮದ್ದಾನೆಗಳು ಪರ್ವತಗಳ ಗುಹೆಯನ್ನು ತಿವಿದು ತಮ್ಮ ದಂತಗಳನ್ನು ಅರ್ಧ ಮುರಿದುಕೊಂಡು ಸಂಚರಿಸುತ್ತಿವೆ. ಸಿಂಹದಮರಿಗಳು, ತಮ್ಮ ಕಂಠದಲ್ಲಿರುವ ಕೇಸರಗಳಿಂದ ಕೂಡಿ ಧ್ವನಿಗೈಯ್ಯುತ್ತಾ ಈ ಕಾಂತಿಮತ್ತಾದ ಪರ್ವತವನ್ನು ಧಿಕ್ಕರಿಸುತ್ತಿವೆಯೋ ಎಂಬಂತೆ ಕಾಣುತ್ತಿರುವುದು. ||೨೦||

ಖರಖುರಪರಿಘಟ್ಟನೋತ್ಥಧೂಳ್ಯಾ ।
ಜಲದನಿಭಂ ರವಿಮುಂಬಿಕೇಽದ್ಯ ಪಶ್ಯ ।
ರವಿರಪಿ ಸ್ವತನೂಜಮುಖ್ಯವಾಹೈಃ ।
ಗಿರಿಸಂಸ್ಥೈರಭಿಜಾತಲಜ್ಜಯೇವ ॥೨೨॥

ಪ್ರಸಭಂ ಮೇಘಗಣಂ ವಿಶೀರ್ಯ ಹಸ್ತೈ ।
ರ್ವಿಜಿತೋಽಸ್ಮೀತಿ ದಿಶಂ ಪ್ರಯಾತಿ ಯಾಮೀಂ ।
ಮದಾಲಯೋಽಯಂ ಕಲಧೌತಶೈಲ ।
ಸ್ತದಗ್ರತೋ ಭಾತಿ ಸುವರ್ಣಶೈಲಃ ॥೨೩॥

ತದೂರ್ಧ್ವಮೌಲಿಸ್ಥಿತಲೋಕಜಾಲಂ ।
ವಿಲೋಕಯಾಧೋ ವಿಹಿತಂ ನಗಸ್ಯ ಮೇ ॥೨೪॥

---

ಸೂರ್ಯನ ರಥಕ್ಕೆ ಹೂಡಿರುವ ಕುದುರೆಗಳು ಪ್ರಯಾಣಕಾಲದಲ್ಲಿ ಹೇಷಾಧ್ವನಿ ಗೈಯ್ಯುತ್ತಿವೆ. ಅದನ್ನು ಕೇಳಿದ ಕಾಡೆಮ್ಮೆಗಳು, ಕುದುರೆಗಳ ಮೇಲಿನ ದ್ವೇಷದಿಂದ ತಮ್ಮ ಮುಖ, ಕಿವಿ, ಕೋಡು, ಕಣ್ಣುಗಳನ್ನು ನೆಲಕ್ಕೆ ಬಗ್ಗಿಸಿ ಹುಂಕಾರ ಮಾಡುತ್ತವೆ. ಆ ಧ್ವನಿಯು ಈ ಸ್ಥಳದಲ್ಲಿ ಮೇಘಗಳಿಂದ ಹೊರಡುವ ಸಿಡಿಲಿನ ಧ್ವನಿಯನ್ನು ಅನುಕರಿಸತಕ್ಕದ್ದಾಗಿರುತ್ತದೆ. ||೨೧||

ಈ ಕಾಡುಕೋಣಗಳು ತಮ್ಮ ಕಠಿನವಾದ ಕಾಲುಗಳಗೊರಸಿನಿಂದ ಓಡಾಡುತ್ತಿವೆ. ಇದರಿಂದ ಎದ್ದಧೂಳಿಯು ಗಗನ ಪರ್ಯಂತವಾಗಿ ವ್ಯಾಪಿಸಿ, ತೇಜಸ್ವಿಯಾದ ಸೂರ್ಯನನ್ನೂ ಸಹ ಮೇಘದಂತೆ ಮಂಕಾಗಿ ಮಾಡುತ್ತಿರುವುದು. ಇದನ್ನು ನೋಡಿದರೆ ತನ್ನ ಮಗನಾದ ಯಮನ ವಾಹನಗಳೆನಿಸಿದ ಗಿರಿಸದೃಶವಾದ ಕಾಡುಕೋಣಗಳು ತನ್ನನ್ನು ಇಷ್ಟು ಮಂಕುಮಾಡುತ್ತಿವೆಯಲ್ಲಾ ಎಂಬ ನಾಚಿಕೆಯು ಸೂರ್ಯನಿಗೆ ಉಂಟಾಗಿದೆಯೋ ಎಂಬಂತೆ ತೋರಿಬರುವುದು. ||೨೨||

ಆದರಿಂದಲೇ ಸೂರ್ಯನು ಕೋಪಿಸಿಕೊಂಡು ತನ್ನ ಕಿರಣಗಳಿಂದ ಮೇಘಜಾಲವನ್ನೆಲ್ಲಾ ಓಡಿಸಿ, ಯಮನ ದಿಕ್ಕನ್ನು ಕುರಿತು (ದಕ್ಷಿಣದಿಕ್ಕಿಗೆ) ಹೋಗುತ್ತಿರುವನು. ನೋಡು. ದೇವಿಯೇ, ಈ ಗ್ರಹ ನಕ್ಷತ್ರಾದಿಗಳ ಸಂಚಾರಕ್ಕೆ ಅವಕಾಶ ಕೊಟ್ಟಿರುವ ಮೇರುಪರ್ವತವು ಈ ನನ್ನ ಆವಾಸಸ್ಥಾನವಾದ ಕೈಲಾಸದ ಬುಡದಲ್ಲಿ

**ಬ್ರಹ್ಮಾಪ್ಯೇಷ ಸೃಜತ್ಯಜಸ್ರಮಖಿಲಂ ಲೋಕಂ ಹರಿಃ ಪಾತ್ಯಯಂ ।**
**ರುದ್ರಸ್ಸಂಹರತೇಽನಿಶಂ ಸುರವರೈರ್ದಿಕ್ಪಾಲಸಂಘೈಶ್ಶಿವೇ ।**
**ಸತ್ಯಸ್ಥೋ ವಿಧಿರೇಷ ವಿಷ್ಣುಭವನಂ ವೈಕುಂಠಮಾಲೋಕಯಾ ।**
**ಹೀಶಾನಸ್ಯ ಪುರೀಯಮದ್ರಿವರಜೇ ಚೇಂದ್ರಸ್ಯ ಚೈಷಾಪುರೀ ॥೨೫॥**

**ಏಷಾ ಸಂಯಮಿನೀ ಪುರೀ ಸುವಿಹಿತಾ ಕ್ಷೀರೋದಧೇಃ ಪಾರತೋ ।**
**ಗಂಗೈಷಾ ಸರಿತಾಂ ವರಾ ತ್ರಿಜಗತಾಂ ಪಾಪಾಪಹಾ ಮೇ ಪುರೀ ।**
**ಲಿಂಗಾಲಂಕೃತಕೋಟಿಕಾರ್ಬುದನಿಭಾ ವಾರಾಣಸೀಜ್ಯಾ ಶಿವೇ ।**
**ವಿಶ್ವೇಶಾಖ್ಯಮಹೇಶಲಿಂಗವರದಾ(ಗಾ)ದೇವ್ಯನ್ನಪೂರ್ಣಾ(ರ್ಣಾಂ)ತ್ವಯಾ॥**

**ಸುರಾಸುರಾ ಯತ್ರ ವಸಂತಿ ಮುಕ್ತಯೇ ।**
**ವಸಂತ್ಯನಿಷ್ಟಂ ಪರಿಹಾಯ ಮತ್ಸರಂ ।**

---

ರುತ್ತದೆ. ಮೇರು ಪರ್ವತಾಗ್ರದಲ್ಲಿರುವ ಲೋಕಗಳೆಲ್ಲವೂ ನಮಗೆ ಅಧೋಭಾಗದಲ್ಲಿ ಗೋಚರವಾಗುತ್ತಿವೆ. ||೨೩-೨೪||

ಬ್ರಹ್ಮನು ಸಕಲ ಲೋಕಗಳನ್ನೂ ಸೃಷ್ಟಿಸುವನು. ಹರಿಯು ರಕ್ಷಿಸುವನು. ರುದ್ರನು ಸಂಹರಿಸುವನು. ಸಕಲ ಸುರರೂ, ದಿಕ್ಪಾಲಕರೂ ಅವರವರ ಲೋಕಗಳನ್ನು ಕಾಪಾಡುತ್ತಿರುವರು. ಬ್ರಹ್ಮನು ಸತ್ಯಲೋಕದಲ್ಲಿ ವಾಸಿಸುವನು. ವೈಕುಂಠದಲ್ಲಿ ವಿಷ್ಣುವು ನೆಲಸಿರುವನು. ಈಶಾನನ ಪಟ್ಟಣವೂ, ಇಂದ್ರನ ಅಮರಾವತಿಯೂ ಇಲ್ಲಿಯೇ ಇರುವುದು. ||೨೫||

ಇಲ್ಲಿ ಕಾಣುವ ಕ್ಷೀರಸಮುದ್ರದ ಪಕ್ಕದಲ್ಲಿ ಸಂಯಮಿನಿಯೆಂಬ ಪಟ್ಟಣವೊಂದಿರುವುದು. ನದಿಗಳಲ್ಲೆಲ್ಲಾ ಶ್ರೇಷ್ಠವಾದ ಗಂಗಾನದಿಯು ಇಲ್ಲಿಂದಲೇ ಹುಟ್ಟಿ ಭೂಲೋಕದಲ್ಲಿ ನನ್ನ ವಾಸಸ್ಥಾನವೆನಿಸಿದ ವಾರಾಣಸೀ ಪಟ್ಟಣದ ಸಮೀಪದಲ್ಲಿ ಹರಿಯುವುದು. ಆ ನಗರವು ಮೂರು ಲೋಕದವರನ್ನೂ ಪವಿತ್ರಗೊಳಿಸತಕ್ಕದ್ದು. ಅಲ್ಲಿ ಕೋಟಿಸಂಖ್ಯೆಯ ಶಿವಲಿಂಗಗಳಿವೆ. ಅಷ್ಟು ಲಿಂಗಗಳಿಂದ ತೇಜಸ್ವಿಯಾದ ಆ ವಾರಾಣಸಿಯಲ್ಲಿಯೇ ನೀನು ವಿಶ್ವೇಶ್ವರಲಿಂಗಕ್ಕೆ ವರಕೊಡುವವಳಾಗಿ ಅನ್ನಪೂರ್ಣೆಯೆಂಬ ಹೆಸರಿನಿಂದ ನೆಲಸಿರುವೆಯಷ್ಟೆ. ||೨೬||

ಆ ವಾರಾಣಸಿಯಲ್ಲಿ ದೇವರಾಕ್ಷಸರೂ ತಮ್ಮ ತಮ್ಮ ವೈರವನ್ನು ದೂರಮಾಡಿ ಮುಕ್ತಿಸಂಪಾದನೆಗಾಗಿ ವಾಸಮಾಡುತ್ತಿರುವರು. ಏಕೆಂದರೆ ಶಿವಸಂಬಂಧವಿಲ್ಲದ

ಯತೋ ನ ಮುಕ್ತಂ ಹಿ ಮಯಾ ವಿಮುಕ್ತಂ ।
ವದಂತಿ ವೇದಾ ಅಪಿ ತತ್ಪ್ರಭಾವಂ ॥೨೭॥

ಗಂಗಾದ್ವಾರಮಿದಂ ಪಿತುಸ್ತವ ಮಹಾಮೌಲೌ ಚ ಕೇದಾರಕಂ ।
ಚೈಷಾ ಸಾ ಬತ ಪಾಟಲೀನಗರಗಾ ಯಸ್ಯಾಃ ಸುತಾ ಮಾನಸಾಃ ।
ಗಂಗಾಸೂರ್ಯತನೂಜಯೋಶ್ಚ ವಿಹಿತಸ್ಸಂಗೋಽತ್ರ ಮುಕ್ತ್ಯೈ ನೃಣಾಂ ।
ಸ್ನಾತಾನಾಂ ಚ ಸದಾ ಸರಿತ್ಪತಿವರೇಣಾಲಿಂಗಿತಾ ಜಾಹ್ನವೀ ॥೨೮॥

ಗಂಗಾಸಾಗರಸಂಗಮೋಽತ್ರ ಗಿರಿಜೇ
ಸೋಮೇಶ್ವರೋಽಯಂ ಸದಾ ।
ಸೇವ್ಯಾನಾಂ ಸಫಲಂ ಕರೋತಿ ಚ
ಮನಸ್ಸಂತಾಪಪಾಪಾಪಹಂ ॥೩೯॥

---

ಸ್ಥಳವು ಮುಕ್ತಿಯನ್ನು ಕೊಡಲಾರದೆಂದು ವೇದಗಳು, ಬಹುವಾಗಿ ಹೊಗಳುತ್ತಿರುವುದರಿಂದ ಆ ಕ್ಷೇತ್ರದಲ್ಲಿ ಮೋಕ್ಷಾರ್ಥಿಗಳೆಲ್ಲರೂ ನೆಲಸಿರುವರು. ||೨೭||

ದೇವಿಯೇ, ನಿನ್ನ ತಂದೆಯಾದ ಹಿಮಾಲಯದ ಅಗ್ರಭಾಗದಲ್ಲಿರುವ ಕೇದಾರಕ್ಷೇತ್ರವೇ ಗಂಗಾನದಿಗೆ ಮೂಲಪ್ರದೇಶ. ಅಲ್ಲಿಂದ ಗಂಗಾನದಿಯು ಪಾಟಲೀಪುರವನ್ನು ಕುರಿತು ಹೋಗುವುದಾಗುವುದು. ಇದರಂತೆಯೇ ಮಾನಸರೋವರದಲ್ಲಿ ಹುಟ್ಟುವ ನದಿಗಳೆಲ್ಲಾ ಗಂಗಾನದಿಯ ಮಕ್ಕಳೆಂದೇ ಹೇಳಬಹುದು. ಮುಂದೆ ಇರುವ, ಗಂಗಾ ಯಮುನಾ ನದಿಗಳ ಸಂಗಮ, ಗಂಗಾಸಾಗರ ಸಂಗಮ, ಈ ಪ್ರದೇಶಗಳಲ್ಲಿ ಸ್ನಾನಮಾಡುವವರಿಗೆ ದೇವಗಂಗೆಯು ಸುಲಭವಾಗಿ ಮುಕ್ತಿಯನ್ನು ಕೊಡುವುದು. ||೨೮||

ಅದೇ ಗಂಗಾಸಾಗರ ಸಂಗಮಸ್ಥಳದಲ್ಲಿ ಸೋಮೇಶ್ವರನಾಮಕವಾದ ಶಿವಲಿಂಗವಿರುವುದು. ಅದು ಭಕ್ತರ ಇಷ್ಟಾರ್ಥವನ್ನು ನೆರವೇರಿಸಿ, ಅವರ ಮನಸ್ಸಿನಲ್ಲಿರುವ ಸಕಲ ಸಂತಾಪಗಳನ್ನೂ ನಿವಾರಿಸುವ ಸಾಮರ್ಥ್ಯವುಳ್ಳದ್ದು. ||೨೯||

ಏಷ ಪ್ರಯಾಗಸ್ಸಕಲಾಪಗಾಶ್ರಯೋ
ಗಂಗಾಽಪಿ ಯತ್ರಾಂಬುಜಮಿತ್ರಜಾಯುತಾ ।
ತತ್ರಾಪ್ಲುತಾನಾಂ ದಿವಿ ದೇವಿ ವಾಸೋ
ವಿಸರ್ಜಿತಾಂಗಾ ಯದಿ ತೇಷು ಮುಕ್ತಿಃ ॥೩೦॥

ಸಾ ಬ್ರಹ್ಮಣೋ ವೇದಿರನಂತಪುಣ್ಯದಾ
ಗಯಾ ಪಿತೄಣಾಂ ಪ್ರಮುದೇ ಭವಾನಿ ।
ಪಶ್ಯಾದ್ಯ ತತ್ರೈವ ಪದಂ ಮದೀಯಂ
ಸುರದ್ವಿಜಾನಾಂ ತು ತಥೈವ ವೈಷ್ಣವಂ ॥೩೧॥

ತನ್ನೈಮಿಷಂ ಪುಣ್ಯತಮಂ ಮಹರ್ಷಿಭಿಃ
ಸಮಾಕುಲಾಂ ತಾಂ ಬದರೀಂ ವಿಲೋಕಯ ।
ಸಚಿತ್ರಕೂಟಸ್ಸುರಸಂಘಸಂವೃತ
ಸ್ಸಪ್ತೈವ ಪುರ್ಯೋಽತ್ರ ವಿಮುಕ್ತಿಹೇತವಃ ॥೩೨॥

---

ಗಂಗಾನದಿಯು ಸೂರ್ಯನಂದಿನಿಯಾದ ಯಮುನಾ ನದಿಯೊಡನೆ ಸೇರುವ ಪ್ರದೇಶಕ್ಕೆ ಪ್ರಯಾಗಕ್ಷೇತ್ರವೆಂದು ಹೆಸರು. ಅದು ಸಕಲ ತೀರ್ಥಗಳಿಗೂ ಆಶ್ರಯ ವಾದದ್ದು. ಅಲ್ಲಿ ಸ್ನಾನಮಾಡಿದವರಿಗೆ, ದೇವಲೋಕ ಪ್ರಾಪ್ತಿಯಾಗುವುದು. ದೇಹ ತ್ಯಾಗಮಾಡಿದವರಿಗಂತೂ ಮೋಕ್ಷವು ಅತಿ ಸುಲಭವಾಗಿ ದೊರೆಯುವುದು. ॥೩೦॥

ಅಲ್ಲಿಯೇ ಬ್ರಹ್ಮಕಪಾಲಕ್ಷೇತ್ರವಿರುವುದು. ಅದು ಅತ್ಯಂತ ಪುಣ್ಯಕರ ವಾದದ್ದು. ಅದರ ಸಮೀಪದಲ್ಲಿರುವ ಗಯಾಕ್ಷೇತ್ರವು ಪಿತೃದೇವತೆಗಳಿಗೆ ತೃಪ್ತಿಯು ನ್ನುಂಟುಮಾಡತಕ್ಕದ್ದು. ಅಲ್ಲಿಯೇ ನನ್ನ ಪಾದವೊಂದಿರುವುದು. ವಿಷ್ಣುವಿನ ಪಾದವೂ ಅಲ್ಲಿಯೇ ತೋರಿಬರುವುದು. ಈ ಪ್ರದೇಶವು ಸುರರಿಗೂ, ಭೂಸುರರಿಗೂ ವಿಶೇಷವಾದ ಫಲವನ್ನು ಕೊಡತಕ್ಕದ್ದಾಗಿದೆ. ॥೩೧॥

ಅದರ ಹತ್ತಿರವಿರುವ ನೈಮಿಷಾರಣ್ಯಕ್ಷೇತ್ರವು ಮಹರ್ಷಿಗಳಿಗೆ ನೆಲೆಮನೆ ಯಾಗಿದೆ. ಅಲ್ಲಿಯೇ ಬದರಿಕಾಶ್ರಮವೂ ಇದೆ. ಸುರಸಂಘಗಳಿಂದ ಕೂಡಿರುವ ಚಿತ್ರಕೂಟಕ್ಷೇತ್ರ, ಮುಕ್ತಿಪ್ರದಗಳಾದ ಸಪ್ತಪುರಿಗಳು ಇವೆಲ್ಲವೂ ಆ ಸುತ್ತುವಳಯ ದಲ್ಲಿಯೇ ಇರುವುವು. ॥೩೨॥

ಏತದ್ದ್ವಾದಶಲಿಂಗಸಂಘಮಗಜೇ ತತ್ತತ್ಪುರೀಷು ಸ್ಥಿತಂ ।
ಚೋಂಕಾರೋ ಘುಸೃಣೇಶ್ವರೋಽಯಮಗಜೇ ಶ್ರೀಕಾಮನಾಥೋಂಬಿಕೇ ॥೩೩॥

ಅಸೌ ಮಹಾಕಾಲವರೋ ಮಹೇಶೋ ।
ನಾಗೇಶ್ವರೋ ವೇಣುವನೈಕಸಂಶ್ರಯಃ
ಏಷಾ ಶರ್ಮದನರ್ಮದಾತ್ರಕಲಿತಾ ಲಿಂಗೈಕಸಂಘಾವೃತಾ
ಶೋಣೋಽಯಂ ಸರಿತಾಂ ಪತಿಃ ಪ್ರವಹತೇ ಲಿಂಗೈಕಸಂಘಾಶ್ರಯಃ ।
ಪುಣ್ಯಾ ಬಾಹುನದೀ ಸುಪುಷ್ಕರಮಿದಂ ಪುಣ್ಯಂ ಪ್ರಭಾಸಂ ತ್ವಿದಂ
[1]ಮಲ್ಲಿಂಗಾಮಲಪಾತಕಂ ಗಿರಿವರಾಜ್ಞಾತೇಽಮರಂ ಕಂಟಕಂ ॥೩೪॥

ಶ್ರೀರುದ್ರೋಽಮರಕೋಟಿರೇಷ ವಿಹಿತಃ ಪಿಂಡಾರಕಂ ಮತ್ಪ್ರಿಯಂ
ಚೈತತ್ಕ್ಷೇತ್ರವರಂ ಕುರುಪ್ರಭವಜಂ ವಿಂಧ್ಯೋಽಹ್ಯಯಂ ಶೈಲಜೇ ।

---

ಮೇಲೆ ಹೇಳಿದ ಹನ್ನೆರಡು ಕ್ಷೇತ್ರಗಳಲ್ಲಿಯೂ ಹನ್ನೆರಡು ಶಿವಲಿಂಗಗಳಿವೆ. ಓಂಕಾರೇಶ್ವರ, ಘುಸೃಣೇಶ್ವರ, ಶ್ರೀಕಾಮನಾಥೇಶ್ವರ ಇವೆಲ್ಲವೂ ಪವಿತ್ರವಾದ ಲಿಂಗಗಳು. ॥೩೩॥

ಮಹಾಕಾಲೇಶ್ವರ, ನಾಗೇಶ್ವರ ಇವು ವೇಣುವನದಲ್ಲಿ ಪ್ರತಿಷ್ಠಿತವಾಗಿವೆ. ಸಕಲರಿಗೂ ಸೌಖ್ಯವನ್ನುಂಟುಮಾಡುವ ನರ್ಮದಾನದಿಯು ಅನೇಕ ಶಿವಲಿಂಗಗಳಿಂದ ಆವೃತವಾಗಿದೆ. ನದಿಗಳಲ್ಲೆಲ್ಲಾ ಶ್ರೇಷ್ಠವೆನಿಸಿದ ಶೋಣಾನದಿಯು ಅನೇಕ ಲಿಂಗಗಳನ್ನು ಹೊಂದಿ ಪವಿತ್ರವೆನಿಸಿದೆ. ಹಾಗೆಯೇ ಬಾಹುನದಿಯು ಶುದ್ಧೋದಕವುಳ್ಳದ್ದು (ಶಂಖನೆಂಬ ಋಷಿಯ ಆಶ್ರಮದಲ್ಲಿ ಲಿಖಿತನೆಂಬ ಋಷಿಯು ಅಪ್ಪಣೆಯಿಲ್ಲದೆ ಫಲವನ್ನು ಕೊಯ್ದನು. ಆ ತಪ್ಪಿತಕ್ಕೆ ಪ್ರದ್ಯುಮ್ನರಾಜನು ಲಿಖಿತನ ಕೈಗಳನ್ನು ಕತ್ತರಿಸಿದನು. ಲಿಖಿತನು ಈ ನದಿಯಲ್ಲಿ ಸ್ನಾನಮಾಡಿ ಮತ್ತೆ ಬಾಹುಗಳನ್ನು ಪಡೆದನು. ಇದರಿಂದ ಆ ನದಿಗೆ ಬಾಹುನದೀ ಎಂದು ಹೆಸರಾಯಿತು.) ಪ್ರಭಾಸತೀರ್ಥವೂ, ಅಮರಕಂಟಕವೆಂಬ ಕ್ಷೇತ್ರವೂ ಶಿವಲಿಂಗಗಳಿಂದ ತುಂಬಿ ತೇಜೋಮಯವಾಗಿರುವುವು. ॥೩೪॥

ಶ್ರೀರುದ್ರ, ಅಮರಕೋಟಿ, ಪಿಂಡಾರಕ ಈ ಕ್ಷೇತ್ರಗಳು ನನಗೆ ಬಹಳ ಪ್ರಿಯವಾದವುಗಳು. ಪಿಂಡಾರಕಕ್ಷೇತ್ರವು ಕುರುಕ್ಷೇತ್ರದಲ್ಲಿರತಕ್ಕದ್ದು. ಹಾಗೆಯೇ ಪಾರ್ವ

---

1. ಮಲ್ಲಿಂಗಾಮಲಭಾತಕಂ, (ಸಾ.ರ.)

ಏಷ ಶ್ರೀಶೈಲಮೌಳಿರ್ಭವಜನಿತಮಹಾಪಾಪಸಂಘೈಕಹಂತಾ
ಚೈಷಾ ತ್ರ್ಯಂಬಕಶೈಲಜಾ ಸುವಿಹಿತಾ ಗೋದಾವರೀ ನಿಮ್ನಗಾ ॥೩೫॥

ಕೃಷ್ಣಾ ಚಾಪಿ ಸರಿದ್ವರಾಬ್ಧಿನಿರತಾ ।
ಲಿಂಗಾವೃತಾ ಪುಣ್ಯದಾ ॥೩೬॥

ತತ್ಪ್ರಾಂತಸಂಸ್ಥೋ ಘಟಜೋ ಮುನೀಶೋ
ಮಯಾ ಪುರಾ ಪ್ರೇಷಿತ ಏವ ವಿಂಧ್ಯಹೃತ್ ।
ಪಶ್ಚಾದಥಾಂಭೋನಿಧಿತೀರಸಂಗತಂ
ಗೋಕರ್ಣಮೇತನ್ಮಮ ಲಿಂಗಮಂಬಿಕೇ ॥೩೭॥

ಅರುಂಧದೇಷೋಽಮರಮಾರ್ಗಮಂಬಿಕೇ
ಪ್ರಜಾತರೋಷಃ ಕನಕಾಚಲೇನ ।
ವಿಂಧ್ಯೋಽಪ್ಯಯಂ ಶೈಲವರಸ್ತ್ವದಾಶ್ರಯಾ
ತ್ಪುಣ್ಯಂ ಪ್ರತಿಷ್ಠಾನಪುರಂ ಸುಪುಣ್ಯದಂ ॥೩೮॥

---

ತಿಯೇ, ವಿಂಧ್ಯಪರ್ವತವು ಪರ್ವತಗಳಲ್ಲೆಲ್ಲಾ ಶ್ರೇಷ್ಠವಾದುದು. ಮಹಾಮಹಾ ಶಿವಲಿಂಗಗಳಿಗೆ ಆಶ್ರಯವಾಗಿ ಸಂಸಾರದಲ್ಲಿ ತೊಳಲುತ್ತಿರುವವರ ದುಃಖಗಳನ್ನೆಲ್ಲಾ ಹೋಗಲಾಡಿಸತಕ್ಕದ್ದಾಗಿದೆ. ಹಾಗೆಯೇ ಶ್ರೀಶೈಲಕ್ಷೇತ್ರವೂ ಸಕಲ ಪಾಪನಿವಾರಕ ವಾದದ್ದೆನಿಸಿದೆ. ತ್ರ್ಯಂಬಕಪರ್ವತದಲ್ಲಿ ಹುಟ್ಟುವ ಗೋದಾವರೀ ನದಿಯೂ ಸಹ ಪವಿತ್ರವೆನಿಸಿದ್ದಾಗಿದೆ. ॥೩೫॥

ಅನೇಕ ಶಿವಲಿಂಗಗಳಿಂದ ಕೂಡಿ ಕೃಷ್ಣಾನದಿಯೂ ಸಹ ನದಿಗಳಲ್ಲೆಲ್ಲಾ ಶ್ರೇಷ್ಠವೆಂದೆನಿಸಿ ಪುಣ್ಯಕರವಾಗಿದೆ. ॥೩೬॥

ಆ ವಿಂಧ್ಯಪರ್ವತದ ತಪ್ಪಲಿನಲ್ಲಿಯೇ ಕುಂಭಸಂಭವನಾದ ಮಹರ್ಷಿ ಅಗಸ್ತ್ಯನು ಸಂಚರಿಸುತ್ತಿರುವನು. ಅಗಸ್ತ್ಯನನ್ನು ನಾನೇ ವಿಂಧ್ಯಪರ್ವತವನ್ನು ಬಗ್ಗಿಸುವುದಕ್ಕಾಗಿ, ಅಲ್ಲಿಗೆ ಕಳುಹಿಸಿದೆನು. ಪಶ್ಚಿಮಸಮುದ್ರದ ದಡದಲ್ಲಿ ನನ್ನ ಶ್ರೇಷ್ಠವಾದ ಲಿಂಗವು ಗೋಕರ್ಣಕ್ಷೇತ್ರದಲ್ಲಿ ನೆಲಸಿ ಪ್ರಸಿದ್ಧವಾಗಿದೆ. ॥೩೭॥

ಈ ವಿಂಧ್ಯಪರ್ವತವು ಮೇರುಪರ್ವತದ ಮೇಲಿನ ಸ್ಪರ್ಧೆಯಿಂದ ಎತ್ತರವಾಗಿ ಬೆಳೆದು ದೇವಮಾರ್ಗವನ್ನೆಲ್ಲಾ ತಡೆದುಬಿಟ್ಟಿತು. ಆಗ ಅಗಸ್ತ್ಯರ ಸಹಾಯದಿಂದ

ಕೋಲಾಸುರೇಣಾತ್ರ ಸಮೀಹಿತಾ ಪುರೀ
ತಪಸ್ಯತಾ ತಸ್ಯ ವಧಾತ್ತ್ವಯಾ ಜಿತಾ ।
ಏಷೋಽರುಣಾದ್ರಿಃ ಪ್ರಥಿತಪ್ರಭಾವೋ
ವೃದ್ಧಾದ್ರಿರಪ್ಯೇವ ಮಮೇಷ್ಟವಾಸಃ ॥೩೯॥

ಗೋಪರ್ವತಶ್ಚಾತ್ರ ವಿಭಾತಿ ಶೈಲಃ
ಕಾಂಚೀ ಜಗತ್ಕಾಂಚಿತಲಿಂಗಸಂಯುತಾ ।
ತ್ವದಾಶ್ರಯಾತ್ಕಾಂತತಮಾ ಚ ಸೈವ
ತ್ವದರ್ಚನಾರ್ಥಂ ಹರಿಣಾ ಚ ಸೇವಿತಾ ॥೪೦॥

---

ನಾನು ಅವರಿಗೆ ನಮಸ್ಕರಿಸುವ ನೆಪದಲ್ಲಿ ಅದನ್ನು ಬಗ್ಗಿಸಿ, ಪುನಃ ಅಗಸ್ತ್ಯನು ಅಲ್ಲಿಗೆ ಬರುವವರೆಗೂ ಅದು ಮಲಗಿರುವಂತೆ ತಂತ್ರಮಾಡಿಸಿದೆನು. ಅಗಸ್ತ್ಯನು ದಕ್ಷಿಣದಿಕ್ಕಿನಲ್ಲಿಯೇ ಇರಬೇಕೆಂದು ನಿಯಮಿಸಿರುವೆನು. ಅಂತಹ ವಿಂಧ್ಯಾಚಲವು ಈಗ ನಿನ್ನ ಸಾನ್ನಿಧ್ಯದಿಂದ ಪವಿತ್ರಕ್ಷೇತ್ರವೆನಿಸಿದೆ. ಅಲ್ಲಿಯೇ ಪುಣ್ಯಕರವಾದ ಪ್ರತಿಷ್ಠಾನ ನಗರವೂ ಇಂದು ಪ್ರಸಿದ್ಧಿಗೊಂಡಿದೆ. (ಈಗ ಆದಕ್ಕೆ ಪೈಠನ್ ನಗರ ವೆಂದು ರೂಢಿಯಿದೆ.) ||೩೮||

ಅಲ್ಲಿ ಕೋಲಾಸುರನೆಂಬುವನು ತಪಸ್ಸುಮಾಡಿ ಆ ಪಟ್ಟಣವನ್ನು ವಶಪಡಿಸಿ ಕೊಂಡಿದ್ದನು. ಅವನನ್ನು ನೀನು ಕೊಂದು ಅಲ್ಲಿ ನೆಲಸಿದೆ. ಅದೇ ಕೊಲ್ಲಾಪುರವು. ಅದರಂತೆ ನನ್ನ ವಾಸಕ್ಕೆ ಪ್ರಿಯವಾಗಿರುವ ಅರುಣಾದ್ರಿಯೂ, ವೃದ್ಧಾಚಲವೂ ಅಲ್ಲಿಯೇ ಇರುವುವು. ||೩೯||

ಅಲ್ಲಿಯೇ ಮುಂದೆ ಹೋದರೆ ವೃಷಾಚಲವು ಪವಿತ್ರವೆನಿಸಿದ್ದಾಗಿ ಪ್ರಕಾಶಿಸು ತ್ತಿರುವುದು. ಜಗತ್ತಿಗೆ ಭೂಷಣವಾಗಿರುವ ಶಿವಲಿಂಗದಿಂದ ಪ್ರಕಾಶಿತವಾದ ಕಾಂಚೀ ಪಟ್ಟಣವು ಬಹು ಪವಿತ್ರಕ್ಷೇತ್ರವೆನಿಸಿದೆ. ನೀನು ಅಲ್ಲಿ ನೆಲಸಿರುವುದರಿಂದಲೂ, ನಿನ್ನ ಅರ್ಚನೆಗಾಗಿ ಮಹಾವಿಷ್ಣುವು ಅಲ್ಲಿ ವಾಸಿಸುತ್ತಿರುವುದರಿಂದಲೂ ಅದು ಉತ್ತಮೋತ್ತಮಕ್ಷೇತ್ರವೆನಿಸಿಕೊಂಡಿದೆ. ||೪೦||

ಶೇಷಾಚಲಸ್ತ್ವೇಷ ಸುತಾಶ್ರಯೋ ಮಮ
ತದುತ್ತರೇ ಭಾತಿ ಮಹೇಶಿ ಪಶ್ಯ ।
ಕೈಲಾಸ ಏಷೋಭಿಮತೋ ಹಿ ದಕ್ಷಿಣ
ಸ್ಸಹ್ಯಾಚಲೋ ಹ್ಯೇಷ ಯತೋ ಮರುದ್ವೃಧಾ ॥೪೧॥

ಸಹ್ಯಾಪಗಾ ತೀರಗಲಿಂಗಮಂಡಲಂ
ಮಹಾಪ್ರಭಾವಂ ಕಿಲ ಶೈಲಕನ್ಯೇ ।
ಕವೇರಕನ್ಯಾತಟಲಿಂಗಸಂಘಂ
ಶ್ರೀಕಂಠರತ್ನಾದ್ರಿಕಮಾತೃಭೂತಂ ॥೪೨॥

ತಜ್ಜಂಬುಲಿಂಗಂ ಚ ಹರಿಸ್ತತೋಪಿ
ಪಂಚಾಪಗೇಶಾಖ್ಯಮಹೋ ಭವಾನಿ ।
ಕುಂಭೇಶ್ವರಂ ಲಿಂಗಮಿದಂ ಮನೋಜ್ಞಂ
ತದರ್ಜುನಂ ಚಾಪಿ ಮಯೂರಲಿಂಗಂ ॥೪೩॥

---

ಕಾಂಚೀನಗರದ ಉತ್ತರಭಾಗದಲ್ಲಿ ಶೇಷಾಚಲವೆಂಬ ಪವಿತ್ರವಾದ ಶೈಲವಿದೆ. ಅಲ್ಲಿ ನನ್ನ ಮಗನಾದ ಬಾಲಸುಬ್ರಹ್ಮಣ್ಯನು ನೆಲಸಿರುವನು. ಇದನ್ನೇ ದಕ್ಷಿಣ ಕೈಲಾಸ (ತಿರುಪತಿಕ್ಷೇತ್ರ)ವೆನ್ನುವರು. ಅದರ ಪಶ್ಚಿಮಭಾಗದಲ್ಲಿ ಸಹ್ಯಾದ್ರಿಯಿರುವುದು. ಅಲ್ಲಿಂದಲೇ ಮರುತ್ತಿನಿಂದ ವೃದ್ಧಿಯಾಗುವ ಕಾವೇರೀನದಿಯು ಹುಟ್ಟುವುದು. ॥೪೧॥

ಸಹ್ಯಾದ್ರಿಯಲ್ಲಿ ಹುಟ್ಟುವ ನದಿಗಳ ದಡದಲ್ಲೆಲ್ಲಾ ಅನೇಕ ಶಿವಲಿಂಗಗಳು ಪ್ರತಿಷ್ಠಿತವಾಗಿರುವುವು. ಅದರಿಂದಲೇ ಅದು ಮಹಾಮಹಿಮೆಯುಳ್ಳದ್ದಾಗಿರುವುದು. ಕಾವೇರೀನದಿಯ ದಡದಲ್ಲಂತೂ ಅನೇಕ ಶಿವಲಿಂಗಗಳು ಪ್ರತಿಷ್ಠಿತವಾಗಿರುವುವು. ಶ್ರೀಕಂಠೇಶ್ವರ, ರತ್ನಾದ್ರಿ ಮುಂತಾದ ಕ್ಷೇತ್ರಗಳಿಗೆ ಅದು ಮಾತೃಭೂಮಿಯೆನಿಸಿದೆ. ॥೪೨॥

ವಿಷ್ಣುವು ಜಂಬುಕೇಶ್ವರಕ್ಷೇತ್ರದಲ್ಲಿ ಜಂಬುಲಿಂಗವನ್ನೂ, ಪಂಚಾಪಗೇಶವೆಂಬ ಮತ್ತೊಂದು ಲಿಂಗವನ್ನು ಪ್ರತಿಷ್ಠಿಸಿರುವನು. ಕುಂಭೇಶ್ವರಲಿಂಗವೂ, ಅರ್ಜುನ ಲಿಂಗವೂ, ಮಯೂರಲಿಂಗವೂ ಬಹುಮಟ್ಟಿಗೆ ಮನೋಹರವಾದ ಪ್ರದೇಶದಲ್ಲಿರುವುವು. ॥೪೩॥

ಶ್ವೇತೇಶ್ವರಂ ತತ್ಪ್ರಥಿತಂ ವಿಮುಕ್ತಿದಂ
ತದುತ್ತರೇ ಯದ್ವಿರಜಂ ವಿಶೋಕಂ ।
ಹೃತ್ಪುಂಡರೀಕಂ ವಿಮಲಂ ಮಮಾಶ್ರಯಂ
ಯತ್ರೈವ ಮೇ ನರ್ತನಮಂಬಿಕೇ ತ್ವಯಾ ॥೪೪॥

ಸದ್ಯೈವ ದೃಷ್ಟಂ ಪ್ರಥಿತೇ ಪ್ರದೋಷೇ
ಕ್ಷಾರಾಂಬುಧೇಸ್ತೀರಗತಂ ಸುಪುಣ್ಯದಂ ।
ವೇದಾಖ್ಯಸತ್ಕಾನನಮುಬ್ಜಸಂಜ್ಞಂ
ಲಿಂಗಾವೃತಂ ತತ್ಕಮಲಾಲಯಾಖ್ಯಂ ॥೪೫॥

ಶ್ರೀಸುಂದರಂ ವಿಷ್ಣುಪುರಂ ಚ ದೇವಿ
ತತೋಽಪಿ ತದ್ವೀಪಗಗಂಧಮಾದನೇ ।
ನಗೋತ್ತಮೇ ಲಿಂಗವರಂ ಮಮಾಂಬಿಕೇ ॥೪೬॥

---

ಮುಕ್ತಿಪ್ರದವಾದ ಶ್ವೇತೇಶ್ವರಲಿಂಗವೂ, ಶೋಕನಾಶಕವಾದ ವಿರಜಲಿಂಗವೂ ಬಹಳ ಪವಿತ್ರವಾದವುಗಳು. ಆ ಉತ್ತರ ದಿಕ್ಕಿನ ವಿರಜಲಿಂಗದ ಪ್ರದೇಶದಲ್ಲಿಯೇ ನಾನು ಹಿಂದೆ ನರ್ತನಮಾಡಿದೆನು. ಅದು ನನಗೆ ಪ್ರಿಯತಮವಾದ ಪ್ರದೇಶವಾಗಿರುವುದು. ॥೪೪॥

ನನ್ನ ನಾಟ್ಯವನ್ನು ನೀನೂ ಆ ಪ್ರದೋಷಕಾಲದಲ್ಲಿ ನೋಡಿರುವೆ. ಇಂತಹ ಪವಿತ್ರಕ್ಷೇತ್ರಗಳೆಲ್ಲಾ ಲವಣಸಮುದ್ರದ ಸಮೀಪದಲ್ಲಿಯೇ ಇರುವುವು, ವೇದವೆಂಬುದೇ ಒಂದು ದೊಡ್ಡ ಕಮಲ. ಆ ವೇದವು ಲಿಂಗಮಯವಾಗಿದೆ. ಹಾಗೆ ಕಮಲಕ್ಕೆ ಆಲಯವಾಗಿರುವುದರಿಂದಲೇ ಶಿವಲಿಂಗವನ್ನು ಕಮಲಾಲಯವೆನ್ನುವರು. ಅಂತಹ ಕಮಲಾಲಯಾಖ್ಯಕ್ಷೇತ್ರವೊಂದು ಅಲ್ಲಿ ವಿರಾಜಿಸುವುದು. ॥೪೫॥

ಅಲ್ಲಿಯೇ ಇರುವ ಶ್ರೀಸುಂದರಲಿಂಗ, ವಿಷ್ಣುಪುರ ಇವೆಲ್ಲವೂ ಪವಿತ್ರವಾದವುಗಳು. ಅಲ್ಲಿಂದ ಮುಂದೆ ಗಂಧಮಾದನವೆಂಬ ಪರ್ವತವು ಒಂದು ದ್ವೀಪಮಧ್ಯದಲ್ಲಿರುವುದು. ಆ ಪರ್ವತದಲ್ಲಿ ಪವಿತ್ರವಾದ ಶಿವಲಿಂಗವೊಂದಿರುವುದು. ॥೪೬॥

ಹರಿಃ ಪುರಾ ಭಾರ್ಗವಜೇನ ಶಪ್ತೋ
ಭಾರ್ಯಾವಿಯುಕ್ತೋಽಪ್ಯಹನತ್ಸ ರಾವಣಂ ।
ತೇನೈವ ತತ್ಪೂಜಿತಮಂಬಿಕೇಽದ್ಯ
ಪಶ್ಯಾಧುನಾ ಸೇತುವರಂ ಸುಪುಣ್ಯದಂ ॥೪೭॥

ತತ್ಪಶ್ಚಿಮೇ ಪುಣ್ಯತಮಂ ಮಮಾಂಬಿಕೇ
ಹಾಲಾಸ್ಯಸಂಜ್ಞಂ ವರವೇಣುಸಂಜ್ಞಂ ।
ತತ್ರೈವ ತಾಮ್ರಾಚಲಸಂಗತೋಽಬ್ಧಿ
ಸ್ತತ್ತೀರಸಂಸ್ಥಾನ್ಯಪಿ ದೇವಿ ಪಶ್ಯ ॥೪೮॥

ಲಿಂಗಾನಿ ತುಂಗಾನಿ ಮನೋಹರಾಣಿ
ಮಹೇಂದ್ರಶೈಲೋ ಮಲಯಶ್ಚ ಶೈಲಃ ।
ಏತಾನಿ ತೇ ಕ್ಷೇತ್ರವರಾಣಿ ದೇವಿ
ದೃಷ್ಟಾನಿ ಚ ಶ್ರೋತ್ರವರೈಶ್ಶ್ರುತಾನಿ ॥೪೯॥

---

ಹಿಂದೆ ಇದೇ ಗಂಧಮಾದನಪರ್ವತದಲ್ಲಿ ಭೃಗುಮುನಿಯು ವಿಷ್ಣುವಿಗೆ ಶಾಪಕೊಟ್ಟನು. ರಾಮನು ಇಲ್ಲಿ ಪತ್ನೀರಹಿತನಾಗಿದ್ದು ಇಲ್ಲಿಂದಲೇ ಲಂಕಾಪಟ್ಟಣಕ್ಕೆ ಹೋಗಿ ರಾವಣನನ್ನು ಕೊಂದನು. ಅದಕ್ಕಾಗಿ ಸಮುದ್ರಕ್ಕೆ ಸೇತುವೆಯನ್ನು ಕಟ್ಟಿಸಿ ಆಗಲೇ ಶ್ರೀರಾಮನು ಅಲ್ಲಿ ಒಂದು ಶಿವಲಿಂಗವನ್ನು ಪ್ರತಿಷ್ಠಿಸಿರುವನು. ||೪೭||

ಅದರ ಪಶ್ಚಿಮದಿಕ್ಕಿನಲ್ಲಿ ಪವಿತ್ರಗಳಾದ ಹಾಲಾಸ್ಯಕ್ಷೇತ್ರ, ವೇಣುಕ್ಷೇತ್ರ ಮುಂತಾದ ಕ್ಷೇತ್ರಗಳಿರುವುವು. ಅವೂ ನನಗೆ ಪ್ರೀತಿಪಾತ್ರವಾದವುಗಳೇ. ಅಲ್ಲಿಯೇ ತಾಮ್ರಾಚಲಸಂಬಂಧವಾದ ಸಮುದ್ರವು ಕಂಡುಬರುತ್ತಿರುವುದು. ಅದರ ತೀರದಲ್ಲಿರುವ ಶಿವಕ್ಷೇತ್ರಗಳನ್ನು ನೋಡು. ||೪೮||

ಅಲ್ಲಿರುವ ಲಿಂಗಗಳೆಲ್ಲಾ ಬಹಳ ಎತ್ತರವಾಗಿ ಮನೋಹರಗಳಾಗಿರುವುವು. ಹಾಗೆಯೇ ಮಹೇಂದ್ರಪರ್ವತ, ಮಲಯಪರ್ವತ, ಮುಂತಾದ ಕ್ಷೇತ್ರಪ್ರದೇಶಗಳು ನಿನ್ನ ಸಾನ್ನಿಧ್ಯದಿಂದ ಶ್ರೇಷ್ಠವಾದವುಗಳೆಂದು ಪ್ರಸಿದ್ಧವಾಗಿವೆ. ||೪೯||

ಪಾಪಾದ್ರಿಮೌಳೀರ್ಭಿದುರಾಣಿ ಪಶ್ಯ ।
ಕ್ಷೇತ್ರೇಕ್ಷಣೇನಾಪಿ ವಿಮುಕ್ತಪಾಪಾಃ ॥೫೦॥

ಕ್ಷೇತ್ರಾಣಾಂ ಚ ಪತಿಸ್ಸದೈವ ಕಥಿತೋ ವೇದೇಷು ಪಶ್ಯಾದರಾ
ದಾರಾತ್ಸರ್ವಜಗದ್ಗತೋಽಪಿ ವಿದುಷಾಂ ದುಷ್ಟಾತ್ಮನಾಂ ಶೈಲಜೇ ।
ಕಷ್ಟಾನ್ಯಪ್ಯಸಮೀಕ್ಷ್ಯ ಯೋಽತ್ರ ವಿಹಿತಃ ಕ್ಷೇತ್ರೇಷು ವಾ ಸಾದರ
ಸ್ತಸ್ಮೈ ತಾಂ ವಿತರಾಮಿ ಮುಕ್ತಿಮುಗಜೇ ರುದ್ರಾಕ್ಷಭಸ್ಮಾದರೇ ॥೫೧॥

ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ಶಿವಗೌರೀಸಂವಾದೇ ಕ್ಷೇತ್ರವರ್ಣನಂ ನಾಮ ವಿಂಶೋಽಧ್ಯಾಯಃ

---

ಈ ಕ್ಷೇತ್ರಗಳು ಪಾಪವೆಂಬ ಪರ್ವತಪಂಕ್ತಿಗಳನ್ನು ಭೇದಿಸತಕ್ಕವುಗಳು. ಇವುಗಳ ದರ್ಶನದಿಂದಲೇ ಅನೇಕಪಾಪಗಳು ನಿವಾರಣೆಯಾಗುವುವು. ||೫೦||

ಪಾರ್ವತಿಯೇ, ಸಮಸ್ತ ಕ್ಷೇತ್ರಗಳಿಗೂ ಶಂಕರನೇ ಒಡೆಯನೆಂದು ಸಕಲ ವೇದಗಳೂ, ಸಾರುತ್ತಿವೆ. ಸಮಸ್ತ ಲೋಕಗಳಲ್ಲಿಯೂ, ವಿದ್ವಾಂಸರ, ಮತ್ತು ದುಷ್ಟರ ಮತ್ತು ಯೋಗ್ಯರಾದವರೆಲ್ಲರ ಮನಸ್ಸಿನಲ್ಲಿಯೂ ನಾನು ಅಡಗಿರುವೆನು. ಯಾರೇ ಆಗಲಿ ತಮ್ಮ ಶರೀರಕಷ್ಟಾದಿಗಳನ್ನು ಗಮನಿಸದೆ ಭಕ್ತಿಯಿಂದ ತೀರ್ಥ ಯಾತ್ರೆಗಳನ್ನು ಮಾಡಿದ್ದೇ ಆದರೆ ಅವರಿಗೆ ನಿಜವಾಗಿಯೂ ನಾನು ಮುಕ್ತಿಯನ್ನು ಕೊಡುವೆನು ಎಂಬುದರಲ್ಲಿ ಸಂದೇಹವಿಲ್ಲ, ಎಂದು ಪರಶಿವನು ಪಾರ್ವತಿಗೆ ಹೇಳಿದನು. ||೫೧||

ಇಲ್ಲಿಗೆ ಶಿವರಹಸ್ಯದ ಪ್ರಥಮಾಂಶದಲ್ಲಿ ಶಿವ ಮತ್ತು ಪಾರ್ವತೀಯರ ಸಂವಾದರೂಪವಾಗಿ ಕ್ಷೇತ್ರವರ್ಣನೆಯೆಂಬ ಇಪ್ಪತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

# ಅಥ ಶ್ರೀಶಿವರಹಸ್ಯೇ

## ಏಕವಿಂಶೋಽಧ್ಯಾಯಃ

### ಪ್ರಾಣಿಗತಿನಿರೂಪಣಂ

॥ ದೇವ್ಯುವಾಚ ॥

**ಕೇ ಗಚ್ಛಂತಿ ಮಹಾದೇವ ಹ್ಯೇತೇ ದೇವಗಣಾಶ್ಶಿವ ।**
**ಭಿತ್ತ್ವೈವ ಮಂಡಲಂ ಭಾನೋಃ ಕ ಏತೇ ಪುರುಷೋತ್ತಮಾಃ ॥೧॥**

**ಸೋಮಧಾಮ ಪ್ರವಿಷ್ಟಾಃ ಕೇ ನಿವೃತ್ತಾಶ್ಚ ತತಃ ಪುನಃ ।**
**ಧೂಮಲೇಖಾನಿಭಾಸ್ತೇ ಕೇ ಕಾಸ್ಸ್ತ್ರಿಯಸ್ತಾ ವರಾನನಾಃ ॥೨॥**

**ಕೇ ತೇ ಗಚ್ಛಂತಿ ಮುದಿತಾ ವಿಮಾನೈರರ್ಕಸನ್ನಿಭೈಃ ।**
**ತಾಡ್ಯಮಾನಾಃ ಕಶಾಘಾತೈರ್ಮುದ್ಗರೈರಾಯಸೈರ್ನರಾಃ ॥೩॥**

---

## ಶ್ರೀಶಿವರಹಸ್ಯದಲ್ಲಿ ಇಪ್ಪತ್ತೊಂದನೆಯ ಅಧ್ಯಾಯ

ಪಾರ್ವತಿಯು ಮತ್ತೆ ಪರಮೇಶ್ವರನನ್ನು ಕುರಿತು "ಸ್ವಾಮಿಯೇ, ಮಹಾದೇವನೇ, ಯಾರು ಸೂರ್ಯಮಂಡಲವನ್ನು ಭೇದಿಸಿ ದೇವಗಣಗಳೊಂದಿಗೆ ಬೆರೆಯುವವರು? ಅಂತಹ ಪುರುಷೋತ್ತಮರ ಲಕ್ಷಣವೇನು? ॥೧॥

ಚಂದ್ರಲೋಕವನ್ನು ಹೊಂದುವವರಾರು? ಅಲ್ಲಿಂದ ಹಿಂದಿರುಗಿ ಬರುವ ಪುರುಷರು ಹೇಗಿರುವರು? ಧೂಮಲೇಖೆಯಂತೆ ಭೂಮಿಗಿಳಿಯುವ ಮನುಷ್ಯರು ಎಂತಹವರು? ಯಾವರೀತಿಯ ಸ್ತ್ರೀಯರು ಮೇಲೆ ಹೇಳಿದ ಲೋಕಗಳನ್ನು ಸುಲಭವಾಗಿ ಪಡೆಯುವರು? ॥೨॥

ಯಾರು ಭೂಲೋಕದಲ್ಲಿ ದೇಹತ್ಯಾಗಮಾಡಿ, ಸೂರ್ಯಸದೃಶವಾದ ವಿಮಾನಗಳನ್ನೇರಿ ಮುಕ್ತಿಯನ್ನು ಪಡೆಯುವರು? ಅಥವಾ ಕಬ್ಬಿಣದ ಮುದ್ಗರಾಯುಧ

ಸ್ತ್ರಿಯೋ ಬಾಲಾಶ್ಚ ಪುರುಷೈ ರ್ವಿಕೃತಾಂಗೈಃ ಪ್ರಹಾರಿಣಃ ।
ಪಾಶಬದ್ಧಾ ವಿಕರ್ಷದ್ಭಿರ್ಯಾಂತಿ ಕೇ ದಕ್ಷಿಣಾಂ ದಿಶಂ ॥೪॥

ತದ್ವದಾದ್ಯ ಮಹಾದೇವ ಜಗಚ್ಚಕ್ರಪ್ರವರ್ತಕ ।
ಸೃಷ್ಟಿಸ್ಥಿತ್ಯಂತಕಾರ್ಯಾಣಾಂ ಪ್ರವರ್ತಕ ನಿವರ್ತಕ ॥೫॥

॥ ಸ್ಕಂದ ಉವಾಚ ॥

ಇತ್ಥಂ ದೇವ್ಯಾ ತದಾ ಪೃಷ್ಟೋ ಮಹಾದೇವೋ ಮಹೇಶ್ವರಃ ।
ಜಗಾದ ಗಿರಿಜಾಂ ತತ್ರ ತಸ್ಮಿನ್ ಕೈಲಾಸಸೌಧಕೇ ॥೬॥

ಸಂಪಶ್ಯನ್ ದೇವಯಾನಾನಿ ಪಿತೃಯಾನಾನಿ ಶಂಕರಃ ॥೭॥

॥ ಈಶ್ವರ ಉವಾಚ ॥

ಪಶ್ಯೋನ್ನಿದ್ರಸುರಕ್ತಪಂಕಜಲಸದ್ವಕ್ತ್ರೇ ಸುನೀಲೋತ್ಪಲ
ಭ್ರಾಜತ್ಫುಲ್ಲವಿಲೋಚನೇ ಹಿ ಯತಯಶ್ಶೋದ್ಯದ್ರವೇರ್ಮಂಡಲಂ ।

---

ದಿಂದಲೂ, ಚಾವಟಿಯ ಏಟುಗಳಿಂದಲೂ ಹೊಡೆಯಲ್ಪಡುತ್ತಾ ನರಕಭಾಗಿಗಳಾಗುವ ನರರು ಹೇಗಿರುವರು? ॥೩॥

ಯಮದೂತರ ಪೆಟ್ಟಿಗೆ ಸಿಕ್ಕಿ, ವಿಕೃತಾಂಗರಾಗಿ, ಪಾಶದಿಂದ ಎಳೆಯಲ್ಪಡುತ್ತಾ ದಕ್ಷಿಣ ದಿಕ್ಕಿಗೆ ಪ್ರಯಾಣಮಾಡುವ, ಬಾಲರು, ಸ್ತ್ರೀಯರು, ಪುರುಷರು ಇವರು ಹೇಗಿರುವರು? ॥೪॥

ಮಹೇಶ್ವರನೇ, ನಾನು ಕೇಳಿದ ಮೇಲಿನ ಪ್ರಶ್ನೆಗಳಿಗೆಲ್ಲಾ ಸಮಾಧಾನವನ್ನು ದಯೆಯಿಂದ ವಿವರಿಸು. ಜಗತ್ತೆಂಬ ಚಕ್ರವನ್ನು ತಿರುಗಿಸುವವನು ನೀನೇ ಅಲ್ಲವೆ? ನಿನ್ನ ಇಷ್ಟದಂತೆಯೇ ಜಗತ್ತಿನಲ್ಲಿ ಸೃಷ್ಟಿ, ಸ್ಥಿತಿ, ಲಯಗಳು ನಡೆಯುವುವು! ಹಾಗೆಯೇ ನಿಂತುಹೋಗುವುವು! ಆದ್ದರಿಂದ ದಯವಿಟ್ಟು ಆ ವಿಷಯಗಳನ್ನೆಲ್ಲಾ ವಿವರಿಸಲು ನೀನೇ ಸಮರ್ಥನು'' ಎಂದು ಪ್ರಶ್ನೆಮಾಡಿದಳು. ॥೫॥

ಹೀಗೆ ಕೇಳಿಕೊಂಡ ಪಾರ್ವತಿಯನ್ನು ಕುರಿತು ಮಹಾದೇವನು, ದೇವಯಾನ, ಪಿತೃಯಾನಗಳ ವಿಷಯವನ್ನು ಯೋಚಿಸುತ್ತಾ ಮುಂದೆ ಹೇಳುವಂತೆ ಅನೇಕ ರಹಸ್ಯಗಳನ್ನು ವಿವರಿಸಲಾರಂಭಿಸಿದನು. ॥೬-೭॥

ಅರಳಿದ ಕಮಲದಂತಿರುವ ಮುಖವುಳ್ಳ, ನೀಲೋತ್ಪಲದ್ವಂದ್ವದಂತೆ ಕಣ್ಣುಳ್ಳ

**ಭಿತ್ವಾ ಯಾಂತಿ ಸಮುಲ್ಲಸತ್ಸರಸಿಜಪ್ರೋದ್ಭೂತಲೋಕಂ ಶಿವೇ**
**ವೇದಾಂತಾರ್ಥವಿಚಾರಸಾರಹೃದಯಾಶ್ಶ್ರುತ್ವಾ ಗುರೋರ್ವಕ್ತ್ರತಃ ॥೮॥**

**ತತ್ತ್ವಂ ಶಬ್ದಮಸೀತ್ಯಪೀಹ ಚ ಮಹಾವಾಕ್ಯಾರ್ಥತಾತ್ಪರ್ಯತ**
**ಶ್ಶಬ್ದಬ್ರಹ್ಮಪರಾಶ್ಚ ಯೇ ಯತಿವರಾ ಗಚ್ಛಂತಿ ತೇ ಬ್ರಹ್ಮಣಾ ।**
**ಮುಕ್ತಾ ನೈವ ನಿವರ್ತಕಾ ಹಿ ಗಿರಿಜೇ ತದ್ಬ್ರಹ್ಮಲೋಕಾದುಮೇ**
**ಯೇ ವೈ ತ್ವಂತಿಮಕಾಲಶಬ್ದತ ಇಮೇ ಮಂತ್ರೇಣ ಕರ್ಮಂದಿನಃ ॥೯॥**

**ತೇ ವೈ ಸೂರ್ಯಗತಿಂ ಗತಾ ಅಪಿ ಶಿವೇ ತೇನಾತುರಾಃ ಕ್ಷೀಣತೋ**
**ವಿದ್ಯುತ್ಪುಂಜಸಮಾಃ ಪತಂತಿ ಚ ತತೋ ಬ್ರಾಹ್ಮಣ್ಯಮಾಸಾದ್ಯ ತೇ**
**ಕೃತ್ವಾ ಚಾಶ್ರಮಮಂತಿಮಂ ಪುನರುಮೇ ವೇದಾಂತನಿಷ್ಠಾ ಗುರೋ ।**
**ರ್ವಕ್ತ್ರಾಬ್ಜಚ್ಯುತವಾಕ್ಯತೋ ದ್ವಿಜವರಾ ನಾಲೀಕಜಾತಾಸನೋ**
**ಲೋಕಂ ಪ್ರಾಪ್ಯ ವಿಮುಕ್ತಯೇ ಚ ಸತತಂ ತೇ ಚಾಪ್ಯುಪಾಸಂತ್ಯಪಿ ॥೧೦॥**

---

ದೇವಿಯೇ ಕೇಳು. ಸೂರ್ಯಮಂಡಲವನ್ನು ಭೇದಿಸಿ ಬ್ರಹ್ಮಲೋಕವನ್ನು ಹೊಂದತ ಕ್ಕವರು ಯತಿಗಳು. ಅವರು ಗುರುಮುಖದಿಂದ ವೇದಾಂತಾರ್ಥಗಳನ್ನು ತಿಳಿದು, ಆತ್ಮವಿಚಾರಾದಿಗಳಿಂದ ಸಂಪೂರ್ಣವಾಗಿ ಜ್ಞಾನಿಗಳಾದರೆ, ಅವರಿಗೆ ಮಾತ್ರ ಅಂತಹ ಬ್ರಹ್ಮಲೋಕವು ಸುಲಭವಾಗಿ ದೊರಕುವುದು. ॥೮॥

ತತ್ವಮಸ್ಯಾದಿ ಮಹಾವಾಕ್ಯಗಳ ಅರ್ಥವನ್ನು ಗುರುಮುಖದಿಂದ ತಿಳಿದು ಬ್ರಹ್ಮಮಾರ್ಗಾನುಯಾಯಿಗಳಾಗಿರುವ ಯತಿಗಳು ಬ್ರಹ್ಮಾಭೇದವನ್ನು ಹೊಂದಿ ಮುಕ್ತರಾಗುವರು. ಅವರಿಗೆ ಅಲ್ಲಿಂದ ಪ್ರತಿನಿವೃತ್ತಿ ಇರುವುದಿಲ್ಲ. ಯಾರು ತಮ್ಮ ಅಂತ್ಯಕಾಲದಲ್ಲಿ ಮಾತ್ರ ಯತಿಗಳಾಗುವರೋ, ಮಂತ್ರಾರ್ಥವಿಚಾರಗಳಲ್ಲಿ ಯಾರು ಹೆಚ್ಚಾಗಿ ಪರಿಶ್ರಮಪಡದಿರುವರೋ, ಅವರು, ॥೯॥

ಸೂರ್ಯಗತಿಯನ್ನು ಭೇದಿಸಿ ಬ್ರಹ್ಮಲೋಕವನ್ನು ಸೇರುವರು. ಆದರೆ ಅವರು ಕ್ಷೀಣಪುಣ್ಯರಾಗಿ ಮಿಂಚಿನ ರೂಪದಲ್ಲಿ ಪುನಃ ಭೂಲೋಕಕ್ಕೆ ಹಿಂದಿರುಗುವರು. ಅಲ್ಲಿ ಬ್ರಾಹ್ಮಣ ಜನ್ಮದಲ್ಲಿ ಹುಟ್ಟಿ ಕೊನೆಯಲ್ಲಿ ಸಂನ್ಯಾಸಾಶ್ರಮವನ್ನು ತಾಳಿ, ಸದ್ಗುರುಗಳ ಮೂಲಕ ಬ್ರಹ್ಮ ವಿದ್ಯಾಭ್ಯಾಸ ಮಾಡುವರು. ಆ ಅಭ್ಯಾಸಬಲದಿಂದ ಮತ್ತೆ ಬ್ರಹ್ಮ ಲೋಕಕ್ಕೆ ಹೋಗಿ ಅಲ್ಲಿ ಶಾಶ್ವತವಾದ ಮುಕ್ತಿಗಾಗಿ ಪರಬ್ರಹ್ಮನನ್ನು ಉಪಾಸನೆ ಮಾಡುವರು. ॥೧೦॥

ಏತೇ ಚಾಗಮಸಂಗತಾಶ್ಚ ಹಿ ಸದಾ ಯಜ್ವಾನಮಿತ್ಯಾಹುತಿಂ
ವೈತಾನೇಷು ಹುತಾಹುತೀಭಿರಧುನಾ ನೀತಾಶ್ಚ ತೇ ಪೂಜಿತಾಃ ।
ವಿದ್ಯುತ್ಪುಂಜಸಮಪ್ರಭಾಭಿರಭಿತೋ ಹ್ಯೇಹೀತಿ ಚ ಪ್ರಾರ್ಥಿತಾ
ಶ್ಚಂದ್ರಾಸಾರಕರೈಸ್ಸದೈವ ನಿತರಾಂ ಯಾಂತ್ಯೇವ ತದ್ಧಾಮತಃ ॥೧೧॥

ನಿತ್ಯಾಗ್ನಿಹೋತ್ರವಿಧಿಪೂರ್ಣಮಸಾದಿದರ್ಶ
ಚಾಂದ್ರಾಯಣೈಶ್ಚ ಪಶುಭಿಸ್ಸಚತುರ್ಮಸೇಜ್ಯೈಃ ।
ಸೌತ್ರಾಮಣೀಭಿರಥ ಚೇಷ್ಟಿಸಮೂಹಜಾತೈಃ
ಸೋಮ್ಯೈಸ್ತಥೈವ ಕಠಕಾಗ್ನಿಚಿತೋ ದ್ವಿಜಾಗ್ರ್ಯಾಃ ॥೧೨॥

ಏಕಾಹಾಹೀನಸತ್ರೈರ್ಯಜತಿ ಚ ಸತತಂ ಚಾಗ್ನಿಚೇತಾ ದ್ವಿಜೋ ಯೋ ।
ಯಜ್ವಾ ಚಾರುಣಕೇತುತೋಽಪಿ ನಗಜೇ ಯಾತ್ಯೇವ ಚಂದ್ರಾಂಶು ತತ್॥೧೩॥

ಕಿಂ ಪಾಕಯಜ್ಞಗತಿಭಿಸ್ಮೃತಿಜಾತಧರ್ಮೈಃ
ಪಾಕೋ ಭವತ್ಯತಿತರಾಂ ಸುಕೃತೈಶ್ಚ ಪಾಕೈಃ ।

---

ಆಗಮೋಕ್ತವಾದ ಯಜ್ಞಗಳಲ್ಲಿ ಆಸಕ್ತರಾಗಿ, ತದಂಗವಾದ ಕರ್ಮಗಳಲ್ಲಿ ಆಹುತಿಗಳನ್ನು ದೇವತೆಗಳಿಗೆ ಕೊಟ್ಟು ಯಜಮಾನರೆನಿಸಿದವರು, ಚಂದ್ರ ಲೋಕವನ್ನು ಹೊಂದುವರು. ವಿದ್ಯುತ್ಪುಂಜದಂತೆ ಕಾಂತಿಯುಳ್ಳವರಾಗಿ ಚಂದ್ರ ಲೋಕದವರಿಂದ ಪ್ರಾರ್ಥಿತರಾಗಿ ಅಲ್ಲಿ ಸದಾ ಕಾಂತಿಮತ್ತಾಗಿ ನೆಲಸುವರು. ॥೧೧॥

ನಿತ್ಯವೂ ಅಗ್ನಿಹೋತ್ರ, ದರ್ಶಪೌರ್ಣಮಾಸರೂಪವಾದ ಇಷ್ಟಿಗಳು, ಚಾಂದ್ರಾಯಣವ್ರತಾದಿಗಳು, ಚಾತುರ್ಮಾಸಿಕವಾದ ತಪಸ್ಸು, ಸೌತ್ರಾಮಣಿ, ಸೋಮಯಾಗವೇ ಮೊದಲಾದ ಅನೇಕ ಯಾಗಗಳು, ಕಠೋಪನಿಷತ್ತಿನಲ್ಲಿ ಪ್ರತಿಪಾದ್ಯವಾದ ನಚಿಕೇತಾಗ್ನಿಪೂಜಾ, ಏಕಾಹದ ಯಾಗಗಳು, ಅನೇಕ ದಿನಗಳು ನಡೆಯುವ ಸತ್ರಾದಿಗಳು ಇವುಗಳನ್ನೆಲ್ಲಾ ನಡೆಸುವ ದ್ವಿಜಶ್ರೇಷ್ಠರು, ಅಗ್ನ್ಯಾರಾಧನೆಯಿಂದ ಚಿತ್ತಶುದ್ಧಿಯನ್ನು ಪಡೆದವರಾಗಿ ಸೂರ್ಯಲೋಕವನ್ನು ಭೇದಿಸಿಕೊಂಡು ಮುಂದುವರೆಯುವರು. ಚಂದ್ರಕಿರಣಗಳಾಗಿ ಪ್ರವಹಿಸುವವರೂ ಅವರೇ. ॥೧೨-೧೩॥

ದೇವಿಯೇ, ಪಾಕಯಜ್ಞವೇ ಮೊದಲಾದ ಧರ್ಮಶಾಸ್ತ್ರದಲ್ಲಿ ಉಕ್ತವಾದ ಧರ್ಮಗಳೆಲ್ಲಾ ಮುಕ್ತಿಸಾಧಕಗಳಲ್ಲ. ಆದರೆ ಅದೇಕರ್ಮಗಳನ್ನು ಭಕ್ತಿಪೂರ್ವಕ

ಕಿಂಪಾಕಸೇವಿತಜಲೇನ ಕಿಮತ್ರ ಸಾರಃ
ಕಿಂ ಪಾಕಏವ ಫಲತೋ ಭವತೀತಿ ಮನ್ಯೇ ॥೧೪॥

ಯೇ ರಾಜಸೂಯನರಸರ್ವಗವಾಶ್ವಮೇಧೈಃ
ಮೇಧಾಧಿಪಂ ಚ ಸಕಲಾಧಿಪಮಾದ್ರಿಯಾನಾಃ ।
ಯೇ ಸಪ್ತಹೋತೃವಿಧಿಯಾಜನತೋ ಭವಾನಿ
ಸೂರ್ಯಾತಿವಾಹಿಕಗತಿಂ ಸುಕೃತೈಃ ಪ್ರಯಾಂತಿ ॥೧೫॥

ಇಷ್ಟಾಪೂರ್ತಂ [1]ಧರ್ಮ ಇತ್ಯೇವ ಯೋ ವೈ
ಮತ್ಪಾದಾಬ್ಜಧ್ಯಾನಪೂಜಾವಿಹೀನಃ ।
ಅಭ್ರಂ ಧೂಮೋ ರಾತ್ರಿಮಾಸಾರ್ಧಮಾಸ್ಯೈ
ರ್ಯಾಂತ್ಯೇವಾಂತೇ ಧಾಮ ಸೋಮಸ್ಯ ಗೌರಿ ॥೧೬॥

---

ವಾಗಿ ಆಚರಿಸಿದವರು ಮಾತ್ರ ಅದರಿಂದ ಪುಣ್ಯವನ್ನು ಸಂಪಾದಿಸಿ ಅನಂತರ ಮುಕ್ತಿಗೆ ಅರ್ಹರೆನಿಸುವರು. ಕುತ್ಸಿತವಾದ ನೀರಿನಿಂದ ಕೂಡಿದ ಪಾಕವು ಹೇಗೆ ವ್ಯರ್ಥವೆನಿಸುವುದೋ, ಹಾಗೆಯೇ ಕುತ್ಸಿತವಾಗಿ ಆಚರಿಸಿದ ಆ ಕರ್ಮಗಳೂ ವ್ಯರ್ಥವೆನಿಸುವುವು. ಅಂತಹ ಕರ್ಮಾಚರಣೆಯಿಂದ ಸಂಪಾದಿಸಿದ ಫಲವು ಕಿಂಪಾಕಫಲದಂತೆ ಅಂದರೆ ನೀರಸವಾಗಿ ಒಣಗಿರುವ ಹಣ್ಣುಗಳಂತೆ ಸಾರ್ಥಕವಾಗುವುದಿಲ್ಲ. ॥೧೪॥

ರಾಜಸೂಯವೇ ಮೊದಲಾದ ಸಕಲ ಯಜ್ಞಗಳನ್ನೂ, ಅಶ್ವಮೇಧ, ಮುಂತಾದ ಮಹಾಯಾಗಗಳನ್ನೂ ಮಾಡಿ, ಮೇಧಾದಿಗಳಾದ ಪಂಚಅಂತಃಕರಣಗಳಿಗೆ ಅಧಿಪತಿಯೆನಿಸಿದವರೂ, ಸಪ್ತಪಾಕಯಜ್ಞಗಳನ್ನೂ ನೆರವೇರಿಸಿ, ಪುಣ್ಯಾರ್ಜನೆ ಮಾಡಿದವರೂ ಸೂರ್ಯಲೋಕವನ್ನು ಭೇದಿಸಿಹೋಗುವರು. ॥೧೫॥

ಧರ್ಮವೇ ಮೋಕ್ಷಸಾಧಕವಾದದ್ದು ಎಂದರಿತು ಯಾರು ನನ್ನ ಪಾದಕಮಲದ ಆರಾಧನೆಯಲ್ಲಿ ಉದಾಸೀನದಿಂದಿರುವರೋ, ಅಂತಹವರು, ಮೇಘವಾಗಿ, ಧೂಮರೂಪದಿಂದ, ಒಂದೆರಡು ತಿಂಗಳುಕಾಲ ಚಲಿಸುತ್ತಿದ್ದು ಕೊನೆಗೆ ಚಂದ್ರಲೋಕವನ್ನು ಸೇರುವರು. ॥೧೬॥

---

೧. ದತ್ತಂ, (ಪಾಠಾಂತರ.)

ತಪಶ್ಶ್ರಾದ್ಧಾಯೋಗ್ಯೈರ್ವಿವಿಧಭವವರ್ಣಾಶ್ರಮರತಾ
ಸ್ತತೋ ನೈಷ್ಕರ್ಮ್ಯೇಣ ಪ್ರಥಿತಗುರುವೇದಾಂತನಿರತಾಃ ।
ತಥೈವಾಹ್ನೋಮಾಸಾಃ ಪುರುಷಮಥ ವಾ ಮಾನವಮುಮೇ
ಗತಿಂ ಯಾಂತಸ್ಸೌರೀಂ ಮಮ ವಿವಿಧಪೂಜೈವ ಹಿ ನರಾಃ ॥೧೭॥

ಚಂದ್ರಾದಭ್ರಂ ಧೂಮಜಾಲಂ ಚ ವಾಯುಂ
ವಿದ್ಯುದ್ವರ್ಷಂ ಚೌಷಧೀನಾಂ ಗಣೇಷು ।
ಜಾತಾಶ್ಚಾನ್ನಂ ಪೂರುಷೋ ಯೋಽದ್ಯತೇ ಯು
ದ್ರೇತೋ ಭೂತ್ವಾ ಸ್ತ್ರೈಣಗರ್ಭೇ ಪತಂತಿ ॥೧೮॥

ಯೇ ವೈ ಪಾಪಾಶ್ಶ್ವಾಥ ಚಂಡಾಲಸರ್ಪಾ
ಭೂದಾರಾಣಾಂ ಯಾಂತಿ ಯೋನೌ ತಿರಶ್ಚಾಂ ।
ಯೇ ವೈ ಪುಣ್ಯಾ ವಿಪ್ರಬಾಹೂರುಜಾತಾ
ಶೂದ್ರಾಃ ಪುಣ್ಯಾಪುಣ್ಯಗರ್ಭೇಷು ದೇವಿ ॥೧೯॥

---

ತಪಸ್ಸು, ಶ್ರಾದ್ಧಗಳು, ಯೋಗ, ಇನ್ನೂ ನಾನಾವಿಧವಾದ ವರ್ಣಾಶ್ರಮ ಧರ್ಮಗಳ ಪರಿಪಾಲನೆ, ಇವುಗಳಲ್ಲಿ ಆಸಕ್ತರಾಗಿದ್ದು, ನಿಷ್ಕಾಮಕರ್ಮಗಳನ್ನಾಚರಿಸಿ, ಗುರುಮೂಲಕವಾಗಿ ವೇದಾಂತ ತತ್ತ್ವಗಳನ್ನರಿತವರು, ಒಂದು ತಿಂಗಳ ಪರ್ಯಂತ, ಪುರುಷನಾಗಿಯೋ, ಅಥವಾ ಮಾನವನಂತೆಯೋ, ಸೂರ್ಯಲೋಕದಲ್ಲಿ ವಾಸಿಸುವರು. ಅಲ್ಲಿ ಅವರು ಆಚರಿಸುವುದೂ ನನ್ನ ಪೂಜೆಯನ್ನೇ. ॥೧೭॥

ಚಂದ್ರಲೋಕಕ್ಕೆ ಸೇರಿದವರು ಕ್ಷೀಣಪುಣ್ಯರಾಗಿ ಕ್ರಮವಾಗಿ ಮೇಘದ ರೂಪವನ್ನು ಹೊಂದುವರು. ಅನಂತರ ಧೂಮಾಕಾರಕ್ಕೆ ತಿರುಗುವರು. ವಾಯುವಿನಲ್ಲಿ ಅಡಕವಾಗುವರು. ಆಮೇಲೆ ಮಿಂಚಾಗಿ, ಮಳೆಯನ್ನು ಸೇರಿ, ವನಸ್ಪತಿಗಳಾಗಿ ಜನಿಸುವರು. ಅವುಗಳೇ ಗಂಡಸರಿಗೆ ಆಹಾರಗಳಾಗುವುದು. ಅದರಿಂದ ರೇತಸ್ಸುಂಟಾಗುವುದು. ಸಂಭೋಗಕಾಲದಲ್ಲಿ ಆ ರೇತಸ್ಸು ಸ್ತ್ರೀಯರ ಗರ್ಭವನ್ನು ಪ್ರವೇಶಿಸಿ ಮಾನವತ್ವವನ್ನು ಪಡೆಯುವರು. ॥೧೮॥

ಪಾಪಿಷ್ಠರಾದವರು, ನಾಯಿ, ಕ್ರೂರಸರ್ಪ, ಹಂದಿ ಮುಂತಾದ ತಿರ್ಯಗ್ಜಂತುಗಳಲ್ಲಿ ಜನ್ಮವನ್ನು ತಾಳುವರು. ಪುಣ್ಯಶಾಲಿಗಳು, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ,

ಇಷ್ಟಾಪೂರ್ತವಿಮೋಹಿತಾ ಬಹುತರಾ ಅನ್ಯಾರ್ಚನಧ್ಯಾನಿನೋ ।
ನಾನ್ಯಚ್ಛ್ರೇಯ ಇತೀವ ಮಾನಸರಸಾ ಬಾಲಾಃ ಪುನರ್ಮನ್ಯತೇ ॥೨೦॥

ಪ್ಲವಾಶ್ಚೈತೇ ಅದೃಢಾಸ್ಸರ್ವಧರ್ಮಾ ।
ಯಜ್ಞಾಶ್ಚೈತೇ ತರ್ತುಮಂಬೇ ಭವಾಬ್ಧಿಂ ॥೨೦॥

ದೀಕ್ಷಾಭಿಸ್ತಪಸಾ ವ್ರತೈಶ್ಚ ನಿಯಮೈಃ ಕೃಚ್ಛ್ರೈಶ್ಚ ದಾನೈಸ್ತಥಾ
ಯೋಗೈರ್ವಾ ಶ್ರುತಿಪಾಠನೈಶ್ಚ ಪಠನೈರಿಷ್ಟೈಶ್ಚ ಪೂರ್ತೈಶ್ಶಿವೇ ।
ವೇದಾಂತಾರ್ಥವಿಚಾರನಂದಿತಮಹಾಕರ್ಮಂದಿವರ್ಯೈಶ್ಶಿವೇ
ವರ್ಣೀ ಚಾಪಿ ಗೃಹೀ ವನೀ ಚ ಸತತಂ ತತ್ಪ್ರೋಕ್ತಧರ್ಮಾದರಃ ॥೨೧॥

ಯತ್ಪ್ರಾಪ್ನೋತಿ ಫಲಂ ಚ ಲೋಕಮಖಿಲಂ ಭೂಯಸ್ತತೋಽಪ್ಯುತ್ತಮಂ।
ಕೈಲಾಸಂ ಸಮವಾಪ್ಯ ಮತ್ಪದಮಹಾಧ್ಯಾನೇನ ಸಂಪ್ರಾಪ್ಯತೇ ॥೨೨॥

---

ಶೂದ್ರ ಮುಂತಾದ ಮಾನವ ಜಾತಿಗಳಲ್ಲಿ ಸೇರಿ ಅವರವರ ಕರ್ಮಾನುಸಾರವಾಗಿ ಪುಣ್ಯಶಾಲಿಗಳ ಹೃದಯದಲ್ಲಿ ಅಡಗುವರು. ॥೧೯॥

ತಮ್ಮ ಇಷ್ಟವು ಪೂರ್ತಿಯಾಗಲು ಬೇರೆ ಬೇರೆ ದೇವತೆಗಳನ್ನು ಜನರು ಆರಾಧಿಸುವರು. ಆಮೇಲೆ ಅದರಿಂದ ಸಫಲರಾಗದೆ ಬಾಲಕರಂತೆ ದುಃಖಿಸುವರು. ಈ ಕ್ಷಣಿಕವಾದ ಸರ್ವಧರ್ಮಗಳೂ, ಸಕಲ ಯಾಗಗಳೂ, ಸಂಸಾರವೆಂಬ ಈ ದೊಡ್ಡ ಸಮುದ್ರವನ್ನು ದಾಟಿಸುವಂತಹ ಸಣ್ಣ ದೋಣಿಗಳೇ ಹೊರತು ಸಾಕ್ಷಾನ್ಮುಕ್ತಿಪ್ರದವಾದವುಗಳಲ್ಲ. ॥೨೦॥

ಯಾಗದೀಕ್ಷೆ, ತಪಸ್ಸು, ವ್ರತ, ನಿಯಮ, ಕೃಚ್ಛ್ರ, ದಾನ, ಯೋಗ, ವೇದಪಾಠ, ಪುರಾಣಪಠನ, ಇಷ್ಟಿಗಳು ವೇದಾಂತಾರ್ಥ ವಿಚಾರ ಇವುಗಳಲ್ಲಿ ನಿರತರಾದವರು ಶ್ರೇಷ್ಠಸಂನ್ಯಾಸಿಗಳಾಗಲಿ, ಅಥವಾ ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ ಇವರಲ್ಲಿ ಯಾರೇ ಆಗಲಿ, ಅವರು ಎಂತಹ ಸುಕೃತವನ್ನು ಸಂಪಾದಿಸುವರೋ, ॥೨೧॥

ಅಷ್ಟು ಪುಣ್ಯರಾಶಿಯನ್ನೂ, ಅದಕ್ಕೂ ಅಧಿಕವಾದ ಭಾಗವನ್ನು ನನ್ನ ಪಾದಧ್ಯಾನದಿಂದಲೇ ಜನರು ಪಡೆಯುವರು. ಅಲ್ಲದೆ ಅವರು ಸ್ಥಿರವಾದ ಆನಂದವನ್ನೀಯುವ ನನ್ನ ಕೈಲಾಸವನ್ನು ಸೇರುವರು. ॥೨೨॥

ಮಖಮುಖಸುಖಸೋಮಜಾತಧೀರಾಂ ।
ಶಿಖಿಶಿಖವಿತತಾಂ ತಥಾಜ್ಯಧಾರಾಂ ।
ಲಖಲಿಖಿತಮುಖಾಸ್ತಥೇಂದ್ರಲೇಖಾ ।
ಖಗಪತಿವಾಹಯುತಾಖುವಾಹಯುಕ್ತಾಃ ॥೨೩॥

ಶಿಖಿವಾಹಾಗ್ರಸರಾ ವಿಮಾನಯುಕ್ತಾಃ ।
ಪರಿಪೀತ್ವಾ ಹರಿಭಿರ್ವಿಮಾನವರ್ಯೈಃ ।
ಅಭಿಯಾಂತ್ಯದ್ಯ ವಿಲೋಕಯಾಂಬ ನಾಕಂ ।
ಪರಿಪಶ್ಯಾಮಲಪಂಕಜಾಸ್ಯನೇತ್ರೇ ॥೨೪॥

ಸುರಸಂಘೈರ್ಮುದಿತಪ್ರಪೀತಸೋಮಾ ।
ವಿಹರಂತಿ ಸ್ವಗಣೈಶ್ಚ ನಂದನೋತ್ಥೈಃ ।
ಸುಮಜಾಲೈಶ್ಚ ಸುಚಂದನಾರ್ದ್ರಗಾತ್ರಾ ।
ವಿಹರಂತಿ ಸ್ಮ ವಿಮಾನವರ್ಯಸಂಸ್ಥಾಃ ॥೨೫॥

---

ಯಾಗಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವಾಗಿಯೂ, ಸುಖಪ್ರದವಾಗಿಯೂ ಇರುವ ಸೋಮಯಾಗವನ್ನಾಚರಿಸಿ, ಅದರಲ್ಲಿ ಸಮಸ್ತ ದೇವತಾತೃಪ್ತ್ಯರ್ಥವಾಗಿ, ಜಾಜ್ವಲ್ಯಮಾನವಾದ ಅಗ್ನಿಯಲ್ಲಿ ಹವಿಸ್ಸನ್ನೂ ಆಜ್ಯಧಾರೆಯನ್ನೂ ಸಮರ್ಪಿಸುವರು. ಅದನ್ನು ತೇಜಸ್ವಿಗಳಾದ ಇಂದ್ರನೇ ಮೊದಲಾದ ದೇವತೆಗಳೂ, ಗರುಡವಾಹನನಾದ ವಿಷ್ಣು, ಮೂಷಕವಾಹನನಾದ ಗಣಪತಿ, ಶಿಖಿವಾಹನನಾದ ಷಣ್ಮುಖ ಮೊದಲಾದವರು ಸೇವಿಸಿ ಯಜಮಾನನಿಗೆ ಸ್ವರ್ಗಸೌಖ್ಯವನ್ನು ಒದಗಿಸುವರು. ಅದರ ಪರಿಣಾಮವಾಗಿ ಯಾಗಮಾಡಿದವರು, ದೇಹಾಂತ್ಯದಲ್ಲಿ ಶ್ರೇಷ್ಠವಾದ ವಿಮಾನಗಳನ್ನು ಹತ್ತಿ, ಸ್ವರ್ಗಲೋಕವನ್ನು ಹೊಂದುವರು. ಪಂಕಜಾಕ್ಷಿಯಾದ ದೇವಿಯೇ, ಜನರು ಲೋಕಾಂತರಗಾಮಿಗಳಾಗುವುದು ಹೀಗೆ. ||೨೩-೨೪||

ಹಾಗೆ ಸ್ವರ್ಗವನ್ನು ಸೇರಿದವರು, ಸೋಮರಸವನ್ನು ಪಾನಮಾಡಿ ಇತರ ದೇವತೆಗಳೊಡನೆ ವಿಹರಿಸುವರು. ದೇವಗಣಗಳಿಂದ ಸೇವಿತರಾಗಿ ನಂದನವನದ ಪುಷ್ಪಗಳನ್ನು ಆಘ್ರಾಣಿಸುವರು. ಸುಚಂದನಗಳಿಂದ ತಮ್ಮ ದೇಹಗಳನ್ನು ಅಲಂಕರಿಸಿಕೊಂಡು ದಿವ್ಯವಿಮಾನರೂಢರಾಗಿ ಸಂತೋಷದಿಂದ ಸಂಚರಿಸುವರು. ||೨೫||

ಏತೇ ಯಜ್ವನ ಏವ ಕೇವಲಮುಮೇ ಕರ್ಮೈಕನಿಷ್ಠಾಶ್ಚಿವೇ ।
ಸಂತ್ಯಕ್ತಾನ್ಯನಿಧಿಪ್ರದಾನಿತಮಹಾದಾನೈಕನಿಷ್ಠಾಃ ಪರೇ ।
ತೇ ವೈ ಚಂದ್ರಮಸಂ ಪ್ರಯಾಂತಿ ನಗಜೇ ಧೂಮಾದಿವರ್ಗೇಣ ವೈ ।
[1] ಯಾತಾಯಾತದಕರ್ಮಜಾತಮಖಿಲಂ ಭುಕ್ತ್ವಾ ಪತಂತ್ಯಂತತಃ ॥೨೬॥

ರಂಭಾರಂಭೋಪಮೋರುದ್ವಯಗತಸುಭಗೇ ಭೇದಪೃಷ್ಠಾಭಕೇ ತೇ ।
ಕುಂಭೋದ್ಯತ್ಕುಂಭಿಕುಂಭೋಪಮಘನಜಘನೇನಾವೃತಾ ನಂದನೇಷು ।
ತದ್ಬಿಂಬೋಪಮಸುಂದರಾಧರರಸಂ ಪೀತ್ವಾತಿಪೀನಾಂಗಕಾ ।
ಸ್ತದ್ವಕ್ಷೋಜವಿಹಾರಸಾರಹೃದಯಾಃ ಪಶ್ಯಾಂಬಿಕೇ ಯಜ್ವನಃ ॥೨೭॥

---

ಹೀಗೆ ಯಾಗಾಚರಣೆಯಲ್ಲಿ ನಿರತರಾದವರು ಕೇವಲ ಕರ್ಮಠರು. ಹಾಗೆಯೇ ಅನೇಕ ಮಹಾದಾನಾದಿಗಳಿಂದ ಸುಕೃತವನ್ನು ಗಳಿಸಿದವರೂ ಸಹ, ಕರ್ಮಠರಂತೆಯೇ ಸ್ವರ್ಗವಾಸಿಗಳಾಗುವರು. ಆದರೆ ಸ್ವರ್ಗಸುಖವು ಕರ್ಮಫಲವಿರುವವರೆಗೆ ಲಭಿಸತಕ್ಕದ್ದು. ಕರ್ಮಫಲವಾದರೋ, ಬುತ್ತಿಯಂತೆ ಕರಗಿಹೋಗತಕ್ಕದ್ದು. ಹಾಗೆ ಪುಣ್ಯವನ್ನು ಅನುಭವದಿಂದ ಕಳೆದುಕೊಂಡವರು ಮತ್ತೆ ಚಂದ್ರಲೋಕಕ್ಕೆ ಬಂದು, ಮೇಲೆ ಹೇಳಿದಂತೆ ಧೂಮಾದಿಗಳಲ್ಲಿ ಸೇರಿ ಮತ್ತೆ ಭೂಲೋಕದಲ್ಲಿ ಜನ್ಮ ತಾಳಲು ಸಿದ್ಧರಾಗುವರು. ಆದ್ದರಿಂದಲೇ ಸ್ವರ್ಗಸುಖಾದಿಗಳೆಲ್ಲಾ ಕ್ಷಣಿಕವಾದದ್ದೆಂದು ನಿರ್ಧರಿಸಲ್ಪಟ್ಟಿವೆ. ॥೨೬॥

ಯಾಗಮಾಡಿ ಪುಣ್ಯ ಸಂಪಾದಿಸಿದವರು ಸ್ವರ್ಗಲೋಕದಲ್ಲಿ ರಂಭೆಯೇ ಮೊದಲಾದ ಸ್ತ್ರೀಯರೊಡನೆ ಕ್ರೀಡಿಸುವರು. ಬಾಳೆಯಕಂಬದಂತೆ ಮನೋಹರವಾಗಿರುವ ಊರುಯುಗಗಳ ಮಧ್ಯವರ್ತಿಯಾದ, ಮತ್ತು ಕಪ್ಪೆಗಳ ಬೆನ್ನು ಭಾಗದಂತೆ ಸುಂದರವಾದ ಭಗಪ್ರದೇಶದ ಸೌಖ್ಯವನ್ನನುಭವಿಸುವರು. ಆನೆಯ ಕುಂಭಸ್ಥಳದಂತೆ ದಪ್ಪವಾದ ನಿತಂಬ ಭಾಗಗಳಿಂದ ಸುಂದರರಾದ ಆ ಸ್ತ್ರೀಯರೊಡನೆ ನಂದನವನದಲ್ಲಿ ವಿಹರಿಸುವರು. ತೊಂಡೆಯ ಹಣ್ಣಿನಂತೆ ಸುಂದರವಾದ ಅಧರಗಳ ಅಮೃತವನ್ನು ಪಾನಮಾಡುತ್ತಾ ಹೃಷ್ಟಪುಷ್ಟಾಂಗರಾಗಿ, ಆ ಅಪ್ಸರಸ್ತ್ರೀಯರ ಸ್ತನಗಳ ಸೌಂದರ್ಯವನ್ನು ನೋಡುತ್ತಾ ಅವರೊಡನೆ ಸಂತೋಷದಿಂದ ಕ್ರೀಡಿಸುವರು.॥೨೭॥

---

1. ಪಾಥೇಯಾತ್ಮಕ (ಪಾ. ರ.)

ಏತದ್ಧ್ಯಾವತಮಂಡಲಂ ಕಚಭರಾಸಂಸಕ್ತಸತ್ಕೇತಕಂ ।
ಭರ್ತ್ರಾಲಿಂಗನಪಾನಪೀನಮನಸಂ ದಿವ್ಯಾಂಗರಾಗಾಂಶುಕಂ ।
ನಾನಾರತ್ನವಿಕಾಸಿತಾಖಿಲದಿಶಾಂ ಸ್ತ್ರೋಮಪ್ರಭಾಭಾಸುರಂ ।
ಯಾನ್ಯೈರ್ಯಾತಿ ಸದಾ ಮುದಾ ಪಿತೃವನೇ ಭರ್ತ್ರಾಗ್ನಿದಗ್ಧಂ ಹಿ ತತ್॥೨೮॥

ಗಚ್ಛಂತಿ ಪಶ್ಯ ಮುದಿತಾಸ್ಸುರಚಾಮರೌಘ್ಯೈ ।
ಸ್ಸಂವೀಜಿತಾಸ್ಸುರಸಶಕ್ರಸದೋವಿಮಾನೈಃ ।
ಗೋಭೂಮಿವಸ್ತ್ರಾನ್ನಸುವರ್ಣ[1]ಕೂಪ್ಯ ।
ರೌಪ್ಯಪ್ರದಾ ಧಾನ್ಯಮಹೀಸುರತ್ನದಾಃ ॥೨೯॥

---

ಈ ಸುರಯುವತಿಯರ ತಂಡವು ತಮ್ಮ ಕೇಶಪಾಶಗಳಲ್ಲಿ ಸುಗಂಧಯುತವಾದ ಕೇತಕೀಪುಷ್ಪಗಳನ್ನು ಮುಡಿದಿರುವುದು. ಭರ್ತೃಸೌಖ್ಯವನ್ನು ಸಂಪೂರ್ಣವಾಗಿ ಪಡೆದು, ಅದರಿಂದ ತುಂಬಿದ ದೇಹವುಳ್ಳದ್ದಾಗಿರುವುದು. ಈ ಸ್ತ್ರೀಯರೆಲ್ಲರೂ ಅಂಗರಾಗಕ್ಕೆ ಸಮನಾಗಿರುವ ದಿವ್ಯವಸ್ತ್ರಗಳನ್ನು ಧರಿಸಿರುವರು. ದೇಹದಲ್ಲಿರುವ ವಿಧವಿಧವಾದ ಆಭರಣಗಳ ರತ್ನದ ಕಾಂತಿಯಿಂದ ಸಕಲ ದಿಕ್ಕುಗಳನ್ನೂ ಬೆಳಗಿಸುವರು. ಸ್ವದೇಹಕಾಂತಿಯೂ ಅವರನ್ನು ಕಾಂತಿಯುತರನ್ನಾಗಿ ಮಾಡಿರುವುದು. ಇಂತಹ ದೇವತಾಸ್ತ್ರೀಯರು ತಮ್ಮ ಗಂಡಂದಿರಿಂದ ಪೀಡಿತವಾದ ದೇಹವುಳ್ಳವರಾಗಿ ದಿವ್ಯವಿಮಾನಗಳಲ್ಲಿ ಸ್ವೇಚ್ಛೆಯಾಗಿ ವಿಹರಿಸುತ್ತಿರುವರು. ॥೨೮॥

ಭೂಲೋಕದಲ್ಲಿ, ಗೋವು, ಭೂಮಿ, ವಸ್ತ್ರ, ಅನ್ನ, ಸುವರ್ಣ, ಇತರ ಲೋಹಗಳು, ಬೆಳ್ಳಿ, ಧಾನ್ಯ, ಶ್ರೇಷ್ಠವಾದ ರತ್ನಗಳು ಇವುಗಳನ್ನು ದಾನಮಾಡಿದವರು, ಸ್ವರ್ಗಲೋಕದಲ್ಲಿ ಅಪ್ಸರಸ್ತ್ರೀಯರಿಂದ ಪರಿವೃತರಾಗಿ, ದೇವೇಂದ್ರಾದಿಗಳು ಕುಳಿತುಕೊಳ್ಳುವಂತಹ ವಿಮಾನಗಳಲ್ಲಿ ಮಂಡಿಸಿದವರಾಗಿ, ದೇವತಾಸ್ತ್ರೀಯರ ಹಸ್ತಗತವಾದ ಚಾಮರಗಳಿಂದ ಸೇವಿಸಲ್ಪಡುತ್ತಾ ಓಡಾಡುತ್ತಿರುವರು. ದೇವಿಯೇ, ಹೀಗೆ ದಾನಮಾಡಿದವರು ಪಡೆಯುವ ವೈಭವವನ್ನು ನೋಡು. ॥೨೯॥

---

1. ಕುಪ್ಯ (ಪಾ. ರ.)

ವಿಪ್ರಾಗ್ರಹಾರವನರೋಪಣವಾಪಿಕಾಭಿಃ ।
ಪಾಂಥಾನ್ ಖರೋಗ್ರಕಿರಣೈಶ್ಶ್ರಮಭಾರಖಿನ್ನಾನ್ ।
ಖಿನ್ನಾನನಾಂಗಾನ್ ಸುಖಶೀತವಾತೈಃ ।
ಕನ್ಯಾನ್ನಪಾನಾದಿಸುಪಾದಸೇವನೈಃ ॥೩೦॥

ವಿಶ್ರಾಮಯಂತಿ ಕ್ಷಣಮಂಬಿಕೇ ಯೇ ।
ಶಾಲಾಸು ತೇ ಯಾಂತಿ ಶಿವೇದ್ಯ ಪಶ್ಯ ॥೩೧॥

ಏತೇ ವೀರಭಟಾಸ್ಸ್ವಶಸ್ತ್ರನಿವಹೈರ್ಬಾಣೈರಭಿದ್ಯೋತಿತೈ ।
ರ್ಧಾರಾಸಾರಶರೇಷು ಯೇ ಸುಮುಖತಃ ಪ್ರಾಣಾಂಸ್ತ್ಯಜಂತಿ ಪ್ರಿಯಾನ್ ।
ತೇಮಿಾ ಮಂಡಲಮಾಶು ಸಪ್ರಭಮುಮೇ ತೇಜೋಮಣೇರಂತರಾ ।
ಯಾಂತ್ಯೇನಾದ್ಭುತವಿಕ್ರಮಾರ್ಜಿತಯಶಸ್ಸ್ಫೀತಾಖಿಲಾಶಾತಟಾಃ ॥೩೨॥

ಹೀರಾಕಾರಸುತಾರಕಾಕೃತಿಸುಖಂ ಭುಕ್ತ್ವೇಂದ್ರಲೋಕಂ ಗತಾ ।
ಭ್ರಶ್ಯಂತಿ ಕ್ರಮಶೋಽಮರೇಶ್ವರಿ ಪುನರ್ನೀರೇ ತಟೇ ಚೌಷಧೌ ।

---

ಉರಿಬೇಸಗೆಯಲ್ಲಿ ನಡೆಯುವ ಪಥಿಕರ ಮಾರ್ಗಾಯಾಸನಿವಾರಣೆಗಾಗಿ, ಉದ್ಯಾನವನ, ಬಾವಿ, ಚತ್ರ ಇವೇ ಮೊದಲಾದುವುಗಳನ್ನು ಕಟ್ಟಿಸಿದವರೂ, ಬ್ರಾಹ್ಮಣರ ವಾಸಕ್ಕೆ ಅಗ್ರಹಾರಗಳನ್ನು ನಿರ್ಮಿಸಿದವರೂ, ಶ್ರಮಜೀವಿಗಳಿಗೆ ಶೀತವಾತಾದಿಗಳಿಂದ ಸೌಖ್ಯವನ್ನೊದಗಿಸುವವರೂ, ಕನ್ಯಾದಾನ, ಅನ್ನದಾನ, ಪಾದರಕ್ಷಾದಾನ ಮುಂತಾದ ದಾನಗಳಿಂದ ಜನರ ದುಃಖಗಳನ್ನು ನಿವಾರಿಸಿದವರೂ ಸಹ ಸ್ವರ್ಗಲೋಕವನ್ನು ಹೊಂದಿ ಅಲ್ಲಿ ನಾನು ಹೇಳಿದ ರೀತಿಯಲ್ಲಿ ಸುಖಪಡುವರು. ||೩೦-೩೧||

ವೀರಭಟರೆನಿಸಿದವರೂ, ಶಸ್ತ್ರಾಸ್ತ್ರಗಳಿಂದ ಯುದ್ಧರಂಗದಲ್ಲಿ ವೀರಾವೇಶದಿಂದ ಹೋರಾಡಿ, ದೇಶಕ್ಕಾಗಿ, ಸ್ವಾಮಿಗಾಗಿ, ತಮ್ಮ ಅತ್ಯಂತ ಪ್ರಿಯವಾದ ಪ್ರಾಣಗಳನ್ನು ಯಾರು ಕಳೆದುಕೊಂಡಿರುವರೋ ಅವರು ಸೂರ್ಯಮಂಡಲವನ್ನು ಭೇದಿಸಿಕೊಂಡು ಹೋಗಿ, ಅಲ್ಲಿ ನೆಲಸಿ, ತಮ್ಮ ಪರಾಕ್ರಮದಿಂದ ಸಂಪಾದಿಸಿಕೊಂಡ ಕೀರ್ತಿಯಿಂದ ದಿಗಂತವನ್ನೆಲ್ಲಾ ಬೆಳಗಿಸುತ್ತಾ ಇರುವರು. ||೩೨||

ಸ್ವರ್ಗಲೋಕವನ್ನು ಸೇರಿದವರು ಅಲ್ಲಿ ನಾನಾವಿಧವಾದ ಸುಖಗಳನ್ನು ಅನುಭವಿಸಿ, ಹೀರರತ್ನಗಳಂತೆ ಹೊಳೆಯುವ ನಕ್ಷತ್ರಗಳಂತಿದ್ದು, ತಮ್ಮ ಪುಣ್ಯವು

ಪಶ್ಯೈತಾನ್ ಸುದತಿ ಪ್ರಕೃಷ್ಟವಿಭವೋಪಾಂತೇ ಪುನರ್ಗರ್ಭಗಾ ।
ನೇವಂ ಶೀಘ್ರತರಂ ತರಂತಿ ಸುಕೃತೈರಿಷ್ಟೈಶ್ಚ ಪೂರ್ತೈರಪಿ ॥೩೩॥

ಯಮಭಟಕೃತಪಾಶಬದ್ಧಹಸ್ತಾ ।
ಮುಸಲವಿದಾರಿತರಕ್ತಗಂಧಮಸ್ತಾಃ ।
ಸರಭಸಮುಪಯಾಂತಿ ಚಾರ್ತರಾವೈ ।
ರ್ಯಮಭವನಂ ಪರಿಪಶ್ಯ ಪಾಪಿಜಾಲಂ ॥೩೪॥

ತೇ ವೈ ಕಾಲಮುಖೇ ದಯಾರಸಹತೇ ಸಂತಪ್ತಭ್ರಾಷ್ಟ್ರಸ್ಥಿತಾಃ ।
ಕುಂಭೀಪಾಕಮುಖೇ ಶಿವೇ ಕ್ರಿಮಿಯುತಾಪಾರೇ ಮಲಾನಾಂ ಹ್ರದೇ ।
ಕ್ಷಾರಾಪಾರಸುಕರ್ದಮೇ ವ್ರಣಕಿಣೈರ್ಗಾತ್ರೈಸ್ತು ಸನ್ಮಕ್ಷಿಭಿಃ ।
ಕಾಕೈರ್ವೃಶ್ಚಿಕದಂದಶೂಕನಿವಹೈಃ ಖಿದ್ಯಂತಿ ಪಶ್ಯಾಂಬಿಕೇ ॥೩೫॥

---

ಕ್ಷೀಣವಾಗಿ ಹೋದಮೇಲೆ ಸ್ವರ್ಗಲೋಕದಿಂದ ಜಾರಿಬೀಳುವರು. ಅನಂತರ ಮೇಘವಾಗಿ, ನೀರಾಗಿ, ಭೂಮಿಯ ಮೇಲೆ ಬಿದ್ದು, ವನಸ್ಪತಿಗಳಾಗಿ ಹುಟ್ಟಿ, ಮತ್ತೆ ಸ್ತ್ರೀಗರ್ಭವನ್ನು ಸೇರಿ ಭೂಲೋಕದಲ್ಲಿ ಜೀವಿಗಳಾಗಿ ಸಂಚರಿಸುವರು. ದೇವಿಯೇ, ಹೀಗೆ ಸ್ವರ್ಗಸುಖಗಳೆಲ್ಲವೂ ಪುಣ್ಯವು ಕ್ಷಯಿಸುವವರೆಗೆ ಮಾತ್ರವಿರುವುದು. ॥೩೩॥

ಪಾಪಿಗಳಾದರೋ, ಮರಣಕಾಲದಲ್ಲಿ ಯಮಭಟರ ದರ್ಶನವನ್ನು ಪಡೆದು, ಅವರ ಕ್ರೂರವಾದ ಪಾಶಗಳಿಗೆ ಸಿಕ್ಕಿ, ಮುಸಲಾಯುಧಗಳ ಏಟಿನಿಂದ ನೊಂದು, ಶಿರಸ್ಸಿನಿಂದ ರಕ್ತವನ್ನು ಸುರಿಸುತ್ತಾ, ಆರ್ತಧ್ವನಿಗೈಯ್ಯುತ್ತಾ, ಯಮಭವನವನ್ನು ಸೇರುವರು. ॥೩೪॥

ಆ ಪಾಪಿಗಳು ನಿರ್ದಯನಾದ ಯಮನಕೈಗೆ ಸಿಕ್ಕಿ, ಉರಿಯುವ ಒಲೆಯಲ್ಲಿ ಬಿದ್ದವರಂತೆ, ಕುಂಭೀಪಾಕವೇ ಮೊದಲಾದ ಮಹಾಮಹಾ ನರಕಗಳಲ್ಲಿ ಬೀಳುವರು. ಮತ್ತು ನಾನಾವಿಧವಾದ ಕ್ರಿಮಿಗಳಿಂದಲೂ, ಮಲರಾಶಿಯಿಂದಲೂ ಪೂರಿತವಾದ ಕೊಳಗಳಲ್ಲಿ ಮುಳುಗುವರು. ಉಪ್ಪುಸಮುದ್ರದ ಕೆಸರಿನಲ್ಲಿ ಒದ್ದಾಡುವರು. ವ್ರಣಗಳಿಂದ ಜಡ್ಡುಗಟ್ಟಿದ ದೇಹವುಳ್ಳವರಾಗಿ, ಜೇನುಹುಳ, ಕಾಗೆ, ಚೇಳು, ಹಾವು, ಮೊದಲಾದ ದುಷ್ಟಜಂತುಗಳಿಂದ ಕಚ್ಚಲ್ಪಟ್ಟವರಾಗಿ ದುಃಖಿಸುವರು. ಅಂಬಿಕೆಯೇ, ಇದನ್ನೇ ನರಕಯಾತನೆಯೆನ್ನುವುದು. ॥೩೫॥

ಏತೇ ನಾರಕಿಣಸ್ಸದೋದರರತಾ ದಾರ್ಯೈಃ ಪರೈರ್ಮೈಥುನಾ ।
ನಾನಾಪಾತಕಸಂಯುತಾ ಗುರುಜನೇ ಶೈವೇ ಚ ಸಂದೂಷಕಾಃ ।
ಸ್ತೇನಾಃ ಪಾಂಥಹರಾಃ ಪರಾನ್ನನಿರತಾ ದುರ್ದ್ಯೂತದುಷ್ಟಾಲಯಾಃ ।
ಪಾಷಂಡಾ ಭುಜಯೋರ್ಮಹಾಯಸವರೈಸ್ತಪ್ತೈಶ್ಚ ಚಕ್ರೈರ್ಯುತಾಃ ॥೩೬॥

ಯೇಷಾಂ ಫಾಲತಲಂ ತ್ರಿಪುಂಡ್ರರಹಿತಂ ಯೇ ರುದ್ರಜಾಪ್ಯೋಜ್ಝಿತಾ ।
ಯೇ ಲಿಂಗಾರ್ಚನಸಾಧನಾದಿವಿಮುಖಾ ಯೇ ಶಂಭುನಾಮ್ನೋಜ್ಝಿತಾಃ ।
ಯೇ ರುದ್ರಾಕ್ಷವಿಧಾರಣೇ ಚ ವಿಮುಖಾಃ ಪಂಚಾಕ್ಷರೇಣೋಜ್ಝಿತಾ ।
ಯೇ ಮತ್ಕ್ಷೇತ್ರನಿವಾಸಹೀನಮನಸೋ ಭಕ್ತೇಷು ಸಂದೂಷಕಾಃ ॥೩೭॥

ಮಾಂ ವಿಶ್ವಾಧಿಕಮೀಶ್ವರಂ ತ್ರಿಜಗತಾಮಾಧಾರಭೂತಂ ಶಿವಂ ।
ವಿಷ್ಣುಬ್ರಹ್ಮಮರುದ್ಗಣೈಃ ಸಮಮಮೀ ಪಶ್ಯಂತಿ ತಾನ್ ಪಶ್ಯ ವೈ ।
ಯೇ ವೈ ಪ್ರದೋಷಪರಿಪೂಜನತೋ ವಿಹೀನಾ

---

ಭೂಲೋಕದಲ್ಲಿ ಅನೇಕಪಾಪಿಗಳು ಸದಾ ತಮ್ಮ ಉದರಭರಣಾರ್ಥವಾಗಿ ಅಕಾರ್ಯಗಳನ್ನು ಮಾಡುತ್ತಾ, ಮೈಥುನಾಪೇಕ್ಷೆಯಿಂದ ಸ್ತ್ರೀಯರೊಡನೆ ವಿಹರಿಸುತ್ತಾ ದೊಡ್ಡವರನ್ನೂ, ಶಿವಸೇವಕರನ್ನೂ ದೂಷಿಸುವರು. ಅಲ್ಲದೆ ಇಷ್ಟಪ್ರಾಪ್ತಿಗಾಗಿ ಕಳ್ಳತನ, ದರೋಡೆ, ಪರಸ್ವಾಪಹರಣ, ದ್ಯೂತಾಸಕ್ತಿ, ದುಸ್ಸಹವಾಸ, ಮುಂತಾದುವುಗಳಲ್ಲಿ ಆಸಕ್ತರಾಗುವರು. ಇಂತಹವರನ್ನು ಯಮಲೋಕದಲ್ಲಿ ಯಮಭಟರು ಕಾಯಿಸಿದ ಕಬ್ಬಿಣದ ಸರಳುಗಳಿಂದ ಆಲಿಂಗನೆಮಾಡಿಸುವರು. ಕಾಯಿಸಿದ ಕಬ್ಬಿಣದ ಚಕ್ರಗಳಿಗೆ ತೋಳುಗಳನ್ನು ಕಟ್ಟಿ ನಿಲ್ಲಿಸುವರು. ॥೩೬॥

ಹಣೆಯಲ್ಲಿ ವಿಭೂತಿಯಿಂದ ತ್ರಿಪುಂಡ್ರವನ್ನು ಧರಿಸದಿರುವವರೂ, ರುದ್ರಮಂತ್ರವನ್ನು ಪಠಿಸದೇ ಇರುವವರೂ, ಲಿಂಗಾರ್ಚನೆಯಲ್ಲಿ ವಿಮುಖರಾಗಿ ಶಿವನಾಮಸ್ಮರಣೆಮಾಡದವರೂ, ರುದ್ರಾಕ್ಷಿಗಳನ್ನು ಧರಿಸುವುದರಲ್ಲಿಯೂ, ಶಿವಪಂಚಾಕ್ಷರೀ ಜಪದಲ್ಲಿಯೂ, ಶಿವಕ್ಷೇತ್ರಗಳ ವಾಸದಲ್ಲಿಯೂ ಆಸಕ್ತಿಯಿಲ್ಲದವರು, ನಿಜವಾಗಿಯೂ ನರಕಭಾಗಿಗಳಾಗುವರು. ॥೩೭॥

ಲೋಕೇಶ್ವರನಾಗಿ, ತ್ರಿಲೋಕರಕ್ಷಕನಾಗಿರುವ, ಸಮಸ್ತಕ್ಕೂ ಆಧಾರಭೂತನಾಗಿ, ಸುಖಸ್ವರೂಪನಾಗಿರುವ ನನ್ನನ್ನು ಸಾಮಾನ್ಯ ದೇವತೆಗಳೆನಿಸಿದ ಬ್ರಹ್ಮ, ವಿಷ್ಣು, ಇಂದ್ರಾದಿಗಳಿಗೆ ಸಮನೆಂದು ಯಾರು ತಿಳಿಯುವರೋ, ಯಾರು ಪ್ರದೋಷ

ಯೇ ವಾ ನರಾ ಮಮ ನಿವೇದಿತಭುಕ್ತಿವರ್ಜ್ಯಾಃ ।
ತೇಽಮೀ ಕಾಲಭಯಂ ಪ್ರಯಾಂತಿ ನರಕೇ ದುಃಖಾಕುಲಾ ಪಾತಕಾ ।
ಕಲ್ಪೇನಾಪಿ ವಿಮುಕ್ತಿರೇವ ಸತತಂ ನಾಸ್ತೀತಿ ಮನ್ಯೇ ಶಿವೇ ॥೩೮॥

ಶಿವಾಲಯವಿಭಂಗಕಾಶ್ಶಿವವನಾದಿಪುಷ್ಪಾಹರಾ ।
ಶ್ಶಿವದ್ರುಹಜನಾರ್ಚಕಾ ಮಯಿ ಸದಾ ವಿನಿಂದಾರತಾಃ ॥೩೯॥

ತ ಏವ ಯಮಮಂದಿರಾಂತರನಿವಾಸಲಾಲಾಭುಜೋ ।
ಭವಂತಿ ಕ್ರಿಮಿವಕ್ತ್ರಕಾ ನರಕಚಿತ್ರವೈಚಿತ್ರಕೇ ।
ತೇ ರುದ್ರಾಕ್ಷವಿಭೂಷಣಾಸ್ಸಿತಲಸದ್ಭಸ್ಮತ್ರಿಪುಂಡ್ರಾಕ್ಷಕಾ ।
ಮನ್ನೈವೇದ್ಯಸುಧಾಶನಾಶ್ಶಿವ ಮಹಾದೇವೇತಿ ನಾಮಾದರಾಃ ॥೪೦॥

ಮಲ್ಲಿಂಗಾರ್ಚನತತ್ಪರಾಶ್ಚ ಸತತಂ ರುದ್ರಾರ್ಥಪಾರೀಣಕಾ ।
ಯೇ ರುದ್ರಾಮಲಸತ್ಕಥಾಸು ರಸಿಕಾಸ್ತೇ ಮದ್ಗಣಾಶ್ಶಂಕರಿ ।

---

ಕಾಲದಲ್ಲಿ ನನ್ನನ್ನು ಭಕ್ತಿಯಿಂದ ಅರ್ಚಿಸುವುದಿಲ್ಲವೋ, ಯಾರು ಶಿವನಿಗೆ ನಿವೇದಿಸಿದ ಪ್ರಸಾದವನ್ನು ನಿತ್ಯವೂ ಭಕ್ಷಿಸುವುದಿಲ್ಲವೋ, ಅಂತಹವರು ಅನೇಕ ದುಃಖಗಳಿಗೆ ಈಡಾಗಿ, ನರಕದ ಕಷ್ಟಗಳನ್ನೆಲ್ಲಾ ಅನುಭವಿಸುವವರಾಗುವರು. ಅಲ್ಲದೆ ಕಲ್ಪಪರ್ಯಂತವಾಗಿ ಶ್ರಮಪಟ್ಟರೂ, ಅವರಿಗೆ ಶಾಶ್ವತವಾದ ಮುಕ್ತಿಯು ಎಂದೂ ದೊರಕಲಾರದೆಂದೇ ನನ್ನ ಅಭಿಪ್ರಾಯ. ॥೩೮॥

ಶಿವಾಲಯಗಳನ್ನು ನಾಶಮಾಡಿ, ಶಿವವನಗಳಲ್ಲಿರುವ ಫಲಪುಷ್ಪಗಳನ್ನು ಅಪಹರಿಸಿ, ಶಿವದ್ರೋಹಿಗಳನ್ನು ಪೂಜಿಸಿ, ನನ್ನನ್ನು ಸರ್ವದಾ ಯಾರು ನಿಂದಿಸುವರೋ, ಅಂತಹವರು, ಯಮನ ಮನೆಯಲ್ಲಿ ಎಂಜಲನ್ನು ತಿಂದು ಜೀವಿಸುವ ಹುಳುಗಳಂತೆಯೂ, ಇನ್ನೂ ವಿಧವಿಧವಾದ ನರಕಯಾತನೆಗಳನ್ನು ಅನುಭವಿಸುವ ಜೀವಿಗಳಾಗಿಯೂ ಹುಟ್ಟುವರು. ಆದರೆ, ಯಾರು ರುದ್ರಾಕ್ಷಿಗಳಿಂದ ಅಲಂಕೃತರಾಗಿ, ಭಸ್ಮಧಾರಣೆಮಾಡಿಕೊಂಡು, ನನಗೆ ನಿವೇದಿಸಿದ ಆಹಾರಗಳನ್ನೇ ಭುಂಜಿಸುತ್ತಾ, ನನ್ನ ನಾಮಾವಳಿಗಳನ್ನೇ ಸರ್ವದಾ ಪಠಿಸುತ್ತಿರುವರೋ, ॥೪೦॥

ಯಾರು ಶಿವಲಿಂಗಾರ್ಚನೆಯಲ್ಲಿಯೇ ನಟ್ಟಮನಸ್ಸುಳ್ಳವರೋ, ಯಾರಿಗೆ ಶ್ರೀರುದ್ರವು ಅರ್ಥವತ್ತಾಗಿ ತಿಳಿದಿರುವುದೋ, ಯಾವಾಗಲೂ ಯಾರು ನನ್ನ

ಭಸ್ಮತ್ರಿಪುಂಡ್ರಶಿವಜಾಕ್ಷಧರಾಸ್ತ ಏವ ।
ಹಾರಾ ಭವಾಂಬುನಿಧಿತಾರಕಕರ್ಣಧಾರಾಃ ॥೪೧॥

ರುದ್ರಾಧ್ಯಾಯವಿಚಿಂತನೈಕಮತಯಃ ಪಂಚಾಕ್ಷರೇ ಸಾದರಾ ।
ಸ್ತನ್ಮಂತ್ರೈಶ್ಚ ಶಿವಾಭಿಷೇಕನಿರತಾ ಲಿಂಗಾರ್ಚನೇ ತತ್ಪರಾಃ ।
ತೇ ಹಾರಾ ಮಮ ಸಂಮತಾಶ್ಚ ಗಿರಿಜೇ ತೇಷಾಮಿಯಂ ವಾಸಭೂಃ ॥೪೨॥

ಶ್ರುತ್ಯುಕ್ತಾಚಾರಧಾರಾಚರಣಪರಿಕರಾಶ್ಚಾಂತರಾಯೈರ್ವಿಹೀನಾ ।
ಹೀನಾಚಾರವಿಚಾರವರ್ಜಿತಮನಸ್ಸ್ವಾಂತಾದರಾಶ್ಶಾಂಕರಾಃ ।
ಪಾರಾವಾರಭವೋಗ್ರಸಾರವಿರಸೇ ತ್ಯಕ್ತಾದರಾಶ್ಶೈಲಜೇ ।
ತೇ ಯಾಂತಿ ಪ್ರಸಭಂ ಮಮಾಲಯಮಿದಂ ನಾನ್ಯೇದ್ಯ ಸತ್ಯಂ ಬ್ರುವೇ॥೪೩॥

---

ವಿಷಯಕವಾದ ಕಥೆಗಳ ಶ್ರವಣದಲ್ಲಿಯೇ ಆಸಕ್ತರಾಗಿರುವರೋ ಅಂತಹವರು ನನ್ನ ಗಣಕ್ಕೆ ಸೇರಿದವರು. ಭಸ್ಮ, ತ್ರಿಪುಂಡ್ರಗಳನ್ನು, ರುದ್ರಾಕ್ಷಿಯಮಾಲೆಯನ್ನೂ ಧರಿಸಿದವರು ನಿಜವಾಗಿ ಸಂಸ್ಕಾರಭಯದಿಂದ ಮುಕ್ತರಾಗುವರು. ಆ ರುದ್ರಾಕ್ಷಿಯಸರಗಳೇ, ಸಂಸಾರಸಮುದ್ರವನ್ನು ದಾಟಿಸುವ ನಾವಿಕರಂತಿರತಕ್ಕವುಗಳು. ||೪೧||

ರುದ್ರಾಧ್ಯಾಯಪಾಠಕರೂ, ಶಿವಪಂಚಾಕ್ಷರೀ ಮಂತ್ರಜಾಪಕರೂ, ರುದ್ರದೇವತಾಕವಾದ ಮಂತ್ರಗಳಿಂದ ಶಿವಲಿಂಗವನ್ನು ಅಭಿಷೇಕಮಾಡುವವರೂ ನನಗೆ ಹಾರದಂತೆ ಅಲಂಕಾರಪ್ರಾಯರಾಗುವರು. ಅವರೇ ನನಗೆ ಸಮ್ಮತರೆನಿಸುವರು. ಅವರು ಭೂಲೋಕದಲ್ಲಿ ದೇಹತ್ಯಾಗಮಾಡಿ ಈ ಕೈಲಾಸದಲ್ಲಿಯೇ ಬಂದು ನೆಲಸುವರು. ||೪೨||

ಪೇಪಿಯೇ, ವೇದೋಕ್ತವಾದ ಸಕಲ ಆಚಾರಗಳನ್ನೂ, ಕರ್ಮಗಳನ್ನೂ ನಡೆಸುವವರಾಗಿ, ವಿಘ್ನವಿಲ್ಲದೆ ಅವುಗಳನ್ನು ಸಮಾಪ್ತಿಗೊಳಿಸಿದವರೂ, ಹೀನಾಚಾರಗಳನ್ನು ದೂರಮಾಡಿ ಸದಾಚಾರಗಳಿಂದ ಚಿತ್ತಶುದ್ಧಿಯನ್ನು ಪಡೆದಿರುವವರೂ, ಸಂಸಾರದ ಕಷ್ಟಸುಖಗಳನ್ನು ದೂರೀಕರಿಸಿ, ಅವುಗಳಲ್ಲಿ ಆದರವನ್ನು ಕಮ್ಮಿಮಾಡಿರುವವರೂ, ನನ್ನ ಈ ಕೈಲಾಸವಾಸಕ್ಕೆ ಅರ್ಹರು. ಉಳಿದವರಿಗೆ ಇದು ಎಂದೂ ದೊರಕಲಾರದು. ||೪೩||

ಕೈಲಾಸಾಚಲರುದ್ರಮೂರ್ತಯ ಇಮೇ
ಚಂದ್ರಾರ್ಧಚೂಡಾಶ್ಶಿವೇ ।
ನೀಲೇಂದೀವರಲೋಚನತ್ರಯಯುತಾ
ಸ್ತೇ ನೀಲಕಂಠಾಸ್ಸದಾ ।
ಮತ್ಪಾರ್ಶ್ವೈಕಗಣಾ ಭವಂತಿ ಗಿರಿಜೇ ।
ತೇ ಶಾಂಕರಾಸ್ಸರ್ವದಾ ॥೪೪॥

॥ ಸ್ಕಂದ ಉವಾಚ ॥

ಇತಿ ಸರ್ವಗತೀಶ್ಶ್ರುತ್ವಾ ಶಂಕರಾತ್ಪರಮೇಶ್ವರೀ ।
ಪ್ರಣಮ್ಯಾಹ ಮಹಾದೇವೀ ಕೈಲಾಸವರಗೋಪುರೇ ॥೪೫॥

॥ ದೇವ್ಯುವಾಚ ॥

ಅಸಾರಸಾರಂ ಪ್ರವದಂತಿ ವೇದಾ ।
ಸ್ತ್ರಿಯಃ ಪ್ರಜಾನಾಂ ಪಶವೋ ಹಿರಣ್ಯಂ ।
ಗುಣತ್ರಯೀಮಧ್ಯಗತಾ ಪ್ರರೋಚನಾ ।
ಗುಣಾನಿ ಗತ್ವಾ ನ ಭಜಂತಿ ಕೇಪಿ ॥೪೬॥

---

ಹಾಗೆ ಯಾರು ನನ್ನ ಲೋಕವನ್ನು ಸಂಪಾದಿಸುವರೋ, ಅವರು ಇಲ್ಲಿ ನನ್ನ ಆಕಾರದಿಂದಿರುವರು. ಅರ್ಧಚಂದ್ರನು ಅವರ ಶಿರಸ್ಸಿನಲ್ಲಿ ವಿರಾಜಿಸುವನು. ನೀಲ ಕಮಲದಂತೆ ರಂಜಿಸುವ ಮೂರು ಕಣ್ಣುಗಳು ಅವರಿಗಿರುತ್ತವೆ. ಅವರ ಕಂಠವೆಲ್ಲವೂ ನನ್ನ ಕತ್ತಿನಂತೆ ನೀಲವರ್ಣವುಳ್ಳದ್ದಾಗಿರುವುದು. ಅವರೆಲ್ಲರೂ ರುದ್ರಗಣಗಳಂತೆ ಸರ್ವದಾ ನನ್ನ ಪಾರ್ಶ್ವವರ್ತಿಯಾಗಿದ್ದು ಆನಂದವನ್ನನುಭವಿಸುವರು. ॥೪೪॥

ಎಂದು ಹೇಳಿದ ಪರಮೇಶ್ವರನ ಮಾತನ್ನು ಕೇಳಿ ದೇವಿಯು ನಮಸ್ಕರಿಸಿ, ಅದೇ ಕೈಲಾಸಪರ್ವತಪ್ರದೇಶದಲ್ಲಿ ಈ ರೀತಿ ಹೇಳಲಾರಂಭಿಸಿದಳು. ॥೪೫॥

ಸ್ವಾಮಿಯೇ, ವೇದಗಳು ಲೋಕದಲ್ಲಿ ಅಸಾರವಾದ ಎಷ್ಟೋ ವಸ್ತುಗಳನ್ನು ಸಾರವಾದದ್ದೆಂದು ಹೇಳುತ್ತವೆ. ಸ್ತ್ರೀಯರು, ಪಶುಗಳು, ಸುವರ್ಣ ಮುಂತಾದ ವಸ್ತುಗಳಲ್ಲಿ ಮೋಹಿತರಾಗಿ, ಸತ್ವಗುಣಾದಿಗಳಲ್ಲಿ ಸಿಕ್ಕಿ, ಕೆಲಸಕ್ಕೆಬಾರದ ಗುಣ

**ಪ್ರವೃತ್ತ್ಯಸ್ಮೃಖಾ ಬಾಲಕಾಃ ಕಾಮಯಂತೇ ।**
**ಸುಖಾಪಾರಬುದ್ಧ್ಯಾ ಮಹಾದುಃಖಜಾಲಂ ।**
**ಯಥಾ ಭಕ್ಷ್ಯಬುದ್ಧ್ಯಾ ಮಹಾಪಾಶಜಾಲೈ ।**
**ಗೃಹೀತಾಸ್ತು ಮತ್ಸ್ಯಾ ಜಲೇ ಧೀವರೈಶ್ಚ ।** ॥೪೭॥

**ಕಥಂ ತ್ವತ್ಪದಾಬ್ಜಂ ಖನಿಂ ವೈ ವಿಮುಕ್ತೇ ।**
**ಸ್ಸಮಾಯಾಂತಿ ದುಃಖಾಕುಲಾ ದುರ್ಮುಖಾಸ್ತೇ ।**
**ಯಥಾ ತ್ವಾಂ ಚಿದಾನಂದರೂಪಂ ಚ ಸತ್ಯ ।**
**ಮಸತ್ಯೈಕಲೀಲಾ ಭವಂತ್ಯೇವ ಬಾಲಾಃ** ॥೪೮॥

**ಶಶೇ ಶೃಂಗವಾರ್ತಾ ಯಥಾ ಸ್ಯಾದ್ಯಥಾ ವಾ ।**
**ತಥಾ ಕೂರ್ಮದುಗ್ಧಂ ಮರೌ ವಾ ಯಥಾಪಃ ।**
**ತಥಾ ವಿಶ್ವಗಾಃ ಪ್ರಾರ್ಥಯಂತೀಹ ಕಾಮಾನ್ ।**
**ಮನೋಮೂಲಮೇತನ್ಮನೋ ನಾಸ್ತಿ ಯತ್ರ** ॥೪೯॥

---

ಗಳನ್ನು ಹೊಗಳುತ್ತಿರುವರು. ನಿಜವಾದ ಮತ್ತು ಮುಕ್ತಿಪ್ರದವಾದ ನಿನ್ನ ಆಕಾರವನ್ನೂ ಯಾರೂ ಭಜಿಸುವುದಿಲ್ಲವಲ್ಲಾ! ॥೪೬॥

ಅನೇಕ ಅಜ್ಞಾನಿಗಳು ಸುಖಭ್ರಾಂತಿಯಿಂದ ದುಃಖಕರವಾದ ವಸ್ತುಗಳನ್ನು ಬಹಳವಾಗಿ ಅಪೇಕ್ಷಿಸುವರು. ಇದು ಮೀನುಗಳು ಮಾಂಸಬುದ್ಧಿಯಿಂದ ಗಾಳವನ್ನು ತಿನ್ನಲು ಹೋಗಿ, ಕಡೆಗೆ ತಮ್ಮ ಪ್ರಾಣಗಳನ್ನೇ ಕಳೆದುಕೊಳ್ಳುವಂತೆ ಆಗುವುದಲ್ಲವೇ? ॥೪೭॥

ಎಲೈ ಪರಮೇಶ್ವರನೇ, ನಿನ್ನ ಪಾದಕಮಲವು ಮುಕ್ತಿಗೆ ಗಣಿಯಂತಿರುವುದಿಲ್ಲವೇ? ನೀನು ಚಿದಾನಂದರೂಪಿಯಲ್ಲವೇ? ನಿನ್ನ ಸ್ವರೂಪವೊಂದೇ ಸತ್ಯವಾದದ್ದು. ಹಾಗಿದ್ದರೂ ಮೂಢಜನರು ಬಾಲರಂತೆ ದುಃಖಾಕುಲರಾಗಿ, ಸರ್ವದಾ ದುರ್ಮುಖರಾಗಿರುವರಲ್ಲಾ! ಕಾರಣವೇನು? ನಿನ್ನನ್ನು ಸೇವಿಸಿ ಅವರು ಮುಕ್ತಿಯನ್ನು ಪಡೆಯಬಾರದೇ? ॥೪೮॥

ಅಜ್ಞಾನಿಗಳಾದವರು ತಮ್ಮ ಇಷ್ಟಾರ್ಥಗಳನ್ನು ಎಲ್ಲಿಯೋ ಹೋಗಿ ಯಾಚಿಸುವರು. ಅದು, ಮೊಲದಲ್ಲಿ ಹೋಗಿ ಕೊಂಬನ್ನು ಕೇಳಿದಂತೆಯೂ, ಆಮೆಯಲ್ಲಿ

ಭೂಮಾ ತ್ವಂ ಗಿರಿಜಾಪತಿಶ್ಶಿವಕರಸ್ಸೋಽರ್ಧಧಾರೀ ಹರೋ ।
ನಾಮಾರ್ಧಾಕೃತಿರಪ್ರಮೇಯವಿಭವಸ್ತ್ವಂ ಸೋಮಧಾಮಾನನಃ ।
ಕಾಮಾಂಗಾರಿರಕಾಮಸಕ್ತಹೃದಯಸ್ತ್ವಂ ಸಾಮಚರ್ಮಾಂಬರ ।
ಸ್ತ್ವಾಮಪ್ರಾಪ್ಯ ಮಹೇಶ ಸಾಮರವತಸ್ತ್ವೋಽಪಪ್ರದಂ ಶಂಕರಂ ॥೫೦॥

ಕಾಮಾನ್ ಪ್ರಾರ್ಥಯತೇ ವಿಮೂಢಹೃದಯಾಸ್ತೇಷಾಂ ಶ್ರಮಃ ಕೇವಲಂ।
ಸಾಮಾಗೋಽಮನತೋ ರಮಾಪತಿಲಸನ್ನೇತ್ರಾಂಘ್ರಿರೀಶಸ್ಸದಾ ।
ಧೂಮಾಕಾರಘನಸ್ಥಿತೋಽಪಿ ಭಗವಂಸ್ತ್ವಂ ವ್ಯೋಮಕೇಶಸ್ಸದಾ ।
ಧೌಮ್ಯಾಗ್ನ್ಯರ್ಚಿತಪಾದಪದ್ಮಯುಗಳಶ್ಶೋಮಾಪತಿಶ್ಶಂಕರಃ ॥೫೧॥

---

ಹಾಲನ್ನು ಯಾಚಿಸಿದಂತೆಯೂ, ಮರುಭೂಮಿಯಲ್ಲಿ ನೀರನ್ನು ಬಯಸಿದಂತೆಯೂ ವ್ಯರ್ಥವಾಗಲಾರದೇ ? ಮನಸ್ಸಿಗೆ ಮೂಲವಸ್ತುವಾಗಿ, ಮನಸ್ಸಂಬಂಧವನ್ನು ಬಿಟ್ಟಿರುವ ನಿರ್ವಿಕಾರಸ್ವರೂಪನಾದ ನಿನ್ನನ್ನು ಬಿಟ್ಟು ತಿಳಿವಳಿಕೆಯಿಲ್ಲದೆ ಬೇರೆಕಡೆ ಹೋಗುವರಲ್ಲಾ! ॥೪೯॥

ಎಲೈ ಸ್ವಾಮಿಯೇ, ಗಿರಿಜಾಪತಿಯಾದ ನೀನು ಅರ್ಧಚಂದ್ರನನ್ನು ಶಿರಸ್ಸಿನಲ್ಲಿ ಧರಿಸಿರುವವನಾಗಿರುವೆ. ಅರ್ಧಭಾಗದಲ್ಲಿ ನನ್ನನ್ನು ಹೊಂದಿರುವೆ. ನಿನ್ನ ಮಹಿಮೆಯು ಅಪಾರ. ಚಂದ್ರನ ಕಳೆಯಿಂದ ಹೊಳೆಯುವ ನಿನ್ನ ಮುಖವು, ಮನ್ಮಥನ ಕೋಮಲವಾದ ಅಂಗಗಳನ್ನು ನಾಶಮಾಡಿತಲ್ಲವೇ ? ಜಿತೇಂದ್ರಿಯರಾದವರನ್ನು ಬಹುವಾಗಿ ಪ್ರೀತಿಸುವೆ. ಗಜಚರ್ಮಾಂಬರಧಾರಿಯಾಗಿ, ಸಾಮವೇದ ಗಾನಾಸಕ್ತನಾಗಿ, ಸರ್ವರಿಗೂ ಸುಖವನ್ನುಂಟುಮಾಡುವ ಮಹೇಶ್ವರನೇ, ನಿನ್ನನ್ನು ನಂಬಿ ಆ ಪಾಪಿಷ್ಠರು ಮೋಕ್ಷಗಾಮಿಗಳಾಗಬಾರವೇ! ॥೫೦॥

ಮೂಢಹೃದಯರು, ದೊರಕದಿರುವ ಸ್ಥಳಗಳಲ್ಲೆಲ್ಲಾ ತಮ್ಮ ಇಷ್ಟಾರ್ಥಗಳನ್ನು ಬೇಡುವರು. ದೊರಕುವ ಸ್ಥಳವನ್ನು ಬಿಟ್ಟುಬಿಡುವರು. ಇಷ್ಟಾರ್ಥಪ್ರಾಪ್ತಿಗಾಗಿಯೇ ಮಹಾವಿಷ್ಣುವು ತನ್ನ ನೇತ್ರಕಮಲದಿಂದ ನಿನ್ನ ಪಾದವನ್ನು ಪೂಜಿಸಿದನು. ನೀನು ಧೂಮಾಕಾರದಿಂದಲೂ, ಮೇಘಾಕಾರದಿಂದಲೂ ತೋರಿಬರುವೆ. ವ್ಯೋಮಕೇಶನಾಗಿದ್ದು, ಧೌಮ್ಯಾಗ್ನಿಯೇ ಮೊದಲಾದ ದೇವತೆಗಳಿಂದ ಪೂಜಿಸಲ್ಪಟ್ಟ ಉಮಾಪತಿಯಾದ ಶಂಕರನೇ, ನನ್ನ ಇಷ್ಟಾರ್ಥಗಳನ್ನು ಸಲ್ಲಿಸು. ಗೌತಮಾದಿ

ಕಾಮಾನ್ಮೇ ದಿಶ ಗೌತಮಾದಿಮುನಿಭಿರ್ವೇದೈಸ್ಸ್ತುತೋಽಸಿಪ್ರಭೋ॥೫೨॥

ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ಶಿವಗೌರೀಸಂವಾದೇ ಪ್ರಾಣಿಗತಿ ನಿರೂಪಣಂ ನಾಮ ಏಕವಿಂಶೋಽಧ್ಯಾಯಃ

---

ಸಪ್ತರ್ಷಿಗಳಿಂದಲೂ ಸಕಲ ವೇದಗಳಿಂದಲೂ ಸ್ತುತಿಸಲ್ಪಡುವ ಮಹಾನುಭಾವನೇ, ನನ್ನನ್ನು ಕೃಪಾದೃಷ್ಟಿಯಿಂದ ರಕ್ಷಿಸು ಎಂದು ಪಾರ್ವತಿಯು ಪತಿಯನ್ನು ಬಹುವಾಗಿ ಪ್ರಾರ್ಥಿಸಿದಳು. ॥೫೨॥

ಶ್ರೀಶಿವರಹಸ್ಯದ ಪ್ರಥಮಾಂಶದಲ್ಲಿ ಶಿವಗೌರೀಸಂವಾದರೂಪವಾಗಿ ಪ್ರಾಣಿಗಳಿಗೆ ಗತಿಯನ್ನು ತಿಳಿಸುವ ಇಪ್ಪತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

# ಅಥ ಶ್ರೀಶಿವರಹಸ್ಯೇ

## ದ್ವಾವಿಂಶೋಽಧ್ಯಾಯಃ

### ಕೈಲಾಸಲಿಂಗವರ್ಣನಂ

॥ ಸ್ಕಂದ ಉವಾಚ ॥

ಕೈಲಾಸಾತ್ಪೂರ್ವತೋ ಭಾತಿ ನಿಷ್ಟಪ್ತಕನಕಪ್ರಭಃ ।
ಲಕ್ಷತ್ರಯಾಂತರಂ ತಸ್ಮಾದ್ಭಾತಿ ಮೇರುಸ್ಸುರಾಲಯಃ ॥೧॥

ತದಗ್ರವೃಷಭಸ್ತಂಭೇ ಧ್ರುವಾದ್ಯಾಸ್ತತ್ಪ್ರದಕ್ಷಿಣೇ ।
ಕಾಲಚಕ್ರಾಂತರಾಸ್ಸರ್ವೇ ಭ್ರಮಂತಿ ಚ ದಿವಾನಿಶಂ ॥೨॥

ಧ್ರುವಸ್ಸಪ್ತರ್ಷಿಭಿಶ್ಚೈವ ರಾಜ್ಞಾ ಚಾಥ ತ್ರಿಶಂಕುನಾ ।
ತದೂರ್ಧ್ವಶೈಲಮೌಲಿಸ್ಥಾಸ್ಸ್ಮರಶಾಸನಶಾಸನಾತ್ ॥೩॥

---

### ಶ್ರೀಶಿವರಹಸ್ಯದಲ್ಲಿ ಇಪ್ಪತ್ತೆರಡನೆಯ ಅಧ್ಯಾಯ

ಪುನಃ ಕುಮಾರಸ್ವಾಮಿಯು, ಜೈಗೀಷವ್ಯಾದಿಮಹಾಮುನಿಗಳನ್ನು ಕುರಿತು ಕೈಲಾಸಲಿಂಗವನ್ನು ವರ್ಣಿಸತೊಡಗಿದನು. "ಮಹರ್ಷಿಗಳೇ, ಕೈಲಾಸಪರ್ವತಕ್ಕೆ ಪೂರ್ವದಿಕ್ಕಿನಲ್ಲಿ ಮೂರುಲಕ್ಷ ಯೋಜನ ದೂರದಲ್ಲಿ ಸುವರ್ಣದಂತೆ ಹೊಳೆಯುವ ಮೇರುಪರ್ವತವಿದೆ. ಅದು ಸಕಲ ದೇವತೆಗಳಿಗೂ ವಾಸಸ್ಥಾನವಾಗಿದೆ. ॥೧॥

ಅದರ ಮುಂದಿರುವ ವೃಷಭಸ್ತಂಭದಲ್ಲಿ ಧ್ರುವನಕ್ಷತ್ರವೇ ಮೊದಲಾದುವುಗಳು ನೆಲಸಿ ಅದನ್ನು ಪ್ರದಕ್ಷಿಣೆಮಾಡುತ್ತಿರುವುವು. ಕಾಲಚಕ್ರಕ್ಕೆ ಸಿಕ್ಕಿ, ಅಹೋರಾತ್ರಿಯಲ್ಲಿಯೂ ಅವು ಸುತ್ತುತ್ತಿರುವುವು. ॥೨॥

ಧ್ರುವನಕ್ಷತ್ರವನ್ನು ಸಪ್ತರ್ಷಿಗಳೂ, ತ್ರಿಶಂಕುರಾಜನೂ ಸುತ್ತುತ್ತಿರುವರು. ಇವರೆಲ್ಲರೂ ಪರಮೇಶ್ವರನ ಅಪ್ಪಣೆಯಂತೆ ಆ ಪರ್ವತದ ಅಗ್ರಭಾಗದಲ್ಲಿ ನೆಲಸಿರುವವರಾಗಿ ಕಾಲಚಕ್ರದಲ್ಲಿ ಭ್ರಮಿಸುತ್ತಿರುವರು. ॥೩॥

ನಾನಾದ್ರುಮಲತೋಪೇತಂ ರಮ್ಯಪಕ್ಷಿಮೃಗೈರ್ಯುತಂ ।
ಸರಸ್ತತ್ರಾಸ್ತಿ ವಿಪುಲಂ ಮಾನಸಾಖ್ಯಂ ಮನೋಹರಂ ॥೪॥

ಉತ್ಫುಲ್ಲಹೇಮಕಲ್ಹಾರಹೇಮಪಂಕಜಭಾಸುರಂ ।
ತದಗ್ರಮೌಲೌ ದೇವಾನಾಂ ಬ್ರಹ್ಮವಿಷ್ಣುಹರಾತ್ಮನಾಂ ॥೫॥

ದಿಕ್ಪಾಲಾನಾಂಚ ಸರ್ವೇಷಾಂ ಗಂಧರ್ವಾವಸಥಾಃ ಕೃತಾಃ ।
ಸತ್ಯಲೋಕೋ ಬ್ರಹ್ಮಣಶ್ಚ ವೈಕುಂಠೋ ವೈಷ್ಣವಂ ಪುರಂ ॥೬॥

ಅಂಶೋನತ್ರೀಣಿ ರುದ್ರಸ್ಯ ಪುರಾಣಿ ಕ್ರಮಶೋ ವನೇ ।
ತಾದೃಶಃ ಕನಕಾಕಾರಃ ಪರ್ಯಂತೇ ವರ್ಷಭೂಷಿತಃ ॥೭॥

ಕುಮುದಾಕಾರವದ್ಭಾತಿ ಭೂಮೇಃ ಪರ್ಯಂತಸಾಗರೈಃ ।
ರತ್ನಸಾಲವನಂ ತಸ್ಯ ಮೇರೋರ್ಮೂರ್ಧ್ನಿ ಸುವಿಸ್ತರಂ ॥೮॥

---

ಆ ಮೇರುಪರ್ವತದ ಪಕ್ಕದಲ್ಲಿಯೇ ವಿಶಾಲವಾದ ಮಾನಸಸರೋವರವಿರುವುದು. ಅದರ ಸುತ್ತಲೂ ವಿಧವಿಧವಾದ ವೃಕ್ಷಗಳೂ, ಸುಂದರವಾದ ಪಕ್ಷಿಗಳೂ ಮನೋಹರವಾಗಿ ಕಾಣುತ್ತಿರುವುವು. ||೪||

ಅರಳಿದ ಸುವರ್ಣಕಲ್ಹಾರಪುಷ್ಪಗಳೂ, ಚಿನ್ನದ ಕಮಲಗಳೂ ಅಲ್ಲಿ ತೋರಿಬರುವುವು. ಅದರ ಮೇಲ್ಭಾಗದಲ್ಲಿ ದೇವತೆಗಳಿಗೂ, ಬ್ರಹ್ಮ, ವಿಷ್ಣು, ಮಹೇಶ್ವರರಿಗೂ ಆಶ್ರಯವಾದ ನಿವಾಸಸ್ಥಾನಗಳಿವೆ. ||೫||

ದಿಕ್ಪಾಲಲೋಕಗಳೂ, ಗಂಧರ್ವಲೋಕಗಳೂ ಅಲ್ಲಿ ಇರುವುವು. ಬ್ರಹ್ಮನ ಸತ್ಯಲೋಕ, ವಿಷ್ಣುವಿನ ವೈಕುಂಠಲೋಕ, ||೬||

ರುದ್ರನ ರುದ್ರಲೋಕ, ಈ ಮೂರು ಪಟ್ಟಣಗಳೂ ಅಲ್ಲಿ ಪ್ರಕಾಶಿಸುತ್ತಿರುವುವು. ಈ ಮೂರು ಲೋಕಗಳೂ ಕೈಲಾಸಕ್ಕಿಂತಲೂ ಒಂದು ಅಂಶದಲ್ಲಿ ನ್ಯೂನವೆನಿಸಿರುವುವು. ಆದರೂ ಕಾಂತಿಯಲ್ಲಿ ಸುವರ್ಣವೃಷ್ಟಿಯಿಂದ ಅಲಂಕೃತವಾಗಿರುವುವೋ ಎಂಬಂತಿರುವುವು. ||೭||

ಆ ಮೇರುಪರ್ವತವು ಭೂಮಿಯ ಮತ್ತು ಸಾಗರಗಳ ಪ್ರಾಂತಭಾಗದಲ್ಲಿ ನೈದಿಲೆಯ ಆಕಾರದಂತೆ ಶೋಭಿಸುತ್ತಿರುವುದು. ಮೇರುವಿನ ಮೇಲ್ಭಾಗದಲ್ಲಿ ವಿಸ್ತಾರವಾದ ರತ್ನಸಾಲವನವೆಂಬ ಉದ್ಯಾನವಿರುವುದು. ||೮||

ತತ್ರಾಸ್ತಿ ಗೋಪುರಂ ಶಂಭೋರ್ಮಣಿಮಾಣಿಕ್ಯಭೂಷಿತಂ ।
ಕದಾಚಿಚ್ಛ್ರೀಮಹಾದೇವೋ ದೇವ್ಯಾ ವಿಹರತಿ ಸ್ವಯಂ ॥೯॥

ಶಪ್ತೋಽಸ್ತಿ ದೇವದೇವೇನ ತತ್ಪ್ರಾಂತೋ ಭೂಧರಸ್ಯ ಹಿ ।
ಯೋ ನಾತ್ರ ಕಶ್ಚಿತ್ಪ್ರವಿಶೇತ್ಸಭವೇತ್ ಸ್ತ್ರೀವರಾಕೃತಾಃ ॥೧೦॥

ವೃಷಸ್ತಂಭನಿಭೋ ಮೇರುಃ ಕೈಲಾಸಸ್ಯಾಸ್ಯ ಸತ್ತಮ ।
ತಸ್ಮಿನ್ ದೇವ್ಯಾ ವಸನ್ ಶಂಭುಃ ಪಾರ್ವತ್ಯಾ ರುದ್ರಕೈರ್ವೃತಃ ॥೧೧॥

ದೇವ್ಯಾಸ್ಸಖೀಭಿರಭಿತೋ ದಿವ್ಯಸಿಂಹಾಸನೇ ಸ್ಥಿತಃ ।
ಕದಾಚಿದ್ದೇವಸಂಘಾನಾಂ ಪುರಾಣಿ ಕ್ರಮಶಶ್ಶಿವಃ ॥೧೨॥

ಮೇರುಮೌಲೌ ಮಹಾಲಿಂಗಮೌರ್ವೀಶಾಖ್ಯಂ ಮನೋಹರಂ ।
ತದ್ಗೋಪುರಮಹಾಸೌಧರಾಜತ್ಕನಕವೇದಿಕಂ ॥೧೩॥

---

ಆ ಪರ್ವತದ ಮೇಲ್ಭಾಗದಲ್ಲಿ ಮಣಿಗಳಿಂದಲೂ, ಮಾಣಿಕ್ಯದಿಂದಲೂ ಭೂಷಿತವಾದ ಗೋಪುರವೊಂದಿರುವುದು. ಅಲ್ಲಿ ಒಂದೊಂದು ಸಾರಿ ಶಂಕರನು ಪಾರ್ವತಿಯೊಡನೆ ವಿಹರಿಸುವನು. ॥೯॥

ಆ ಪರ್ವತದ ಪ್ರಾಂತಭಾಗಕ್ಕೆ ಯಾವ ಪುರುಷರು ಪ್ರವೇಶಿಸಿದರೂ ಒಡನೆಯೇ ಅವರು ಸ್ತ್ರೀವೇಷವನ್ನು ತಾಳಲಿ ಎಂದು ಶಂಕರನು ಶಾಪ ಕೊಟ್ಟಿರುವನು. ॥೧೦॥

ಮೇರುಪರ್ವತವು ಕೈಲಾಸದ ವೃಷಸ್ತಂಭದಂತೆ ಸುಂದರವಾಗಿ, ಮುಂಭಾಗದಲ್ಲಿರುವುದು. ಆ ಸುಂದರಮಯವಾದ ಮೇರುವಿನಲ್ಲಿ ಶಂಕರನು ಪಾರ್ವತಿಯೊಡನೆಯೂ. ರುದ್ರಗಣಗಳೊಡನೆಯೂ ಕೂಡಿ ವಾಸಿಸುವನು. ॥೧೧॥

ದೇವಿಯೊಡನೆಯೂ ಅವರ ಸಖಿಯರೊಡನೆಯೂ, ಮಹಾದೇವನು ದಿವ್ಯ ಸಿಂಹಾಸನಾರೂಢನಾಗಿ ದೇವಸಂಘಗಳ ಮಧ್ಯದಲ್ಲಿ ಮಂಡಿಸಿರುವನು. ಮೇರುವಿನ ಶಿರೋಭಾಗದಲ್ಲಿ ಅನೇಕ ದೇವತಾನಗರಗಳಿರುವುವು. ॥೧೨॥

ಮೇರುಪರ್ವತದ ಊರ್ಧ್ವಭಾಗದಲ್ಲಿ ಊರ್ವೀಶನೆಂಬ ದೊಡ್ಡ ಲಿಂಗವೊಂದಿರುವುದು. ಅದು ಉನ್ನತವಾದ ಗೋಪುರದಿಂದ ಕೂಡಿದ ದಿವ್ಯಹರ್ಮ್ಯದಲ್ಲಿ

ತತ್ರ ಸಂಪೂಜಯಂತ್ಯೇವ ಬ್ರಹ್ಮವಿಷ್ಣುಮಹೇಶ್ವರಾಃ ।
ತಲ್ಲಿಂಗಂ ಬಿಲ್ವಪತ್ರೈಶ್ಚ ಹೇಮಪಂಕಜಕೈರಪಿ ॥೧೪॥

ಧೂಪೈರ್ದೀಪೈಶ್ಚ ತೇ ದೇವಾ ನೈವೇದ್ಯೈಶ್ಚ ಮನೋಹರೈಃ ।
ಪ್ರದಕ್ಷಿಣಪ್ರಣಾಮಾದ್ಯೈಸ್ಸ್ತುವಂತಿ ಚ ಸುರಾಸುರಾಃ ॥೧೫॥

॥ ದೇವಾ ಊಚುಃ ॥

ಕುಂದಾಮಂದಮರಂದಸೌಭಗಮಹಾಮಂದಾರಸನ್ಮಾಲಿಕಾ
ಲೋಲೋತ್ತುಂಗತರಂಗರಂಗಿತಮಹಾಗಂಗಾಂಬುಜೋತ್ಕೈರವಂ ।
ಪರ್ವಾನಂದಿತಶರ್ವರೀರಮಣತೋತ್ತುಂಗಾಂಗಮೌಲಿಂ ಶಿವಂ
ಧ್ಯಾಯಾನೋಽದ್ಯ ಮಹಾಘಸಂಸೃತಿಭವಂ ದುಃಖಂ ವಿಹಾಯಾದರಾತ್ ॥೧೬॥

---

ತೇಜಸ್ಸಿನಿಂದ ಹೊಳೆಯುವ ಚಿನ್ನದ ವೇದಿಕೆಯ ಮೇಲೆ ವಿರಾಜಿಸುತ್ತಿರುವುದು. ॥೧೩॥

ಆ ದಿವ್ಯಲಿಂಗವನ್ನು ಬ್ರಹ್ಮ, ವಿಷ್ಣು, ಮಹೇಶ್ವರರು ಬಿಲ್ವಪತ್ರೆಗಳಿಂದಲೂ ಸುವರ್ಣಕಮಲಗಳಿಂದಲೂ ಪೂಜಿಸುವರು. ॥೧೪॥

ಸಕಲ ದೇವತೆಗಳೂ ಅಲ್ಲಿಗೆ ಬಂದು ಧೂಪ, ದೀಪ, ನೈವೇದ್ಯಾದಿಗಳಿಂದಲೂ, ಪ್ರದಕ್ಷಿಣನಮಸ್ಕಾರಾದಿಗಳಿಂದಲೂ ಭಗವಂತನನ್ನು ಪೂಜಿಸಿ ಹೀಗೆ ಪ್ರಾರ್ಥಿಸುವರು. ॥೧೫॥

"ಪರಮೇಶ್ವರನೇ, ನೀನು ಧರಿಸಿಕೊಂಡಿರುವ ಮಂದಾರಪುಷ್ಪದ ಮಾಲಿಕೆಯು, ಮಧ್ಯೆ ಮಧ್ಯೆ ಇರುವ ಕುಂದ (ಕೋಲುಮಲ್ಲಿಗೆ) ಪುಷ್ಪಗಳ ಮಕರಂದದಿಂದ ಸುಂದರವಾದುದಾಗಿದೆ. ಅಲ್ಲದೆ ಅದೇ ಮಾಲಿಕೆಯಲ್ಲಿ ಗಂಗಾನದಿಯ ಅಲೆಗಳ ಹೊಡೆತದಿಂದ ರಂಗುಪಡೆದ ಬೇಳೀ ನೈದಿಲೆಗಳು ಮತ್ತೂ ಆ ಮಾಲಿಕೆಯನ್ನು ವಿಶದಗೊಳಿಸಿವೆ. ಪರ್ವಕಾಲದಲ್ಲಿ ತೃಪ್ತಿಪಡೆಯುವ ಚಂದ್ರಬಿಂಬವನ್ನು ಶಿರಸ್ಸಿನಲ್ಲಿ ಧರಿಸಿ, ಭಕ್ತರ ಸಕಲ ಪಾಪಗಳನ್ನೂ ನಿವಾರಿಸುವಂತಹ ದೇವದೇವನಾದ ಶಂಕರನೇ, ನಿನ್ನನ್ನು ನಾವು ಸ್ತುತಿಸುವೆವು. ॥೧೬॥

ಆರಕ್ತಸುಂದರತರೈಃ ಕುರುವಿಂದಬೃಂದ
ರಕ್ತಾರವಿಂದಮಕರಂದಪರಾಗಮೌಲಿಂ ।
ಬೃಂದಾರವಂದಿತಪದಾಂಬುರುಹಂ ಮಹೇಶಂ
ಸುಂದೋಪಸುಂದವರದಂ ಜಗದಾದಿಕಂದಂ ।।೧೭।।

ಮೂರ್ಧೋರ್ಧ್ವಂ ಮಧುಪಾಳಿಝುಂಕೃತಿಯುತಂ ಚಂಚಜ್ಜಟಾನಿರ್ಝರಂ
ಶೈಲಾನ್ನಿರ್ಝರಸಾರಿಣೀವ ಭವತೋ ದೃಷ್ಟಿರ್ಭವಾಂಭೋಝರೀ ।
ಉದ್ಯದ್ರಾಗಮಲೀಮಸಾಂ ಝುಟಿತಿ ನೋ ನೋಜ್ಝಂತಿ ಪಾದೌ ಹೃದಿ
ತೇ ಧನ್ಯಾಸ್ಸಜಲಂ ಝುಲೌ(?)ಸ ಭಗವಾನ್ ಭೂಯಾಚ್ಛ್ರಿಯೈ ಸರ್ವಶಃ
।।೧೮।।

---

ಸಂಪೂರ್ಣವಾಗಿ ಕೆಂಪಾಗಿರುವ, ಕುರುವಿಂದ (ದೊಡ್ಡ ತುಂಗಮುಸ್ತ) ಪುಷ್ಪಗಳ ಮತ್ತು ಕೆಂಪುತಾವರೆಗಳ ಮಕರಂದದಿಂದ ಮಹೇಶ್ವರನ ಶಿರಸ್ಸೆಲ್ಲವೂ ಭೂಷಿತವಾಗಿದೆ. ಮಹಾದೇವನಾದ ನಿನ್ನ ಪಾದಕಮಲವನ್ನು ಸಕಲ ದೇವತೆಗಳೂ ಭಕ್ತಿಯಿಂದ ವಂದಿಸುತ್ತಲಿರುವರು. ಸುಂದೋಪಸುಂದರೆಂಬ ಇಬ್ಬರು ರಾಕ್ಷಸ ಸಹೋದರರಿಗೆ ವರವನ್ನು ಕೊಟ್ಟು ಅವರನ್ನು ಶೂರರನ್ನಾಗಿ ಮಾಡಿದ ಮತ್ತು ಜಗದುತ್ಪತ್ತಿಗೆ ಮೂಲಕಾರಣನಾದ ಮಹೇಶ್ವರನೇ, ನಿನಗೆ ವಂದಿಸುವೆವು. ।।೧೭।।

ಪರಶಿವನೇ, ನಿನ್ನ ಶಿರೋಭಾಗವು ಪುಷ್ಪಗಂಧಾಕಾಂಕ್ಷಿಗಳಾದ ಭ್ರಮರಗಳಿಂದ ಆವೃತವಾಗಿದೆ. ಅವುಗಳಿಂದ ಶೋಭಿಸುವ ಜಟೆಯಿಂದಲೂ, ಅಲ್ಲಿ ತೋರಿಬರುವ ಗಂಗಾಪ್ರವಾಹದಿಂದಲೂ ಅಲಂಕೃತವಾಗಿದೆ. ನಿನ್ನ ದೃಷ್ಟಿಯೆಂಬುದೇ ಒಂದು ಸಂಸಾರವೆಂಬ ದೊಡ್ಡ ಪ್ರವಾಹದಂತೆ ಸರ್ವತ್ರ ವ್ಯಾಪಿಯಾಗಿದೆ. ನಾವಾದರೋ, ರಾಗದ್ವೇಷಾದಿಗಳ ಹೊಡೆತದಿಂದ ಮಲಿನವಾದ ಹೃದಯವುಳ್ಳವರು. ಇಂತಹ ನಮ್ಮ ಮನಸ್ಸಿನ ಕೊಳೆಯನ್ನು ತೊಳೆಯಲು ಪರಶಿವನಾದ, ನಿನ್ನ ಪಾದಧ್ಯಾನವು ಆವಶ್ಯಕ. ಯಾರು ಇಂತಹ ಪವಿತ್ರವಾದ ಪರಶಿವನ ಪಾದಧ್ಯಾನಾಸಕ್ತರಾಗಿರುವರೋ, ಅಂತಹವರಿಗೆ ಪರಮೇಶ್ವರನು ಸಕಲ ಸನ್ಮಂಗಳಗಳನ್ನೂ ಕೊಡುವನೆಂಬುದರಲ್ಲಿ ಸಂಶಯವಿಲ್ಲ.” ।।೧೮।।

|| ಸೂತ ಉವಾಚ ||

**ಏವಂ ಸ್ತುವಂತಿ ತೇ ದೇವಾ ಮೇರುಮೌಲಿಸ್ಥಿತಂ ಶಿವಂ ।**
**ಗಂಧರ್ವಾಪ್ಸರಸಸ್ಸಿದ್ಧಾ ಮುನಯೋ ವೀತಕಲ್ಮಷಾಃ ||೧೯||**

**ಕೈಲಾಸೇತ್ರ ಮಹಾದೇವಸ್ಸನ್ನಿಧತ್ತೇ ಸದೈವ ಹಿ ।**
**ದೇವ್ಯಾ ಮಣಿಮಯೇ ಸೌಧೇ ವಿಹರತ್ಯೇಷ ಶಂಕರಃ ||೨೦||**

**ತದ್ವಿಹಾರಂ ಶೃಣುಷ್ವಾದ್ಯ ಸರ್ವಪಾಪವಿನಾಶನಂ ।**
**ನಾನಾಚಿತ್ರವಿಚಿತ್ರಾಶ್ಚ ಕ್ರೀಡಾಸ್ತಾಃ ಪರಮೇಶಿತುಃ ||೨೧||**

**ದೇವ್ಯಾ ಸಹ ಸುರಶ್ರೇಷ್ಠಾಃ ಕೇನ ವಾ ವರ್ಣ್ಯತೇ ಹಿ ತಾಃ ||೨೨||**

**ರುದ್ರಾಣ್ಯೋ ನವಯೌವನೋಚ್ಚಲಕುಚಾಸ್ತಾಸ್ಸೋಮಧಾಮ್ನಾ ನಿಭಾ ।**
**ರತ್ನೋತ್ಥಾಮಲಕಾಂತಿಭೂಷಿತತನೂವಲ್ಲ್ಯಃ ಪ್ರಭಾಭಾಸುರಾಃ ।**
**ಸಂಬದ್ಧಸ್ತನಚೇಲಕೇಶವಲಯಾಸ್ಸೇವಾಧಿಕಾರಾದರಾ ।**
**ರಾಜಂತೇ ಕಲಧೌತಸಾನುಶಿಖರೇ ಲೀಲಾಝಣನ್ನೂಪುರಾಃ ||೨೩||**

---

ಈ ರೀತಿ ಮೇರುಪರ್ವತಾಗ್ರದಲ್ಲಿರುವ ಶಂಕರನನ್ನು, ಗಂಧರ್ವರೂ, ಅಪ್ಸರರೂ, ಸಿದ್ಧರೂ, ಸಕಲ ಮಹರ್ಷಿಗಳೂ, ಶುದ್ಧಮನಸ್ಕರಾಗಿ ಧ್ಯಾನಮಾಡುವರು. ||೧೯||

ಕೈಲಾಸಪರ್ವತದಲ್ಲಾದರೋ, ಮಹಾದೇವನು ಸರ್ವದಾ ದೇವಿಯೊಡನೆ ರತ್ನಖಚಿತವಾದ ದಿವ್ಯಹರ್ಮ್ಯದಲ್ಲಿ ಸಂತೋಷಚಿತ್ತನಾಗಿ ವಿಹರಿಸುತ್ತಿರುವನು. ||೨೦||

ಆ ಪರಮೇಶ್ವರನು ದೇವಿಯೊಡನೆ ಸಂತೋಷದಿಂದ ವಿಹರಿಸುವುದು ಅತಿ ವಿಚಿತ್ರವಾಗಿರುತ್ತದೆ. ಎಲೈ ದೇವತೆಗಳಿರಾ, ಸರ್ವಪಾಪನಿವಾರಕವಾದ ಅಂತಹ ಮಹೇಶ್ವರನ ಕ್ರೀಡಾದಿಗಳನ್ನು ವಿವರಿಸುವೆನು ಕೇಳಿರಿ, ಎಂದು ಸ್ಕಂದಸ್ವಾಮಿಯು ಜೈಗೀಷವ್ಯಾದಿಗಳಿಗೆ ಶಂಕರಕ್ರೀಡೆಯನ್ನು ವಿವರಿಸಲಾರಂಭಿಸಿದನು. ||೨೧-೨೨||

ಶಂಕರನ ಸೇವೆಗಾಗಿ ನಿಂತಿರುವ ರುದ್ರಾಣಿಯರು ನವಯುವತಿಯರು. ಅವರ ಕುಚಗಳು ಯೌವನಭರದಲ್ಲಿ ಬೆಳೆದು, ಅಲ್ಪಸ್ವಲ್ಪವಾಗಿ ಅಲ್ಲಾಡುತ್ತಿರುವುವು. ಅವರ ವರ್ಣವಾದರೋ ಚಂದ್ರಿಕೆಯಂತೆ ಶುಭ್ರವಾಗಿರುವುದು. ರತ್ನಾಭರಣಗಳಿಂದ

**ಉದ್ಯತ್ಕಾವ್ಯನಿಭಾಚ್ಛಚಂಪಕಮಹಾನಾಸಾಲಸನ್ಮೌಕ್ತಿಕಾ ।**
**ಸ್ತಾರಾಕಾರಸುಹೀರಹಾರವಲಯೈಸ್ತಾಸ್ತತ್ರ ವಿದ್ಯುಲ್ಲತಾಃ ।**
**ರುದ್ರಾಶ್ಚಾಪಿ ಮಹೇಶ್ವರಂ ತ್ರಿಜಗತಾಮಾಧಾರಭೂತಂ ಹರಂ ।**
**ತತ್ತತ್ಕಾಲಸುಸೇವನೈರನುಪಮೈಶ್ಶ್ರಾಂತಿಂ ವಿಹಾಯಾದರಾತ್ ॥೨೪॥**

**ಸ್ನಾನೋದ್ಯನ್ಮಣಿಸುಂದರೈಶ್ಚ ಕಲಶೈಸ್ಸ್ರಗ್ಗಂಧಧೂಪಾರ್ಪಣೈ ।**
**ರ್ದೀಪೈಃ ಕೇಶಸುಧೂಪನೈಃ ಪರಿಕರೈಃ ಪರ್ಯಂಕವಿಶ್ರಾಣನೈಃ ।**
**ಛತ್ರೈಶ್ಚಾಮರವೀಜನೈಃ ಪ್ರಪದಕೈರಾದರ್ಶತಾಂಬೂಲಕೈ ।**
**ರ್ವೀಣಾಭಿಃ ಪಟವಾಸಖಡ್ಗಸುಕರೈಸ್ಸೇವಂತಿ (?)ಶರ್ವಂ ಶಿವಾಂ ॥೨೫॥**

---

ಅಲಂಕೃತವಾದ ಅವರ ದೇಹವು ಬಳ್ಳಿಯಂತೆ ಬಳುಕುತ್ತಿರುವುದು. ಅತಿಶಯವಾದ ಕಾಂತಿಯಿಂದ ತೇಜಸ್ವಿನಿಯರಾಗಿ ಕಾಣುತ್ತಿರುವರು. ಕೇಶಪಾಶಗಳಾದರೋ, ಅವರ ಸ್ತನಮಂಡಲಗಳಮೇಲೆ ಓಡಾಡುತ್ತಿರುವುವು. ಇಂತಹ ಸುಂದರಿಯರಾದ ರುದ್ರಾಣಿಯರು ತಮ್ಮ ಕಾಲುಬಳೆಗಳ ಇಂಚರದಿಂದ ನಲಿಯುತ್ತಾ ಆ ಪರ್ವತದ ಸಾನುಪ್ರದೇಶದಲ್ಲಿಯೂ, ಶಿಖರಭಾಗದಲ್ಲಿಯೂ, ನಲಿದಾಡುವರು. ||೨೩||

ಆ ರುದ್ರಾಣಿಯರ ನಾಸಿಕವಾದರೋ ಸಂಪಿಗೆ ಹೂವಿನಂತೆ ಸುಂದರವಾಗಿದೆ. ಅದರಲ್ಲಿ ವಿರಾಜಿಸುವ ಮೌಕ್ತಿಕವೆಂಬುದು ಉದಯವಾಗುವ ಶುಕ್ರಗ್ರಹದಂತೆ ಹೊಳೆಯುತ್ತಿರುವುದು. ನಕ್ಷತ್ರಗಳಂತೆ ಹೊಳೆಯುವ ಹೀರರತ್ನಗಳಿಂದ ನಿರ್ಮಿತವಾದ ಹಾರವು ಅವರ ಕಂಠಪ್ರದೇಶದಲ್ಲಿ ಮಿಂಚಿನ ಬಳ್ಳಿಯಂತೆ ಸ್ಫುರಿಸುತ್ತಿರುವುದು. ಹಾಗೆಯೇ ರುದ್ರಗಣಗಳೂ, ತ್ರಿಜಗತ್ಪತಿಯಾದ ಪರಮೇಶ್ವರನನ್ನು, ಆಯಾ ಕಾಲೋಚಿತವಾದ ಶ್ರೇಷ್ಠವಾದ ಸೇವೆಗಳಿಂದ ವಿಶ್ರಾಂತಿಯಿಲ್ಲದೆ ಓಲೈಸುತ್ತಿರುವರು. ||೨೪||

ಶಂಕರನ ಸ್ನಾನಕ್ಕಾಗಿ ರತ್ನಮಯವಾದ ಕಲಶಗಳಲ್ಲಿ ನೀರನ್ನು ತಂದುಕೊಡುವರು. ಪುಷ್ಪಮಾಲೆ, ಗಂಧ, ಧೂಪ, ದೀಪ, ಮೊದಲಾದ ಪೂಜಾದ್ರವ್ಯಗಳನ್ನರ್ಪಿಸುತ್ತಾ ಪರಶಿವ ದಂಪತಿಗಳನ್ನು ತುಷ್ಟಿಗೊಳಿಸುವರು. ಇನ್ನೂ ಮಂಚವೇ ಮೊದಲಾದ ಅನೇಕ ಪರಿಕರಗಳನ್ನೂ, ಛತ್ರಿ, ಚಾಮರ, ತಾಂಬೂಲಕರಂಡಕ, ಇವುಗಳನ್ನು ಹಿಡಿದು ಸೇವೆಗಾಗಿ ನಿಂತಿರುವರು. ಮುಖವಸ್ತ್ರ, ವೀಣಾ, ಖಡ್ಗ ಇವುಗಳನ್ನು ಧರಿಸಿ, ಆ ಶಿವದಂಪತಿಗಳ ಮನಸ್ತೃಪ್ತಿಗಾಗಿ ಪ್ರಯತ್ನಿಸುತ್ತಿರುವರು. ||೨೫||

ರುದ್ರಾಣ್ಯೋ ನವಕೋಟಯಶ್ಚ ತರುಣಾ ರುದ್ರಾಶ್ಚ ಕೋಟ್ಯೋ ದಶ ।
ಭೈರವ್ಯೋಽಥ ದಿಗಂಬರಾಶ್ಚ ಸತತಂ ಕೋಟೀಭಿರನ್ವಾಸತೇ ।
ಯೋಗಿನ್ಯೋಽಥ ತ್ರಿಕೋಟಯಶ್ಚ ಪರಿತಸ್ತೇ ಡಾಕಿನೀಕೋಟಯೋ ।
ರೋಹಿಣ್ಯಾ ಸಹಿತೇಂದುಧಾಮವದನಾಸ್ಸೇವಂತಿ ಶಂಭುಂ ಶಿವಾಂ ॥೨೬॥

ಕೈಲಾಸೇ ನವಶಕ್ತಿರತ್ನವಿಲಸತ್ಪೀಠೇ ಮಹಾತತ್ವವಾ ।
ಗ್ಜಾತೇನೈಕಕಕೋಟಿವಿಸ್ತರಯುತೇ ಶ್ರೀಚಕ್ರಮಧ್ಯಂಗತೇ ।
ಬಿಂದೌ ಚಂದ್ರದಿನೇಶಕೋಟಿಯುಗಲೇ ಮಂಚೇ ಚತುಷ್ಪೀಠಕೇ ।
ಪಂಚಬ್ರಹ್ಮಮಯೇ ವಯಂ ಗಿರಿಜಯಾ ಸಾರ್ಧಂ ಹೃದಾ ದಧ್ಮಹೇ ॥೨೭॥

ಶಶಿಪ್ರಸೃಮರೈಃ ಕರೈಸ್ಸಿತಸಿತಾಯಮಾನೋ ಗಿರಿಃ ।
ಪ್ರಭಾತತಸುಧಾಂಬುಧೇಶ್ಚಲತ್ತರಂಗಹಸ್ತೋತ್ಥಯಾ ।
ಸಮುಚ್ಚಲಿತನೌಕಯಾ ಸಕಲರತ್ನಸಂಕ್ಲುಪ್ತಯಾ ।
ಸುಧಾಂಶುಶಕಲಾಲಕೋ ವಿಹರತಿ ಸ್ಫುಟಂ ಸೋಽಂಬಯಾ ॥೨೮॥

---

ಹೀಗೆ ಸೇವಿಸುವ ರುದ್ರಾಣಿಯರು ಒಂಬತ್ತುಕೋಟಿ ಸಂಖ್ಯೆಯಲ್ಲಿರುವರು. ಹತ್ತುಕೋಟಿ ರುದ್ರಗಣಗಳಿರುವುವು. ಇವರಲ್ಲದೆ, ಭೈರವಗಳೂ, ದಿಗಂಬರರೂ ಕೋಟ್ಯಂತರ ಸಂಖ್ಯೆಯಲ್ಲಿರುವರು. ಮೂರುಕೋಟಿ ಯೋಗಿನಿಯರೂ, ಕೋಟ್ಯಂತರ ಡಾಕಿನಿಯೇ ಮೊದಲಾದ ಪಿಶಾಚಗಣಗಳೂ, ರೋಹಿಣೀ ಸಮೇತನಾದ ಚಂದ್ರನಂತಿರುವ ಪರಶಿವನನ್ನೂ ಸರ್ವದಾ ಸೇವೆಮಾಡುತ್ತಿರುವರು. ||೨೬||

ಕೈಲಾಸದಲ್ಲಿ ನವಶಕ್ತಿಗಳಿಂದಲೂ, ನವರತ್ನಗಳಿಂದಲೂ ಕೂಡಿರುವ ಪೀಠದಲ್ಲಿ, ಅನೇಕ ತತ್ತ್ವಕೋಟಿಗಳಿಂದ ತಿಳಿಯಲಸಾಧ್ಯವಾಗಿರುವ ಶ್ರೀ ಚಕ್ರದ ಮಧ್ಯಭಾಗದಲ್ಲಿರುವ ಬಿಂದುವಿನಲ್ಲಿ ಗಿರಿಜೆಯೊಡನೆ ಪರಮೇಶ್ವರನು ನೆಲಸಿರುವನು. ಆ ಚಕ್ರವಾದರೋ, ಸೂರ್ಯ ಚಂದ್ರರ ತೇಜಸ್ಸಿಗಿಂತ ಕೋಟಿಪಾಲಾಗಿ ಮಿಗಿಲೆನಿಸಿರುವುದು. ಆ ಚಕ್ರಕ್ಕೆ ಆಶ್ರಯವಿತ್ತಿರುವ ಮಂಚವಾದರೋ ನಾಲ್ಕು ಪೀಠವುಳ್ಳದ್ದಾಗಿದೆ. ಪಂಚಬ್ರಹ್ಮಮಯವಾಗಿದೆ. ಇಂತಹ ಪೀಠಮಧ್ಯಗತರಾದ ಪಾರ್ವತೀ ಪರಮೇಶ್ವರರನ್ನು ನಾವು ಸರ್ವದಾ ಹೃದಯದಲ್ಲಿ ಧ್ಯಾನಮಾಡುತ್ತಿರುವೆವು. ||೨೭||

ಕೈಲಾಸಪರ್ವತವಾದರೋ ಸರ್ವದಾ ಚಂದ್ರಕಾಂತಿಯಿಂದ ಶುಭ್ರವಾಗಿ ಹೊಳೆಯುತ್ತಿರುವುದು. ಅಮೃತ ಸಮುದ್ರದ ತೇಜಸ್ಸಿನಿಂದಲೂ, ಚಂಚಲವಾದ

ಸ್ವಚ್ಛಾದ್ರಿಪಾರದ ಮಹಾಕಲಧೌತಶೈಲ ।
ಸಾನುಪ್ರಭಾಸಮಧಿಕೋನ್ನತಸಾಂಡರಾಂಗಂ ।
ಚಂಚದ್ವಿಷಾಣಮುಕುಟೀತಟಲಂಬಮಾನ ।
ಸಚ್ಚಾಮರೌಘಪರಿವೀಜಿತಕರ್ಣತಾಲಂ ॥೨೯॥

ಕಾಂತ್ಯಾ ಸ್ವಯಾ ಪರಿಮುಷಂತಮಿವೋದ್ಯತಾಂಶು ।
ಮುಕ್ತಾಣಮುದ್ರಿತನಯಾಪತಿರಕ್ಷಿಫಾಲಃ ।
ಆರುಹ್ಯ ಯಾತಿ ನಗರಾಜಸುತಾಸಹಾಯಃ ॥೩೦॥

ಉಕ್ಷಾಧಸ್ತಲಪಕ್ಷತಿಪ್ರಚಲಿತೋ ದೇವಸ್ಯ ಪಾದಾಂಬುಜೇ ।
ಸ್ವಸ್ಕಂಧೇ ಮಣಿಪಾದುಕೋತ್ತಮಲಸತ್ಸಾನಂದನಾಮಾ ಗಣಃ ।
ಪಾಹೀಶೇತಿ ವದನ್ ಶಿವ ಮಹಾದೇವ ಪ್ರಭೋ ಮಾಂ ಸದಾ ।
ತಾರಾನಾಥಕಲಾಧರ ಶ್ರುತಿಶಿರಃಕೋಟೀರಪಾಲೀಗತ ॥೩೧॥

---

ಅಲೆಗಳೆಂಬ ಕೈಗಳಿಂದಲೂ ವಿಜೃಂಭಿಸುತ್ತಿರುವುದು. ಅದರ ಪಕ್ಕದಲ್ಲೆಲ್ಲಾ ರತ್ನಗಳಿಂದ ನಿರ್ಮಿತವಾದ ದೋಣಿಗಳು ಓಡಾಡುತ್ತಿರುವುವು. ಇಂತಹ ದಿವ್ಯ ಪರ್ವತದಲ್ಲಿ ಶಂಕರನು ಪಾರ್ವತಿಯೊಡನೆ, ಚಂದ್ರಚೂಡನಾಗಿ ಸರ್ವದಾ ವಿಹರಿಸುತ್ತಿರುವನು. ॥೨೮॥

ಮಹೇಶ್ವರನ ವಾಹನವಾದ ವೃಷಭವಾದರೋ, ಸ್ವಚ್ಛವಾದ ಪಾದರಸದಂತೆ ಹೊಳೆಯುವ ಕೈಲಾಸಾದ್ರಿಯ ತಪ್ಪಲು ಪ್ರದೇಶದಲ್ಲಿ ಸಂಚರಿಸಿ, ಅದರ ಕಾಂತಿಯಿಂದ ತನ್ನ ಕಾಂತಿಯನ್ನು ಹೆಚ್ಚಿಸಿಕೊಂಡು ವಿಹರಿಸುತ್ತಿರುವುದು. ಅದರ ಸುಂದರವೂ ಮತ್ತು ಚಂಚಲವೂ ಆದ ಎರಡು ಕೋಡುಗಳ ತುದಿಗೂ ಎರಡು ಚಾಮರಗಳನ್ನು ಕಟ್ಟಿದೆ. ವೃಷಭವು ಆ ಚಾಮರಗಳಿಂದ ತನ್ನ ವಿಶಾಲವಾದ ಕಿವಿಯನ್ನು ಬೀಸಿಕೊಳ್ಳುತ್ತಿದೆ. ಅಲ್ಲದೆ ಮೇಲೆ ಹೇಳಿದ ಸಕಲ ವಸ್ತುಗಳ ಕಾಂತಿಯನ್ನೆಲ್ಲಾ ತನ್ನ ಕಾಂತಿಯಿಂದ ಅಪಹರಿಸುತ್ತಿದೆಯೋ ಎಂಬಂತಿರುವ ತನ್ನ ಸುಂದರದೇಹದಲ್ಲಿ ಪಾರ್ವತೀಸಮೇತನಾದ ಪರಮೇಶ್ವರನನ್ನು ಹೊತ್ತು ನಡೆಯುತ್ತಿದೆ. ॥೨೯-೩೦॥

ಪರಶಿವನು ಉಕ್ಷಾರೋಹಣಮಾಡುವ ಕಾಲದಲ್ಲಿ ರುದ್ರಗಣಗಳು ತಮ್ಮ ಹೆಗಲನ್ನು ಪರಶಿವನ ಪಾದಕ್ಕೆ ಕೊಟ್ಟು, ಮೇಲಕ್ಕೆ ಹತ್ತಿಸುತ್ತಾ, ಆಗ ಶಂಕರನ ಮಣಿಪಾದುಕೆಯು ತಮ್ಮ ಶರೀರವನ್ನು ಪವಿತ್ರಮಾಡಿತೆಂಬ ಆನಂದದಿಂದ ನಲಿಯು

ಕೈಲಾಸಮೌಲಿಧವಲೋತ್ತಮಶೃಂಗಸಂಸ್ಥ ।
ಲಿಂಗಾವಲಿಂ ಸಮಭಿವೀಕ್ಷ್ಯ ಮಹೋರುಹರ್ಷಃ ।
ಪಶ್ಯೇತಿ ತಾಮಗಸುತಾಂ ಪ್ರವದತ್ಯಭೀಕ್ಷ್ಣಂ ।
ತ್ರ್ಯಕ್ಷೋಽಕ್ಷಮನಸಾ ಪರಿಚಿಂತನೀಯಃ ॥೩೨॥

ಸೌವರ್ಣರತ್ನ ಖಚಿತೈರ್ಮಣಿಜಾಲಕ್ಲೃಪ್ತೈ ।
ಶ್ಚಕ್ರೇ ಮಹೋನ್ನತತಲೇ ಶಶೀಧಾಮಕುಂಭಂ ।
ದೇವ್ಯಾ ರಥಂ ರಥಪತಿಃ ಪ್ರಥಿತೋ ಹಿ ದೇವ್ಯೈ ।
ರಾರುಹ್ಯ ಯಾತಿ ನಗಮೌಲಿಮಹೋ ದ್ವಿಜೇಂದ್ರಾಃ ॥೩೩॥

ನಾನಾರತ್ನಯುತಪ್ರಭಾತತಿತತಂ ಮುಕ್ತಾಚ್ಛಗುಚ್ಛಾನ್ವಿತಂ ।
ಪಾಲೀಪಾಲಿಮರಾಲರಾಜನಿಕರೈರ್ಮುಕ್ತಾವಿತಾನೈರ್ಯುತಂ ।
ಭ್ರಾಜದ್ದಿವ್ಯಪತಾಕಚಾಮರಯುತಂ ಛತ್ರೈರಪಾರೈರ್ಯುತಂ ।
ಚಾರುಹ್ಯಾಖಿಲಶೈಲರಾಜಸುತಯಾ ದಿವ್ಯಂ ವಿಮಾನಂ ಹರಃ ॥೩೪॥

---

ವುವು. ಅಲ್ಲದೆ ರುದ್ರಗಣಗಳೆಲ್ಲವೂ ಕೈಜೋಡಿಸಿ ನಿಂತು, ಶಂಕರನೇ, ಮಹಾದೇವನೇ ಸ್ವಾಮಿಯೇ, ಚಂದ್ರಶೇಖರನೇ, ವೇದವೇದಾಂತ ಪ್ರತಿಪಾದ್ಯನಾದವನೇ, ನಮ್ಮನ್ನು ರಕ್ಷಿಸು ಎಂದು ಸರ್ವದಾ ಪ್ರಾರ್ಥಿಸುತ್ತಿರುವರು. ॥೩೧॥

ಜಿತೇಂದ್ರಿಯರಿಂದ ಸ್ತುತಿಸಲ್ಪಡುವ ಮಹೇಶ್ವರನು, ಹಾಗೆ ವೃಷಭಾರೂಢನಾಗಿ ಕೈಲಾಸದಲ್ಲಿ ಸಂಚರಿಸುತ್ತಾ, ಕೈಲಾಸಪರ್ವತದ ಶುಭ್ರವಾದ ಶಿಖರದಲ್ಲಿರುವ ಶಿವಲಿಂಗಗಳ ಸಮೂಹವನ್ನು ನೋಡುತ್ತಾ, ಹರ್ಷಚಿತ್ತನಾಗಿ, ದೇವಿಗೆ ಅವುಗಳನ್ನು ನೋಡುವಂತೆ ಹೇಳುವನು. ॥೩೨॥

ಒಡನೆಯೇ ವೃಷಭದಿಂದಿಳಿದು ದಿವ್ಯ ರಥವನ್ನು ಹತ್ತುವನು. ಆ ರಥವಾದರೋ, ಸುವರ್ಣಮಯವಾದದ್ದು. ಅಲ್ಲಲ್ಲಿ ರತ್ನಗಳನ್ನೂ ದಿವ್ಯ ಮಣಿಗಳನ್ನೂ ಕೆತ್ತಿರುವರು. ಅದು ಬಹಳ ಎತ್ತರವಾಗಿರುವುದು. ಚಂದ್ರನಂತೆ ಕಾಂತಿಯುಳ್ಳ ಕಲಶದಿಂದ ಕೂಡಿರುವುದು. ಇಂತಹ ದಿವ್ಯರಥವನ್ನು ಹತ್ತಿ ಪಾರ್ವತಿಯೊಡನೆ ಕೈಲಾಸ ಶಿಖರವನ್ನು ನೋಡುವನು. ॥೩೩॥

ಆಮೇಲೆ ದಿವ್ಯ ವಿಮಾನದಲ್ಲಿ ಕುಳಿತು ಪಾರ್ವತಿಯೊಡನೆ ಅಲ್ಲಲ್ಲಿ ಓಡಾಡುವನು. ಆ ವಿಮಾನವಾದರೋ ನಾನಾರತ್ನಗಳಿಂದ ಕೂಡಿ ಅವುಗಳ ಕಾಂತಿಯನ್ನು

ಕೈಲಾಸೇ ನವಮೌಲಿಪಾಲಿಷು ಸದಾ ಪಶ್ಯನ್ ಪ್ರಯಾತೀಶ್ವರೋ ।
ದೇವಾದೀನಖಿಲಾನ್ನಿಲೋಕಯತಿ ವೈ ತಲ್ಲೋಕಲೋಕಾನಪಿ ।
ಬ್ರಹ್ಮಾಂಡಾಂತಿಕತಸ್ಸ್ಫುರತ್ಸುರತಟಿನ್ಯಾಟೋಪಮೌಲಿಶ್ಶಿವೋ ।
ವಿಶ್ವಂ ಚಿತ್ರಮುಪಾರಚಿತ್ರಕಯುತಂ ಯುಕ್ತೋಂಬಯಾ ಕೇವಲಂ ॥೩೫॥

ಸುರತರುಚಿತಭೋಗಜಾಲತರ್ಷಾ ।
ಸ್ಸುರತರುಚಿತದೇವಪುಣ್ಯವಾರ್ಭಿಃ ।
ಸರಭಸಮುಪಯಾಂತಿ ಕರ್ಮದೇವಾ ।
ಗಿರಿಜೇ ಪಶ್ಯ ಮುಹಾವಿಮಾನವರ್ಯಾಃ ॥೩೬॥

---

ಸರ್ವತ್ರ ಬೀರತಕ್ಕದ್ದಾಗಿರುವುದು. ಅದರಲ್ಲಿ ಮುತ್ತಿನ ಗೊಂಚಲುಗಳು ಅಲ್ಲಲ್ಲಿ ಕಟ್ಟಲ್ಪಟ್ಟಿವೆ. ಶ್ರೇಷ್ಠವಾದ ಪತಾಕೆ, ಚಾಮರ, ಇವುಗಳೆಲ್ಲಾ ಅಲ್ಲಿ ಶೋಭಿಸುತ್ತಿವೆ. ದೊಡ್ಡ ಛತ್ರಿಯೊಂದು, ಆ ವಿಮಾನದ ಮೇಲಿರುವುದು. ಅದರೊಳಗೆ ರಾಜಹಂಸ ಗಳೂ, ಅರಗಿಳಿಗಳೂ ಧ್ವನಿಗೈಯ್ಯುತ್ತಿರುವುವು. ಇಂತಹ ವಿಮಾನವನ್ನೇರಿ ಶಿವ ದಂಪತಿಗಳು ಮುಂದೆ ಪ್ರಯಾಣ ಮಾಡುವರು. ॥೩೪॥

ಆ ಕೈಲಾಸ ಶಿಖರದಲ್ಲಿ ಪಾರ್ವತಿಯೊಡನೆ ಪರಶಿವನು ಸಂಚರಿಸುತ್ತಾ ಅಧೋಭಾಗದಲ್ಲಿರುವ ಸಮಸ್ತ ದೇವತೆಗಳನ್ನೂ, ಅವರ ಲೋಕಗಳನ್ನೂ ನೋಡು ವನು. ಬ್ರಹ್ಮಾಂಡವನ್ನೆಲ್ಲಾ ಪಾವನಗೊಳಿಸುವ ದೇವಗಂಗೆಯನ್ನು ಶಿರಸ್ಸಿನಲ್ಲಿ ಧರಿಸಿದವನಾಗಿ ಶಂಕರನು, ತನ್ನಿಂದ ವಿಚಿತ್ರವಾಗಿ ನಿರ್ಮಿತವಾಗಿರುವ ಪ್ರಪಂಚ ವನ್ನೆಲ್ಲಾ ಆನಂದದಿಂದ ನಿಂತು ನೋಡುವನು. ॥೩೫॥

ದೇವಿಯೇ, ಇಲ್ಲಿ ನೋಡು. ಭೂಲೋಕದಲ್ಲಿ ಸಂಪಾದಿಸಿದ ಪುಣ್ಯಶೇಷದಿಂದ ದೇವಲೋಕವನ್ನು ಹೊಂದಿರುವ ಈ ಕರ್ಮದೇವತೆಗಳು, ಅಪ್ಸರಸ್ತ್ರೀಯರ ಸುರತವೇ ಮೊದಲಾದ ಭೋಗಗಳನ್ನನುಭವಿಸಿ, ಕಲ್ಪವೃಕ್ಷ, ದೇವಗಂಗಾ ಮುಂತಾದ ದಿವ್ಯವಸ್ತುಗಳನ್ನು ಸಂದರ್ಶಿಸಿ, ದಿವ್ಯವಿಮಾನದಲ್ಲಿ ಸಂಚರಿಸುತ್ತಾ ಪ್ರಯಾಣ ಮಾಡುತ್ತಿರುವರು. ॥೩೬॥

ದೇವಸ್ತ್ರೀಕರಕಂಕಣೋಲ್ಲಸನ್ಮಣಿಸ್ಫಾರಪ್ರಭಾಭಾಸುರಾ ।
ದೇವೋದ್ಯಾನನಿಕುಂಜಸೀಮಸುಭಗೈಸ್ಸ್ರಗ್ಗಂಧವಾತೈರಪಿ ।
ತತ್ರತ್ಯಾಚ್ಛಸುಧಾಸುಧಾಧರರಸಾಸ್ವಾದೋದನಾಃ ಕೇವಲಂ ।
ತೇ ದೇವಾಸ್ಸಹ ಭೋಗಭಾಗ್ಯನಿಕರೈಃ ಪುಷ್ಣಂತಿ ಪಶ್ಯಾಂಬಿಕೇ ॥೩೭॥

ವಿಷ್ಣುಬ್ರಹ್ಮಮರುದ್ಗಣೈಸ್ಸಮಮುಮೇ ಮಾಂ ಪಶ್ಯತೇ ಯೋಽಧಮೋ ।
ಲಾಲಾಜಾಲಮುಖೇಷು ಪೂಯಕ್ರಿಮಿಜಾಪಾರೇ ಮಲಾಬ್ಧೌ ಸ್ಥಿತಃ ।
ಶಸ್ತ್ರೋದ್ಯದ್ವಿಪಿನಾಗ್ರಗಾತ್ರಕವಚೇಷ್ವಾಕಲ್ಪವಿಷ್ಠಾಶನ ।
ಸ್ತ್ರಿಷ್ಟತ್ಯೇವ ಕನಿಷ್ಠನಿಷ್ಠುರವಚೋ ದುಷ್ಟಃ ಕಶಾತಾಡಿತಃ ॥೩೮॥

---

ದೇವಸ್ತ್ರೀಯರು ತಮ್ಮ ಕೈಗಳಲ್ಲಿ ಪ್ರಕಾಶಮಾನವಾದ ರತ್ನ ಕಡಗಗಳನ್ನು ಧರಿಸಿ, ಅವುಗಳ ಕಾಂತಿಯಿಂದ ಪ್ರಕಾಶಮಾನರಾಗಿ ತೋರುತ್ತಿರುವರು. ಉದ್ಯಾನವನಗಳಲ್ಲಿರುವ ಲತಾಕುಂಜದಿಂದ ಹೊರಡುವ ಪುಷ್ಪಗಂಧ, ಮಂದಮಾರುತ ಇವುಗಳನ್ನು ಅನುಭವಿಸುತ್ತಿರುವರು. ಅಂತಹ ಸ್ತ್ರೀಯರೊಡನೆ ಸೇರಿ, ಈ ಪುಣ್ಯಶಾಲಿಗಳು ಅಲ್ಲಿರುವ ಅಮೃತವನ್ನು ಪಾನಮಾಡುತ್ತಿರುವರು. ಆ ಅಮೃತವಾದರೋ, ಚಂದ್ರನ ಚಂದ್ರಿಕೆಯಂತೆ ನಿರ್ಮಲವಾಗಿ ಕಾಣುತ್ತಿರುವುದು. ಅಂಬಿಕೆಯೇ, ನೋಡು. ಹೀಗೆ ದೇವತೆಗಳು, ದೇವತಾ ಸ್ತ್ರೀಯರ ಭೋಗಭಾಗ್ಯಗಳನ್ನನುಭವಿಸುತ್ತಾ ವಿರಾಜಿಸುತ್ತಿರುವರು. ॥೩೭॥

ಎಲೌ ದೇವಿಯೇ, ನಾನು ಎಲ್ಲರಿಗಿಂತ ಶ್ರೇಷ್ಠನಾದ ದೇವದೇವನು. ಇಂಥ ನನ್ನನ್ನು ಯಾರು ಅಜ್ಞಾನದಿಂದ ಬ್ರಹ್ಮ, ವಿಷ್ಣು ಮುಂತಾದ ದೇವತೆಗಳಿಗೆ ಸಮನನ್ನಾಗಿ ಅರಿಯುವರೋ, ಅವರು ನರಕಭಾಗಿಗಳಾಗುವರು. ಅವರ ಜೊಲ್ಲಿನಿಂದ ಕೂಡಿದ ಮುಖದಲ್ಲಿ ಕ್ರಿಮಿಗಳು ಬೀಳುವುವು. ಕೀವು, ಕ್ರಿಮಿ ಇವುಗಳಿಂದ ಕೂಡಿದ ಮಲಸಮುದ್ರದಲ್ಲಿ ಮುಳುಗುವರು. ಶಸ್ತ್ರಗಳಿಂದ ಭರಿತವಾಗಿರುವ ಕಾಡುಗಳಲ್ಲಿ ಸೇರಿ, ತಮ್ಮ ದೇಹ ಮತ್ತು ಕವಚಗಳನ್ನೆಲ್ಲಾ ಸೀಳಿಕೊಂಡು ವ್ಯಥೆಪಡುವರು. ಅಮೇಧ್ಯಭಕ್ಷಕರಾಗುವರು. ಕೊನೆಗೆ ನಾನಾವಿಧವಾದ ದೂಷಣೆಗಳಿಗೆ ಸಿಕ್ಕಿದವರಾಗಿ, ಚಾವಟಿಯೇಟಿನಿಂದ ಹೊಡೆಯಲ್ಪಟ್ಟು ವಿಧವಿಧವಾದ ಹಿಂಸೆಗಳಿಗೆ ಒಳಗಾಗುವರು. ॥೩೮॥

ದೃಷ್ಟಃ ಕಷ್ಟಜಭೋಗಭಾಗ್ಯಫಲಭಾಕ್ ಮನ್ನಿಂದನಾದದ್ರಿಜೇ ।
ಪಶ್ಯ ನಾರಕಗಣಂ ಬಹುದುಃಖಿತಂ ಲಿಂಗಮಂಗಲದರ್ಶನೋಜ್ಝಿತಂ ।
ಕುಂಭತೈಲಪಚನೇನ ಸುಪಕ್ವಂ ।
ಭಕ್ಷ್ಯವನ್ನಿಗಿರತೇ ಯಮ ಏನಂ ॥೩೯॥

ರುದ್ರಾಕ್ಷಕಂಠವರಕರ್ಣಮಹೋರುಹಾರಾಃ ।
ಕೋಟೀರಕಂಕಣಕಶೋಭಿತಬಾಹುದಂಡಾಃ ॥೪೦॥

ಪ್ರದೋಷಲಿಂಗಾರ್ಚನಲಿಂಗಧಾಮ ।
ಸಂದರ್ಶನಾನಂದಿತವೃತ್ತಯೋ ಯೇ ।
ಯಾಂತ್ಯೇವ ಕೈಲಾಸವರಂ ಮಮಾಲಯಂ ।
ತ ಏವ ಹಾರಾ ಮಮ ಸಮ್ಮತಾಶ್ಶಿವೇ ॥೪೧॥

ಕೈಲಾಸಾಚಲಮೌಲಿಸಂಸ್ಥಿತಮಹಾಲಿಂಗಾಲಯೇಷೂದ್ಯತಾ ।
ಭ್ರಾಂತಿಂ ತೇ ಜನಯಂತಿ ರತ್ನಕಲಶಾ ನಾನಾರ್ಕಸೋಮಾ ಇವ ।

---

ಗಿರಿಜೆಯೇ, ನೋಡು. ಈ ನರಕನಿವಾಸಿಗಳಲ್ಲಿ ಬಹು ದುಃಖಿತನಾಗಿ ಕಷ್ಟವನ್ನನುಭವಿಸುತ್ತಿರುವವನು, ಹಿಂದೆ ನನ್ನನ್ನು ಬಹುವಾಗಿ ನಿಂದಿಸಿದವನು. ಮಂಗಳಕರವಾದ ಶಿವಲಿಂಗವನ್ನು ದರ್ಶನಮಾಡದೆ ಪಾಪರಾಶಿಯನ್ನು ಕೂಡಿಹಾಕಿಕೊಂಡಿರುವನು. ಇವನನ್ನು ಯಮನು ಎಣ್ಣೆಯ ಗುಡಾಣದಲ್ಲಿ ಬೇಯಿಸಿ, ಭಕ್ಷ್ಯದಂತೆ ಮಾಡಿಕೊಂಡು ತಿನ್ನುತ್ತಿರುವನು. ॥೩೯॥

ರುದ್ರಾಕ್ಷಿಯ ಸರವನ್ನು ಕಂಠದಲ್ಲಿಯೂ, ಕಿವಿಯಲ್ಲಿಯೂ, ಎದೆಯಮೇಲೂ ಧರಿಸಿಕೊಂಡು, ರುದ್ರಾಕ್ಷಿಯ ಕಿರೀಟ, ಬಳೆ, ಇವುಗಳಿಂದ ಕೂಡಿದ ಬಾಹುದಂಡವುಳ್ಳವರಾಗಿ, ಯಾರು ಪ್ರದೋಷಕಾಲದಲ್ಲಿ ಶಿವಲಿಂಗಾರ್ಚನೆ ಮತ್ತು ಶಿವಲಿಂಗದರ್ಶನ ಇವುಗಳಿಂದ ಕಾಲಕಳೆಯುವರೋ, ಅವರು ನನ್ನ ಆವಾಸಸ್ಥಾನವಾದ ಕೈಲಾಸವನ್ನು ಹೊಂದುವರು. ಅಲ್ಲದೆ ಅವರೇ ನನಗೆ ಹಾರದಂತಾಗುವರು. ನನಗೆ ಪ್ರೀತಿಪಾತ್ರರಾದವರು ಅವರೇ. ॥೪೦-೪೧॥

ಈ ಕೈಲಾಸಪರ್ವತದಲ್ಲಿ ಅನೇಕ ಶಿವದೇವಾಲಯಗಳಿವೆ. ಅವುಗಳಮೇಲೆಲ್ಲಾ ಸೂರ್ಯಚಂದ್ರರಂತೆ ಪ್ರಕಾಶಿಸುವ ರತ್ನಕಲಶಗಳು ನೋಡುವವರಿಗೆ ಸೂರ್ಯಚಂದ್ರರ

ಅತ್ರತ್ಯಾಮಲಲಿಂಗಮೌಲಿಜಜಟಾಜೂಟೇಂದುಗಂಗಾದಯೋ ।
ದ್ಯೋತಚ್ಛೈಲಶಿಖಾವಿರಾಜಿತಶಿಖಾಕಾರೋಽದ್ಯ ಶೈಲೋ ಮಮ ॥೪೨॥

ಪಶ್ಯಾದ್ರಿಜೇ ಗಿರಿವರೋದ್ಯತಲಿಂಗಸಂಘಂ ।
ಸಂಪೂಜಿತಂ ಚ ವಿಲಸನ್ನವಬಿಲ್ವಪತ್ರೈಃ ।
ತತ್ರೈವ ಗಾಂಗಜಪಯೋಜವರತ್ನಮೀಲ ।
ನ್ಮೌಲಿಸ್ಥಚಂದ್ರಜಕರೈರ್ವಿಕಚೋತ್ಪಲಾಭಂ ॥೪೩॥

ಗಣಕರಸಂಪುಟೋತ್ಥಶಂಖನಾದ್ಯೈ ।
ರ್ಮಧುರೈರ್ಮದ್ದಲಡಿಂಡಿಮೋತ್ಥನಾದ್ಯೈಃ ।
ಶಿವಲಿಂಗಾಗ್ರಗತಾ ಗಣಾ ವಿರೇಜುರ್ಮಮ ।
ಶೈಲೋಽಪಿ ಸದೈವ ಘೋಷಯುಕ್ತಃ ॥೪೪॥

ಕೈಲಾಸೋಽಪ್ಯಯಮದ್ರಿರಾಜತನಯೇ ಮಲ್ಲಿಂಗಮೌಲಿಸ್ಸದಾ ।
ಜಾತೋ ಮಂದರದಾನತಶ್ಚ ಸುಮಹತ್ತೇನಾಪಿ ತಪ್ತಂ ತಪಃ ।

---

ಭ್ರಾಂತಿಯನ್ನುಂಟುಮಾಡುತ್ತಿವೆ. ಆ ಲಿಂಗಗಳ ಶಿರೋಭಾಗದಲ್ಲಿರುವ ಜಟಾಜೂಟಗಳೂ, ಪೂರ್ಣಚಂದ್ರ, ಗಂಗಾನದಿ ಮುಂತಾದುವುಗಳಿಂದ ಪ್ರಕಾಶಿಸುವ ಈ ಪರ್ವತವೂ ಎಷ್ಟು ಸುಂದರಮಯವಾಗಿವೆ? ||೪೨||

ಪಾರ್ವತಿಯೇ, ಈ ಪರ್ವತದಲ್ಲಿ ಕಂಡುಬರುವ ಶಿವಲಿಂಗಗಳ ಸಮೂಹವನ್ನು ನೋಡು. ಬಿಲ್ವಪತ್ರೆಗಳಿಂದ ಪೂಜಿತವಾಗಿ, ಗಂಗಾನದಿಯಲ್ಲಿ ಬೆಳೆದ ರಕ್ತ ಮತ್ತು ಸಿತಕೈರವಗಳಿಂದ ಅಲಂಕೃತವಾಗಿ, ಚಂದ್ರನ ಕಿರಣಗಳಿಂದ ವಿರಾಜಿಸುತ್ತಿರುವುದು. ||೪೩||

ರುದ್ರಗಣಗಳು ತಮ್ಮ ಕೈಗಳಲ್ಲಿ ಶಂಖ, ಮದ್ದಲೆ, ಡಿಂಡಿಮ, ಮುಂತಾದ ವಾದ್ಯಗಳನ್ನು ಹಿಡಿದು ಅವುಗಳನ್ನು ಧ್ವನಿಗೈಯ್ಯುತ್ತಾ, ಶಿವಲಿಂಗಗಳ ಮುಂದುಗಡೆ ನಿಂತಿರುವುವು. ಈ ವಾದ್ಯಧ್ವನಿಗಳಿಂದ ಕೂಡಿ ನನ್ನ ಕೈಲಾಸಪರ್ವತವು ಬಹುಮಟ್ಟಿಗೆ ಸದಾ ಶಬ್ದಮಯವಾಗಿರುವುದು. ||೪೪||

ದೇವಿಯೇ, ಈ ಕೈಲಾಸವು ಹಿಂದೆ ನನ್ನ ಲಿಂಗವನ್ನು ತಲೆಯಲ್ಲಿ ಧರಿಸಿಕೊಂಡು, ನನ್ನನ್ನು ಕುರಿತು ಉಗ್ರವಾಗಿ ತಪಸ್ಸನ್ನಾಚರಿಸಿತು. ನನ್ನ ತೃಪ್ತಿಗಾಗಿ

ತತ್ರಾದೃಙ್ಞಸುರಾದಿಸಂಘನಿಕರೈಸ್ತಪ್ತಂ ಮುನೀನಾಂ ಗಣೈ ।
ಶೈವೇಂದ್ರೈರ್ಮಮ ಸದ್ಗಣೈರಪಿ ಶಿವೇ ತಸ್ಮಿನ್ ದಯಾ ಮೇ ಪರಾ॥೪೫॥

ಇತ್ಥಂಬಾವದನಂ ನಿರೀಕ್ಷ್ಯ ಭಗವಾನಾಹ ಪ್ರಮೋದಾಸ್ಪದಂ ।
ಕೈಲಾಸಸ್ಯ ಗುಣೌಘವರ್ಣನಮಹೋ ದೇವ್ಯಾಃ ಪುರಶ್ಶಂಕರಃ ।
ರಮ್ಯಂ ತತ್ರ ಮಮಾಲಯಂ ಕರಿವರಾಸ್ಯಸ್ಯಾಪಿ ವಕ್ಷ್ಯೇ ಮುದಾ ।
ತಸ್ಯಾಪ್ಯದ್ಭುತಮೀಶ್ವರಸ್ಯ ಸಮುಖೇ ಸಂಸ್ಥಾಪ್ಯ ಧರ್ಮ್ಯಸ್ಯ ಹಿ ॥೪೬॥

ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ಶಿವಗೌರೀಸಂವಾದೇ
ಕೈಲಾಸಲಿಂಗವರ್ಣನಂ ನಾಮ ದ್ವಾವಿಂಶೋಽಧ್ಯಾಯಃ

---

ಸುವರ್ಣಾಚಲವಾದ ಮಂದರವನ್ನೇ ದಾನಮಾಡಿತು. ಈ ಕೈಲಾಸಪರ್ವತರಾಜನು ಮಾಡಿದ ತಪಸ್ಸಿಗೆ ಸದೃಶವಾದ ತಪಸ್ಸು, ಮತ್ತಾವ ದೇವರಾಕ್ಷಸರಿಂದಲೂ ಆಚರಿಸಲ್ಪಡಲಿಲ್ಲ. ಹೆಚ್ಚೇನು? ಯಾವ ಶೈವನೂ ಇವನು ಮಾಡಿದಂತಹ ತಪಸ್ಸನ್ನು ಮಾಡಲಾರನು. ಆದ್ದರಿಂದಲೇ ಅವನ ವಿಷಯದಲ್ಲಿ ನನಗೆ ಅಸಾಧಾರಣವಾದ ಪ್ರೀತಿಯಿರುವುದು. ॥೪೫॥

ಎಂದು, ಮಹೇಶ್ವರನು ದೇವಿಯ ಮುಖವನ್ನು ನೋಡುತ್ತಾ, ಕೈಲಾಸಪರ್ವತದ ಸಮಸ್ತ ಗುಣಗಳನ್ನೂ ವಿಧವಿಧವಾಗಿ ವಿವರಿಸಿದನು, ಎಂದು ಕುಮಾರಸ್ವಾಮಿಯು ಜೈಗೀಷವ್ಯಾದಿಗಳಿಗೆ ಹೇಳಿ, ಮತ್ತೆ, ಕೈಲಾಸಪರ್ವತದಲ್ಲಿರುವ ತನ್ನ ಮನೆಯ ಸೊಬಗನ್ನು ಗಜಾನನನಿಗೂ, ಅಲ್ಲಿ ನೆರೆದಿರುವ ಸಕಲ ದೇವತೆಗಳಿಗೂ ಸಂತೋಷದಿಂದ ಹೇಳುವೆನು ಎಂದು ಪರಮೇಶ್ವರನ ಸಮ್ಮುಖದಲ್ಲಿ ತನ್ನ ಗೃಹಸೌಂದರ್ಯವನ್ನು ಹೇಳಲಾರಂಭಿಸಿದನೆಂದು ಸೂತಮಹರ್ಷಿಗಳು ವಾಜಶ್ರವಸಾದಿಗಳಿಗೆ ಹೇಳಿದರು. ॥೪೬॥

ಇಲ್ಲಿಗೆ ಶಿವರಹಸ್ಯದ ಪ್ರಥಮಾಂಶದಲ್ಲಿ ಶಿವಗೌರೀ ಸಂವಾದರೂಪವಾಗಿ
ಕೈಲಾಸಲಿಂಗವರ್ಣನೆಯೆಂಬ ಇಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

# ಅಥ ಶ್ರೀಶಿವರಹಸ್ಯೇ

## ತ್ರಯೋವಿಂಶೋಽಧ್ಯಾಯಃ

### ಸ್ಕಂದಕೃತಸ್ತುತಿಃ

|| ಸ್ಕಂದ ಉವಾಚ ||

ಶೃಣುಧ್ವಂ ಬ್ರಹ್ಮವಿಷ್ಣ್ವಾದ್ಯಾಃ ಜೈಗೀಷವ್ಯಗಣೋತ್ತಮಾಃ ।
ತತ್ರಾಂತರೇಽಸ್ತಿ ಪ್ರಾಕಾರೋ ಗೋಮೇದಮಣಿಕಲ್ಪಿತಃ ॥೧॥

ಗೋಮೇದಗೋಪುರಶ್ಚೈವ ಚತುರ್ದಿಕ್ಷು ವಿರಾಜಿತಃ ।
ಚತುರ್ದಿಕ್ಷು ಗೋಪುರಾಣಿ ಲಕ್ಷಮಾನೇನ ಸತ್ತಮಾಃ ॥೨॥

ವೇದಿಕಾಪಟ್ಟಿಕಾಭಿಶ್ಚ ತೋರಣಾಲಂಕೃತಾನಿ ಹಿ ।
ರಾಜತ್ಕುಂಭಪತಾಕಾಗ್ರೈರ್ವೃಷಭೈಸ್ತನ್ಮಣಿಪ್ರಭೈಃ ॥೩॥

---

## ಶ್ರೀಶಿವರಹಸ್ಯದಲ್ಲಿ ಇಪ್ಪತ್ತಮೂರನೆಯ ಅಧ್ಯಾಯ

ಕುಮಾರಸ್ವಾಮಿಯು ಅಲ್ಲಿ ನೆರೆದಿದ್ದ ಬ್ರಹ್ಮವಿಷ್ಣ್ವಾದಿಗಳನ್ನೂ ಜೈಗೀಷವ್ಯ ಮಹರ್ಷಿಯೇ ಮೊದಲಾದ ಋಷಿಶ್ರೇಷ್ಠರನ್ನೂ ಕುರಿತು ಮುಂದಿನ ಕಥಾಭಾಗವನ್ನು ವಿವರಿಸಲಾರಂಭಿಸಿದನು. " ಋಷಿವರ್ಯರೇ, ಬ್ರಹ್ಮಾದಿದೇವತೆಗಳೇ, ಕೇಳಿರಿ. ಆ ಕೈಲಾಸಪರ್ವತದ ಮಧ್ಯಭಾಗದಲ್ಲಿ ಗೋಮೇದರತ್ನಗಳಿಂದ ಕಲ್ಪಿತವಾದ ಪ್ರಾಕಾರವೊಂದಿರುವುದು. ||೧||

ಆ ಪ್ರಾಕಾರಕ್ಕೆ ನಾಲ್ಕು ದಿಕ್ಕುಗಳಲ್ಲಿಯೂ ಗೋಮೇದ ರತ್ನನಿರ್ಮಿತಗಳಾದ ಗೋಪುರಗಳಿವೆ. ಅವು ಒಂದೊಂದು ಲಕ್ಷ ಮಾನದಷ್ಟು ಎತ್ತರವಾಗಿದೆ. ||೨||

ಅವುಗಳಲ್ಲಿ ಮೇಲೆ ಮೇಲೆ ಜಗುಲಿಗಳೂ, ಮೆಟ್ಟಲುಗಳೂ, ತೋರಣಗಳೂ, ಕಲಶಗಳೂ, ಧ್ವಜಪಟಗಳೂ, ಅದೇ ರತ್ನಗಳಿಂದ ನಿರ್ಮಿತವಾದ ಬಸವನ ವಿಗ್ರಹಗಳೂ ವಿರಾಜಿಸುತ್ತಿವೆ. ||೩||

ರುದ್ರಾವತಾರರಚಿತ್ಯೈರ್ಗವಾಕ್ಷೈಸ್ಸಾಫಟಿಕೈರಪಿ ।
ಕುಮುದೈರ್ವ್ಯಾಲಪೀಠೈಶ್ಚ ದೈವಗೋಷ್ಠಯುತಾನ್ಯಪಿ ॥೪॥

ಮಂಟಪಾವಳಿಸಂಕ್ಲೃಪ್ತೈಸ್ಸಹಸ್ರಾಯುತಶೋ ಗಣೈಃ ।
ಮಣಿಕಾಂಚನಚಿತ್ರೈಶ್ಚ ಮುಕ್ತಾವಿತತತೋರಣೈಃ ॥೫॥

ಸರೋಭಿಸ್ಸಾಗರಾಕಾರೈ ರತ್ನಸೋಪಾನಮಂಡಿತೈಃ ।
ತತ್ಪ್ರಾಂತಮಂಟಪವರೈಸ್ಸಹಸ್ರಸ್ತಂಭಶೋಭಿತೈಃ ॥೬॥

ಸರೋಮಧ್ಯಮಣಿಭ್ರಾಜನ್ಮಂಟಪೈರುಚ್ಛ್ರಿತೈರಪಿ ।
ತತ್ರಾಂತರೇ ತು ಪ್ರಾಕಾರೇ ಗೋಪುರಾಂತರದಕ್ಷಿಣೇ ॥೭॥

ತತ್ರ ಮತ್ಸದನಂ ದಿವ್ಯಂ ನಾನಾರತ್ನಚಿತಂ ಶುಭಂ ।
ಲಕ್ಷಸ್ತಂಭಯುತಂ ಸೌಧಂ ನವರತ್ನಾಗ್ರಶೃಂಗಕಂ ॥೮॥

---

ಅಲ್ಲಲ್ಲಿ ರುದ್ರಾವತಾರದ ಪ್ರತಿಮೆಗಳೂ, ಸ್ಫಟಿಕಮಯವಾದ ಗವಾಕ್ಷಿಗಳೂ, ಕುಮುದಾಕಾರದ ಸರ್ಪಾಸನಗಳೂ, ದೇವರ ವಿಗ್ರಹಗಳಿರುವ ಸಣ್ಣ ಬಾಗಿಲುಗಳೂ ಮನೋಹರವಾಗಿ ಕಾಣುತ್ತಿರುವುವು. ॥೪॥

ಅಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಮಂಟಪಗಳು ರಚಿತವಾಗಿವೆ. ಆ ಮಂಟಪಗಳೆಲ್ಲಾ ರತ್ನಗಳಿಂದಲೂ ಸುವರ್ಣಗಳಿಂದಲೂ, ವಿಸ್ತಾರವಾದ ತೋರಣಗಳಿಂದಲೂ ಅಲಂಕೃತವಾಗಿವೆ. ॥೫॥

ಅಲ್ಲಿ ಸಾಗರದಂತಿರುವ ಸರೋವರಗಳಿವೆ. ಅವೆಲ್ಲವೂ ರತ್ನಸೋಪಾನಗಳಿಂದಲೂ, ಸಹಸ್ರ ಕಂಬಗಳುಳ್ಳ ದೊಡ್ಡ ದೊಡ್ಡ ಮಂಟಪಗಳಿಂದಲೂ ಕೂಡಿವೆ. ॥೬॥

ಸರೋವರಗಳ ಮಧ್ಯಭಾಗದಲ್ಲಿ ಎತ್ತರವಾಗಿಯೂ, ರತ್ನಮಯವಾಗಿಯೂ ಇರುವ ಅನೇಕ ಮಂಟಪಗಳಿವೆ. ಅವುಗಳಲ್ಲಿ ಒಂದು ಮಂಟಪದ ಮಧ್ಯಭಾಗದಲ್ಲಿ, ದೊಡ್ಡ ಗೋಪುರದ ದಕ್ಷಿಣಭಾಗದಲ್ಲಿ ಮತ್ತೊಂದು ಪ್ರಾಕಾರವಿರುವುದು. ॥೭॥

ಆ ಪ್ರಾಕಾರದ ಮಧ್ಯದಲ್ಲಿ ನಾನಾ ರತ್ನರಚಿತವಾದ ಲಕ್ಷ ಸ್ತಂಭಗಳಿಂದಲೂ, ನವರತ್ನಗಳಿಂದ ಕೂಡಿದ ಶಿಖರಗಳಿಂದಲೂ ಅಲಂಕೃತವಾಗಿರುವ ನನ್ನ ಮನೆಯಿದೆ. ॥೮॥

**ತತ್ಸಾಲಭಂಜಿಕಾನಿರ್ಯದ್ರತ್ನಕಾಂತಿವಿಭಾಸಿತಂ ।**
**ತತಃ ಪಶ್ಚಾದಂಶುಮದ್ಭಿರ್ಮಣಿಭಿಃ ಕೃತಶೇಖರಂ ॥೯॥**

**ಗವಾಕ್ಷಿತಂ ವಿಚಿತ್ರೈಶ್ಚ ನವರತ್ನಪ್ರಭಾಧಿಕಂ ।**
**ಹರಿನ್ಮಣಿಕೃತೈಶ್ಚೈವ ಮಯೂರವರಕುಕ್ಕುಟೈಃ ॥೧೦॥**

**ಶೋಭಿತೈರ್ಮಂಟಪಾಗ್ರೈಶ್ಚ ವರಪ್ರಾಸಾದತೋರಣೈಃ ।**
**ಪ್ರಾಕಾರೈಸ್ಸುಂದರತರೈರ್ಗೋಪುರಾವಲಿಭಾಸುರೈಃ ॥೧೧॥**

**ಮಣಿದ್ವಾರಕವಾಟೈಶ್ಚ ಶಾತಕುಂಭಶಲಾಕಕೈಃ ।**
**ಧೂಪಾಮೋದಯುತಾಪಾರರಮ್ಯೋದ್ದಾಮಸುಗಂಧಿತಂ ॥೧೨॥**

**ಮಣಿದೀಪಪ್ರಭಾಭಾಸಿರಂಜಿತಾಖಿಲದಿಕ್ತಟಂ ।**
**ತತ್ರ ದಿವ್ಯಸುಮಾಮೋದಿ ವನಂ ಚೈತ್ರರಥಾಧಿಕಂ ॥೧೩॥**

---

ಮನೆಯ ಎಲ್ಲಾ ಭಾಗಗಳಲ್ಲಿಯೂ, ರತ್ನಕಾಂತಿಗಳಿಂದ ಹೊಳೆಯುತ್ತಿರುವ ಬೊಂಬೆಗಳಿವೆ. ಮತ್ತು ಆ ನನ್ನ ಪ್ರಾಸಾದಕ್ಕೆ ದೀಪ್ತಿಮತ್ತಾದ ರತ್ನಗಳಿಂದ ನಿರ್ಮಿತವಾದ ಕಲಶಗಳಿವೆ. ॥೯॥

ಆ ನನ್ನ ಮನೆಗೆ ನವರತ್ನಕಾಂತಿಗಳಿಂದ ವಿಚಿತ್ರವಾಗಿ ಕಂಡುಬರುವ ಗವಾಕ್ಷೆಗಳು ಬಹಳವಾಗಿವೆ. ನೀಲಮಣಿರಂಜಿತವಾದ ನವಿಲುಗಳೂ, ಶ್ರೇಷ್ಠವಾದ ಕೋಳಿಗಳೂ ಅಲ್ಲಲ್ಲಿ ಕಂಡುಬರುತ್ತಿವೆ. ॥೧೦॥

ಮಂಟಪಾಗ್ರಗಳಲ್ಲಿಯೂ, ಪ್ರಾಸಾದಗಳಲ್ಲಿಯೂ ಸುಂದರವಾದ ತೋರಣಗಳಿವೆ. ಈರೀತಿ ಶೋಭಿಸುವ ಗೋಪುರಗಳ ಅಗ್ರಭಾಗಗಳಿಂದಲೂ ಹೊಳೆಯುವ ರತ್ನಮಯವಾದ ಪ್ರಾಕಾರಗಳಿಂದಲೂ, ಆ ಪ್ರಾಸಾದವು ಶೋಭಿಸುತ್ತಿರುವುದು. ॥೧೧॥

ಮಣಿಮಯವಾದ ಬಾಗಿಲುಗಳೂ, ಅದಕ್ಕೆ ತಕ್ಕ ಸುವರ್ಣದ ಅಗುಳಿಗಳೂ, ಅನೇಕವಾಗಿ ಅಲ್ಲಿ ಕಂಗೊಳಿಸುತ್ತಿವೆ. ಧೂಪದ ವಾಸನೆಯಿಂದ ಸರ್ವತ್ರ ಸುವಾಸಿತವಾಗಿರುವ ಆ ಮನೆಯು ಬಹುಮಟ್ಟಿಗೆ ಮನೋಹರವಾಗಿರುವುದು. ॥೧೨॥

ರತ್ನಮಯವಾದ ದೀಪಗಳಿಂದ ಹೊರಡುವ ಪ್ರಭೆಯು, ಅನೇಕ ದಿಕ್ತಟಗಳನ್ನು ಬೆಳಗಿಸುತ್ತಿದೆ. ಅದರ ಪಕ್ಕದಲ್ಲಿಯೇ, ಕುಬೇರನ ಉದ್ಯಾನವನವಾದ

ಮಣ್ಯಾಲವಾಲಕಲಿತರತ್ನವೇದಿತ್ವಿಷಾ ತತಂ ।
ನಾನಾದೇವದ್ರುಮಾಪಾದವಲ್ಲೀಗುಚ್ಛವಿರಾಜಿತಂ ॥೧೪॥

ಕೌಮಾರಂ ನಾಮ ತತ್ರಾಸ್ತಿ ಸರಶ್ಶೋತ್ಫುಲ್ಲಪಂಕಜಂ ।
ಮಣಿಸೋಪಾನಪಾಲೀಭಿಸ್ತತ್ಪ್ರಾಂತಮಣಿಮಂಟಪೈಃ ॥೧೫॥

ಕ್ರೀಡಾಮೃಗೈಶ್ಶುಕೈಶ್ಚಾಪಿ ಮಣಿಪಂಜರಶಾರಿಕೈಃ ।
ತತ್ರ ತತ್ಸೌಧಮಧ್ಯಸ್ಥಂ ಮಮ ಸೌಧವರಾಶ್ರಯಂ ॥೧೬॥

ಸಿಂಹಾಸನಂ ರತ್ನಕ್ಲಪ್ತಂ ಪಂಚಯೋಜನವಿಸ್ತೃತಂ ।
ತತ್ರಾಹಂ ಸೇವಿತೋ ವೀರೈರ್ನವಲಕ್ಷೈರುದಾಯುಧೈಃ ॥೧೭॥

---

ಚೈತ್ರರಥಕ್ಕಿಂತಲೂ ಹೆಚ್ಚಾಗಿ ಸುಂದರವಾದ ಮತ್ತು ಫಲಪುಷ್ಪಭರಿತವಾದ ಉದ್ಯಾನವನವಿರುವುದು. ॥೧೩॥

ಆ ಉದ್ಯಾನವನದಲ್ಲಿರುವ ಮರಗಳಿಗೆ ರತ್ನಖಚಿತವಾದ ಪಾತಿಗಳಿವೆ. ಆ ಪಾತಿಗಳಿಂದ ಹೊರಡುವ ಕಾಂತಿಯೂ ಅನೇಕ ದೇವವೃಕ್ಷಗಳ ಬಳ್ಳಿಗಳಿಂದ ಹೊರಬೀಳುವ ತೇಜಸ್ಸೂ ನಾನಾವಿಧವಾಗಿ ವ್ಯಾಪಿಸಿ ವನವನ್ನೆಲ್ಲಾ ಪ್ರಕಾಶವನ್ನಾಗಿ ಮಾಡುತ್ತಿದೆ. ॥೧೪॥

ಅಲ್ಲಿ ಕೌಮಾರವೆಂಬ ಸರೋವರವೊಂದಿರುವುದು. ಅದು ಅರಳಿದ ಕಮಲಗಳಿಂದಲೂ ರತ್ನಖಚಿತವಾದ ಮೆಟ್ಟಿಲುಗಳಿಂದಲೂ, ಮಣಿಖಚಿತವಾದ ಮಂಟಪಗಳಿಂದಲೂ ಶೋಭಿಸುತ್ತಿರುವುದು. ॥೧೫॥

ಕ್ರೀಡಾಮೃಗಗಳೂ, ಗಿಳಿಗಳೂ, ರತ್ನಪಂಜರಗಳಲ್ಲಿ ಕಂಡುಬರುವ ಶಾರಿಕೆಗಳೂ, ವಿಧವಿಧವಾಗಿವೆ. ನನ್ನ ಸೌಧವು ಅಂತಹ ಅನೇಕ ಸೌಧಗಳ ಮಧ್ಯದಲ್ಲಿರುವುದು. ಮತ್ತು ಶ್ರೇಷ್ಠವಾದ ಸೌಧವೆನಿಸಿರುವುದು. ॥೧೬॥

ಆ ದಿವ್ಯಸೌಧದಲ್ಲಿ ರತ್ನನಿರ್ಮಿತವಾದ ಸಿಂಹಾಸನವಿರುವುದು. ಅದು ಐದು ಯೋಜನ ವಿಸ್ತಾರವುಳ್ಳದ್ದಾಗಿರುವುದು. ಅಂತಹ ಸಿಂಹಾಸನದಲ್ಲಿ ಮಂಡಿಸಿ, ನಾನು ಒಂಬತ್ತುಲಕ್ಷ ಆಯುಧಧಾರಿಗಳಾದ ಸೈನಿಕರಿಂದ ಸೇವಿಸಲ್ಪಡುತ್ತಿರುವೆನು. ॥೧೭॥

ಸಿಂಹಸಂಹನನೈರ್ವೀರೈಃ ಕೌಮಾರೈರುದ್ಯದಾಯುಧೈಃ ।
ಮತ್ತದ್ವಿಪಕರಾಕಾರಬಾಹುಭಿಶ್ಶಕ್ತಿಸಂಯುತೈಃ ॥೧೮॥

ವೀರಬಾಹುಪ್ರಭೃತಿಭಿಃ ಪುಷ್ಪವಸ್ತ್ರಾಂಗಲೇಪನೈಃ ।
ಛತ್ರಚಾಮರಹಸ್ತೈಶ್ಚಾಪ್ಯಾಸೇಽಹಂ ಸೇವಿತಸ್ತದಾ ॥೧೯॥

ಮಹಾರ್ಹವಸನೋಪೇತೋ ನವರತ್ನವಿಭೂಷಣಃ ।
ಷಡ್ವಕ್ತ್ರಮುಕುಟೋದ್ಭಾಸಿರತ್ನಕುಂಡಲಕಾಂಗದಃ ॥೨೦॥

ರತ್ನಾಂಗುಲೀಯವಿಲಸತ್ತಲಾಂಗುಲಿಪದಾಂಬುಜಃ ।
ಮಣಿಮಾಣಿಕ್ಯಮಂಜೀರರಣನ್ನೂಪುರಮೇಖಲಃ ॥೨೧॥

ದೇವವಲ್ಲ್ಯಾ ಸೇನಯಾ ಚಾಪೀಂದ್ರಾದ್ಯೈರಪಿ ಸೇವಿತಃ ।
ಷಡ್ಭಿಶ್ಚ ವದನೈರ್ದೇವಂ ಸ್ತುವನ್ ದ್ವಾದಶಲೋಚನೈಃ ॥೨೨॥

---

ಆವರೆಲ್ಲರೂ ಸಿಂಹವನ್ನು ಎದುರಿಸಿ ಸೋಲಿಸುವಂತಹ ವೀರರು. ಸರ್ವದಾ ಆಯುಧಪಾಣಿಗಳಾಗಿರುವರು. ಅವರ ಬಾಹುಗಳು ಮದ್ದಾನೆಗಳ ಸೊಂಡಲುಗಳಂತೆ ನೀಳವಾಗಿರುವುವು. ಮತ್ತು ಬಲಿಷ್ಠವಾಗಿರುವುವು. ॥೧೮॥

ವೀರಬಾಹುವೇ ಮೊದಲಾದ ಆ ವೀರರು ತಮ್ಮ ದೇಹವನ್ನು ಪುಷ್ಪಗಳಿಂದಲೂ, ವಸ್ತ್ರಗಳಿಂದಲೂ ಅಲಂಕರಿಸಿಕೊಂಡು, ಛತ್ರಿ, ಚಾಮರಗಳನ್ನು ಕೈಯ್ಯಲ್ಲಿ ಹಿಡಿದು ಸರ್ವದಾ ನನ್ನನ್ನು ಸೇವಿಸುತ್ತಿರುವರು. ॥೧೯॥

ನಾನು ದಿವ್ಯವಾದ ವಸ್ತ್ರಗಳನ್ನು ಧರಿಸಿ, ನವರತ್ನಗಳ ಆಭರಣಗಳನ್ನು ತೊಟ್ಟು, ಆರು ಮುಖಗಳಿಗೆ ಒಪ್ಪುವ ಆರು ಕಿರೀಟಗಳಿಂದಲೂ, ರತ್ನಕುಂಡಲ, ರತ್ನದ ಕೈಬಳೆ ಇವುಗಳಿಂದಲೂ ಅಲಂಕೃತನಾಗಿರುವೆನು. ॥೨೦॥

ರತ್ನದ ಉಂಗುರಗಳನ್ನು ಕೈಗಳಿಗೂ, ಪಾದಾಭರಣವನ್ನು ಕಾಲಿಗೂ ರತ್ನಮಯವಾದ ಗೆಜ್ಜೆಗಳಿಂದ ಧ್ವನಿಮಾಡುವ, ಕಾಲುಬಳೆ ಮತ್ತು ಸೊಂಟದಪಟ್ಟಿ ಇವುಗಳನ್ನೂ ಆಯಾ ಅವಯವಗಳಿಗೂ, ಧರಿಸಿರುವೆನು. ॥೨೧॥

ವಲ್ಲೀದೇವಿ ಮತ್ತು ಸೇನಾದೇವಿಯರಿಂದ ಕೂಡಿ, ಇಂದ್ರಾದಿಗಳಿಂದ ಸೇವಿತನಾಗಿ, ಆರುಮುಖಗಳಿಂದಲೂ ಪರಮೇಶ್ವರನನ್ನು ಸರ್ವದಾ ಸ್ತುತಿಸುತ್ತಿರುವೆನು. ॥೨೨॥

ಪಶ್ಯನ್ ಲಿಂಗಂ ಹಿ ಕೈಲಾಸೇ ಕೌಮಾರೇಶ್ವರಮೀಶ್ವರಂ ।
ಹೀರಸಾರಮಹಾಧಾರಾಪ್ರಾಕಾರೇ ದಕ್ಷಿಣೇ ಸ್ಥಿತಃ ॥೨೩॥

ತನ್ನೀಲಗೋಪುರೋತ್ತುಂಗನೀಲಧಾರಾತತಾ ದಿಶಃ ।
ರುದ್ರಾವತಾರಕ್ರೀಡಾದಿತಲಶೋಭೈಕಭಾಸುರಂ ॥೨೪॥

ರಾಜಲ್ಲಲಾಮವೃಷಭಂ ಶಂಭೋಃ ಕೈಲಾಸಗೋಪುರಂ ।
ಪಂಚಲಕ್ಷಪ್ರಮಾಣೇನ ಕಲ್ಪಿತಂ ವಿಸ್ತರಾಯತಂ ॥೨೫॥

ದಕ್ಷಿಣೇ ಗೋಪುರಪ್ರಾಂತೇ ಶಂಭೋಃ ಪ್ರಾಕಾರಮಧ್ಯಮೇ ।
ತತ್ಕೌಮಾರಪುರಂ ಮೇಽದ್ಯ ನಾನಾಸೌಧವಿರಾಜಿತಂ ॥೨೬॥

ಕೌಮಾರೈರ್ಮದ್ಗಣಶ್ರೇಷ್ಠೈರ್ಮಯಾ ಚ ಪರಿಪಾಲಿತಂ ।
ತತ್ರ ಮತ್ಪುರಮಧ್ಯಸ್ಥಂ ಕೌಮಾರೇಶಸ್ಯ ಗೋಪುರಂ ॥೨೭॥

---

ನನ್ನ ಹನ್ನೆರಡು ಕಣ್ಣುಗಳಿಂದಲೂ, ಕೈಲಾಸದಲ್ಲಿರುವ ಕೌಮಾರೇಶ್ವರ ಲಿಂಗವನ್ನು ನೋಡುತ್ತಿರುವೆನು. ಅಲ್ಲದೆ ಹೀರಮಣಿಗಳಿಂದ ವಿರಾಜಿತವಾಗಿರುವ ದಕ್ಷಿಣ ಕೈಲಾಸದಲ್ಲಿ ನೆಲಸಿ ಮೇಲೆ ಹೇಳಿದಂತೆ ವಾಸಿಸುವನು. ॥೨೩॥

ಆ ಭಾಗದಲ್ಲಿ ನನ್ನ ನಗರವಾದ ಕೌಮಾರಪುರವಿರುವುದು. ಆ ಪಟ್ಟಣಕ್ಕೆ ನೀಲಮಣಿಗಳಿಂದ ನಿರ್ಮಿತವಾದ ಗೋಪುರಗಳಿವೆ. ಅವುಗಳ ಕಾಂತಿಯಿಂದ ಸಮಸ್ತ ದಿಕ್ಕುಗಳೂ ನೀಲವರ್ಣವಿಶಿಷ್ಟವಾಗಿರುವುವು. ಅನೇಕ ರುದ್ರಾವತಾರದ ಬೊಂಬೆಗಳಿಂದ ಕೂಡಿ ಆ ಪುರದ ಪ್ರದೇಶವು ಸುಂದರವಾಗಿ ತೋರುತ್ತಿರುವುದು. ॥೨೪॥

ಕೌಮಾರಪುರವು, ಪ್ರಕಾಶಮಾನವಾದ ವೃಷಭಾಕಾರದ ಕೈಲಾಸ ಗೋಪುರದ ಕೆಳಭಾಗದಲ್ಲಿ ವಿರಾಜಿಸುತ್ತಿದೆ. ಅದು ಉದ್ದ, ಅಗಲಗಳಲ್ಲಿ ಐದುಲಕ್ಷಯೋಜನ ಪ್ರಮಾಣದಲ್ಲಿರುವುದು. ॥೨೫॥

ಗೋಪುರಪ್ರಾಂತದ ದಕ್ಷಿಣಭಾಗದಲ್ಲಿ, ಶಂಕರನು ವಾಸಮಾಡುವ ಪ್ರಾಕಾರದ ಮಧ್ಯಭಾಗದಲ್ಲಿ ನನ್ನ ಕೌಮಾರಪುರವು ಪ್ರಕಾಶಿಸುತ್ತಿರುವುದು. ಅದರಲ್ಲಿ ಅನೇಕವಾದ ಉಪ್ಪರಿಗೆ ಮನೆಗಳು ಸರ್ವದಾ ಪ್ರಕಾಶಿಸುತ್ತಿರುವುವು. ॥೨೬॥

ಅಲ್ಲಿ ವಾಸಿಸುವವರೆಲ್ಲರೂ, ನನ್ನ ಗಣಗಳೇ. ನಾನೇ ಅವರೆಲ್ಲರನ್ನೂ ರಕ್ಷಿಸುತ್ತಿರುವೆನು. ಆ ಕೌಮಾರಪುರದ ಮಧ್ಯಭಾಗದಲ್ಲಿ ಕುಮಾರೇಶಲಿಂಗದ ದೇವಾಲಯವಿರುವುದು. ॥೨೭॥

ನವರತ್ನಪ್ರಭಾಭಾಸ್ವತ್ಪ್ರಾಕಾರಾಟ್ಟಾಲಸುಂದರಂ ।
ಗರ್ಭಾಗಾರಮಹಾಕಾಂತಿಧಗದ್ಧಗಿತದಿಙ್ಮುಖಂ ॥೨೮॥

ಮಣಿಕುಂಭೋದ್ಧೃತಶಿಖಾವಲೀಢಗಗನಾಂಕಣಂ ।
ಮಮೇಷ್ಟಲಿಂಗಂ ತತ್ರೈವ ದೇವದೇವಸ್ಯ ಶೂಲಿನಃ ॥೨೯॥

ತ್ರಿಕಾಲಂ ತತ್ರ ತಲ್ಲಿಂಗಂ ಪೂಜಯಾಮಿ ಗಣೈರ್ವೃತಃ ।
ಧೂಪೈರ್ದೀಪೈಶ್ಚ ನೈವೇದ್ಯೈಃ ಪಂಚಾಮೃತನಿಷೇಚನೈಃ ॥೩೦॥

ವೀಣಾವೇಣುಮೃದಂಗಾದಿಶಂಖಕಾಹಳನಿಸ್ವನೈಃ ।
ಮಧುರೋದ್ದಾಮಗೀತೈಶ್ಚ ಕೌಮಾರೀಣಾಂ ಚ ನರ್ತನೈಃ ॥೩೧॥

ಹಾವಭಾವಮನೋಹಾರಿತೌರ್ಯತ್ರಿಕಮನೋಹರೈಃ ।
ಷಡ್ವಕ್ತ್ರಫಾಲಕಲಿತತ್ರಿಪುಂಡ್ರತಿಲಕೋಜ್ಜ್ವಲಃ ॥೩೨॥

---

ಅನೇಕ ರತ್ನಗಳ ಕಾಂತಿಯಿಂದ ಪ್ರಕಾಶಮಾನವಾದ ಗೋಪುರಗಳಿಂದಲೂ, ಮೇಲಟ್ಟಣೆಗಳಿಂದಲೂ, ಆ ದೇವಾಲಯವು ಸುಂದರವಾಗಿರುವುದು. ಅಲ್ಲದೆ ಆ ದೇವಾಲಯದ ಗರ್ಭಗೃಹವು ಅನೇಕ ರತ್ನಗಳಿಂದ ಶೋಭಿಸುತ್ತಾ, ತನ್ನಲ್ಲಿರುವ ರತ್ನಕಾಂತಿಯಿಂದ ಸಕಲ ದಿಕ್ಕುಗಳನ್ನೂ ಬೆಳಗಿಸುತ್ತಿದೆ. ॥೨೮॥

ಆ ದೇವಾಲಯದ ರತ್ನಕಲಶವು ಗಗನವನ್ನು ಮುಟ್ಟುತಕ್ಕದ್ದಾಗಿದೆ. ಅಲ್ಲಿ ಪರಮೇಶ್ವರರೂಪವಾದ ನನ್ನ ಇಷ್ಟಲಿಂಗವು ವಿರಾಜಿಸುತ್ತಿರುವುದು. ॥೨೯॥

ಆ ಲಿಂಗವನ್ನು ನಾನು ಸಮಸ್ತ ಗಣಗಳಿಂದ ಪರಿವೃತನಾಗಿ, ತ್ರಿಕಾಲಗಳಲ್ಲಿಯೂ, ಧೂಪ, ದೀಪ ನೈವೇದ್ಯಾದಿಗಳಿಂದ ಪೂಜಿಸುತ್ತಿರುವೆನು. ॥೩೦॥

ವೀಣೆ, ಕೊಳಲು, ಮೃದಂಗ, ಶಂಖ, ತುತ್ತೂರಿ, ಮುಂತಾದ ವಾದ್ಯಗಳಿಂದ ಗಾನಮಾಡಿಸುತ್ತಾ, ಬಾಲಕಿಯರ ನರ್ತನಗಳಿಂದ ಸ್ವಾಮಿಯನ್ನು ತೃಪ್ತಿಪಡಿಸುತ್ತಾ ಆರಾಧಿಸುತ್ತಿರುವೆನು. ॥೩೧॥

ಹಾವ, ಭಾವಾದಿಗಳಿಂದಲೂ, ನೃತ್ಯಗೀತಾದಿ ಮನೋಹರಧ್ವನಿಗಳಿಂದಲೂ ಕೂಡಿದ ಕುಮಾರಿಯರೊಡನೆ, ನಾನು, ನನ್ನ ಆರು ಮುಖಗಳಲ್ಲಿಯೂ ತ್ರಿಪುಂಡ್ರವನ್ನೂ, ತಿಲಕವನ್ನೂ ಧರಿಸಿದವನಾಗಿ ಸ್ವಾಮಿಯನ್ನು ಭಜಿಸುವೆನು. ॥೩೨॥

ಭಸ್ಮರುದ್ರಾಕ್ಷವಲಯಸರಾವಲಿವಿಭೂಷಿತಃ ।
ಷಡ್ವಕ್ತ್ರಪಂಕಜಸ್ಯಂದಿಸುಧಾಸಮಮಹಾರಸೈಃ ॥೩೩॥

ಸ್ತೌಮಿ ಸ್ತೋತ್ರವರೈಶ್ಶಂಭುಂ ತತ್ಸ್ತುತಿಂ ಶೃಣು ಸತ್ತಮ
ಛದ್ಮಸ್ವರ್ಗವಿನುತಾಗಮವರ್ಯ ಕರ್ಕಾರ್ಯಾಗಮ(?)ದೂರ್ವಯಾರ್ಚಿತ ।
ಮೇರುಮೌರ್ವೀಕೃತದರ್ವೀಹಸ್ತಕ ಪಾಹಿ ಮಾಂ ಭವ ಮಹೇಶ ಸರ್ವಗ
॥೩೫॥

ವಿಕ್ರಮಾಕ್ರಮಿತಲೋಕಚಂಕ್ರಮ
ಪಾದಮೂಲಮಪಿ ನೋ ತ್ರಿವಿಕ್ರಮ
ಪ್ರಾಪ್ತಕೂಪಸದನಃ ಕಿಮು ಭೇಕ ।
ಸ್ಸಾಗರೋತ್ತರಣಹೇತವೇ ಹರ ॥೩೬॥
ಸ್ವರ್ಣವರ್ಣಕೃತಲೋಚನ ಕರ್ಣಾ
ಪಾರಹಾರಕ ಮಹಾರ್ಣವಸಂಸ್ಥ ।

---

ಭಸ್ಮ, ರುದ್ರಾಕ್ಷಿ, ಬಳೆ, ಹಾರ ಇವುಗಳಿಂದ ಅಲಂಕೃತನಾಗಿ ನನ್ನ ಆರು ಮುಖಗಳೆಂಬ ಕಮಲಗಳಿಂದ ಅಮೃತೋಪಮವಾಗಿ ಸುರಿಯುವ ಭಕ್ತಿರಸದಿಂದೊಡಗೂಡಿ, ಪರಮೇಶ್ವರನನ್ನು ಹೀಗೆ ಸ್ತುತಿಸುವೆನು. ॥೩೩॥

ಆ ಸ್ತುತಿಕ್ರಮವನ್ನು ಈಗ ಹೇಳುವೆನು ಕೇಳಿರಿ. ಮೋಸವೆಂಬ ಸ್ವರ್ಗಸುಖವನ್ನು ಸಹ ತಿರಸ್ಕರಿಸುವಂತಹ ಮಹಾಮಹಿಮರಿಂದ ವಂದಿತನಾದವನೇ, ಸಕಲಾಗಮಗಳಿಂದ ಸ್ತುತಿಸಲ್ಪಟ್ಟವನೇ! ದೂರ್ವೆಯಿಂದ ಅರ್ಚಿತನಾದವನೇ, ಮೇರುಪರ್ವತವನ್ನೇ ಧನುಸ್ಸಿನ ಹೆದೆಯನ್ನಾಗಿಯೂ, ಸೌಟನ್ನಾಗಿಯೂ ಮಾಡಿಕೊಂಡಿರುವ ಪರಮೇಶ್ವರನೇ, ಸರ್ವವ್ಯಾಪಿಯೇ, ನಿನಗೆ ವಂದನೆಯು. ॥೩೪-೩೫॥

ತನ್ನ ಪರಾಕ್ರಮದಿಂದ ಲೋಕವನ್ನೇ ಆಕ್ರಮಿಸಿರುವ ಮಹೇಶ್ವರನೇ, ನಿನ್ನ ಶೌರ್ಯವು ತ್ರಿಲೋಕದಲ್ಲಿಯೂ ವ್ಯಾಪಿಸಿರತಕ್ಕದ್ದಲ್ಲವೇ? ಅದರ ಮೂಲವನ್ನು ತಿಳಿಯಲು ನಾವು ಹೇಗೆ ತಾನೆ ಸಮರ್ಥರಾದೇವು? ಏಕೆಂದರೆ ಬಾವಿಯ ಒಳಗೇ ವಾಸಿಸುವ ಕಪ್ಪೆಯು ಸಾಗರವನ್ನು ದಾಟಿಸುವ ಶಕ್ತಿಯನ್ನು ಸಂಪಾದಿಸುವುದು ಸಾಧ್ಯವೇ? ॥೩೬॥

ಒಳ್ಳೆಯ ಹೊಳಪಿನಿಂದ ವಿರಾಜಿಸುವ ಲೋಚನವುಳ್ಳವನೇ, ಕರ್ಣವನ್ನು ಅಲಂಕರಿಸುವಂತಹ ರತ್ನಹಾರಗಳುಳ್ಳವನೇ, ಸಮುದ್ರ ಮಧ್ಯದಲ್ಲಿ ವಾಸಿಸುವನೇ,

ಪರ್ಣಿತಾಗಮ ಅಪರ್ಣಯಾರ್ಚಿತ
ಪರ್ಣಪತ್ರರಥಪೂಜ್ಯಪದಾಬ್ಜ ॥೩೭॥

ಕರ್ಣಕುಂಡಲಕೃತಾಹಿವರೇಶ
ಪಾರಯಾರ್ಣವಭವಂ ಸುಕರ್ಣಧಾರಕ ।
ಗಂಧಬಂಧುಮಧುಪಾವಲಿಭಾಸ್ವ
ದ್ರಾಜರಾಜಶಕಲಾಮಲಮೌಲೇ ॥೩೮॥

ದೇವಲೋಕತಟಿನೀಗತಫುಲ್ಲೈ
ರ್ನೀಲಕೈರವಕುಲೈಕಸುಪೂಜ್ಯ
ನಾಹಾಜಿಹ್ವಾತಿಸಂಖ್ಯಾ ಕೃತನಯನಯುಗಂ ।
ತಲ್ಪಸಂಖ್ಯಾಪಿ ತಾದೃಗ್ದಶಯುಗಲ
ಲಲಾಮಂ ದೇವಮಂದಾರಸಾಲಂ ॥೩೯॥

---

ವೇದಪ್ರತಿಪಾದ್ಯನೇ, ಪಾರ್ವತೀಪೂಜಿತನೇ, ಪತ್ರಿಗಳಿಂದಲೂ, ಪಕ್ಷಿಗಳಿಂದಲೂ ಪೂಜಿಸಲ್ಪಡುವ ಪಾದಕಮಲವುಳ್ಳವನೇ, ನನ್ನನ್ನು ರಕ್ಷಿಸು. ॥೩೭॥

ಎಲೈ ಪರಮೇಶ್ವರನೇ, ನಿನಗೆ ಆದಿಶೇಷನೇ ಕರ್ಣಕುಂಡಲವಾಗಿರುವನು. ಸಂಸಾರ ಸಮುದ್ರಕ್ಕೆ ನಾವಿಕನಂತಿದ್ದು, ಆ ಸಮುದ್ರದಲ್ಲಿ ಮುಳುಗಿರುವ ನಿನ್ನ ಭಕ್ತರನ್ನೆಲ್ಲಾ ಉದ್ಧರಿಸುತ್ತಿರುವೆ. ಸುಗಂಧಮಯವಾದ ನಿನ್ನ ಜಟಾಜೂಟಕ್ಕೆ ಭ್ರಮರಗಳೂ, ಹಾಗೆಯೇ ಚಂದ್ರನೂ ಅಲಂಕಾರವಸ್ತುವಾಗಿರುವರು. ॥೩೮॥

ಸ್ವಾಮಿಯೇ, ನಿನ್ನನ್ನು ಗಂಗಾನದಿಯಲ್ಲಿ ಹುಟ್ಟಿದ ನೀಲೋತ್ಪಲಗಳಿಂದಲೇ ದೇವತೆಗಳು ಅರ್ಚಿಸುವರು. ನಿನಗೆ ಅಗ್ನಿನೇತ್ರದಿಂದ ಎರಡು ಕಣ್ಣುಗಳ ಸಂಖ್ಯೆಯು ಮೂರಾಗಿದೆ. ಹಾಗೆಯೇ ದಶದಿಕ್ಕುಗಳೂ ನಿನಗೆ ಹಾಸಿಗೆಯಂತಿವೆ. ಮಹೇಶನೇ, ದೇವತೆಗಳೆಂಬ ಮಂದಾರವೃಕ್ಷಗಳ ಮಧ್ಯದಲ್ಲಿ ಸಾಲವೃಕ್ಷದಂತೆ ನೀನು ಶ್ರೇಷ್ಠನೆನಿಸಿರುವೆ. ॥೩೯॥

**ಕೌಮಾರ ಶಂಕರ ಗಿರಾಂ ಮನಸೋಽತಿದೂರ**
**ಕರ್ಪೂರಗೌರ ಸುಶರೀರ ಧೃತೋರಗೇಂದ್ರ ।**
**ಮಾರಾಪಹಾರ ಪುರವರ್ಗಹರಾವ್ಯಯೇಶ**
**ವಿಶ್ವೇಶ್ವರಾವ ದಯಯಾ ತವ ಬಾಲಮಿಷ್ಟಂ** ॥೪೦॥

**ಇತ್ಥಂ ಷಡ್ವದನೈಸ್ತೌಮಿ ಕೌಮಾರೇಶಂ ಮಹೇಶ್ವರಂ ।**
**ಮದ್ಗಣೈರ್ನವಲಕ್ಷೈಶ್ಚ ತತ್ಕೌಮಾರಪುರಸ್ಥಿತಃ** ॥೪೧॥

**ಗೋಪುರಂ ನೀಲಮಣಿಭಿಃ ಪ್ರಾಕಾರಂ ತಚ್ಚ ಕಲ್ಪಿತಂ ।**
**ತತ್ಕೈಲಾಸಂ ಮಹೇಶಸ್ಯ ಶಕ್ತಿಹಸ್ತೈರುದಾಯುಧೈಃ** ॥೪೨॥

**ರಕ್ಷಾಮಿ ಸರ್ವದಾ ವಿಪ್ರ ಶಾಸನಾಚ್ಚಂದ್ರಮೌಳಿನಃ** ॥೪೩॥

**ತನ್ನೀಲಸಾರಪರಿಕಲ್ಪಿತಗೋಪುರೋದ್ಯ**
**ತ್ಕುಂಭಾವಲೀವಿತತಹೇಮಪತಾಕಜಾಲಂ ।**

---

ಶಂಕರನೇ, ನೀನು ಮಾತಿಗೂ ಮನಸ್ಸಿಗೂ ಸಿಲುಕದವನು. ಕರ್ಪೂರದಂತೆ ಶುಭ್ರನಾಗಿರುವವನು. ಮಂಗಳಕರವಾದ ಶರೀರವನ್ನು ಧರಿಸಿರುವವನು. ಉರಗಗಳಿಗೆ ಒಡೆಯನು. ಮನ್ಮಥನಾಶಕನು. ತ್ರಿಪುರಗಳನ್ನು ನಾಶಮಾಡಿದವನು. ನಾಶರಹಿತನು. ಸಕಲಲೋಕಕ್ಕೂ ಒಡೆಯನು. ಈಗ ನಿನ್ನ ಪುತ್ರನಾಗಿ ನಿನ್ನ ಪ್ರೀತಿಗೆ ಪಾತ್ರನಾಗಿರುವ ನನ್ನನ್ನು ರಕ್ಷಿಸು. ॥೪೦॥

ಹೀಗೆ ನಾನು ನನ್ನ ಆರುಮುಖಗಳಿಂದಲೂ, ಕೌಮಾರೇಶನಾದ ಮಹೇಶ್ವರನನ್ನು ಸ್ತುತಿಸುವೆನು. ಹಾಗೆಯೇ ನನ್ನ ಒಂಭತ್ತುಲಕ್ಷ ಗಣಗಳೂ ಕೌಮಾರೇಶ್ವರನ ಎದುರಿನಲ್ಲಿ ನಿಂತು ಶಂಕರನನ್ನು ಇದೇರೀತಿ ಸ್ತುತಿಸುವರು. ॥೪೧॥

ನೀಲಮಣಿಗಳ ಗೋಪುರಗಳಿಂದಲೂ, ಪ್ರಾಕಾರಗಳಿಂದಲೂ ಕಲ್ಪಿತವಾದ ಶಂಕರನ ಕೈಲಾಸವನ್ನು, ಮಹೇಶ್ವರನ ಅಪ್ಪಣೆಯಂತೆ ನಾನು, ನನ್ನ ಶಕ್ತಿವಂತರಾದ ಸೈನಿಕರಿಂದ ಸರ್ವದಾ ರಕ್ಷಿಸುತ್ತಿರುವೆನು. ॥೪೩॥

ಈ ಕೈಲಾಸಪರ್ವತವು ನೀಲಮಣಿಯಿಂದ ರಚಿತವಾದ ಗೋಪುರಗಳುಳ್ಳದ್ದು. ಅದೇಮಣಿಗಳ ಕಲಶಗಳಿಂದಲೂ, ಸುವರ್ಣಪತಾಕೆಗಳಿಂದಲೂ ಅಲಂಕೃತವಾಗಿ,

ಶಕ್ರೋಪಲಾಕಲಿತಗೋವೃಷಭಾಲಿರಾಜ
ತ್ಪ್ರಾಕಾರಸೌಧವಿಹಿತೋರುಮಣೀಂದ್ರಲಿಂಗಂ ॥೪೪॥

ಸಂಪೂಜಯನ್ ಗಣವರೈರ್ಭಗಣೇಶಮೌಲಿಂ ।
ಕೈಲಾಸಪರ್ವತವರೇ ನಿವಸಾಮಿ ವಿಪ್ರ ॥೪೫॥

ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ಕೈಲಾಸವರ್ಣನೇ
ಸ್ಕಂದಕೃತಸ್ತುತಿರ್ನಾಮ ತ್ರಯೋವಿಂಶೋಽಧ್ಯಾಯಃ

---

ಇಂದ್ರನೀಲಮಣಿಯಿಂದ ವಿರಾಜಿತವಾದ ವೃಷಭಗಳ ಸಾಲುಳ್ಳದ್ದಾಗಿದೆ. ಇವುಗಳಿಂದಲೂ, ರತ್ನಪ್ರಾಕಾರಗಳಿಂದಲೂ ಶೋಭಿತವಾಗಿರುವ ಈ ಕೌಮಾರೇಶ್ವರ ಲಿಂಗವನ್ನು ಸರ್ವದಾ ಧ್ಯಾನಿಸುತ್ತಾ ನಾನೂ ಸಹ ಈ ಕೈಲಾಸಪರ್ವತದಲ್ಲಿಯೇ ವಾಸಿಸುವೆನು, ಎಂದು ಕುಮಾರಸ್ವಾಮಿಯು ಜೈಗೀಷವ್ಯಾದಿಗಳಿಗೆ ವಿವರಿಸಿದನು. ॥೪೪-೪೫॥

ಇಲ್ಲಿಗೆ ಶಿವರಹಸ್ಯದ ಪ್ರಥಮಾಂಶದಲ್ಲಿ ಕೈಲಾಸ ವರ್ಣನೆಯೆಂಬ ಪ್ರಕರಣದಲ್ಲಿ
ಸ್ಕಂದಕೃತವಾದ ಶಿವಸ್ತುತಿವರ್ಣನೆಯಲ್ಲಿ ಇಪ್ಪತ್ತುಮೂರನೆಯ
ಅಧ್ಯಾಯವು ಮುಗಿದುದು.

|| ಶ್ರೀಃ ||

# ಅಥ ಶ್ರೀಶಿವರಹಸ್ಯೇ

## ಚತುರ್ವಿಂಶೋಽಧ್ಯಾಯಃ

### ಗಣೇಶಕೃತಶಿವಸ್ತುತಿಃ

|| ಸ್ಕಂದ ಉವಾಚ ||

**ಪಶ್ಚಾದ್ಭಾಗೇ ಹರಿಜ್ಜ್ಯೋತಿಹರಿನ್ಮಣಿವಿರಾಜಿತಂ ।**
**ಪಂಚಲಕ್ಷಪ್ರಮಾಣೇನ ಪ್ರಾಕಾರಂ ಮಣಿಗೋಪುರಂ ||೧||**

**ಮಹಾಮರಕತೈಃ ಕ್ಲುಪ್ತಗವಾಕ್ಷಾವಲಿಭಿರ್ಯುತಂ ।**
**ಅಷ್ಟಾಶೀತಿಸಹಸ್ರಾಣಿ ಯೋಜನೈಃ ಪರಿಕಲ್ಪಿತಂ ||೨||**

**ಪಶ್ಚಾದ್ಭಾಗೇ ತು ತದ್ಯೋತಿಹರಿನ್ಮಣಿನಿಭಾ ದಿಶಃ ।**
**ತತ್ರ ಗಾರುತ್ಮತಮಣೀಕ್ಲುಪ್ತಮಂಟಪಶೋಭಿತಂ ||೩||**

---

### ಶ್ರೀಶಿವರಹಸ್ಯದಲ್ಲಿ ಇಪ್ಪತ್ತುನಾಲ್ಕನೆಯ ಅಧ್ಯಾಯ

ಕೈಲಾಸಪರ್ವತದ ಪಶ್ಚಿಮಭಾಗದಲ್ಲಿ ಹಸುರುಬಣ್ಣದ ಕಾಂತಿಯುಳ್ಳ ಹಸುರು ಮಣಿಗಳಿಂದ ವಿರಾಜಿತವಾದ ಒಂದು ರತ್ನಗೋಪುರವೂ, ಪ್ರಾಕಾರವೂ ಇರುವುದು. ಅದು ಐದುಲಕ್ಷಪ್ರಮಾಣವುಳ್ಳದ್ದಾಗಿರುವುದು. ||೧||

ಆ ಗೋಪುರಕ್ಕೆ ಮರಕತಮಣಿಗಳಿಂದ ವಿರಾಜಿತವಾದ ಅನೇಕ ಗವಾಕ್ಷಗಳಿವೆ. ಎಂಬತ್ತೆಂಟು ಸಾವಿರ ಯೋಜನದ ಪ್ರದೇಶದಲ್ಲಿ ಆ ಪ್ರಾಕಾರವು ನಿರ್ಮಿತವಾಗಿದೆ. ||೨||

ಆ ಪಶ್ಚಿಮಭಾಗದಲ್ಲಿರುವ ಹಸುರುಮಣಿಗಳಿಂದ ಹೊರಟ ಕಾಂತಿಯು ಆ ದಿಕ್ಕನ್ನೆಲ್ಲಾ ಕಾಂತಿಯುಳ್ಳದ್ದನ್ನಾಗಿ ಮಾಡಿದೆ. ಹಾಗೆಯೇ ಅಲ್ಲಿ ಗಾರುಡಮಣಿಯಿಂದ ನಿರ್ಮಿತವಾದ ಮಂಟಪವೊಂದಿರುವುದು. ||೩||

ಉದ್ಯದಿಂದುಕರಸ್ವಚ್ಛನಿರ್ಯಜ್ಝರಿಭಿರಾವೃತಂ ।
ತತ್ರಾಚ್ಛಸ್ಫಟಿಕೋದ್ದಾಮಸಿಂಹಾಸನಶತೈರ್ವೃತಂ ॥೪॥

ಧೂಪದೀಪಾದಿಬಹುಲಂ ನಾನಾಸುಮವನಾವೃತಂ ।
ಮಣಿಮಾಣಿಕ್ಯಖಚಿತಮಂಟಪೇ ಸ್ವಾಸ್ತೃತಾಸನೇ ॥೫॥

ತಸ್ಮಿಂಸ್ತಿಷ್ಠತಿ ವಿಶ್ವೇಶಸ್ಸ್ವಗಣೈರರ್ಚಿತಾಂಘ್ರಿಕಃ ।
ಸಪ್ತಲಕ್ಷಗಣೇಂದ್ರೈಶ್ಚ ವಿಘ್ನಾದ್ರಿಕುಲಿಶೋ ಮಹಾನ್ ॥೬॥

ನಾನಾರತ್ನಚಿತಾನೇಕಭೂಷಣೈಃ ಪರಿಶೋಭಿತಃ ।
ಸಿಂಧೂರವಿಲಸತ್ಫಾಲೋ ಮಹಾಸಿಂಧೂರವಕ್ತ್ರಕಃ ॥೭॥

ಮಾಣಿಕ್ಯಮುಕುಟೋದ್ಭಾಸಿಫಾಲಚಂದ್ರವಿರಾಜಿತಃ ।
ಶುಂಡಾದಂಡಮಹೋಚ್ಚಂಡಬೃಂಹಿತಾನಂದಿತಾಂಬರಃ ॥೮॥

---

ಉದಯಿಸುವ ಪೂರ್ಣಚಂದ್ರನಂತೆ ಕಾಂತಿಯಿಂದ ಆ ಮಂಟಪವು ಮೆರುಗುಗೊಡುತ್ತಿರುವುದು. ಅಲ್ಲಿ ಸ್ಫಟಿಕಶಿಲೆಯಿಂದ ನಿರ್ಮಿತವಾದ ನೂರಾರು ಸಿಂಹಾಸನಗಳಿರುವುವು. ॥೪॥

ಧೂಪಗಳಿಂದಲೂ, ದೀಪಗಳಿಂದಲೂ, ವಿಧವಿಧವಾದ ಪುಷ್ಪವನಗಳಿಂದಲೂ, ಆವೃತವಾಗಿ ಮಣಿಮಂಟಪವು ವಿರಾಜಿಸುತ್ತಿರುವುದು. ಅಲ್ಲಿ ವಿಶಾಲವಾದ ಒಂದು ಪೀಠವಿರುವುದು. ॥೫॥

ಅದರಮೇಲೆ ಪ್ರಪಂಚಕ್ಕೆ ಒಡೆಯನೆನಿಸಿರುವ ಗಣಪತಿಯು, ಸಪ್ತಲಕ್ಷ ಗಣಗಳಿಂದ ಸೇವಿತನಾಗಿ, ವಿಘ್ನಗಳೆಂಬ ಪರ್ವತಗಳಿಗೆ ವಜ್ರಾಯುಧವೆನಿಸಿ ಮಹಾತ್ಮನಾಗಿ ಮಂಡಿಸಿರುವನು. ॥೬॥

ಅನೇಕ ರತ್ನಮಯವಾದ ಆಭರಣಗಳನ್ನೂ, ಹಣೆಯಲ್ಲಿ ಸಿಂದೂರ ಚೂರ್ಣವನ್ನೂ ಧರಿಸಿರುವನು. ಆನೆಯ ಮುಖದಂತೆ ಅವನ ಮುಖವಿರುವುದು. ॥೭॥

ಶಿರಸ್ಸಿನಲ್ಲಿ ಮಾಣಿಕ್ಯಮಯವಾದ ಕಿರೀಟವಿರುವುದು. ಹಣೆಯಲ್ಲಿ ಚಂದ್ರನಿರುವನು. ಸೊಂಡಿಲನ್ನು ಅಲ್ಲಾಡಿಸುತ್ತಾ ಒಂದಾವರ್ತಿ ಕೂಗಿದರೆ ಆ ಧ್ವನಿಯನ್ನು ಕೇಳಿ ಆಕಾಶಗತರಾದವರೆಲ್ಲಾ ಸಂತೋಷಪಡುವರು. ॥೮॥

**ಕುಂಭಾಂತರಲಲನ್ಮುಕ್ತಾಗುಚ್ಛಸಚ್ಛಾಯಿತಾಸ್ಯಕಃ ।**
**ಕರ್ಣಪತ್ರಮಣಿಭ್ರಾಜಚ್ಚಲತ್ಕರ್ಣಯುಗಚ್ಛವಿಃ ॥೯॥**

**ದಂತಾವಳಿಮಹಾರತ್ನದಂತವೇಷ್ಟನಸುಂದರಃ ।**
**ತದಧಸ್ತಾಲ್ಲಲನ್ಮುಕ್ತಾಮಣಿಪತ್ರವಿರಾಜಿತಃ ॥೧೦॥**

**ಸಿತಭಸ್ಮತ್ರಿಪುಂಡ್ರಾಂಕಕುಂಭಮಧ್ಯವಿರಾಜಿತಃ ।**
**ಸಿಂಧೂರತಿಲಕೋತ್ಫುಲ್ಲವದನಾನಂದಶೋಭಿತಃ ॥೧೧॥**

**ಮುಕ್ತಾಗುಂಭಿತಕರ್ಣಾಗ್ರವೀಜಿತೋಡ್ಡೀನಷಟ್ಪದಃ ।**
**ಪ್ರವತ್ಕಟತಟೋದ್ಭಾಸಿಮದಗಂಧಿತದಿಕ್ತಟಃ ॥೧೨॥**

**ಶಿವಪಾದಾಂಬುಜಧ್ಯಾನಾನಂದೋನ್ಮೀಲಿತಲೋಚನಃ ।**
**ಗಣಸಂದರ್ಶನಾನಂದಸದೋನ್ಮೀಲಿತಲೋಚನಃ ॥೧೩॥**

---

ಕುಂಭಸ್ಥಳಗಳ ಮಧ್ಯದಲ್ಲಿರುವ ಮಣಿಗಳ ಗೊಂಚಲಿನ ಕಾಂತಿಯು ಮುಖವನ್ನು ಪ್ರಕಾಶಮಾನವನ್ನಾಗಿ ಮಾಡಿದೆ. ಕಿವಿಯಲ್ಲಿಟ್ಟಿರುವ ಕರ್ಣಪತ್ರವು ಅಲ್ಲಾಡುತ್ತಾ ತನ್ನ ಕಾಂತಿಯಿಂದ ಕಿವಿಯನ್ನಲಂಕರಿಸುತ್ತಿರುವುದು. ॥೯॥

ದಂತಗಳ ಮುಂದೆ ಅನೇಕ ರತ್ನಗಳಿರುವುವು. ಅವುಗಳ ಕಾಂತಿಯಿಂದ ಆ ದಂತಪ್ರದೇಶವೆಲ್ಲವೂ ಹೊಳೆಯುತ್ತಿರುವುದು. ಅದರ ಕೆಳಭಾಗದಲ್ಲಿ ಮುತ್ತುಗಳ ಒಂದು ಪಟ್ಟಿಯು ಸೊಂಡಲನ್ನೆಲ್ಲಾ ಅಲಂಕರಿಸಿರುವುದು. ॥೧೦॥

ಕುಂಭಸ್ಥಳದ ಮುಂಭಾಗದಲ್ಲಿ ಶುಭ್ರವಾದ ಭಸ್ಮದ ತ್ರಿಪುಂಡ್ರವಿದೆ. ಸಿಂಧೂರಚೂರ್ಣದಿಂದ ತಿಲಕವು ನಿರ್ಮಿತವಾಗಿದೆ. ಮುಖವು ಕಮಲದಂತೆ ವಿಕಸಿತವಾಗಿರುವುದು. ॥೧೧॥

ಕಿವಿಯ ಮೇಲ್ಭಾಗದಿಂದ ಜೋತುಬಿದ್ದಿರುವ ಮುತ್ತಿನ ಗೊಂಚಲುಗಳು ಅಲ್ಲಾಡುವುದರಿಂದ, ಕುಂಭಸ್ಥಳದಲ್ಲಿ ಹುಟ್ಟುವ ಮದೋದಕದ ಸುಗಂಧಕ್ಕೆ ಮುತ್ತುವ ಭ್ರಮರಗಳು ಹಾರಾಡಲಾರಂಭಿಸುವುವು. ಆ ಮದೋದಕದ ವಾಸನೆಯು ಸಕಲ ದಿಕ್ಕುಗಳನ್ನೂ ಸುಗಂಧಮಯವನ್ನಾಗಿ ಮಾಡಿರುವುದು. ॥೧೨॥

ಶಿವಪಾದಾಂಬುಜಗಳನ್ನು ಮನಸ್ಸಿನಲ್ಲಿ ಧ್ಯಾನಮಾಡುವ ಉದ್ದೇಶದಿಂದಲೂ, ತನ್ನ ಗಣಗಳ ದರ್ಶನದಿಂದ ಉಂಟಾದ ಆನಂದದಿಂದಲೂ ವಿಘ್ನೇಶ್ವರನು ತನ್ನ ಕಣ್ಣುಗಳನ್ನು ಆಗಾಗ ಮುಚ್ಚುತ್ತಿರುವನು. ॥೧೩॥

ಮಹಾನಾಗನಿಬದ್ಧೋರುಪಿಠರೋದರಸಂಯುತಃ ।
ಫುಲ್ಲಪದ್ಮಾಮಲಪದಸ್ಸುರಾಸುರಗಣಾನತಃ ॥೧೪॥

ಪಾಶಾಂಕುಶರದದ್ಯೋತಿಮೋದಕಾಸಕ್ತಸತ್ಕರಃ ।
ರತ್ನಾಂಗದೈಶ್ಚ ಕೇಯೂರೈರ್ಭ್ರಾಜತ್ಕರಿಕರಪ್ರಭಃ ॥೧೫॥

ಪಾದಕಲ್ಪಸ್ವರಣತ್ಸಿಂಜದ್ರತ್ನಮಂಜೀರಶೋಭಿತಃ ।
ದಿವ್ಯಾಂಗರಾಗಸುಭಗೋ ಮಣಿಹಾರಾಂಬರಾವೃತಃ ॥೧೬॥

ಪಾರ್ಶ್ವದ್ವಯವಿರಾಜಚ್ಛ್ರೀಸಿದ್ಧಿಬುದ್ಧಿವಿರಾಜಿತಃ ।
ಸರ್ವಾಭರಣಭೂಷಾಭ್ಯಾಂ ಸೇವಿತಃ ಪಾರ್ಶ್ವಯೋರ್ದ್ವಯೋಃ॥೧೭॥

---

ಸರ್ಪರಾಜನನ್ನೇ ತನ್ನ ಉದರಕ್ಕೆ ಬಲವಾಗಿ ಬಿಗಿದಿರುವುದರಿಂದ ಉದರವು ದಪ್ಪವಾಗಿ ಕಾಣುತ್ತಿರುವುದು. ಗಣಪತಿಯ ಪಾದವಾದರೋ ಅರಳಿದ ಕಮಲದಂತೆ ವಿಶಾಲವಾಗಿರುವುದು. ದೇವರಾಕ್ಷಸರೆಲ್ಲರೂ ಆ ಪಾದವನ್ನು ಸೇವಿಸುತ್ತಿರುವರು. ||೧೪||

ಪಾಶ, ಅಂಕುಶ, ದಂತದಂತೆ ಹೊಳೆಯುವ ಕಡುಬು ಇವುಗಳನ್ನು ಕೈಯ್ಯಲ್ಲಿ ಧರಿಸಿರುವನು. ರತ್ನಮಯವಾದ ತೋಳುಬಳೆಯೂ, ಅನೇಕ ಆಭರಣಗಳೂ ಸೊಂಡಿಲನ್ನು ಬೆಳಗಿಸುತ್ತಿರುವುವು. ||೧೫||

ಕಾಲಿನಲ್ಲಿ ಧ್ವನಿಮಾಡುವ ರತ್ನದ ಗೆಜ್ಜೆಗಳು ಸುಂದರವಾಗಿವೆ. ಶ್ರೇಷ್ಠವಾದ ಅಂಗರಾಗವೂ, ದಿವ್ಯವಾದ ರತ್ನಹಾರವೂ, ಸುಂದರವಾದ ವಸ್ತ್ರವೂ ವಿಘ್ನೇಶ್ವರನನ್ನು ಅಲಂಕರಿಸುತ್ತಿರುವುವು. ||೧೬||

ಅಕ್ಕ ಪಕ್ಕಗಳಲ್ಲಿ ಸಿದ್ಧಿ, ಬುದ್ಧಿ, ಎಂಬ ಇಬ್ಬರು ಪತ್ನಿಯರಿರುವರು. ಅವರೂ ಸಹ ದಿವ್ಯಾಭರಣಧಾರಿಣಿಯರಾಗಿ ಪತಿಯನ್ನು ಭಯಭಕ್ತಿಯಿಂದ ಸೇವಿಸುತ್ತಿರುವರು. ||೧೭||

ಗಣೇಂದ್ರೈಶ್ಛತ್ರದಂಡೋದ್ಯನ್ಮಣಿಚಾಮರಸತ್ಕರೈಃ ।
ಸೇವಿತಶ್ಚೈ ಗಣೇಶಾನಸ್ತಸ್ಮಿನ್ ಕೈಲಾಸಮಂಟಪೇ ॥೧೮॥

ಚಲಚ್ಚಾಮರವಾತೈಶ್ಚ ಚಲತ್ಕರ್ಣಾಗ್ರಚಾಮರಾಃ ।
ತಾದೃಶಾ ಗಣಪಾಸ್ತತ್ರ ಪಾಶಾಂಕುಶಧರಾಸ್ತಥಾ ॥೧೯॥

ಮಹಾಬಲಾ ಮಹೋತ್ಸಾಹಾಃ ಕುಠಾರವರಪಾಣಯಃ ।
ಸಿಂಧೂರಾರುಣಫಾಲಾಗ್ರಾಸ್ತ್ರಿಪುಂಡ್ರಪರಿಶೋಭಿತಾಃ ॥೨೦॥

ರಕ್ಷಂತಿ ತೇ ಗಣಾಸ್ತತ್ರ ಪ್ರಾಕಾರಂ ತಚ್ಚ ಗೋಪುರಂ ।
ಸಪ್ತಲಕ್ಷಾಮಿತಬಲಾ ಗಣೇಶಾ ಗಣಪಾಸ್ತಥಾ ॥೨೧॥

ತತ್ರೈವ ದೇವದೇವಸ್ಯ ಶಾಸನಾಚ್ಚಂದ್ರಮೌಳಿನಃ ।
ಗಣೇಶೋಪಿ ಸದಾ ಧ್ಯಾಯನ್ ಗಣೇಶೇಶ್ವರಪೂಜಕಃ ॥೨೨॥

---

ಛತ್ರಿ, ದಂಡ, ಚಾಮರ ಇವುಗಳನ್ನು ಹಿಡಿದು ಅನೇಕ ಗಣಾಧೀಶರು ವಿಘ್ನೇಶ್ವರನನ್ನು ಸೇವಿಸುತ್ತಿರುವರು. ಅದೇ ಕೈಲಾಸ ಮಂಟಪದಲ್ಲಿ, ॥೧೮॥

ಈಶ್ವರನ ಪ್ರಮಥ ಗಣಗಳಿಗೆ ಒಡೆಯರಾದ ಅಂತಹ ಗಣಪತಿಗಳು ಇನ್ನೂ ಬಹಳ ಜನರಿರುವರು. ಅವರೆಲ್ಲರೂ, ಚಾಮರಗಳಿಂದ ಸೇವಿತರಾಗಿ, ಚಂಚಲವಾದ ಚಾಮರಗಳನ್ನು ಕರ್ಣಾಗ್ರದಲ್ಲಿ ಧರಿಸಿರುವವರಾಗಿ, ಪಾಶ, ಅಂಕುಶ, ಮೊದಲಾದುವುಗಳಿಂದ ಶೋಭಿಸುತ್ತಿರುವರು. ॥೧೯॥

ಅವರೆಲ್ಲರೂ ಮಹಾ ಬಲಶಾಲಿಗಳು, ಉತ್ಸಾಹಿಗಳು, ಕೈಯ್ಯಲ್ಲಿ ಕುಠಾರವನ್ನು ಧರಿಸಿರುವವರು. ಅವರ ಹಣೆಯು ಸಿಂಧೂರದಿಂದ ಕೆಂಪಾಗಿರುವುದು. ಎಲ್ಲರೂ ತ್ರಿಪುಂಡ್ರವನ್ನು ಧರಿಸಿಕೊಂಡಿರುವರು. ॥೨೦॥

ಆ ಗಣಪತಿಗಳೆಲ್ಲರೂ, ಆ ಗೋಪುರವನ್ನೂ, ಪ್ರಾಕಾರವನ್ನೂ ರಕ್ಷಿಸಿಕೊಂಡಿರುವರು. ಅಂತಹ ಗಣಪತಿಗಳ ಸಂಖ್ಯೆಯು ಏಳು ಲಕ್ಷಕ್ಕಿಂತ ಹೆಚ್ಚಾದ ಸಂಖ್ಯೆಯಲ್ಲಿದೆ. ॥೨೧॥

ಅಂತಹ ಗಣಾಧಿಪರೊಡನೆ ವಿಘ್ನೇಶ್ವರನು, ಪರಮೇಶ್ವರನ ಅಪ್ಪಣೆಯಂತೆ, ಗಣೇಶೇಶ್ವರನೆಂಬ ಶಿವಲಿಂಗವನ್ನು ಪೂಜಿಸುತ್ತಾ ಅಲ್ಲಿ ನೆಲಸಿರುವನು. ॥೨೨॥

ತತ್ರೇಷ್ಟಲಿಂಗಂ ತಸ್ಯೈವ ವರಪ್ರಾಕಾರಗೋಪುರಂ ।
ನವರತ್ನಚಿತಂ ದಿವ್ಯಂ ಮಣಿಸ್ತಂಭಚಿತಾಂತರಂ ॥೨೩॥

ಗಣೇಶ್ವರಾಖ್ಯಂ ತಲ್ಲಿಂಗಂ ಮಣಿಧಾಮುಗತಂ ತಥಾ ।
ಪ್ರೋದ್ಯತ್ಕುಂಭಪತಾಕಾಗ್ರಪವನಾಧೂತಸಾಂಚಲಂ ॥೨೪॥

ಸ್ವಪುಷ್ಕರಧೃತೋತ್ತುಂಗಕುಂಭಪಂಚಾಮೃತೈರಪಿ ।
ಸುಧಾಧಾರಾಭಿರಾಸಿಚ್ಯ ಚಂದನಾಲೇಪಿಸುಂದರಂ ॥೨೫॥

ಫಣಾಮಣಿಮಹಾಮೌಳಿರತ್ನಾಭರಣಶೋಭಿತಂ ।
ಸೋಽದ್ಯ ಸಂಪೂಜಯತ್ಯೇವ ಬಿಲ್ವಮಂದಾರಚಂಪಕೈಃ ॥೨೬॥

ದೂರ್ವಾಭಿಃ ಕಮಲೈರೀಶಂ ಧೂಪೈರ್ದೀಪೈರ್ಮನೋಹರೈಃ ।
ನೈವೇದ್ಯೈರ್ವಿವಿಧೈಶ್ಚೈವ ತಾಂಬೂಲೈಶ್ಛತ್ರಚಾಮರೈಃ ॥೨೭॥

---

ಅದೇ ಗಣೇಶ್ವರನ ಇಷ್ಟಲಿಂಗ. ಆ ಶಿವಲಿಂಗವು ನವರತ್ನಮಯವಾದ ಪ್ರಾಕಾರ ಮಧ್ಯದಲ್ಲಿ!ರತ್ನಸ್ತಂಭಗಳಿಂದ ನಿರ್ಮಿತವಾದ ಭವನದಲ್ಲಿರುವುದು. ॥೨೩॥

ಆ ಗಣೇಶ್ವರಾಲಯವಾದರೋ, ರತ್ನಗಳ ಕಾಂತಿಯನ್ನು ಬೀರತಕ್ಕದ್ದಾಗಿರುವುದು. ಅದರ ಮೇಲುಭಾಗದಲ್ಲಿ ಎತ್ತರವಾದ ಕಲಶವೂ, ಅದಕ್ಕೆ ಸಂಬಂಧಿಸಿದಂತಿರುವ ಧ್ವಜವೂ ಶೋಭಿಸುತ್ತಿರುವುವು. ಆ ಧ್ವಜವಾದರೋ ಸರ್ವದಾ ಗಾಳಿಯಿಂದ ಚಂಚಲವಾಗಿ ಆಡುತ್ತಿರುವುದು. ॥೨೪॥

ಗಣಪತಿಯು ತನ್ನ ಸೊಂಡಲಿನಲ್ಲಿ ಕಲಶವನ್ನು ಹಿಡಿದು ಪಂಚಾಮೃತಗಳಿಂದಲೂ, ಅಮೃತಧಾರೆಗಳಿಂದಲೂ, ಗಂಧಾದಿಗಳಿಂದಲೂ, ಅಲಂಕೃತವಾದ ಆ ಶಿವಲಿಂಗವನ್ನು ಅಭಿಷೇಕಮಾಡುವನು. ॥೨೫॥

ಸರ್ಪಗಳ ಹೆಡೆಗಳ ರತ್ನಗಳಿಂದ ಪ್ರಕಾಶಿಸುತ್ತಿರುವ ಗಣೇಶ್ವರ ಲಿಂಗವನ್ನು ಬಿಲ್ವಪತ್ರೆ, ಮಂದಾರ, ಸಂಪಿಗೆ ಮುಂತಾದ ಪುಷ್ಪಗಳಿಂದ ಪೂಜಿಸುವನು. ॥೨೬॥

ಹುಲ್ಲುಗರಿಗೆ, ಕಮಲ, ಧೂಪ, ದೀಪ, ನೈವೇದ್ಯ, ತಾಂಬೂಲ, ಚತ್ರಿಚಾಮರಾದಿಗಳ ಉಪಚಾರ, ಇವುಗಳಿಂದ ಶಿವಲಿಂಗವನ್ನು ಆರಾಧಿಸುವನು. ॥೨೭॥

ಗಾನೈರ್ನೃತ್ಯೈರ್ಮೃದಂಗಾಬ್ಜಕಾಹಲಾನಾಂ ಚ ನಿಸ್ವನೈಃ ।
ಭಸ್ಮರುದ್ರಾಕ್ಷಸಂಪನ್ನಸ್ಸ್ತೌತಿ ದೇವಂ ಮಹೇಶ್ವರಂ ॥೨೮॥

ಗಣೇಶ ತ್ರಿಗುಣಾತೀತ ಭಗಣಾಧೀಶಮಸ್ತಕ ।
ಗರ್ಜನ್ಮೇಘಗಣೋದ್ಭೂತತಟಿದ್ಗಣಜಟಾಮಲ ॥೨೯॥

ವ್ಯೋಮಕೇಶ ಭಗವನ್ ಶ್ರುತಿಮೌಲಿ
ಸ್ತೋಮಸಾಮವಿನುತಾಖಿಲಸೋಮ ।
ಭೂಮಭೌಮಮಹಿಮಾಗಮಕಾಮ
ಧೂಮಧಾಮಬಹಳದ್ಯುತಿಕಂಠ ॥೩೦॥

ಕ್ಷಯದ್ವೀರ ಮಾರಾಪಹಾರಾದ್ಯ ಶಂಭೋ
ವೀರ ಧೀರ ಸುರಶೇಖರಪಾದ ।
ಘೋರಾಂಧಕಾಸುರನಿಬರ್ಹಣ ಕಾಲಕಾಲ
ಕ್ರೂರಾಂತರ ತ್ರಿಪುರಗರ್ವಹರಾವ್ಯಯೇಶ ॥೩೧॥

---

ವಿಧವಿಧವಾದ ಗಾನ, ನೃತ್ಯಾದಿಗಳಿಂದಲೂ, ಮೃದಂಗ, ತುತ್ತೂರಿ, ಮುಂತಾದ ವಾದ್ಯಗಳ ಧ್ವನಿಯಿಂದಲೂ, ಭಸ್ಮ ರುದ್ರಾಕ್ಷಿಗಳಿಂದಲೂ, ಅಲಂಕೃತವಾಗಿರುವ ಮಹೇಶ್ವರಲಿಂಗವನ್ನು ಪೂಜಿಸಿ ಮಹೇಶ್ವರನನ್ನು ತೃಪ್ತಿಪಡಿಸುವನು. ಮತ್ತು ಈ ರೀತಿ ಪ್ರಾರ್ಥನೆಮಾಡುವನು. ||೨೮||

" ಓ ಮಹೇಶ್ವರನೇ, ನೀನು ಸರ್ವಗಣಗಳಿಗೂ ಒಡೆಯನು. ಸತ್ವರಜಸಮೋ ಗುಣಗಳಿಗೆ ಅತೀತನಾಗಿರುವವನು. ಚಂದ್ರನನ್ನು ಹಣೆಯಲ್ಲಿ ಧರಿಸಿರುವೆ ಗರ್ಜನೆ ಮಾಡುವ ಮೇಘಮಂಡಲದಲ್ಲಿ ಹುಟ್ಟುವ ಮಿಂಚುಗಳಂತೆ ಹೊಳೆಯುವ ಜಟೆಯುಳ್ಳವನಾಗಿರುವೆ. ||೨೯||

ಭಗವಂತನೇ, ನಿನಗೆ ಸರ್ವವ್ಯಾಪಿಯಾಗಿರುವ ವ್ಯೋಮವೇ ಕೇಶವಾಗಿದೆ. ಸಕಲ ವೇದಗಳಿಂದಲೂ, ಅದರಲ್ಲೂ ದಿವ್ಯವಾದ ಸಾಮವೇದದಿಂದ ವಿಶೇಷವಾಗಿ ಸ್ತುತಿಸಲ್ಪಟ್ಟು ಸೋಮೇಶ್ವರನೆನಿಸಿರುವೆ. ಅತಿಶಯವಾದ ಮಹಿಮೆಯುಳ್ಳ ವೇದ ಶಾಸ್ತ್ರಾಭ್ಯಾಸಿಗಳ ಕೋರಿಕೆಯನ್ನು ಸಲ್ಲಿಸುವೆ. ಹೊಗೆಯ ರಾಶಿಯಂತೆ ನೀಲವಾಗಿರುವ ಕಂಠಪ್ರದೇಶವುಳ್ಳವನೇ, ನಿನಗೆ ವಂದನೆಯು. ||೩೦||

ಪ್ರತಿಭಟಿಸುವವರನ್ನು ನಾಶಗೊಳಿಸುವವನೇ, ಮನ್ಮಥನಾಶಕನೇ, ಶಂಭೋ,

**ದಹರಗಹನಶೇಖರೋಽಸಿ ಶಂಭೋ**
**ನಿರವದ್ಯಾಖಿಲಲೋಕಸೌಖ್ಯಭೂಮನ್ ।**
**ತ್ರಿಗುಣಗತಿವಿದೂರ ದರ್ಶಿತಾದ್ಯ**
**ಪ್ರಕಟಿತವೇದವಚೋಭಿರೀಡ್ಯಪಾದ ॥೩೨॥**

**ಕರೇ ಕುರಂಗಂ ಸ್ವಕಪರ್ದಗಂಗಂ ।**
**ಹಾರೇ ಭುಜಂಗಂ ಯಮಿಹೃತ್ಸುಸಂಗಂ ।**
**ಬಾಲಾಕೃತಾಂಗಂ ಸಿತಭಸ್ಮಸಂಗಂ ।**
**ಅನಂಗಮಾತಂಗಹರಂ ಭಜಾಮಿ ॥೩೩॥**

॥ ಸ್ಕಂದ ಉವಾಚ ॥

**ಇತಿ ಸ್ತೌತಿ ಸದಾ ಶಂಭುಂ ಕೈಲಾಸೇಶಗಣೇಶ್ವರಃ ।**
**ಗಣನಾಥೋ ಗಣವೃತಸ್ಸದಾಶಿವಗಣಾಗ್ರಣೀಃ ॥೩೪॥**

---

ಶಂಕರನೇ, ವೀರರೂ, ಧೀರರೂ ಆದ ದೇವಶ್ರೇಷ್ಠರಿಂದ ಧರಿಸಲ್ಪಡುವ ಪಾದವುಳ್ಳವನೇ, ಕಾಲನಿಗೂ ಯಮನಂತಿರುವವನೇ, ಕ್ರೂರವಾದ ತ್ರಿಪುರಾಸುರರನ್ನು ನಾಶಮಾಡಿ, ನಾಶರಹಿತನಾಗಿರುವ ಮಹೇಶ್ವರನೇ, ನಿನ್ನನ್ನು ವಂದಿಸುವೆನು. ॥೩೧॥

ಶಂಭುವೇ, ನೀನು ಪ್ರಪಂಚವನ್ನೇ ಸುಡುವಂತಹ ಅಗ್ನಿಯನ್ನು ಹಣೆಯಲ್ಲಿ ಧರಿಸಿರುವೆ. ಅತಿಶಯವಾದ ಸುಖವನ್ನು ಲೋಕಕ್ಕೆ ಒದಗಿಸುವುದರಲ್ಲಿ ನೀನೇ ಅತ್ಯಂತ ಸಮರ್ಥನು. ತ್ರಿಗುಣಗಳಿಗೂ, ಸಮಸ್ತಗತಿಗಳಿಗೂ ಮೀರಿದವನಾಗಿರುವೆ. ವೇದವಚನಗಳು ನಿನ್ನ ಸ್ವರೂಪವನ್ನು ಯಾವಾಗಲೂ ಪ್ರಕಟಗೊಳಿಸುತ್ತಿರುವವು. ಅಂತಹ ವೇದಗಳಿಂದ ಪೂಜಿಸಲ್ಪಟ್ಟ ಪಾದಪದ್ಮವುಳ್ಳವನೇ, ನಿನಗೆ ವಂದನೆ. ॥೩೨॥

ಪರಮೇಶ್ವರನೇ, ನಿನ್ನ ಕೈಯ್ಯಲ್ಲಿ ಜಿಂಕೆಯಿದೆ. ಜಟಾಜೂಟದಲ್ಲಿ ಗಂಗೆ ಇರುವಳು. ಸರ್ಪಗಳೇ ನಿನಗೆ ಹಾರವಾಗಿವೆ. ಜಿತೇಂದ್ರಿಯರಲ್ಲಿ ನೀನು ಸ್ನೇಹದಿಂದಿರುವೆ. ನಿನ್ನ ಅರ್ಧಾಂಗವೇ ಪಾರ್ವತೀದೇವಿಯು. ಶುಭ್ರವಾದ ಭಸ್ಮವನ್ನು ನೀನು ಧರಿಸಿರುವೆ. ಆನೆಯಂತೆ ಮದದಿಂದ ಸುಗ್ಗುತ್ತಿದ್ದ ಮನ್ಮಥನನ್ನು ನೀನು ನಾಶಮಾಡಿರುವೆ. ಇಂತಹ ನಿನ್ನನ್ನು ನಾನು ಏಕಮನಸ್ಸಿನಿಂದ ಧ್ಯಾನಿಸುವೆನು." ॥೩೩॥

ಹೀಗೆಂದು ಗಣನಾಥನು ಅಖಿಲಗಣಗಳಿಂದಾವೃತನಾಗಿ ಕೈಲಾಸೇಶನೂ, ಗಣೇಶ್ವರನೂ ಆದ ಶಂಕರನನ್ನು ಸರ್ವದಾ ಸ್ತುತಿಸುತ್ತಿರುವನು. ॥೩೪॥

ತತ್ಪಾತಿ ಗೋಪುರಂ ಶಂಭೋರ್ನಿರ್ಮಣಿಪ್ರಾಕಾರಮುಷ್ಯಸೌ ।
ಸ್ವಕೀಯೈರ್ಗಣಪೈಸ್ಸಾರ್ಧಂ ಚಂದ್ರಚೂಡಸ್ಯ ಶಾಸನಾತ್ ॥೩೫॥

ಹರಿನ್ಮಣಿಕೃತಂ ವರಂ ಹರಿತಗೋಪುರಂ ಪಶ್ಚಿಮೇ ।
ನಿರಾಜಿತತಲಾಂಕಣೈರ್ವೃಷಲಲಾಮಶೃಂಗಪ್ರಭೈಃ ।
ಗರುನ್ಮಣಿವರಪ್ರಭಂ ವಿತತರತ್ನಸೌಧೋತ್ತಮಂ ।
ವರಪ್ರವರಸುಂದರಪ್ರಕಟವಪ್ರಪ್ರಾಕಾರಕಂ ॥೩೬॥

ಸ್ವಬಾಹುಬಲಮಾಶ್ರಿತೋ ದ್ವಿರದವಕ್ತ್ರಜೈಸ್ಸದ್ಗಣೈಃ ।
ಪ್ರಪಾತಿ ಗಣನಾಯಕಶ್ಶಿವಪದಾಬ್ಜಸಂಸೇವಕಃ ॥೩೭॥

ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ಕೈಲಾಸವರ್ಣನೇ ಗಣೇಶಕೃತಸ್ತುತಿ ರ್ನಾಮ ಚತುರ್ವಿಂಶೋಽಧ್ಯಾಯಃ

---

ಅದೇ ರೀತಿ ವಿಘ್ನರಾಜನು ಕೈಲಾಸಪರ್ವತದ ಪಶ್ಚಾದ್ಭಾಗದ ಪ್ರಾಕಾರವನ್ನು ತನ್ನ ಗಣಗಳಿಂದ ಕೂಡಿ, ಶಿವನ ಅಪ್ಪಣೆಯಂತೆ ಕಾಪಾಡುತ್ತಿರುವನು. ॥೩೫॥

ಪಶ್ಚಿಮಭಾಗದಲ್ಲಿರುವ ಕೈಲಾಸಪರ್ವತದ ಗೋಪುರವು ಹಸುರುರತ್ನಗಳಿಂದ ಅಂದರೆ ಪಚ್ಚೆಗಳಿಂದ ನಿರ್ಮಿತವಾಗಿದೆ. ಅಲ್ಲದೆ ಆ ಗೋಪುರದ ಅಧೋಭಾಗವೆಲ್ಲಾ ದಿವ್ಯವಾದ ವೃಷಭಾಕಾರಗಳಿಂದಲೂ, ಸಣ್ಣ ಸಣ್ಣ ಶಿಖರಗಳಿಂದಲೂ, ಕೂಡಿ ವಿರಾಜಿಸತಕ್ಕದ್ದಾಗಿರುವುದು. ಗರುಡಮಣಿಯಂತೆ ಕಾಂತಿಯುಳ್ಳದ್ದಾಗಿ, ವಿಸ್ತಾರವಾದ ಸೌಧಗಳಿಂದ ಕೂಡಿರತಕ್ಕದ್ದಾಗಿರುವುದು. ಅತ್ಯಂತ ಶ್ರೇಷ್ಠವಾಗಿಯೂ, ಸುಂದರತರವಾಗಿಯೂ ಇರುವ ಗೋಪುರಗಳಿಂದಲೂ ಪ್ರಾಕಾರಗಳಿಂದಲೂ, ರಮಣೀಯವಾಗಿರುವುದು. ॥೩೬॥

ಇಂತಹ ಪ್ರಾಕಾರವನ್ನು ಗಣಪತಿಯು ಬಾಹುಬಲದಿಂದಲೂ ಇತರ ಗಣನಾಯಕರ ಸಹಾಯದಿಂದಲೂ, ಶಿವನ ಪಾದಕಮಲವನ್ನು ಧ್ಯಾನಮಾಡುತ್ತಾ, ಸರ್ವದಾ ರಕ್ಷಿಸುತ್ತಿರುವನು. ॥೩೭॥

ಶ್ರೀಶಿವರಹಸ್ಯದ ಪ್ರಥಮಾಂಶದಲ್ಲಿ ಗಣೇಶಕೃತವಾದ ಶಿವಸ್ತುತಿಯನ್ನು ವಿವರಿಸುವ ಇಪ್ಪತ್ತುನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

# ಅಥ ಶ್ರೀಶಿವರಹಸ್ಯೇ

## ಪಂಚವಿಂಶೋಽಧ್ಯಾಯಃ

### ವೃಷಸ್ತುತಿಃ

॥ ಸ್ಕಂದ ಉವಾಚ ॥

**ಕೈಲಾಸಾಂತರತಃ ಪ್ರಾಚ್ಯಾಂ ಪುಷ್ಪರಾಗವಿನಿರ್ಮಿತಂ ।**
**ಪಂಚಲಕ್ಷಪ್ರಮಾಣೇನ ಪ್ರಾಕಾರವರಗೋಪುರಂ ॥೧॥**

**ಉದ್ಯದ್ಭಾನುಶತಾಧಿಕ್ಯಚಾಕಚಕ್ಯಮನೋಹರಂ ।**
**ಪುಷ್ಪರಾಗಮಣಿಪ್ರೋದ್ಯದ್ವೃಷಭೈಸ್ಸಮಧಿಷ್ಠಿತಂ ॥೨॥**

**ಪ್ರಾಕಾರಂ ಲಕ್ಷಮಾನೇನ ಮನಸಾ ಶೂಲಿನಾ ಕೃತಂ ।**
**ರುದ್ರಾವತಾರಚರಿತ್ರೈರ್ವೇದಿಕಾಪಟ್ಟಿಕಾನ್ವಿತಂ ॥೩॥**

---

## ಶ್ರೀಶಿವರಹಸ್ಯದಲ್ಲಿ ಇಪ್ಪತ್ತೈದನೆಯ ಅಧ್ಯಾಯ

ಕೈಲಾಸಪರ್ವತದ ಪೂರ್ವಭಾಗದಲ್ಲಿ ಪುಷ್ಪರಾಗಮಣಿಗಳಿಂದ ವಿರಚಿತವಾಗಿ ಐದು ಲಕ್ಷ ಪ್ರಮಾಣ ಎತ್ತರವುಳ್ಳ ಶ್ರೇಷ್ಠವಾದ ಗೋಪುರವೊಂದಿರುವುದು, ಎಂದು ವೃಷಭದೇವನ ಆವಾಸಸ್ಥಾನವನ್ನು ಸ್ಕಂದಸ್ವಾಮಿಯು ಜೈಗೀಷವ್ಯಾದಿಗಳಿಗೆ ವಿವರಿಸಲಾರಂಭಿಸಿದನು. ॥೧॥

ಆ ಗೋಪುರವು ಬಾಲಸೂರ್ಯನ ಶತಾಧಿಕವಾಗಿ ಹೊಳೆಯುತ್ತಿರುವುದು. ಆ ಹೊಳಪು ಸರ್ವರಿಗೂ ಮನೋಹರವಾಗಿ ಕಾಣುತ್ತಿರುವುದು. ಗೋಪುರಗಳ ಮಧ್ಯಭಾಗದಲ್ಲಿ ಪುಷ್ಪರಾಗಮಣಿಗಳಿಂದ ರಚಿತವಾದ ವೃಷಭಗಳು ಅಲ್ಲಲ್ಲಿ ಗೋಚರಿಸುತ್ತಿರುವುವು. ॥೨॥

ಆ ಪ್ರಾಕಾರವು ಪರಮೇಶ್ವರನ ಮನಸ್ಸಿನಿಂದಲೇ ನಿರ್ಮಿಸಲ್ಪಟ್ಟದ್ದಾಗಿರುವುದು. ರುದ್ರಾವತಾರದ ಕಥೆಗಳೂ, ಅನೇಕ ವೇದಿಕೆಗಳೂ ಪಟ್ಟಿಗಳೂ ಅಲ್ಲಲ್ಲಿ ವಿಶೇಷವಾಗಿ ಕಾಣುತ್ತಿರುವುವು. ॥೩॥

ರಾಜದ್ವೃಷಭಕುಂಭಾಗ್ರದೋಧೂಯಿತಪತಾಕಕಂ ।
ಪುಷ್ಪರಾಗಮಣಿಜ್ಯೋತಿತಿರಸ್ಕೃತಶಶಿದ್ಯುತಿ ॥೪॥

ತತ್ರೈವಾಂತರ್ಮಹಾರತ್ನಗರ್ಭಮಂಟಪಮುತ್ತಮಂ ।
ಸ್ತಂಭೈಶ್ಚ ದಶಸಾಹಸ್ರೈಸ್ಸಮುನ್ನತಿಮನೋಹರಂ ॥೫॥

ಶಿಖಾಭಿರ್ಮಣಿಕ್ಲಪ್ತಾಭಿರ್ವಲಿಭಿಶ್ಚುಂಬಿತಾಂಬರಂ ।
ನಾನಾರತ್ನಮಹಾವೇದಿಪೀಠವಿದ್ರುಮಪುತ್ರಿಕೈಃ ॥೬॥

ಶೋಭಿತಂ ರತ್ನಗುಚ್ಛಾಚ್ಛಮಾಲಾಲಂಬಿತಪೀಠಕಂ ।
ತತ್ರ ಸಿಂಹಾಸನೇ ದಿವ್ಯೇ ನವರತ್ನಗಣೈಶ್ಚಿತೇ ॥೭॥

ಧೂಪದೀಪಾದಿಬಹುಲೇ ಮುಕ್ತಾಮಾಲಾಪರಿಷ್ಕೃತೇ ।
ವಿತಾನದ್ಯೋತಿದಿಕ್ಚಕ್ರೇ ನಾನಾರುದ್ರಗಣೈರ್ಯುತೇ ॥೮॥

---

ಗೋಪುರದ ಅಗ್ರಭಾಗದಲ್ಲಿ ವೃಷಭಾಕಾರದ ಒಂದು ಕಲಶವಿದೆ. ಅದರ ಮೇಲೆ ಒಂದು ಧ್ವಜವು ಗಾಳಿಗೆ ಅಲ್ಲಾಡುತ್ತಿರುವುದು. ಆ ಗೋಪುರಾಂತರ್ವರ್ತಿಯಾದ ಪುಷ್ಯರಾಗಮಣಿಗಳ ಕಾಂತಿಯು ಚಂದ್ರಿಕೆಯನ್ನು ತಿರಸ್ಕರಿಸುವಂತಿದೆ. ॥೪॥

ಆ ಗೋಪುರದ ಮಧ್ಯಭಾಗದಲ್ಲಿ ರತ್ನಮಯವಾದ ಒಂದು ಮಂಟಪವಿರುವುದು. ಅದು ಹತ್ತುಸಾವಿರ ಕಂಬಗಳಿಂದ ಕೂಡಿದ್ದಾಗಿ ಅತ್ಯಂತ ದೊಡ್ಡದಾಗಿ ಮನೋಹರವಾಗಿರುವುದು. ॥೫॥

ಆ ಗೋಪುರದ ಅಗ್ರಭಾಗಗಳಲ್ಲಿ ರತ್ನಮಯವಾದ ಒಂದು ಸೂಚ್ಯಗ್ರಭಾಗವಿರುವುದು. ಇದು ಆಕಾಶವನ್ನು ಮುಟ್ಟುತ್ತಿರುವುದು. ಮಂಟಪದ ಮಧ್ಯಭಾಗದಲ್ಲಿ ಅನೇಕ ರತ್ನನಿರ್ಮಿತವಾದ ಜಗುಲಿಯಿರುವುದು. ಅದರ ಮೇಲೆ ಪೀಠವೂ, ಆ ಪೀಠದಲ್ಲಿ ಅನೇಕ ಹವಳದ ಬೊಂಬೆಗಳೂ ಪ್ರಕಾಶಿಸುತ್ತಿರುವುವು. ॥೬॥

ರತ್ನಗಳ ಗೊಂಚಲುಗಳ ಮಾಲೆಯು ಆ ಪೀಠದಲ್ಲಿ ವಿರಾಜಿಸುತ್ತಿರುವುದು. ಅಂತಹ ಪೀಠದ ಮೇಲೆ ನವರತ್ನಗಳಿಂದ ಕೆತ್ತಿದ ದಿವ್ಯಸಿಂಹಾಸನವೊಂದಿರುವುದು. ॥೭॥

ಆ ಮಂಟಪವು ಧೂಪದೀಪಗಳಿಂದ ಸುವಾಸಿತವಾಗಿರುವುದು. ಮುತ್ತಿನ ಸರಗಳಿಂದ ಅಲಂಕೃತವಾಗಿರುವುದು. ಮೇಲ್ಕಟ್ಟುಗಳ ಕಾಂತಿಯು ದಿಗಂತವಿಶ್ರಾಂತವಾಗಿ ನೆಲಸಿರುವುದು. ಅನೇಕ ರುದ್ರಗಣಗಳು ಸದಾ ಅಲ್ಲಿ ನೆಲಸಿರುವುವು. ॥೮॥

ಷಷ್ಟಿಸಾಹಸ್ರಸಂಖ್ಯಾಕೈರಹಿಮನ್ಯುಭಿರುದ್ಧತೇ ।
ತ್ರಿಪುಂಡ್ರವಿಲಸತ್ಫಾಲೈರುದ್ರಾಕ್ಷವರಭೂಷಣೈಃ ॥೯॥

ತ್ರಿಶೂಲೋದ್ಯತ್ಕರೈಶ್ಶುಭ್ರೈರ್ಹೇತಿಚಾಪಶರಾವೃತೈಃ ।
ಜಟಾತಟನಿಬದ್ಧೇಂದುಶೇಖರೈರಿಂದುಸಪ್ರಭೈಃ ॥೧೦॥

ಸಮಂತಾತ್ಸೇವಿತೋ ನಿತ್ಯಂ ವೃಷೋ ಧರ್ಮಾಕೃತಿರ್ಮಹಾನ್ ।
ಧರ್ಮಾಧಾರಮಹಾಪಾದೋ ಯುಗನಾಭೋರುಪಾದಕಃ ॥೧೧॥

ಸಂಧ್ಯಾಂಶುಸುಖುರೋದ್ದಾಮವರ್ಣಾಶ್ರಮಕೃತಾಂಘ್ರಿಕಃ ।
ಮಣಿಮಂಜೀರನಿನದನಾನಾಧರ್ಮೈಕಶಬ್ದವಾನ್ ॥೧೨॥

ಚತುರ್ವೇದೋಪವೇದೋದ್ಯದ್ವೇದಾಂತಿಮತದಂತಕಃ ।
ಪುರಾಣನ್ಯಾಯಮೀಮಾಂಸಾದ್ವಯತಂತ್ರೋರುಘಂಟಿಕಃ ॥೧೩॥

---

ಅರುವತ್ತುಸಾವಿರ ಸಂಖ್ಯೆಯ ಅಹಿಮನ್ಯುಗಳು (ನಾಗವಿಶೇಷಗಳು) ತ್ರಿಪುಂಡ್ರವನ್ನು ಹಣೆಯಲ್ಲಿ ಧರಿಸಿ, ರುದ್ರಾಕ್ಷಿಯಿಂದ ನಿರ್ಮಿತವಾದ ಆಭರಣಗಳನ್ನು ಹೊಂದಿದವರಾಗಿ ಅಲ್ಲಿ ಕಾಣುತ್ತಿರುವರು. ॥೯॥

ಅವರು, ಕೈಯ್ಯಲ್ಲಿ ತ್ರಿಶೂಲವನ್ನು ಹಿಡಿದಿರುವರು. ಇನ್ನೂ ಬಾಣ, ಬಿಲ್ಲು ಮುಂತಾದ ಆಯುಧಗಳು ಅವರ ಸಮೀಪದಲ್ಲಿರುವುವು. ತಮ್ಮ ಜಟಾಪ್ರದೇಶಗಳಲ್ಲಿ ಚಂದ್ರನಂತೆ ಹೊಳೆಯುವ ಚಂದ್ರಕಲೆಯನ್ನು ಧರಿಸಿದವರಾಗಿರುವರು. ॥೧೦॥

ಇಂತಹ ಗಣಗಳಿಂದ ಸರ್ವದಾ ಸೇವಿತನಾಗಿ ಧರ್ಮರೂಪಿಯಾದ ವೃಷಭನು ಧರ್ಮಕ್ಕೆ ಆಧಾರಭೂತವಾಗಿರುವಂತೆ ತೋರುವ ಮಹಾಪಾದಗಳಿಂದಲೂ, ಮತ್ತು ನಾಭಿಪ್ರದೇಶದಿಂದಲೂ ಕೂಡಿದವನಾಗಿ, ವಿಶಾಲವಾದ ಹೆಜ್ಜೆಯುಳ್ಳವನಾಗಿ ಪ್ರಕಾಶಿಸುತ್ತಿರುವನು. ॥೧೧॥

ಸಂಧ್ಯಾಕಾಲದ ರಾಗದಂತೆ ಹೊಳೆಯುವ ಗೊರಸುಗಳು, ಆ ಗೊರಸುಗಳ ತೇಜೋವಿಶೇಷದಿಂದ ಕೂಡಿದ ಪಾದಗಳು, ವರ್ಣಾಶ್ರಮಗಳ ಚತುಷ್ಟಯವನ್ನು ಸೂಚಿಸುತ್ತಿವೆಯೋ ಎಂಬಂತಿದ್ದುವು. ಹಾಗೆಯೇ ಕಾಲಿನಲ್ಲಿ ಕಟ್ಟಿದ ರತ್ನಮಯವಾದ ಗೆಜ್ಜೆಗಳ ಧ್ವನಿಯು ನಾನಾಧರ್ಮಗಳನ್ನು ಘಂಟಾಘೋಷವಾಗಿ ಹೇಳುವಂತಿರುವುವು. ॥೧೨॥

ನಾಲ್ಕುವೇದಗಳು, ಉಪವೇದಗಳು, ಉಪನಿಷತ್ತುಗಳು ಇವುಗಳ ಅಭಿಪ್ರಾಯ

**ಪೂರ್ವಸಿದ್ಧಾಂತರಾದ್ಧಾಂತತತ್ತ್ವಶಬ್ದಘಣಾಘಣಃ ।**
**ಗ್ರೈವೇಯಶೋಭಿತೋದಾರಘಂಟಾಕಲಿತಕಂಧರಃ ॥೧೪॥**

**ಕೈಲಾಸೋ ಜಂಗಮ ಇವ ಶೃಂಗದ್ವಯವಿಭೂಷಿತಃ ।**
**ಸುಧಾಮಂಡಲಜೋತ್ತುಂಗಸುಪಾಂಡರಮಹಾಛವಿಃ ॥೧೫॥**

**ಸಂಸ್ಥಿತೋ ದೇವದೇವಸ್ಯ ಸನ್ನಿಧೌ ನಂದಿಕೇಶ್ವರಃ ।**
**ಪಂಚಲಕ್ಷಪ್ರಮಾಣೇನ [1]ಗಣ್ಯೈಃ ಕರ್ಪೂರಸನ್ನಿಭೈಃ ॥೧೬॥**

---

ವನ್ನು ಸೂಚಿಸುವ, ವೇದಾಂತಿಯ ತತ್ತ್ವಗಳಂತೆ ಶುದ್ಧವಾದ ಹಲ್ಲುಗಳೂ, ಪುರಾಣ, ನ್ಯಾಯ, ಪೂರ್ವೋತ್ತರಮೀಮಾಂಸಾಶಾಸ್ತ್ರಗಳು, ತಂತ್ರ ಕರ್ಮಗಳ ಸ್ವರೂಪ, ಇವೇ ಮೊದಲಾದುವುಗಳನ್ನು ಸೂಚಿಸುವಂತಿದ್ದ ಗಂಟೆಗಳು ಆ ವೃಷಭನಲ್ಲಿ ಶೋಭಿಸುತ್ತಿರುವುವು. ||೧೩||

ಪೂರ್ವಪಕ್ಷ ಮತ್ತು ಸಿದ್ಧಾಂತ ತತ್ತ್ವಗಳನ್ನು ಪ್ರತಿಪಾದಿಸುವಂತಿರುವ, ಘಂಟಾಧ್ವನಿಯೂ, ಕತ್ತಿನ ಮುಕ್ತಾಹಾರಾದಿಗಳಿಂದ ಶೋಭಿತವಾಗಿರುವ ಘಂಟೆಗಳ ಮಾಲೆಯೂ, ಇವುಗಳಿಂದ ರಂಜಿತವಾದ ಕಂಠಪ್ರದೇಶವೂ ಬಹು ಮನೋಹರವಾಗಿರುವುದು. ||೧೪||

ಒಟ್ಟಿನಲ್ಲಿ ಆ ವೃಷಭವು ಎರಡು ಶಿಖರಗಳಿಂದ ಕೂಡಿ ಸಂಚರಿಸುವ ಕೈಲಾಸಪರ್ವತವೋ ಎಂಬಂತೆ ಶೃಂಗದ್ವಯಗಳಿಂದ ಕೂಡಿದ್ದಾಗಿ ಪ್ರಕಾಶಿಸುತ್ತಿರುವುದು. ಅಲ್ಲದೆ ಚಂದ್ರಮಂಡಲದಿಂದ ಹೊರಸೂಸುವ ದಿವ್ಯಕಾಂತಿರಾಶಿಯಂತೆ ಶುಭ್ರವಾಗಿ ತೋರುತ್ತಿರುವುದು. ||೧೫||

ಹೀಗೆ ನಂದಿಕೇಶ್ವರನು ದೇವದೇವನಾದ ಮಹೇಶ್ವರನ ಸನ್ನಿಧಿಯಲ್ಲಿಯೇ ತೋರಿಬರುವನು. ಅವನ ದೇಹವಾದರೋ, ಕರ್ಪೂರದಂತೆ ಶುಭ್ರವಾದದ್ದಾಗಿ, ಐದು ಲಕ್ಷ ಪ್ರಮಾಣವುಳ್ಳದ್ದಾಗಿರುವುದು. ||೧೬||

---

1 ಗಾತ್ರೈಃ (ಪಾ.ರ).

ಉದ್ಯತ್ಸುಧಾಂಶುಪೂರ್ಣಾಂಗೋ ಲಕ್ಷಯೋಜನಪೃಷ್ಠಭೂಃ ।
ಕಕುದಾ ದಶಸಾಹಸ್ರಯೋಜನೋನ್ನತವೃತ್ತಯಾ ॥೧೭॥

ಮುಖೇನ ತ್ರಿಂಶತ್ಸಾಹಸ್ರಂ ನೇತ್ರಯೋರ್ದ್ವಿಸಹಸ್ರಕಂ ।
ಕರ್ಣಯೋಃ ಪಂಚಸಾಹಸ್ರಂ ವಿಷಾಣೇ ಚ ಸಹಸ್ರಕಂ ॥೧೮॥

ನಾಸಾವಿವರಮುಕ್ತಾಚ್ಛನಾಸಾಪಂಚಸಹಸ್ರಕಂ ।
ಸಹಸ್ರಯೋಜನಾಯಾಮಲೇಲಿಹಾನಾಗ್ರಜಿಹ್ವಕಂ ॥೧೯॥

ಪಶ್ಯನ್ನನಿಮಿಷೇಣೈವ ಲೋಚನಾಭ್ಯಾಂ ಮಹೇಶ್ವರಂ ।
ಸ್ವಪೃಷ್ಠಾಸ್ತೃತರತ್ನಾಚ್ಛಪಲ್ಯಂಕಾಲಂಬಿಮೌಕ್ತಿಕಂ ॥೨೦॥

---

ಉದಯಿಸುವ ಪೂರ್ಣಚಂದ್ರನಂತೆ ನಂದಿಯ ಅಂಗವು ಪ್ರಕಾಶಮಾನವಾಗಿರುವುದು. ನಂದೀಶ್ವರನ ಬೆನ್ನು ಭಾಗವೇ ಲಕ್ಷಯೋಜನದಷ್ಟು ಅಗಲವಾಗಿರುವುದು. ಹೆಗಲಮೇಲಿರುವ ಕಕುದವು (ಹಿಳಿಲು) ಹತ್ತು ಸಾಹಸ್ರ ಯೋಜನದಷ್ಟು ಎತ್ತರವಾಗಿ, ದುಂಡಾಗಿದೆ. ॥೧೭॥

ಮೂವತ್ತು ಸಹಸ್ರ ಯೋಜನದಗಲವುಳ್ಳ ಮುಖವೂ, ಎರಡು ಸಹಸ್ರ ಯೋಜನದ ವೈಶಾಲ್ಯವುಳ್ಳ ಎರಡು ಕಣ್ಣುಗಳೂ, ಐದು ಸಾವಿರ ಯೋಜನದಷ್ಟು ಅಗಲದ ಎರಡು ಕಿವಿಗಳೂ, ಒಂದು ಸಹಸ್ರ ಪರಿಮಾಣದಲ್ಲಿ ಕೊಂಬುಗಳೂ ಕಂಡುಬರುತ್ತಿವೆ. ॥೧೮॥

ನಂದೀಶ್ವರನ ಮೂಗೂ, ಅದರ ರಂಧ್ರಗಳೂ, ಅಲ್ಲಿರುವ ಮುತ್ತಿನ ಗೊಂಚಲುಗಳೂ, ಒಟ್ಟು ಸೇರಿ ಐದು ಸಾವಿರ ಯೋಜನದಷ್ಟು ಅಗಲವಾಗಿರುವುವು. ಆಹಾರ ಸವಿಯನ್ನು ಕಾಣುವ ನಾಲಿಗೆಯಾದರೋ ಸಾವಿರಯೋಜನದಷ್ಟು ಅಗಲವಾಗಿ ಕಂಡುಬರುತ್ತಿರುವುದು. ॥೧೯॥

ತನ್ನ ವಿಶಾಲವಾದ ಮತ್ತು ಮುಚ್ಚದಿರುವ ಕಣ್ಣುಗಳಿಂದ ಸರ್ವದಾ ಮಹೇಶ್ವರನನ್ನೇ ನೋಡುವನು. ಅಲ್ಲದೆ ತನ್ನ ಬೆನ್ನಿನಮೇಲೆ ಯಾವಾಗಲೂ ರತ್ನಗಳಿಂದ ನಿರ್ಮಿತವಾದ ತಡಿಯನ್ನು ಹಾಸಿಕೊಂಡು, ಪರಮೇಶ್ವರನನ್ನು ವಹಿಸಿಕೊಳ್ಳಲು ಸಿದ್ಧವಾಗಿರುವನಂತೆ ತೋರಿಬರುವನು. ಅವನ ಆ ತಡಿಯ ಸುತ್ತಲು ಮುತ್ತಿನಗೊಂಚಲುಗಳು ನೇತಾಡುತ್ತಿರುವುವು. ॥೨೦॥

ಸ್ವನಾಸಾವಿವರೋತ್ಥಾನವಾತೋದ್ಧೂತಮಹಾಗಿರಿಂ ।
ತದ್ವಾತೋದ್ಧೂತವೇಲಾಶ್ಚ ಚೋದ್ಯತೋದ್ಯತ್ತರಂಗಕಾಃ ॥೨೧

ಸಮುದ್ರಾಸ್ಸರಿತಶ್ಚೈವ ತಚ್ಚಲತ್ಖುರದಾರಿತಾ ।
ಭೂರ್ಭ್ರಾತಿ ಕಂಪಿತಾ ಶೈಲೈಸ್ಸಾಗರೈಶ್ಚ ವಿಲೋಲಿತಾ ॥೨೨

ಶೃಂಗಕೋಟಿಮಣಿಭ್ರಾಜಿಮುಕುಟೇನ ವಿರಾಜಿತಂ ।
ಕರ್ಣಾಲಂಬಿ ಶಶಿಜ್ಯೋತಿರ್ಧವಲಾಲಂಬಿ ಚಾಮರಂ ॥೨೩

ಪಂಚಾಶಲ್ಲಕ್ಷಮಾನೇನ ಪದೈಃ ಖುರವರೈರ್ಯುತಂ ।
ದಶಸಾಹಸ್ರವಿಸ್ತಾರೈರಿಂದ್ರನೀಲಮಣಿಪ್ರಭೈಃ ॥೨೪

ಖುರಾಘೃಷ್ಟಗಿರಿವ್ರಾತಂ ನಾದನೋದಿತಕಂದರಂ ।
ಸಾಸ್ನಯಾ ಲಂಬಿತಾಸ್ವಚ್ಛಪಂಚಸಾಹಸ್ರಯೋಜನಂ ॥೨೫

---

ನಂದೀಶ್ವರನ ನಾಸಾ ವಿವರದಿಂದ ಹೊರಟ ಉಸುರಿನ ವಾಯುವು ದೊಡ್ಡ ದೊಡ್ಡ ಪರ್ವತಗಳನ್ನೆಲ್ಲಾ ಹಾರಿಸುತ್ತಿರುವುದು. ಅಲ್ಲದೆ ಆ ನಂದಿಕೇಶ್ವರನ ಉಸುರಿನ ವೇಗವು ಸಮುದ್ರಗಳನ್ನು ನದಿಗಳನ್ನೂ ಮೇರೆದಪ್ಪಿಸಿ, ಅಲೆಗಳನ್ನು ಮೇಲೆಬ್ಬಿಸುತ್ತಿರುವುದು. ||೨೧||

ನಂದೀಶ್ವರನ ಗೊರಸಿನಿಂದ ಒದೆಯಲ್ಪಟ್ಟ ಭೂಮಿಯು ನಡುಗಿ ಹೋಗಿ, ತನ್ನ ಮೇಲಿರುವ ಸಮುದ್ರಗಳನ್ನೂ, ಪರ್ವತಗಳನ್ನೂ, ಚಲಿಸುವಂತೆ ಮಾಡುತ್ತಿರುವುದು. ||೨೨||

ನಂದಿಯ ಕೋಡುಗಳ ಮೇಲೆ ರತ್ನನಿರ್ಮಿತವಾದ ಕಿರೀಟಗಳಿವೆ. ಕಿವಿಯಲ್ಲಿ ಚಂದ್ರನಂತೆ ಕಾಂತಿಯುಳ್ಳದ್ದಾಗಿ ಹೊಳೆಯುತ್ತಿರುವ ಚಾಮರಗಳು ನೇತಾಡುತ್ತಿವೆ. ||೨೩||

ಐವತ್ತುಲಕ್ಷ ಪ್ರಮಾಣದಲ್ಲಿರುವ ಕಾಲುಗಳೂ, ಹತ್ತುಸಾವಿರಯೋಜನದಗಲವಿರುವ ಗೊರಸುಗಳೂ, ಅವುಗಳಿಗಿರುವ ಇಂದ್ರನೀಲಮಣಿಗಳಿಂದ ರಚಿತವಾದ ಆಭರಣಗಳೂ, ಬಹುವಾಗಿ ರಂಜಿಸುತ್ತಿರುವುವು. ||೨೪||

ನಂದೀಶ್ವರನ ಪಾದಾಘಾತದಿಂದ ಬೆಟ್ಟಗಳೆಲ್ಲಾ ಅಲುಗುವುವು. ಧ್ವನಿಯಿಂದ ಗುಹೆಗಳೆಲ್ಲವೂ ಪ್ರತಿಧ್ವನಿತವಾಗುವುವು. ಕತ್ತಿನಲ್ಲಿ ನೇತಾಡುತ್ತಿರುವ ಗಂಗೆದೊಗಲೇ ಸುಮಾರು ಐದುಸಾವಿರ ಯೋಜನದಷ್ಟು ವಿಶಾಲವಾಗಿ, ನೇತಾಡುತ್ತಿರುವುದು. ||೨೫

ಹುಂಕಾರವಮಹಾಭೀತತ್ರೈಲೋಕ್ಯತಲವಾಸಿನಂ ।
ಕಾಮಧೇನುಗಣೈಶ್ಚೈವ ಕೋಟಿಭಿಃ ಪರಿತೋ ವೃತಂ ॥೨೬॥

ಶರಚ್ಚಂದ್ರಪ್ರಭಾಭಾಸ್ವದ್ಗಿರಿವಾಲಿವಿದಾರಣಂ ।
ಲಂಬಿನಾ ವೃಷಣೇನಾಪಿ ಶತಯೋಜನಕೇನ ಚ ॥೨೭॥

ವಾಲೇನ ತ್ರಿಂಶತ್ಸಾಹಸ್ರಯೋಜನೇನ ವಿಲಂಬಿನಾ ।
ಚಾಮರಾಗ್ರಮಹಾಕೇಶಪುಚ್ಛಭಾರೇಣ ಶೋಭಿತಃ ॥೨೮॥

ಮುಕ್ತಾಮಾಣಿಕ್ಯಜಾಲೈಶ್ಚ ಪ್ರೋತ್ಥಿತೇನ ಮಣಿಪ್ರಭಃ ।
ತತ್ರಾಸ್ತಿ ಗೋಪುರಂ ಶಂಭೋರ್ಧಾಮ ತತ್ರ ವೃಷೇಶಿತುಃ ॥೨೯॥

ಪ್ರಾಕಾರರಾಜದ್ವೃಷಭಂ ತಸ್ಯೇಷ್ಟಂ ಲಿಂಗಮೈಶ್ವರಂ ।
ಕಾಮಧೇನೂಧಸೋದ್ಭೂತೈಃ ಪಯೋಭಿರಭಿಷಿಚ್ಯ ಚ ॥೩೦॥

---

ನಂದೀಶ್ವರನ ಹುಂಕಾರದಿಂದ ಮೂರುಲೋಕದಲ್ಲಿ ವಾಸಿಸುವ ಸಮಸ್ತರೂ ಹೆದರಿ ನಡುಗುವರು. ಕೇಳಿದ ವಸ್ತುಗಳನ್ನೆಲ್ಲಾ ಅನಾಯಾಸವಾಗಿ ಒದಗಿಸುವ ಕಾಮಧೇನುಗಳು ಕೋಟಿಸಂಖ್ಯೆಯಲ್ಲಿ ನಂದೀಶ್ವರನ ಸುತ್ತಲೂ ನೆರೆದಿರುವುವು.॥೨೬॥

ಶರತ್ಕಾಲದ ಚಂದ್ರನಂತೆ ಹೊಳೆಯುವ ಬೆಟ್ಟಗಳ ಶಿಖರಗಳನ್ನೂ, ತನ್ನ ಶೃಂಗಾಗ್ರಗಳಿಂದ ನುಚ್ಚುನೂರುಮಾಡುವ ಶಕ್ತಿಯು ನಂದೀಶ್ವರನಿಗಿರುವುದು. ನಂದಿಯ ವೃಷಣಭಾಗವು ನೂರುಯೋಜನ ವಿಸ್ತೀರ್ಣದಲ್ಲಿ ನೇತಾಡುತ್ತಿರುವುದು. ॥೨೭॥

ನಂದೀಶ್ವರನ ಬಾಲವಾದರೋ ಮೂವತ್ತು ಸಹಸ್ರ ಯೋಜನದಗಲ ವಿಸ್ತಾರವಾಗಿರುವುದು. ಚಾಮರಗಳ ತುದಿಯಲ್ಲಿರುವ ಕೂದಲುಗಳಂತೆ, ಮೃದುಕೇಶವುಳ್ಳ ಬಾಲದ ತುದಿಯು ಮನೋಹರವಾಗಿ ತೋರಿಬರುತ್ತಿರುವುದು. ॥೨೮॥

ಅಂತೂ ಸಕಲ ರತ್ನದ ಆಭರಣಗಳಿಂದ ಅಲಂಕೃತನಾದ ವೃಷಭರಾಜನು ಸಾಕ್ಷಾದ್ರತ್ನದಂತೆಯೇ ಪ್ರಕಾಶಿಸುತ್ತಿರುವನು. ಇಂತಹ ನಂದೀಶ್ವರನ ವಾಸಸ್ಥಳದ ಪಕ್ಕದಲ್ಲಿ ಒಂದು ದಿವ್ಯವಾದ ಗೋಪುರವಿರುವುದು. ॥೨೯॥

ಅದಕ್ಕೆ ಒಂದು ಪ್ರಾಕಾರವೂ ಇರುವುದು. ಅದರಲ್ಲಿ ವೃಷಭವಿಗ್ರಹಗಳು ಪ್ರಕಾಶಿಸುತ್ತಿರುವುವು. ಈ ಪ್ರಾಕಾರ ಮಧ್ಯದಲ್ಲಿ ನಂದೀಶ್ವರನಿಗೆ ಅತ್ಯಂತ ಪ್ರಿಯ

ಗಂಧೈರ್ಬಿಲ್ವೈಶ್ಚ ಮಂದಾರೈಃ ಪಂಕಜೈರ್ಧೂಪದೀಪಕೈಃ ।
ನೈವೇದ್ಯೈಃ ಪಾಯಸಾಪೂಪತಾಂಬೂಲೈಃ ಛತ್ರಚಾಮರೈಃ ॥೩೧॥

ಸಂಪೂಜ್ಯ ಸ್ತೌತಿ ಧರ್ಮೇಶಂ ಭಸ್ಮರುದ್ರಾಕ್ಷಭೂಷಿತಃ ।
ಮುಕ್ತಾತ್ರಿಪುಂಡ್ರಫಾಲಾಂಕೋ ಶಶಿಧೃಕ್ಛೃಂಗಯೋರ್ದ್ವಯೋಃ ॥೩೨॥

ಪಶ್ಯಂತ್ಸಂಸ್ತೌತಿ ಹೃಷ್ಟಾತ್ಮಾ ನಾದಕೀಲಿತದಿಕ್ತಟಃ ॥೩೩॥

|| ಧರ್ಮ ಉವಾಚ ||

ದಕ್ಷಪಕ್ಷಕೃತಶಿಕ್ಷ ಮಹೋಕ್ಷೋ
ದ್ವಾಹಿತಾಕ್ಷಿ[1]ತಿಲಕಾಸುರವೀಕ್ಷ ।
ಕುಕ್ಷಿಗಾಖಿಲಜಗದ್ಗತಧಾಕ್ಷಿಃ
ಪಕ್ಷಿವಾಹಸುತಕಾಯ[2]ವಿಲಕ್ಷಂ ॥೩೪॥

---

ವಾದ ಇಷ್ಟಲಿಂಗವಿರುವುದು. ಆ ಲಿಂಗಕ್ಕೆ ಪ್ರತಿನಿತ್ಯವೂ ನಂದಿಕೇಶ್ವರನು ಕಾಮಧೇನುವಿನ ಕೆಚ್ಚಲಿನಿಂದ ಹುಟ್ಟಿದ ಕ್ಷೀರದಿಂದ ಅಭಿಷೇಕಮಾಡುತ್ತಿರುವನು. ||೩೦||

ಹಾಗೆಯೇ ಆ ಇಷ್ಟಲಿಂಗವನ್ನು ಗಂಧ, ಬಿಲ್ವಪತ್ರೆ, ಮಂದಾರಕುಸುಮ, ತಾವರೇಹೂವು, ಧೂಪದೀಪಾದಿಗಳು, ಪಾಯಸ, ಒಬ್ಬಟ್ಟು, ತಾಂಬೂಲ ಇವುಗಳ ನಿವೇದನ, ಛತ್ರಿಚಾಮರಗಳ ಉಪಚಾರ, ಇವೇ ಮೊದಲಾದುವುಗಳಿಂದ ಆರಾಧಿಸುವನು. ||೩೧||

ಹೀಗೆ, ನಂದಿಯು ಭಸ್ಮರುದ್ರಾಕ್ಷಧಾರಿಯಾಗಿ, ಭಸ್ಮ ತ್ರಿಪುಂಡ್ರದಿಂದ ಗುರುತಾದ ಫಾಲವುಳ್ಳವನಾಗಿ, ತನ್ನ ಎರಡು ಕೋಡುಗಳಲ್ಲಿಯೂ ಚಂದ್ರನನ್ನು ಧರಿಸಿದವನಾಗಿ ಧರ್ಮೇಶಲಿಂಗವನ್ನು ಆರಾಧಿಸಿ, ತನ್ನ ಗಂಭೀರಧ್ವನಿಯಿಂದ ಸಮಸ್ತ ದಿಕ್ಕುಗಳಿಗೂ ಕೇಳುವಂತೆ ಹೀಗೆ ಸ್ತೋತ್ರಮಾಡುವನು. ||೩೨-೩೩||

ಪರಮೇಶ್ವರನೇ, ನೀನು ದಕ್ಷಬ್ರಹ್ಮನ ಕಡೆಯವರನ್ನೆಲ್ಲಾ ಶಿಕ್ಷಿಸಿದವನು. ವೃಷಭೇಶ್ವರನು ತನ್ನ ಕೊಂಬಿನಿಂದ ತಿಲಕಾಸುರನನ್ನು ತಿವಿದು ಎತ್ತಿಕೊಂಡು ಹೋಗುತ್ತಿರುವಾಗ, ಆ ರಾಕ್ಷಸನು, ನಿನ್ನನ್ನು ಬಹುವಾಗಿ ಪ್ರಾರ್ಥಿಸಿಕೊಂಡು ಬದುಕಿದನಲ್ಲವೇ ? ಸಮಸ್ತ ಜಗತ್ತನ್ನೂ ತನ್ನ ಕುಕ್ಷಿಯಲ್ಲಿ ಧರಿಸಿದವನಾಗಿ ಮನ್ಮಥನ

---

1 ತಿಲಕಂ ಸುರವೀಕ್ಷ್ಯಂ. 2 ಸುತಕಾಯಮುಲುಕ್ಷಂ (ಪಾ. ರ)

ಭೂಮಿಮಂಡಲತಲಾತಿಗಮೂಲಂ ।
ಕೋಲರೂಪಹರಿಣಾ ನ ವಿಲೋಕಿ ।
ಅಬ್ಜಜಾಂಡಜಗತೀ ವಿವದೇತೇ ।
ಪಾದಮೌಲಿಕಲನೇ ತವ ಶಂಭೋ ॥೩೫॥

ಸಿಂಧೂ ನಿಷಂಗಂ ವೃಷಭಂ ತುರಂಗಂ ।
ಮಹಾಂಗಚರ್ಮಾಂಬರಮುದ್ಯತಾಂಗಂ ।
ಇಂದೂತ್ತಮಾಂಗಂ ಹರಯೇ ರಥಾಂಗಂ ।
ಭೂತೇ ಮಹೋಕ್ಷಾಂಗಗತಂ ಹೃದಕ್ಷಗಂ ॥೩೬॥

॥ ಸ್ಕಂದ ಉವಾಚ ॥

ಇತ್ಥಂ ಸ್ತೌತಿ ಮಹಾದೇವಂ ಧರ್ಮೋ ವೃಷವಪುರ್ಧರಃ ।
ಸ ಏವ ಧರ್ಮೋ ದೇವೇಶಂ ವಹತ್ಯತ್ಯಂತಭಾಸುರಃ ॥೩೭॥

---

ದೇಹವನ್ನು ಸಂಪೂರ್ಣವಾಗಿ ನಾಶಮಾಡಿರತಕ್ಕವನು ನೀನು. ಇಂತಹ ನಿನ್ನನ್ನು ನಾನು ಸರ್ವದಾ ಧ್ಯಾನಿಸುತ್ತೇನೆ. ॥೩೪॥

ಪರಮೇಶ್ವರನೇ, ನಿನ್ನ ಲಿಂಗದ ಮೂಲವನ್ನು ವರಾಹಾವತಾರಮಾಡಿ ಪಾತಾಳಕ್ಕೆ ಹೋದ ವಿಷ್ಣುವೂ, ಕಂಡುಹಿಡಿಯಲಿಲ್ಲ. ಅಲ್ಲದೆ ಪರಸ್ಪರ ಸ್ಪರ್ಧೆಯಿಂದ ಲಿಂಗಮೌಲಿಯನ್ನು ಕಾಣುವೆನೆಂದು ಬ್ರಹ್ಮನೂ, ಲಿಂಗಪಾದವನ್ನು ನೋಡುವೆನೆಂದು ವಿಷ್ಣುವೂ ತಮ್ಮ ವಾಹನಾರೂಢರಾಗಿ ಊರ್ಧ್ವಾಧೋಭಾಗಗಳಿಗೆ ಹೋಗಿ ಕೊನೆಗೂ ಸಫಲರಾಗದೆ ಹಿಂದಿರುಗಿ ಬಂದರಲ್ಲವೆ ? ॥೩೫॥

ಮಹೇಶ್ವರನೇ, ತ್ರಿಪುರಾಸುರರ ಹನನಕಾಲದಲ್ಲಿ ನಿನಗೆ ವಿಷ್ಣುವೇ ಬಾಣವಾದನು. ಅವನಿಗೆ ಆಶ್ರಯವಾಗಿರುವ ಸಮುದ್ರಗಳೇ ಎರಡು ಬತ್ತಳಿಕೆಗಳಾದುವು. ವೃಷಭೇಶ್ವರನೇ ಕುದುರೆಯಾದನು. ಆನೆಯ ಚರ್ಮವೇ ದಿವ್ಯವಾದ ಅಂಬರವಾಯಿತು. ಇಂತಹ ವೇಷವನ್ನು ಧರಿಸಿದ ನಿನಗೆ ಚಂದ್ರನೇ ಶಿರೋಭೂಷಣವಾಗಿರುವನು. ಅಲ್ಲದೆ ಮಹಾವಿಷ್ಣುವಿಗೆ ಚಕ್ರವನ್ನು ಅನುಗ್ರಹಿಸಿ, ಅವನನ್ನು ಪುರುಷಶ್ರೇಷ್ಠನನ್ನಾಗಿ ಮಾಡಿದೆ. ವೃಷಭಾರೂಢನಾಗಿ ಮನ ಇಂದ್ರಿಯಗಮ್ಯನಾಗಿರುವ ಪರಮೇಶ್ವರನೇ, ನಿನಗೆ ವಂದನೆ. ॥೩೬॥

ಹೀಗೆ ಧರ್ಮರೂಪಿಯಾದ ವೃಷಭೇಶ್ವರನು ಮಹೇಶ್ವರನನ್ನು ವಿಧವಿಧವಾಗಿ

ಪ್ರಾಚ್ಯಾಂ ತದ್ಗೋಪುರವರಂ ಪ್ರಾಕಾರಗಣಪೈರ್ವೃತಃ ।
ಪಾತಿ ತದ್ದೇವದೇವಸ್ಯ ಸ್ಮರಹಂತುಶ್ಚ ಶಾಸನಾತ್ ॥೩೮॥

ಶ್ರೀಮತ್ಕೈಲಾಸಶೃಂಗೇ ಶಿವವರಗಣಪೈಸ್ಸಿಂಧುರಾಸ್ಯಾನುಗೈಶ್ಚ ।
ಕೌಮಾರ್ಯೈರ್ಗಣಪೈರ್ವೃಷೇಂದ್ರಗಣಪೈರುದ್ರೈಸ್ಸಮಂತಾದ್ವೃತಂ ।
ನಿಖಿಲಜಗದಧೀಂದ್ರೈರ್ವಿಷ್ಣುನಾ ದೇವಸಂಘೈ ।
ಶ್ಶ್ರುತಿಗಣಮುನಿವರ್ಯೈಶ್ಚಿಂತಿತುಂ ಚಾಕ್ಷಮಂ ತತ್ ॥೩೯॥

ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ಕೈಲಾಸವರ್ಣನೇ
ಶಿವಗೌರೀಸಂವಾದೇ ಪಂಚವಿಂಶೋಽಧ್ಯಾಯಃ

---

ಸ್ತುತಿಸುವನು. ಪ್ರಪಂಚದಲ್ಲಿ ಖ್ಯಾತಿಪಡೆದಿರುವ ಧರ್ಮವೇ ವೃಷಭನು. ಧರ್ಮ ರೂಪಿಯಾದ ವೃಷಭನು ಮಹಾತೇಜಸ್ವಿಯಾದ ಪರಶಿವನನ್ನು ಹೊತ್ತು ಅದರಿಂದ ತಾನೂ ತೇಜಸ್ವಿಯೆನಿಸಿರುವನು. ॥೩೭॥

ಹಾಗೆ ನಂದೀಶ್ವರನು, ಮಹೇಶ್ವರನ ಅಪ್ಪಣೆಯಂತೆ ಪೂರ್ವಭಾಗದ ಗೋಪುರ ಗಳಿಂದ ಅಲಂಕೃತವಾದ ಪ್ರಾಕಾರದಲ್ಲಿ ನೆಲಸಿ, ಆ ಕೈಲಾಸದ ಪ್ರಾಗ್ಭಾಗವನ್ನೆಲ್ಲಾ ರಕ್ಷಿಸುತ್ತಿರುವನು. ॥೩೮॥

ಇಂತಹ ಸಂಪದ್ಯುಕ್ತವಾದ ಕೈಲಾಸಪರ್ವತದ ಅಗ್ರಭಾಗದಲ್ಲಿ ಮಹೇಶ್ವರನು ಸದಾ ಆನಂದಮಯನಾಗಿ ನೆಲಸಿರುವನು. ಅವನ ಸುತ್ತಲೂ ಶ್ರೇಷ್ಠರಾದ ಶಿವಗಣ ಗಳೂ, ವಿಘ್ನೇಶ್ವರನೂ, ಪ್ರಮಥಗಣಗಳೂ ಸರ್ವದಾ ನಿಂತು ಸ್ವಾಮಿಯನ್ನು ಸೇವಿಸುತ್ತಿರುವುವು. ಅಷ್ಟಲ್ಲದೇ ಕುಮಾರಸ್ವಾಮಿಯೂ, ಅವನ ಅನುಚರರೂ, ನಂದೀಶ್ವರನೂ, ಅವನ ಸೇವಕರೂ, ಏಕಾದಶರುದ್ರರೂ, ಅವನ ಸಭೆಯಲ್ಲಿ ಸರ್ವದಾ ಶೋಭಿಸುತ್ತಿರುವರು. ಅಷ್ಟಲ್ಲದೆ, ಸಮಸ್ತ ಜಗತ್ತಿಗೂ, ಒಡೆಯರೆನಿಸಿರುವ ದೇವ ಸಂಘಗಳೂ, ಬ್ರಹ್ಮ, ವಿಷ್ಣು ಮೊದಲಾದ ಮೂರ್ತಿಶ್ರೇಷ್ಠರೂ, ಪರಶಿವನ ಸ್ವರೂಪ ವನ್ನೇ ಚಿಂತಿಸುತ್ತಿರುವರು. ವೇದಸಮೂಹಗಳೂ, ಮುನಿವರ್ಯರೂ ಸಹ ಮಹಾದೇವ ನನ್ನು ಸರ್ವದಾ ಧ್ಯಾನಿಸುತ್ತಾ, ಕೊನೆಗೂ ಅವನ ನಿಜಸ್ವರೂಪವನ್ನು ಅರಿಯ ಲಾರದೆ ಅಸಮರ್ಥರಾಗುತ್ತಿರುವರು. ಇಂತಹ ಮಹಾಮಹಿಮನಾದ ಭಗವಂತನಿಗೆ

ಕೈಲಾಸವು ಆವಾಸಸ್ಥಾನವೆನಿಸಿ ಪ್ರಸಿದ್ಧಿಗೊಂಡಿದೆ, ಎಂದು ಸೂತಮಹರ್ಷಿಗಳು ಮೌನಿಭಾರ್ಗವಾದಿಗಳಿಗೆ ಹೇಳಿದರು. ||೩೯||

ಇಲ್ಲಿಗೆ ಶ್ರೀ ಶಿವರಹಸ್ಯದ ಪ್ರಥಮಾಂಶದಲ್ಲಿ ಕೈಲಾಸಪರ್ವತದ
ವರ್ಣನಾಭಾಗದಲ್ಲಿ ವೃಷಭೇಶ್ವರನು ಮಹೇಶ್ವರನನ್ನು ಸ್ತುತಿಸಿದ,
ಇಪ್ಪತ್ತೈದನೆಯ ಅಧ್ಯಾಯವು ಮುಗಿದುದು

|| ಶ್ರೀಃ ||

# ಅಥ ಶ್ರೀಶಿವರಹಸ್ಯೇ

## ಷಡ್ವಿಂಶೋಽಧ್ಯಾಯಃ

### ದೇವೀಪ್ರಸ್ತಾವವರ್ಣನಂ

|| ಸ್ಕಂದ ಉವಾಚ ||

**ತದುತ್ತರೇಽಸ್ತಿ ಪ್ರಾಕಾರೋ ವೈಡೂರ್ಯಮಣಿರಂಜಿತಃ ।**
**ವೈಡೂರ್ಯಾನಂತಸೂತ್ರೈಶ್ಚ ಪೀತಾಸ್ತತ್ರಸ್ಥದಿಕ್ತಟಾಃ ॥೧॥**

**ತತ್ರ ಗೋಪುರಮುತ್ತುಂಗಂ ವೈಡೂರ್ಯಮಣಿಶೋಭಿತಂ ।**
**ಆಪೀತಶಿಖರಪ್ರೋತರುದ್ರಚಾರಿತ್ರಶೋಭಿತಂ ॥೨॥**

**ಪಂಚಲಕ್ಷಪ್ರಮಾಣೇನ ಮಹಾವೈಡೂರ್ಯಸದ್ವೃಷಂ ।**
**ಪಟ್ಟಿಕಾದೇವಕೋಷ್ಠೈಶ್ಚ ಕಾಪೋತೈಃ ಪಾಲಿಪಾಲಿಕೈಃ ॥೩॥**

---

ಶ್ರೀಶಿವರಹಸ್ಯದಲ್ಲಿ ಇಪ್ಪತ್ತಾರನೆಯ ಅಧ್ಯಾಯ

ಮತ್ತೆ ಕುಮಾರಸ್ವಾಮಿಯು ಜೈಗೀಷವ್ಯಾದಿಗಳಿಗೆ ಕೈಲಾಸಪರ್ವತದ ವಿಷಯವಾಗಿ ಹೇಳುತ್ತಾ ಹೀಗೆಂದನು.—“ಋಷಿವರ್ಯರೇ, ಆ ಕೈಲಾಸದ ಉತ್ತರ ಭಾಗದಲ್ಲಿ ವೈಡೂರ್ಯಮಣಿಗಳಿಂದ ಪ್ರಕಾಶಿತವಾದ ಮತ್ತೊಂದು ಪ್ರಾಕಾರವಿರುವುದು. ಆ ವೈಡೂರ್ಯದ ಧಾರಾರೂಪವಾದ ತೇಜಸ್ಸಿನಿಂದ ಆ ದಿಗ್ಭಾಗವೆಲ್ಲಾ ಹಳದಿಯ ಬಣ್ಣದಿಂದ ರಂಜಿಸುತ್ತಿರುವುದು. ||೧||

ಆ ಪ್ರಾಕಾರಕ್ಕೆ ಎತ್ತರವಾದ ಗೋಪುರವೊಂದಿರುವುದು. ಅದೂ ಸಹ ವೈಡೂರ್ಯ ಮಣಿ ನಿರ್ಮಿತವಾದದ್ದೇ. ಗೋಪುರದ ಶಿಖರಭಾಗದಲ್ಲಿ ಪರಶಿವನ ಅವತಾರದ ವಿಗ್ರಹಗಳು ವಿರಾಜಿಸುತ್ತಿರುವುವು. ||೨||

ಅದು ಐದುಲಕ್ಷ ಪ್ರಮಾಣದಷ್ಟು ಎತ್ತರವಾಗಿರುವುದು. ಅಲ್ಲಲ್ಲಿ ವೈಡೂರ್ಯ ಮಣಿಯಿಂದಲೇ ನಿರ್ಮಿತವಾದ ಬಸವನ ವಿಗ್ರಹಗಳಿರುವುವು. ಪ್ರಭಾವಳಿಗಳೂ,

**ಮಣಿಕುಂಭೋಲ್ಲಸಚ್ಛುಭ್ರಂ ತತ್ತು ಪಂಚಶತಾಂಚಿತಂ ।**
**ನವಲಕ್ಷಂ ರುದ್ರಗಣಾಶ್ಶಂಭೋರುದ್ಯತರಾಸ್ತ್ರಕಾಃ ॥೪॥**

**ತ್ರಿಪುಂಡ್ರವಿಲಸತ್ಫಾಲಾಃ ಕಪರ್ದಧೃತಚಂದ್ರಕಾಃ ।**
**ಮತ್ತಮಾತಂಗಸಂಕಾಶಾ ಯುವಾನೋ ಮೃಷ್ಟಕುಂಡಲಾಃ ॥೫॥**

**ರಕ್ಷಂತಿ ಪರಿತಸ್ತಚ್ಚ ಸ್ಪ್ರಾಕಾರಂ ವರಗೋಪುರಂ ।**
**ತಸ್ಯಾಂತರೇ ಹಿ ಸುಮಹನ್ನಾನಾಮಣಿಗಣಾಂಚಿತಂ ॥೬॥**

**ದೇವ್ಯಾಸ್ತು ಭವನಂ ಶ್ರೀಮತ್ಸೌಧಪಂಕ್ತಿವಿಭೂಷಿತಂ ।**
**ರಮ್ಯಮಾಣಿಕ್ಯಖಚಿತಸ್ತಂಭಾಪಾರಸಹಸ್ರಕೈಃ ॥೭॥**

---

ದೇವತಾವಿಗ್ರಹಗಳಿಂದ ಕೂಡಿದ ಕೋಣೆಗಳು, ಕಪೋತಪಕ್ಷಿಗಳಿಗೆ ಮತ್ತು ಇತರ ವಿಧವಾದ ಸುಂದರ ಪಕ್ಷಿಗಳಿಗೆ ಆವಾಸಸ್ಥಾನವಾದ ಪ್ರದೇಶಗಳೂ ಅಲ್ಲಿ ಕಂಡುಬರುತ್ತಿವೆ. ||೩||

ಅದರಲ್ಲಿ ಐದುನೂರು ರತ್ನಕಲಶಗಳಿರುವುವು. ಅಲ್ಲಿ ಶಂಕರನ ಸೇವಕರಾದ ರುದ್ರಗಣಗಳು ಸರ್ವದಾ ಆಯುಧಪಾಣಿಗಳಾಗಿ ಒಂಬತ್ತುಲಕ್ಷಸಂಖ್ಯೆಯಲ್ಲಿ ಅದನ್ನು ರಕ್ಷಿಸುತ್ತಿರುವರು. ||೪||

ಅವರು ಹಣೆಯಲ್ಲಿ ಭಸ್ಮತ್ರಿಪುಂಡ್ರವನ್ನೂ, ಜಟೆಯಲ್ಲಿ ಚಂದ್ರಕಲೆಯನ್ನೂ ಧರಿಸಿರುವರು. ಮದ್ದಾನೆಯಂತೆ ಶಕ್ತರಾಗಿರುವರು. ಹೊಳೆಯುವ ಕುಂಡಲಗಳು ಅವರ ಕಿವಿಯನ್ನು ಅಲಂಕರಿಸುತ್ತಿರುವುವು. ವಯಸ್ಸಿನಲ್ಲಿ ಎಲ್ಲರೂ ಯುವಕರೇ.||೫||

ಅವರೆಲ್ಲರೂ ಒಟ್ಟಾಗಿ ಸೇರಿ ಆ ಪ್ರಾಕಾರವನ್ನೂ ಶ್ರೇಷ್ಠವಾದ ಗೋಪುರವನ್ನೂ ಎಚ್ಚರಿಕೆಯಿಂದ ರಕ್ಷಿಸುತ್ತಿರುವರು. ಆ ಪ್ರಾಕಾರದ ಒಳಭಾಗದಲ್ಲಿ ದಿವ್ಯರತ್ನಗಳಿಂದ ಶೋಭಿತವಾದ ದೇವಿಯ ಭವನವೊಂದಿರುವುದು. ||೬||

ಅದಕ್ಕೆ ಅನೇಕ ಉಪ್ಪರಿಗೆಗಳಿರುವುವು. ಆ ಭವನದಲ್ಲೆಲ್ಲಾ ರತ್ನಗಳಿಂದಲೂ ಮಾಣಿಕ್ಯಗಳಿಂದಲೂ ವಿರಚಿತವಾದ ಅಸಂಖ್ಯಾತ ಕಂಬಗಳು ಕಂಗೊಳಿಸುತ್ತಿರುವುವು. ||೭||

ಹೀರಸಾರಮಹಾಧಾರ್ಯೈಃ ಪುಷ್ಯರಾಗಾಂಗನೀಲಕೈಃ ।
ವೈಡೂರ್ಯಕೈಶ್ಚ ಗೋಮೇದೈರ್ಮುಕ್ತಾವಿದ್ರುಮಕಲ್ಪಿತೈಃ ॥೮॥

ಪುಷ್ಪರಾಗಮಣೀಕ್ಲುಪ್ತೈರ್ಗೋಮೇದವಲಭೀಯುತೈಃ ।
ಹರಿನ್ಮಣಿವರೋದ್ಭೂತೈರ್ಮುಕ್ತಾಮಣಿಸರೋಜ್ಜ್ವಲೈಃ ॥೯॥

ಸುಪ್ರವಾಲಲತಾಸ್ತಂಭೈಃ ಕುರುವಿಂದೋರುವೇದಿಕೈಃ ।
ತತ್ರ ಪ್ರಾಕಾರಮಸ್ತ್ಯೇಕಂ ಚಂದ್ರಕಾಂತಶಿಲಾನ್ವಿತಂ ॥೧೦॥

ವಿಂಶತ್ಸಹಸ್ರಮಾನೇನ ಯೋಜನೇನ ಪ್ರಕಲ್ಪಿತಂ ।
ಚತುರ್ದ್ವಾರಪರೀಕ್ಲುಪ್ತಮಹಾಗೋಪುರವೇದಿಕೈಃ ॥೧೧॥

ರತ್ನಹೀರಕಗೋಮೇದಪುಷ್ಪರಾಗವಿನಿರ್ಮಿತೈಃ
ಬಾಲಪ್ರಭಾಕರಕರೈರ್ಮಣಿಶೃಂಗವಿರಾಜಿತೈಃ ॥೧೨॥

---

ಆ ಕಂಬಗಳಲ್ಲಿ ದಪ್ಪವಾದ ರತ್ನಗಳು ಮಧ್ಯದಲ್ಲಿ ಸಾಲುಸಾಲಾಗಿ ಕಾಣುತ್ತಿರುವುವು. ಪುಷ್ಪರಾಗಗಳನ್ನೂ, ನೀಲಗಳನ್ನೂ, ವೈಡೂರ್ಯ, ಗೋಮೇದಕ, ಮುತ್ತು, ಹವಳ, ಇವುಗಳನ್ನೂ ಸಾಲುಸಾಲಾಗಿ ನೆಟ್ಟು ಆ ಕಂಬಗಳನ್ನು ಅಲಂಕರಿಸಿರುವರು. ॥೮॥

ಹೂವಿನರಾಗವನ್ನು ಸೂಚಿಸುವ ರತ್ನಗಳಿಂದಲೂ, ಗೋಮೇದಮಣಿಗಳಿಂದಲೂ, ಥಾರಂಭವನ್ನು (ವಲಭೀ) ರಚಿಸಿರುವರು. ಹಸುರುರತ್ನ, ಮುತ್ತು ಮುತ್ತುಗಳು ಇವುಗಳನ್ನು ಸೇರಿಸಿ ಮಾಲೆಯನ್ನಾಗಿಮಾಡಿ ಅಲಂಕರಿಸಿರುವರು. ॥೯॥

ಹವಳದ ಲತೆಗಳಿಂದ ಕೂಡಿದ ಕಂಬಗಳೂ, ದೊಡ್ಡ ತುಂಗಮುಸ್ತೆಯ ಹೂವಿನಂತೆ ಶುಭ್ರವಾಗಿರುವ ಜಗುಲಿಗಳೂ ವಿಶಾಲವಾಗಿರುವುವು, ಇಂತಹ ಪ್ರಾಕಾರದ ಮಧ್ಯದಲ್ಲಿ ಮತ್ತೊಂದು ಪ್ರಾಕಾರವಿರುವುದು. ಅದು ಕೇವಲ ಚಂದ್ರಕಾಂತಶಿಲೆಯಿಂದಲೇ ನಿರ್ಮಿತವಾದುದು. ॥೧೦॥

ಅದು ಇಪ್ಪತ್ತುಸಾವಿರಯೋಜನ ಪ್ರಮಾಣದಲ್ಲಿರುವುದು. ಅದಕ್ಕೆ ನಾಲ್ಕು ಮಹಾದ್ವಾರಗಳಿರುವುವು। ಒಂದೊಂದು ದ್ವಾರಕ್ಕೂ ಒಂದೊಂದು ದೊಡ್ಡ ಗೋಪುರವಿರುವುದು. ॥೧೧॥

**ದೇವೀಕ್ರೀಡಾರಸೈಸ್ಸಿಂಹೈಃ ಪರ್ಯಂತಾವಲಿಶೋಭಿತೈಃ ।**
**ಶರಚ್ಚಂದ್ರಸಮಾಕಾರೈಸ್ಸ್ಫಟಿಕೋತ್ತಮರಂಜಿತೈಃ ॥೧೩॥**

**ವಿಕೃತಾಸ್ಯಲಲಜ್ಜಿಹ್ವೈಸ್ಸಟಾಶೋಭಿತಕಂಧರೈಃ ।**
**ತತ್ರಾಂತರ್ಭವನಂ ದೇವ್ಯಾ ದಶಸಾಹಸ್ರಕಲ್ಪಿತಂ ॥೧೪॥**

**ಯೋಜನಾನಾಂ ಚ ಪರಿತೋ ನವರತ್ನವಿಚಿತ್ರಿತಂ ।**
**ಉದ್ಯದಿಂದುಕರಪ್ರಖ್ಯಂ ನಾನಾಶಿಲ್ಪೈಕಸುಂದರಂ ॥೧೫॥**

**ತತ್ರ ದೇವ್ಯಾ ಮಹಾಪೀಠಂ ಕೋಟಿಭಾಸ್ಕರಸನ್ನಿಭಂ ।**
**ಹೀರತಾರಾಗಣಾಕಾರಪ್ರಭಾವಲಿವಿರಾಜಿತಂ ॥೧೬॥**

---

ಆ ಗೋಪುರಗಳಿಗೆ ರತ್ನದ ಶಿಖರಗಳಿರುವುವು. ಅವುಗಳಲ್ಲಿ ಹೀರಕಮಣಿಗಳೂ ಗೋಮೇದ, ಪುಷ್ಪರಾಗ, ಮುಂತಾದ ಅಮೂಲ್ಯ ವಸ್ತುಗಳೂ, ಇರುವುದರಿಂದ, ಅವೆಲ್ಲವೂ ಬಾಲಸೂರ್ಯಾಕಾರದಿಂದ ಸರ್ವದಾ ಹೊಳೆಯುತ್ತಿರುವುವು. ||೧೨||

ಆ ಪ್ರಾಕಾರದ ಸುತ್ತಲೂ ದೇವಿಯ ಕ್ರೀಡಾಮೃಗಗಳಾದ ಸಿಂಹಗಳು ಓಡಾಡುತ್ತಿರುವುವು. ಅವುಗಳು ಶರಚ್ಚಂದ್ರನಂತೆಯೂ, ಸ್ಫಟಿಕಮಣಿ ನಿರ್ಮಿತವಾದ ವುಗಳಂತೆಯೂ, ಕಾಣುತ್ತಿರುವುವು. ||೧೩||

ಸಿಂಹಗಳು ತಮ್ಮ ಬಾಯನ್ನು ತೆರೆದುಕೊಂಡು ನಾಲಗೆಗಳನ್ನು ಸರ್ವದಾ ಅಲ್ಲಾಡಿಸುತ್ತಲೇ ಇರುವುವು. ಕತ್ತಿನಲ್ಲಿ ಕೇಸರವು ಮನೋಹರವಾಗಿ ಕಾಣುತ್ತಿರುವುದು. ಹೀಗೆ ದೇವಿಯ ಗೃಹದಲ್ಲಿ ಹತ್ತುಸಾವಿರ ಅಂತರ್ಭವನಗಳಿರುವುವು. ||೧೪||

ಈ ಮಧ್ಯಭವನದಲ್ಲಿ, ಅನೇಕ ಯೋಜನಗಳಳತೆಯಲ್ಲಿ, ನವರತ್ನಮಯವಾಗಿ, ಬಾಲಚಂದ್ರನಂತೆ ಹೊಳೆಯುತ್ತಾ, ಅನೇಕ ಶಿಲ್ಪಕಲೆಗಳಿಂದ ಚಿತ್ರಿತವಾಗಿರುವ ದಿವ್ಯಸಿಂಹಾಸನವೊಂದಿರುವುದು. ||೧೫||

ಅದು ಕೋಟಿ ಸೂರ್ಯರ ತೇಜಸ್ಸಿಗೆ ಸಮನಾಗಿ ಹೊಳೆಯುವುದು. ಅನೇಕ ರತ್ನಗಳು ಪ್ರತ್ಯೇಕವಾದ ನಕ್ಷತ್ರಗಳಂತೆ ಹೊಳೆಯುತ್ತಿರುವುವು. ರತ್ನಗಳ ಕಾಂತಿಯು ಆ ಪೀಠವನ್ನೆಲ್ಲಾ ಬೆಳಗಿಸುತ್ತಿರುವುದು. ||೧೬||

ನವರತ್ನಮಹಾಸೌಧಮಧ್ಯಗಾ ಶ್ರೀಮಹೇಶ್ವರೀ ।
ಕಮಲಾಮೋದಬಹುಲಪರ್ಯಂತಸರಸೋಜ್ಜ್ವಲಾ ॥೧೭॥

ಸೌಧಮಧ್ಯಮಣೀಕ್ಲುಪ್ತಸಿಂಹಾಸನವರಾಶ್ರಯಾ ।
ಹರಿನ್ಮಣಿಮಹಾಮಂಚದರಾಂದೋಲಿತವಿಗ್ರಹಾ ॥೧೮॥

ಹಲ್ಲೀಶಲ್ಲಾಸ್ಯಲಲಿತಯೋಗಿನೀಗಣಸೇವಿತಾ ।
ಕದಾಚಿತ್ಸಾ ಮಹಾದೇವೀ ಪ್ರವಾಳವರಪೀಠಯಾ ॥೧೯॥

ಪ್ರವಾಳವರಪೀಠಸ್ಥರತ್ನಪೀಠವರಾಶ್ರಯಾ ।
ಮಾಣಿಕ್ಯಸೌಧಮಧ್ಯಸ್ಥಾ ಭೂಷಿತಾ ಚಾರುಭೂಷಣೈಃ ॥೨೦॥

ಕದಾಚಿತ್ಪುಷ್ಯರಾಗೋತ್ಥಸೌಧಮಧ್ಯೈಕವಾಸಿನೀ ।
ಲೀಲಾ[1]ಕುತುಕಭೂತಾಚ್ಛರವಿಸೋಮಜಕಂತು(ದು)ಕಾ ॥೨೧॥

---

ಅಲ್ಲಿ ನವರತ್ನಗಳೂ ಕಾಣಬರುವುವು. ಅಂತಹ ಪೀಠದಲ್ಲಿ ಮಹೇಶ್ವರಿಯು ಮಂಡಿಸಿರುವಳು. ದೇವಿಯ ಸುತ್ತಲೂ ಕಮಲಗಳ ಸುವಾಸನೆಯು ವ್ಯಾಪಿಸಿರುವುದು. ||೧೭||

ದೇವಿಯ ಸಿಂಹಪೀಠವಾದರೋ ದಿವ್ಯಸೌಧದ ಮಧ್ಯಭಾಗದಲ್ಲಿ ರತ್ನಮಯವಾಗಿ ರಂಜಿಸುತ್ತಿರುವುದು. ಮತ್ತು ಹಸುರು ಪಚ್ಚೆಗಳಿಂದ ರಚಿತವಾದ ದೊಡ್ಡ ತೂಗುಮಂಚದಲ್ಲಿ ಕುಳಿತು ಉಯ್ಯಾಲೆಯಾಡುವಳು. ||೧೮||

ಹಲ್ಲೀಶವೆಂಬ ನಾಟ್ಯವಿಶೇಷ (ಪುರುಷರ ಶಿಕ್ಷಣದಿಂದ ಸ್ತ್ರೀಯರು ಮಾಡುವ ನರ್ತನ) ದಿಂದ ಮನೋಹರವಾಗಿ ನರ್ತಿಸುವ ಯೋಗಿನಿಯರು ಸರ್ವದಾ ಪ್ರವಾಳ ಪೀಠದಲ್ಲಿ ಮಂಡಿಸಿರುವ ದೇವಿಯನ್ನು ಸೇವಿಸುತ್ತಿರುವರು. ||೧೯||

ಮತ್ತೆ ದೇವಿಯು ಪ್ರವಾಳಗಳ ಪೀಠದಲ್ಲಿ, ರತ್ನಾಸನದಮೇಲೆ ಕುಳಿತುಕೊಳ್ಳುವಳು. ಮತ್ತು ಮನೋಹರವಾದ ಒಡವೆಗಳಿಂದ ಭೂಷಿತಳಾಗಿ ಮಾಣಿಕ್ಯಮಯವಾದ ಸೌಧಮಧ್ಯದಲ್ಲಿ ಮಂಡಿಸುವಳು. ||೨೦||

ಕೆಲವು ವೇಳೆ ದೇವಿಯು ಪುಷ್ಯರಾಗಮಣಿ ಪೀಠದಲ್ಲಿ ಕುಳಿತು, ಸೌಧಮಧ್ಯದಲ್ಲಿ ವಾಸಮಾಡುತ್ತಾ, ವಿಹಾರಾರ್ಥವಾಗಿ ಸೂರ್ಯ ಚಂದ್ರರೆಂಬ ಎರಡು ಗೋಳಾ

**ಹಸನಾಚ್ಚ ತಯೋರೂರ್ಧ್ವಾರ್ಧೋಗತ್ಯೈಸ್ಸತತಂ ದ್ವಿಜ ।**
**ಉದೇತಿ ಸೂರ್ಯಶ್ಚಂದ್ರಶ್ಚಾಪ್ಯಸ್ತಮೇತ್ಯಪ್ಯುದೇತಿ ಚ ॥೨೨॥**

**ಕರತಾಲೇನ ದೇವ್ಯಾಸ್ತು ತಸ್ಮಿನ್ ಸೌಧವರಾಗ್ರತಃ ।**
**ರತ್ನಸೌಧಕಲೋದ್ದಾಮಜಾಲಕಾಂತರಸಂಚರಾ ॥೨೩॥**

**ಸುಧಾಕರಕರಾಸ್ಫಾರಪ್ರಾಸಾದವರಕೌತುಕಾ ।**
**ಪುಷ್ಪವಾಟೀಪರಿವೃತರತ್ನಸೌಧವರಾಶ್ರಯಾ ॥೨೪॥**

**ಕುಮಾರಾಗಾರಮಧ್ಯಸ್ಥಾ ಕದಾಚಿದ್ವರದಾ ಶಿವಾ ।**
**ಪುಷ್ಪಮಂಚಕಮಧ್ಯಸ್ಥಾ ಪುಷ್ಪರಾಗಗೃಹಾಂತರೇ ॥೨೫॥**

---

ಕಾರವಾದ ವಸ್ತುಗಳನ್ನು ಚೆಂಡಿನಂತೆ ಭಾವಿಸಿ ಕೈಯಿಂದ ಹೊಡೆಯುತ್ತಿರುವಳು. ॥೨೧॥

ಆ ಹೊಡೆತದಿಂದ ಮೇಲೆ, ಕೆಳಗೆ ಹೋಗುವ ಸೂರ್ಯಚಂದ್ರರು, ಜನರಿಗೆ ಉದಯ, ಅಸ್ತಮನವೆಂಬ ಹೆಸರಿನಿಂದ ತೋರಿಬರುವರು. ಮೇಲುಭಾಗದಲ್ಲಿ ಕಾಣುವುದೇ ಉದಯ, ಅಧೋಭಾಗದಲ್ಲಿ ಕಾಣದಿರುವುದೇ ಅಸ್ತ. ॥೨೨॥

ದೇವಿಯ ಕರತಲದಿಂದ ಸೂರ್ಯಚಂದ್ರರು ಆ ಸೌಧದ ಅಗ್ರಭಾಗದಲ್ಲಿ ಹೀಗೆ ಪ್ರಕಾಶಿಸುತ್ತಿರುವರು. ರತ್ನಮಯವಾದ ಸೌಧದ ಒಳಭಾಗದಲ್ಲಿರುವ ಕಿಟಿಕಿಗಳ ಸಮೀಪದಲ್ಲಿ ದೇವಿಯು ಈರೀತಿ ವಿಹರಿಸುತ್ತಿರುವಳು. ॥೨೩॥

ದೇವಿಯು, ಚಂದ್ರಿಕೆಯಿಂದ ಮನೋಹರವಾಗಿರುವ ಉಪ್ಪರಿಗೆಯಲ್ಲಿ ಕುತೂಹಲದಿಂದ ಸಂಚರಿಸುವಳು. ಸುತ್ತಲೂ ಹೂದೋಟಗಳಿಂದ ಆವೃತವಾಗಿರುವ ದಿವ್ಯ ಹರ್ಮ್ಯದಲ್ಲಿ ಸರ್ವದಾ ವಾಸಿಸುವಳು. ॥೨೪॥

ಒಂದೊಂದುವೇಳೆ ಕುಮಾರಸ್ವಾಮಿಯ ಮನೆಗೆ ಹೋಗುವಳು. ಅಲ್ಲಿ ಪುಷ್ಪಮಂಚದ ಮಧ್ಯದಲ್ಲಿ ವಿರಾಜಿಸಿ, ಭಕ್ತರಿಗೆಲ್ಲಾ ವರಪ್ರದಾನಮಾಡುವಳು. ಆ ಮಂಚವಾದರೋ ಪುಷ್ಯರಾಗಮಯವಾದ ಮನೆಯ ಒಳಭಾಗದಲ್ಲಿರುವುದು. ॥೨೫॥

ರತ್ನವೀಟಿಕೆರಾ ಭಾಸ್ವದ್ರತ್ನಕಂಕಣಭೂಷಿತಾ ।
ಕದಂಬವನಮಧ್ಯಸ್ಥಹೀರಸೌಧವರಾಶ್ರಯಾ ॥೨೬॥

ಲೀಲಾಲಾಲಿತರತ್ನಾಚ್ಛಕೀರವೀರಕರಾ ಶಿವಾ ।
ಶಾರಿಕಾವ್ಯಕ್ತಕಗಿರಾ ತುಷ್ಟಾ ನೀಲಜಸೌಧಗಾ ॥೨೭॥

ಸುದೀಪಿತಮಹಾನೀಲಕಬರಭ್ರಾಂತಿಮಸ್ತಕಾ ।
ವರಭೂಷಣಭೂಷಾಢ್ಯಾ ರಣಚ್ಛಿಂಜಾನಪಾದುಕಾ ॥೨೮॥

ರತ್ನಪಾತ್ರಸ್ಥಿತಾನೇಕಫಲಾಲೋಕನತತ್ಪರಾ ।
ಪುಷ್ಪಗುಚ್ಛಮಹಾಹಾರಾಪ್ಯಾಪೀಡಾಮೋದಹಸ್ತಕಾ ॥೨೯॥

ಸುಧಾಮುಖರಿತಾಮೋದರತ್ನಪಾತ್ರಕರಾ ಕ್ವಚಿತ್ ।
ಮುಕುಟೋದ್ದಾಮಚಂದ್ರಾಂಶುರಶ್ಮಿಸಾರಾಲಕಾ ಶಿವಾ ॥೩೦॥

---

ಕೈಯಲ್ಲಿ ರತ್ನದ ಉಂಗುರವನ್ನೂ, ಪ್ರಕಾಶಮಾನವಾದ ಕೈಬಳೆಗಳನ್ನೂ ದೇವಿಯು ಧರಿಸಿರುವಳು. ಅಲ್ಲದೆ ಕದಂಬವನದ ಮಧ್ಯದಲ್ಲಿ ರತ್ನಮಯವಾದ ಸೌಧಾಗ್ರದಲ್ಲಿ ಓಡಾಡುವಳು. ॥೨೬॥

ಆಟಕ್ಕಾಗಿ ಸಾಕಿದ, ರತ್ನದಂತೆ ಹೊಳೆಯುತ್ತಿರುವ ಗಿಳಿಯನ್ನು ಕೈಯಲ್ಲಿ ಹಿಡಿದು ಆಡಿಸುತ್ತಿರುವಳು. ಮತ್ತು ನೀಲಮಯವಾದ ಸೌಧದಲ್ಲಿ ನಿಂತು ಶಾರಿಕಾ ಪಕ್ಷಿಗಳ ಅವ್ಯಕ್ತಮಧುರಧ್ವನಿಯನ್ನು ಕೇಳಿ ಹರ್ಷಗೊಳ್ಳುವಳು. ॥೨೭॥

ನೀಲರತ್ನದ ಕಾಂತಿಯು ದೇವಿಯ ಶಿರಸ್ಸಿನಲ್ಲಿ ಹರಡಿರುವುದರಿಂದ ನೋಡುವವರಿಗೆ ದೇವಿಯ ತಲೆಗೂದಲು ಕೆದರಿರುವುದೋ ಎಂಬ ಭ್ರಾಂತಿಯುಂಟಾಗುವುದು. ಹಾಗೆ ಅನೇಕ ಒಡವೆಗಳಿಂದಲೂ, ಧ್ವನಿಗೈಯ್ಯುವ ಪಾದುಕೆಗಳಿಂದಲೂ, ದೇವಿಯು ವಿರಾಜಿಸುತ್ತಿರುವಳು. ॥೨೮॥

ರತ್ನಪಾತ್ರೆಗಳಲ್ಲಿರುವ ಅನೇಕ ಮಧುರವಾದ ಹಣ್ಣುಗಳನ್ನು ದೇವಿಯು ನೋಡುವಳು. ಅನೇಕ ಸುಗಂಧಮಯವಾದ ಪುಷ್ಪಗಳ ಹಾರವನ್ನು ಧರಿಸಿದ್ದರೂ, ಪ್ರತ್ಯೇಕವಾದ ಹೂವನ್ನು ಕೈಯಲ್ಲಿ ಹಿಡಿದು ವಾಸನೆ ನೋಡುತ್ತಿರುವಳು. ॥೨೯॥

ದೇವಿಯು ಒಂದೊಂದುಸಾರಿ ಅಮೃತಪೂರಿತವಾಗಿ ಸುಗಂಧಮಯವಾದ ರನ್ನಪಾತ್ರೆಯನ್ನು ಕೈಯಲ್ಲಿ ಹಿಡಿದಿರುವಳು. ಕಿರೀಟದಲ್ಲಿ ನೆಲಸಿರುವ ಚಂದ್ರನ

**ಸುರತ್ನಕಂದುಕಾಸ್ರಾವಿಕೇಶಪಾಶಾ ಮನೋಹರಾ ।**
**ಯೋಗಿನೀದರ್ಶಿತಾನೇಕರತ್ನಾದರ್ಶವಿಲೋಕಿನೀ ॥೩೧॥**

**ಚಂದ್ರಕಾಂತಶಿಲಾಜಾಲಸೌಧಮಧ್ಯನಿವಾಸಿನೀ ।**
**ನಯನಾಂಜನಕಾಕ್ಲಿಪ್ತರತ್ನಭ್ರಾಜಚ್ಛಲಾಕಿಕಾ ॥೩೨॥**

**ಕರಮುದ್ರಾವಿನಿರ್ಯಚ್ಛ್ರೀರ್ನಖಕಾಂಚಿತಮುದ್ರಿಕಾ ।**
**ಹೀರಭ್ರಾಜಿತಲಾರಕ್ತಭವಿಕಾ ಪದಭಾಸುರಾ ॥೩೩॥**

**ನೀಲವೇಣೀಚಿತಾನೇಕರತ್ನಸೇವಂತಿಕಾತತಿಃ ।**
**ಮಹಾರ್ಹಹೇಮಖಚಿತವಸನಾಂಚಲಮೌಕ್ತಿಕಾ ॥೩೪॥**

---

ಕಿರಣಗಳು ದೇವಿಯ ಮುಂಗುರುಳಿನ ಮೇಲೆ ಬಿದ್ದು ಮುಂಗುರುಳನ್ನು ವಿಶೇಷ ಕಾಂತಿಯುತವನ್ನಾಗಿ ಮಾಡುತ್ತಿರುವುವು. ||೩೦||

ರತ್ನದ ಗೊಂಚಲುಗಳಿಂದ ಕೂಡಿದ ದೇವಿಯ ಕೇಶಪಾಶವು ಅತಿ ಮನೋಹರವಾಗಿರುವುದು. ಅನೇಕ ಯೋಗಿನಿಯರು ರತ್ನಮಯವಾದ ಕನ್ನಡಿಗಳನ್ನು ಹಿಡಿದು ದೇವಿಯ ಎದುರಿನಲ್ಲಿ ನಿಂತಿರುವರು. ಅಂತಹ ಕನ್ನಡಿಗಳನ್ನು ದೇವಿಯು ಸರ್ವದಾ ನೋಡುತ್ತಿರುವಳು. ||೩೧||

ಚಂದ್ರಕಾಂತಶಿಲೆಯಿಂದ ನಿರ್ಮಿತವಾದ ಸೌಧದಲ್ಲಿ ವಾಸಮಾಡುತ್ತಾ, ದೇವಿಯು, ಕಣ್ಣಿಗೆ ಕಾಡಿಗೆಯನ್ನು ಹಚ್ಚುವ ರತ್ನಶಲಾಕೆಯನ್ನು ಕೈಯಲ್ಲಿ ಹಿಡಿದು ನಿಲ್ಲುವಳು. ||೩೨||

ದೇವಿಯ ಕರಮುದ್ರೆಯಿಂದ ಹೊರಡುವ ನಖಕಾಂತಿಯು, ಉಂಗುರದ ಕಾಂತಿಯೊಡನೆ ಬೆರೆದು ಹೊಳೆಯುತ್ತಿರುವುದು. ದೇವಿಯ ಪಾದವು ದಪ್ಪವಾದ ರತ್ನಗಳಿಂದ ಕೂಡಿದ ಆಭರಣಗಳ ಕಾಂತಿಯಿಂದ ರಕ್ತವರ್ಣದಿಂದ ಪ್ರಕಾಶಮಾನವಾಗಿ ತೋರಿಬರುತ್ತಿರುವುದು. ||೩೩||

ತನ್ನ ಕಪ್ಪಾದ ಕೇಶಪಾಶದಲ್ಲಿ ದೇವಿಯು ರತ್ನದ ಸೇವಂತಿಕಾಪುಷ್ಪವನ್ನು ಮುಡಿದಿರುವಳು. ಸುವರ್ಣದಿಂದ ನಿರ್ಮಿತವಾದ ಸೀರೆಯ ಅಂಚಿನಲ್ಲಿ ಮುತ್ತಿನ ಕಸೂತಿಯಿರುವುದು. ಅಂತಹ ವಸ್ತ್ರವನ್ನು ಧರಿಸಿ ರಂಜಿಸುವಳು. ||೩೪||

ಪರಿಧತ್ತೇಽಂಶುಕಂ ದೇವೀ ಮಣಿಭ್ರಾಜಿಗೃಹಾಂತರಂ ।
ಧೂಪಧೂಮಪರಿಷ್ಕಾರಗಂಧಬಂಧೈಕಸುಂದರಂ ॥೩೫॥

ಮಣಿಹರ್ಮ್ಯಾಂತರೇ ಪೀಠೇ ಸುಮನೋಗುಚ್ಛಭಾಸುರೇ ।
ರತ್ನಾಂಶುದೀಪಕೋದ್ದಾಮಪ್ರಭಾಭಾಸಿತದಿಕ್ತಟೇ ॥೩೬॥

ಸಂಸ್ಥಿತಾ ದರ್ಶಿತಾನೇಕರುದ್ರಾಣೀವದನಾಂಬುಜೇ ।
ಸುಚಂದನದ್ರವಾಸಾರವರಾಂಕಿತತನುಚ್ಛವಿಃ ॥೩೭॥

ಸುರಮಂದಾರಪುನ್ನಾಗಕೇತಕೋದ್ಭಾಸಿಶೇಖರಾ ।
ಚಂಪಕಾಶೋಕದಮನೋಶೀರಕಂಟಸುಪಾಟಲೈಃ ॥೩೮॥

ಮಲ್ಲಿಕಾಮಾಲತೀಜಾತೀಧಮ್ಮಿಲ್ಲಭರಶೋಭಿತಾ ।
ಕಸ್ತೂರೀಚಂದ್ರಗಂಧಾಕ್ತಪಟವಾಸೈಕಸುಂದರಾ ॥೩೯॥

---

ಹೀಗೆ ವಿರಾಜಿಸುತ್ತಾ ದೇವಿಯು ರತ್ನಕಾಂತಿಯಿಂದ ಪ್ರಕಾಶಮಾನವಾದ ದಿವ್ಯಮಂಟಪದಲ್ಲಿ, ನವರತ್ನಮಯವೂ, ಪುಷ್ಪಮಾಲೆಗಳಿಂದ ಅಲಂಕೃತವೂ, ತನ್ನ ಕಾಂತಿಯಿಂದ ಸಮಸ್ತ ದಿಕ್ಕುಗಳನ್ನು ಬೆಳಗಿಸತಕ್ಕದ್ದೂ ಆದ ಶ್ರೇಷ್ಠವಾದ ಪೀಠದಲ್ಲಿ ಕುಳಿತುಕೊಳ್ಳುವಳು. ಆ ಮಂಟಪವಾದರೋ, ಧೂಪದೀಪಾದಿಗಳಿಂದಲೂ, ಸುಗಂಧ ವಸ್ತುಗಳಿಂದಲೂ ಕೂಡಿದ್ದಾಗಿ ವಿರಾಜಮಾನವಾಗಿರುವುದು. ॥೩೫-೩೬॥

ಅನೇಕ ರುದ್ರಾಣಿಯರ ಮುಖಕಮಲಗಳಲ್ಲಿ ದೇವಿಯ ಮುಖಬಿಂಬವು ಪ್ರತಿಫಲಿತವಾಗುತ್ತಿರುವುದು. ದೇವಿಯ ದೇಹವಾದರೋ ಒಳ್ಳೆಯ ಚಂದನರಸದಿಂದ ಲೇಪಿತವಾದದ್ದಾಗಿ ಬಹು ಸುಂದರವಾಗಿ ತೋರಿಬರುತ್ತಿರುವುದು. ಅದರೊಡನೆ ನೈಸರ್ಗಿಕವಾದ ದೇಹಕಾಂತಿಯು ಸರ್ವವ್ಯಾಪಿಯಾಗಿ ಕಾಣುತ್ತಿರುವುದು. ॥೩೭॥

ದೇವಿಯು ತನ್ನ ಕೇಶಪಾಶದಲ್ಲಿ, ದೇವಮಂದಾರಪುಷ್ಪ ಮತ್ತು ನಾಗಸಂಪಿಗೆ, ಕೇತಕೀ ಮುಂತಾದ ಪುಷ್ಪಗಳನ್ನು ಮುಡಿದಿರುವಳು. ಅಲ್ಲದೆ ಸಂಪಿಗೆ, ಅಶೋಕ, ದವನ, ಲಾಮಂಚ, ಪಾದರೀ ಈ ಹೂವುಗಳಿಂದಲೂ, ॥೩೮॥

ಮಲ್ಲಿಗೆ, ಮಾಲತೀ, ಜಾಜೀ, ಈ ಪುಷ್ಪಗಳಿಂದಲೂ ಕೂಡಿದ ಪುಷ್ಪಮಾಲೆಯು ದೇವಿಯ ಕೇಶಪಾಶದ ಮೇಲೆ ಶೋಭಿಸುತ್ತಿರುವುದು. ಕಸ್ತೂರೀ, ಚಂದನ,

**ಮೃಗನಾಭಿಸುಗಂಧೋದ್ಯತ್ಕಂಚುಕಾಂತರಿತಭಾಸುರಾ ।**
**ನಿಚೋಲಗ್ರಂಥಿತೋದ್ದಾಮಭುಜಾವಳಿವಿರಾಜಿತಾ ॥೪೦॥**

**ರುದ್ರಾಣೀಕರಸಿಂಧೂರಕ್ಲೃಪ್ತಸೀಮಂತರೇಖಿಕಾ ।**
**ಸುರತ್ನತಿಲಕಭ್ರಾಜಿಸೋಮಧಾಮಸಮಾನನಾ ॥೪೧॥**

**ಹಸ್ತಾಂಗುಲೀಯವಿಲಸತ್ಪ್ರಭಾಭೂಷಿತದಿಕ್ತತಿಃ ।**
**ವೈಡೂರ್ಯಸೌಧಮಧ್ಯಸ್ಥಾ ರುದ್ರಾಣೀನೃತ್ತದರ್ಶಿನೀ ॥೪೨॥**

**ನೀಲರತ್ನಕೃತಾಲಾಬುಮಣಿಸಾರಿಜಹೀರಕೈಃ ।**
**ಊರ್ಧ್ವಬದ್ಧಮಹಾತಂತ್ರೀವೀಣಾವಾದ್ಯಾದರಾ ಕ್ವಚಿತ್ ॥೪೩॥**

---

ಶ್ರೀಗಂಧ ಈ ಸುಗಂಧದ್ರವ್ಯಗಳಿಂದ ಸುವಾಸಿತವಾಗಿರುವ ವಸ್ತ್ರಗಳಿಂದ ದೇವಿಯು ಅಲಂಕೃತಳಾಗಿರುವಳು. ||೩೯||

ಕಸ್ತೂರಿಯು ದೇವಿಯ ಕುಚಗಳಮೇಲೆಲ್ಲಾ ಲೇಪಿತವಾಗಿರುವುದರಿಂದ, ಅದರ ವಾಸನೆಯು ಸರ್ವವ್ಯಾಪಿಯಾಗಿರುವುದು. ರವಿಕೆಯನ್ನು ತೊಟ್ಟು ಅದರ ಮೂಲಕ ಭುಜಗಳ ಕಾಂತಿಯು ಸರ್ವತ್ರ ವ್ಯಾಪಿಯಾಗುವಂತೆ ಮಾಡುತ್ತಿರುವಳು. ||೪೦||

ರುದ್ರಾಣಿಯರು, ತಮ್ಮ ಕೈಯ್ಯಲ್ಲಿ ಸಿಂದೂರಚೂರ್ಣವನ್ನೂ, ಬೈತಲೆಯ ರೇಖೆಯನ್ನೂ ಹಿಡಿದು ದೇವಿಯನ್ನು ಅಲಂಕರಿಸುತ್ತಿರುವರು. ರತ್ನದ ತಿಲಕವು ದೇವಿಯ ಹಣೆಯ ಮಧ್ಯದಲ್ಲಿರುವುದರಿಂದ, ಕಳಂಕಿಯಾದ ಚಂದ್ರನ ಸಾಮ್ಯವನ್ನು ಸಂಪೂರ್ಣವಾಗಿ ದೇವಿಯ ಮುಖವು ಹೋಲುತ್ತಿರುವುದು. ||೪೧||

ದೇವಿಯ ಕೈಯ್ಯಲ್ಲಿರುವ ಉಂಗುರವು ತನ್ನ ಕಾಂತಿಯಿಂದ ಸಕಲ ದಿಕ್ಕುಗಳನ್ನೂ ಬೆಳಗಿಸುತ್ತಿರುವುದು. ರುದ್ರಾಣಿಯರ ನಾಟ್ಯವನ್ನು ನೋಡುತ್ತಾ, ವೈಡೂರ್ಯ ಸೌಧದ ಮಧ್ಯಭಾಗದಲ್ಲಿರುವಳು. ||೪೨||

ನೀಲರತ್ನಗಳಿಂದಲೇ ನಿರ್ಮಿತವಾಗಿರುವ ಬುರುಡೆಯಿಂದ ಕೂಡಿ, ಮೃದುವಾದ ಧ್ವನಿಯನ್ನು ಬೀರುವ, ಮತ್ತು ಹೆಚ್ಚಾದ ತಂತಿಗಳಿಂದ ಸುಂದರವಾದ ವೀಣೆಯನ್ನು ನೋಡುತ್ತಾ ದೇವಿಯು ಶೋಭಿಸುತ್ತಿರುವಳು. ||೪೩||

**ಗಾಯಂತೀ ಮಧುರೋದಾರಂ ಶಿವನಾಮ್ನೈವ ಸುಂದರಂ ।**
**ಶರಚ್ಚಂದ್ರಾಚ್ಛನಿಕರಚಾಮರೈರ್ವೀಜಿತಾ ಕ್ವಚಿತ್ ॥೪೪॥**

**ಮಾಯೂರೈರ್ಮಣಿದಂಡೈಶ್ಚ ವ್ಯಜನೈರ್ವೀಜಿತಾ ಶಿವಾ ।**
**ಪರ್ವೋತ್ಥಶರ್ವರೀನಾಥತಿರಸ್ಕಾರಿಮಣೀಸರೈಃ ॥೪೫॥**

**ಭ್ರಾಜಚ್ಛತ್ರಾವೃತಮುಖಾ ತಾಂಬೂಲರಸನೋದಿತಾ ।**
**ವೀಟಿಕಾಲಗ್ನಸುಕರಾ ಪಶ್ಯಂಶ್ಚಿತ್ರಪಟಂ ಸ್ಥಿತಾ ॥೪೬॥**

**ಸದಾಶಿವಸ್ಯ ತದ್ರೂಪಂ ಲಿಖಿತಂ ಲೇಖಕೇಶಿತುಃ ।**
**ವಿದ್ರುಮಾಭರದಚ್ಛಾದಿಬಿಂಬಾಕಾರಸುಶೋಭಿತಾ ॥೪೭॥**

---

ಆ ವೀಣೆಯನ್ನು ಹಿಡಿದು ಪವಿತ್ರವಾದ ಶಂಕರನನ್ನು ಸ್ತುತಿಸುವ ಹಾಡುಗಳನ್ನೇ ಹಾಡುತ್ತಿರುವಳು. ಅಕ್ಕಪಕ್ಕದಲ್ಲಿ ಶರತ್ಕಾಲದ ಚಂದ್ರನಂತೆ ಹೊಳೆಯುವ ಚಾಮರಗಳಿಂದ ದೇವಿಯು ಸೇವಿತಳಾಗಿರುವಳು. ॥೪೪॥

ಮತ್ತು ನವಿಲುಗರಿಯಿಂದಲೂ, ರತ್ನದ ಹಿಡಿಗಳಿಂದಲೂ ವಿರಾಜಿಸುತ್ತಿರುವ ಬೀಸಣಿಗೆಗಳನ್ನು ಹಿಡಿದು ದೇವಿಯನ್ನು ರುದ್ರಾಣಿಯರು ಉಪಚರಿಸುತ್ತಿರುವರು. ಪರ್ವಕಾಲದಲ್ಲಿ ಹೊಳೆಯುವ ಚಂದ್ರನಂತೆ ಅತಿಯಾಗಿ ಪ್ರಕಾಶಿಸುತ್ತಿರುವ ರತ್ನಹಾರಗಳಿಂದ ಅಲಂಕೃತವಾಗಿರುವ ॥೪೫॥

ಛತ್ರಿಯು, ದೇವಿಯ ಶಿರೋಭಾಗದಲ್ಲಿದ್ದು ದೇವಿಯ ಮುಖವನ್ನು ಮುಚ್ಚುತ್ತಲಿರುವುದು. ಬಾಯಿಯಲ್ಲಿ ತಾಂಬೂಲದ ರಸವೂ, ಕೈಯ್ಯಲ್ಲಿ ತಾಂಬೂಲದ ಮಡಿಕೆಯೂ ಕಾಣುತ್ತಿರುವುದು. ಹಾಗೆಯೇ ತನ್ನ ಎದುರಿನಲ್ಲಿರುವ ಚಿತ್ರಪಟವನ್ನು ನೋಡುತ್ತಿರುವಳು. ॥೪೬॥

ಆ ಚಿತ್ರಪಟದಲ್ಲಿ ಪರಮೇಶ್ವರನ ಚಿತ್ರವನ್ನು ಸುಂದರವಾಗಿ ಬರೆದಿರುವರು. ಅಂತಹ ಚಿತ್ರವನ್ನು ಸಂತೋಷದಿಂದ ನೋಡುವಳು. ಅಲ್ಲದೆ ಹವಳದ ಆಭರಣಗಳನ್ನು ಧರಿಸಿ, ಸುಂದರವಾದ ಆಕಾರವನ್ನು ತಳೆದ ಚಂದ್ರನಂತೆ ದೇವಿಯು ಶೋಭಿಸುತ್ತಿರುವಳು. ॥೪೭॥

**ರತ್ನಗ್ರೈವೇಯಚಿಂತಾಕಲೋಲಮುಕ್ತಾಂಶುಸಪ್ರಭಾ ।**
**ಕ್ವಣತ್ಕಿಂಕಣಿಕಾಭಾಸ್ವದ್ರತ್ನಹಸ್ತಸರೈರ್ಯುತಾ ॥೪೮॥**

**ತಪನೋಡುಪವಿಭ್ರಾಜಿತಾಟಂಕಯುಗಲಾಧೃತಿಃ ।**
**ಉದ್ಯಚ್ಛುಕ್ರನಿಭಾತ್ಯಚ್ಛಮುಕ್ತಾನಾಸಾವೃತಾಸ್ಯಕಾ ॥೪೯॥**

**ರತ್ನಗಂಗಾಮಹಾಸಾರಧಾರಾಗೃಹವರಾಶ್ರಯಾ ।**
**ಕಟೀತಟನಿಬದ್ಧಾಚ್ಛರತ್ನಕಾಂಚೀವಿರಾಜಿತಾ ॥೫೦॥**

**ಪ್ರಭಾತಪಂಕಜೋದ್ದಾಮಮಣಿಮಂಜೀರಭಾಸುರಾ ।**
**ರಣಚ್ಛಿಂಜಾನಮಧುರಹಂಸಾರಾವೈಕಸುಂದರಾ ॥೫೧॥**

---

ರತ್ನದ ಕಂಠಾಭರಣದಲ್ಲಿರುವ ರತ್ನಗಳ ಕಾಂತಿಯು, ಚಂಚಲವಾಗಿ, ದೇವಿಯುಟ್ಟಿರುವ ವಸ್ತ್ರಗಳ ಮೇಲೆ ಬಿದ್ದು ಅವುಗಳ ಕಾಂತಿಯನ್ನು ಮತ್ತೂ ಹೆಚ್ಚಿಸುತ್ತಿರುವುದು. ಮತ್ತು ಧ್ವನಿಮಾಡುವ ಗೆಜ್ಜೆಗಳಿಂದ ಕೂಡಿ ವಿಶೇಷವಾಗಿ ಶೋಭಿಸುವ ರತ್ನದ ಸರಗಳಿಂದ ದೇವಿಯ ಹಸ್ತವು ಅತಿಶಯವಾಗಿ ಪ್ರಕಾಶಿಸುತ್ತಿರುವುದು. ॥೪೮॥

ದೇವಿಯ ಕಿವಿಯಲ್ಲಿರುವ ಎರಡು ಓಲೆಗಳು ಸೂರ್ಯ, ಚಂದ್ರರ ಕಾಂತಿಯನ್ನು ಬೀರುತ್ತಿರುವುವು. ಉದಯಿಸುವ ಶುಕ್ರಗ್ರಹದಂತೆ, ಹೊಳೆಯುತ್ತಾ ದಿವ್ಯರತ್ನದಿಂದ, ಕೂಡಿರುವ ಮೂಗುತಿಯ ಹೊಳಪಿನಿಂದ ದೇವಿಯ ಮುಖವೆಲ್ಲವೂ ತೇಜೋಮಯವಾಗಿ ಕಾಣುತ್ತಿರುವುದು. ॥೪೯॥

ಗಂಗಾನದಿಯಂತೆ ಪ್ರವಹಿಸುವ ರತ್ನಕಾಂತಿಗೆ ದೇವಿಯೇ ಮುಖ್ಯಾಶ್ರಯಸ್ಥಾನವಾಗಿರುವಳು. ಪಾರ್ವತಿಯ ಸೊಂಟದಲ್ಲಿ ತೇಜಸ್ಸನ್ನು ಎರಚುವ ರತ್ನದ ಒಡ್ಯಾಣವು ಬಹು ಮನೋಹರವಾಗಿ ಕಾಣುತ್ತಿರುವುದು. ॥೫೦॥

ಪ್ರಾತಃಕಾಲದ ಅರಳಿದ ಕಮಲದಂತಿರುವ ಮಣಿಗಳ ಗುಚ್ಛಗಳಿಂದ ದೇವಿಯು ಅಲಂಕೃತಳಾಗಿರುವಳು. ಆಭರಣಗಳ ಧ್ವನಿಗೆ ಸರಿಯಾಗಿ ಧ್ವನಿಗೈಯ್ಯುವ ಹಂಸಗಳ ಕಲಕಲನಾದದಿಂದಲೂ ದೇವಿಯು ಮತ್ತಷ್ಟು ಆನಂದವನ್ನನುಭವಿಸುತ್ತಿರುವಳು. ॥೫೧॥

ಮರಾಲರಾಜಗಮನಾ ದಿವ್ಯಹಾರಾವೃತಾಂಗಕಾ ।
ವಂಕಿಕಾನಾಗಬಂಧೋದ್ಯದ್ಬಾಹುವಲ್ಲೀವಿರಾಜಿತಾ ॥೫೨॥

ಕರ್ಪೂರಾಗ್ರ್ಯಲಲನ್ಮುಕ್ತಾಗುಚ್ಛಸಚ್ಛಾದಿತಚ್ಛವಿಃ ।
ಫಾಲಲಂಬಿತರತ್ನಾಲಿಲಲಾಮಾವಲಿಶೋಭಿತಾ ॥೫೩॥

ಸೂರ್ಯಚಂದ್ರಾಂಕಿತೋದಾರಶಿರೋಭೂಷಣಭೂಷಿತಾ ।
ಯೋಗಿನೀಕೋಟಿಭಿಸ್ತತ್ರ ಸೇವಿತಾ ಪರಮೇಶ್ವರೀ ॥೫೪॥

ಹರಿನ್ಮಣಿಮಹಾಸೌಧೇ ಮುದಿತಾ ಸಂಸ್ಥಿತಾ ಶಿವಾ ।
ದಿವ್ಯೋಪಧಾನಸಂಕ್ಲೃಪ್ತಮಣಿಮಂಚೇ ಕೃತಾಸ್ತೃತೇ ॥೫೫॥

ಧೂಪಾಮೋದಿತದಿಕ್ಚಕ್ರೇ ಮಣಿದೀಪಮನೋಹರೇ ।
ವಿತಾನಾಲಂಬಿಮುಕ್ತೋದ್ಯದ್ಗುಚ್ಛಸಂಛಾದಿತಾಂಬರೇ ॥೫೬॥

---

ರಾಜಹಂಸದಂತೆ ಗಮನವುಳ್ಳವಳಾಗಿ, ದಿವ್ಯವಾದ ಹಾರಗಳಿಂದ ಅಲಂಕೃತವಾದ ಶರೀರವುಳ್ಳವಳಾಗಿ ದೇವಿಯು, ವಂಕಿ, ನಾಗಮುರಿಗೆ ಮುಂತಾದ ಒಡವೆಗಳನ್ನು ತನ್ನ ಬಳ್ಳಿಯಂತಿರುವ ಬಾಹುಗಳಿಗೆ ಧರಿಸಿಕೊಂಡಿರುವಳು. ॥೫೨॥

ಕರ್ಪೂರಮಯವಾದ ಮುತ್ತುಗಳ ಗೊಂಚಲಿನಿಂದ ಹೊರಟ ಕಾಂತಿಯು ದೇವಿಯ ದೇಹವನ್ನು ಅಲಂಕರಿಸುತ್ತಿರುವುದು. ಹಾಗೆಯೇ ದೇವಿಯ ಹಣೆಯಲ್ಲಿ ನೇತಾಡುತ್ತಿರುವ ರತ್ನಗಳ ಕಾಂತಿಯು ತಿಲಕದ ಶೋಭೆಯನ್ನು ಹೆಚ್ಚಿಸುತ್ತಿರುವುದು. ॥೫೩॥

ಸೂರ್ಯ, ಚಂದ್ರರಂತೆ ತೋರಿಬರುವ ಶಿರೋಭೂಷಣಗಳು ದೇವಿಯ ಶಿರಸ್ಸನ್ನು ಅಲಂಕರಿಸುತ್ತಿರುವುವು. ಇಂತಹ ಅಂಬಿಕೆಯನ್ನು ಕೋಟಿಸಂಖ್ಯೆಯ ಯೋಗಿನಿಯರು ಸರ್ವದಾ ಸೇವಿಸುತ್ತಿರುವರು. ॥೫೪॥

ಹಸುರು ರತ್ನಗಳಿಂದ ನಿರ್ಮಿತವಾದ ಸೌಧದಲ್ಲಿ ಪಾರ್ವತಿಯು, ದಿವ್ಯವಾದ ದಿಂಬುಗಳಿಂದ ಸುಂದರವಾಗಿರುವ ರತ್ನಮಂಚದಲ್ಲಿ ವಿರಾಜಿಸುತ್ತಿರುವಳು. ॥೫೫॥

ಆ ಮಂಚವು ಧೂಪಗಳ ವಾಸನೆಯುಳ್ಳದ್ದಾಗಿ, ಆ ವಾಸನೆಯನ್ನು ಸಕಲ ದಿಕ್ಕುಗಳಿಗೂ ಬೀರುವಂತಿರುವುದು. ರತ್ನದೀಪಗಳಿಂದ ಮನೋಹರವಾಗಿರುವುದು. ಆ ಮಂಚದ ಮೇಲ್ಕಟ್ಟಿನಲ್ಲಿ ಅನೇಕ ಮುತ್ತಿನ ಗೊಂಚಲುಗಳು ಗುಂಪುಗುಂಪಾಗಿ ನೇತಾಡುತ್ತಿರುವುವು. ॥೫೬॥

ಪಾದಬಾಹೂಪಧಾನೇಷು ಸ್ವಾಸ್ತೃತೇಽವಿಹರಚ್ಛಿವಾ ।
ರುದ್ರಾಣೀಗಾನಧಾರಾಭಿರ್ವೀಣಾನಾದಾನುಗಾ ಶಿವಾ ॥೫೭॥

ಶೃಣ್ವಂತೀ ಶಿವನಾಮಾನಿ ಸಂಸ್ಥಿತಾ ವೈದ್ರುಮೇ ಗೃಹೇ ।
ಸುವರ್ಣಕದಲೀಗುಚ್ಛಹರಿನ್ಮಣಿನಿಭೈರ್ದ್ರುಮೈಃ ॥೫೮॥

ತನ್ಮಧ್ಯೇ ಸ್ಫಾಟಿಕಮಣೀಕೃತಸೌಧವರಾಶ್ರಯಾ ।
ತಮಾಲಸಾಲನೀಪಾದಿವೃತಸೌಧೇ ಗರುತ್ಮತಃ ॥೫೯॥

ಮಣಿಕ್ಲೃಪ್ತೇ ಮಹಾಪೀಠೇ ಸಂಸ್ಥಿತಾ ಮುಗ್ಧದರ್ಶನಾ ।
ಲಾವಕಾನಾಂ ಮಯೂರಾಣಾಂ ಕುಕ್ಕುಟಾನಾಂ ಮನೋಹರಂ॥೬೦॥

---

ಅಂತಹ ಮಂಚದ ಮೇಲೆ ಅಂಬಿಕೆಯು ತನ್ನ ಕಾಲುಗಳನ್ನೂ, ತೋಳುಗಳನ್ನೂ ದಿಂಬುಗಳಮೇಲಿಟ್ಟು ಮಲಗಿರುವಳು. ಪಕ್ಕದಲ್ಲಿ ರುದ್ರಾಣಿಯರು ತಮ್ಮ ಗಾನಧಾರೆಗಳಿಂದಲೂ, ವೀಣಾರಾವದಿಂದಲೂ ದೇವಿಯನ್ನು ತೃಪ್ತಿಗೊಳಿಸುತ್ತಿರುವರು. ॥೫೭॥

ಅಲ್ಲಿಂದ ಮುಂದೆ ಹವಳಗಳಿಂದ ಕಲ್ಪಿತವಾದ ಮನೆಯನ್ನು ಪ್ರವೇಶಿಸುವಳು. ಅಲ್ಲಿ ಹಾಡುತ್ತಿರುವ ಪದ್ಯಗಳಲ್ಲಿರುವ ಶಿವನಾಮಗಳನ್ನು ಸಂತೋಷದಿಂದ ಕೇಳುವಳು. ಒಳ್ಳೆಯ ವರ್ಣದಿಂದ ಶೋಭಿಸುವ ಬಾಳೆಮರದ ಗುಂಪಿನಿಂದಲೂ ಪಚ್ಚೆಯಂತೆ ಹಸುರಾಗಿ ಕಂಗೊಳಿಸುವ ವೃಕ್ಷಸಮೂಹದಿಂದಲೂ ಆ ಗೃಹವು ಶೋಭಿತವಾಗಿರುವುದು. ॥೫೮॥

ಆ ಗೃಹದ ಮಧ್ಯದಲ್ಲಿ ಸ್ಫಟಿಕಮಣಿಯಿಂದ ರಚಿತವಾದ ಒಂದು ಸೌಧವಿರುವುದು. ಆ ಸೌಧದ ಸುತ್ತಲೂ, ಹೊಂಗೆಯಮರ, ಸಾಲವೃಕ್ಷ, ನೀಪದ್ರುಮಗಳು ಬಹಳವಾಗಿ ಬೆಳೆದು ತುಂಬಿರುವುವು. ॥೫೯॥

ಅಲ್ಲಿಯೇ ಗರುಡಮಣಿಯಿಂದ ನಿರ್ಮಿತವಾದ ದಿವ್ಯಪೀಠವಿರುವುದು. ಅದರ ಮೇಲೆ ದೇವಿಯು ಮಂಡಿಸಿ, ಲಾವುಗೆಹಕ್ಕಿ, ನವಿಲು, ಕೋಳಿ ಮುಂತಾದ ಪಕ್ಷಿಗಳ ಮಧುರ ಧ್ವನಿಯನ್ನು ಆನಂದದಿಂದ ಕೇಳುವಳು. ॥೬೦॥

ಮೇಷಸಾರಂಗಶೃಂಗೋದ್ಯತ್ ಸ್ಫಾರನಾರಾವಿದಿಕ್ತಟಂ ।
ರಮ್ಯಂ ರತ್ನಾಬ್ಜಿನೀತೀರೇ ಬದ್ಧೈರ್ದಿಕ್ಷ್ನು ಮಣೀಂದ್ರಕೈಃ ॥೬೧॥

ಸೋಪಾನತೀರಸಂಕ್ಲುಪ್ತಮಣಿಸುಂದರಮಂಟಪೇ ।
ರತ್ನಪಂಜರಮಧ್ಯಸ್ಥಾನ್ ರತ್ನಶಾರೀಶುಕಾನ್ ಶಿವಾ ॥೬೨॥

ಪಶ್ಯಂತೀ ದಾಡಿಮೀಬೀಜಂ ದದಾತಿ ಶುಕವಕ್ತ್ರಕೇ ।
ಪೂಗದ್ರುವೇಷ್ಟಿತಾಪಾರದ್ರಾಕ್ಷಾವಲ್ಲೀಸುಗುಚ್ಛಕೇ ॥೬೩॥

ಸಂಧ್ಯಾವಲ್ಲೀಸುಮಾರಕ್ತಚಂದ್ರಿಕಾಪುಷ್ಪಶೋಭಿತೇ ।
ಪರ್ಯಂತಕುಲ್ಯಾತೀರಾಚ್ಛಮಣಿಬಂಧಸುಧಾಪಯಃ ॥೬೪॥

ಪಯೋಜವಿಕಸತ್ಫುಲ್ಲಹಲ್ಲಕಾಮೋದಮೋದಿತೇ ।
ಧಾರಾಸಾರಮಹಾಯಂತ್ರಶೋಭಿತೇ ಗಂಧಮೋದಿತೇ ॥೬೫॥

---

ಅಲ್ಲಿ ಟಗರುಗಳೂ, ಸಾರಗಗಳು ಪರಸ್ಪರವಾಗಿ ಹೋರಾಡುತ್ತಾ ತಮ್ಮ ಕೊಂಬುಗಳ ಘರ್ಷಣೆಯಿಂದ ಸಕಲ ದಿಕ್ಕುಗಳನ್ನೂ ಮೊಳಗಿಸುತ್ತಲಿರುವುವು. ಇದರ ಪಕ್ಕದಲ್ಲಿ ಕೆಂದಾವರೆಯ ಕೊಳವೊಂದು ಬಹು ರಮ್ಯವಾಗಿರುವುದು. ಅದಕ್ಕೆ ನಾನಾ ರತ್ನಗಳಿಂದ ಸೋಪಾನಗಳನ್ನು ನಿರ್ಮಿಸಿರುವರು. ॥೬೧॥

ಅಂತಹ ಸೋಪಾನಗಳ ಪಕ್ಕದಲ್ಲಿ ಮಣಿಯಿಂದ ಅಲಂಕೃತವಾದ ಮಂಟಪವಿರುವುದು. ಅಲ್ಲಲ್ಲಿ ರತ್ನದ ಪಂಜರಗಳಿರುವುವು. ಅವುಗಳಲ್ಲಿ ರತ್ನಮಯವಾದ ಶಾರಿಕೆಗಳನ್ನೂ, ಗಿಳಿಗಳನ್ನೂ ದೇವಿಯು ಸಂತೋಷದಿಂದ ನೋಡುವಳು. ॥೬೨॥

ಹಾಗೆಯೇ ದಾಳಿಂಬೇಹಣ್ಣಿನ ಬೀಜವನ್ನು ತಾನೇ ಗಿಳಿಗಳಿಗೆ ಆಹಾರವನ್ನಾಗಿ ಕೊಡುವಳು. ಅಲ್ಲಿ ಅಡಕೆಯ ಮರಗಳಿಗೆ ಹಬ್ಬಿ ಸುತ್ತಿಕೊಂಡಿರುವ ದ್ರಾಕ್ಷಿಯ ಬಳ್ಳಿಗಳು ಬಹು ಮನೋಹರವಾಗಿ ಕಾಣುತ್ತಿರುವುವು. ॥೬೩॥

ಸಂಧ್ಯಾಕಾಲದಲ್ಲಿ ಅರಳುವ ಹೂವುಗಳಿಂದಲೂ, ಬೆಳದಿಂಗಳಿಂದಲೂ, ಇತರ ಸುಗಂಧಮಯವಾದ ಪುಷ್ಪಗಳಿಂದಲೂ ಆ ಪ್ರದೇಶವು ಅಲಂಕೃತವಾಗಿರುವುದು. ಅದರ ಪಕ್ಕದಲ್ಲಿಯೇ ಸಣ್ಣ ಕೊಳವೊಂದಿರುವುದು. ಅದರ ತೀರಪ್ರದೇಶವು ರತ್ನಮಯವಾದದ್ದಾಗಿ, ಅದು ಅಮೃತೋಪಮವಾದ ನೀರುಳ್ಳದ್ದಾಗಿರುವುದು. ॥೬೪॥

ಚೆನ್ನಾಗಿ ಅರಳಿರುವ ಕಮಲ, ಸೌಗಂಧಿಕಾಪುಷ್ಪ, ಮೊದಲಾದ ಹೂವು

**ಪೂಗದ್ರುಮೌಲಿಸಂಛಾದಿಮಣಿಹರ್ಮ್ಯೋರುಮಂಚಗಾ ।**
**ಕ್ರೀಡಾಶಿಖಂಡಿವಿಹಿತತಾಂಡವಂ ಪಶ್ಯತೀ ಶಿವಾ ॥೬೬॥**

**ಮಹಾಮಣೀಂದ್ರಸಂಕ್ಲೃಪ್ತಸೌಧೈರುಪರಿ ಕಲ್ಪಿತೇ ।**
**ನಾನಾಚಿತ್ರಪಟೀಕ್ಲೃಪ್ತಪಟಾಂಬರಗೃಹಾದರಾ ॥೬೭॥**

**ತಿರಸ್ಕರಣಿಕಾಕ್ಲೃಪ್ತಚತುರ್ದಿಕ್ಷು ಮನೋಹರೇ ।**
**ಮಣಿಕುಂಭೋದ್ಯತೇ ದೇವೀ ಮಣಿಸ್ತಂಭವಿಭೂಷಿತೇ ॥೬೮॥**

**ಸಖೀಭಿಸ್ಸಹ ಸಂಲಾಪಂ ಕುರ್ವಂತೀ ಸಂಸ್ಥಿತಾ ಕ್ವಚಿತ್ ।**
**ರಥಾಕಾರಮಹಾಸೌಧೈರ್ಮಣಿಚಕ್ರೈರ್ಹಯೈಸ್ತಥಾ ॥೬೯॥**

---

ಗಳಿಂದ ಆ ಪ್ರದೇಶವೆಲ್ಲಾ ಸುವಾಸಿತವಾಗಿರುವುದು. ಅಲ್ಲಲ್ಲಿ ಜಲಯಂತ್ರ ಗೃಹಗಳೂ, ಸುಗಂಧಿತವಾಗಿ ಮನೋಹರವಾಗಿ ಕಾಣುತ್ತಿರುವುವು. ॥೬೫॥

ಅಲ್ಲಿಂದ ಮುಂದೆ ಮಣಿಹರ್ಮ್ಯವನ್ನು ಹೊಂದುವಳು. ಅದಾದರೋ ಅಡಕೇ ಮರಗಳ ಶಿರೋಭಾಗದಿಂದ ಆಚ್ಛಾದಿತವಾಗಿರುವುದು. ಅಲ್ಲಿ ದಿವ್ಯಮಂಚದಲ್ಲಿ ಕುಳಿತು, ಗರಿಗಳನ್ನು ಕೆದರಿಕೊಂಡು ಕುಣಿಯುತ್ತಿರುವ ನವಿಲುಗಳ ನಾಟ್ಯವನ್ನು ನೋಡುವಳು. ॥೬೬॥

ಅನೇಕ ಇಂದ್ರನೀಲಮಣಿಗಳಿಂದ ರಚಿತವಾದ ಸೌಧವನ್ನು ಹೊಂದಿ ಅಲ್ಲಿ ಚಿತ್ರ ವಿಚಿತ್ರವಾಗಿರುವ ಬಟ್ಟೆಗಳಿಂದ ಕಂಗೊಳಿಸುವ ಪಟಗೃಹವನ್ನು ನೋಡುವಳು. ॥೬೭॥

ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ದಿವ್ಯವಾದ ಅಡ್ಡಪರದೆಗಳು ಅಲ್ಲಿ ಕಾಣುತ್ತಿದ್ದುವು. ಅಲ್ಲದೆ ನಾಲ್ಕು ಕಡೆಗಳಲ್ಲಿಯೂ ರತ್ನದ ಕಲಶಗಳೂ, ರತ್ನಸ್ತಂಭಗಳೂ ಕಂಗೊಳಿಸುತ್ತಿದ್ದುವು. ॥೬೮॥

ಸುತ್ತಲೂ ಸಖಿಯರು ನಿಂತು ದೇವಿಯೊಡನೆ ಮಾತನಾಡುವರು. ಆ ಮಂಟಪವೇ ಒಂದು ರಥದ ಆಕಾರವನ್ನು ಪಡೆದಿರುವುದು. ಅದಕ್ಕೆ ಚಕ್ರಗಳನ್ನು ರತ್ನಗಳಿಂದಲೇ ನಿರ್ಮಿಸಿರುವರು. ಮುಂದಕ್ಕೆ ಕುದುರೆಯ ಆಕಾರದ ರತ್ನಮಯವಾದ ಅಶ್ವಗಳೂ ಕಂಗೊಳಿಸುತ್ತಿರುವುವು. ॥೬೯॥

ಪರ್ಯಂತ ಇವ ತತ್ಪಾರ್ಶ್ವೇ ಸಿಂಹಹಂಸವಿರಾಜಿತೇ ।
ತತ್ರೈವಾಂತರ್ಗೃಹೇ ದೇವ್ಯಾಃ ಕ್ರೀಡಾಭವನಮೀಶಿತುಃ ॥೭೦॥

ಶ್ರೀಚಕ್ರಾಕಾರಮತುಲಂ ತನ್ಮಣೀಂದ್ರಮನೋಹರಂ ।
ಸಹಸ್ರಯೋಜನಾಯಾಮಂ ಮಣಿಚಿತ್ರಗವಾಕ್ಷಕೈಃ ॥೭೧॥

ಹಂಸಪದ್ಮಮಹಾವ್ಯಾಲಿಪಾಲೀಚಿತ್ರೈರ್ವಿಚಿತ್ರಿತೇ ।
ಮಣಿಸ್ತಂಭಮಹಾಸಾರಧಾರಾರಂಜಿತಭೂತಲೈಃ ॥೭೨॥

ವಿತಾನಮಾಲಾಕಲಿತೈರ್ಮುಕ್ತಾಗುಚ್ಛಾಲಿಲಂಬಿತೈಃ ।
ಮಣಿಮಂಚೈರ್ಮಹಾಪಾದೈರ್ಲಂಬಿತಾಧಃ ಸ್ಥಿತೈರಪಿ ॥೭೩॥

ತೇಷೂದ್ಯತಾ ಮಹಾಶಯ್ಯಾಸ್ಸೋಪಧಾನಮನೋಹರಾಃ ।
ಚಂದ್ರಮಂಡಲಸಂಕಾಶಾಃ ಫೇನಗೋಕ್ಷೀರಸಪ್ರಭಾಃ ॥೭೪॥

---

ಅಲ್ಲಿಯೇ ಪಕ್ಕದಲ್ಲಿ ಸಿಂಹಗಳಿಂದಲೂ ಹಂಸಗಳಿಂದಲೂ ವಿರಾಜಿಸುತ್ತಿರುವ ಅಂತರ್ಗೃಹವೊಂದಿರುವುದು. ಅಲ್ಲಿಯೇ ಪಾರ್ವತೀ ಪರಮೇಶ್ವರರು ವಿಹರಿಸುವ ಕ್ರೀಡಾಭವನವೂ ಇರುವುದು. ||೭೦||

ಆ ಭವನವಾದರೋ, ಶ್ರೀಚಕ್ರಾಕಾರದಲ್ಲಿರುವುದು. ವಿಧವಿಧವಾದ ರತ್ನಗಳಿಂದ ಮನೋಹರವಾಗಿ, ಸಾವಿರಯೋಜನಗಳಷ್ಟು ವಿಸ್ತಾರವಾಗಿರುವುದು. ರತ್ನಖಚಿತವಾದ ಗವಾಕ್ಷಿಗಳು ಅದಕ್ಕೆ ಅನೇಕವಿರುವುವು. ||೭೧||

ಹಂಸಗಳ, ಕಮಲಗಳ, ದೊಡ್ಡ ಸರ್ಪಗಳ ನಾನಾರೀತಿಯ ಚಿತ್ರಗಳು ಅಲ್ಲಿ ಬರೆಯಲ್ಪಟ್ಟಿರುವುವು. ರತ್ನಸ್ತಂಭಗಳಲ್ಲಿರುವ ದಿವ್ಯರತ್ನಕಾಂತಿಗಳ ಧಾರೆಯಿಂದ ಭೂಭಾಗವು ಅತಿ ಮನೋಹರವಾಗಿ ಕಾಣುತ್ತಿರುವುದು. ||೭೨||

ಅಲ್ಲಿ ನಾನಾವಿಧವಾದ ಮೇಲ್ಕಟ್ಟುಗಳೂ, ಮುತ್ತಿನ ಗೊಂಚಲುಗಳೂ, ರತ್ನಮಂಚಗಳೂ, ಕೆಳಗೆ ನೇತಾಡುವ ತೂಗುಮಂಚಗಳೂ, ಅದಕ್ಕಿರುವ ದೊಡ್ಡ ಸ್ತಂಭಗಳೂ ನಾನಾರೀತಿಯಲ್ಲಿ ರಂಜಿಸುತ್ತಿರುವುವು. ||೭೩||

ಆ ಮಂಚಗಳ ಮೇಲೆ ದೊಡ್ಡ ಹಾಸಿಗೆಗಳೂ, ಅದಕ್ಕೆ ಸದೃಶವಾದ ದಿಂಬುಗಳೂ ಇರುವುವು. ಅತ್ಯಂತ ಶುಭ್ರವಾಗಿರುವ ಈ ಹಾಸಿಗೆಗಳು ಚಂದ್ರ

**ಸುಮಾಮೋದಿತಗಂಧಾಢ್ಯಾ ಮಲ್ಲಿಕಾಪುಷ್ಪಸಂಸ್ತೃತಾಃ ।**
**ಭ್ರಮದ್ದೀಪಗೃಹಭ್ರಾಜನ್ಮಣಿಚಿತ್ರವಿಭೂಷಿತಾಃ ॥೭೫॥**

**ದೇವಸ್ಯ ದೇವ್ಯಾಃ ಕ್ರೀಡಾದಿರಸಚಿತ್ರೋರುಕುಟ್ಟಿಮಾಃ ।**
**ಧೂಪವೃಕ್ಷೈರ್ದೀಪವೃಕ್ಷೈರ್ಮಣಿಕ್ಲೃಪ್ತೈಸ್ಸಹಸ್ರಶಃ ॥೭೬॥**

**ತಾಂಬೂಲಕಲ್ಪಪಾತ್ರೈಶ್ಚ ಮಣಿಭೃಂಗಾರಕೈಶ್ಶುಭೈಃ ।**
**ಧೂಪಪಾತ್ರೈರ್ದೀಪಪಾತ್ರೈಃ ಪುಷ್ಪತಾಂಬೂಲಪಾತ್ರಕೈಃ ॥೭೭॥**

**ಫಲಪೂರ್ಣೈ ರತ್ನಪಾತ್ರೈರ್ಮಣಿಕುಂಭೈಸ್ಸುಧಾ ಯುತೈಃ ।**
**ಧೂಪಾಮೋದಮಣಿದ್ಯೋತಿವಿರಾಜಿತಮನುತ್ತಮಂ ॥೭೮॥**

---

ಮಂಡಲದಂತೆಯೂ, ಸಮುದ್ರದ ನೊರೆಯಂತೆಯೂ, ಹಸುವಿನ ಹಾಲಿನಂತೆಯೂ ಹೊಳೆಯುತ್ತಿರುವುವು. ॥೭೪॥

ಸುವಾಸನೆಯುಳ್ಳ ಪುಷ್ಪಗಳ ಗಂಧದಿಂದ ಆ ಶಯ್ಯಾಪ್ರದೇಶವು ಸುಗಂಧ ಮಯವಾಗಿರುವುದು. ಅದರ ಮೇಲೆಲ್ಲಾ ಮಲ್ಲಿಗೆಯ ಹೂಗಳು ಎರಚಲ್ಪಟ್ಟಿರುವುವು. ಅಲ್ಲಲ್ಲಿ ರತ್ನದ ದೀಪಗಳು ಉರಿಯುತ್ತಿರುವುವು. ಇದಲ್ಲದೆ ರತ್ನಮಯವಾದ ಚಿತ್ರಗಳು ಅಲ್ಲಲ್ಲಿ ಕಂಗೊಳಿಸುತ್ತಿರುವುವು. ॥೭೫॥

ದೇವಿಯೊಡನೆ ಪರಶಿವನು ವಿಹರಿಸುವಂತಹ, ಚಿತ್ರಮಯವಾದ ನಿಬದ್ಧ ಭೂಪ್ರದೇಶವು ಅಲ್ಲಲ್ಲಿ ಕಂಗೊಳಿಸುತ್ತಿರುವುದು. ಅದರ ಸುತ್ತಲೂ ಧೂಪ, ದೀಪ, ಇವುಗಳಿಂದ ತುಂಬಿದ ಮರಗಳು ರತ್ನಗಳ ಕಾಂತಿಯಿಂದ ಬೆಳಗತಕ್ಕದ್ದಾಗಿ ಸಾವಿರಾರು ಸಂಖ್ಯೆಯಲ್ಲಿರುವುವು. ॥೭೬॥

ತಾಂಬೂಲವನ್ನಿಟ್ಟಿರುವ ಅನೇಕ ರತ್ನದ ತಟ್ಟೆಗಳು ಮನೋಹರವಾಗಿ ಕಾಣುತ್ತಿರುವುವು. ಧೂಪ, ದೀಪ, ಪುಷ್ಪ, ತಾಂಬೂಲ ಇವುಗಳನ್ನು ಸಾಲಾಗಿ ಹೊಂದಿರುವ ಆ ಪ್ರದೇಶವು ನೋಡಲು ಬಹು ರಮ್ಯವಾಗಿರುವುದು. ॥೭೭॥

ಫಲಗಳಿಂದಲೂ, ರತ್ನಗಳಿಂದಲೂ, ದಿವ್ಯಮಣಿಗಳಿಂದಲೂ, ಅಮೃತ ದಿಂದಲೂ ತುಂಬಿರುವ ಅನೇಕ ಪಾತ್ರೆಗಳು ಸಾಲುಸಾಲಾಗಿ ಕಾಣುತ್ತಿರುವುವು. ಧೂಪದ ಸುವಾಸನೆಯಿಂದಲೂ ರತ್ನಗಳ ಹೊಳಪಿನಿಂದಲೂ ಆ ಗೃಹವು ಅತ್ಯಂತ ಮನೋಹರವಾಗಿರುವುದು. ॥೭೮॥

ಮಣಿಪುತ್ತಲಿಕಾಕ್ಲೃಪ್ತಚಾರುಚಾಮರವೀಜನೈಃ ।
ವ್ಯಜನಾದರ್ಶತಾಂಬೂಲಧೃತಪುತ್ತಲಿಕಾಯುತೈಃ ॥೭೯॥

ಗಣೈಶ್ಚ ರಹಿತೋ ದೇವಸ್ಸಖೀವಿರಹಿತಾ ಶಿವಾ ।
ತಸ್ಮಿನ್ ಶ್ರೀಚಕ್ರಸೌಧೇ ತು ಕ್ರೀಡತಸ್ತೌ ಶಿವೌ ಮುನೇ ॥೮೦॥

ಕೈಲಾಸೇ ನವಶಕ್ತಿರತ್ನವಿಲಸತ್ಪೀಠೇ ಮಹಾತತ್ವವಾ ।
ಗ್ಣಾತೇ ನೈಕಗಕೋಟಿವಿಸ್ತರಯುತೇ ಶ್ರೀಚಕ್ರಮಧ್ಯಂಗತೇ ।

ಬಿಂದೌ ಚಂದ್ರದಿನೇಶಕೋಟಿಯುಗಲೇ ಮಂಚೇ ಚ ತತ್ಪೀಠಕೇ ।
ಪಂಚಬ್ರಹ್ಮಮಯೇ ವಯಂ ಗಿರಿಜಯಾ ಸಾರ್ಧಂ ಹೃದಾ ದಧ್ಮಹೇ ॥೮೧॥

ಕೈಲಾಸೇ ನವರತ್ನಹರ್ಮ್ಯವಿಲಸನ್ಮಂಚೇ ಸುಧಾಪಾಂನಿಧೌ ।
ಕಾಂಚದ್ರತ್ನಕವಾಟಿಕಾಪರಿವೃತೇ ಚಿಂತಾಮಣೀಭಾಯುತೇ ।

---

ರತ್ನದ ಬೊಂಬೆಗಳು ತಮ್ಮ ಕೈಯ್ಯಲ್ಲಿ ಮನೋಹರವಾದ ಚಾಮರಗಳನ್ನು ಕೈಯಲ್ಲಿ ಹಿಡಿದು ಬೀಸುತ್ತಿರುವುವು. ಹಾಗೆಯೇ, ಬೀಸಣಿಗೆ, ಕನ್ನಡಿ, ತಾಂಬೂಲ, ಮುಂತಾದುವುಗಳನ್ನು ಕೈಯ್ಯಲ್ಲಿ ಹಿಡಿದು ನಿಂತಿರುವ ಬೊಂಬೆಗಳೂ ಹೇರಳವಾಗಿ ಕಂಡುಬರುತ್ತಿರುವುವು. ॥೭೯॥

ಪರಶಿವನೂ, ದೇವಿಯೂ, ತಮ್ಮ ತಮ್ಮ ಗಣಗಳನ್ನೂ, ಸಖಿಯರನ್ನೂ ಬಿಟ್ಟು ಇಬ್ಬರೇ ಕಲೆತು, ಆ ಶ್ರೀ ಚಕ್ರಾಕಾರವಾದ ದಿವ್ಯ ಸೌಧದಲ್ಲಿ ಸ್ವೇಚ್ಛೆಯಾದ ಕ್ರೀಡಾದಿಗಳಿಂದ ಸಂತೋಷ ಸುಖವನ್ನನುಭವಿಸುವರು. ॥೮೦॥

ಕೈಲಾಸದಲ್ಲಿರುವ ಈ ಶ್ರೀಚಕ್ರವು ನವಶಕ್ತಿಯಿಂದಲೂ, ನವರತ್ನದಿಂದಲೂ, ಕೂಡಿರುವುದು. ಮಹಾತತ್ತ್ವಗಳೆಲ್ಲವೂ ಅಲ್ಲಿ ಅಡಕವಾಗಿರುವುವು. ಅಸಂಖ್ಯಾತವಾದ ಯೋಜನದಷ್ಟು ವಿಸ್ತಾರವುಳ್ಳದ್ದು. ಇಂತಹ ಚಕ್ರದ ಮಧ್ಯಭಾಗದ ಬಿಂದುವು ಕೋಟಿ ಸೂರ್ಯ ಚಂದ್ರರ ಕಾಂತಿಯುಳ್ಳದ್ದಾಗಿರುವುದು. ಪಂಚಬ್ರಹ್ಮಮಯವಾದ ಇಂತಹ ರತ್ನ ಮಂಚದಲ್ಲಿ ಪಾರ್ವತಿಯೊಡನೆ ಮಂಡಿಸಿರುವ ಪರಮೇಶ್ವರನನ್ನು ನಾನು ಸರ್ವದಾ ಧ್ಯಾನಿಸುವೆನು, ಎಂದು ಕುಮಾರಸ್ವಾಮಿಯು ಜೈಗಿಷವ್ಯಾದಿಗಳಿಗೆ ಹೇಳಿದನು. ॥೮೧॥

ನವರತ್ನಗಳಿಂದ ನಿರ್ಮಿತವಾಗಿ ಅತ್ಯಂತ ಸುಂದರವಾಗಿರುವ ದಿವ್ಯ ಹರ್ಮ್ಯದಲ್ಲಿ, ಮತ್ತು ಅಮೃತ ಸಮುದ್ರದ ಪರ್ಯಂತ ಭಾಗದಲ್ಲಿ ರಂಜಿಸುವ ಶಿವದಂಪತಿಗಳ

ಸಾರ್ಧಂ ಯೋ ಜಗದಂಬಯಾ ರವಿಮಯಂ ಚೈಕಂ ಸುಧಾವರ್ಷ್ಮಣೋ ।
ರೂಪಂ ಕಂದುಕಮುತ್ಕ್ಷಿಪತ್ಯನುದಿನಂ ತೇನೈವ ರಾತ್ರಿಂದಿವಂ ॥೮೨॥

ಮೂರ್ತೀರ್ಯೋ ವಿಧಿವಿಷ್ಣುರುದ್ರಸುರರಾಡಷ್ಟೌ ಪ್ರಮಥಾನಪಿ ।
ಚತ್ವಾರ್ಯೇವ ಯುಗಾನಿ ವೇದನಿವಹಂ ದಿವ್ಯಂ ಫಲಾನಾಂ ಗಣಂ ।
ಕುರ್ವನ್ನೇವ ಚತುರ್ದಿಶಾತ್ಮಕಮಹಾನ್ವೈಚಿತ್ರ್ಯಪೀಠೇ ಸದಾ ।
ದೀವ್ಯಂತ್ಸಾರ್ಧಮಶೇಷಭಾಗ್ಯನಿವಹೈಃ ಕೃತ್ವಾ ಗೃಹಂ ಸಂಮತಂ ॥೮೩॥

ಕೃತ್ಸ್ನಪ್ರಾಣಿಕಲಾಪರಮ್ಯಫಲಕಸ್ತೋಮಂ ವಿಧಾಯಾತ್ರ ವೈ ।
ಕಾಲಂ ಕರ್ಮ ಚ ಪಾಶಕಂ ಸ ಹಿ ಶಿವೋ ದೀವ್ಯಂತ್ಸಹಾಸ್ತೇಽಂಬಯಾ ॥೮೪॥

---

ಕ್ರೀಡಾಗೃಹವು ಕೈಲಾಸದಲ್ಲಿ ಅತ್ಯಂತ ಮುಖ್ಯಸ್ಥಾನವೆನಿಸಿರುವುದು. ಅವರು ಕ್ರೀಡಿಸುವ ಆ ಗೃಹಕ್ಕೆ ಚಿನ್ನದ ಮತ್ತು ರನ್ನದ ಬಾಗಿಲುಗಳಿವೆ. ರತ್ನಗಳಲ್ಲಿ ಅತ್ಯಂತ ಶ್ರೇಷ್ಠವೆನಿಸಿದ ಚಿಂತಾಮಣಿಯ ಕಾಂತಿಯು ಅಲ್ಲಿ ಅತಿಶಯವಾಗಿ ತೋರಿಬರುತ್ತಿದೆ. ಇಂತಹ ಕ್ರೀಡಾಸ್ಥಾನದಲ್ಲಿ ಜಗನ್ಮಾತೆಯಾದ ಪಾರ್ವತಿಯೊಡನೆ ಕಲೆತಿರುವ ಮಹೇಶ್ವರನು, ಸೂರ್ಯಚಂದ್ರರನ್ನೇ ಎರಡು ಚೆಂಡುಗಳನ್ನಾಗಿ ಮಾಡಿಕೊಂಡು ಚೆಂಡಾಡುತ್ತಿರುವನು. ಇದರಿಂದಲೇ ಭೂಲೋಕಕ್ಕೆ ಹಗಲು ರಾತ್ರಿಗಳಾಗುತ್ತಿರುವುವು. ಇಂತಹ ಶಿವದಂಪತಿಗಳನ್ನು ನಾನು ಮನಸಾ ಧ್ಯಾನಿಸುವೆನು. ॥೮೨॥

ಮಹಾದೇವನು, ಬ್ರಹ್ಮ, ವಿಷ್ಣು, ರುದ್ರ, ಇಂದ್ರ, ಅಷ್ಟಮೂರ್ತಿಗಳು, ಇವೆಲ್ಲವನ್ನೂ ಸೃಷ್ಟಿಮಾಡುತ್ತಿರುವನು. ಕಾಲವನ್ನು ನಾಲ್ಕು ಯುಗಗಳನ್ನಾಗಿ ಕಲ್ಪಿಸಿರುವನು. ನಾಲ್ಕು ವೇದಗಳನ್ನೂ ಪ್ರಚಾರದಲ್ಲಿರಿಸಿ ಅನೇಕ ಶ್ರೇಷ್ಠವಾದ ಮೋಕ್ಷಾದಿ ಫಲಗಳನ್ನೂ ತೋರ್ಪಡಿಸಿರುವನು. ಅಸಂಖ್ಯ ಗಣಗಳನ್ನು ನಿರ್ಮಿಸಿರುವನು. ನಾಲ್ಕು ದಿಕ್ಕುಗಳಿಂದ ಗಭೇದವಾಗಿರುವ ದೊಡ್ಡದಾದ ರತ್ನಪೀಠದಲ್ಲಿ ಪಾರ್ವತಿಯೊಡನೆ ಕುಳಿತು. ಸಮಸ್ತ ಭೋಗಭಾಗ್ಯಗಳನ್ನನುಭವಿಸುತ್ತಾ ಅಕ್ಷಕ್ರೀಡೆಯನ್ನಾಡುತ್ತಿರುವನು. ಮತ್ತು ಆ ಕ್ರೀಡಾಗೃಹದ ವಿಷಯದಲ್ಲಿ ಸಂಪೂರ್ಣ ತೃಪ್ತಿಯನ್ನು ತೋರ್ಪಡಿಸುತ್ತಿರುವನು. ॥೮೩॥

ಆ ಅಕ್ಷಕ್ರೀಡೆಯಲ್ಲಿ ಸಕಲ ಪ್ರಾಣಿಗಳ ಸೃಷ್ಟಿ ಕಲಾಪವೆಂಬ ಕಾರ್ಯವನ್ನೇ ಒಂದು ದೊಡ್ಡ ಮಣೆಯನ್ನಾಗಿ ಮಾಡಿಕೊಂಡಿರುವನು. ಕಾಲ, ಕರ್ಮ, ಇವು

## ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ಕೈಲಾಸವರ್ಣನೇ ದೇವೀಪ್ರಸ್ತಾವರ್ಣನಂ ನಾಮ ಷಡ್ವಿಂಶೋಽಧ್ಯಾಯಃ

---

ಗಳನ್ನು ಕ್ರೀಡಾಸಾಧನಗಳನ್ನಾಗಿ ಮಾಡಿಕೊಂಡು, ಸರ್ವದಾ ಮಹೇಶ್ವರನು ದೇವಿಯೊಡನೆ ವಿಹರಿಸುತ್ತಿರುವನು. ಅಂದರೆ ಇವರ ಒಂದು ಕ್ರೀಡೆಯೇ ಜಗತ್ತಿನ ಸೃಷ್ಟಿಸ್ಥಿತಿಲಯಾದಿಗಳು. ಇಂತಹ ಮಹೇಶ್ವರ ದಂಪತಿಗಳನ್ನು ನಾನು ಶಿರಸಾ ವಂದಿಸುವೆನು. ಎಂದು ಕುಮಾರಸ್ವಾಮಿಯು ಪಾರ್ವತೀಪರಮೇಶ್ವರರನ್ನು ವಂದಿಸಿದನು. ||೮೪||

ಇಲ್ಲಿಗೆ ಶಿವರಹಸ್ಯದ ಪ್ರಥಮಾಂಶದಲ್ಲಿ ಕೈಲಾಸಪರ್ವತ ವರ್ಣನೆಯಲ್ಲಿ
ದೇವೀ ಪ್ರಸ್ತಾವವರ್ಣನೆಯೆಂಬ ಇಪ್ಪತ್ತಾರನೆಯ
ಅಧ್ಯಾಯವು ಮುಗಿದುದು.

॥ ಶ್ರೀಃ ॥

# ಅಥ ಶ್ರೀಶಿವರಹಸ್ಯೇ

## ಸಪ್ತವಿಂಶೋಽಧ್ಯಾಯಃ

### ದೇವೀಪೂಜಾಸ್ತುತಿಕಥನಂ

॥ ಸ್ಕಂದ ಉವಾಚ ॥

**ತತ್ರೈವ ದೇವ್ಯಾಸ್ಸದನಂ ಪುನರನ್ಯಂ ಮನೋಹರಂ ।**
**ಗಾರುತ್ಮತಮಣೀಭಾಸ್ವಚ್ಛತಯೋಜನವಿಸ್ತೃತಂ ॥೧॥**

**ವಲಭೀರೋಚಿತಾನೇಕಗವಾಕ್ಷೋದ್ಯತಕುಂಭಕಂ ।**
**ಮಣಿಪೀಠೋಜ್ಜ್ವಲಸ್ತಂಭಕ್ಲಪ್ತವಿದ್ರುಮಪುತ್ರಿಕಂ ॥೨॥**

**ಸುರತ್ನಫನಸೈಶ್ಚೈವ ಸುರತ್ನಕದಲೀಫಲೈಃ ।**
**ಸುರತ್ನನಾರಿಕೇಲಾಚ್ಛಪೂಗಸಂಘಮನೋಹರಂ ॥೩॥**

---

## ಶ್ರೀಶಿವರಹಸ್ಯದಲ್ಲಿ ಇಪ್ಪತ್ತೇಳನೆಯ ಅಧ್ಯಾಯ

ಕುಮಾರಸ್ವಾಮಿಯು ಮುಂದಿನ ಕಥೆಯನ್ನು ವಿವರಿಸುತ್ತಾ ಜೈಗೀಷವ್ಯಾದಿಗಳೊಡನೆ ಹೀಗೆಂದನು. “ ಎಲೈ ಜೈಗೀಷವ್ಯಾದಿ ಮಹರ್ಷಿಯೇ, ಅಂತಹ ದೇವಿಯ ವಿಹಾರಸ್ಥಾನದ ಪಕ್ಕದಲ್ಲಿಯೇ, ಗರುಡಮಣಿಯಿಂದ ರಚಿತವಾಗಿ ಪ್ರಕಾಶಿಸುತ್ತಿರುವ ನೂರು ಯೋಜನದಗಲವಿರುವ ಮನೋಹರವಾದ ಬೇರೊಂದು ಮನೆಯಿರುವುದು. ||೧||

ಆ ಮನೆಗೆ ಅನೇಕ ಮುಂಜೂರುಗಳಿರುವುವು. ವಿಶಾಲವಾದ ಗವಾಕ್ಷಗಳೂ, ಅವುಗಳ ಮೇಲೆಲ್ಲಾ ದಪ್ಪವಾದ ಕಲಶಗಳೂ ಕಾಣುತ್ತಿರುವುವು. ಅಲ್ಲಿ ಒಂದು ರತ್ನ ಪೀಠವಿರುವುದು. ಅದರಿಂದ ಪ್ರಕಾಶಿತವಾದ ಸ್ತಂಭಗಳ ಮೇಲೆಲ್ಲಾ ಹವಳದ ಬೊಂಬೆಗಳು ಸಾಲಾಗಿ ಕೆತ್ತಲ್ಪಟ್ಟಿರುವುವು. ||೨||

ಅಲ್ಲಿ ರತ್ನಮಯವಾದ ಹಲಸಿನಹಣ್ಣುಗಳೂ, ರತ್ನನಿರ್ಮಿತವಾದ ಬಾಳೆಹಣ್ಣು

ಸುರತ್ನಕೇತಕಫಲಾಲಂಬಿತಚ್ಛನ್ನಭೂತಲಂ ।
ಪುಷ್ಪಮಾಲಾರಸಾಸ್ವಾದಭ್ರಮದ್ಭ್ರಮರಸಂಕುಲಂ ॥೪॥

ತಸ್ಮಿನ್ ದಿವ್ಯೇ ಮಹಾಮಂಚೇ ಪುಷ್ಪಶಯ್ಯಾವಿರಾಜಿತೇ ।
ದಮನೋಶೀರಕಾಯುಕ್ತವಿತಾನಛಾದಿತಾಂಬರೇ ॥೫॥

ಸುರತ್ನಪಂಕಜಲಸನ್ಮಾಲಿಕಾಸಮಲಂಕೃತೇ ।
ಅಮ್ಲಾನೇ ಸರ್ವದಾ ತಸ್ಮಿನ್ ಮುಕುರೋತ್ಸಂಗಕುಟ್ಟಿಮೇ ॥೬॥

ರುದ್ರಾಣೀಭಿಃ ಪರಿವೃತಾ ನಿತ್ಯಮಾಸ್ತೇ ಮಹೇಶ್ವರೀ ।
ಸುಪುಷ್ಪಾಮಲಧಮ್ಮಿಲ್ಲಾಸ್ತಾರಾಧಿಪಸಮಾನನಾಃ ॥೭॥

---

ಗಳೂ, ಮಣಿಖಚಿತವಾದ ತೆಂಗಿನಕಾಯಿಗಳೂ, ಅಡಕೆಕಾಯಿಗಳೂ ನೋಡಲು ಮನೋಹರವಾಗಿ ಕಾಣುತ್ತಿರುವುವು. ॥೩॥

ರತ್ನದಂತೆ ಹೊಳೆಯುವ ಕೇತಕೀಪುಷ್ಪಗಳಿಂದಲೂ ಫಲಗಳಿಂದಲೂ ಕೂಡಿ ಆ ಪ್ರದೇಶವೆಲ್ಲವೂ ರಮ್ಯವಾಗಿರುವುದು. ಪುಷ್ಪಮಾಲೆಗಳ ಸುವಾಸನೆಗಾಗಿ ಮುತ್ತುವ ಭ್ರಮರಗಳ ಝೇಂಕಾರವು ಅಲ್ಲಿ ಬಹಳವಾಗಿರುತ್ತದೆ. ॥೪॥

ಆ ಮಹಾಭವನದಲ್ಲಿ ಒಂದು ಮಂಚವಿರುವುದು. ಅದರಲ್ಲಿ ಹೂವಿನ ಹಾಸಿಗೆ ಯಿದೆ. ಅದರಮೇಲೆ ದವನ, ಲಾಮಂಚ ಮುಂತಾದ ಸುಗಂಧವಸ್ತು ಪೂರಿತವಾದ ಮೇಲ್ಕಟ್ಟು ವಿರಾಜಿಸುತ್ತಿರುವುದು. ॥೫॥

ರತ್ನದ ಕಮಲಗಳನ್ನು ಮಾಲೆಯನ್ನಾಗಿಮಾಡಿ ಆ ಮಂಚಕ್ಕೆ ಅಲಂಕಾರ ಮಾಡಿರುವರು. ಪಕ್ಕದಲ್ಲಿ ಕೊಳೆಯಿಲ್ಲದೆ ಶುಭ್ರವಾಗಿರುವ ಕನ್ನಡಿಗಳಿಂದ ಕೂಡಿದ ಜಗಲಿಗಳು ಕಾಣುತ್ತಿರುವುವು. ॥೬॥

ಅಲ್ಲಿ ಮಹೇಶ್ವರಿಯು ತನ್ನ ಸೇವಕಿಯರಾದ ರುದ್ರಾಣಿಯರಿಂದ ಸೇವಿತ ಳಾಗಿರುವಳು. ಅವರಾದರೋ ತಲೆಯಲ್ಲಿ ಸುಗಂಧಪುಷ್ಪಗಳನ್ನು ಮುಡಿದು ಚಂದ್ರ ನಂತೆ ಸುಂದರವಾದ ವದನವುಳ್ಳವರಾಗಿರುವರು. ॥೭॥

**ತರುಣ್ಯೋ ರೂಪಸಂಪನ್ನಾಃ ಕುಂಭೀಕುಂಭಾಭಸತ್ಕುಚಾಃ ।**
**ಮಣಿಗ್ರೈವೇಯಹಾರಾಢ್ಯಾ ಮುಕ್ತಾರತ್ನಾಂಗದೈರ್ಯುತಾಃ ॥೮॥**

**ಮುಕ್ತಾನಾಸಾನ್ವಿತಾಸ್ಸರ್ವಾಶ್ಚಂದ್ರಿಕಾಕ್ಲ್ಪಪ್ತಶೇಖರಾಃ ।**
**ದಿವ್ಯಾಂಗರಾಗಸುಲಭಾ ರಣನ್ಮಂಜೀರಕಾಂಘ್ರಯಃ ॥೯॥**

**ತಾಸ್ತತ್ರ ಸೌಧವರ್ಯೇಷು ದೇವ್ಯೋ ವಿದ್ಯುಲ್ಲತಾ ಇವ ।**
**ಸಂಚರಂತಿ ಸದಾ ದೇವೀಂ ಸೇವಂತೇ ಜಘನೋನ್ನತಾಃ ॥೧೦॥**

**ಮಹಾರ್ಹವಸನೋಪೇತಾಸ್ತಿಲಕಾಲಂಕೃತಾನನಾಃ ।**
**ತಾಂಬೂಲರಾಗರಕ್ತಾಚ್ಛಬಿಂಬಾಧರಮನೋಹರಾಃ ॥೧೧॥**

**ಚಾಮರಾಗ್ರಕರಾಃ ಕಾಶ್ಚಿತ್ ಕಾಶ್ಚಿತ್ ಚಂದನಧಾರಿಣಃ ।**
**ಕಾಶ್ಚಿತ್ ಕಾಲಾಂಜಿಕಾಪಾಣ್ಯಃ ಕಾಶ್ಚಿಚ್ಛತ್ರಧರಾಸ್ತಥಾ ॥೧೨॥**

---

ಅವರು ಸರ್ವದಾ ಯುವತಿಯರೇ. ರೂಪವಂತರಾಗಿ ಆನೆಯ ಕುಂಭಸ್ಥಳದಂತಿರುವ ಸ್ತನಗಳುಳ್ಳವರು. ಕತ್ತಿನಲ್ಲಿ ಎಲ್ಲರೂ, ರತ್ನದ ಹಾರಗಳನ್ನೂ, ತೋಳುಗಳಲ್ಲಿ ಮುತ್ತಿನ ಬಳೆಗಳನ್ನೂ ಧರಿಸಿರುವರು. ||೮||

ಎಲ್ಲರ ಮೂಗಿನಲ್ಲಿಯೂ ಮುತ್ತಿನ ಮೂಗುಬೊಟ್ಟುಗಳಿವೆ. ಚಂದ್ರಲೇಖೆಯು ಎಲ್ಲರ ತಲೆಯನ್ನೂ ಬೆಳಗಿಸುತ್ತಿವೆ. ಅಂಗರಾಗವನ್ನು ಉಗುರುಗಳಿಗೆಲ್ಲಾ ಬಳಿದುಕೊಂಡಿರುವರು. ಧ್ವನಿಮಾಡುವ ಗೆಜ್ಜೆಗಳು ಎಲ್ಲರ ಕಾಲಿನಲ್ಲಿಯೂ ಶೋಭಿಸುತ್ತಿರುವುವು. ||೯||

ಅಂತಹ ರುದ್ರಾಣಿಯರು ಆ ದಿವ್ಯಸೌಧದಲ್ಲಿ ಸರ್ವದಾ ದೇವಿಯನ್ನು ಸೇವಿಸುತ್ತಾ, ಮಿಂಚಿನಂತೆ ಹೊಳೆಯುತ್ತಾ ಸಂಚರಿಸುತ್ತಿರುವರು. ||೧೦||

ಅವರುಟ್ಟಿರುವ ವಸ್ತ್ರಗಳು ಅಮೂಲ್ಯವಾದವುಗಳು. ಅವರ ಮುಖವು ತಿಲಕದಿಂದ ಅಲಂಕೃತವಾಗಿರುವುದು. ತುಟಿಯಾದರೋ ತಾಂಬೂಲರಾಗದಿಂದ ಕೆಂಪುಬಣ್ಣವುಳ್ಳದ್ದಾಗಿ ಕಂಗೊಳಿಸುತ್ತಿರುವುದು. ||೧೧||

ಕೆಲವರು ರುದ್ರಾಣಿಯರು ಚಾಮರವನ್ನು ಹಿಡಿದಿರುವರು. ಕೆಲವರು ಗಂಧವನ್ನೂ, ಹಲವರು ಪೀಕದಾನಿಯನ್ನೂ, ಅನೇಕರು ಛತ್ರಿಗಳನ್ನೂ ಹಿಡಿದು ಸೇವಿಸುತ್ತಿರುವರು. ||೧೨||

ತಾಂಬೂಲರತ್ನಪೇಟೀಂ ಚ ಧೃತ್ವಾಂಜನಕರಾಸ್ತಥಾ ।
ಕಾಶ್ಚಿತ್ಕಂಕತಿಕಾಹಸ್ತಾ ಭೂಷಾಪೇಟೀಧರಾಸ್ತಥಾ ॥೧೩॥

ಹರಿದ್ರಾಕುಂಕುಮಾಹಸ್ತಾ ಚಾಲಕ್ತರಸಧಾರಿಣೀ ।
ಸಿಂಧೂರಧಾರಿಣೀ ಕಾಚಿತ್ಪಾದುಕಾಸಕ್ತಸತ್ಕರಾ ॥೧೪॥

ರತ್ನಹೇಮಾಂಬರಾದೀನಿ ಮಣಿಪ್ರೋದ್ಯನ್ನಿಚೋಲಕಂ ।
ರತ್ನವೀಣಾಕರಾಃ ಕಾಶ್ಚಿಲ್ಲೀಲಾಶುಕಕರಾಸ್ತಥಾ ॥೧೫॥

ಹರಿನ್ಮಣಿಮಹಾಪಿಂಛಮಯೂರವರಧಾರಿಣೀ ।
ರತ್ನಾದರ್ಶಕರಾ ಕಾಚಿತ್ ಪ್ರಫುಲ್ಲಸುಮಧಾರಿಣೀ ॥೧೬॥

ಚಂಪಕಾದಿಮಹಾಹಸ್ತಾ ರತ್ನಭೃಂಗಾರಸತ್ಕರಾಃ ।
ಖಡ್ಗಖೇಟಕನಿಸ್ತ್ರಿಂಶಶರಕಾರ್ಮುಕಪಾಣಯಃ ॥೧೭॥

---

ತಾಂಬೂಲದ ರತ್ನಮಯವಾದ ಪೆಟ್ಟಿಗೆಯನ್ನೂ, ಧರಿಸಲು ಯೋಗ್ಯವಾದ ಕಾಡಿಗೆಯನ್ನೂ ಕೆಲವರು ಹಿಡಿದಿರುವರು. ಮತ್ತೆ ಹಲವರು ಬಾಚಣಿಗೆಗಳನ್ನೂ ಅಲಂಕಾರದ ಪೆಟ್ಟಿಗೆಗಳನ್ನೂ ಧರಿಸಿ ನಿಂತಿರುವರು. ॥೧೩॥

ಅರಿಶಿನ, ಕುಂಕುಮ, ಅರಗಿನ ರಸ, ಚಂದ್ರವೇ ಮೊದಲಾದ ಮಂಗಳದ್ರವ್ಯಗಳನ್ನು ಕೆಲವರು ಹಿಡಿದಿರುವರು. ದೇವಿಯ ಪಾದುಕೆಗಳನ್ನು ಕೈಯಲ್ಲಿ ಧರಿಸಿ ಒಬ್ಬಳು ನಿಂತಿರುವಳು ॥೧೪॥

ರತ್ನ, ಸುವರ್ಣ, ವಸ್ತ್ರಗಳು ಇವುಗಳನ್ನು ಕೆಲವರು ಹಿಡಿದು ನಿಂತಿರುವರು. ಮಣಿಖಚಿತವಾದ ರವಿಕೆಗಳನ್ನೂ, ರತ್ನಮಯವಾದ ವೀಣೆಗಳನ್ನೂ, ಕ್ರೀಡಾರ್ಥವಾದ ಗಿಳಿಗಳನ್ನೂ ಅನೇಕರು ಹಿಡಿದು ಎದುರಿನಲ್ಲಿ ನಿಂತಿರುವರು. ॥೧೪-೧೫॥

ಹಸುರುಪಚ್ಚೆಯಂತೆ ಗರಿಯುಳ್ಳ ನವಿಲನ್ನು ಹಿಡಿದು ಒಬ್ಬಳೂ, ರತ್ನಮಯವಾದ ಕನ್ನಡಿಯಿಂದ ಕೂಡಿ ಮತ್ತೊಬ್ಬಳೂ ಅರಳಿದ ಹೂವಿನ ಸರವನ್ನು ಹಿಡಿದು ಮಗದೊಬ್ಬಳೂ ನಿಂತಿರುವರು. ॥೧೬॥

ಸಂಪಿಗೆಯೇ ಮೊದಲಾದ ಅನೇಕ ಪುಷ್ಪಗಳನ್ನೂ, ರತ್ನದ ಕಲಶಗಳನ್ನೂ ಕೈಯಲ್ಲಿ ಧರಿಸಿರುವರು. ಮತ್ತೆ ಕೆಲವು ಸ್ತ್ರೀಯರು ಕತ್ತಿ, ಕಠಾರಿ, ಗುರಾಣಿ, ಬಾಣ, ಧನುಸ್ಸು ಮುಂತಾದುವುಗಳನ್ನು ಹಸ್ತಗಳಲ್ಲಿ ಧರಿಸಿ ನಿಂತಿರುವರು. ॥೧೭॥

ನಿಷಂಗಸಂಗಿತಕರಾ ಲೀಲಾಕಂದುಕಧಾರಿಣೀ ।
ಹಲ್ಲೀಸಲ್ಲಾಸ್ಯರತ್ನಾಚ್ಛದಂಡಮಂಡಿತಸತ್ಕರಾ ॥೧೮॥

ಅಕ್ಷಪೇಟೀಧರಾಃ ಕಾಶ್ಚಿತ್ಕಸ್ತೂರೀಗಂಧಸತ್ಕರಾಃ ।
ರತ್ನಪಾತ್ರಸ್ಥಿತಾಪಾರಗಂಧಗಂಧಿತದಿಕ್ತಟಾಃ ॥೧೯॥

ಪಟವಾಸಸುವಾಸೇನ ಹಾರಗುಚ್ಛಕಶೇಖರೈಃ ।
ಪಾತ್ರೈಃ ಪ್ರೋದ್ಯತ್ಕರಾಃ ಕಾಶ್ಚಿದ್ರತ್ನಶೂಲಧರಾಸ್ತಥಾ ॥೨೦॥

ಶಾರಿಕಾಬೋಧನೋದ್ಯುಕ್ತಾ ದೇವೀನಾಮಾನಿ ಸಾದರಂ ।
ಸುಧೂಪವೃಕ್ಷಧಾರಿಣ್ಯೋ ದೀಪಿಕಾಧಾರಿಣೀ ಪರಾ ॥೨೧॥

ಗಂಧತೈಲಾವಸಿಕ್ತೋದ್ಯದ್ರತ್ನಕುಂಭೀಕರಾಸ್ತಥಾ ।
ತಾಂಬೂಲಪಾತ್ರವಿತತಕರಾಃ ಫಲಕರಾಸ್ತಥಾ ॥೨೨॥

---

ಒಬ್ಬ ರುದ್ರಾಣಿಯು ಬತ್ತಳಿಕೆಯಲ್ಲಿ ಕೈಯ್ಯಿಟ್ಟು ನಿಂತಿರುವಳು. ಮತ್ತೊಬ್ಬಳು ಕೈಯ್ಯಲ್ಲಿ ಕ್ರೀಡಾರ್ಥವಾದ ಚೆಂಡನ್ನು ಹಿಡಿದು ನಿಂತಿರುವಳು. ಮಗದೊಬ್ಬಳು ಹಲ್ಲೀಸನಾಟ್ಯವಿಶೇಷವನ್ನು ಆಚರಿಸುತ್ತಾ ರತ್ನದಂಡವನ್ನು ಕೈಯ್ಯಲ್ಲಿ ಧರಿಸಿರುವಳು. ॥೧೮॥

ಕೆಲವು ರುದ್ರಾಣಿಯರು ಪಗಡೇಕಾಯಿನ ಪೆಟ್ಟಿಗೆಯನ್ನೂ, ಮತ್ತೆ ಕೆಲವರು ಕಸ್ತೂರಿಯೇ ಮೊದಲಾದ ಸುಗಂಧದ್ರವ್ಯವನ್ನೂ ಹಿಡಿದು ನಿಂತಿರುವರು. ಹೀಗೆ ರತ್ನಗಳ ಪಾತ್ರೆಯಲ್ಲಿರುವ ಸುಗಂಧದ್ರವ್ಯಗಳಿಂದ ಸಮಸ್ತ ದಿಕ್ಕುಗಳನ್ನೂ ಸುವಾಸಿತವನ್ನಾಗಿ ಮಾಡುತ್ತಿರುವರು. ॥೧೯॥

ಮುಖವಸ್ತ್ರವನ್ನೂ, ಹಾರ, ಮತ್ತು ಪುಷ್ಪಗುಚ್ಛಗಳಿಂದ ತುಂಬಿದ ಕಲಶಗಳನ್ನೂ, ರತ್ನಶೂಲ ಇವುಗಳನ್ನೂ ಹಿಡಿದು ಕೆಲವರು ನಿಂತಿರುವರು. ॥೨೦॥

ಶಾರಿಕಾಪಕ್ಷಿಗಳಿಗೆ ಕೆಲವರು ದೇವಿಯ ನಾಮಾವಳಿಗಳನ್ನು ಕಲಿಸಿಕೊಡುತ್ತಿರುವರು. ಕೆಲವರು ಸುಗಂಧಮಯವಾದ ಧೂಪಗಳನ್ನೂ, ಹಲವರು ಪ್ರಕಾಶಮಾನವಾದ ದೀಪಗಳನ್ನೂ ಹಿಡಿದು ಕಾಣುತ್ತಿರುವರು. ॥೨೧॥

ಗಂಧ, ತೈಲ, ಇವುಗಳಿಂದ ತುಂಬಲ್ಪಟ್ಟ ರತ್ನದ ಗಡಿಗೆಗಳನ್ನೂ, ಅನೇಕರು ತಾಂಬೂಲಪಾತ್ರೆಯನ್ನೂ, ಫಲವನ್ನೂ ಕೈಯ್ಯಲ್ಲಿ ಧರಿಸಿನಿಂತಿರುವರು. ॥೨೨॥

ಪದ್ಮೋತ್ಪಲಕರಾಃ ಕಾಶ್ಚಿದಂಗರಾಗಕರಾಸ್ತಥಾ ।
ಫಲರತ್ನಯುತಾಸಾರಸ್ವರ್ಣಪಾತ್ರಲಸತ್ಕರಾಃ ॥೨೩॥

ಮಣಿಕುಂಭಸುಧಾಸಾರಕರಾಃ ಕಾಶ್ಚಿನ್ಮನೋಹರಾಃ ।
ಏವಂ ಸೇವಂತಿ ತಾಂ ದೇವೀಂ ರುದ್ರಾಣ್ಯಃ ಪರಿತೋಽಂಬಿಕಾಂ॥೨೪॥

ತತ್ತತ್ಸೇವಾರಸಾಭಿಜ್ಞಾ ದೇವ್ಯಾಶ್ಚಿತ್ತಾನುವರ್ತಕಾಃ ।
ಪ್ರಾಸಾದೇಷು ಚ ಮಂಚೇಷು ಮಣಿಸಿಂಹಾಸನೇಷು ಚ ॥೨೫॥

ಪುಷ್ಪಶಯ್ಯಾಂ ತಥಾ ಕಾಶ್ಚಿತ್ಕುರ್ವಂತಿ ಸುಕುಥಾವೃತಾಂ ।
ಭಕ್ಷ್ಯಭೋಜ್ಯಾನ್ನಕುಶಲಾಃ ಪೇಯೇ ರಸವರೇ ತಥಾ ॥೨೬॥

ದೇವೀಂ ಸೇವಂತಿ ತಾಸ್ತತ್ರ ರುದ್ರಾಣ್ಯೋ ನವಯೌವನಾಃ ।
ತತ್ರ ದೇವ್ಯಾ ಮಹಾಸೌಧೇ ನವರತ್ನವಿಚಿತ್ರಿತಂ ॥೨೭॥

---

ಕೆಲವು ರುದ್ರಾಣಿಯರು ಕಮಲ, ಉತ್ಪಲ, ಅಂಗರಾಗ, ಫಲ, ರತ್ನ, ಸ್ವರ್ಣ ಪಾತ್ರ ಇವೇ ಮೊದಲಾದುವುಗಳನ್ನು ಹಿಡಿದು ಸೇವೆಗಾಗಿ ಸಿದ್ಧವಾಗಿರುವರು. ||೨೩||

ರತ್ನದ ಪಾತ್ರೆಗಳಲ್ಲಿ ಅಮೃತವನ್ನು ತುಂಬಿ ಹಿಡಿದು, ಕೆಲವು ಸುಂದರಿಯರು ಸುತ್ತಲೂ ನಿಂತಿರುವರು. ಹೀಗೆ ಅನೇಕ ರುದ್ರಾಣಿಯರು ದೇವಿಯನ್ನು ನಾನಾ ರೀತಿಯಲ್ಲಿ ಸೇವೆಗೈಯ್ಯುತ್ತಿರುವರು. ||೨೪||

ದೇವಿಯ ಸಮಯವನ್ನರಿತು, ದೇವಿಗೆ ಮನೋರಂಜನೆಯಾಗುವಂತೆ, ಪ್ರಾಸಾದಗಳಲ್ಲಿ, ಮಂಚಗಳಲ್ಲಿ, ರತ್ನಸಿಂಹಾಸನಗಳಲ್ಲಿ ರುದ್ರಾಣಿಯರು ಸೇವೆಗೈಯ್ಯುತ್ತಿರುವರು. ||೨೫||

ಕೆಲವರು, ದೇವಿಗೆ ಹೂವಿನ ಹಾಸಿಗೆಯನ್ನು ದಿಂಬಿನೊಡನೆ ಸಿದ್ಧಮಾಡಿಡುವರು. ಮತ್ತೆ ಕೆಲವರು, ಭಕ್ಷ್ಯ, ಭೋಜ್ಯ, ನಾನಾವಿಧವಾದ ಅನ್ನಗಳು, ಪಾನೀಯಗಳು, ರಸವಸ್ತುಗಳು ಇವೆಲ್ಲವನ್ನೂ ಸಿದ್ಧಗೊಳಿಸುವರು. ||೨೬||

ಹೀಗೆ ನವಯುವತಿಯರಾದ ರುದ್ರಾಣಿಯರು ನವರತ್ನನಿರ್ಮಿತವಾದ ದೇವಿಯ ಸೌಧದಲ್ಲಿ ಮಹೇಶ್ವರಿಯನ್ನು ಭಕ್ತಿಯಿಂದ ಸೇವಿಸುತ್ತಲಿರುವರು. ||೨೭||

ಗರ್ಭಾಗಾರಂ ಮಹೇಶಸ್ಯ ರಮ್ಯಂ ದೇವೀಶ್ವರಸ್ಯ ಚ ।
ಪ್ರಾಕಾರಗೋಪುರೋಪೇತಂ ರತ್ನತೋರಣಮಂಡಿತಂ ॥೨೮॥

ಮಾಣಿಕ್ಯಮುಕುರೋದ್ಭಾಮರುದ್ರಕ್ರೀಡಾವೃಷೈರ್ಯುತಂ ।
ಸುರಮ್ಯರತ್ನಕಲಶಪತಾಕಾಭ್ರಾಜಿಶೇಖರಂ ॥೨೯॥

ತತ್ರ ಲಿಂಗಂ ಸುಧಾಪೂರಧವಲೀಕೃತದಿಙ್ಮುಖಂ ।
ಕಾಕೋದರಫಣಾಭ್ರಾಜಿಬಿಲ್ವಾಲಂಕೃತಮಸ್ತಕಂ ॥೩೦॥

ಸುಧಾಧಾಮಕಖಂಡೋಪ್ತರತ್ನಗೋಲಕಭೂಷಿತಂ ।
ತದ್ವೈ ದೇವೀಶ್ವರಂ ಲಿಂಗಂ ಪೂಜಯತ್ಯಂಬಿಕಾ ಸದಾ ॥೩೧॥

ಸುಧಾಸಾಗರನೀರೋಪ್ತಕಲಶೈರ್ನವರತ್ನಜೈಃ ।
ಪಂಚಾಮೃತಮಹಾಧಾರಾಗಂಧನೋದೈಶ್ಚ ನೀರಕೈಃ ॥೩೨॥

---

ದೇವೀಶ್ವರನ ಗರ್ಭಗೃಹವು ಈಶ್ವರನಿಗೆ ವಾಸಕ್ಕೆ ಬಹು ರಮ್ಯವಾದದ್ದು. ಅದಕ್ಕೆ ಅನೇಕ ಪ್ರಾಕಾರಗಳೂ, ಗೋಪುರಗಳೂ, ರತ್ನದ ತೋರಣಗಳೂ ಇರುವುವು. ॥೨೮॥

ಮಾಣಿಕ್ಯಮಯವಾದ ಕನ್ನಡಿಗಳೂ, ರುದ್ರಾವತಾರದ ಬೊಂಬೆಗಳೂ, ವೃಷಭಗಳೂ, ರತ್ನಕಲಶಗಳೂ, ಧ್ವಜಪಟಗಳೂ, ಆ ಗೋಪುರವನ್ನು ಅಲಂಕರಿಸುತ್ತಿರುವುವು. ॥೨೯॥

ಅಲ್ಲಿ ಅಮೃತಪ್ರವಾಹದಿಂದ ಸಮಸ್ತ ದಿಕ್ಕುಗಳನ್ನೂ ಶುಭ್ರಗೊಳಿಸುತ್ತಿರುವ ಶಿವಲಿಂಗವಿರುವುದು. ಆ ಲಿಂಗದ ಮೇಲೆ ನಾಗಾಭರಣವೂ ಬಿಲ್ವಪತ್ರೆಯೂ ಇದ್ದು ಲಿಂಗವನ್ನು ಮನೋಹರಗೊಳಿಸಿರುವುವು. ॥೩೦॥

ಲಿಂಗಶಿಖರದ ಮೇಲೆ ಚಂದ್ರಲೇಖೆಯೂ, ರತ್ನಕಿರೀಟವೂ ಪ್ರಕಾಶಿಸುತ್ತಿರುವುವು. ಇಂತಹ ದೇವೀಶ್ವರಲಿಂಗವನ್ನು ದೇವಿಯು ಸರ್ವದಾ ಪೂಜಿಸುತ್ತಿರುವಳು. ॥೩೧॥

ಆ ಲಿಂಗವನ್ನು ಅಮೃತಸಮುದ್ರದಿಂದ ಹೊಸರತ್ನಕಲಶಗಳಲ್ಲಿ ತಂದ ಅಮೃತಧಾರೆಯಿಂದ ಅಭಿಷೇಚಿಸುವಳು. ಪಂಚಾಮೃತದಿಂದಲೂ, ಗಂಧೋದಕದಿಂದಲೂ ಲಿಂಗಕ್ಕೆ ಅಭಿಷೇಕಮಾಡುವಳು. ॥೩೨॥

**ಯಕ್ಷಕರ್ದಮಜಾಲೇಪವೇಷ್ಟನಾಂಬರಸುಂದರಂ ।**
**ಬಿಲ್ವಚಂಪಕಧತ್ತೂರರತ್ನಪಂಕಜಮಾಲಿನೀ ॥೩೩॥**

**ಜಾತೀಸರಾವಲೀಶೋಭಿಲಿಂಗಮೌಲಿಮನೋಹರಂ ।**
**ತಕ್ಕೋಲಾಗರುಜೋದ್ಭೂತಧೂಪಧೂಮ್ರೈಶ್ಶಿವಾ ತದಾ ॥೩೪॥**

**ಕುರುವಿಂದಮಣಿಜ್ಯೋತಿದೀಪೈರುದ್ಯೋತಿತಾಂತರಂ ।**
**ಸುಪುಂಡರೀಕಮಾಲಾಭಿರ್ನವನೀಲೋತ್ಪಲಸ್ರಜಾ ॥೩೫॥**

**ಹರಿನ್ಮಣಿನಿಭೈರ್ಬಿಲ್ವೈಸ್ಸಹಸ್ರೈಃ ಪೂಜಯೇಚ್ಛಿವಾ ।**
**ಭಕ್ಷ್ಯಭೋಜ್ಯವರಾನ್ನಾನಾಂ ರಾಶಿಭಿಶ್ಶೈಲಕನ್ಯಕಾ ॥೩೬॥**

**ತಾಂಬೂಲೈಃ ಖದಿರಾಸಾರಸ್ವರ್ಣಕರ್ಪೂರಖಂಡಜೈಃ ।**
**ನೀರಾಜನೈರ್ಮುಖರಿತಶಂಖಕಾಹಲಮದ್ದಲೈಃ ॥೩೭॥**

---

ಹಾಲುಮಡ್ಡಿಯ ವಾಸನೆಯಿಂದ ಭೂಷಿತವಾದ ವಸ್ತ್ರವನ್ನು ಲಿಂಗಕ್ಕೆ ಹೊದ್ದಿಸಿರುವಳು. ಬಿಲ್ವಪತ್ರೆ, ಸಂಪಿಗೆಹೂವು, ಧತ್ತೂರಿ, ಕಮಲ ಇವುಗಳ ಮಾಲೆಯನ್ನು ಸ್ವಾಮಿಗೆ ಅರ್ಪಿಸಿರುವಳು. ॥೩೩॥

ಜಾಜೀಹೂವಿನ ಮಾಲೆಯನ್ನು ಶಿವಲಿಂಗದ ಮೇಲೆ ಧರಿಸಿರುವಳು. ತಕ್ಕೋಲ, ಅಗರು, ಮುಂತಾದ ವೃಕ್ಷಜಾತಿಗಳಿಂದ ತಂದ ಧೂಪದಿಂದ ಧೂಮವನ್ನು ಕಲ್ಪಿಸಿ ಸಮರ್ಪಿಸುತ್ತಿರುವಳು. ॥೩೪॥

ದೊಡ್ಡ ತುಂಗ ಮುಸ್ತೆಯಂತಿರುವ ರತ್ನಗಳ ದೀಪಗಳಿಂದಲೂ, ಪುಂಡರೀಕ ಮಾಲೆಗಳಿಂದಲೂ, ನೀಲೋತ್ಪಲಗಳ ಸರಗಳಿಂದಲೂ ಆ ಶಿವಲಿಂಗವನ್ನು ದೇವಿಯು ಸದಾ ಪೂಜಿಸುತ್ತಿರುವಳು. ॥೩೫॥

ಹಸುರುಮಣಿಯಂತೆ ಹೊಳೆಯುವ ಬಿಲ್ವಪತ್ರೆಗಳಿಂದ ದೇವಿಯು ಸಹಸ್ರನಾಮಾರ್ಚನೆ ಮಾಡುವಳು. ಭಕ್ಷ್ಯ, ಭೋಜ್ಯ, ದಿವ್ಯವಾದ ಅನ್ನ ಇವೇ ಮೊದಲಾದುವುಗಳನ್ನು ಅಪರಿಮಿತವಾಗಿ ಸ್ವಾಮಿಗೆ ನಿವೇದನ ಮಾಡುವಳು. ॥೩೬॥

ಖದಿರದಂತೆ ಹೊಳೆಯುವ ಪಚ್ಚಕರ್ಪೂರಗಳಿಂದ ಕೂಡಿದ ಅಡಕೆಯನ್ನೂ ತಾಂಬೂಲವನ್ನೂ ಅರ್ಪಿಸುವಳು. ಶಂಖ, ತುತ್ತೂರಿ, ಮದ್ದಲೆ ಮುಂತಾದ ವಾದ್ಯ

**ವೀಣಾವೇಣುಜಮುಡ್ಡೂತ್ಥದುಂದುಭ್ಯಾದಿಸುನಿಸ್ವನೈಃ ।**
**ರುದ್ರಾಣೀನರ್ತನೈಶ್ಚೈವ ಯೋಗಿನೀಗಣವಾದನೈಃ ॥೩೮॥**

**ತ್ರಿಕಾಲಂ ಪೂಜಯತ್ಯೇವಂ ತ್ರಿಪುಂಡ್ರಲಲಿತಾಲಕಾ ।**
**ರುದ್ರಾಕ್ಷಕೀಲಿತಾಪಾರಮುಕ್ತಾಮಣಿಸರೋಜ್ಜ್ವಲಾ ॥೩೯॥**

**ಸೋಮಶೌಚೇ ವಾಸಸೀ ಸಾ ಪ್ಯರಜೇ ಧಾರಿಣೀ ಶಿವಾ ।**
**ಸಂಸ್ತುವಂತೀ ಮಹಾಲಿಂಗಂ ದೇವೀಶ್ವರಮತಂದ್ರಿತಾ ।**
**ಕೃತಾಂಜಲಿಪುಟಾ ದೇವೀ ಪ್ರಕೃಷ್ಟಂ ಚಾಷ್ಟವಿಗ್ರಹಂ ॥೪೦॥**

॥ ದೇವ್ಯುವಾಚ ॥

**ಹರ ಹರ ಪರಿಪಾಹಿ ದೀನಬಂಧೋ ।**
**ಪುರಹರ ದೇವ ದಯಾನಿಧಾನ ಧೀರ ।**

---

ಧ್ವನಿಗಳಿಂದ ಕೂಡಿದ ದಿವ್ಯವಾದ ನೀರಾಜನವನ್ನು ಶಿವಲಿಂಗಕ್ಕೆ ಸಮರ್ಪಿಸುವಳು. ॥೩೭॥

ವೀಣೆ, ಕೊಳಲು, ಡಿಂಡಿಮ, ದುಂದುಭಿ ಮೊದಲಾದ ವಾದ್ಯಧ್ವನಿಗಳಿಂದ ಉಪಚರಿಸುವಳು. ಅನೇಕ ರುದ್ರಾಣಿಯರು, ಯೋಗಿನೀಗಣಗಳ ವಾದ್ಯಧ್ವನಿಯೊಡನೆ ಸ್ವಾಮಿಯ ಎದುರಿನಲ್ಲಿ ನರ್ತನಮಾಡುವರು. ॥೩೮॥

ಹೀಗೆ ದೇವಿಯು ರುದ್ರಾಕ್ಷಿಯಿಂದ ಬೆರೆತ ಮುತ್ತಿನ ಸರವನ್ನು ಧರಿಸಿದವಳಾಗಿ, ತ್ರಿಪುಂಡ್ರವನ್ನು ಹಣೆಯಲ್ಲಿ ಧರಿಸಿ, ತ್ರಿಕಾಲದಲ್ಲಿಯೂ ದೇವೀಶ್ವರಲಿಂಗವನ್ನು ಪೂಜಿಸುವಳು. ॥೩೯॥

ಪೂಜಾಕಾಲದಲ್ಲಿ ದೇವಿಯು ಚಂದ್ರನಂತೆ ಶುಭ್ರವಾಗಿ ಯಾವ ವಿಧವಾದ ಕಶ್ಮಲವೂ ಇಲ್ಲದಂತಹ ಎರಡು ವಸ್ತ್ರಗಳನ್ನು ಧರಿಸಿ, ದೇವೀಶ್ವರಲಿಂಗವನ್ನು ಚಿತ್ತಶುದ್ಧಿಯಿಂದ ಆರಾಧಿಸಿ, ಪೂಜಾನಂತರ ಕೈಮುಗಿದು ನಿಂತು, ಈರೀತಿ ಸ್ವಾಮಿಯನ್ನು ಪ್ರಾರ್ಥಿಸುವಳು. ॥೪೦॥

"ಪರಮೇಶ್ವರನೇ, ಸಮಸ್ತ ಪಾಪನಾಶಕನೇ, ದೀನಬಂಧುವೇ, ತ್ರಿಪುರಾರಿಯೇ, ದಯಾಸಾಗರನಾದ ಧೀರಪುರುಷನೇ, ನಿನ್ನ ಪಾದಪದ್ಮವನ್ನು ವಿಷ್ಣುವೂ ಸಹ

ಮುರಹರಪರಿಪೂಜಿತಾಂಘ್ರಿಪದ್ಮ ।
ಪ್ರಕಟಸುಧಾಕರಶೇಖರೋರುವೀರ ॥೪೨॥

ಕರಿವರಖರಚರ್ಮವಸ್ತ್ರ ಶಂಭೋ ।
ಹ್ಯುರಗವರೋತ್ತಮಹಾರ ಮಾರಮಾರ ।
ಪರಿಪಾಹಿ ದಯಾನಿಧಾನ ಭರ್ಗ ।
ತ್ರಿನಯನ ಕಾಲಕಲಾವಿಹೀನದೇಹ ॥೪೩॥

ಶ್ರುತಿವರತುರಗೋತ್ತಮಾದ್ಯ ಶಂಭೋ
ಗರಗಲನೀಲ ತಮಾಲಪುಷ್ಪಮೌಲೇ ।
ಭವಭಯಹರ ಕಾರಣಾತಿಗಾಂತಕಾರೇ
ಹರಿಗಿರಿಶರಕಾರ್ಮುಕಾಕ್ತಪಾಣೇ ॥೪೪॥

---

ಪೂಜಿಸುತ್ತಿರುವನಲ್ಲವೇ ? ಸ್ವಾಮಿಯೇ, ನೀನು ಪ್ರಕಾಶಮಾನವಾದ ಚಂದ್ರನನ್ನೇ ತಲೆಯಲ್ಲಿ ಧರಿಸಿಕೊಂಡಿರುವೆಯಷ್ಟೆ. ॥೪೨॥

ಪರಶಿವನೇ, ನೀನು ಆನೆಯ ಕಠಿಣವಾದ ಚರ್ಮವನ್ನೇ ವಸ್ತ್ರವನ್ನಾಗಿ ಮಾಡಿಕೊಂಡಿರುವೆ. ಆದಿಶೇಷನೇ ನಿನಗೆ ಹಾರದಂತಿರುವನು. ಮನ್ಮಥನನ್ನು ನಾಶಮಾಡಿದವನೂ ನೀನೇ ಆಗಿರುವೆ. ತ್ರಿನಯನನೂ, ದಯಾನಿಧಿಯೂ, ಲೋಕ ರಕ್ಷಕನೂ ಆದ ನಿನಗೆ ಕಾಲನಿಯಮವಾಗಲಿ, ಕಲಾದಿಗುಣಗಳಾಗಲಿ ಯಾವುವೂ ಇಲ್ಲವಷ್ಟೆ. ಇಂತಹ ನೀನು ನನ್ನನ್ನು ಸರ್ವದಾ ರಕ್ಷಿಸು. ॥೪೩॥

ಓ ಶಂಕರನೇ, ನಿನಗೆ ನಾಲ್ಕು ವೇದಗಳೇ ನಾಲ್ಕು ಕುದುರೆಗಳಾಗಿವೆ. ವಿಷ ದಿಂದ ನಿನ್ನ ಕಂಠವು ಕಪ್ಪಾಗಿರುವುದು. ಹೊಂಗೆಯ ಪುಷ್ಪದ ಕಾಂತಿಯನ್ನು ಪಡೆದು ಪುಷ್ಪಮೌಲಿಯಾಗಿ, ಭವಭಯಗಳನ್ನೆಲ್ಲಾ ನಾಶಮಾಡುವ ಪರಶಿವನೇ, ಸಮಸ್ತ ಕಾರಣಗಳನ್ನೂ ಮೀರಿರುವ ಮಹೇಶ್ವರನೇ, ಮೇರುಪರ್ವತವೇ ನಿನಗೆ ಧನುಸ್ಸಾಗಿ ಕೈಯಲ್ಲಿ ನಿಂತಿತಲ್ಲವೇ ? ಲೋಕೇಶ್ವರನೇ, ಮಹಾಮಹಿಮನೇ ನನ್ನನ್ನು ರಕ್ಷಿಸು. ॥೪೪॥

**ಪರಿಪಾಹಿ ವಿಭೋ ತ್ರಿಶೂಲಪಾಣೇ**
**ನರಹರಿಕೃತ್ತಿವಸಾನ ಬಾಲಫಾಲ ।**
**ವಿಧಿಕಂಧರಹಂಸಶೋಭಿಹಸ್ತ**
**ಪದ್ಮಾನಲನಯನಾಗ್ನಿ ವಿದಗ್ಧಕಾಮದೇಹ ॥೪೫॥**

**ಇಮಂ ದನರಸಾಮಜಪ್ರಕಟಸ್ತೋತ್ರಕುಂಭಾದರಂ**
**ಸನಂದನಸನಾತನೈಃ ಕಲಿತವಂದನಂ ಶಂಕರಂ ।**
**ಅನಿಂದಿತಗುಣೋತ್ತಮಂ ಸುಮುನಿಬೃಂದಬೃಂದಾರಕೈಃ**
**ಪಿಚಂಡಿಲಸುತುಂದಿಲೈರ್ಗಣವರೌಘನೃತ್ತಾದರಂ ॥೪೬॥**

॥ ಸ್ಕಂದ ಉವಾಚ ॥

**ಇತಿ ಸಂಸ್ತುವತೇ ದೇವೀ ದೇವೀಶಂ ಪರಮೇಶ್ವರಂ ।**
**ರುದ್ರಾಣೀಗಣಸಂವೀತಾ ಯೋಗಿನೀಗಣಸೇವಿತಾ ॥೪೭॥**

---

ಪರಮೇಶ್ವರನೇ, ನೀನು ಸರ್ವವ್ಯಾಪಿಯು. ಶೂಲಪಾಣಿಯು. ಸಿಂಹಚರ್ಮಾಂಬರಧಾರಿಯು. ಅಜ್ಞಾನಿಗಳನ್ನು ರಕ್ಷಿಸುವವನು. ನೀನು ಬ್ರಹ್ಮನ ತಲೆಯನ್ನು ಕೈಯ್ಯಲ್ಲಿ ಹಿಡಿದು, ನಿನ್ನ ಫಾಲನೇತ್ರಾಗ್ನಿಯಿಂದ ಮನ್ಮಥನ ದೇಹವನ್ನು ಸುಟ್ಟು ಭಸ್ಮಮಾಡಿರುವೆ. ಮಹಾಮಹಿಮನೇ! ನಿನ್ನ ದಯೆಯು ಮಾತ್ರ ನನಗಿರಲಿ.॥೪೫॥

ಗಜಮುಖನ ಸ್ತೋತ್ರದಲ್ಲಿ ವಿಶೇಷಾಸಕ್ತಿಯುಳ್ಳವನಾಗಿ, ಸನಕಸನಂದನಾದಿ ಮಹರ್ಷಿವೃಂದದಿಂದ ಪರಿಪೂಜಿತನಾದ ಶಂಕರನನ್ನು ನಾನು ಸರ್ವದಾ ಭಜಿಸುತ್ತೇನೆ. ಪರಮೇಶ್ವರನು ಸದ್ಗುಣಪರಿಪೂರ್ಣನು. ದೇವರ್ಷಿಗಳ ಗುಂಪಿನಿಂದ ಸ್ತುತ್ಯನಾಗಿರುವವನು. ಪಿಚಂಡಿಲ, ಸುತುಂದಿಲ ಮೊದಲಾದ ಪ್ರಮಥಗಣಗಳು ನಡೆಸುವ ನಾಟ್ಯದಲ್ಲಿ ಆಸಕ್ತಿಯುಳ್ಳವನು. ಇಂತಹ ಮಹಾಮಹಿಮನೂ ಕರುಣಾಪೂರ್ಣನೂ ಆದ ಶಂಭುವನ್ನು ನಾನು ಮನಸಾ ಧ್ಯಾನಿಸುವೆನು." ॥೪೬॥

ಹೀಗೆ ಪರಮೇಶ್ವರನನ್ನು ದೇವಿಯು ರುದ್ರಾಣಿಯರಿಂದಲೂ, ಯೋಗಿನೀಗಣಗಳಿಂದಲೂ ಕೂಡಿದವಳಾಗಿ ಸರ್ವದಾ ಸ್ತುತಿಗೈಯುತ್ತಿರುವಳು. ॥೪೭॥

ಮಹಾಕೈಲಾಸಮಧ್ಯಸ್ಥಾ ದಿವ್ಯದೇಹಾಂಕಸಂಶ್ರಯಾ ।
ಸಾಪಿ ದೇವಂ ಜಗನ್ಮಾತಾ ಪೂಜಯತ್ಯನಿಶಂ ಶಿವಾ ॥೪೮॥

ದೇವದೇವಂ ಮಹಾದೇವಂ ಗೋವೃಷೋತ್ತಮಗಾಮಿನಂ ।
ಸಿತಂಸಿತಸುಧಾಧಾಮಶೇಖರಂ ಶ್ರುತಿಸಂಸ್ತುತಂ ॥೪೯॥

ಜಟಾಕಲಾಪನಿಟಿಲಾನಲನೇತ್ರಂ ಮಹೇಶ್ವರಂ ।
ನೀಲಕಂಠಂ ವಿರೂಪಾಕ್ಷಂ ಸೋಮಸೂರ್ಯಾನಲಾಕ್ಷಿಕಂ ॥೫೦॥

ಕುರಂಗರಂಜಿತಕರಂ ಕಾಲಕಾಲಂ ಕೃಪಾನಿಧಿಂ ।
ಭಸ್ಮಾಭ್ಯಕ್ತಂ ತ್ರಿಪುಂಡ್ರಾಂಕಂ ರುದ್ರಾಕ್ಷವರಹಾರಕಂ ॥೫೧॥

ಮಹೋರಗಫಣಾರತ್ನಮಾಲಾಕೀಲಿತಕಂಧರಂ ।
ಉದ್ಯದಿಂದುಕರಪ್ರಖ್ಯಕರ್ಪೂರಾಭಕಲೇವರಂ ॥೫೨॥

---

ಹೀಗೆ ದೇವಿಯು ಕೈಲಾಸಮಧ್ಯದಲ್ಲಿ ನೆಲಸಿ, ದಿವ್ಯದೇಹಧಾರಿಣಿಯಾಗಿ, ಜಗನ್ಮಾತೆಯೆನಿಸಿ ಸರ್ವದಾ ಪರಮೇಶ್ವರನನ್ನೇ ಧ್ಯಾನಿಸುತ್ತಿರುವಳು. ॥೪೮॥

ದೇವದೇವನೂ, ಮಹಾದೇವನೂ, ವೃಷಭಾರೂಢನಾಗಿರುವವನೂ, ಚಂದ್ರಶೇಖರನೂ, ವೇದಪ್ರತಿಪಾದ್ಯನೂ ಆದ ಶಂಕರನನ್ನು ಧ್ಯಾನಿಸುತ್ತಿರುವಳು. ॥೪೯॥

ಜಟಾಕಲಾಪವುಳ್ಳವನೂ, ಅಗ್ನಿನೇತ್ರವಿಶಿಷ್ಟನೂ, ನೀಲಕಂಠನೂ, ವಿರೂಪಾಕ್ಷನೂ, ಸೂರ್ಯ, ಚಂದ್ರ ಮತ್ತು ಅಗ್ನಿಯನ್ನೇ ನೇತ್ರಗಳನ್ನುಳ್ಳವನೂ ಆಗಿರುವ ಪರಮೇಶ್ವರನನ್ನು ದೇವಿಯು ಸದಾ ಆರಾಧಿಸುತ್ತಿರುವಳು. ॥೫೦॥

ಪರಮೇಶ್ವರನು ಜಿಂಕೆಯನ್ನು ಕೈಯಲ್ಲಿ ಧರಿಸಿರುವವನು. ಕಾಲನಿಗೂ ಕಾಲನಂತಿರುವವನು. ದಯಾಸಾಗರನು. ಭಸ್ಮದಿಂದ ಲಿಪ್ತನಾಗಿ, ತ್ರಿಪುಂಡ್ರಧಾರಿಯಾಗಿ ರುದ್ರಾಕ್ಷಿಯ ಹಾರವನ್ನು ಧರಿಸಿರುವನು. ॥೫೧॥

ನಾಗರತ್ನಗಳಿಂದ ಕೂಡಿದ ರತ್ನಮಾಲೆಯನ್ನು ಶಂಕರನು ಧರಿಸಿರುವನು. ಬಾಲಚಂದ್ರನಂತೆ ಶುಭ್ರವಾಗಿ ಕಂಗೊಳಿಸುವ ಕರ್ಪೂರದಿಂದ ತನ್ನ ದೇಹವನ್ನು ಶುಭ್ರವನ್ನಾಗಿ ಮಾಡಿಕೊಂಡಿರುವನು. ॥೫೨॥

ದಿವ್ಯಸಿಂಹಾಸನಾಸೀನಂ ಮಹಾಕೈಲಾಸಸೌಧಗಂ ।
ಗಣಸ್ಕಂದಮಹಾನಂದಿಭೃಂಗಿಚಂಡೀಶಸೇವಿತಂ ॥೫೩॥

ಮುಕುಟೋದ್ದಾಮಗಂಗೋತ್ಥರಯಶೋಭಿತಮಸ್ತಕಂ ।
ಅಬ್ಜಮಿತ್ರಾಗ್ನಿನಯನಂ ಸೋಮಖಂಡೋಜ್ಜ್ವಲಾಲಕಂ ॥೫೪॥

ಉತ್ಫುಲ್ಲಪುಂಡರೀಕಾಚ್ಛಮಾಲಾಲಲಿತಕಂಧರಂ ।
ದೇವಂ ನಂದನಮಂದಾರವರಮಾಲಾವಿಭೂಷಿತಂ ॥೫೫॥

ಖಪಟಂ ಪರಿತೋ ದಗ್ಧತ್ರಿಪುರಾಸುರಗೋಪುರಂ ।
ಅಂಧಕಾಂತಕಮಾಶಾಸ್ಯಂ ಸ್ವಭಕ್ತಜನವತ್ಸಲಂ ॥೫೬॥

ನಮಿತಾಶೇಷದೇವಾದಿಮುಕುಟೋಜ್ಜ್ವಲಪಾದುಕಂ ।
ವಾಮದೇವಂ ಮಹಾಸಾಮಸ್ತೋಮಸ್ತುತಮತೀಂದ್ರಿಯಂ ॥೫೭॥

---

ಪರಮೇಶ್ವರನು ದಿವ್ಯಸಿಂಹಾಸನದಲ್ಲಿ ಮಂಡಿಸಿರುವನು. ಕೈಲಾಸಪರ್ವತದ ಸೌಧಭಾಗದಲ್ಲಿ ನೆಲಸಿರುವನು. ವಿನಾಯಕ, ಸ್ಕಂದ, ಮಹಾನಂದಿ, ಭೃಂಗಿ, ಚಂಡಿ ಮೊದಲಾದವರು ಸರ್ವದಾ ಮಹೇಶ್ವರನನ್ನು ಸೇವಿಸುತ್ತಿರುವರು. ॥೫೩॥

ಕಿರೀಟದಲ್ಲಿ ಗಂಗಾನದಿಯು ವೇಗದಿಂದ ಪ್ರವಹಿಸುತ್ತಿರುವುದು. ಅದರ ಗಂಭೀರಧ್ವನಿಯು ಕಿರೀಟವನ್ನು ಇನ್ನೂ ಪ್ರಕಾಶಗೊಳಿಸುತ್ತಿರುವುದು. ಸೂರ್ಯ, ಚಂದ್ರ, ಅಗ್ನಿ ಇವರೇ ಮಹೇಶ್ವರನಿಗೆ ಕಣ್ಣುಗಳಾಗಿರುವರು. ಚಂದ್ರಖಂಡವು ತನ್ನ ಕಾಂತಿಯಿಂದ ಪರಶಿವನ ಮುಂಗುರುಳುಗಳನ್ನು ಪ್ರಕಾಶಿಸುವಂತೆ ಮಾಡಿರುವುದು. ॥೫೪॥

ಅರಳಿದ ತಾವರೆಯ ಹೂವುಗಳ ಮಾಲೆಯು ಪರಶಿವನ ಕಂಠಪ್ರದೇಶವನ್ನಲಂಕರಿಸುತ್ತಿರುವುದು. ನಂದನವನದಲ್ಲಿ ಹುಟ್ಟಿದ ಮಂದಾರಕುಸುಮಮಾಲೆಯು ಸ್ವಾಮಿಯನ್ನು ಸುತ್ತುವರಿದು ಹೊಳೆಯುತ್ತಿರುವುದು. ॥೫೫॥

ಪರಮೇಶ್ವರನು ದಿಗಂಬರನು. ತ್ರಿಪುರಾಸುರರನ್ನೂ, ತ್ರಿಪುರಗಳನ್ನೂ ಧ್ವಂಸಮಾಡಿದವನು. ಅಂಧಕಾಸುರಸೂದನನು. ಭಕ್ತಜನಪ್ರೇಮಿಯು. ॥೫೬॥

ಸಮಸ್ತ ದೇವತೆಗಳೂ ಪರಶಿವನ ಪಾದುಕೆಗಳಿಗೆ ನಮಸ್ಕರಿಸುವಾಗ ತಮ್ಮ ಕಿರೀಟಗಳ ಕಾಂತಿಯಿಂದ ಆ ಪಾದುಕೆಗಳನ್ನು ಬೆಳಗಿಸುತ್ತಿರುವರು. ವಾಮದೇವ

ರಥಂತರರವಪ್ರೀತಂ ರಾಜದ್ರಾಜನತೋಷಿತಂ ।
ಮಹಾವೈರಾಜರಾಜಶ್ರೀರಾಜರಾಜಕಲಾಧರಂ ॥೫೮॥

ಸರ್ವೋಪನಿಷದಾಂ ಸಾರಮೇಕೀಭೂತಮಿವೇಶ್ವರಂ ।
ಧ್ಯಾಯಂತೀ ಸಾ ಮಹಾದೇವೀ ಸ್ವಮನಃಪದ್ಮಸದ್ಮಗಂ ॥೫೯॥

ತದ್ಧ್ಯಾನಸಾರಧಾರಾಭಿಃ ಪ್ಲಾವಿತಾನನಪಂಕಜಾ ।
ನಾನ್ಯತ್ಸಾ ಚಿಂತಯದ್ದೇವೀ ಜಗಜ್ಜನ್ಮಾದಿಸಂಸ್ಥಿತಿಂ ॥೬೦॥

ಇತ್ಥಂ ಧ್ಯಾಯಂತೀ ಚಂದ್ರಶೇಖರಪದಂ ಚೋತ್ಫುಲ್ಲಹೃತ್ಪದ್ಮಗಂ
ದೇವೀ ನಂದನನಂದನೇಽಪಿ ಗಿರಿಜಾ ಸಾಸಾರವಶ್ಯಾಂತರಾ ।

---

ನಾಗಿ, ಸಾಮವೇದಗಳಿಂದ ಸ್ತುತಿಸಲ್ಪಟ್ಟಿರುವನು. ಮತ್ತು ಇಂದ್ರಿಯಗಳಿಗೆ ಅಗೋಚರನೆನಿಸಿರುವನು. ॥೫೭॥

ರಥಂತರವೆಂಬ ಸಾಮವೇದದಿಂದ ತೃಪ್ತನಾಗಿರುವವನು. ರಾಜನ, ವೈರಾಜ ಮುಂತಾದ ಸಾಮಗಾನಭೇದಶ್ರವಣದಿಂದ ಸಂತೋಷಗೊಳ್ಳುವನು. ಪ್ರಕಾಶವೆಂಬ ಲಕ್ಷ್ಮಿಗೆ ಆವಾಸಸ್ಥಾನನು. ರಾಜರಾಜನಾದ ಕುಬೇರನ ಕಾಂತಿಯನ್ನೆಲ್ಲಾ ಧರಿಸಿರುವನು. ॥೫೮॥

ಸಕಲ ಉಪನಿಷತ್ತುಗಳಿಗೂ ಸಾರಭೂತನಾಗಿ, ಸಮಸ್ತ ದೇವತೆಗಳಿಗೂ ಆವಾಸಭೂತನಾಗಿ, ಏಕಸ್ವಭಾವದಿಂದ ತೋರುತ್ತಿರುವ ಪರಶಿವನನ್ನು ತನ್ನ ಮನಸ್ಸೆಂಬ ಕಮಲದಲ್ಲಿಟ್ಟು ದೇವಿಯು ಸರ್ವದಾ ಪರಶಿವನನ್ನೇ ಧ್ಯಾನಿಸುತ್ತಿರುವಳು. ॥೫೯॥

ಆ ಧ್ಯಾನಸಾರದಿಂದ ಆರ್ದ್ರವಾದ ಮುಖಕಮಲವುಳ್ಳವಳಾಗಿ ಪಾರ್ವತಿಯು, ಜಗಜ್ಜನನಸ್ಥಿತಿನಾಶಗಳಿಗೆ ಮೂಲಕಾರಣನಾದ ಪರಮೇಶ್ವರನನ್ನು ಬಿಟ್ಟು ಮತ್ತೆ ಯಾರನ್ನೂ ಯಾವಾಗಲೂ ಸ್ಮರಿಸುವುದಿಲ್ಲ. ॥೬೦॥

ಹೀಗೆ ಪರಮೇಶ್ವರಿಯು ಚಂದ್ರಶೇಖರನ ಪಾದವನ್ನು ತನ್ನ ಹೃದಯ ಕಮಲದಲ್ಲಿಟ್ಟು ಧ್ಯಾನಿಸುವಳು. ನಂದನವನದಲ್ಲಿಯೂ ದೇವಿಗೆ ಇಷ್ಟವಾದ ವಸ್ತುವು ಸ್ವಾಮಿಯನ್ನು ಬಿಟ್ಟು ಮತ್ತೊಂದಿರಲಾರದು. ಅಷ್ಟೇ ಅಲ್ಲ, ಮೂರು ಲೋಕದಲ್ಲಿರುವ ವಸ್ತುಜಾತವೆಲ್ಲಾ ನಶ್ವರವಾದದ್ದು, ನಿಸ್ಸಾರವಾದದ್ದು. ಜಗತ್ತೆ

ನಾನ್ಯತ್ಕಿಂಚನ ವಿದ್ಯತೇ ತ್ರಿಭುವನೇ ನಿಸ್ಸಾರಮೇತಜ್ಜಗ
ತ್ತುಚ್ಛೀಕೃತ್ಯ ಮಹಾಚ್ಛಮಾನಸಪರಾ ಸ್ವಾತ್ಮಾನಮೀಶಂ ಹೃದಿ॥೬೧॥

ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ಕೈಲಾಸವರ್ಣನೇ
ದೇವೀಪೂಜಾಸ್ತುತಿಕಥನಂ ನಾಮ ಸಪ್ತವಿಂಶೋಽಧ್ಯಾಯಃ

---

ಲ್ಲವೂ ಕ್ಷಣಿಕವಾದದ್ದು. ಸತ್ಯವಾದ ವಸ್ತುವೆಂದರೆ ಪರಶಿವನೊಬ್ಬನೇ ಎಂದು ಭಾವಿಸಿ ಗಿರಿಜೆಯು ಸರ್ವದಾ ಮಹೇಶ್ವರನನ್ನೇ ಸೇವಿಸುತ್ತಿರುವಳು ಎಂದು ಕುಮಾರಸ್ವಾಮಿಯು ಜೈಗೀಷವ್ಯಾದಿಗಳಿಗೆ ತಿಳಿಸಿದನು. ॥೬೧॥

ಇಲ್ಲಿಗೆ ಶ್ರೀ ಶಿವರಹಸ್ಯದ ಪ್ರಥಮಾಂಶದಲ್ಲಿ ಕೈಲಾಸವರ್ಣನೆಯ
ಪ್ರಸ್ತಾವದಲ್ಲಿ ದೇವೀಪೂಜಾವಿಧಿಯನ್ನು ತಿಳಿಸುವ
ಇಪ್ಪತ್ತೇಳನೆಯ ಅಧ್ಯಾಯವು ಮುಗಿದುದು

॥ ಶ್ರೀಃ ॥

# ಅಥ ಶ್ರೀಶಿವರಹಸ್ಯೇ

## ಅಷ್ಟಾವಿಂಶೋಽಧ್ಯಾಯಃ

### ಕೈಲಾಸಪ್ರಾಸಾದವರ್ಣನಂ

॥ ಸ್ಕಂದ ಉವಾಚ ॥

**ತಸ್ಯಾಂತರೇ ಚ ಪ್ರಾಕಾರೋ ನವರತ್ನವಿಚಿತ್ರಿತಃ ।**
**ಅಷ್ಟಾಶೀತಿಸಹಸ್ರಾಣಾಂ ಯೋಜನೋಚ್ಛ್ರಯಕಲ್ಪಿತಃ ॥೧॥**

**ಚತುರ್ದಶ ಮಹೇಶೇನ ಮನಸೈವ ಪ್ರಕಲ್ಪಿತಃ ।**
**ಬ್ರಹ್ಮಾಂಡೋರ್ಧ್ವಗಮೌಲೀ ಸ ಪ್ರೋದ್ಯದ್ಭಾನುಸಹಸ್ರಭಾಃ ॥೨॥**

**ನ ದೇವಾ ನ ಚ ಗಂಧರ್ವಾ ನ ಯಕ್ಷೋರಗರಾಕ್ಷಸಾಃ ।**
**ಗಣೇಂದ್ರೈರಪಿ ದುಷ್ಪ್ರೇಕ್ಷ್ಯಃ ಪ್ರಾಕಾರೋ ರತ್ನಕಲ್ಪಿತಃ ॥೩॥**

---

ಶ್ರೀಶಿವರಹಸ್ಯದಲ್ಲಿ ಇಪ್ಪತ್ತೆಂಟನೆಯ ಅಧ್ಯಾಯ

ಆ ಕೈಲಾಸಪರ್ವತದ ಮಧ್ಯಭಾಗದಲ್ಲಿ ನವರತ್ನಮಯವಾದ ಪ್ರಾಕಾರವೊಂದಿರುವುದು. ಅದು ಎಂಬತ್ತೆಂಟುಸಾವಿರ ಯೋಜನ ಪರಿಮಿತಿಯುಳ್ಳದ್ದಾಗಿರುವುದು. ॥೧॥

ಆ ಪ್ರಾಕಾರವು ಈಶ್ವರನ ಮನಸ್ಸಿನಿಂದಲೇ ನಿರ್ಮಿತವಾದುದು. ಚತುರ್ದಶ ಬ್ರಹ್ಮಾಂಡಗಳನ್ನೂ ಮೀರಿ, ಉದಯಕಾಲದ ಸೂರ್ಯನಂತೆ ಕಾಂತಿಯುಳ್ಳದ್ದಾಗಿ, ಊರ್ಧ್ವಭಾಗದಲ್ಲಿ ನೆಲಸಿರುವುದು. ॥೨॥

ಆ ರತ್ನಮಯವಾದ ಪ್ರಾಕಾರವನ್ನು ದೇವತೆಗಳಾಗಲಿ, ಗಂಧರ್ವರಾಗಲಿ, ಯಕ್ಷರು, ರಾಕ್ಷಸರು, ಉರಗಗಳು ಇನ್ನೂ ಗಣನಾಯಕರು ಯಾರೂ ಸುಲಭವಾಗಿ ನೋಡಲಾರರು. ॥೩॥

**ತತ್ರ ಶೈಲಾಶ್ಶಿವೇನೈವ ಚಾಷ್ಟದಿಕ್ಷು ಪ್ರತಿಷ್ಠಿತಾಃ ।**
**ನಿಷಧೋ ಹೇಮಕೂಟಶ್ಚ ವಿಂಧ್ಯೋ ಮಲಯದರ್ದುರೌ ॥೪॥**

**ಮಂದರೋ ಹಿಮವಾಂಶ್ಚೈವ ನೀಲೋತ್ರೈವ ಪ್ರಕಾಶಿತಃ ।**
**ತೇಷಾಂ ತಪಸ್ಯಯಾ ಶಂಭುಸ್ಸಂತುಷ್ಟೋ ನಿತರಾಂ ತದಾ ॥೫॥**

**ಸ್ವಾವಾಸೇಽಪಿ ಮಹಾಶೈಲೇ ಮಹಾಕೈಲಾಸಪರ್ವತೇ ।**
**ತೇಷಾಂ ನಿತ್ಯಂ ನಿವಸತಿಂ ದದೌ ಕಾರುಣ್ಯತಶ್ಶಿವಃ ॥೬॥**

**ಅನ್ಯತ್ರ ತೇ ಶಿಲಾಶೈಲಾಃ ಕೈಲಾಸೇ ರತ್ನಸನ್ನಿಭಾಃ ।**
**ತತ್ಪ್ರಾಕಾರಾಷ್ಟಕೋಣೇಷು ವಿಹಿತಾಶ್ಶೂಲಪಾಣಿನಾ ॥೭॥**

**ಪೂರ್ವತೋ ನಿಷಧೋ ಭಾತಿ ಚಾಗ್ನೇಯ್ಯಾಂ ಹೇಮಕೂಟಕಃ ।**
**ವಿಂಧ್ಯೋಽಸೌ ದಕ್ಷಿಣೇ ಭಾತಿ ಮಲಯೋ ನೈರೃತೇ ಸ್ಥಿತಃ ॥೮॥**

---

ಆದರೆ ನಿಷಧ, ಹೇಮಕೂಟ, ವಿಂಧ್ಯ, ಮಲಯ, ದರ್ದುರ, ಮಂದರ, ಹಿಮವಂತ, ನೀಲ ಈ ಎಂಟು ಪರ್ವತಗಳು ಪರಮೇಶ್ವರನನ್ನು ಕುರಿತು ಬಹುವಾಗಿ ತಪಸ್ಸು ಮಾಡಿದುವು. ಅದರಿಂದ ತೃಪ್ತನಾದ ಶಂಕರನು ಈ ಎಂಟು ಪರ್ವತಗಳನ್ನು ಮಾತ್ರ ತನ್ನ ಪ್ರಾಕಾರದ ಎಂಟು ಕಡೆಗಳಲ್ಲಿಯೂ ಸ್ಥಾಪಿಸಿರುವನು. ||೪-೫||

ಈ ಅಷ್ಟಪರ್ವತಗಳು ಕೈಲಾಸಪರ್ವತವನ್ನಾಶ್ರಯಿಸಿ ಸರ್ವದಾ ಅಲ್ಲಿಯೇ ನೆಲಸಿರುವುವು. ಹಾಗೆ ಸ್ಥಿರವಾದ ವಾಸಕ್ಕೆ ಶಂಕರನೇ ದಯೆಯಿಂದ ಅನುಮತಿ ಕೊಟ್ಟಿರುವನು. ಈ ಎಂಟು ಪರ್ವತಗಳು ಭೂಲೋಕದಲ್ಲಿಯೂ ಇರುವುವು. ಆದರೆ ಭೂಮಿಯಲ್ಲಿ ಶಿಲಾಮಯಗಳಾಗಿರುವುವು. ಕೈಲಾಸದಲ್ಲಿ ಮಾತ್ರ ರತ್ನಮಯ ಗಳಾಗಿ ಕಾಣುವುವು. ಇಂತಹ ಪರ್ವತಗಳನ್ನು ಶಂಕರನು ಆ ಪ್ರಾಕಾರದ ಅಷ್ಟ ಕೋಣಗಳಲ್ಲಿಯೂ ನಿಲ್ಲಿಸಿರುವನು. ||೬-೭||

ಪೂರ್ವದಿಕ್ಕಿನಲ್ಲಿ ನಿಷಧ, ಆಗ್ನೇಯದಲ್ಲಿ ಹೇಮಕೂಟ, ದಕ್ಷಿಣದಲ್ಲಿ ವಿಂಧ್ಯ, ನೈಋತ್ಯದಲ್ಲಿ ಮಲಯ, ಹೀಗೆ ಪರ್ವತಗಳಿಗೆ ದಿಗ್ವ್ಯವಸ್ಥೆಯಿದೆ. ||೮||

ವಾರುಣ್ಯಾಂ ದರ್ದುರೋ ಭಾತಿ ವಾಯವ್ಯಾಂ ಭಾತಿ ಮಂದರಃ ।
ಹಿಮವಾನುತ್ತರೇ ಭಾತಿ ಚೈಶಾನ್ಯಾಂ ನೀಲಪರ್ವತಃ ॥೯॥

ಅಷ್ಟದಿಕ್ಷು ಸ್ಥಿತಾ ಏತೇ ಮಹಾಕೈಲಾಸಪರ್ವತೇ ।
ಸ್ವಮೌಲಿಭಿರ್ಭಾಸಯಂತಿ ದಿಶಾಂ ಸ್ತೋಮಂ ನಗೋತ್ತಮಾಃ ॥೧೦॥

ತನ್ಮೌಳಿಸೌಧಶಿಖರೈಸ್ಸೂರ್ಯಚಂದ್ರಾತಿಕಾಂತಿಕೈಃ ।
ಮಾಣಿಕ್ಯಕಾಂತಿರ್ನಿಷಧಶ್ಚೈಂದ್ರ್ಯಾಮಿಂದ್ರಧನುಃ ಪ್ರಭಃ ॥೧೧॥

ಇಂದ್ರಗೋಪನಿಭೋ ಭಾತಿ ಭಾಭಾಸಿತದಿಗಂತರಃ ।
ಅಭ್ರಂಕಷೈಸ್ಸ್ವಶೃಂಗಾಗ್ರೈರ್ಲೇಲಿಹಾನ ಇವಾಂಬರಂ ॥೧೨॥

ತನ್ಮೌಲಿಷು ಸ್ಥಿತಾಪಾರರತ್ನಗೋಪುರಭಾಸುರಃ ।
ನಾನಾರುದ್ರಾವತಾರೈಶ್ಚ ವೃಷಭೈಶ್ಚೈವ ಶೋಭಿತಃ ॥೧೩॥

---

ದರ್ದುರಪರ್ವತವು ಪಶ್ಚಿಮದಲ್ಲೂ, ಮಂದರಪರ್ವತವು ವಾಯವ್ಯದಲ್ಲೂ, ಉತ್ತರ ಮತ್ತು ಈಶಾನ್ಯಗಳಲ್ಲಿ ಹಿಮವಂತ ಮತ್ತು ನೀಲಪರ್ವತಗಳು, ಹೀಗೆ ಅಲ್ಲಿ ನೆಲಸಿವೆ. ॥೯॥

ಹೀಗೆ ಎಂಟು ಪರ್ವತಗಳೂ ಕೈಲಾಸಪರ್ವತದ ಎಂಟು ದಿಕ್ಕುಗಳಲ್ಲಿ ತನ್ನ ಶಿಖರಗಳ ಕಾಂತಿಯಿಂದ ದಿಕ್ಕುಗಳನ್ನೆಲ್ಲಾ ಬೆಳಗಿಸುತ್ತಾ ನಿಂತಿರುವುವು, ॥೧೦॥

ಅವುಗಳ ಮೇಲ್ಭಾಗದಲ್ಲಿರುವ ಸೌಧಗಳ ಶಿಖರಗಳು ಸೂರ್ಯಚಂದ್ರರ ಕಾಂತಿಯನ್ನು ಸಹ ಮೀರಿ, ಹೊಳೆಯುತ್ತಿರುವುವು. ಅವರಲ್ಲಿ ಪೂರ್ವದಿಕ್ಕಿನಲ್ಲಿರುವ ಪರ್ವತವು ಕಾಮನಬಿಲ್ಲಿನಂತೆ ಹೊಳೆಯುತ್ತಾ ಮಾಣಿಕ್ಯಗಳ ಕಾಂತಿಯನ್ನು ಬೀರತಕ್ಕದ್ದಾಗಿರುವುದು. ॥೧೧॥

ಇಂದ್ರಚಾಪಕ್ಕೆ ಸದೃಶವಾಗಿ ತನ್ನ ಕಾಂತಿಯಿಂದ ಸಕಲ ದಿಕ್ಕುಗಳನ್ನೂ ಬೆಳಗಿಸುತ್ತ ನಿಷಧಪರ್ವತವು, ತನ್ನ ಶಿಖರಗಳ ಅಗ್ರಭಾಗದಿಂದ ಅಂತರಿಕ್ಷಭಾಗವನ್ನು ನೆಕ್ಕುತ್ತಿದ್ದೆಯೋ ಎಂಬಂತೆ ತೋರಿಬರುತ್ತಿರುವುದು. ॥೧೨॥

ಅದರ ಶಿಖರಗಳಲ್ಲಿ ಅನೇಕ ರತ್ನಮಯವಾದ ಗೋಪುರಗಳಿವೆ. ಅವೆಲ್ಲವೂ ಬಹಳವಾದ ತೇಜಸ್ಸಿನಿಂದ ಹೊಳೆಯುತ್ತಿರುವುವು. ಅವುಗಳಲ್ಲಿ ನಾನಾವಿಧವಾದ ರುದ್ರಾವತಾರದ ವಿಗ್ರಹಗಳೂ, ವೃಷಭವಿಗ್ರಹಗಳೂ ಶೋಭಿಸುತ್ತಿರುವುವು. ॥೧೩॥

ಭಾತಿ ಭಾಸಿತದಿಕ್ಚಕ್ರೋ ಮುಷ್ಣಂಶ್ಚಕ್ಷೂಂಷಿ ಕಾಂತಿಭಿಃ ।
ತಚ್ಛೈಲಮೌಲಿಜೋತ್ತುಂಗಗಜರತ್ನೋರುಕುಂಭಕಃ ॥೧೪॥

ಸಹಸ್ರಸಿಂಧುರೋತ್ತುಂಗದರಪೀಠೋಽಮಿತಪ್ರಭಃ ।
ಮಹಾತಲೋ ಮಹಾಸೌಧಸ್ಸಹಸ್ರಸ್ತಂಭಮಂಡಿತಃ ॥೧೫॥

ದಾಡಿಮೀಬೀಜಸಂಕಾಶಸ್ಸ್ವಚ್ಛಕಾಂತಿತತೋರುಭಾಃ ।
ಸೋಪಾನವೇದಿಕೋಪೇತಸಹಸ್ರತಲಮಂಡಿತಃ ॥೧೬॥

ಪದ್ಮರಾಗಮಣಿಸ್ತಂಭಕಲಶೈಶ್ಚೈವ ಶೋಭಿತಃ ।
ನಾನಾರತ್ನಮಹಾಮಾಲಾಪರಿಷ್ಕೃತತದಂತರಃ ॥೧೭॥

ತದ್ರತ್ನರತ್ನಕಾಂತ್ಯಾ ಚ ಸ್ಯೆಂದ್ರೀದಿಗ್ರತ್ನವರ್ಣಕಾ ।
ವಿಭಾತಿ ಮಂಡಲಂ ಭಾನೋಸ್ತತ್ಸೌಧಾರುಣಕಾಂತಿಭಿಃ ॥೧೮॥

---

ಅದರ ಕಾಂತಿಯು ಸಮಸ್ತ ದಿಕ್ಕುಗಳನ್ನೂ ಬೆಳಗಿಸುತ್ತಿರುವುದು. ಅದರಿಂದ ನೋಡುವವರ ಕಣ್ಣುಗಳು ಕೋರೈಸಿ ಹೋಗುತ್ತಿರುವುವು. ಆ ಪರ್ವತದ ಅಗ್ರಭಾಗದಲ್ಲಿ, ಎತ್ತರವಾದ ದಿವ್ಯರತ್ನಕಲಶದಿಂದ ಕೂಡಿದ್ದಾಗಿಯೂ, ॥೧೪॥

ಸಾವಿರಾರು ಆನೆಗಳಿಂದ ವಿರಾಜಮಾನವಾಗಿರುವ ಪೀಠಗಳುಳ್ಳದ್ದಾಗಿಯೂ, ಅತ್ಯಂತ ಕಾಂತಿಯುಳ್ಳದ್ದಾಗಿಯೂ, ಸಹಸ್ರ ಕಂಭಗಳಿಂದ ಪರಿವೃತವಾದದ್ದಾಗಿಯೂ ಇರುವ ವಿಶಾಲವಾದ ಸೌಧವೊಂದಿರುವುದು. ೧೫॥

ದಾಳಿಂಬೆಹಣ್ಣಿನ ಬೀಜಗಳ ಕೆಂಪಿಗಿಂತಲೂ ಅತಿಶಯವಾದ ಕೆಂಪನ್ನು ಆ ಸೌಧವು ಬೀರುತ್ತಿರುವುದು. ಸುತ್ತುವಲಯದಲ್ಲಿ ಮೆಟ್ಟಲುಗಳೂ, ಜಗಲಿಗಳೂ ಅಸಂಖ್ಯಾತವಾಗಿ ರಂಜಿಸುತ್ತಿರುವುವು. ॥೧೬॥

ಆ ಸೌಧಕ್ಕೆ ಪದ್ಮರಾಗಮಣಿಗಳಿಂದ ನಿರ್ಮಿತವಾದ ಸ್ತಂಭಗಳೂ, ಕಲಶಗಳೂ ಅನೇಕವಾಗಿರುವುವು. ಆ ಸೌಧದ ಒಳಭಾಗವಂತೂ ದಿವ್ಯವಾದ ರತ್ನಮಾಲೆಗಳಿಂದಲೇ ಅಲಂಕರಿಸಲ್ಪಟ್ಟಿರುವುದು. ॥೧೭॥

ಈ ಸೌಧದಲ್ಲಿರುವ ರತ್ನಕಾಂತಿಯಿಂದ ಪೂರ್ವದಿಕ್ಕೇ ರತ್ನವಿಶಿಷ್ಟವಾಗಿದೆಯೋ ಎಂಬಂತಿರುವುದು. ಹೆಚ್ಚೇನು ? ಇದರ ಕಾಂತಿಯಿಂದಲೇ ಸೂರ್ಯಮಂಡಲವೂ ಹೆಚ್ಚಿನ ತೇಜಸ್ಸುಳ್ಳದ್ದಾಗಿ ತೋರಿಬರುತ್ತಿರುವುದು. ॥೧೮॥

ಆರಕ್ತಂ ಹಿ ನಭೋ ವಿಪ್ರಾ ಭಾತಿ ತಚ್ಛೈಲಕಾಂತಿಭಿಃ ।
ತತ್ರಾಗರುಮಹಾಧೂಪೈರ್ಬಹುಲೈರ್ಗಂಧವತ್ತರೈಃ ॥೧೯॥

ಪ್ರಫುಲ್ಲವನಜಾಸಾರಗಂಧಬಂಧಿತಮಾರುತೈಃ ।
ತತ್ರ ಸಿಂಹಾಸನಾಸೀನೋ ದೇವ್ಯಾ ಸಾಕಂ ಮಹೇಶ್ವರಃ ॥೨೦॥

ಕ್ರೀಡತ್ಯತ್ಯಂತಮುದಿತೋ ಗಣಬೃಂದನಿಷೇವಿತಃ ।
ತದಖಂಡಮಹಾಸ್ತಂಭಾನ್ ಪದ್ಮರಾಗಪ್ರಕಲ್ಪಿತಾನ್ ॥೨೧॥

ಸ ಏವ ದ್ಯೋತಯತ್ಯಂತಃ ಕೋಟಿಭಾಸ್ಕರಸಪ್ರಭಃ ।
ಪಶ್ಯನ್ನೈಂದ್ರೀಂ ದಿಶಂ ಶಂಭುಸ್ತತ್ರೈವಾಪ್ಯಮರಾವತೀಂ ॥೨೨॥

ತತ್ರೇಂದ್ರಸದನಂ ದೇವಾನಿಂದ್ರಾದೀನಮರಾನಪಿ ।
ದೇವಾನಾಂ ನಂದನೋತ್ಫುಲ್ಲಕುಸುಮಾನೋದಿಮಾರುತಂ ॥೨೩॥

---

ನಿಷಧಪರ್ವತದ ಕಾಂತಿಯಿಂದ ಆಕಾಶವೆಲ್ಲಾ ರಕ್ತವರ್ಣವುಳ್ಳದ್ದಾಗಿರುವುದು. ಅಷ್ಟೇ ಅಲ್ಲದೆ ಅಲ್ಲಿರುವ ಸುಗಂಧಮಯವಾದ ಅಗರು, ಮುಂತಾದ ಧೂಪಗಳ ಹೊಗೆಯಿಂದ ಆ ಭಾಗವೆಲ್ಲವೂ ಸುವಾಸಿತವಾಗಿರುವುದು. ॥೧೯॥

ಅಲ್ಲಿ ಅರಳಿದ ಕಮಲಗಳ ಸುವಾಸನೆಯನ್ನು ಹೊತ್ತು ಬರುವ ಮಾರುತವು ಮಂದವಾಗಿ ಬೀಸುತ್ತಿರುವುದು. ಇಂತಹ ರಮ್ಯವಾದ ಆ ಪರ್ವತದಲ್ಲಿ ಮಹೇಶ್ವರನು ಪಾರ್ವತಿಯೊಡನೆ ಸಿಂಹಾಸನಾಸೀನನಾಗಿ ಮಂಡಿಸಿರುವನು. ॥೨೦॥

ಅಲ್ಲದೆ ಸಂತುಷ್ಟಚಿತ್ತನಾಗಿ ಪ್ರಮಥಗಣಗಳಿಂದ ಸೇವಿತನಾಗಿರುವನು. ಮತ್ತು ಆ ಸೌಧದಲ್ಲಿರುವ ಪದ್ಮರಾಗರಚಿತವಾಗಿರುವ ಅಖಂಡವಾದ ಕಂಬಗಳನ್ನು ತನ್ನ ಕಾಂತಿಯಿಂದ ಬೆಳಗಿಸುತ್ತಿರುವನು. ॥೨೧॥

ಅದರಿಂದಲೇ ಅದು ಕೋಟಿಸೂರ್ಯರಂತೆ ಹೊಳೆಯುತ್ತಿರುವುದು. ಮತ್ತು ಪೂರ್ವದಿಕ್ಕಿನಲ್ಲಿ ಇಂದ್ರನ ರಾಜಧಾನಿಯಾಗಿ ಹೊಳೆಯುತ್ತಿರುವ ಅಮರಾವತಿಯನ್ನು ನಿರೀಕ್ಷಿಸುತ್ತಿರುವನು. ॥೨೨॥

ಅಲ್ಲಿರುವ ಇಂದ್ರನ ಮನೆಯೂ, ಇಂದ್ರಾದಿ ಸಕಲ ದೇವತೆಗಳೂ, ನಂದನವನವೂ, ಅರಳಿ ಸೊಗಸಾಗಿ ಕಾಣುತ್ತಿರುವ ಸಮಸ್ತ ಪುಷ್ಪಗುಚ್ಛಗಳೂ ಪರಮೇಶ್ವರನ ದೃಷ್ಟಿಗೆ ಗೋಚರವಾಗುತ್ತಿರುವುವು. ॥೨೩॥

ಜಿಘ್ರನ್ ಸ್ವಾಂಗಮಹಾಹಾರಕಾಕೋದರಸುಪಾರಣಂ ।
ಸಪ್ತಾಬ್ಧಿಚಲನಾಸ್ಫಾಲತರಂಗಾವಲಿಮೀಶ್ವರಃ ॥೨೪॥

ಫೇನಬುದ್ಬುದಜಾಲೈಶ್ಚ ಶಿವನಂದನನಂದಿತಃ ।
ತರಂಗಹಸ್ತೈಶ್ಚ ಸದಾ ನಮಂತ ಇವ ಸಾಗರಾನ್ ॥೨೫॥

ತತ್ತದಬ್ಧಿಮಹಾದ್ವೀಪಮಂಡಲಂ ಸರಿತೋ ನಗಾಃ ।
ವನಾನಿ ದೇವಯಾನಂ ಚ ಸ್ವರ್ಗಿಣಾಂ ಚ ಗತೀಸ್ತಥಾ ॥೨೬॥

ಭೋಗಂ ಪಾತಂ ಕರ್ಮಿಣಾಂ ಚ ಪಶ್ಯನ್ ಹೃಷ್ಯತಿ ಚಾಂಬಯಾ ।
ನಿಷಧೇಶಾಲಯಂ ತತ್ರ ಮಣಿಕುಂಭಮನೋಹರಂ ॥೨೭॥

---

ಮತ್ತು ಆ ನಂದನವನದಿಂದ ಪುಷ್ಪಗಳಮೇಲೆ ಬೀಸುವ ವಾಯುವು ಪರಮೇಶ್ವರನಿಗೆ ಹಾರವಾಗಿರುವ ಸರ್ಪಗಳಿಗೆ ಸುಖಭೋಜನದಂತಿರುವುದು. ಇಂತಹ ವಾಯುಸೇವನೆಯಲ್ಲಿ ಅತ್ಯಾದರನಾಗಿ ಪರಶಿವನು, ಸಪ್ತಸಮುದ್ರಗಳಿಂದಲೂ ಮೇಲಕ್ಕೇಳುವ ಅಲೆಗಳ ಸಮೂಹವನ್ನು ನೋಡುತ್ತಿರುವನು. ||೨೪||

ಆ ಸಮುದ್ರಗಳು ನೊರೆಯಿಂದಲೂ, ಗುಳ್ಳೆಗಳಿಂದಲೂ ಕೂಡಿ ತಮ್ಮ ಅಲೆಗಳೆಂಬ ಕೈಗಳಿಂದ ಪರಮೇಶ್ವರನನ್ನು ನಮಸ್ಕರಿಸುತ್ತಿವೆಯೋ ಎಂಬಂತಿರುವುವು. ಇಂತಹ ಸಾಗರಗಳನ್ನು ಗಣಪತಿಯೊಡನೆ ಕೂಡಿರುವ ಪರಮೇಶ್ವರನು ನೋಡುತ್ತಿರುವನು. ||೨೫||

ಹಾಗೆಯೇ ಆ ಸಮುದ್ರಮಧ್ಯಭಾಗದಲ್ಲಿರುವ ದ್ವೀಪಗಳನ್ನೂ, ನದಿಗಳನ್ನೂ ಪರ್ವತಗಳನ್ನೂ, ಉದ್ಯಾನವನಗಳನ್ನೂ, ದೇವಯಾನಗಳನ್ನೂ, ಸ್ವರ್ಗನಿವಾಸಿಗಳ ಚಲನವನ್ನೂ ನೋಡುತ್ತಿರುವನು. ||೨೬||

ಪುಣ್ಯಶಾಲಿಗಳು ಸುಖಪಡುವುದನ್ನೂ, ಪಾಪಿಗಳು ಭೂಲೋಕಕ್ಕೆ ಬೀಳುವುದನ್ನೂ, ಶಂಕರನು ಪಾರ್ವತಿಯೊಡನೆ ಕಾಣುತ್ತಿರುವನು. ಅಲ್ಲಿಯೇ ರತ್ನಕಲಶಗಳಿಂದ ಮನೋಹರವಾಗಿರುವ ನಿಷಧೇಶಾಲಯವಿರುವುದು. ||೨೭||

ನಿಷಧೋ ಮೂರ್ತಿಮಾಂಸ್ತತ್ರ ತಲ್ಲಿಂಗಂ ಪೂಜಯಂಸ್ತದಾ ।
ಭಸ್ಮರುದ್ರಾಕ್ಷಸಂಪನ್ನೋ ದಿವ್ಯೈಃ ಪಂಚಾಮೃತೈಸ್ತದಾ ॥೨೮॥

ಗಂಧೈಶ್ಚೈವ ಚ ವಾಸೋಭಿರ್ಬಿಲ್ವಮಂದಾರಚಂಪಕೈಃ ।
ಧೂಪೈರ್ದೀಪೈಶ್ಚ ನೈವೇದ್ಯೈಸ್ತಾಂಬೂಲೈಶ್ಚ ಸಮಂಸ್ತದಾ ॥೨೯॥

ಪ್ರದಕ್ಷಿಣಾಭಿಸ್ಸತತಂ ನಿಶಧೇಶಂ ಸ್ತುವಂಸ್ಥಿತಃ ॥೩೦॥

॥ ನಿಷಧ ಉವಾಚ ॥

ನಿಷಧೇಶಂ ಭವರೋಗಭೇಷಜಂ
ಸುನಿಷಣ್ಣಂ ಸಕಲೇಪಿ ಭೂತವರ್ಗೇ ।
ವಿಷಮಾಕ್ಷಂ ಕಲುಶೈರ್ವಿಹೀನದೇಹಂ
ಪ್ರಣಮಾಮೀಶ್ವರಮೇವಮೇವ ನಿತ್ಯಂ ॥೩೧॥

॥ ಸ್ಕಂದ ಉವಾಚ ॥

ಏವಂ ಸ್ತೌತಿ ಮಹಾದೇವಂ ನಿಷಧಃ ಪ್ರಾಗ್ದಿಶಿ ಸ್ಥಿತಃ ।
ಹೇಮಕೂಟಸ್ತಥಾಗ್ನೇಯ್ಯಾಂ ದಿಶಿ ಮೌಲೌ ಮಹಾಪ್ರಭಃ ॥೩೨॥

---

ಅಲ್ಲಿ ಸಾಕ್ಷಾತ್ತಾಗಿ ನಿಷಧನೇ ನಿಷಧೇಶನೆಂಬ ಲಿಂಗವನ್ನು ಪೂಜಿಸುವನು. ಪೂಜಾಕಾಲದಲ್ಲಿ ಭಸ್ಮ, ರುದ್ರಾಕ್ಷಿ ಇವುಗಳನ್ನು ಧರಿಸುವನು. ದಿವ್ಯವಾದ ಪಂಚಾಮೃತದಿಂದ ಆ ಲಿಂಗವನ್ನು ಅಭಿಷೇಕಮಾಡುವನು. ॥೨೮॥

ದಿವ್ಯಗಂಧ, ಉತ್ತಮವಾದ ವಸ್ತ್ರ, ಬಿಲ್ವ, ಮಂದಾರ, ಸಂಪಿಗೆ ಮುಂತಾದ ಪತ್ರಪುಷ್ಪಗಳಿಂದ ಶಿವಲಿಂಗವನ್ನು ಅರ್ಚಿಸುವನು. ಧೂಪ, ದೀಪ, ನೈವೇದ್ಯ, ತಾಂಬೂಲ ಇವುಗಳನ್ನು ಸಮರ್ಪಿಸುವನು. ಸಂತತವೂ ಪ್ರದಕ್ಷಿಣಾದಿಗಳಿಂದ ತೃಪ್ತಿಪಡಿಸಿ ಶಂಕರನನ್ನು ಹೀಗೆ ಸ್ತುತಿಸುವನು. ॥೨೯-೩೦॥

" ನಿಷಧೇಶ್ವರಸ್ವಾಮಿಯು ಸಂಸಾರದುಃಖವೆಂಬ ಮಹಾರೋಗಗಳನ್ನೆಲ್ಲಾ ಹೋಗಲಾಡಿಸತಕ್ಕವನು. ಸಕಲ ಭೂತಗಳಲ್ಲಿಯೂ ಅಡಗಿರತಕ್ಕವನು. ವಿರೂಪಾಕ್ಷನು. ಸಕಲ ದೋಷಗಳಿಂದಲೂ ದೂರನಾಗಿರತಕ್ಕವನು. ಇಂತಹ ಪರಮೇಶ್ವರನನ್ನು ನಾನು ನಿತ್ಯವೂ ಪೂಜಿಸುವೆನು." ॥೩೧॥

ಹೀಗೆಂದು ಪೂರ್ವದಿಕ್ಕಿನಲ್ಲಿರುವ ನಿಷಧಪರ್ವತರಾಜನು ಮಹಾದೇವನನ್ನು

ಗೋಮೇದಕಮಹಾರತ್ನಭಾಸುರೋನ್ನತಮಸ್ತಕಃ ।
ಸ್ವಕಾಂತಿಭಿಸ್ತಥಾಗ್ನೇಯೀಂ ದಿಶಂ ಸಮ್ರಾಡಯಂ ಸ್ಥಿತಃ ॥೩೩॥

ಗೋಪುರಾಪಾರಶಿಖರೈಃ ಖಮೌಲಿತಟಸಂಸ್ಥಿತೈಃ ।
ಮಹರ್ಲೋಕಾತಿಗೈಶ್ಶೃಂಗೈರ್ಮಹಾಮಣಿವರಾಂಕಿತೈಃ ॥೩೪॥

ರುದ್ರಾವತಾರಚರಿತೈರ್ಗೋವೃಷೋತ್ತಮಮಸ್ತಕೈಃ ।
ಮಣಿಕುಂಭೈಶ್ಚ ವಿತತೈ ರತ್ನಮಾಲಾವಲಂಬಿತೈಃ ॥೩೫॥

ತತ್ರ ಸೌಧೋ ಮಹಾನುಚ್ಚೈರ್ಗೋಮೇದಮಣಿಸುಂದರಃ ।
ಗೋಮೇದಮಣಿಜೋತ್ತುಂಗಮಹಾಸಾಲೀಸಹಸ್ರಕಃ ॥೩೬॥

---

ಸರ್ವದಾ ಧ್ಯಾನಿಸುತ್ತಿರುವನು. ಹಾಗೆಯೇ ಆಗ್ನೇಯ ದಿಕ್ಕಿನಲ್ಲಿರುವ ಹೇಮಕೂಟ ಪರ್ವತವೂ ಕೂಡ ಮಹಾಕಾಂತಿಯುಳ್ಳದ್ದಾಗಿ, ತನ್ನ ಶಿರೋಭಾಗದಲ್ಲಿ ||೩೨||

ಗೋಮೇದಕವೇ ಮೊದಲಾದ ಅನೇಕ ರತ್ನಗಳನ್ನು ಹೊಂದಿ ಪ್ರಕಾಶಿಸುತ್ತಿರುವುದು. ತನ್ನ ಕಾಂತಿಯಿಂದ ಆಗ್ನೇಯ ದಿಕ್ಕನ್ನೇ ಬೆಳಗಿಸುತ್ತಾ ಅಲ್ಲಿನ ರಾಜನಂತೆ ಶೋಭಿಸುತ್ತಿರುವುದು. ||೩೩||

ಮತ್ತು ಅನೇಕ ಗೋಪುರಗಳಿಂದಲೂ, ಶಿಖರಗಳಿಂದಲೂ, ವಿರಾಜಿಸುತ್ತಿರುವುದು. ಅಲ್ಲದೆ, ಹೇಮಕೂಟಪರ್ವತದ ಅತ್ಯುನ್ನತವಾದ ಶಿಖರಗಳು ಮಹಾಮಹಾ ರತ್ನಗಳಿಂದ ಅಲಂಕೃತವಾಗಿ, ಮಹೋರ್ಲೋಕವೇ ಮೊದಲಾದ ಊರ್ಧ್ವಲೋಕಗಳನ್ನು ಮೀರಿ ಮುಂದೆ ಹೋಗಿರುವುದು. ||೩೪||

ರುದ್ರಾವತಾರದ ಬೊಂಬೆಗಳೂ, ಗೋವುಗಳೂ, ವೃಷಭಗಳೂ, ರತ್ನಕಲಶಗಳೂ, ರತ್ನಮಾಲೆಗಳೂ ಆ ಹೇಮಕೂಟದ ಶಿಖರಭಾಗಗಳಲ್ಲಿ ಮನೋಹರವಾಗಿ ಕಂಡುಬರುವುವು. ||೩೫||

ಅಲ್ಲಿಯೂ ಒಂದು ಸೌಧವಿರುವುದು. ಅದೂ ಬಹಳ ಎತ್ತರವಾಗಿ, ಗೋಮೇದ ಮಣಿಯಿಂದ ಅಲಂಕೃತವಾಗಿರುವುದು. ಅನೇಕ ರತ್ನಮಯವಾದ ಮುಂಜೂರುಗಳು ಅದರಲ್ಲಿ ವಿಶೇಷವಾಗಿ ಕಂಡುಬರುತ್ತಿರುವುವು. ||೩೬||

ಸಹಸ್ರಪಾಳೀಪೀಠಸ್ಥಸ್ತಂಭವಿದ್ರುಮಪುತ್ರಿಕಃ ।
ಸಹಸ್ರಂ ಪಾಲಯಂಸ್ತತ್ರ ವೈಡೂರ್ಯವರಪೀಠಕಂ ॥೩೭॥

ಸಹಸ್ರತಲಸಂಯುಕ್ತೋ ಮಣಿಧಾರಾಚ್ಛಪಾಲಿಕಃ ।
ತದಾಗ್ನೇಯಮಹಾಕೋಣಗೋಪುರೇಷ್ವಂತರಾ ಸ್ಥಿತಃ ॥೩೮॥

ವೇದಿಕಾಪಟ್ಟಿಕೋಪೇತೋ ದೇವಗೋಷ್ಠೈಶ್ಚ ಮಂಡಿತಃ ।
ಲಲಾಮರಾಜದ್ವೃಷಭೋ ವಲಭೀಪರಿವೇಷ್ಟಿತಃ ॥೩೯॥

ಬಾಲಾರ್ಕವಿತತಚ್ಛಾಯಸ್ಸ್ವಚ್ಛಾಂತಸ್ಸ್ತಂಭಕಾಂತಿಕೃತ್ ।
ತಸ್ಮಿನ್ ಮಣಿಮಯೇ ಮಂಚೇ ಲಂಬಮಾನೇ ಚ ಸಂಸ್ಥಿತಃ ॥೪೦॥

---

ಸಾವಿರಾರು ಪಾಳೀ (ಹಕ್ಕಿಗಳು ಕುಳಿತುಕೊಳ್ಳುವಂತಹ ಮುಂಜೂರಿನಲ್ಲಿರುವ ಅವಕಾಶ) ಗಳ ಅಧೋಭಾಗದಲ್ಲಿ ಹವಳಗಳಿಂದ ರಚಿತವಾದ ಸಹಸ್ರಾರು ಕಂಬಗಳೂ ಸಾವಿರಾರು ಬೊಂಬೆಗಳೂ ಇರುವುವು. ವೈಡೂರ್ಯಮಣಿಖಚಿತವಾದ ಒಂದು ರತ್ನದ ಪೀಠವೂ ಅಲ್ಲಿ ರಂಜಿಸುತ್ತಿರುವುದು. ॥೩೭॥

ಅಲ್ಲಿ ಒಂದುಸಾವಿರ ಅಂತರ್ಗೃಹಗಳಿರುವುವು. ರತ್ನಮಯವಾದ ಪಾಲಿಕೆಗಳೂ, ಅಸಂಖ್ಯಾತವಾಗಿರುವುವು. ಇಂತಹ ದಿವ್ಯಗೋಪುರಗಳಿಂದ ಕೂಡಿದ ಆ ಸೌಧವು ಆಗ್ನೇಯದಿಕ್ಕಿನಲ್ಲಿ ಪ್ರಕಾಶಮಾನವಾಗಿರುವುದು. ॥೩೮॥

ಅಲ್ಲಿ ಅನೇಕ ವೇದಿಕೆಗಳೂ, ಪಟ್ಟಿಗಳೂ, ದೇವತಾರಾಮಗಳೂ, ವಿರಾಜಿಸುತ್ತಿರುವುವು. ತಿಲಕಗಳಿಂದ ಶೋಭಿಸುವ ಬಸವನ ವಿಗ್ರಹಗಳೂ, ಅದರ ಮುಂದಿನ ಕಪೋತಪಾಲಿಕೆಗಳೂ ಅಲ್ಲಿ ಕಂಡುಬರುವುವು. ॥೩೯॥

ಬಾಲಸೂರ್ಯನಂತೆ ಸರ್ವತ್ರ ವ್ಯಾಪಿಸುವ ಕಾಂತಿಯೂ, ನಿರ್ಮಲವಾಗಿ ಹೊಳೆಯುತ್ತಿರುವ ಕಂಬಸಾಲುಗಳೂ, ಆ ಭವನವನ್ನು ಶೋಭಾಯಮಾನವನ್ನಾಗಿ ಮಾಡಿರುವುವು. ಇಂತಹ ಭವನದಲ್ಲಿ ರತ್ನಮಯವಾದ ಮಂಚವೊಂದು ತೂಗಾಡುತ್ತಿರುವುದು. ॥೪೦॥

ಮಣಿಶೃಂಖಲಸಂರಾಜದ್ವಿತಾನಪರಿವೇಷ್ಟಿತೇ ।
ಕುಥೋಪಧಾನೈಸ್ಸಾಸ್ತೀರ್ಣೇ ತಿಷ್ಠತೀಶಸ್ಸಹಾಂಬಯಾ ॥೪೧॥

ಆಗ್ನೇಯಬಹುಲಾಮೋದವನಗಂಧೈಶ್ಚ ಸುಂದರಂ ।
ಮಾರುತೋ ವಾತಿ ಧೂಪಾನಾಂ ಪ್ರಮೋದಾಮೋದಸುಂದರಃ ॥೪೨॥

ತಮಾಲಸುಂದರವನಮಗ್ನಿಲೋಕವಿಭೂಷಣಂ ।
ಅಗ್ನಿದಿಕ್ಸೌಧಗಂ ತತ್ರ ಸೇವಿತಂ ಸುಮನೋಹರಂ ॥೪೩॥

ಅಗ್ನೀಶ್ವರಾಭಿದಂ ಲಿಂಗಂ ಪೂಜಯಂತೋ ಹಿ ವಹ್ನಯಃ ।
ಆಗ್ನೇಯಗಣಪೈಶ್ಚೈವ ತತ್ರ ತಲ್ಲೋಕವಾಸಿಭಿಃ ॥೪೪॥

ಪುರಾ ಸಮರ್ಚ್ಯ ತಲ್ಲಿಂಗಂ ಸರ್ವಭಕ್ಷಕೃತಾ ದಧತ್ ।
ವಿಮುಕ್ತಸ್ಸ ತದಾ ವಹ್ನಿಸ್ತಂ ಪಶ್ಯನ್ ಶಂಕರೋಽಂಬಯಾ ॥೪೫॥

---

ಆ ತೂಗುಮಂಚಕ್ಕೆ ರತ್ನದ ಸರಪಳಿಗಳಿವೆ. ಅನೇಕ ಮಣಿಖಚಿತವಾದ ಮೇಲ್ಕಟ್ಟುಗಳಿವೆ. ದಿವ್ಯವಾದ ದಿಂಬನ್ನೂ, ಮೆತ್ತೆಯನ್ನೂ ಹಾಕಿರುವರು. ಇಂತಹ ಮಂಚದಲ್ಲಿ ಪರಮೇಶ್ವರನು ಪಾರ್ವತಿಯೊಡನೆ ಸಂತೋಷವಾಗಿ ಕುಳಿತಿರುವನು. ||೪೧||

ಆಗ್ನೇಯದಿಕ್ಕಿನಿಂದ ವನಸುಮಗಳ ಗಂಧದೊಡನೆ ಬೀಸುವ ವಾಯುವು ಧೂಪಗಳ ಸುವಾಸನೆಯನ್ನು ಹೊತ್ತು ಮಂದವಾಗಿ ಮತ್ತು ಮನೋಹರವಾಗಿ ಬೀಸುತ್ತಿರುವುದು. ||೪೨||

ಹೊಂಗೆಯಮರಗಳಿಂದ ಕೂಡಿದ ಒಂದು ಉದ್ಯಾನವನವು ಅಗ್ನಿಲೋಕಕ್ಕೆ ಅಲಂಕಾರಪ್ರಾಯವಾಗಿರುವುದು. ಇಂತಹ ಉದ್ಯಾನವನದಿಂದ ಮನೋಹರವಾಗಿರುವ ಒಂದು ಭವನವು ಆಗ್ನೇಯದಿಕ್ಕಿನಲ್ಲಿ ಸುಂದರವಾಗಿ ಕಾಣುತ್ತಿರುವುದು. ||೪೩||

ಅಲ್ಲಿ ಅಗ್ನೀಶ್ವರನೆಂಬ ಲಿಂಗವೊಂದಿರುವುದು. ಅದನ್ನು ಅಗ್ನಿದೇವತೆಗಳು ತಮ್ಮ ಗಣನಾಯಕರೊಡನೆಯೂ, ಅಗ್ನಿಲೋಕನಿವಾಸಿಗಳೊಡನೆಯೂ ಕೂಡಿ ಪೂಜಿಸುವರು. ||೪೪||

ಹಿಂದೆ ಅಗ್ನಿಯು ಆ ಲಿಂಗವನ್ನು ಅರ್ಚಿಸಿ ಸರ್ವಭಕ್ಷಕನಾದ ಪ್ರಳಯ ಕಾಲಾಗ್ನಿಯ ಭಯವನ್ನು ತಪ್ಪಿಸಿಕೊಂಡನು. ಇಂತಹ ಅಗ್ನಿಯನ್ನು ಪಾರ್ವತೀ ಪತಿಯಾದ ಮಹೇಶ್ವರನು ರಕ್ಷಿಸುತ್ತಿರುವನು. ||೪೫||

ತತ್ರತ್ಯಲೋಕನಿಚಯಂ ಸಪ್ತಾಬ್ಧಿಪರಿವೇಷ್ಟಿತಂ ।
ದ್ವೀಪಾನ್ವನಾನಿ ಸರಿತಃ ಪಶ್ಯತ್ಯಂಬಾಸಮನ್ವಿತಃ ॥೪೬॥

ಹೇಮಕೂಟೋ ಮಹಾಶೈಲೋ ಮೂರ್ತಿಮಾನ್ ಲಿಂಗಮೈಶ್ವರಂ ।
ಹೇಮಕೂಟೇಶ್ವರಂ ನಾಮ್ನಾ ಪ್ರತಿಷ್ಠಾಪ್ಯಾತ್ರ ಭಾವನೈಃ ॥೪೭॥

ಸ್ತೌತಿ ದೇವಂ ಮಹಾದೇವಂ ಹೇಮಕೂಟಶ್ಶುಭವ್ರತಃ ॥೪೮॥

ಪಾಪಾದ್ರಿಕೂಟಕುಲಿಶೋತ್ತಮ ಹೇಮಕೂಟ
ಪೀಠೀಕೃತಾಖಿಲಸುಮೇರುಜಹೇಮಕೂಟ ।
ಪ್ರೋದ್ಯತ್ಸುಧಾಂಶುಚಯಮೌಲಿತಟೋರು
ಭಾಸ್ವತ್ಕೋಟೀರಘೋಟಕಕೃತಾಗಮಕೂಟ ಪಾಹಿ ॥೪೯॥

---

ಇಂತಹ ಅಗ್ನಿಲೋಕದಲ್ಲಿ ದೇವೀಸಮೇತನಾದ ಪರಶಿವನು, ಅನೇಕ ದ್ವೀಪಗಳನ್ನೂ, ಸಪ್ತಸಮುದ್ರಗಳನ್ನೂ, ಉತ್ತಮವಾದ ನದಿಗಳನ್ನೂ ನೋಡುತ್ತಾ ಸಂತೋಷದಿಂದ ವಿಹರಿಸುವನು. ॥೪೬॥

ಆ ದಿಕ್ಕಿನಲ್ಲಿರುವ ಹೇಮಕೂಟಾಚಲವು ಸ್ವಯಂ ಮೂರ್ತಿಮತ್ತಾಗಿ, ಹೇಮಕೂಟೇಶ್ವರಲಿಂಗವನ್ನು ಪ್ರತಿಷ್ಠೆ ಮಾಡಿ ಉತ್ತಮವಾದ ಭಾವನೆಗಳಿಂದ ಸದಾ ಪೂಜಿಸುತ್ತಿರುವನು. ॥೪೭॥

ಮತ್ತು ಶುಭವ್ರತವನ್ನು ಕೈಗೊಂಡ ಆ ಹೇಮಕೂಟರಾಜನು ಈರೀತಿಯಾಗಿ ಪರಮೇಶ್ವರನನ್ನು ಸ್ತುತಿಸುವನು. ॥೪೮॥

"ಎಲೈ ಪರಮೇಶ್ವರನೇ, ನೀನು ಪಾಪರಾಶಿಯೆಂಬ ಪರ್ವತಗಳನ್ನು ವಜ್ರಾಯುಧದಂತೆ ನಾಶಮಾಡುವೆ. ಸುವರ್ಣಕ್ಕೆ ನೀನೆ ಮುಖ್ಯಾಶ್ರಯನು. ಮೇರು ಪರ್ವತ, ಹೇಮಕೂಟಾಚಲ ಮುಂತಾದ ಅನೇಕ ಪರ್ವತಗಳು ನಿನಗೆ ಒಂದು ಎಲೆಯ ಮಡಿಕೆಯಂತಿವೆ. ನಿನ್ನ ಕಿರೀಟವಾದರೋ, ಚಂದ್ರನ ಸಂಪೂರ್ಣ ಕಾಂತಿಯಿಂದ ಹೊಳೆಯುತಕ್ಕದ್ದಾಗಿರುವುದು. ಸಮಸ್ತ ವೇದಗಳೂ ತ್ರಿಪುರಾಸುರಹನನ ಕಾಲದಲ್ಲಿ ನಿನಗೆ ಕುದುರೆಗಳಂತಾಗಿದ್ದುವು. ಮಹಾಮಹಿಮನಾದ ಪರಮೇಶ್ವರನೇ, ನಿನಗೆ ವಂದನೆಯು. ನೀನು ಕರುಣೆಯಿಂದ ನಮ್ಮನ್ನು ರಕ್ಷಿಸು" ॥೪೯॥

ಇತ್ಥಂ ಸದಾ ಹೇಮಕೂಟಸ್ತತ್ರ ಸ್ತೌತಿ ಮಹೇಶ್ವರಂ ॥೫೦॥

ಶೈಲಸೌಧಕವರೇ ಪರಮೇಶ್ಯಾ
ಚಾರುಚಂದ್ರಶಕಲಾಂಕಿತಮೌಳಿಃ ।
ನಂದಿಭೃಂಗಿಗಣಪೈಶ್ಚ ಸರ್ವತಃ
ಕ್ರೀಡತಿ ಶ್ರುತಿಶಿಖಾಮಲವಾಕ್ಯೈಃ ॥೫೧॥

ಇತಿ ಶ್ರೀಶಿವರಹಸ್ಯೇ ಪ್ರಥಮಾಂಶೇ ಕೈಲಾಸಪ್ರಸಾದವರ್ಣನಂ ನಾಮ
ಅಷ್ಟಾವಿಂಶೋಽಧ್ಯಾಯಃ

---

ಹೀಗೆ ಹೇಮಕೂಟವು ಅಲ್ಲಿ ಮಹೇಶ್ವರನನ್ನು ಬಹುವಾಗಿ ಸ್ತುತಿಸುತ್ತಿರುವುದು. ॥೫೦॥

ಇಂತಹ ಹೇಮಕೂಟಪರ್ವತದಲ್ಲಿ ಚಂದ್ರಮೌಳಿಯಾದ ಪರಮೇಶ್ವರನು ಪಾರ್ವತೀಸಮೇತನಾಗಿ, ನಂದಿ, ಭೃಂಗಿಯೇ ಮೊದಲಾದ ಗಣನಾಯಕರೊಡನೆ ಕೂಡಿ, ಉಪನಿಷದ್ವಾಕ್ಯಗಳಿಂದ ಸ್ತುತಿಸಲ್ಪಡುವವನಾಗಿ ವಿಹರಿಸುತ್ತಿರುವನು. ॥೫೧॥

ಇಲ್ಲಿಗೆ ಶಿವರಹಸ್ಯದ ಪ್ರಥಮಾಂಶದಲ್ಲಿ ಕೈಲಾಸಪ್ರಾಸಾದವರ್ಣನೆಯನ್ನು
ವಿವರಿಸುವ ಇಪ್ಪತ್ತೆಂಟನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

# ಅಥ ಶ್ರೀಶಿವರಹಸ್ಯೇ

## ಏಕೋನತ್ರಿಂಶೋಽಧ್ಯಾಯಃ

### ಕೈಲಾಸಸೌಧವರ್ಣನಂ

|| ಸ್ಕಂದ ಉವಾಚ ||

**ಯಃ ಪಸ್ಪರ್ಧ ಪುರಾ ಮೇರುಂ ವಿಂಧ್ಯೋಽಸೌ ಚಾರುಕಂದರಃ ।**
**ಯಸ್ಮಾಲಿನಿಲಯಾ ದೇವೀ ಸೋಽಯಂ ಪರ್ವತಶೇಖರಃ ॥೧॥**

**ಇಂದ್ರನೀಲಮಯಸ್ತತ್ರ ದಕ್ಷಿಣೇ ಭಾತಿ ಭೂಧರಃ ।**
**ಲಿಹನ್ ಸಜಿಹ್ವಯಾ ಲೋಕಾನಾಸ್ತೇ ಸೋಽತ್ಯಂತಸುಂದರಃ ॥೨॥**

---

## ಶ್ರೀಶಿವರಹಸ್ಯದಲ್ಲಿ ಇಪ್ಪತ್ತೊಂಬತ್ತನೆಯ ಅಧ್ಯಾಯ

ಕುಮಾರಸ್ವಾಮಿಯು ಕೈಲಾಸಸೌಧವರ್ಣನೆಯನ್ನು ಮುಂದುವರಿಸುತ್ತಾ ಜೈಗೀಷವ್ಯಾದಿಗಳಿಗೆ ಹೀಗೆಂದನು—"ಮಹರ್ಷಿಗಳೇ, ಹಿಂದೆ ವಿಂಧ್ಯಪರ್ವತದ ವಿಷಯವನ್ನು ನಾನು ನಿಮಗೆ ತಿಳಿಸಿರುವೆನು. ಅದು ಮೇರುಪರ್ವತದೊಡನೆ ಸ್ಪರ್ಧಿಸಿ ಉನ್ನತವಾಗಿ ಬೆಳೆದಿದ್ದಿತು. ಆ ವಿಂಧ್ಯಾದ್ರಿಯ ಮೇಲೆ ಮಹೇಶ್ವರಿಯು ನೆಲಸಿರುವಳು ಎಂಬುದೂ ನಿಮಗೆ ತಿಳಿದಿದೆ. ಅದೇ ವಿಂಧ್ಯಾದ್ರಿಯು ಈ ಕೈಲಾಸದ ದಕ್ಷಿಣಭಾಗದಲ್ಲಿ ಗೋಚರಿಸುತ್ತಿರುವುದು. ||೧||

ಅದು ಅಲ್ಲಿ ಇಂದ್ರನೀಲಮಣಿಯಿಂದಾವೃತವಾಗಿರುವುದು. ತನ್ನ ಶಿಖರ ಭಾಗದಿಂದ ಸಕಲ ಲೋಕಗಳನ್ನೂ ಸ್ಪರ್ಶಿಸುತ್ತಾ ಅತ್ಯಂತ ಎತ್ತರವಾಗಿ ಮತ್ತು ಸುಂದರವಾಗಿ, ಹೊಳೆಯುತ್ತಿರುವುದು. ||೨||

ತ್ಯಕ್ತ್ವಾ ಸ್ವಾನತಿಜಾತ್ಯಂತದುಃಖಂ ತತ್ರ ಘಟೋದ್ಭವಾತ್ ।
ಸೂರ್ಯಾತಿಗಗತೀಭಿಶ್ಚ ಶೃಂಗೈರಂಕಿತದಿಕ್ತಟಃ ॥೩॥

ಮಹೇಶಾಶ್ರಯಜೋನ್ಮಾದಮುದಿತೋ ವಿಂಧ್ಯಭೂಧರಃ ।
ತನ್ಮೌಲಿಗೋಪುರೋತ್ತುಂಗಶಿಖರೈರ್ವೃಷಭೈರಪಿ ॥೪॥

ಮಹಾನೀಲಗಣೋದ್ಯದ್ಭಾನೀಲೀಕೃತದಿಗಂತರಃ ।
ತನ್ಮೌಲಿತಿಲಕೋದ್ದಾಮಪುಂಡರೀಕಸಹಸ್ರಕೈಃ ॥೫॥

ದಂಷ್ಟ್ರಾಕರಾಲೈರ್ವಿಕೃತೈರ್ಧಾರಿತಸೌಧಸತ್ತಮಃ ।
ವೇದಿಕಾಪಟ್ಟಕೋಪೇತಸಹಸ್ರಸ್ತಂಭಮಂಡಿತಃ ॥೬॥

---

ಭೂಲೋಕದಲ್ಲಿ ಅಗಸ್ತ್ಯಮಹರ್ಷಿಯು ತನ್ನನ್ನು ನೆಲಕ್ಕೆ ಬಗ್ಗಿಸಿದನೆಂಬ ದುಃಖವನ್ನು ಬಿಟ್ಟು, ವಿಂಧ್ಯಪರ್ವತವು ಕೈಲಾಸದಲ್ಲಿ ಅತ್ಯಂತ ಎತ್ತರವಾಗಿ ಬೆಳೆದಿದೆ. ಸೂರ್ಯಮಂಡಲವನ್ನು ಭೇದಿಸಿಕೊಂಡು ಹೊರಟ ತನ್ನ ಶಿಖರಗಳಿಂದ ಸಕಲ ದಿಕ್ಕುಗಳಲ್ಲಿಯೂ ಕಾಂತಿಯನ್ನು ಹರಡಿದೆ. ॥೩॥

ತನ್ನ ಶಿಖರಭಾಗದಲ್ಲಿ ಮಹೇಶ್ವರನು ನೆಲಸಿರುವನೆಂಬ ಸಂತೋಷದಿಂದ ವಿಂಧ್ಯಪರ್ವತವು ಅಹಂಕಾರಪಡುತ್ತಿರುವುದು. ಅದರ ಶಿಖರದಲ್ಲಿ ಎತ್ತರವಾದ ಗೋಪುರಗಳೂ, ಅವುಗಳಲ್ಲಿ ಸುಂದರವಾದ ಬಸವನ ವಿಗ್ರಹಗಳೂ ವಿಶೇಷವಾಗಿವೆ. ॥೪॥

ಇಂದ್ರನೀಲಮಣಿಗಳಿಂದ ಹೊರಟ ನೀಲಕಾಂತಿಯು ಸಕಲ ದಿಕ್ಕುಗಳನ್ನೂ ನೀಲವರ್ಣವುಳ್ಳದ್ದನ್ನಾಗಿ ಮಾಡಿದೆ. ಆ ಪರ್ವತದ ಶಿಖರಭಾಗದಲ್ಲಿ ಸಹಸ್ರಾರು ಬಿಳಿಯ ಕಮಲಗಳು ಬೆಳೆದು ನಿಂತಿವೆ. ॥೫॥

ಅದೇ ಭಾಗದಲ್ಲಿ ಒಂದು ದಿವ್ಯವಾದ ಪ್ರಾಸಾದವಿರುವುದು. ಅದರಲ್ಲಿ ಮುಂದುಗಡೆ ಕೋರೆದಾಡೆಗಳಿಂದ ವಿಕಾರವಾದ ಕೆಲವು ಬೊಂಬೆಗಳಿರುವುವು. ಆ ಭವನಕ್ಕೆ ಸುತ್ತಲೂ ಜಗಲಿಗಳೂ, ಪಟ್ಟಿಗಳೂ, ಸಾವಿರಾರು ಕಂಬಗಳೂ ಸುಂದರವಾಗಿ ಕಾಣಬರುತ್ತಿರುವುವು. ॥೬॥

ತತ್ರಾಗರುಮಹಾಧೂಪೈರ್ಜ್ವಾಲೋಜ್ಜ್ವಲಿತದೀಪಕೈಃ ।
ಸಹಸ್ರತಲಸಂಯುಕ್ತೋ ನೀಲಕುಂಭೋಜ್ಜ್ವಲಚ್ಛಿಖಃ ॥೭॥

ನೀಲಸಾರೈಶ್ಚ ವೃಷಭೈರ್ಮಣಿನೇತ್ರೈಶ್ಚ ಶೋಭಿತಃ ।
ಸ್ಫಟಿಕೇಂದ್ರಮಹಾನೀಲಜಾಲಕಾಂಕಿತಕುಟ್ಟಿಮಃ ॥೮॥

ನೀರನೀಲೋತ್ಪಲೀಕೃತಚಾರುಮಾಲಾವಿಭೂಷಿತಃ ।
ಗವಾಕ್ಷಿತ ಇವಾಭಾತಿ ಚಾಂಬರಂ ತತ್ರ ಸುಂದರಂ ॥೯॥

ತಸ್ಮಿನ್ ಸೌಧೋತ್ತಮೇ ಮಂಚೇ ಚೇಂದ್ರನೀಲೋರುಪಾದಕೇ ।
ತಸ್ಮಿನ್ ಮಂಚೋಪರಿ ಲಸನ್ನೀಲಲೋಹಿತ ಈಶ್ವರಃ ॥೧೦॥

ದೇವ್ಯಾ ಸದಾಸ್ತೇ ನಿತರಾಂ ಗಣಬೃಂದನಿಷೇವಿತಃ ।
ಪಶ್ಯನ್ ಯಾಮೀಂ ದಿಶಂ ಶಂಭುರ್ಯಮಂ ಸಂಯಮಿನೀಶ್ವರಂ ॥೧೧॥

---

ಆ ಪ್ರಾಸಾದವು, ಅಗುರು ಮುಂತಾದ ಸುಗಂಧವಸ್ತುಗಳ ಧೂಮದಿಂದಲೂ, ಉರಿಯುವ ದೀಪದ ಸಾಲುಗಳಿಂದಲೂ, ಸಾವಿರಾರು ಅಂತರ್ಗೃಹಗಳಿಂದಲೂ, ನೀಲಕುಂಭಗಳ ಕಲಶಗಳಿಂದಲೂ ಕೂಡಿ ನಯನಮನೋಹರವಾಗಿರುವುದು. ॥೭॥

ನೀಲರತ್ನ ನಿರ್ಮಿತವಾದ ಬಸವನ ವಿಗ್ರಹಗಳಿಗೆ ರತ್ನಗಳಿಂದ ಕಣ್ಣುಗಳನ್ನು ಬಿಡಿಸಿರುವರು. ಸ್ಫಟಿಕಮಣಿಮಯವಾದ ಜಗಲಿಗಳಿಗೆ ಸುತ್ತಲೂ ನೀಲರತ್ನಗಳನ್ನು ಮೆಟ್ಟಿರುವರು. ಇಂತಹ ದಿವ್ಯಪ್ರದೇಶಗಳು ಅಲ್ಲಿ ಬಹಳವಾಗಿವೆ. ॥೮॥

ನೀಲೋತ್ಪಲಗಳಿಂದ ಮಾಡಿದ ಸರವನ್ನು ಆ ಶಿಖರದಲ್ಲಿ ಹಾಕಿರುವರು. ಇದನ್ನು ನೋಡಿದರೆ, ನೀಲವರ್ಣದ ಆಕಾಶವು ಇದರಮುಂದೆ ಬಂದು ಗವಾಕ್ಷಿಯಂತೆ ಕಂಡುಬರುತ್ತದೆ. ಅಥವಾ ಈ ಪರ್ವತಕ್ಕೆ ಸಂಬಂಧಿಸಿದ ಆಕಾಶಭಾಗವೆಲ್ಲಾ ಗೋವಿನ ಕಣ್ಣಿನಂತೆ ನೀಲವಾಗಿ ತೋರಿಬರುತ್ತಿರುವುದು. ॥೯॥

ಆ ಸೌಧದಲ್ಲಿ ಇಂದ್ರನೀಲಮಣಿಗಳಿಂದ ನಿರ್ಮಿತವಾದ ಕಾಲುಗಳುಳ್ಳ ಮಂಚ ವೊಂದಿರುವುದು. ಆ ಮಂಚದಲ್ಲಿ ನೀಲಲೋಹಿತನಾದ ಪರಮೇಶ್ವರನು ಸರ್ವದಾ ನೆಲಸಿರುವನು. ॥೧೦॥

ಅಲ್ಲದೆ ತನ್ನ ಪ್ರಮಥಗಣಗಳೊಡನೆಯೂ, ಪಾರ್ವತಿಯೊಡನೆಯೂ, ಕೂಡಿ ದಕ್ಷಿಣದಿಕ್ಕಿನಲ್ಲಿ ಯಮನ ಆರಾಧ್ಯದೇವತೆಯಾದ ಸಂಯಮಿನೀಶ್ವರನನ್ನು ನೋಡಿ ಸಂತೋಷಪಡುವನು. ॥೧೧॥

**ನರಕಾಣಾಂ ವಿಚಿತ್ರಾಶ್ಚ ಗತಯಸ್ತತ್ರ ಶಂಕರಃ ।**
**ಕ್ಲಿಶ್ಯಮಾನಾನ್ ದಹ್ಯಮಾನಾನ್ ಪಚ್ಯಮಾನಾನ್ ಮಹೇನಸಃ ॥೧೨॥**

**ಅಶ್ಯೈವಾನಥ ಪಾಪಿಷ್ಠಾನ್ ಭಸ್ಮರುದ್ರಾಕ್ಷವರ್ಜಿತಾನ್ ।**
**ಲಿಂಗಾರ್ಚನವಿಹೀನಾಂಶ್ಚ ಶಿವನಾಮೋಜ್ಝಿತಾಂಸ್ತಥಾ ॥೧೩॥**

**ರುದ್ರಾಧ್ಯಾಯಜಪೈರ್ಹೀನಾನ್ ಪಂಚಾಕ್ಷರವಿವರ್ಜಿತಾನ್ ।**
**ಶಿವನೈವೇದ್ಯರಹಿತಾನ್ ಮಲಾಶೀಂಸ್ತತ್ರ ಶಂಕರಃ ॥೧೪॥**

**ಸಪ್ತಾಬ್ಧಿವೇಷ್ಟಿತಾಪಾರಭೂಮಿಭಾಗಾನ್ಮಹೇಶ್ವರಃ ।**
**ನಗಾಂಶ್ಚ ಸರಿತಃ ಪುಣ್ಯಾ ವನಾನ್ಯುಪವನಾನಿ ಚ ॥೧೫॥**

**ಕ್ರೀಡತ್ಯತ್ಯಂತಮುದಿತೋ ದೇವೋ ದೇವ್ಯಾ ಮಹೇಶ್ವರಃ ।**
**ವಿಂಧ್ಯಮೌಲಿಮಹಾಸೌಧೇ ನೀಲೇಂದ್ರಮಣಿಕಲ್ಪಿತೇ ॥೧೬॥**

---

ಪಾಪಿಗಳು, ನರಕದಲ್ಲಿ ತಾವು ಮಾಡಿದ ಮಹಾಪಾಪಕ್ಕೆ ಅನುಗುಣವಾದ ಶಿಕ್ಷೆಯನ್ನು ಅನುಭವಿಸುತ್ತಾ, ಅಗ್ನಿಯಲ್ಲಿ ದಗ್ಧವಾಗುತ್ತಿರುವ ಜೀವಿಗಳನ್ನೂ, ಇನ್ನು ಅವರು ಚಿತ್ರವಿಚಿತ್ರವಾಗಿ ಅನುಭವಿಸುತ್ತಿರುವ ಚಿತ್ರಹಿಂಸೆಗಳನ್ನೂ ನೋಡುತ್ತಿರುವನು. ||೧೨||

ಭೂಲೋಕದಲ್ಲಿ ಶಿವನನ್ನು ಅರ್ಚಿಸದೆ, ಭಸ್ಮರುದ್ರಾಕ್ಷಿಗಳನ್ನೂ ದೂರಮಾಡಿ ಶಂಕರನ ಪವಿತ್ರನಾಮಗಳನ್ನು ಉಚ್ಚರಿಸವೆ ಇರುವವರು ಮಹಾಪಾಪಿಷ್ಠರು. ||೧೩||

ಹಾಗೆಯೇ ರುದ್ರಾಧ್ಯಾಯಪಾರಾಯಣ, ಶಿವಪಂಚಾಕ್ಷರೀಜಪ ಇವುಗಳನ್ನು ಆಚರಿಸದೆ, ಶಿವನೈವೇದ್ಯರಹಿತವಾದ ಆಹಾರವನ್ನು ತಿಂದು ಜೀವಿಸಿದವರೂ ಸಹ ಆ ಪಾಪಿವರ್ಗಕ್ಕೆ ಸೇರಿದವರೇ. ಅಂತಹವರು ಅಲ್ಲಿ ಮಲವನ್ನು ತಿನ್ನುತ್ತಿರುವರು. ಅವರನ್ನೆಲ್ಲಾ ಪರಮೇಶ್ವರನು ನೋಡುತ್ತಾ ಮುಂದುವರಿಯುವನು. ||೧೪||

ಅಲ್ಲಿ ಸಪ್ತಸಮುದ್ರಗಳಿಂದ ಪರಿವೃತವಾದ ಭೂಭಾಗವನ್ನೂ, ವಿಧವಿಧವಾದ ಪರ್ವತಗಳನ್ನೂ ಪುಣ್ಯಕರಗಳಾದ ನದಿಗಳನ್ನೂ, ವನ, ಉಪವನ ಮುಂತಾದುವುಗಳನ್ನೂ ಪ್ರೀತಿಯಿಂದ ನೋಡುವನು. ||೧೫||

ಮತ್ತು ದೇವೀಸಹಿತನಾಗಿ ಅತ್ಯಂತ ಸಂತೋಷದಿಂದ ಆ ಉದ್ಯಾನಗಳಲ್ಲಿ ವಿಹರಿಸುವನು. ಅದೇ ವಿಂಧ್ಯಪರ್ವತದ ಅತ್ಯುನ್ನತವಾದ ಮಹಾಸೌಧದಲ್ಲಿ ಇಂದ್ರನೀಲಮಣಿಕಲ್ಪಿತವಾದ ದೇವಾಲಯದಲ್ಲಿ, ||೧೬||

ವಿಂಧ್ಯೋ ವಿಂಧ್ಯೇಶ್ವರಂ ಲಿಂಗಂ ತತ್ರ ಸಂಪೂಜ್ಯ ಭಕ್ತಿತಃ ।
ಪಂಚಾಮೃತೈಃ ಫಲರಸೈಶ್ಚಂದನೈರ್ಧೂಪದೀಪಕೈಃ ॥೧೭॥

ಬಿಲ್ವಚಂಪಕಮಂದಾರಕರವೀರಸುಪಂಕಜೈಃ ।
ಪ್ರದಕ್ಷಿಣಾನತೀಭಿಶ್ಚ ಮಣಿನೀರಾಜನೈರಪಿ ॥೧೮॥

ಸಂಪೂಜ್ಯ ವಿಂಧ್ಯಸ್ಸಂಸ್ತೌತಿ ಭಕ್ತ್ಯಾ ವಿಂಧ್ಯೇಶ್ವರಂ ಶಿವಂ ॥೧೯॥

॥ ವಿಂಧ್ಯ ಉವಾಚ ॥

ವಿಂಧ್ಯೇಶ ವಂಧ್ಯದಿವಸೋ ನ ಭವೇತ್ಕದಾಚಿತ್
ತ್ವತ್ಪಾದಪೂಜನನತಿಸ್ತುತಿಭಿರ್ಮನೂಷ್ಯ ।
ವಂಧ್ಯೋಽಪಿ ತ್ವತ್ಪದನಿವೇದಿತಭೋಜ್ಯಭುಕ್ತ್ಯಾ
ದ್ವಿಂಧ್ಯೋಪಮಂ ದೃಢತರಂ ಹಿ ಸುತಂ ಲಭೇತ ॥೨೦॥

---

ವಿಂಧ್ಯಪರ್ವತವು ತಾನು ಮೂರ್ತಿಮತ್ತಾಗಿ ನಿಂತು ವಿಂಧ್ಯೇಶ್ವರ ಲಿಂಗವನ್ನು ಭಕ್ತಿಯಿಂದ ಪೂಜಿಸುವನು. ಪಂಚಾಮೃತಗಳಿಂದಲೂ, ಫಲರಸಗಳಿಂದಲೂ, ಚಂದನಗಳಿಂದಲೂ, ಧೂಪದೀಪಾದಿಗಳಿಂದಲೂ ಲಿಂಗವನ್ನು ಆರಾಧಿಸುವನು. ॥೧೭॥

ಬಿಲ್ವಪತ್ರೆ, ಸಂಪಿಗೆ, ಮಂದಾರ, ಕಣಿಗಲು, ಕಮಲ ಮುಂತಾದ ಪುಷ್ಪಗಳನ್ನು ಶಿವಲಿಂಗಕ್ಕೆ ಅರ್ಪಿಸುವನು. ರತ್ನಖಚಿತವಾದ ನೀರಾಜನಗಳನ್ನು ಎತ್ತಿದ ಮೇಲೆ ಪ್ರದಕ್ಷಿಣನಮಸ್ಕಾರಾದಿಗಳಿಂದ ಲಿಂಗವನ್ನು ಪೂಜಿಸಿ, ಅನಂತರ ಭಕ್ತಿಯಿಂದ ಲಿಂಗದ ಮುಂದೆ ಕೈಜೋಡಿಸಿ ನಿಂತು ಹೀಗೆ ಸ್ತುತಿಸುವನು. ॥೧೮-೧೯॥

" ಪರಮೇಶ್ವರನೇ, ನಿನ್ನ ಅರ್ಚನೆಯಿಂದ, ನಿನ್ನ ಸ್ತುತಿಯಿಂದ, ನಿನ್ನ ಪ್ರದಕ್ಷಿಣಾದಿಗಳಿಂದ ಕಳೆದ ಕಾಲವು ನನಗೆ ಎಂದೂ ವ್ಯರ್ಥವೆನಿಸುವುದಿಲ್ಲ. ಉಳಿದ ಕಾಲವೆಲ್ಲವೂ ಮನುಷ್ಯರಿಗೆ ನಿಜವಾಗಿ ವ್ಯರ್ಥವಾಗುವುದು. ಅನೇಕ ಕಾಲದಿಂದ ಸಂತಾನವನ್ನು ಪಡೆಯದ ಜೀವಿಯು ನಿನ್ನನ್ನು ಸೇವಿಸಿ ನಿನ್ನ ಪ್ರಸಾದವನ್ನು ಭಕ್ಷಿಸಿದುದೇ ಆದರೆ, ಬಲದಲ್ಲಿ ವಿಂಧ್ಯಪರ್ವತಕ್ಕೆ ಸಮಾನವಾದ ಸಂತಾನವನ್ನು ಪಡೆಯುವನೆಂಬುದರಲ್ಲಿ ಸಂದೇಹವಿಲ್ಲ ! ॥೨೦॥

|| ಸ್ಕಂದ ಉವಾಚ ||

**ಇತ್ಥಂ ಸ್ತೌತಿ ಸದಾ ವಿಂಧ್ಯೋ ವಿಂಧ್ಯೇಶಂ ತತ್ರ ಶೈಲರಾಟ್ ।**
**ಮಲಯೋ ನೈರೃತೇ ಭಾತಿ ರಾಜತ್ಸುಂದರಶೇಖರಃ ॥೨೧॥**

**ಪುಷ್ಪರಾಗಮಣಿಪ್ರಖ್ಯೋ ನಾನಾನಿರ್ಝರಕಂದರಃ ।**
**ರಮ್ಯಶೃಂಗಾಗ್ರವಿಲಸದ್ಗೋಪುರಾವಲಿಭಾಸುರಃ ॥೨೨॥**

**ರುದ್ರಕ್ರೀಡಾದಿಸಹಿತೋ ಲಲಾಮವೃಷಭಾಂಚಿತಃ ।**
**ಸ್ವಪ್ರಭಾಭಾಸಿತೋಲ್ಲಾಸಿಸರ್ವಲೋಕಾತಿಗೋ ನಗಃ ॥೨೩॥**

**ಭಾತಿ ಭೂಮಿಧರಸ್ತತ್ರ ಸೌಧೋತ್ತಮವಿಭೂಷಿತಃ ।**
**ಸಹಸ್ರಸಾರಸೋತ್ತುಂಗಶಿರೋಭಿರ್ಧಾರಿತೋ ಮಹಾನ್ ॥೨೪॥**

**ಪುಷ್ಪರಾಗಮಣೀಕ್ಲ್ಪಪ್ತಸಹಸ್ರಸ್ತಂಭಮಂಡಿತಃ ।**
**ಸುರತ್ನಕಲಶೋಪೇತಸ್ಸಹಸ್ರತಲಮಂಡಿತಃ ॥೨೫॥**

---

ಹೀಗೆ ಪರ್ವತಶ್ರೇಷ್ಠವಾದ ವಿಂಧ್ಯವು ವಿಂಧ್ಯೇಶ್ವರಲಿಂಗವನ್ನು ಭಕ್ತಿಯಿಂದ ಸ್ತುತಿಸುವನು. ಅಲ್ಲಿಂದ ಮುಂದೆ ನೈಋತ್ಯದಿಕ್ಕಿನಲ್ಲಿ ಸುಂದರವಾದ ಶಿಖರದಿಂದ ಶೋಭಿಸುವ ಮಲಯಪರ್ವತವು ಪ್ರಕಾಶಿಸುತ್ತಿರುವುದು. ||೨೧||

ಅದು ಪುಷ್ಪರಾಗಮಣಿಯಿಂದ ನಿರ್ಮಿತವಾದದ್ದು. ನಾನಾವಿಧವಾದ ಗಿರಿನದಿಗಳಿಂದಲೂ, ಗುಹೆಗಳಿಂದಲೂ, ಸುಂದರವಾದ ಶಿಖರಗಳಿಂದಲೂ ಆ ಪರ್ವತವು ಹೆಚ್ಚು ಶೋಭಾಯಮಾನವಾಗಿರುವುದು. ||೨೨||

ಆ ಗೋಪುರದಲ್ಲಿಯೂ, ರುದ್ರಾವತಾರದ ಬೊಂಬೆಗಳೂ, ತಿಲಕಾಂಚಿತವಾದ ಜಸವನವಿಗ್ರಹಗಳೂ, ವಿರಾಜಿಸುತ್ತಿರುವುವು. ಆ ಗೋಪುರಗಳು ತಮ್ಮ ಕಾಂತಿಯಿಂದಲೂ, ಔನ್ನತ್ಯದಿಂದಲೂ ಸಕಲ ಲೋಕಗಳನ್ನೂ ಮೀರಿಹೋಗಿರುವುವು. ||೨೩||

ಇಂತಹ ಪರ್ವತವು ಒಂದು ಉತ್ತಮವಾದ ಉಪ್ಪರಿಗೆ ಮನೆಯನ್ನು ಹೊಂದಿರುವುದು. ಅದರಲ್ಲಿ ಅನೇಕ ಸಾರಸಪಕ್ಷಿಗಳೂ, ಅವುಗಳಿಂದ ರಂಜಿಸುತ್ತಿರುವ ಗೋಪುರಗಳೂ ಅತ್ಯಂತ ಸುಂದರವಾಗಿರುವುವು. ||೨೪||

ಆ ಪ್ರಾಸಾದಕ್ಕೆ ಸಹಸ್ರ ಕಂಬಗಳಿವೆ. ಅವೆಲ್ಲವೂ ಪುಷ್ಪರಾಗಮಣಿಗಳಿಂದ

**ಪರಾರ್ಘ್ಯರತ್ನಖಚಿತಸಿಂಹಾಸನವರಾಶ್ರಯಃ ।**
**ರತ್ನಗುಚ್ಛಮಹಾಪುಷ್ಪಸರಾಲಂಬಿತಪೀಠಭೂಃ ॥೨೬॥**

**ತತ್ರಸ್ಥಭೂಷಣೋಪೇತೋ ದೇವ್ಯಾ ಕ್ರೀಡತಿ ಶಂಕರಃ ।**
**ಮಹಾಮಲಯಜೋದ್ಭೂತಚಂದನಾಮೋದಿಮಾರುತೈಃ ॥೨೭॥**

**ಚಂದ್ರಚಂದನಲಿಪ್ತಾಂಗೋ ಮಹಾಕಲ್ಪಕಪುಷ್ಪಧೃಕ್ ।**
**ಗುಗ್ಗುಲೂದ್ದಾಮಸುಭಗಧೂಮಾಮೋದಿತದಿಕ್ತಟಃ ॥೨೮॥**

**ತಾಂ ನೈಋತೀಂ ದಿಶಂ ಶಂಭುಃ ಪಶ್ಯನ್ನಿರ್ಋತಿಜಾನ್ ಗಣಾನ್ ।**
**ಕೃಷ್ಣಾನ್ ಕರಾಲಾನ್ ವಿಕಟಾನ್ ನಿಸ್ತ್ರಿಂಶವರಧಾರಿಣಃ ॥೨೯॥**

---

ಅಲಂಕೃತವಾಗಿರುವುವು. ರತ್ನದ ಕಲಶಗಳೂ, ರತ್ನನಿರ್ಮಿತವಾದ ಹಜಾರಗಳೂ ವಿರಾಜಿಸುತ್ತಿರುವುವು. ॥೨೫॥

ಮಧ್ಯಭಾಗದಲ್ಲಿ ಅಮೂಲ್ಯವಾದ ರತ್ನಗಳಿಂದ ಹೊಳೆಯುವ ಸಿಂಹಾಸನವಿರುವುದು. ಅದಕ್ಕೆ ರತ್ನದ ಗೊಂಚಲುಗಳನ್ನೂ, ಪುಷ್ಪಮಾಲೆಗಳನ್ನೂ ಧರಿಸಿರುವರು. ಇಂತಹ ಸಿಂಹಾಸನದಿಂದ ಅಲಂಕೃತವಾದ ಆ ಭೂಮಿಯು ಅತ್ಯಂತ ಮನೋಹರವಾಗಿ ಕಾಣುತ್ತಿರುವುದು. ॥೨೬॥

ಆ ಪ್ರದೇಶದಲ್ಲಿ ಶಂಕರನು ಮಹಾಮಲಯಜಗಂಧದಿಂದಲೂ, ಚಂದನದ ಸುವಾಸನೆಯಿಂದಲೂ ಕೂಡಿ ಬೀಸುವ ವಾಯುವನ್ನು ಸೇವಿಸುತ್ತಾ, ದೇವಿಯೊಡನೆ ವಿಹರಿಸುವನು. ॥೨೭॥

ಶಂಕರನು ಚಂದ್ರನಕಾಂತಿಯಿಂದಲೂ, ಚಂದನದಿಂದಲೂ ದೇಹವನ್ನು ಅಲಂಕರಿಸಿಕೊಂಡಿರುವನು. ಹೆಚ್ಚು ವೇಷಕ್ಕೆ ತಕ್ಕಂತಿರುವ ಪುಷ್ಪಗಳನ್ನು ಧರಿಸಿಕೊಂಡಿರುವನು. ಗುಗ್ಗುಲುವೇ ಮೊದಲಾದ ಸುಗಂಧವಸ್ತುಗಳ ಧೂಮದಿಂದ ಸಕಲ ದಿಕ್ಕುಗಳನ್ನೂ ಸುವಾಸಿತವನ್ನಾಗಿ ಮಾಡುವ ಆ ಪ್ರದೇಶದಲ್ಲಿ ಶಂಕರನು ವಿಹರಿಸುತ್ತಿರುವನು. ॥೨೮॥

ಆ ನೈಋತ್ಯದಿಗ್ಭಾಗದಲ್ಲಿ ನಿರ್ಋತಿಯಗಣಗಳು, ಕೃಷ್ಣದೇಹವುಳ್ಳವರಾಗಿ, ಕ್ರೂರಸ್ವಭಾವದಿಂದ ಕೂಡಿ, ಉತ್ತಮವಾದ ಕತ್ತಿಗಳನ್ನು ಕೈಯ್ಯಲ್ಲಿ ಧರಿಸಿದವರಾಗಿ ಕಾಣುತ್ತಿರುವರು. ಇಂತಹವರನ್ನು ನೋಡುತ್ತಾ ಶಂಕರನು ಮುಂದುವರಿಯುವನು. ॥೨೯॥

**ಸಪ್ತಾಂಬುಧೀನಾಂ ಕೋಣಾನಿ ತದಂತರ್ಗತಭೂಮಪಿ ।**
**ದ್ವೀಪಾಂಶ್ಚ ಸರಿತಶ್ಶೈಲಾನ್ವನಾನಿ ಚ ಮಹೇಶ್ವರಃ ॥೩೦॥**

**ಮಲಯೇನ ಸ್ವನಾಮ್ನಾ ವೈ ಲಿಂಗಂ ತಂ ಮಲಯೇಶ್ವರಂ ।**
**ಮಣಿಧಾಮಮಯಂ ತತ್ರ ಪೂಜಿತಂ ಸರ್ವಕಾಮದಂ ॥೩೧॥**

**ಪಂಚಾಮೃತೈಶ್ಚಂದನೈಶ್ಚ ಬಿಲ್ವಮಂದಾರಚಂಪಕೈಃ**
**ಧೂಪೈರ್ದೀಪೈಶ್ಚ ನೈವೇದ್ಯೈಃ ಪ್ರಣಾಮಪ್ರಕ್ರಮಾದಿಭಿಃ ।**
**ಸಂಸ್ತುವನ್ ಪರಯಾ ಭಕ್ತ್ಯಾ ಗಿರಿಶಾ ಮಲಯೇನ ಚ ॥೩೩॥**

॥ ಮಲಯ ಉವಾಚ ॥

**ಮಲಯೇಶ ಮಹೇಶ ಶಂಕರ**
**ಪ್ರಮಥಾಧೀಶ್ವರ ಚಾರುಚಂದ್ರಮೌಲೇ ।**
**ತ್ವಯಿ ಜಾತಮಿದಂ ಜಗತ್ಕಿಲಾಪಿ ಶಂಭೋ**
**ಪ್ರಲಯಂ ಯಾತಿ ಲಯೇ ತ್ವದೀಯಕುಕ್ಷೌ ॥೩೪॥**

---

ಅಲ್ಲಿ ಏಳು ಸಮುದ್ರಗಳನ್ನೂ, ಅವುಗಳಿಂದ ಆವೃತವಾದ ಭೂಭಾಗವನ್ನೂ, ಸಕಲ ದ್ವೀಪಗಳನ್ನೂ, ಗಿರಿಗಳನ್ನೂ, ನದಿಗಳನ್ನೂ, ಉಪವನಗಳನ್ನೂ ನೋಡಿ ಸಂತೋಷಿಸುವನು. ||೩೦||

ಮಲಯಪರ್ವತರಾಜನು, ತನ್ನ ಹೆಸರಿನಿಂದಲೇ ಮಲಯೇಶ್ವರಲಿಂಗವೆಂಬ ಶಿವಲಿಂಗವೊಂದನ್ನು ಪ್ರತಿಷ್ಠಿಸಿರುವನು. ಆ ಶಿವಲಿಂಗವು ರತ್ನದ ಹಾರದಿಂದ ಕೂಡಿದ್ದಾಗಿ, ಭಕ್ತರ ಸಕಲ ಇಷ್ಟಾರ್ಥವನ್ನೆಲ್ಲಾ ಪೂರ್ತಿಗೊಳಿಸತಕ್ಕದ್ದಾಗಿದೆ. ||೩೧||

ಪಂಚಾಮೃತಗಳಿಂದಲೂ, ಚಂದನಗಂಧದಿಂದಲೂ, ಬಿಲ್ವಪತ್ರೆ, ಮಂದಾರ, ಸಂಪಿಗೆ ಮೊದಲಾದ ಪುಷ್ಪಗಳಿಂದಲೂ, ಆ ಲಿಂಗವನ್ನು ಮಲಯನು ಆರಾಧಿಸುವನು. ಧೂಪದೀಪಗಳಿಂದಲೂ, ನೈವೇದ್ಯಾರ್ಪಣದಿಂದಲೂ, ಪ್ರದಕ್ಷಿಣನಮಸ್ಕಾರಾದಿಗಳಿಂದಲೂ ಶಂಕರನನ್ನು ತೃಪ್ತಿಗೊಳಿಸಿ ಭಕ್ತಿಯಿಂದ ಹೀಗೆ ಸ್ತುತಿಸುವನು. ||೩೩||

" ಮಲಯೇಶ್ವರನೇ, ಮಹೇಶ್ವರನೇ, ಈ ಜಗತ್ತೆಲ್ಲವೂ ನಿನ್ನಿಂದಲೇ ಸೃಷ್ಟವಾಗಿರುವುದು. ಪ್ರಮಥಾಧಿಪನೇ, ಚಂದ್ರಶೇಖರನೇ, ಸೃಷ್ಟವಾದ ಈ ಪ್ರಪಂಚವೆಲ್ಲಾ ಕೊನೆಯಲ್ಲಿ ನಿನ್ನ ಹೃದಯಕುಹರದಲ್ಲಿಯೇ ಲಯವನ್ನು ಪಡೆಯುವುದಲ್ಲವೇ ? "||೩೪||

|| ಸ್ಕಂದ ಉವಾಚ ||

ಇತ್ಥಂ ಸ್ತೌತಿ ಸದಾ ದೇವಂ ಮಲಯಶ್ಶೈಲಸತ್ತಮಃ ।
ದರ್ದುರಃ ಪಶ್ಚಿಮೇ ಭಾತಿ ನಾನಾಶೃಂಗವರಾಶ್ರಯಃ ||೩೫||

ವೈಡೂರ್ಯಸಾರಸುಭಗತತ್ಸೂತ್ರಚ್ಛವಿನಾ ತತಃ ।
ತನ್ಮೌಲಿಗೋಪುರಾಸಾರಶಿಖರೈರತಿಭಾಸುರಃ ||೩೬||

ರುದ್ರಾವತಾರಚರಿತ್ರೈರ್ಮಹೋಕ್ಷಗಣಸಂಕುಲಃ ।
ದೋಧೂಯಮಾನಶೃಂಗಾಗ್ರಪತಾಕಾವಲಿಶೋಭಿತಃ ||೩೭||

ಮಹಾಶಾರ್ದೂಲಸಾಹಸ್ರಧಾರಿತಸ್ತನ್ಮಣಿಪ್ರಭೈಃ ।
ಸಹಸ್ರಸ್ತಂಭಸಂಯುಕ್ತೋ ವೇದಿಕಾಪಟ್ಟಿಕಾನ್ವಿತಃ ||೩೮||

---

ಹೀಗೆ ಮಲಯಪರ್ವತರಾಜನು ಪರಮೇಶ್ವರನನ್ನು ಸರ್ವದಾ ಸ್ತುತಿಸುತ್ತಿರುವನು. ಅಲ್ಲಿಂದ ಮುಂದೆ ಹೋದರೆ ಪಶ್ಚಿಮದಿಕ್ಕು ಗೋಚರಿಸುವುದು. ಅಲ್ಲಿ ಅನೇಕ ಶಿಖರಗಳಿಂದ ವಿರಾಜಮಾನವಾಗಿರುವ ದರ್ದುರಪರ್ವತವು ಪ್ರಕಾಶಿಸುತ್ತಿರುವುದು. ||೩೫||

ಆ ದರ್ದುರಪರ್ವತವು ವೈಡೂರ್ಯಗಳಿಂದ ಕೂಡಿದ್ದಾಗಿ, ರತ್ನಮಾಲೆಯ ಕಾಂತಿಯಿಂದ ಜ್ವಲಿಸುತ್ತಿರುವುದು. ಅದರ ಶಿರೋಭಾಗದಲ್ಲಿರುವ ಅನೇಕ ಗೋಪುರಗಳು ಬಹು ಪ್ರಕಾಶಮಾನವಾಗಿ ತೋರುತ್ತಿರುವುವು. ||೩೬||

ರುದ್ರಾವತಾರದ ಬೊಂಬೆಗಳೂ, ಮಹಾವೃಷಭನ ವಿಗ್ರಹಗಳೂ, ಅಲ್ಲಿ ಅಸಂಖ್ಯಾತವಾಗಿರುವುವು. ಅತಿಶಯವಾಗಿ ಸ್ಫುರಿಸುವಂತಹ ಗಿರಿಶಿಖರಗಳಿಂದಲೂ, ಪತಾಕೆಗಳಿಂದಲೂ ಆ ಪರ್ವತವು ವಿರಾಜಮಾನವಾಗಿರುವುದು. ||೩೭||

ಆ ಗೋಪುರದಲ್ಲಿ ಅನೇಕ ಹುಲಿಗಳು ರತ್ನಗಳಿಂದ ನಿರ್ಮಿತವಾಗಿ ಪ್ರಕಾಶಿಸುತ್ತಿವೆ. ಅದು ಸಹಸ್ರಾರು ಕಂಬಗಳಿಂದಲೂ ಅಸಂಖ್ಯಾತವಾದ ಪಟ್ಟಿಗಳಿಂದಲೂ ಕೂಡಿರುವುದು. ||೩೮||

ಮುಕ್ತಾಚ್ಛಗುಚ್ಛಸಂಭಾದಿವಿತಾನವಿತತಾಂತರಃ ।
ಧೂಪಾಮೋದಾತಿಬಹುಲಗಂಧನಂದಿತದಿಕ್ತಟಃ ॥೩೯॥

ವೈಡೂರ್ಯಸಾರಗರ್ಭಾಚ್ಛಸುಂದರಾಂತರಕಾಂಚಿತಃ ।
ತತ್ರ ಸಿಂಹಾಸನಂ ದಿವ್ಯಂ ಪಂಚಯೋಜನಕಲ್ಪಿತಂ ॥೪೦॥

ಪರಾರ್ಘ್ಯಾಸ್ತರಣೋಪೇತಂ ತಸ್ಮಿನ್ ದೇವ್ಯಾ ಮಹೇಶ್ವರಃ ।
ವಿಹರತ್ಯಂತರಗಣೈರ್ವರುಣೋ ವಾರುಣೀಂ ಶ್ರಿತಃ ॥೪೧॥

ದಿಶಂ ಪಯೋಧಿನಾಥೇನ ಪಾಲಿತಾಂ ಯಾದಸಾಂ ತದಾ ।
ವೈಡೂರ್ಯರತ್ನಮುಕುಟತಟಬದ್ಧೇಂದುಶೇಖರಃ ॥೪೨॥

ಮಣಿಕುಂಡಲಗಂಡೋದ್ಯತ್ಪ್ರಭಾಧವಲಿತಾಂಗಕಃ ।
ವಲಯಾಹೀಶ್ವರೋದ್ಭಾಸಿಫಣಾಫಣಿತಹಸ್ತಕಃ ॥೪೩॥

---

ಮುತ್ತುಗಳ ಗೊಂಚಲುಗಳಿಂದ ಶೋಭಿಸುವ ಮೇಲ್ಕಟ್ಟುಗಳೂ, ಸುವಾಸನೆಯಿಂದ ಸಕಲ ದಿಕ್ಕುಗಳನ್ನೂ ಮುಚ್ಚುತ್ತಿರುವ ಸುಗಂಧದ್ರವ್ಯಗಳೂ ಆ ಗೋಪುರಾಂತರ್ಭಾಗದಲ್ಲಿ ಅತಿಶಯವಾಗಿರುವುವು. ||೩೯||

ಸಾರವಾದ ವೈಡೂರ್ಯಮಣಿಗಳಿಂದ ತುಂಬಿ ಅತ್ಯಂತ ಸುಂದರವಾಗಿರುವ ಒಂದು ದಿವ್ಯಸಿಂಹಾಸನವು ಅಲ್ಲಿರುವುದು. ಅದು ಐದು ಯೋಜನಗಳಷ್ಟು ವೈಶಾಲ್ಯದಲ್ಲಿರುವುದು. ||೪೦||

ಅದರ ಮೇಲೆ ಶ್ರೇಷ್ಠವಾದ ಮತ್ತು ಅಮೂಲ್ಯವಾದ ರತ್ನದ ಮೆತ್ತೆಯು ಹಾಸಲ್ಪಟ್ಟಿರುವುದು. ಅದರಲ್ಲಿ ಮಹೇಶ್ವರನು ದೇವಿಯೊಡನೆ ಸಂತೋಷದಿಂದ ಕುಳಿತಿರುವನು. ತನ್ನ ಗಣಗಳಿಂದ ಕೂಡಿ ವರುಣನು ಆ ಪಶ್ಚಿಮ ದಿಕ್ಕಿನಲ್ಲಿ ನೆಲಸಿರುವುದನ್ನು ಶಂಕರನು ನೋಡಿ ಸಂತೋಷಪಡುವನು. ||೪೧||

ಆ ಪಶ್ಚಿಮದಿಕ್ಕು ಸಮುದ್ರಗಳಿಗೆ ಒಡೆಯನಾದ ವರುಣನಿಂದ ರಕ್ಷಿತವಾಗಿರುವುದು. ಅಲ್ಲಿ ಅನೇಕ ಜಲಜಂತುಗಳು ಸುರಕ್ಷಿತವಾಗಿರುವುವು. ಅಂತಹ ದಿಕ್ಕಿನಲ್ಲಿ ಪರಮೇಶ್ವರನು, ವೈಡೂರ್ಯಗಳಿಂದಲೂ, ರತ್ನಮಯವಾದ ಕಿರೀಟಾದಿಗಳಿಂದಲೂ ಅಲಂಕೃತನಾಗಿ ವಿಹರಿಸುವನು. ||೪೨||

ಕಿವಿಯಲ್ಲಿ ನೇತಾಡುವ ಕರ್ಣಕುಂಡಲಗಳ ಕಾಂತಿಯಿಂದ, ಶಂಕರನ ಕಪೋಲಪ್ರದೇಶವೆಲ್ಲಾ ಶುಭ್ರವರ್ಣವುಳ್ಳದ್ದಾಗಿ ಕಾಣುತ್ತಿರುವುದು. ಕೈಯ್ಯಲ್ಲಿ

ಕೃಷ್ಣಾಗರುಸುಧೂಪೋತ್ಥಧೂಮಧಾರಾನುರಂಜಿತಃ ।
ಮಹಾರ್ಹವಸನೋಪೇತಶ್ಚಲಚ್ಚಾಮರವೀಜಿತಃ ॥೪೪॥

ತದ್ವೈಡೂರ್ಯಮಹಾಸೂತ್ರಧಾರಾವಿದ್ಯೋತಿತಾಂಬರಃ ।
ಪಶ್ಯನ್ ಪಶ್ಚಿಮದಿಙ್ನಾಥಂ ವರುಣಂ ತದ್ಗಣಾನಪಿ ॥೪೫॥

ಪಾಶಹಸ್ತಾನ್ ಹರಿದ್ವರ್ಣಾನ್ ಕರಾಲಾರುಣದಂಷ್ಟ್ರಕಾನ್ ।
ತತ್ರ ಸಪ್ತಾಬ್ಧಿವಲಯಂ ನದೀನದವನಾನಿ ಚ ॥೪೬॥

ದೇವಭಾಗಾಂಶ್ಚ ತತ್ರತ್ಯಾನ್ ಕ್ಷೇತ್ರಾಣಿ ಚ ಮಹೇಶ್ವರಃ ।
ವಿಹರತ್ಯಂಬಯಾ ಸಾರ್ಧಂ ಸೌಧೇ ತಸ್ಮಿನ್ ಪಿನಾಕಧೃಕ್ ॥೪೭॥

ದದರ್ಶರೇಶಾಭಿದಂ ತೇನ ಪೂಜಿತಂ ದಿವ್ಯಧಾಮಗಂ ।
ಪಂಚಾಮೃತಾಸೇಚನೈಶ್ಚ ಗಂಧೈರ್ಬಿಲ್ವೈಶ್ಚ ಚಂಪಕೈಃ ॥೪೮॥

---

ಬಳೆಯಂತೆ ಕಾಣುವ ಸರ್ಪಗಳ ಫಣಾರತ್ನಗಳಿಂದ ಮಹೇಶ್ವರನ ಕೈಯೆಲ್ಲವೂ ಶೋಭಾಯಮಾನವಾಗಿ ಕಾಣುತ್ತಿರುವುದು. ॥೪೩॥

ಕೃಷ್ಣಾಗರುವೇ ಮೊದಲಾದ ಸುಗಂಧವಸ್ತುಗಳ ಪರಂಪರೆಯಿಂದ ಎದ್ದ ಧೂಮದಿಂದ ಶಂಕರನ ದೇಹವೆಲ್ಲಾ ಸುಗಂಧಮಯವಾಗಿರುವುದು. ಬೆಲೆಬಾಳುವ ವಸ್ತ್ರಭೂಷಣಗಳಿಂದಲೂ, ಚಂಚಲವಾಗಿ ಬೀಸುತ್ತಿರುವ ಚಾಮರಗಳಿಂದಲೂ ಪರಶಿವನು ಶೋಭಿಸುತ್ತಿರುವನು. ॥೪೪॥

ಶಿವನ ದೇಹದಲ್ಲಿರುವ ವೈಡೂರ್ಯಗಳ ಕಾಂತಿಲಹರಿಯಿಂದ ಅಂತರಿಕ್ಷಭಾಗವೆಲ್ಲಾ ಪ್ರಕಾಶಮಾನವಾಗಿರುವುದು. ಅಂತಹ ಪರಮೇಶ್ವರನು ಪಶ್ಚಿಮದಿಕ್ಕಿಗೆ ಅಧಿಪತಿಯಾದ ವರುಣನನ್ನೂ, ಅವನ ಗಣಗಳನ್ನೂ ಅನುಗ್ರಹಪೂರ್ವಕವಾಗಿ ನೋಡುವನು. ॥೪೫॥

ವರುಣನ ಸೇವಕರೆಲ್ಲರೂ, ಪಾಶಾಯುಧವನ್ನು ಕೈಯಲ್ಲಿ ಹಿಡಿದಿರುವರು. ಹಸುರು ಬಣ್ಣವೇ ಅವರ ದೇಹಕಾಂತಿ. ಕ್ರೂರವಾಗಿ ಮತ್ತು ಕೆಂಪಾಗಿರುವ ಕೋರೆ ಹಲ್ಲುಗಳು ಅವರ ಆಕಾರವನ್ನು ಭಯಂಕರವನ್ನಾಗಿ ಮಾಡುತ್ತಿವೆ. ಮತ್ತು ವರುಣ ಲೋಕದಲ್ಲಿರುವ ಸಪ್ತಸಮುದ್ರಗಳನ್ನೂ ದ್ವೀಪಗಳನ್ನೂ, ನದೀ, ನದ, ಉಪವನ ಮುಂತಾದುವುಗಳನ್ನೂ, ನೋಡುತ್ತಾ ಮುಂದುವರಿಯುವನು. ॥೪೬॥

**ಧೂಪೈರ್ದೀಪೈಶ್ಚ ನೈವೇದ್ಯೈರ್ನಮನಪ್ರಕ್ರಮೈಸ್ಸ್ತವೈಃ ।**
**ತುಷ್ಟಾವ ದರ್ದುರೋ ದೇವಂ ದರ್ದುರೇಶಂ ಮಹೇಶ್ವರಂ ॥೪೯॥**

|| ದರ್ದುರ ಉವಾಚ ||

**ಪಾಪಾಪಾರಮತಂಗಕುಂಭಹರಣೇ ತ್ವಂ ಶಂಕರೋ ದರ್ದುರೋ**
**ಭೀಮೋಽಹೀಶ್ವರಕಂಕಣೋತ್ತಮಲಸತ್ಪಾಣೀ ನಖೋದ್ಯತ್ಪ್ರಭಃ ।**
**ಸಿಂಹಸ್ಸರ್ವಸುರೇಶ್ವರೋ ಹಿ [1]ಭಗವಾನಿಂದೂಕಪರ್ದೋಜ್ವಲ**
**ಸ್ಸರ್ವೇಷಾಂ [2]ಜನಿತಾ [3]ಗರಾಂಚಿತಗಲಃ [4]ಕಾಶೇ ಗುಣೈರ್ವಾಚಕಃ ॥೫೦॥**

**ಇತಿ ಶ್ರೀ ಶಿವರಹಸ್ಯೇ ಪ್ರಥಮಾಂಶೇ ಕೈಲಾಸಸೌಧವರ್ಣನಂ ನಾಮ**
**ಏಕೋನತ್ರಿಂಶೋಽಧ್ಯಾಯಃ**

---

ಮತ್ತು ಅಲ್ಲಿರುವ ದೇವಭಾಗದಪ್ರದೇಶಗಳನ್ನೂ, ಕ್ಷೇತ್ರಗಳನ್ನೂ ನೋಡುತ್ತಾ, ಅಲ್ಲಿರುವ ದಿವ್ಯಸೌಧದಲ್ಲಿ ದೇವಿಯೊಡನೆ ವಿಹರಿಸುವನು. ||೪೭||

ದರ್ದುರನಿಂದ ಪೂಜಿಸಲ್ಪಟ್ಟು, ದಿವ್ಯವಾದ ಸೌಧದಲ್ಲಿ ರಾರಾಜಿಸುವ ಮತ್ತು ಪಂಚಾಮೃತಾಭಿಷೇಕದಿಂದಲೂ, ಗಂಧ, ಬಿಲ್ವಪತ್ರೆ, ಸಂಪಿಗೆಹೂ ಮೊದಲಾದ ಪೂಜಾದ್ರವ್ಯಗಳಿಂದಲೂ ಪೂಜಿತವಾಗಿರುವ ದರ್ದುರೇಶಲಿಂಗವನ್ನು ಮಹೇಶ್ವರನು ನೋಡುವನು. ||೪೮||

ದರ್ದುರಪರ್ವತರಾಜನು, ಧೂಪ, ದೀಪ, ನೈವೇದ್ಯ, ಪ್ರದಕ್ಷಿಣನಮಸ್ಕಾರ ಇವೇ ಮೊದಲಾದುವುಗಳಿಂದ ದರ್ದುರೇಶಸ್ವಾಮಿಯನ್ನು ಸರ್ವದಾ ಪೂಜಿಸುತ್ತಾ ಹೀಗೆ ಸ್ತುತಿಸುವನು. ||೪೯||

"ಎಲೈ ದರ್ದುರೇಶ್ವರನೇ, ನೀನು ಸಮಸ್ತ ಭಕ್ತರ ಪಾಪಗಳೆಂಬ ಮದ್ದಾನೆಯ ಕುಂಭಸ್ಥಳವನ್ನು ಭೇದಿಸುವುದರಲ್ಲಿ ಸಿಂಹದಂತಿರುವೆ. ಸರ್ಪಗಳನ್ನೇ ಹಸ್ತಾಭರಣವ

---

1 ಭಗವಾನ್ಸೈಂದೋಽ ಕಪರ್ದ (ಪಾ. ರ.)
2 ಜರಿತಾ (ಪಾ. ರ.)
3 ಗರಂ ಜರಯಿತಾ (ಪಾ. ರ.)
4 ಹರಂ ಜರಯಿತಾಕೋಶಃ (ಪಾ ರ.)
4 ಕೇಶೋ (ಪಾ ರ)

ನ್ನಾಗಿ ಮಾಡಿಕೊಂಡಿರುವೆ. ನಿನ್ನ ಉಗುರುಗಳ ಕಾಂತಿಯು ಸರ್ವವ್ಯಾಪಿಯಾಗಿರುವುದು. ಸಕಲ ದೇವತೆಗಳಿಗೂ ನೀನು ಒಡೆಯನೆನಿಸಿರುವೆ. ನಿನ್ನ ಶಿರಸ್ಸಿನಲ್ಲಿ ಚಂದ್ರನ ಚಂದ್ರಿಕೆಯೂ, ಜಟಾಜೂಟಗಳ ಪ್ರಕಾಶವೂ ತೋರಿಬರುತ್ತಿರುವುದು. ಸಕಲ ಲೋಕವನ್ನೂ ನುಂಗಿ ಅರಗಿಸಿಕೊಳ್ಳುವಂತಹುದು ನಿನ್ನ ತೇಜಸ್ಸು,. ತೇಜೋ ವಿಶೇಷದಿಂದ ಕೂಡಿರುವ ನಿನ್ನ ಕೇಶಪಾಶದಿಂದ ನೀನು ವ್ಯೋಮಕೇಶನೆನಿಸಿರುವೆ. ಇಂತಹ ನಿನ್ನನ್ನು ನಾನು ಸರ್ವದಾ ಧ್ಯಾನಿಸುತ್ತಿರುವೆನು," ಎಂದು ಸರ್ವದಾ ಸ್ತುತಿಸುತ್ತಿರುವನು. ||೫೦||

ಇಲ್ಲಿಗೆ ಶ್ರೀ ಶಿವರಹಸ್ಯದ ಪ್ರಥಮಾಂಶದಲ್ಲಿ ಕೈಲಾಸಸೌಧವರ್ಣನೆಯೆಂಬ ಇಪ್ಪತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

# ಅಥ ಶ್ರೀಶಿವರಹಸ್ಯೇ

## ತ್ರಿಂಶೋಽಧ್ಯಾಯಃ

### ಶೈಲಕೃತಸ್ತುತಿಃ

॥ ಸ್ಕಂದ ಉವಾಚ ॥

**ವಾಯವ್ಯಾಂ ಮಂದರಸ್ತತ್ರ ಮಣಿಸುಂದರಕಂದರಃ ।**
**ಮಹೇಶಸ್ಯ ಪ್ರಿಯೋ ನಿತ್ಯಂ ಸರ್ವಮಂದಾರನಂದಿತಃ ॥೧॥**

**ಮಂದಾರತರುಭಿಸ್ತಸ್ಯ ಮೌಲಿಸ್ಥೈರ್ದ್ಯೋತಿತಾ ದಿಶಃ ।**
**ಹರಿನ್ಮಣಿಪ್ರಭಾಜಾಲಪರಿಷ್ಕೃತದಿಗಂತರಃ ॥೨॥**

**ಸೋಽಯುತಂ ಯೋಜನಾಯಾಮೈರ್ವಿಸ್ತಾರೋಚ್ಛ್ರಾಯವಿಸ್ತರಃ ।**
**ಅತುಲಸ್ಸರ್ವಶಿಖರಿಶಿಖಾವ್ರಾತೈಕಸುಂದರಃ ॥೩॥**

---

ಶ್ರೀಶಿವರಹಸ್ಯದಲ್ಲಿ ಮೂವತ್ತನೆಯ ಅಧ್ಯಾಯು

ಕೈಲಾಸಪರ್ವತದ ವಾಯುವ್ಯ ಭಾಗದಲ್ಲಿ ಮಂದರ ಪರ್ವತವಿದೆ. ಅದರಲ್ಲಿ ಬಹುಸುಂದರವಾದ ಗುಹೆಗಳಿವೆ. ಆ ಪರ್ವತವು ಮಹೇಶ್ವರನಿಗೂ ಸಕಲ ದೇವತೆಗಳಿಗೂ ಬಹುಪ್ರಿಯವಾದುದಾಗಿದೆ. ॥೧॥

ಮಂದರ ಪರ್ವತದ ಮೇಲೆ ಮಂದಾರ ವೃಕ್ಷಗಳು ಅಪರಿಮಿತವಾಗಿವೆ. ಅವುಗಳ ಕಾಂತಿಯು ಸಕಲ ದಿಕ್ಕುಗಳನ್ನೂ ಬೆಳಗಿಸುತ್ತಿದೆ. ಮತ್ತು ಅಲ್ಲಿರುವ ಹಸುರು ರತ್ನಗಳ ಕಾಂತಿಜಾಲದಿಂದ ಸಕಲ ದಿಕ್ಕುಗಳು ಅಲಂಕರಿಸಲ್ಪಟ್ಟಿವೆ. ॥೨॥

ಮಂದರಪರ್ವತವು ಹತ್ತುಸಾವಿರ ಯೋಜನದಷ್ಟು ವಿಸ್ತಾರವಾಗಿಯೂ, ಅಷ್ಟೇ ಪ್ರಮಾಣದಲ್ಲಿ ಎತ್ತರವಾಗಿಯೂ ಇರುವುದು. ಎಲ್ಲಾ ಪರ್ವತಗಳ ಶಿಖರಗಳಿಗಿಂತ ಈ ಮಂದರ ಪರ್ವತ ಶಿಖರವು ಸುಂದರವಾಗಿರುವುದರಿಂದ ಇದಕ್ಕೆ ಯಾವ ಶಿಖರದ ಹೋಲಿಕೆಯನ್ನೂ ಕೊಡುವಂತೆಯೇ ಇಲ್ಲ. ॥೩॥

ಚಂದನಾನಂದಿತಮುಖಸ್ಸುಮಗಂಧೋಜ್ವಲಚ್ಛಿಖಃ ।
ರತ್ನಸಾಲತಮಾಲಾಲಿಮೌಲಿಸಾಲಿವಿರಾಜಿತಃ ॥೪॥

ತತ್ರೈವ ಮಂದರೋದ್ದಾಮಶೇಖರೈರಮಿತಪ್ರಭೈಃ ।
ವಿಭಾಂತಿ ತದ್ಧರಿಮಣಿಹರಿತಾಶ್ಯಾದ್ವಲೋಪಮಾಃ ॥೫॥

ಚಕಾಸ್ತಿ ತದ್ದಿಶಾಂ ವಕ್ತ್ರಂ ನಾನಾಪಕ್ಷಿಮೃಗೈರ್ಯುತಂ ।
ತನ್ಮೌಲಿಗೋಪುರಾಪಾರಕಲಶದ್ಯೋತಿತಾಂಬರಃ ॥೬॥

ರುದ್ರಾವತಾರಚರಿತ್ರೈರ್ಧೇನುಪೋತಗಣೈಶ್ಶುಭೈಃ ।
ಸಹಸ್ರಹಂಸಮೌಲಿಸ್ಥಸೌಧರಾಜಿವಿರಾಜಿತಃ ॥೭॥

ವೇದಿಸೋಪಾನಕೋಪೇತಸ್ಸಹಸ್ರಸ್ತಂಭಮಂಡಿತಃ ।
ತಲ್ಪೈರ್ವಲ್ಲಿತಪಾಲೀಭಿರ್ವಲಭೀಭಿರ್ವಿಚಿತ್ರಿತೈಃ ॥೮॥

---

ಚಂದನವೃಕ್ಷಗಳು ಪರ್ವತದ ಮುಖಭಾಗದಲ್ಲಿಯೂ, ಸುಗಂಧಮಯವಾದ ಪುಷ್ಪಗಳು ಅಗ್ರಭಾಗದಲ್ಲಿಯೂ, ರತ್ನಮಾಲೆಗಳ ಮತ್ತು ಹೊಂಗೆಮರಗಳ ಸಾಲುಗಳೂ ಅಕ್ಕಪಕ್ಕಗಳಲ್ಲಿಯೂ ಶೋಭಿಸುತ್ತಿವೆ. ॥೪॥

ಈ ಪರ್ವತದ ಶಿಖರಭಾಗವು ಹೆಚ್ಚಾದ ಕಾಂತಿಯುಳ್ಳದ್ದಾಗಿರುವುದು. ಅಲ್ಲಿರುವ ಹಸುರುಮಣಿಗಳ ಕಾಂತಿಯು ಸುತ್ತಲೂ ವ್ಯಾಪಿಸಿ ಹಸುರು ಹುಲ್ಲಿನ ಭ್ರಾಂತಿಯನ್ನುಂಟುಮಾಡತಕ್ಕದ್ದಾಗಿದೆ. ॥೫॥

ವಾಯುವ್ಯ ದಿಗ್ಭಾಗವಂತೂ ನಾನಾ ವಿಧವಾದ ಪಕ್ಷಿಗಳಿಂದಲೂ, ಮೃಗಗಳಿಂದಲೂ ತುಂಬಿರುವುದು. ಮಂದರಪರ್ವತದ ಶಿಖರದ ಮೇಲೆ ಅನೇಕ ಕಲಶಗಳಿಂದ ಅಂತರಿಕ್ಷವನ್ನೇ ಪ್ರಕಾಶಗೊಳಿಸಿದ ಗೋಪುರವೊಂದಿರುವುದು. ॥೬॥

ಅದರಲ್ಲಿ ರುದ್ರಾವತಾರದ ಚರಿತ್ರೆಗಳನ್ನು ತೋರಿಸುವಂತಹ ವಿಗ್ರಹಗಳೂ, ಹಸು ಮತ್ತು ಕರುಗಳ ಚಿತ್ರಗಳೂ ಬಹಳವಾಗಿವೆ. ಅನೇಕ ಹಂಸಶ್ರೇಣಿಯಿಂದ ವಿರಾಜಮಾನವಾದ ಒಂದು ಉಪ್ಪರಿಗೆಯೂ ಅಲ್ಲಿರುವುದು. ॥೭॥

ಆ ಉಪ್ಪರಿಗೆಗೆ ಅನೇಕ ವೇದಿಕೆಗಳೂ, ಮೆಟ್ಟಿಲುಗಳೂ, ಬಹಳವಾಗಿವೆ. ಅದಕ್ಕೂ ಸಾವಿರ ಕಂಬಗಳಿವೆ. ವಿಚಿತ್ರತರವಾದ ಮುಂಜೂರು ಮರಗಳಿಂದಲೂ,

**ತಸ್ಯಾಂತರ್ಮಣಿಸಾದಾಚ್ಛಸ್ವಚ್ಛಸಿಂಹಾಸನಂ ವರಂ ।**
**ಸಾಂಬ್ರಾಣಿಧೂಪಬಹಳಗಂಧಗಂಧವಹಾಶ್ರಯಃ ॥೯॥**

**ರತ್ನಜಾಲಮಹಾಸಾಲಜಾಲಕಾವಲಿಕೀಲಿತಃ ।**
**ಮಂದರೋತ್ಥಮಹಾನಂದಸುಮಸುಂದರಮಾರುತಃ ॥೧೦॥**

**ದಿವ್ಯಮಂದಾರಜಾಮೋದಫುಲ್ಲಮಾಲಾವೃತೋದರಃ ।**
**ಹರಿನ್ಮಣಿಮಹಾದೀಪಸಾರಧಾರಾವೃತಾಂತರಃ ॥೧೧॥**

**ತತ್ರ ದೇವ್ಯಾ ಹರಿತ್ಕಾಂತ್ಯಾ ವಾಮಭಾಗಸ್ಥಯಾ ಶಿವಃ ।**
**ಸೇವಿತೋ ಹರಿತೋದ್ದಾಮಪಾದಮಂಚೇಽಧಿಸಂಸ್ಥಿತಃ ॥೧೨॥**

**ವಾಯುಂ ಸತ್ಯವದಾಲೋಕಾಂಸ್ತತ್ರತ್ಯಾನ್ ಗಣಪಾನಪಿ ।**
**ಸಾಗರಾಂತರಜಾನ್ ದ್ವೀಪಾನ್ ವನಾನಿ ಸರಿತೋ ನಗಾನ್ ॥೧೩॥**

---

ಅವುಗಳಿಗೆ ಹಬ್ಬಿರುವ ಲತೆಗಳಿಂದಲೂ ಆ ಗೋಪುರವು ಬಹು ರಮಣೀಯವಾಗಿರುವುದು. ||೮||

ಆ ಗೋಪುರದ ಒಳಭಾಗದಲ್ಲಿ ರತ್ನಖಚಿತವಾದ ಸಿಂಹಾಸನವೊಂದಿರುವುದು. ಅದರ ಮೇಲೆ ಸಾಂಬ್ರಾಣಿಯೇ ಮೊದಲಾದ ಧೂಪಗಳ ಗಂಧವನ್ನು ಪಡೆದಿರುವ ವಾಯುವು ಬೀಸುತ್ತಿರುವುದು. ||೯||

ರತ್ನಗಳ ಸಮೂಹದಿಂದ ಕೂಡಿದ ಸಾಲವೃಕ್ಷಗಳ ಚಲನೆಯಿಂದ ಎದ್ದ ಮಾರುತವು ಮಂದರ ಪರ್ವತದಲ್ಲಿ ಬೆಳೆದಿರುವ ಸುಗಂಧಮಯವಾದ ಪುಷ್ಪಗಳ ಸುವಾಸನೆಯಿಂದ ಕೂಡಿ ಬಹು ಸುಂದರವಾಗಿರುವುದು. ||೧೦||

ಅರಳಿದ ಮಂದಾರಪುಷ್ಪಗಳ ಮಾಲೆಯಿಂದ ಹೊರಟ ಸುಗಂಧವನ್ನು ಹೊಂದಿ, ವಾಯುವು ಪಚ್ಚೆಗಳೆಂಬ ಮಹಾದೀಪಗಳಿಂದ ಹೊರಹೊರಡುವ ಅನೇಕ ತೇಜಃಪ್ರಸರವನ್ನು ಒಳಗೊಂಡಿರುವುದಾಗಿ ಬೀಸುತ್ತಿರುವುದು. ||೧೧||

ಅಲ್ಲಿ ಹರಿದ್ವರ್ಣದಿಂದ ಶೋಭಿಸುವ ದೇವಿಯಿಂದ ಕೂಡಿದವನಾಗಿ ಶಂಕರನು ಪಚ್ಚೆಮಣಿಗಳಿಂದ ಕೂಡಿರುವ ಪಾದಭಾಗವುಳ್ಳ ಒಂದು ದೊಡ್ಡಮಂಚದಲ್ಲಿ ಮಂಡಿಸುವನು. ||೧೨||

ಮತ್ತು ಅಲ್ಲಿರುವ ವಾಯುವನ್ನೂ ಸತ್ಯವಂತರಾಗಿ ನಡೆಯುತ್ತಿರುವ

**ದೇವಲೋಕಾಂಸ್ತಥಾ ದೇವೋ ದೇವ್ಯಾ ಲೋಕಾನ್ ಪ್ರತೀಕ್ಷಯನ್ ।**
**ಮಂದರೇಣಾರ್ಚಿತಂ ತತ್ರ ಲಿಂಗಂ ಸುಂದರಮಂದಿರೇ ॥೧೪॥**

**ನಾಮ್ನೈವ ಮಂದರೇಶಾನಮಿಂದುಕುಂದಸಮಪ್ರಭಂ ।**
**ಪಂಚಾಮೃತೈಸ್ತಥಾ ನೀರೈಶ್ಚಂದನೈರ್ಬಿಲ್ವಪಲ್ಲವೈಃ ॥೧೫॥**

**ಅರವಿಂದಮರಂದೈಶ್ಚ ಮಂದಾರತರುಜೈಸ್ಸುಮೈಃ ।**
**ಧೂಪೈರ್ದೀಪೈಶ್ಚ ನೈವೇದ್ಯೈರ್ನಮನಪ್ರಕ್ರಮೈಸ್ತಥಾ ॥೧೬॥**

**ಆನಂದಸುಂದರೋದಾರಸ್ತವೈಸ್ಸಂಸ್ತೌತಿ ಭಕ್ತಿತಃ ॥೧೭॥**

**ಶ್ರೀಮಂದರೇಶ ವಿವಿಧಾಗಮಮೌಲಿಬೃಂದ**
**ಸಂದೋಹನಂದಿತಪದಾಂಬುಜಭೃಂಗಭಾವಂ ।**

---

ಗಣನಾಯಕರನ್ನೂ ಸಾಗರಮಧ್ಯವರ್ತಿಗಳಾಗಿರುವ ದ್ವೀಪಗಳನ್ನೂ, ನದಿಗಳನ್ನೂ, ಪರ್ವತಗಳನ್ನೂ ನೋಡಿ ಆನಂದಿಸುವನು. ॥೧೩॥

ಸಕಲ ದೇವಲೋಕಗಳನ್ನೂ, ದೇವಿಯರ ಲೋಕಗಳನ್ನೂ ನೋಡುತ್ತಾ ಮಂದರಪರ್ವತರಾಜನು ತಾನೇ ಸಾಕ್ಷಾತ್ತಾಗಿ ಪೂಜೆಮಾಡುವ ಸುಂದರ ಮಂದಿರಾಂತರ್ಗತವಾದ ಲಿಂಗವನ್ನು ಕಾಣುವನು. ॥೧೪॥

ಆ ಲಿಂಗಕ್ಕೆ ಮಂದರೇಶ್ವರನೆಂಬ ಹೆಸರಿರುವುದು. ಸಹಜವಾಗಿಯೇ ಆ ಮೂರ್ತಿಯು ಚಂದ್ರನಂತೆ, ಕುಂದಪುಷ್ಪದಂತೆ ಶುಭ್ರವಾಗಿರುವುದು. ಮಂದರ ಪರ್ವತವು ಆ ಶಿವಲಿಂಗವನ್ನು ಪಂಚಾಮೃತ ಮತ್ತು ಶುದ್ಧೋದಕಗಳ ಅಭಿಷೇಕ ದಿಂದಲೂ, ಚಂದನವೇ ಮೊದಲಾದ ದಿವ್ಯಗಂಧಲೇಪನದಿಂದಲೂ, ಬಿಲ್ವಪತ್ರೆ, ಅಶೋಕಪುಷ್ಪ ಮಂದಾರಪುಷ್ಪ ಮೊದಲಾದ ಪುಷ್ಪವಿಶೇಷಗಳಿಂದಲೂ, ಧೂಪ ದೀಪಾದಿ ನೈವೇದ್ಯಗಳಿಂದಲೂ, ಪ್ರದಕ್ಷಿಣನಮಸ್ಕಾರದಿಂದಲೂ ಅರ್ಚಿಸಿ, ಅನಂತರ ಭಕ್ತಿಸಂಪನ್ನನಾಗಿ ಎದುರಿನಲ್ಲಿ ನಿಂತು ಹೀಗೆ ಪ್ರಾರ್ಥಿಸತೊಡಗುವನು. ॥೧೫-೧೬-೧೭॥

"ಓ ಮಂದರೇಶಸ್ವಾಮಿಯೇ, ನನಗೆ ನಿನ್ನ ಪಾದಸೇವೆಯನ್ನು ಅನುಗ್ರಹಿಸು. ಸಕಲ ದೇವತೆಗಳೂ ನಿನ್ನ ಪಾದಕಮಲಕ್ಕೆ ಎರಗುತ್ತಿರುವರು. ಬಾಲಚಂದ್ರನನ್ನೇ ನೀನು ತಿಲಕವನ್ನಾಗಿ ಮಾಡಿಕೊಂಡು ಶಿರಸ್ಸಿನಲ್ಲಿ ಧರಿಸಿರುವೆ. ಸಕಲಾಗಮಗಳೂ

**ಸಂಪ್ರಾರ್ಥಯಾಮಿ ತರುಣೇಂದುಕಲಾಲಲಾಮ**
**ಬೃಂದಾರವಂದಿತಪದಾಂಬುಜಸೇವಯೋಽಹಂ ॥೧೮॥**

**ಇತ್ಥಂ ಸ್ತೌತಿ ಸದಾ ದೇವಂ ಮಂದರಶ್ಚಾರುಕಂದರಃ ।**
**ಮಮ ಮಾತಾಮಹೋದ್ದಾಮಶೇಖರೈರರ್ದಿತಾ ದಿಶಃ ॥೧೯॥**

**ಹೀರಸಾರಮಯೋ ಭಾತಿ ಹಿಮವಾನ್ ಗಗನಾತಿಗಃ ।**
**ಹಿಮಸಾರಮಹಾಧಾರಾಶಶಿಕಾಂತಶಿಲಾಮಯಃ ॥೨೦॥**

**ತತ್ಕಾಂತಿಕಾಂತಿತಾ ಲೋಕಾ ಮಹಾಗೋಪುರಭಾಸುರಃ ।**
**ರುದ್ರಾವತಾರಚರಿತ್ರೈರ್ವೃಷಸ್ತೋಮವಿರಾಜಿತಃ ॥೨೧॥**

---

ಒಟ್ಟಾಗಿ ನಿನ್ನ ಪಾದಸೇವೆಯನ್ನು ಮಾಡುತ್ತಾ ನಿನ್ನನ್ನು ಆನಂದಪಡಿಸುತ್ತಿವೆ. ಇಂತಹ ಕಮಲ ಸದೃಶವಾದ ನಿನ್ನ ಪಾದದ ಸಮೀಪದಲ್ಲಿ ನಾನು ದುಂಬಿಯಂತೆ ಸರ್ವದಾ ಆಟವಾಡುವ ಯೋಗ್ಯತೆಯನ್ನು ಅನುಗ್ರಹಿಸು" ಎಂದು ಮೊರೆ ಯಿಡುವನು. ॥೧೮॥

ಹೀಗೆ ಸುಂದರವಾದ ಗುಹಾಪ್ರದೇಶಗಳಿಂದ ಕೂಡಿದ ಮಂದರಪರ್ವತವು ದೇವದೇವನಾದ ಶಂಕರನನ್ನು ಬಹುವಾಗಿ ಪ್ರಾರ್ಥಿಸುತ್ತಿರುವುದು. ಅಲ್ಲಿಂದ ಮುಂದೆ ಹೋದರೆ ಉತ್ತರದಿಗ್ಭಾಗದಲ್ಲಿ ನನ್ನ ಮಾತಾಮಹನಾದ ಹಿಮವಂತನು ತನ್ನ ಶಿಖರಗಳಿಂದ ಉತ್ತರ ದಿಕ್ಕನ್ನೇ ಅಲಂಕರಿಸುತ್ತಾ ವಿರಾಜಿಸುತ್ತಿರುವನು, ಎಂದು ಕುಮಾರಸ್ವಾಮಿಯು ಜೈಗೀಷವ್ಯಾದಿಗಳಿಗೆ ಹೇಳುತ್ತಾ, ಹಿಮಾಲಯದ ಸೊಬಗನ್ನು ವರ್ಣಿಸತೊಡಗಿದನು. ॥೧೯॥

ಹಿಮವಂತನು ಹೀರರತ್ನಮಯನಾಗಿರುವನು. ಔನ್ನತ್ಯದಲ್ಲಿ ಅಂತರಿಕ್ಷವನ್ನು ಮೀರಿ ಮೇಲೆ ಹೋಗಿರುವನು. ಹಿಮಪಂಕ್ತಿಗಳ ಕಾಂತಿಯಿಂದ ಕೂಡಿ, ಚಂದ್ರಕಾಂತ ಶಿಲಾಮಯನಾಗಿಯೂ ಕಾಣುತ್ತಿರುವನು. ॥೨೦॥

ಹಿಮವಂತನ ಕಾಂತಿಯಿಂದ ಲೋಕವೆಲ್ಲವೂ ಪ್ರಕಾಶಿಸುತ್ತಿರುವುದು. ಅದರ ಲ್ಲಿಯೂ ಎತ್ತರವಾಗಿ ಪ್ರಕಾಶಿಸುವ ಗೋಪುರವೊಂದಿರುವುದು. ಅಲ್ಲಿ ರುದ್ರಾವತಾರದ ಬೊಂಬೆಗಳೂ, ವೃಷಭಗಳ ಸಾಲುಗಳೂ ವಿರಾಜಿಸುತ್ತಿವೆ. ॥೨೧॥

ನಿಯುತಂ ಯೋಜನಾಯಾಮಃ ಕೈಲಾಸೋತ್ತರಭಾಗಗಃ ।
ಸಹಸ್ರಕೇಸರಿಸಟಾತಟಭ್ರಾಜಿಸುಪಾಂಡರಃ ॥೨೨॥

ತದ್ಧಾರಿತಮಹಾಹೀರಪ್ರಾಸಾದೋದ್ಯಚ್ಛಿಖಾಶ್ರಯಃ ।
ಸಹಸ್ರಸ್ತಂಭಸಂಯುಕ್ತೋ ರಮ್ಯಸೋಪಾನವೇದಿಕಃ ॥೨೩॥

ಮಹಾಹಿಮಘನೀಭೂತಚಂದ್ರಸ್ಫಟಿಕಪೀಠಕಃ ।
ಸಂಫುಲ್ಲಾಮೋದಿವಿಪಿನಸುಮಗಂಧಿತಮಾರುತಃ ॥೨೪॥

ಶಿಲಾರಸಮಹಾರೀತಿಗಂಧಮಾದ್ಯತ್ಸುಮದ್ರುಮಃ ।
ತಕ್ಕೋಲಾಗರುಕಸ್ತೂರೀಮೋದಿಚಂದನಮಸ್ತಕಃ ॥೨೫॥

---

ಈ ಪರ್ವತವು ಕೈಲಾಸದ ಉತ್ತರಭಾಗದಲ್ಲಿ ಒಂದು ಲಕ್ಷಯೋಜನದ ಪರಿಮಿತಿಯಲ್ಲಿದೆ. ಇದರ ತಪ್ಪಲು ಪ್ರದೇಶವು ಶ್ರೇಷ್ಠವಾದ ಸಿಂಹಗಳ ಕೇಸರಗಳಿಂದ ಶುಭ್ರಕಾಂತಿಯುಳ್ಳದ್ದಾಗಿ ಹೊಳೆಯುತ್ತಿರುವುದು. ||೨೨||

ಆ ಗೋಪುರದ ಅಧೋಭಾಗದಲ್ಲಿ ಒಂದು ಪ್ರಾಸಾದವಿರುವುದು. ಅದೂ ಸಹ ಹೀರರತ್ನಮಯವಾದದ್ದೇ. ಆ ಹರ್ಮ್ಯವು ಸಹಸ್ರ ಕಂಬಗಳಿಂದಲೂ, ರಮ್ಯ ಸೋಪಾನಗಳಿಂದಲೂ, ಪ್ರಕಾಶಮಾನವಾದ ವೇದಿಕೆಗಳಿಂದಲೂ ಹೊಳೆಯುತ್ತಿರುವುದು. ||೨೩||

ಹಿಮಾಲಯಪರ್ವತದಲ್ಲಿ ಘನೀಭೂತವಾದ ಹಿಮಗಳಿಂದ ಕೂಡಿದ ಚಂದ್ರಕಾಂತಶಿಲೆಯು ತಪ್ಪಲುಭಾಗದಲ್ಲಿ ವಿಶೇಷವಾಗಿ ಕಂಡುಬರುತ್ತಿರುವುದು. ಅರಳಿ, ಸುವಾಸನೆಯನ್ನು ಬೀರುತ್ತಿರುವ ಪುಷ್ಪಗಳುಳ್ಳ ಅರಣ್ಯವೂ, ಅದರ ಮೇಲೆ ಬೀಸುವ ಸುಗಂಧಮಯವಾದ ಮಾರುತವೂ ಬಹು ರಮ್ಯವಾಗಿರುವುದು. ||೨೪||

ಶಿಲಾರಸದಂತೆ, ಮಕರಂದವನ್ನು ಸುರಿಸುತ್ತಿರುವ ಸುಮಭರಿತವಾದ ಮರಗಳಿಂದಲೂ, ತಕ್ಕೋಲ, ಅಗರು, ಕಸ್ತೂರಿ, ಶ್ರೀಚಂದನ ಇವೇ ಮೊದಲಾದ ಸುಗಂಧವಿಶಿಷ್ಟವಾದ ವೃಕ್ಷಗಳಿಂದಲೂ, ಆ ಪರ್ವತಶಿಖರವು ಸುಂದರವಾಗಿರುವುದು. ||೨೫||

**ಕುರವಾಶೋಕವಕುಲಚಂಪಕೋದ್ದಾಮಗಂಧಕಃ ।**
**ಕರ್ಣಿಕಾರಮಹಾವಕ್ತ್ರಸ್ತಿಲಕಾಂಕಿತಮಸ್ತಕಃ ॥೨೬॥**

**ಕುಟಜೋದ್ದಾಮಮಕುಟೋ ವಟಾಸಟಜಟಾಧರಃ ।**
**ತ್ರಿಪುಂಡ್ರಕಕೃತಾಕಾರತಕ್ಕೋಲಾಂಕೋಲಸುಂದರಃ ॥೨೭॥**

**ಮಹಾಹಿಮಕರಾಕಾರಮಹಾಹಿವರಧೃಙ್ನಗಃ ।**
**ಹರಮೌಲಿಜಟೋಲ್ಲಾಸಿಹಿಮಧಾಮೋಜ್ಜ್ವಲಪ್ರಭಃ ॥೨೮॥**

**ದಿವ್ಯಗಂಗಾಪಯಃಪೂರನಿರ್ಝರಾವೃತಕಂಧರಃ ।**
**ಸ್ವಕೀಯಮೌಲಿಸೌಧಸ್ಥಪಂಕಜಾಕಾರಸಪ್ರಭಃ ॥೨೯॥**

---

ಗೋರಂಟೀ, ಅಶೋಕ, ವಕುಲ, ಸಂಪಿಗೆ ಮೊದಲಾದ ಪುಷ್ಪಗಳ ವಾಸನೆಯು ಅಲ್ಲೆಲ್ಲಾ ವ್ಯಾಪಿಸಿದ್ದಾಗಿದೆ. ಕರ್ಣಿಕಾರವೃಕ್ಷಗಳು ಮುಂಭಾಗದಲ್ಲಿಯೂ ತಿಲಕವೃಕ್ಷವು ಅಗ್ರಭಾಗದಲ್ಲಿಯೂ ವಿಶೇಷವಾಗಿ ಕಂಡುಬರುತ್ತಿರುವುದು. ॥೨೬॥

ಕುಟಜಪುಷ್ಪಗಳು ಕಿರೀಟದಂತೆಯೂ, ಆಲದಮರಗಳ ಬಿಳಲುಗಳೇ ಜಟೆಯಂತೆಯೂ, ತಕ್ಕೋಲ ಮತ್ತು ಅಂಕೋಲವೃಕ್ಷಗಳೇ ತ್ರಿಪುಂಡ್ರಗಳಂತೆಯೂ ಕಾಣುವುದರಿಂದ ಈ ಪರ್ವತವು ಶಂಕರನ ಸಾಮ್ಯವನ್ನು ಪಡೆದಿರುವುದಾಗಿದೆ. ॥೨೭॥

ಮತ್ತೂ ಹಿಮಕರ (ಚಂದ್ರ) ನೇ ತಾನಾಗಿ, ಹಿಮದಿಂದ ರಂಜಿಸುವ ಪರ್ವತರಾಜನು ದೊಡ್ಡ ದೊಡ್ಡ ಸರ್ಪಗಳನ್ನು ಶಿಖರಭಾಗದಲ್ಲಿ ಹೊಂದಿರುವನು. ಅದೂ ಅಲ್ಲದೆ, ಶಂಕರನ ಶಿರೋಭಾಗದ ಜಟೆಯಂತೆ ಶುಭ್ರವಾದ ಕಾಂತಿಯುಳ್ಳದ್ದಾಗಿ, ಚಂದ್ರನಂತೆ ಹೊಳೆಯುವವನೂ ಆಗಿರುವುದರಿಂದ ಪರ್ವತರಾಜನು ಶಂಕರನ ಸಾಮ್ಯವನ್ನು ಸಂಪೂರ್ಣವಾಗಿ ಪಡೆದವನಾದನು. ॥೨೮॥

ಗಂಗಾಪ್ರವಾಹದಿಂದ ತುಂಬಿಹೋದ ಗುಹಾಪ್ರದೇಶಗಳು, ಆ ಪರ್ವತದಲ್ಲಿ ಹೇರಳವಾಗಿರುವುವು. ಇಂತಹ ಪರ್ವತದ ಮೇಲೆ ರಮ್ಯವಾಗಿರುವ ದಿವ್ಯಸೌಧದಲ್ಲಿ ಕಮಲಗಳಂತೆ ಸುಂದರನಾಗಿ ಕಾಣುವ ಪರ್ವತರಾಜನು ಸುಖವಾಗಿ ನೆಲಸಿರುವನು. ॥೨೯॥

ಗೌರೀಶಂಕರಪಾದಾಬ್ಜ ಧ್ಯಾನನಿರ್ಧೂತಹೃತ್ತಮಃ ।
ಜಾಮಾತೃಕನ್ಯಕಾನಂದಂ ಪ್ರೀತ್ಯಾ ಶೈಲೇಶ್ವರಸ್ತದಾ ॥೩೦॥

ನಿತರಾಂ ಹರ್ಷವರ್ಷಾಶ್ರುಕಣಾನ್ ಮುಂಚನ್ನಿವ ಸ್ಥಿತಃ ।
ನೀಲಪೀತಾರುಣಾಪಾರರೀತಿಭಾಸುರಕಂದರಃ ॥೩೧॥

ತತ್ರ ತಚ್ಛೈಲಶಿಖರೇ ಮಹಾಹೀರೋಪಲೈಃ ಕೃತೇ ।
ಹೀರಜಾಲಕಸಂಛನ್ನೇ ಹೀರಮಂಚಾಚ್ಛಪಾದಕೇ ॥೩೨॥

ಪರಾರ್ಘ್ಯಾಸ್ತರಣಾಸ್ತೀರ್ಣೇ ತಗರೋದ್ದಾಮಧೂಪಿತೇ ।
ಹೀರಕಾಂತಿಮಣಿಜ್ಯೋತ್ಸ್ನಾ ನಿವಾರಿತತಮೋಗಣೇ ॥೩೩॥

ಮಹಾಹೀಂದ್ರಮಣಿವ್ರಾತಾಕಲ್ಪಭೂಷಿತವಿಗ್ರಹಃ ।
ದೇವ್ಯಾ ಹರಿನ್ಮಣಿತತಶರೀರವರಕಾಂತಯಾ ॥೩೪॥

---

ಹಿಮರಾಜನು, ಸರ್ವದಾ ಪಾರ್ವತೀಪರಮೇಶ್ವರ ವಿಷಯಕವಾದ ಭಕ್ತಿಯಿಂದ ತನ್ನ ಅಜ್ಞಾನವನ್ನೆಲ್ಲಾ ಕಳೆದುಕೊಂಡಿರುವನು. ತನ್ನ ಅಳಿಯ ಮತ್ತು ಮಗಳಿಗೆ ಹೆಚ್ಚಿನ ಆನಂದವನ್ನು ಒದಗಿಸುತ್ತಾ ಪರ್ವತರಾಜನು ಸಂತೋಷದಿಂದಿರುವನು. ॥೩೦॥

ನಿತ್ಯವೂ ಆನಂದಾಶ್ರುವನ್ನು ಬಿಡುತ್ತಿರುವನೋ ಎಂಬಂತೆ ಹಿಮೋದಕವನ್ನು ಸುರಿಸುತ್ತಿರುವನು. ನೀಲಿ, ಹಳದಿ, ಕೆಂಪು ಮುಂತಾದ ಬಣ್ಣಬಣ್ಣಗಳಿಂದ ಕೂಡಿದ ಗುಹೆಗಳುಳ್ಳವನಾಗಿ ಕಂಗೊಳಿಸುತ್ತಿರುವನು. ॥೩೧॥

ಆ ಶೈಲದ ಶಿಖರಭಾಗದಲ್ಲಿ ಮಹಾಹೀರರತ್ನಗಳಿಂದ ಕೂಡಿದ ದಿವ್ಯ ಮಂಚವಿರುವುದು. ಅದು ಅನೇಕ ರತ್ನಗಳಿಂದ ತುಂಬಲ್ಪಟ್ಟಿರುವುದು. ಅದಕ್ಕಿರುವ ಕಾಲುಗಳೂ ಸಹ ಹೀರರತ್ನ ನಿರ್ಮಿತಗಳಾಗಿವೆ. ॥೩೨॥

ಅನರ್ಘ್ಯರತ್ನಗಳಿಂದ ನಿರ್ಮಿತವಾದ ಆಸನವು ಮಂಚದಮೇಲೆ ಹಾಸಲ್ಪಟ್ಟಿದೆ. ಧೂಪಸಾಮಗ್ರಿಗಳ ಧೂಮದಿಂದ ಸುಗಂಧಮಯವಾಗಿದೆ. ಆ ಮಂಚಸ್ಥವಾದ ರತ್ನಕಾಂತಿಯೆಂಬ ಬೆಳದಿಂಗಳಿಂದ ಅಲ್ಲಿನ ಅಂಧಕಾರವೆಲ್ಲಾ ಮಾಯವಾಗಿದೆ. ॥೩೩॥

ಅದರಮೇಲೆ ಪರಮೇಶ್ವರನು ಪಾರ್ವತಿಯೊಡನೆ ಮಂಡಿಸಿರುವನು. ಶಂಕರನಾದರೋ ಇಂದ್ರನೀಲಮಣಿ ಖಚಿತವಾದ ಭೂಷಣಗಳಿಂದ ಅಲಂಕೃತನಾಗಿರುವನು. ಅದೇ ತರಹ ಭೂಷಣಗಳಿಂದ ದೇವಿಯೂ ಭೂಷಿತಳಾಗಿರುವಳು. ॥೩೪॥

ನಿತರಾಂ ಮಂಚಮಧ್ಯಸ್ಥೋ ಭಾತಿ ಭಾಭಿರ್ಮಹೇಶ್ವರಃ ।
ಸ್ವಪಿತುಶ್ಶಿಖರೇ ದೇವೀ ನಿತರಾಂ ತೋಷವೇಷಭೂಃ ॥೩೫॥

ರಮಯತ್ಯೇವ ದೇವೇಶಂ ಯಥಾ ಕನ್ಯಾ ಪಿತೃಕ್ಷಯೇ ।
ಭರ್ತ್ರಾ ನಿತ್ಯಂ ಪ್ರಮೋದೇತ ನ ತಥಾ ಶ್ವಶುರಾಲಯೇ ॥೩೬॥

ದೇವ್ಯಾ ವಿಹರತೀಶಾನಃ ಪಶ್ಯನ್ ಧನಪತೇರ್ದಿಶಂ ।
ಯಕ್ಷೋಗಣೋಷಿತಾಂ ತತ್ರ ತಥೈವೈಲಬಿಲೇಃ ಪುರೀಂ ॥೩೭॥

ಶಾತಕುಂಭಮಹಾಭೂಮಿಮುತ್ತರಾಂಶ್ಚ ಕುರೂಂಸ್ತಥಾ ।
ದೇವೋದ್ಯಾನಾನಿ ಪುಣ್ಯಾನಿ ಸಪ್ತಾಬ್ಧಿಪರಿವೇಷ್ಟನಂ ॥೩೮॥

ಸ್ವರ್ಣತಾಲಫಲಂ ತತ್ರ ತತ್ಫಲಾಮೋದಿತಗಂಧಭೂಃ ।
ತಾಮ್ರಪೃಷ್ಠಾಂ ತಥಾ ಭೂಮಿಂ ಸಹಸ್ರಂ ಯೋಜನಾಯುತಾಂ ॥೩೯॥

---

ಹೀಗೆ ಮಹೇಶ್ವರನು ಮಂಚಮಧ್ಯದಲ್ಲಿ ಕುಳಿತು ಶೋಭಿಸುತ್ತಿರುವನು. ದೇವಿಯೂ ಸಹ ತನ್ನ ತಂದೆಯಾದ ಪರ್ವತರಾಜನ ಶಿಖರದಲ್ಲಿ ಕುಳಿತು ಆನಂದ ಮಯಳಾಗಿ, ॥೩೫॥

ಪತಿಯನ್ನು ಬಹಳವಾಗಿ ಸಂತೋಷಪಡಿಸುತ್ತಿರುವಳು. ಪಿತೃಗೃಹದಲ್ಲಿ ಪತಿಯೊಡನೆ ಅನುಭವಿಸುವ ಸುಖವನ್ನು ಕನ್ಯೆಯರು ಮಾವನ ಮನೆಯಲ್ಲಿ ಪತಿಯಿಂದ ಎಂದಿಗೂ ಹೊಂದಲಾರರು. ॥೩೬॥

ಹಾಗೆಯೇ ಶಂಕರನು ದೇವಿಯೊಡನೆ ಆನಂದದಿಂದ ಕೂಡಿ, ಕುಬೇರನ ಉತ್ತರದಿಕ್ಕನ್ನು ನೋಡುತ್ತಾ ಯಕ್ಷೋಗಣಗಳಿಂದ ಕೂಡಿದ ಕುಬೇರನ ನಗರ ವನ್ನು ಕಾಣುವನು. ॥೩೭॥

ಸುವರ್ಣಮಯವಾದ ಉತ್ತರ ದಿಗ್ಭಾಗವನ್ನೂ, ಅಲ್ಲಿರುವ ಕುರುದೇಶವನ್ನೂ, ಸುಂದರವೂ ಪುಣ್ಯಕರವೂ ಆದ ಉದ್ಯಾನವನಗಳನ್ನೂ ಸಂತೋಷದಿಂದ ನೋಡು ವನು. ॥೩೮॥

ಏಳು ಸಮುದ್ರಗಳ ಸುತ್ತುವಳಯವೂ, ಅಲ್ಲಿ ನೋಡಲು ಮನೋಹರವಾಗಿ ರುವುದು. ಅಲ್ಲಿ ಚಿನ್ನದ ತಾಳೇ ಮರವೂ, ಅದರ ಸುವಾಸನೆಯಿಂದ ಗಂಧ

**ಸುಧಾಸಾಗರಮಧ್ಯಸ್ಥಮಣಿದ್ವೀಪಂ ಶಿವಪ್ರಿಯಂ ।**
**ನೀಪಾಪಾರವನಂ ತಚ್ಚ ರತ್ನನೀಪೈಸ್ಸಮಾವೃತಂ ॥೪೦॥**

**ಹಿಮಶೈಲಾಮಲಾಕಾರಧಾರಾಸೌಧೇ ಮಹೇಶ್ವರಃ ।**
**ದೇವ್ಯಾ ವಿಹರತಿ ಸ್ವೈರಂ ಚಲಚ್ಚಾಮರವೀಜನೈಃ ॥೪೧॥**

**ರತ್ನಚಾಂಪೇಯಮಾಲಾಭಿರ್ಭೂಷಿತಸ್ತತ್ರ ಶಂಕರಃ ।**
**ಗಣೇಂದ್ರೈರುದ್ಯತಲಸತ್ತ್ರಿಶೂಲಕರಭಾಸುರೈಃ ॥೪೨॥**

**ಹಿಮಾಚಲೇಶ್ವರಂ ಲಿಂಗಂ ಚಂದ್ರಸ್ಫಟಿಕಧಾಮಗಂ ।**
**ಅಪಾರವರಿವಸ್ಯಾಭಿರ್ಹಿಮಶೈಲೇನ ಚಾರ್ಚಿತಂ ॥೪೩॥**

**ಪಂಚಾಮೃತೈಃ ಫಲರಸೈಸ್ಸುಗಂಧೈರ್ಯಕ್ಷಕರ್ದಮೈಃ ।**
**ಬಿಲ್ವಾರವಿಂದಕಲ್ಹಾರೈಃ ಚಂಪಕೈರ್ಬಕಸಂಭವೈಃ ॥೪೪॥**

---

ಭೂಯಿಷ್ಠವಾದ ಭೂಭಾಗವೂ, ಸಹಸ್ರ ಯೋಜನಾತ್ಮಕವಾಗಿ ಕೆಂಪು ಬಣ್ಣದಿಂದ ಕೂಡಿದ ಪ್ರದೇಶವೂ ಮಹೇಶ್ವರನಿಗೆ ಅಲ್ಲಿ ಕಂಡುಬರುವುದು. ॥೩೯॥

ಕ್ಷೀರಸಾಗರದ ಮಧ್ಯವರ್ತಿಯಾಗಿರುವ ಮಣಿದ್ವೀಪವು ಮಹೇಶ್ವರನಿಗೆ ಬಹಳ ಪ್ರಿಯವಾದದ್ದು. ಅಲ್ಲಿಯೇ ರತ್ನನೀಪವೃಕ್ಷಗಳಿಂದ ಕೂಡಿದ ಕದಂಬವನವಿರುವುದು. ॥೪೦॥

ಹಿಮಾಲಯಪರ್ವತದ ಶಿಖರದಲ್ಲಿ ರಂಜಿಸುವ ದಿವ್ಯಸೌಧದಲ್ಲಿ ಮಹೇಶ್ವರನು ದೇವಿಯೊಡನೆ ಚಾಮರಗಳಿಂದ ಸೇವಿಸಲ್ಪಡುತ್ತಾ ಸ್ವೇಚ್ಛೆಯಾಗಿ ಸಂಚರಿಸುವನು. ॥೪೧॥

ರತ್ನಮಯವಾದ ಸಂಪಿಗೆ ಹೂವುಗಳ ಮಾಲೆಯಿಂದ ಶಂಕರನು ಅಲಂಕೃತನಾಗಿರುವನು. ಅವನ ಸುತ್ತಲೂ ತ್ರಿಶೂಲಧಾರಿಗಳಾದ ಪ್ರಮಥಗಣಗಳು ನೆರೆದಿರುವರು. ॥೪೨॥

ಅಲ್ಲಿಯೇ ಹಿಮಶೈಲರಾಜನಿಂದ ನಿತ್ಯವೂ ಪೂಜಿಸಲ್ಪಡುವ ಹಿಮಾಚಲೇಶ್ವರನೆಂಬ ಹೆಸರಿನ ಲಿಂಗವೊಂದಿರುವುದು. ಅದು ಚಂದ್ರನಂತೆಯೂ, ಸ್ಫಟಿಕದಂತೆಯೂ ಪ್ರಕಾಶಿಸುತ್ತಿರುವುದು. ॥೪೩॥

ಆ ಲಿಂಗವನ್ನು ಶೈಲರಾಜನು ಪಂಚಾಮೃತಗಳಿಂದಲೂ, ಫಲೋದಕಗಳಿಂದಲೂ, ಸುಗಂಧಮಯವಾದ ಯಕ್ಷಕರ್ದಮಗಳಿಂದಲೂ ಸೇವಿಸುವರು. ಬಿಲ್ವಪತ್ರೆ,

**ಧೂಪದೀಪೋಪಹಾರ್ಯೈಶ್ಚ ಪ್ರಣಾಮಪ್ರಕ್ರಮಾದಿಭಿಃ ।**
**ಅಸ್ತೌಷೀದ್ಧಿಮಶೈಲೇಶಂ ಹಿಮವಾಂಶ್ಚ ಕೃತಾಂಜಲಿಃ ॥೪೫॥**

॥ ಹಿಮವಾನುವಾಚ ॥

**ಪರಿಣತಹಿಮಧಾಮಕಾಂತಿರಾಜ**
**ಜ್ಜಟಯಾಲಂಕೃತಗಂಗಯೋರುಭಾಸಂ ।**
**ಭವದಾನನಪಂಕಜೋತ್ಪಲಾಭೈ**
**ರವಿಸೋಮಾನಲಲೋಚನೈರ್ವಿಲೋಕಯಾಶು ॥೪೬॥**

॥ ಸ್ಕಂದ ಉವಾಚ ॥

**ಇತ್ಥಂ ಹಿಮಾಚಲಸ್ಸ್ತೌತಿ ಹಿಮಮೌಳಿಮಹೇಶ್ವರಂ ।**
**ನೀಲೋ ವಿಭಾತಿ ಚೈಶಾನ್ಯಾಂ ಕೈಲಾಸಾಮಲಪರ್ವತೇ ॥೪೭॥**

---

ಕಮಲ, ಕಲ್ಹಾರ, ಸಂಪಿಗೆ, ಬಕ ಮುಂತಾದ ಪುಷ್ಪವಿಶೇಷಗಳಿಂದ ಅರ್ಚಿಸುವನು. ॥೪೫॥

ಧೂಪ, ದೀಪ, ನೈವೇದ್ಯ, ಪ್ರದಕ್ಷಿಣ ನಮಸ್ಕಾರ ಇವುಗಳಿಂದ ಸ್ವಾಮಿಯನ್ನು ತೃಪ್ತಿಗೊಳಿಸಿ, ಹಿಮವಂತನು ಅಂಜಲಿಬದ್ಧನಾಗಿ ಈ ರೀತಿಯಲ್ಲಿ ಸ್ತೋತ್ರ ಮಾಡುವನು. ॥೪೫॥

"ಪರಮೇಶ್ವರನೇ, ನಿನ್ನ ಜಟಾಕೂಟವು ಪೂರ್ಣಚಂದ್ರನ ಕಾಂತಿಯಿಂದ ಪ್ರಕಾಶಿಸಬೇಕಾಗಿದೆ. ದೇವಗಂಗೆಯಿಂದ ಸುಂದರವಾಗಿದೆ. ನಿನ್ನ ಮುಖಕಮಲಕ್ಕೆ ಉತ್ಪಲಗಳ ಕಾಂತಿಯನ್ನುಂಟುಮಾಡುವ, ಸೂರ್ಯಚಂದ್ರಾಗ್ನಿಮಯಗಳಾದ ಲೋಚನಗಳಿಂದ ನನ್ನನ್ನು ದೃಷ್ಟಿಸಿ ನೋಡು. ನನ್ನನ್ನು ಕಾಪಾಡು." ॥೪೬॥

ಹೀಗೆ ಹಿಮಾಚಲವು ತನ್ನ ಮೌಳಿಭಾಗದಲ್ಲಿರುವ ಪರಮೇಶ್ವರನನ್ನು ವಿಧವಿಧವಾಗಿ ಸ್ತುತಿಸುವನು. ಅಲ್ಲಿಂದ ಮುಂದಿರುವ ನೀಲಪರ್ವತವು ಕೈಲಾಸಪರ್ವತಕ್ಕೆ ಈಶಾನ್ಯಭಾಗದಲ್ಲಿರುವುದು. ॥೪೭॥

ರಮ್ಯಸಾನುಶತೋಪೇತಸ್ಸಹಸ್ರಶಿಖರೈರ್ವೃತಃ ।
ನೀಲೋಽಪಿ ವಾಮತಶ್ಶೈಲಃ ಪ್ರವಾಲಮಣಿಭಾಸುರಃ ॥೪೮॥

ಉದಾರತರಗಂಭೀರಶೇಖರಾಲೇಢಿತಾಂಬರಃ ।
ಐಶಾನ್ಯಾಂ ಗೋಪುರೈರ್ಭಾತಿ ರುದ್ರಕ್ರೀಡಾಪರೀವೃತಃ ॥೪೯॥

ಉದ್ಯದ್ದ್ಯುಮಣಿಸಂಕಾಶಕಲಶೈರತಿಭಾಸುರಃ ।
ಭೂಸುರಾಣಾಂ ಚ ಶರಣ್ಯೈಸ್ಸುಭಾಸುರನಗಾವೃತಃ ॥೫೦॥

ಮಹಾಗೋಪತಿಭಿರ್ಯುಕ್ತೋ ಶಿದ್ರುಮಾಭೋಽರುಣೋಽರುಭಾಃ ।
ತನ್ಮೌಲಿಮಣಿಭಾತ್ಯುಚ್ಚಪ್ರವಾಲಪರಿಕಲ್ಪಿತೈಃ ॥೫೧॥

ಮಹಾಶರಭಸಾಹಸ್ರೈರ್ಧಾರಿತಸ್ಸೌಧಸತ್ತಮಃ ।
ಹೃತ್ತಮೋನಾಶಕಸ್ತತ್ರ ರಮ್ಯೋ ಭೂಸುರಭಾಸುರಃ ॥೫೨॥

---

ಆ ನೀಲಪರ್ವತವು ಮನೋಹರವಾದ ಸಾನುಪ್ರದೇಶದಿಂದಲೂ, ಸಹಸ್ರಾರು ಶಿಖರಗಳಿಂದಲೂ ಕೂಡಿದ್ದಾಗಿರುವುದು ಅದರ ಎಡಭಾಗವೆಲ್ಲಾ ಪ್ರವಾಲಮಣಿಗಳ ಕಾಂತಿಯನ್ನು ಪಡೆದದ್ದಾಗಿರುವುದು. ॥೪೮॥

ಅದರ ಶಿಖರವಾದರೋ ಬಹು ಎತ್ತರವಾಗಿದ್ದು ಅಂತರಿಕ್ಷವನ್ನು ಆಲಂಗಿಸುವಂತಿರುವುದು. ಆ ಶಿಖರದಲ್ಲಿ ಅನೇಕ ಗೋಪುರಗಳಿವೆ. ಅವುಗಳಲ್ಲೆಲ್ಲಾ ಅನೇಕ ರುದ್ರಾವತಾರದ ವಿಗ್ರಹಗಳಿರುವುವು. ॥೪೯॥

ಆ ಗೋಪುರಗಳಿಗೆಲ್ಲಾ ಸೂರ್ಯನಂತೆ ಹೊಳೆಯುವ ಅತ್ಯಂತ ಪ್ರಕಾಶಮಾನವಾದ ಕಲಶಗಳಿರುವುವು. ಅಲ್ಲಲ್ಲಿ ಬ್ರಾಹ್ಮಣರ ಗೃಹಗಳೂ ಕಾಣುವುವು. ಅಂತೂ ಆ ಪರ್ವತವು ಪ್ರಕಾಶಮಾನವಾದ ಪರ್ವತಗಳಿಂದ ಆವೃತವಾಗಿರುವುದು. ॥೫೦॥

ಅಲ್ಲಿ ಅನೇಕ ವೃಷಭನ ವಿಗ್ರಹಗಳಿರುವುವು. ಹವಳದಂತೆ ಕಾಂತಿಯುಳ್ಳದ್ದಾಗಿಯೂ, ಪ್ರವಾಲಮಣಿಕಲ್ಪಿತವಾಗಿಯೂ ಇರುವ ಪ್ರದೇಶಗಳೇ ಅಲ್ಲಿ ಬಹಳವಾಗಿರುವುವು. ॥೫೧॥

ಆ ನೀಲಪರ್ವತದ ಮೇಲೆ ಒಂದು ದಿವ್ಯಸೌಧವಿರುವುದು. ಅದು ಬಹಳ ಅಜ್ಞಾನನಾಶಕವಾಗಿಯೂ, ಹೃದಯಂಗಮವಾಗಿಯೂ ತೋರಿಬರುತ್ತಿರುವುದು. ಅಲ್ಲಿ ಅನೇಕ ಭೂಸುರರು ಕಾಣುತ್ತಿರುವರು. ॥೫೨॥

ತತ್ರ ರಾಜಂತಿ ವಿವಿಧವೇದಿಸೋಪಾನಪಟ್ಟಿಕಾಃ ।
ಸಹಸ್ರಸ್ತಂಭಸಂಯುಕ್ತಃ ಪ್ರವಾಲಮಣಿಕಲ್ಪಿತಃ ॥೫೩॥

ಸೌಧರಾಡಗಮೌಲಿಸ್ಥೋ ಭಾತ್ಯುದ್ಯತ್ತರಣಿಪ್ರಭಃ ।
ಸಹಸ್ರತಲಮೌಲಿಸ್ಥಪ್ರವಾಲಮಣಿಕುಂಭವಾನ್ ॥೫೪॥

ಪ್ರವಾಳವರ್ತುಲಾತ್ಯಚ್ಛಮಾಲಾಗುಚ್ಛೈಕಶೋಭಿತಃ ।
ತತ್ರೈವ ಸುಮನಾಮೋದಮಾದ್ಯದ್ಯುಂಕೃತಷಟ್ಪದಃ ॥೫೫॥

ತತ್ಪ್ರವಾಳಮಣಿಜ್ಯೋತ್ಸ್ನಾನಿವಾರಿತತಮಸ್ತ್ರುಟಿಃ ।
ತಸ್ಮಿನ್ ಪ್ರವಾಲಪಾದಾಚ್ಛಮಂಚಕೇ ಸ್ತರಣಾಸ್ತೃತೇ ॥೫೬॥

ದೇವ್ಯಾ ವಿಹರತಿ ಪ್ರೀತ್ಯಾ ಚಂದ್ರಚೂಡೋ ಮಹೇಶ್ವರಃ ।
ಸಪ್ತಾಬ್ಧಿವೇಷ್ಟಿತಾಪಾರಭೂಮಯೋದ್ವೀಪಕಾನಪಿ ॥೫೭॥

---

ಆ ಸೌಧವು ಅನೇಕವಾದ ಜಗಲಿಗಳಿಂದಲೂ, ಮೆಟ್ಟಲುಗಳಿಂದಲೂ ಕೂಡಿದ್ದಾಗಿ, ಪ್ರವಾಳಮಣಿಮಯವಾದ ಸಹಸ್ರ ಕಂಬಗಳಿಂದ ಆವೃತವಾಗಿರುವುದು.॥೫೩॥

ಆ ಸೌಧಶ್ರೇಷ್ಠವು ಸೂರ್ಯನಂತೆ ಹೊಳೆಯುತ್ತಿರುವುದು. ಲೆಕ್ಕವಿಲ್ಲದಷ್ಟು ಮಧ್ಯಗೃಹಗಳು ಆ ಸೌಧದಲ್ಲಿ ಕಾಣುವುವು. ಪ್ರವಾಳಮಣಿಮಯವಾದ ಕಲಶವು ಅಲ್ಲಿ ಸರ್ವದಾ ರಂಜಿಸುತ್ತಿರುವುದು. ॥೫೪॥

ಪ್ರವಾಳಮಣಿಮಯವಾದ ರತ್ನಹಾರಗಳಿಂದಲೂ, ರತ್ನಗೊಂಚಲುಗಳಿಂದಲೂ ಅದು ಮನೋಹರವಾಗಿ ಕಾಣುತ್ತಿರುವುದು. ಅದೂ ಅಲ್ಲದೆ ಅನೇಕ ಸುಗಂಧಮಯವಾದ ವೃಕ್ಷಗಳಿಂದ ಹೊರಡುವ ವಾಸನೆಗಾಗಿ ಭ್ರಮರಗಳು ಝೇಂಕಾರದಿಂದ ಮುತ್ತುತ್ತಿರುವುವು. ॥೫೫॥

ಅದರಲ್ಲಿರುವ ಪ್ರವಾಳಗಳ ಹೊಳಪಿನಿಂದ ಕತ್ತಲೆಯ ರಾಶಿಯೆಲ್ಲಾ ನಿವಾರಿತವಾಗುತ್ತಿತ್ತು. ಅಂತಹ ಸೌಧದಲ್ಲಿ ಪ್ರವಾಳಮಣಿಮಯವಾದದ್ದೇ ಮಂಚವೊಂದಿರುವುದು. ಅದರ ಮೇಲೆ ಒಂದು ಮೆತ್ತೆಯನ್ನೂ ಹಾಸಿರುವರು. ॥೫೬॥

ಅಲ್ಲಿ ಮಹೇಶ್ವರನು ಸದಾ ಪಾರ್ವತಿಯೊಡನೆ ಕುಳಿತುಕೊಂಡು, ಎದುರಿಗಿರುವ ಸಪ್ತಸಮುದ್ರಗಳಿಂದ ಆವೃತವಾದ ಭೂಮಿಯನ್ನೂ, ಅಲ್ಲಿರುವ ಸಕಲ ದ್ವೀಪಗಳನ್ನೂ ನೋಡುವನು. ॥೫೭॥

ಅಧಿಪತಿಯೆನಿಸಿರುವೆ. ನೀನು ಬಹಳವಾಗಿ ಪ್ರಸಿದ್ಧಿಗೊಂಡಿರುವೆ. ನಿನಗೆ ಯಾರೂ ಒಡೆಯರಿಲ್ಲ. ನೀನೇ ದೇವದೇವನು, ಎಂದು ಎಲ್ಲಾ ಪರ್ವತಗಳೂ ಏಕಕಂಠದಿಂದ ಪ್ರಾರ್ಥನೆಮಾಡುತ್ತಿವೆ, ಎಂದು ಕುಮಾರಸ್ವಾಮಿಯು ಜೈಗೀಷವ್ಯಮಹರ್ಷಿಗೆ ವಿವರಿಸಿ ಹೇಳಿದನೆಂಬಲ್ಲಿಗೆ ||೭೨||

ಶಿವರಹಸ್ಯದಲ್ಲಿ ಪ್ರಥಮಾಂಶದಲ್ಲಿ ಶೈಲಕೃತ ಶಿವಸ್ತುತಿಯನ್ನು ವಿವರಿಸುವ ಮೂವತ್ತನೆಯ ಅಧ್ಯಾಯವು ಮುಗಿದುದು